ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೪

ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯಸಂಹಿತಾ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ ೪

ವಿಶ್ವಜಿತ್ಖಂಡ

ಆಸ್ಥಾನ ವಿದ್ವಾನ್

ಹಾಸನ ಪಂಡಿತ ವೆಂಕಟರಾವ್

ಅನುವಾದಕ:

ಮೈಸೂರು :

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

೧೯೪೮

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೪

ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯಸಂಹಿತಾ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ ೪

ವಿಶ್ವಜಿತ್ಖಂಡ

ಆಸ್ಥಾನ ವಿದ್ವಾನ್

ಹಾಸನ ಪಂಡಿತ ವೆಂಕಟರಾವ್

ಅನುವಾದಕ:

ಮೈಸೂರು:

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

೧೯೪೮

ಪೀಠಿಕೆ

ಕ್ಷತ್ರಿಯಕುಲಸಂಭೂತರಾದ ರಾಜರು ಚಕ್ರವರ್ತಿಗಳು ಮೊದಲಾದವರು ಮಾತ್ರವೇ ಮಾಡಬೇಕಾದ ಯಾಗಗಳಲ್ಲಿ ಅಶ್ವಮೇಧ, ರಾಜಸೂಯ ಮುಂತಾದ ಕೆಲವು ಯಾಗಗಳಿವೆ. ಈ ಯಾಗಗಳನ್ನು ಮಾಡಲು ಬಹು ದ್ರವ್ಯವು ಬೇಕಾಗಿರುವುದು. ಇದಕ್ಕಾಗಿ ಯಾಗದೀಕ್ಷೆಯನ್ನು ಕೈಗೊಂಡ ರಾಜನು ತನ್ನ ಕಡೆಯವರನ್ನು ನಾನಾ ದೇಶಗಳನ್ನು ಜಯಿಸಿ ಅನೇಕ ರಾಜರಿಂದ ಕಪ್ಪಕಾಣಿಕೆಗಳನ್ನು ತಂದು ವಿಜೃಂಭಣೆಯಿಂದ ಯಜ್ಞಮಾಡುವುದು ಹಿಂದಿನಿಂದ ಬಂದ ಸಂಪ್ರದಾಯವಾಗಿದೆ. ಇಂತಹ ದಿಗ್ವಿಜಯದ ವರ್ಣನೆಯು ಮಹಾಭಾರತದಲ್ಲಿ ಧರ್ಮರಾಜನು ರಾಜಸೂಯ ಯಾಗಮಾಡುವ ಸಂದರ್ಭದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಪುರಾಣಗಳಲ್ಲಿಯೂ ಈ ವಿಧವಾದ ವರ್ಣನೆಗಳು ಅಲ್ಲಲ್ಲಿ ಬಹಳವಾಗಿವೆ. ಈ ಗಾರ್ಗ್ಯಸಂಹಿತೆಯಲ್ಲಿರುವ ವಿಶ್ವಜಿತ್ಖಂಡದಲ್ಲಿ ಇಂತಹ ದಿಗ್ವಿಜಯದ ವರ್ಣನೆಯು ಅನೇಕ ಉಪಾಖ್ಯಾನಗಳೊಡನೆ ಹೃದಯಂಗಮವಾಗಿ ವರ್ಣಿತವಾಗಿದೆ.

ಈ ಗ್ರಂಥದ ಶೈಲಿಯು ಬಹಳ ಸರಳವಾಗಿಯೂ ವಿಷಯನಿರೂಪಣೆಯು ಹೃದಯಂಗಮವಾಗಿಯೂ, ಭಕ್ತಿಭಾವವನ್ನುಂಟುಮಾಡುವುದಾಗಿಯೂ ಇರುವುದು. ಶ್ರೀಕೃಷ್ಣಪರಮಾತ್ಮನ ಚರಿತ್ರೆಯನ್ನೂ, ಲೀಲಾವಿನೋದಗಳನ್ನೂ ಅತಿವಿಸ್ತಾರವಾಗದಂತೆಯೂ ಮುಖ್ಯವಿಷಯಗಳನ್ನು ಮನಸ್ಸಿಗೆ ಹಿಡಿಯುವಂತೆ ವಿವರಿಸುವುದರಲ್ಲಿಯೂ ವಾಚಕವೃಂದಕ್ಕೆ ಭಕ್ತಿಭಾವವನ್ನುಂಟುಮಾಡುವುದರಲ್ಲಿಯೂ ಈ ಗ್ರಂಥವು ಅದ್ವಿತೀಯವಾಗಿದೆ. ಈ ಗ್ರಂಥಪಠನದಿಂದ ಶ್ರೀಕೃಷ್ಣನಲ್ಲಿ ಭಕ್ತಿಯು ಉದಯಿಸುವುದಲ್ಲದೆ ಭಗವಂತನ ಅನುಗ್ರಹಕ್ಕೆ ಪಾತ್ರರಾಗುವುದರಲ್ಲಿ ಸಂಶಯವಿಲ್ಲ.

ವೇದಾಂತತತ್ತ್ವರಹಸ್ಯಗಳನ್ನೂ, ನೀತಿಬೋಧಕವಾದ ಉಪಾಖ್ಯಾನಗಳನ್ನೂ ಒಳಗೊಂಡು ಸಜ್ಜನರಿಗೆ ಭಗವಂತನಲ್ಲಿ ಭಕ್ತಿಭಾವವನ್ನುಂಟುಮಾಡುವ ಇಂತಹ ಅನೇಕ ಪುರಾಣಾದಿಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತನೆಮಾಡಿಸಿ ಸಕಲ ಜನರೂ ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂಬ ಘನವಾದ ಉದ್ದೇಶದಿಂದ ಇಂತಹ ಗ್ರಂಥಗಳ ಪ್ರಕಾಶನಕ್ಕೆ ಸರ್ವವಿಧದಲ್ಲಿಯೂ ಪ್ರೋತ್ಸಾಹವನ್ನೀಯುತ್ತಿರುವ ನಮ್ಮನ್ನಾಳುವ ಕರ್ನಾಟಕ ಸಿಂಹಾಸನಾಧೀಶ್ವರರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುವರ್ಯರಿಗೂ, ರಾಜಕುಟುಂಬಕ್ಕೂ ಸಕಲ ಪ್ರಜೆಗಳಿಗೂ ಶ್ರೀಕೃಷ್ಣಪರಮಾತ್ಮನು ಸಮಸ್ತಸಂಪದಭಿವೃದ್ಧಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು
ಸರ್ವಜಿನ್ನಾಮ ಸಂ॥ ಮಾಘ ಶುಕ್ಲ ಷಷ್ಠೀ
16—2—1948.

ಅನುವಾದಕ
ಹಾಸನದ ಪಂಡಿತ ವೆಂಕಟರಾವ್,
ಆಸ್ಥಾನ ವಿದ್ವಾನ್.

ವಿಷಯಾನುಕ್ರಮಣಿಕೆ

ವಿಶ್ವಜಿತ್ಖಂಡ

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಪ್ರಥಮೋಽಧ್ಯಾಯಃ

ನಮೋ ಭಗವತೇ ತುಭ್ಯಂ ವಾಸುದೇವಾಯ ಸಾಕ್ಷಿಣೇ ।
ಪ್ರದ್ಯುಮ್ನಾಯಾನಿರುದ್ಧಾಯ ನಮಃ ಸಂಕರ್ಷಣಾಯ ಚ ॥ ೧ ॥

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥ ೨ ॥

ಮೊದಲನೆಯ ಅಧ್ಯಾಯವು

೧. ಹೇ ಭಗವನ್! ಸಮಸ್ತ ಕಾರ್ಯಗಳಿಗೂ ಸಾಕ್ಷಿಭೂತನಾಗಿಯೂ, ವಾಸುದೇವನೆಂಬ ದಿವ್ಯನಾಮದಿಂದ ಕರೆಯಲ್ಪಡುವ ಪರಾತ್ಪರಸ್ವರೂಪನಾಗಿಯೂ ಇರುವ ನಿನಗೆ ನಮಸ್ಕಾರವು. ಅದೇ ರೀತಿ ನಿನ್ನ ಪರಸ್ವರೂಪವಾದ ವಾಸುದೇವಾಖ್ಯಮೂರ್ತಿಯಿಂದ ಆವಿರ್ಭಾವವನ್ನು ತಾಳಿದ ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣರೆಂಬ ಇತರ ವ್ಯೂಹಮೂರ್ತಿಗಳಿಗೂ ನಮಸ್ಕಾರವು.

೨. ಅಜ್ಞಾನವೆಂಬ ದೃಷ್ಟಿದೋಷದಿಂದ ಕುರುಡಾಗಿರುವ ನರನಿಗೆ ಜ್ಞಾನವೆಂಬ ಅಂಜನಶಲಾಕೆಯಿಂದ ಮತ್ತೆ ಕಣ್ಣು ಸರಿಯಾಗಿ ಬರುವಂತೆ ಮಾಡಿದ ಶ್ರೀಗುರುವಿಗೆ ವಂದಿಸುವೆನು.

|| ಶ್ರೀ ಗರ್ಗ ಉವಾಚ ||

ಇತ್ಥಂ ಶ್ರೀಕೃಷ್ಣಚರಿತಂ ಮಯಾ ತೇ ಕಥಿತಂ ಮುನೇ ।
ಚತುಷ್ಪದಾರ್ಥದಂ ನೃಣಾಂ ಕಿಂ ಭೂಯಃ ಶ್ರೋತುಮಿಚ್ಛಸಿ || ೩ ||

|| ಶೌನಕ ಉವಾಚ ||

ಬಹುಲಾಶ್ವೋ ಮೈಥಿಲೇಂದ್ರಃ ಶ್ರೀಕೃಷ್ಣೇಷ್ಟೋ ಹರಿಪ್ರಿಯಃ ।
ಕಿಂ ಪಪ್ರಚ್ಛಾಥ ದೇವರ್ಷಿಂ ತನ್ಮೇ ಬ್ರೂಹಿ ತಪೋಧನ || ೪ ||

|| ಶ್ರೀ ಗರ್ಗ ಉವಾಚ ||

ಉಗ್ರಸೇನಂ ಯಾದವೇಂದ್ರಂ ಶ್ರೀಕೃಷ್ಣೇನ ಕೃತಂ ಮುನೇ ।
ಶ್ರುತ್ವಾತಿವಿಸ್ಮಿತೋ ರಾಜಾ ನಾರದಂ ಪ್ರಾಹ ಮೈಥಿಲಃ || ೫ ||

---

೩. ಶ್ರೀಗರ್ಗಮಹರ್ಷಿಯು ಹೇಳತೊಡಗಿದನು :—"ಎಲೈ ಶೌನಕಮುನಿಯೇ! ಈ ರೀತಿಯಾಗಿ ನಾನು ನಿನಗೆ ಚತುರ್ವಿಧ ಪುರುಷಾರ್ಥಗಳಿಗೂ ಸಾಧನವಾದ ಶ್ರೀಕೃಷ್ಣ ಚಂದ್ರನ ಚರಿತ್ರವನ್ನು ವಿವರಿಸಿದೆನು. ಈಗ ಇನ್ನೇನು ಕೇಳಬೇಕೆಂದಿರುವೆ" ಎನ್ನಲು,

೪. ಆ ಶೌನಕಮುನಿಯು "ಓ ಮುನೀಂದ್ರ ! ಶ್ರೀಕೃಷ್ಣನ ಪರಮಭಕ್ತನೂ, ಆತನ ಪ್ರೀತಿಗೆ ಪಾತ್ರನೂ ಆದ ಆ ಮಿಥಿಲಾಧಿಪತಿಯಾದ ಬಹುಲಾಶ್ವನು ಅನಂತರ ಆ ದೇವರ್ಷಿಯಾದ ನಾರದನನ್ನು ಕುರಿತು ಮತ್ತೇನನ್ನು ಪ್ರಶ್ನೆಮಾಡಿದನು ? ಅದನ್ನು ನನಗೆ ತಿಳಿಸಬೇಕು."

೫. ಎಂದು ನುಡಿದುದನ್ನುಕೇಳಿ, ಶ್ರೀಗರ್ಗಮಹಾಮುನಿಯು ಇಂತು ನುಡಿಯ ತೊಡಗಿದನು. ಎಲೈ ಶೌನಕಮಹರ್ಷಿಯೇ, ಕೇಳು :–ಶ್ರೀಕೃಷ್ಣನು ಉಗ್ರಸೇನನನ್ನು ಯಾದವರಿಗೆಲ್ಲಾ ಅಧಿಪತಿಯನ್ನಾಗಿ ಮಾಡಿದನೆಂಬ ವೃತ್ತಾಂತವನ್ನು ಕೇಳಿದೊಡನೆ ಆ ಮಿಥಿಲಾಧೀಶ್ವರನಾದ ಬಹುಲಾಶ್ವನು ಬಹಳ ಆಶ್ಚರ್ಯವನ್ನು ತಾಳಿದವನಾಗಿ ಆ ನಾರದಮುನಿಯನ್ನು ಇಂತೆಂದು ಪ್ರಶ್ನಿಸಿದನು.

॥ ಬಹುಲಾಶ್ವ ಉವಾಚ ॥

ಕೋ ವಾಯಂ ಮರುತೋ ರಾಜಾ ಕೇನ ಪುಣ್ಯೇನ ಭೂತಲೇ ।
ಯಾದವೇಂದ್ರೋ ಮಹಾಬುದ್ಧಿರುಗ್ರಸೇನೋ ಬಭೂವ ಹ ॥ ೬ ॥

ಯಸ್ಯ ಶ್ರೀಕೃಷ್ಣ ಚಂದ್ರೋಽಪಿ ಸಹಾಯೋಽಭೂದ್ಧರಿಃ ಸ್ವಯಂ ।
ತಸ್ಯಾಹೋ ಮಹಿಮಾನಂ ಮೇ ಬ್ರೂಹಿ ದೇವರ್ಷಿಸತ್ತಮ ॥ ೭ ॥

॥ ಶ್ರೀ ನಾರದ ಉವಾಚ ॥

ಸೂರ್ಯವಂಶೋದ್ಭವೋ ರಾಜಾ ಚಕ್ರವರ್ತೀ ಕೃತೇ ಯುಗೇ ।
ಯಜ್ಞಂ ಚಕಾರ ವಿಧಿವನ್ಮರುತೋ ಯೋ ಜಗಜ್ಜಿತಂ ॥ ೮ ॥

ಮಹಾಸಂಭೃತಸಂಭಾರೈರ್ಹಿಮಾದ್ರೇಃ ಪಾರ್ಶ್ವ ಉತ್ತರೇ ।
ಸಂವರ್ತಂ ಮುನಿಶಾರ್ದೂಲಂ ಗುರುಂ ಕೃತ್ವಾ ಹಿ ದೀಕ್ಷಿತಃ ॥ ೯ ॥

---

೬. "ಈ ಮರುತನೆಂಬ ರಾಜನಾರು? ಮತ್ತು ಆತನು ತಾನು ಮಾಡಿದ ಯಾವ ಪುಣ್ಯದ ಬಲದಿಂದ ಈ ರೀತಿ ಮಹಾಬುದ್ಧಿಶಾಲಿಯಾದ ಉಗ್ರಸೇನನೆಂಬ ಯಾದವಚಕ್ರವರ್ತಿಯಾಗಿ ಜನಿಸಿದನು?

೭. ಸತ್ಪುರುಷರಲ್ಲೆಲ್ಲಾ ಶ್ರೇಷ್ಠನೆನಿಸಿದ ಎಲೈ ದೇವಋಷಿಯೇ! ಸಾಕ್ಷಾತ್ ಪರಮಪುರುಷನಾದ ಶ್ರೀಕೃಷ್ಣಚಂದ್ರನೇ ಆ ಉಗ್ರಸೇನನಿಗೆ ಸಹಾಯಕನಾಗ ನಿಂತಿದ್ದನಲ್ಲವೇ? ಅಂಥ ಭಾಗ್ಯಶಾಲಿಯಾದ ಆ ಮಹಿಮೆಯನ್ನು ನನಗೆ ತಿಳಿಯಪಡಿಸಬೇಕು" ಎಂದು ಪ್ರಶ್ನಿಸಲು,

೮–೯. ಆಗ ಆ ನಾರದಮಹರ್ಷಿಯು ಬಹುಲಾಶ್ವನನ್ನು ಕುರಿತು ಈ ರೀತಿ ಹೇಳಿದನು. ಹಿಂದೆ ಕೃತಯುಗದಲ್ಲಿ ಸೂರ್ಯವಂಶಸಂಭೂತನಾದ ಮರುತನೆಂಬ ಚಕ್ರವರ್ತಿಯಿದ್ದನು. ಆತನು ಹಿಮಾಚಲದ ಉತ್ತರಪಾರ್ಶ್ವದಲ್ಲಿ ಬೇಕಾದಷ್ಟು ಸಂಭಾರಗಳನ್ನು ಸಿದ್ಧಪಡಿಸಿಕೊಂಡು ವಿಧಿಪೂರ್ವಕವಾಗಿ ವಿಶ್ವಜಿತ್ತೆಂಬ ಮಹಾಯಾಗವನ್ನು ಮಾಡಿದನು. ಆಗ ಆ ಮರುತರಾಜನು ಸಂವರ್ತನೆಂಬ ಮುನಿಶ್ರೇಷ್ಠನನ್ನು ಗುರುವಾಗಿರುವಂತೆ ಪ್ರಾರ್ಥಿಸಿ ತಾನು ಯಾಗದೀಕ್ಷೆಯನ್ನು ವಹಿಸಿದನು.

ಪಂಚಯೋಜನವಿಸ್ತೀರ್ಣಃ ಕುಂಡೋಽಭೂದ್ಯಸ್ಯ ಚಾಧ್ವರೇ ।
ಯೋಜನಂ ಬ್ರಹ್ಮಕುಂಡಸ್ತು ಗವ್ಯೂತಿಃ ಪಂಚ ಕುಂಡಕಾಃ ॥ ೧೦ ॥

ಮೇಖಲಾಗರ್ತವಿಸ್ತಾರವೇದಿಭಿರ್ನಿರ್ಮಿತಾ ದಶ ।
ಸಹಸ್ರಹಸ್ತಮುಚ್ಚಾಂಗೋ ಯಜ್ಞಸ್ತಂಭೋ ಬಭೌ ಮಹಾನ್ ॥ ೧೧ ॥

ವಿಂಶದ್ಯೋಜನವಿಸ್ತೀರ್ಣಃ ಸೌವರ್ಣೋ ಯಜ್ಞಮಂಡಪಃ ।
ವಿತಾನತೋರಣೈ ರೇಜೇ ಕದಲೀಖಂಡಮಂಡಿತಃ ॥ ೧೨ ॥

ಬ್ರಹ್ಮರುದ್ರಾದಯೋ ದೇವಾಃ ಸಗಣಾಸ್ತತ್ರ ಚಾಗತಾಃ ।
ಋಷಯೋ ಮುನಯಃ ಸರ್ವೇ ತಸ್ಯ ಯಜ್ಞಂ ಸಮಾಯಯುಃ ॥ ೧೩ ॥

---

೧೦. ಯಜ್ಞದಲ್ಲಿ ಹೋಮಕುಂಡವು ಐದುಯೋಜನಗಳಷ್ಟು ವಿಸ್ತಾರವಾಗಿತ್ತು. ಬ್ರಹ್ಮಕುಂಡವು ಒಂದು ಯೋಜನದಷ್ಟು ವಿಶಾಲವಾಗಿಯೂ, ಇನ್ನಿತರ ಐದು ಕುಂಡಗಳು ಗವ್ಯೂತಿ (ಎರಡು ಹರಿದಾರಿ) ಪ್ರಮಾಣವಾಗಿಯೂ ಇದ್ದುವು.

೧೧. ಅಲ್ಲದೆ ಆ ಯಾಗಶಾಲೆಯಲ್ಲಿ ನಿರ್ಮಿತವಾಗಿದ್ದ ಇನ್ನೂ ಹತ್ತು ಕುಂಡಗಳು ತಮಗೆ ಒಪ್ಪುವಂತಹ ವೇದಿಕೆಗಳಿಂದಲೂ, ಆ ವೇದಿಕೆಗಳಲ್ಲಿನ ಮೇಖಲೆಗಳಿಂದಲೂ (ಮೆಟ್ಟಲಿನಂತಿರುವ ಮೂರು ಸಾಲುಗಳು) ಆಳವಾದ ಒಳಪ್ರದೇಶದಿಂದಲೂ ವಿಶಾಲತೆಯಿಂದಲೂ ಕಂಗೊಳಿಸುತ್ತಿದ್ದವು. ಆ ಯಾಗಶಾಲೆಯಲ್ಲಿ ನಿಲ್ಲಿಸಿದ್ದ ಭಾರಿ ಯಜ್ಞಸ್ತಂಭವು ಒಂದು ಸಾವಿರ ಮೊಳಗಳಷ್ಟು ಎತ್ತರವಾಗಿ ಶೋಭಿಸುತ್ತಿತ್ತು.

೧೨. ಆ ಯಾಗಮಂಟಪವು ಸಂಪೂರ್ಣವಾಗಿ ಚಿನ್ನದಿಂದಲೇ ನಿರ್ಮಿಸಲ್ಪಟ್ಟು ಇಪ್ಪತ್ತು ಯೋಜನಗಳಷ್ಟು ಅಗಲವುಳ್ಳದ್ದಾಗಿ, ರಮಣೀಯವಾದ ಮೇಲ್ಕಟ್ಟುಗಳಿಂದಲೂ, ತೋರಣಮಾಲಿಕೆಗಳಿಂದಲೂ, ಬಾಳೆಯಕಂಬಗಳಿಂದಲೂ ಕಂಗೊಳಿಸುತ್ತಿತ್ತು.

೧೩. ಆ ಯಾಗಕ್ಕೆ ಬ್ರಹ್ಮ, ರುದ್ರಾದಿ ದೇವತೆಗಳೂ, ಅವರ ಪರಿವಾರಗಳೂ ಋಷಿಗಳೂ, ಮುನಿಗಳೂ ಬಂದಿದ್ದರು.

ಹೋತಾರೋ ದಶಲಕ್ಷಾಣಿ ದಶಲಕ್ಷಾಣೀ ದೀಕ್ಷಿತಾಃ ।
ಅಧ್ವರ್ಯವಃ ಪಂಚಲಕ್ಷಮುದ್ಗಾತಾರಸ್ತಥಾಪರೇ ॥ ೧೪ ॥

ಆಹೂತಾಸ್ತತ್ರ ವಿದ್ವಾಂಸಶ್ಚತುರ್ವೇದವಿದೋ ದ್ವಿಜಾಃ ।
ಸರ್ವಶಾಸ್ತ್ರಾರ್ಥತತ್ತ್ವಜ್ಞಾಃ ಕೋಟಿಶೋಽನ್ಯೇ ಪ್ರಪೂಜಿತಾಃ ॥ ೧೫ ॥

ಹಸ್ತಿಶುಂಡಾಸಮಾಂ ಧಾರಾಂ ಭುಕ್ತ್ವಾಜ್ಯಸ್ಯ ಹುತಾಶನಃ ।
ಅಜೀರ್ಣಂ ಪ್ರಾಪ ತದ್ಯಜ್ಞೇ ನ ಚಿತ್ರಂ ವಿದ್ಧಿ ಮೈಥಿಲ ॥ ೧೬ ॥

ಯೇಭ್ಯೋ ಭಾಗಂ ವದಂತೀಹ ವಿಶ್ವೇದೇವಾಃ ಸಭಾಸದಃ ।
ತೇಭ್ಯಸ್ತೇಭ್ಯೋ ದದುರ್ವಾತಾಃ ಪರಿವೇಷ್ಟಾರ ಏವ ತೇ ॥ ೧೭ ॥

---

೧೪. ಆ ಯಾಗದಲ್ಲಿ ಹತ್ತುಲಕ್ಷ ಮಂದಿ ಹೋತೃಗಳೂ, ಹತ್ತುಲಕ್ಷ ಮಂದಿ ದಿಕ್ಷೀತರೂ, ಐದುಲಕ್ಷ ಮಂದಿ ಅಧ್ವರ್ಯುಗಳೂ, ಉದ್ಗಾತೃಗಳೂ ಕರೆಯಲ್ಪಟ್ಟು ಬಂದಿದ್ದರು.

೧೫. ಇವರಲ್ಲದೆ ನಾಲ್ಕು ವೇದಗಳನ್ನೂ ಬಲ್ಲ ಪ್ರಾಜ್ಞರಾದ ದ್ವಿಜೋತ್ತಮರೂ ಸಕಲ ಶಾಸ್ತ್ರಗಳ ರಹಸ್ಯವನ್ನೂ ಆಮೂಲಾಗ್ರವಾಗಿ ಅರಿತ ವಿದ್ವಾಂಸರೂ ಆಹೂತರಾಗಿ ಕೋಟಿಗಟ್ಟಲೆಯಾಗಿ ಬಂದಿದ್ದರು. ಹೀಗೆ ಆಹೂತರಾಗಿ ಬಂದವರನ್ನೆಲ್ಲಾ ಚೆನ್ನಾಗಿ ಸತ್ಕರಿಸಲಾಯಿತು.

೧೬. ಓ ಮಿಥಿಲೇಶ್ವರ! ಆ ಯಜ್ಞದಲ್ಲಿ ಆನೆಯ ಸೊಂಡಲಿನಂತೆ ಸುರಿಯುತ್ತಿದ್ದ ಆಜ್ಯಧಾರೆಯನ್ನು ಕುಡಿದು ಕುಡಿದು ಆ ಯಜ್ಞೇಶ್ವರನು ಅಜೀರ್ಣವ್ಯಾಧಿಯನ್ನು ಹೊಂದಿದನು. ಇದರಲ್ಲೇನೂ ಆಶ್ಚರ್ಯವಿಲ್ಲ. ಮತ್ತು

೧೭. ಯಜ್ಞದಲ್ಲಿ ಯಾರು ಯಾರಿಗೆ ಭಾಗವು ಸಲ್ಲಬೇಕೆಂದಿರುವುದೋ ಆ ವಿಶ್ವೇದೇವತೆಗಳಿಗೂ, ಸಭಾಸದರೆಂಬುವರಿಗೂ ಆಯಾ ಭಾಗಗಳನ್ನು ಪರಿವೇಷಣದ ಕಾರ್ಯಭಾರ (ತೆಗೆದುಕೊಂಡು ಹೋಗಿ ಸಲ್ಲಿಸುವ ಕೆಲಸ) ವನ್ನು ಹೊತ್ತಿದ್ದ ವಾತರೆಂಬ ದೇವತೆಗಳು ಸಲ್ಲಿಸಿ ಬಂದರು.

ಕೇಪಿ ಜೀವಾಸ್ತ್ರಿಲೋಕ್ಯಾಂ ತು ನ ಬಭೂವುರ್ಬುಭುಕ್ಷಿತಾಃ ।
ಸರ್ವೇ ದೇವಾಸ್ತು ಸೋಮೇನ ಹ್ಯಜೀರ್ಣತ್ವಮುಪಾಗತಾಃ ॥ ೧೮ ॥

ಸಂವರ್ತಾಯ ದದೌ ರಾಜ್ಯಂ ಜಂಬೂದ್ವೀಪಸ್ಯ ಚಾಧ್ವರೇ ।
ಗಜಾನಾಂ ಹೇಮಭಾರಾಣಾಂ ನಿಯುತಾನಿ ಚತುರ್ದಶ ॥ ೧೯ ॥

ಶತಾರ್ಬುದಂ ಹಯಾನಾಂ ತು ಯಜ್ಞಾಂತೇ ದಕ್ಷಿಣಾಂ ನೃಪ ।
ಕೋಟಿಶೋ ನವರತ್ನಾನಾಂ ಮಹಾರ್ಹಾಣಾಂ ಮಹಾತ್ಮನೇ ॥ ೨೦ ॥

ಹಯಾನಾಂ ಪಂಚಸಾಹಸ್ರಂ ಗಜಾನಾಂ ಶತಮೇವ ಚ ।
ಶತಭಾರಂ ಸುವರ್ಣಾನಾಂ ಬ್ರಾಹ್ಮಣೇ ಬ್ರಾಹ್ಮಣೇ ದದೌ ॥ ೨೧ ॥

---

೧೮. ಓ ರಾಜೇಂದ್ರ! ಆ ಸಮಯದಲ್ಲಿ ಮೂರು ಲೋಕಗಳಲ್ಲಿಯೂ ಎಲ್ಲಿ ನೋಡಿದರೂ ಕೂಡ ಹಸಿವಿನಿಂದ ಬಳಲುತ್ತಿದ್ದವರು ಒಬ್ಬರೂ ಕಾಣಬರಲಿಲ್ಲ. ಆಗ ಸೋಮಪಾನವನ್ನುಮಾಡಿ ಸಕಲ ದೇವತೆಗಳೂ ಅಜೀರ್ಣಕ್ಕೆ ಗುರಿಯಾದರು.

೧೯–೨೦. ಬಳಿಕ ಯಜ್ಞಾಂತದಲ್ಲಿ ಆ ಮರುತರಾಜನು ಗುರುವಾದ ಸಂವರ್ತನಿಗೆ ದಕ್ಷಿಣೆಯಾಗಿ ಜಂಬೂದ್ವೀಪದ ರಾಜ್ಯವನ್ನೇ ಕೊಟ್ಟುಬಿಟ್ಟನು ಮತ್ತು ಹದಿನಾಲ್ಕು ನಿಯುತಗಳಷ್ಟು (೧೪೦೦೦೦೦) ಆನೆಗಳನ್ನು ಅಷ್ಟೇ ಸಂಖ್ಯೆಯ ಸುವರ್ಣ ಭಾರಗಳನ್ನೂ (ಭಾರವೆಂದರೆ, ಗಟ್ಟಿಮುಟ್ಟಾದ ಮನುಷ್ಯನು ಹೊರುವಷ್ಟು ತೂಕವಿರುವ ಗಟ್ಟಿ) ಒಂದುನೂರು ಅರ್ಬುದಗಳಷ್ಟು ಸಂಖ್ಯೆಯ ಕುದುರೆಗಳನ್ನೂ ಇದೂ ಅಲ್ಲದೆ ಕೋಟಿಗಟ್ಟಲೆ ಬಹಳ ಬೆಲೆಬಾಳುವಂತಹ ನವರತ್ನಗಳನ್ನೂ ಆ ಮಹಾತ್ಮನಿಗೆ ದಕ್ಷಿಣೆಯಾಗಿ ಒಪ್ಪಿಸಿದನು.

೨೧. ಮತ್ತು ಆ ಯಜ್ಞಕ್ಕೆ ಬಂದಿದ್ದ ಪ್ರತಿಯೊಬ್ಬ ಬ್ರಾಹ್ಮಣನಿಗೂ ಐದು ಸಾವಿರ ಕುದುರೆಗಳನ್ನೂ ಒಂದುನೂರು ಆನೆಗಳನ್ನೂ ಒಂದೊಂದೂ ಭಾರದಷ್ಟು ತೂಕವಿರುವ ನೂರು ಚಿನ್ನದಗಟ್ಟಿಗಳನ್ನೂ ದಕ್ಷಿಣೆಯಾಗಿ ಇತ್ತನು.

ಜಲಭೋಜನಪಾತ್ರಾಣಿ ಹೈಮಾನಿ ಪ್ರಸ್ಫುರಂತಿ ಚ ।
ಭುಕ್ತ್ವಾ ತಾನಿ ವಿಸೃಜ್ಯಾಶು ಗತಾಸ್ತುಷ್ಟಾ ದ್ವಿಜಾತಯಃ ॥ ೨೨ ॥

ವಿಪ್ರತ್ಯಕ್ತೈಃ ಸ್ವರ್ಣಪಾತ್ರೈರುಚ್ಛಿಷ್ಟೈರ್ನೃಪವರ್ಜಿತೈಃ ।
ಹಿಮಾದ್ರಿಪಾರ್ಶ್ವೇ ಶೈಲೋಽಭೂದದ್ಯಾಪಿ ಶತಯೋಜನಂ ॥ ೨೩ ॥

ಮರುತಸ್ಯ ಯಥಾ ಯಜ್ಞೋ ನ ತಥಾನ್ಯಸ್ಯ ಕರ್ಹಿಚಿತ್ ।
ತ್ರಿಲೋಕ್ಯಾಂ ಶೃಣು ರಾಜೇಂದ್ರ ನ ಭೂತೋ ನ ಭವಿಷ್ಯತಿ ॥ ೨೪ ॥

ಯಜ್ಞಕುಂಡಾದ್ವಿನಿರ್ಗತ್ಯ ಪರಿಪೂರ್ಣತಮಃ ಸ್ವಯಂ ।
ಆತ್ಮಾನಂ ದರ್ಶಯಾಮಾಸ ಮರುತಾಯ ಮಹಾತ್ಮನೇ ॥ ೨೫ ॥

---

೨೨. ಆ ಯಾಗಕ್ಕೆ ಬಂದಿದ್ದ ಬ್ರಾಹ್ಮಣರೆಲ್ಲರೂ, ಊಟಮಾಡುವುದಕ್ಕೂ, ನೀರು ಕುಡಿಯುವುದಕ್ಕೂ ತಮಗೆ ಇತ್ತಿದ್ದ ಥಳಥಳನೆ ಹೊಳೆಯುತ್ತಿದ್ದ ಚಿನ್ನದ ಪಾತ್ರೆಗಳನ್ನು ಉಪಯೋಗಿಸಿ ತಾವು ಹೊರಡುವಾಗ ಅವುಗಳನ್ನು ತೆಗೆದುಕೊಂಡು ಹೋಗಲಾರದೆ ಮಹಾ ಸಂತೋಷದಿಂದ ಅಲ್ಲಿಯೇ ಬಿಟ್ಟು ತಮ್ಮ ತಮ್ಮ ನಿವಾಸಗಳಿಗೆ ಹಿಂತಿರುಗಿದರು.

೨೩. ಓ ರಾಜೇಂದ್ರ ! ಆ ರೀತಿ ಬ್ರಾಹ್ಮಣರು ಉಪಯೋಗಿಸಿ ಬಿಟ್ಟುಹೋಗಿದ್ದ ಆ ಸುವರ್ಣಪಾತ್ರೆಗಳನ್ನು ಆ ಮರುತರಾಜನು ತಾನು ಮತ್ತೆ ಸ್ವೀಕರಿಸಲಿಲ್ಲ. ಹೀಗಾಗಿ ಆ ಪಾತ್ರೆಗಳೆಲ್ಲವೂ ರಾಶಿಗಟ್ಟಲೆ ಬಿದ್ದು ಹಿಮಾಚಲದ ಪಕ್ಕದಲ್ಲಿ ನೂರು ಯೋಜನಗಳಷ್ಟು ವಿಸ್ತಾರವಾದ ಭಾರಿ ಬೆಟ್ಟವಾಗಿ ಪರಿಣಮಿಸಿ ಈಗಲೂ ತೋರುತ್ತಿರುವುದು.

೨೪. ಓ ರಾಜೇಂದ್ರ ! ಈ ಮರುತರಾಜನು ಮಾಡಿದ ಯಜ್ಞದಂತೆ ಈ ಮೂರು ಲೋಕದಲ್ಲಿ ಮತ್ತಾವ ರಾಜನೂ ಹಿಂದೆ ಯಜ್ಞವನ್ನು ಮಾಡಲಿಲ್ಲ: ಮುಂದೆ ಮಾಡುವುದೂ ಇಲ್ಲ.

೨೫. ಆ ಯಜ್ಞ ಪೂರ್ತಿಯಾದನಂತರ ಸಂಪೂರ್ಣಸ್ವರೂಪನಾದ ಪರಮ ಪುರುಷನು ಆ ಯಜ್ಞದಿಂದ ಆವಿರ್ಭವಿಸಿ, ಮಹಾತ್ಮನಾದ ಆ ಮರುತರಾಜನಿಗೆ ಪ್ರತ್ಯಕ್ಷನಾದನು.

ತಮಾಲೋಕ್ಯ ಹರಿಂ ನತ್ವಾ ಕೃತಾಂಜಲಿಪುಟೋ ನೃಪಃ ।
ಗದಿತುಂ ನ ಸಮರ್ಥೋಽಭೂದ್ರೋಮಾಂಚೀ ಪ್ರೇಮವಿಹ್ವಲಃ ॥ ೨೬ ॥

ತಂ ಪ್ರೇಮಪೂರಿತಂ ದೃಷ್ಟ್ವಾ ಪತಿತಂ ಪಾದಯೋರ್ನತಂ ।
ಉವಾಚ ಭಗವಾನ್ಸಾಕ್ಷಾನ್ಮೇಘಗಂಭೀರಯಾ ಗಿರಾ ॥ ೨೭ ॥

॥ ಶ್ರೀ ಭಗವಾನುವಾಚ ॥

ರಾಜಂಸ್ತ್ವಯಾಹಂ ವಿನಯೇನ ತೋಷಿತೋ
ನಿಷ್ಕಾರಣೈರ್ಯಜ್ಞಪರೈಃ ಸಮರ್ಚಿತಃ ।
ವರಂ ಪರಂ ಬ್ರೂಹಿ ಮಹಾಮತೇ ತ್ವರಂ
ದಾಸ್ಯಾಮಿ ದೇವೈರಪಿ ದುರ್ಲಭಂ ದಿವಿ ॥ ೨೮ ॥

---

೨೬. ಈ ರೀತಿ ತನ್ನೆದುರಾಗಿ ಆವಿರ್ಭವಿಸಿದ ಆ ಪರಮಪುರುಷನನ್ನು ಕಾಣುತ್ತಲೇ ಆ ಮರುತರಾಜನು ಭಕ್ತಿಯಿಂದ ಪರವಶನಾಗಿ ಕೈಗಳನ್ನು ಮುಗಿದುಕೊಂಡು ಆ ಶ್ರೀಹರಿಯನ್ನು ನಮಸ್ಕರಿಸಿದನು. ಆ ಆನಂದದಿಂದ ಆತನ ಮೈಯ್ಯಲ್ಲೆಲ್ಲಾ ರೋಮಾಂಚವುಂಟಾಯಿತು. ಕುತ್ತಿಗೆಯು ಬಿಗಿದುಹೋಗಿ ಮಾತನಾಡಲು ಆಗದಂತಾಯಿತು.

೨೭. ಈ ರೀತಿಯಾಗಿ ತನ್ನೆದುರಾಗಿ ವಿಶೇಷವಾಗಿ ಪ್ರೇಮವನ್ನಿಟ್ಟು ಕಾಲ್ಗಳ ಮೇಲೆ ತಲೆಯಿಟ್ಟು ನಮಸ್ಕರಿಸುತ್ತಿರುವ ಆ ಮರುತರಾಜನನ್ನು ಕಂಡು ಆ ಭಗವಂತನು ತಾನಾಗಿಯೇ ಅವನನ್ನು ಕುರಿತು, ಮೇಘಗಂಭೀರಧ್ವನಿಯಿಂದ

೨೮. ಓ ರಾಜೇಂದ್ರ! ನಿನ್ನ ಈ ವಿನಯದಿಂದಲೂ ಮತ್ತು ಯಾವೊಂದು ಉದ್ದೇಶವೂ ಇಲ್ಲದೆ ನೀನು ಆಚರಿಸಿದ ಈ ಶ್ರೇಷ್ಠವಾದ ಯಜ್ಞದಿಂದಲೂ ನಾನು ಆರಾಧಿಸಲ್ಪಟ್ಟು ಬಹುವಾಗಿ ಸಂತೋಷಪಟ್ಟಿರುವೆನು. ಎಲೈ ಮಹಾಜ್ಞಾನಿಯೇ, ನಿನಗೇನು ವರವು ಬೇಕೋ, ಆ ವರವು ದೇವತೆಗಳಿಗೂ ದುರ್ಲಭವಾದುದಾಗಿದ್ದರೂ ಅದನ್ನು ನಿನಗೆ ಈ ಕೂಡಲೆ ಕೊಡುವೆನು ಎಂದು ಹೇಳಿದನು.

|| ಶ್ರೀ ನಾರದ ಉವಾಚ ||

ಶ್ರುತ್ವಾ ತು ರಾಜಾ ಮರುತಃ ಕೃತಾಂಜಲಿಃ
ಪ್ರದಕ್ಷಿಣೀಕೃತ್ಯ ಹರಿಂ ಪರೇಶ್ವರಂ ।
ಸಂಪೂಜ್ಯ ಭಕ್ತ್ಯಾ ವಿಶದೋಪಚಾರಕೈ-
ರ್ನತ್ವಾ ಭೃಶಂ ಗದ್ಗದಯಾ ಗಿರಾಬ್ರವೀತ್ || ೨೯ ||

|| ಮರುತ ಉವಾಚ ||

ನ ವೇದ್ಮ್ಯಹಂ ತ್ವಚ್ಚರಣಾರವಿಂದತೋ
ವರಂ ಪರಂ ಶ್ರೀಪುರುಷೋತ್ತಮೋತ್ತಮ ।
ಸಮೇತ್ಯ ಗಂಗಾಂ ತೃಷಿತಾತಿದುರ್ಧಿಯಃ
ಖನಂತಿ ಕೂಪಂ ಹಿ ಯಥಾ ನರೇತರಾಃ || ೩೦ ||

ತಥಾಪಿ ಯಾಚೇ ತವ ವಾಕ್ಯಗೌರವಾ-
ತ್ಪಾದಾರವಿಂದಂ ಹೃದಯಾರವಿಂದಾತ್ ।
ಕದಾಪಿ ಮೇ ಮಾ ವ್ರಜತು ವ್ರಜೇಶ್ವರ
ಮೂಲಂ ಚತುರ್ಣಾಂ ವಿದುರರ್ಥಸಂಪದಾಂ || ೩೧ ||

---

೨೯. ಎಲೈ ಮಿಥಿಲಾಧಿಪತಿಯೇ! ಈ ರೀತಿ ಆ ಪರಮಪುರುಷನಾದ ಶ್ರೀಹರಿಯು ನುಡಿದುದನ್ನು ಕೇಳಿ, ಆ ಮರುತರಾಜನು ಕೈಗಳನ್ನು ಮುಗಿದುಕೊಂಡು ಆ ಪ್ರಭುವನ್ನು ಪ್ರದಕ್ಷಿಣೆಮಾಡಿ ನಮಸ್ಕರಿಸಿ ಬಹು ಭಕ್ತಿಯಿಂದ ಸಕಲೋಪಚಾರಗಳಿಂದಲೂ ಪೂಜೆಮಾಡಿ ಬಹು ಗದ್ಗದವಾಣಿಯಿಂದ ಈರೀತಿ ಪ್ರಾರ್ಥಿಸಿದನು.

೩೦. ಹೇ ಪುರುಷೋತ್ತಮ, ನಿನ್ನ ಚರಣಾರವಿಂದಕ್ಕಿಂತಲೂ ಉತ್ತಮವಾದ ಬೇರಾವುದೊಂದನ್ನೂ ನಾನು ಕಾಣೆನು. ಸ್ವಲ್ಪವೂ ಬುದ್ಧಿಯಿಲ್ಲದ ನರಾಧಮರು ಮಾತ್ರ ತಾವೆಷ್ಟೇ ಬಾಯಾರಿಕೆಯಿಂದ ಬಳಲುತ್ತಿದ್ದರೂ ಕಣ್ಣೆದುರಿಗೆ ಇರುವ ಗಂಗಾನದಿಯನ್ನು ಬಿಟ್ಟು (ನೀರಿಗೋಸ್ಕರ) ಬಾವಿಯನ್ನು ತೋಡಹೋಗುವರು. (ನಿನ್ನ ಚರಣಾರವಿಂದಕ್ಕಿಂತಲೂ ಉತ್ತಮವಾದ ಬೇರೆ ವಸ್ತುವೊಂದಿದೆಯೆ? ಅದನ್ನರಸುವರು ಮೇಲ್ಕಂಡಂತೆ ತಿಳಿಗೇಡಿಗಳಲ್ಲದೆ ಮತ್ತೇನು?)

೩೧. ಆದರೂ ನಿನ್ನ ಮಾತೆಂಬುದಾಗಿ ಗೌರವವಿತ್ತು ಈ ವರವನ್ನು ಪ್ರಾರ್ಥಿಸುವೆನು. "ಓ ವ್ರಜೇಶ್ವರ! ಯಾವುದನ್ನು ಚತುರ್ವಿಧವಾದ ಪುರುಷಾರ್ಥಗಳಿಗೂ ಮೂಲಕಾರಣವೆಂಬುದಾಗಿ ಪ್ರಾಜ್ಞರು ತಿಳಿದಿರುವರೋ, ಆ ನಿನ್ನ ಪಾದಾರವಿಂದವು ನನ್ನ ಹೃದಯಕಮಲದಿಂದ ಎಂದೆಂದಿಗೂ ಅಗಲಿಹೋಗದಿರಲಿ."

॥ ಶ್ರೀ ಭಗವಾನುವಾಚ ॥

ಧನ್ಯಾಸ್ತಿ ರಾಜಂಸ್ತವ ನಿರ್ಮಲಾ ಮತಿಃ
ಪ್ರಲೋಭಿತಸ್ಯಾಪಿ ವರೈರ್ನ ಕಾಮುಭೃತ್ ।
ತಥಾಪಿ ಮತ್ತೋ ವರಯೇಪ್ಸಿತಂ ಪರಂ
ವಿನಾ ಫಲಂ ಭಕ್ತಸುಖಾನ್ನ ಮೇ ಸುಖಂ ॥ ೩೨ ॥

॥ ಮರುತ ಉವಾಚ ॥

ದೇಯಂ ಯದಾ ಮೇ ವರಮೀಪ್ಸಿತಂ ಪ್ರಭೋ
ವೈಕುಂಠಲೋಕಂ ಕುರುತಾದ್ಧರಾತಲೇ ।
ರಕ್ಷ ಸ್ಥಿತಂ ಮಾಂ ನಿಜಭಕ್ತವತ್ಸಲ
ತಸ್ಮಿನ್ಪುರೇ ಭಕ್ತಜನೈಃ ಪರೈಃ ಸಹ ॥ ೩೩ ॥

॥ ಶ್ರೀ ಭಗವಾನುವಾಚ ॥

ಅಸ್ಮಿನ್ಮನೌ ದೈವಮನೋರಥಾಬ್ಧಿಂ
ಗತೇಷು ವಿಂಶೇಷು ಯುಗೇಷು ಚಾಷ್ಟೌ ।

---

೩೨. ಈ ರೀತಿಯಾಗಿ ಆ ಮರುತರಾಜನು ವರವನ್ನು ಕೇಳಿದುದನ್ನು ನೋಡಿ ಆ ಭಗವಂತನು "ಓ ರಾಜೇಂದ್ರ! ನಿನಗೆ ವರಗಳ ಆಸೆಯನ್ನು ತೋರಿಸಿದರೂ ಅದಾವುದಕ್ಕೂ ಈಡಾಗದೆ ನೀನು ಯಾವ ಸ್ವಾರ್ಥವನ್ನೂ ಅಪೇಕ್ಷಿಸದಿರುವುದರಿಂದ ನಿನ್ನ ಆ ನಿಷ್ಕಲ್ಮಷವಾದ ಮನಸ್ಸು ನಿಜವಾಗಿಯೂ ಧನ್ಯವಾದುದು. ಆದರೂ ಸಹ ನಿನಗೆ ಬೇಕಾದ ವರವನ್ನು ಕೇಳು. ಏಕೆಂದರೆ, ಭಕ್ತನಿಗೆ ಸುಖವಿಲ್ಲದಿದ್ದರೆ ನನಗೆ ಸುಖವಿಲ್ಲ" ಎಂದನು.

೩೩. ಅದನ್ನು ಕೇಳಿ ಮರುತರಾಜನು "ಹೇ ಪ್ರಭು! ಹಾಗೆ ನೀನು ನನಗೆ ವರವನ್ನು ಕೊಟ್ಟೇಕೊಡಬೇಕೆಂಬ ಪಕ್ಷಕ್ಕೆ ಇದೋ ನಾನು ಕೇಳುವ ವರವಿಷ್ಟೇ ಈ ಭೂಮಿಯಲ್ಲೇ ವೈಕುಂಠಲೋಕವು ನೆಲಸುವಂತಾಗಲಿ. ಓ ಭಕ್ತವತ್ಸಲ! ಆ ನಗರದಲ್ಲಿ ಭಾಗವತೋತ್ತಮರಾದ ಪುರುಷರೊಡನೆ ವಾಸಮಾಡುವ ನನ್ನನ್ನು ನೀನು ಕಾಪಾಡಬೇಕು" ಎಂದು ಪ್ರಾರ್ಥಿಸಿದನು.

೩೪. ಅದನ್ನು ಕೇಳಿ ಆ ಭಗವಂತನು "ಈ ಮನ್ವಂತರದಲ್ಲಿ ಇಪ್ಪತ್ತೆಂಟು ಯುಗಗಳು ಕಳೆದುಹೋದನಂತರ ನಾನು ಈ ಭೂಮಿಯಲ್ಲಿ ದೈವಿಕವಾದ ಇಷ್ಟಾರ್ಥ

ಗತ್ವಾಥ ನಾಕಂ ಧರಣೀಂ ಸಮೇತ್ಯ
ಮಯಾ ಹಿ ಗೋವತ್ಸಪದಂ ಕರಿಷ್ಯತಿ　　　　|| ೩೪ ||

|| ಶ್ರೀ ನಾರದ ಉವಾಚ ||

ಇತ್ಯುಕ್ತ್ವಾ ಭಗವಾನ್ಸಾಕ್ಷಾತ್ತತ್ರೈವಾಂತರಧೀಯತ |
ಸೋಽಯಂ ತು ಮರುತೋ ರಾಜಾ ಉಗ್ರಸೇನೋ ಬಭೂವ ಹ　　|| ೩೫ ||

ತಂ ಯಜ್ಞಂ ಕಾರಯಾಮಾಸ ರಾಜಸೂಯಂ ಹರಿಃ ಸ್ವಯಂ |
ಕಿಂ ದುರ್ಲಭಂ ತ್ರಿಲೋಕ್ಯಾಂ ತು ಭಕ್ತಾನಾಂ ಮೈಥಿಲೇಶ್ವರ　　|| ೩೬ ||

ಮರುತಸ್ಯಾಪಿ ಚರಿತಂ ಯಃ ಶೃಣೋತಿ ನೃಪೋತ್ತಮ |
ತಸ್ಯ ಜ್ಞಾನಂ ಸವೈರಾಗ್ಯಂ ಭಕ್ತಿಯುಕ್ತಂ ಪ್ರಜಾಯತೇ　　|| ೩೭ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ಶ್ರೀವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಶ್ರೀಮರುತೋಪಾಖ್ಯಾನಂ ನಾಮ ಪ್ರಥಮೋಽಧ್ಯಾಯಃ

ಗಳೆಲ್ಲಕ್ಕೂ ಸಾಗರದಂತಿರುವ ನನ್ನ ನಿತ್ಯ ನಿವಾಸವಾದ ಗೋಲೋಕವನ್ನು ನಿರ್ಮಿಸುವೆನು" ಎಂದು ನುಡಿದನು.

೩೫. ಓ ರಾಜೇಂದ್ರ! ಹೀಗೆ ಆ ಭಗವಂತನು ಹೇಳಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು. ಆ ಮರುತರಾಜನೇ ಈಗ ಉಗ್ರಸೇನನಾಗಿ ಹುಟ್ಟಿದನೆಂದು ತಿಳಿ.

೩೬. ಆ ಉಗ್ರಸೇನನ ಕೈಯಲ್ಲಿಯೇ ಶ್ರೀಹರಿಯು ತಾನು ಸಹಾಯಕನಾಗಿ ನಿಂತುಕೊಂಡು ರಾಜಸೂಯಯಾಗವನ್ನು ಮಾಡಿಸಿದನು. ಓ ಮಿಥಿಲೇಶ್ವರ! ಭಕ್ತರಾದವರಿಗೆ ಈ ಮೂರುಲೋಕಗಳಲ್ಲಿಯೂ ದುರ್ಲಭವೆನಿಸಿದ ವಸ್ತುವಾವುದಿದ್ದೀತು?

೩೭. "ಓ ನೃಪೋತ್ತಮ! ಯಾವ ನರನು ಈ ಮರುತರಾಜನ ಚರಿತ್ರವನ್ನು ಶ್ರವಣಮಾಡುವನೋ ಆತನಿಗೆ ವೈರಾಗ್ಯವೂ ಭಕ್ತಿಯೂ ಒಡಗೂಡಿರುವ ನಿರ್ಮಲ ಜ್ಞಾನವುಂಟಾಗುವುದು" ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ವಿಶ್ವಜಿತ್ಖಂಡದಲ್ಲಿ
ನಾರದಬಹುಲಾಶ್ವ ಸಂವಾದದಲ್ಲಿ ಮರುತೋಪಾಖ್ಯಾನವೆಂಬ
ಮೊದಲನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ದ್ವಿತೀಯೋಽಧ್ಯಾಯಃ

॥ ಬಹುಲಾಶ್ವ ಉವಾಚ ॥

ಕಥಂ ಚಕಾರ ವಿಧಿವದ್ರಾಜಸೂಯಾಧ್ವರಂ ನೃಪಃ ।
ಶ್ರೀಕೃಷ್ಣೇನ ಸಹಾಯೇನ ವದೈತನ್ನಿತರಾಂ ಮುನೇ ॥ ೧ ॥

॥ ಶ್ರೀ ನಾರದ ಉವಾಚ ॥

ಉಗ್ರಸೇನಃ ಸುಧರ್ಮಾಯಾಂ ಕೃಷ್ಣಂ ಸಂಪೂಜ್ಯ ಚೈಕದಾ ।
ನತ್ವಾ ಪ್ರಾಹ ಪ್ರಸನ್ನಾತ್ಮಾ ಕೃತಾಂಜಲಿಪುಟಃ ಶನೈಃ ॥ ೨ ॥

ಎರಡನೆಯ ಅಧ್ಯಾಯವು

೧. ಅನಂತರ ಮಿಥಿಲಾನಗರಾಧಿಪತಿಯಾದ ಬಹುಲಾಶ್ವನು ನಾರದಮುನಿಯನ್ನು ಕುರಿತು "ಓ ಮುನೀಂದ್ರ! ಆ ಉಗ್ರಸೇನಮಹಾರಾಜನು ಶ್ರೀಕೃಷ್ಣನ ಬೆಂಬಲದಿಂದ ಆ ರಾಜಸೂಯಯಾಗವನ್ನು ವಿಧಿವತ್ತಾಗಿ ಹೇಗೆ ನೆರವೇರಿಸಿದನು? ಅದನ್ನು ನನಗೆ ಚೆನ್ನಾಗಿ ತಿಳಿಯಪಡಿಸಬೇಕು" ಎಂದು ಪ್ರಶ್ನಿಸಲು,

೨. ಆ ನಾರದಮಹರ್ಷಿಯು ಈ ರೀತಿ ಹೇಳತೊಡಗಿದನು :—ಒಂದಾನೊಂದು ದಿನ ಸುಧರ್ಮಾ ಎಂಬ ರಾಜಸಭೆಯಲ್ಲಿ ಮಂಡಿಸಿದ್ದ ಉಗ್ರಸೇನನು ಶ್ರೀಕೃಷ್ಣನನ್ನು ಪೂಜಿಸಿ ಕೈಗಳನ್ನು ಮುಗಿದುಕೊಂಡು ಪ್ರಸನ್ನವಾದ ಚಿತ್ತವೃತ್ತಿಯಿಂದ ಆತನನ್ನು ನಮಸ್ಕರಿಸಿ ಮೆಲ್ಲನೆ ಇಂತೆಂದನು.

॥ ಉಗ್ರಸೇನ ಉವಾಚ ॥

ಭಗವನ್ನಾರದಮುಖಾಚ್ಛ್ರುತಂ ಯಸ್ಯ ಮಹತ್ಫಲಂ ।
ತಂ ಯಜ್ಞಂ ರಾಜಸೂಯಾಖ್ಯಂ ಕರಿಷ್ಯಾಮಿ ತವಾಜ್ಞಯಾ ॥ ೩ ॥

ತ್ವತ್ಪಾದಸೇವಯಾ ಪೂರ್ವೇ ಮನೋರಥಮಹಾರ್ಣವೇ ।
ತೇರುರ್ಜಗತ್ತೃಣೀಕೃತ್ಯ ನಿರ್ಭಯಾಃ ಪುರುಷೋತ್ತಮ ॥ ೪ ॥

॥ ಶ್ರೀ ಭಗವಾನುವಾಚ ॥

ಸಮ್ಯಗ್ವ್ಯವಸಿತಂ ರಾಜನ್ಭವತಾ ಯಾದವೇಶ್ವರ ।
ಯಜ್ಞೇನ ತೇ ಜಗತ್ಕೀರ್ತಿಸ್ತ್ರಿಲೋಕ್ಯಾಂ ಸಂಭವಿಷ್ಯತಿ ॥ ೫ ॥

ಆಹೂಯ ಯಾದವಾನ್ಸಾಕ್ಷಾತ್ಸಭಾಂ ಕೃತ್ವಾಥ ಸರ್ವತಃ ।
ತಾಂಬೂಲವೀಟಿಕಾಂ ಧೃತ್ವಾ ಪ್ರತಿಜ್ಞಾಂ ಕಾರಯ ಪ್ರಭೋ ॥ ೬ ॥

---

೩. ಹೇ ಭಗವನ್! ಹಿಂದೆ ನಾನು ನಾರದಮಹರ್ಷಿಯ ಮುಖದಿಂದ ರಾಜಸೂಯಯಾಗವು ಬಹಳ ಫಲವುಳ್ಳದ್ದೆಂದು ಕೇಳಿರುವೆನು. ಆದುದರಿಂದ ಈಗ ನಾನು ನಿನ್ನ ಅಪ್ಪಣೆಯನ್ನು ಪಡೆದು ಆ ಯಾಗವನ್ನು ಮಾಡಬೇಕೆಂದಿರುವೆನು.

೪. ಓ ಪುರುಷೋತ್ತಮ! ನಮ್ಮ ಹಿಂದಿನ ಪುರುಷರೆಲ್ಲರೂ ನಿನ್ನ ಪಾದ ಸೇವಾ ಸಾಮರ್ಥ್ಯದಿಂದಲೇ ಭಯವೆಂಬುದನ್ನೇ ಅರಿಯದೆ ಜಗತ್ತನ್ನು ತೃಣೀಕರಿಸಿ (ಕಡೆಗಣಿಸಿ) ತಮ್ಮ ಮನೋರಥಗಳೆಂಬ ಮಹಾಸಾಗರದಲ್ಲಿ ನಿರ್ಭಯರಾಗಿ ಈಜಾಡಿದರು.

೫. ಈ ರೀತಿ ಉಗ್ರಸೇನನಾಡಿದ ಮಾತನ್ನು ಕೇಳಿ ಶ್ರೀಕೃಷ್ಣನು ಯಾದವರಿಗೆಲ್ಲಾ ಪ್ರಭುವಾದ ಆ ಉಗ್ರಸೇನನನ್ನು ಕುರಿತು, ಓ ರಾಜೇಂದ್ರ! ನೀನು ಉದ್ದೇಶಿಸಿರುವುದು ಬಹು ಸಾಧುವಾದುದು. ಈ ಯಜ್ಞವನ್ನು ಮಾಡುವುದರಿಂದ ನಿನಗೆ ಮೂರು ಲೋಕಗಳಲ್ಲಿಯೂ ಯಶಸ್ಸುಂಟಾಗುವುದು.

೬. ಹೇ ಪ್ರಭು! ಕೂಡಲೇ ಯಾದವರೆಲ್ಲರನ್ನೂ ಕರೆಸಿ ಸಭೆಯನ್ನು ಸೇರಿಸು. ಮತ್ತು ಕೈಯ್ಯಲ್ಲಿ ತಾಂಬೂಲದ ವೀಳಯವನ್ನು ಹಿಡಿದು ಅವರ ಕೈಯ್ಯಲ್ಲಿ ಪ್ರತಿಜ್ಞೆಯನ್ನು ಮಾಡಿಸು.

ಮಮಾಂಶಾ ಯಾದವಾಃ ಸರ್ವೇ ಲೋಕದ್ವಯಜಿಗೀಷವಃ ।
ಜಿತ್ವಾರೀನಾಗಮಿಷ್ಯಂತಿ ಹರಿಷ್ಯಂತಿ ಬಲಿಂ ದಿಶಾಂ ॥ ೭ ॥

॥ ಶ್ರೀ ನಾರದ ಉವಾಚ ॥

ಅಥಾಂಧಕಾದೀನಾಹೂಯ ಶಕ್ರಸಿಂಹಾಸನೇ ಸ್ಥಿತಃ ।
ಸುಧರ್ಮಾಯಾಂ ಪ್ರಾಹ ನೃಪೋ ಧೃತ್ವಾ ತಾಂಬೂಲವೀಟಿಕಾಂ ॥ ೮ ॥

॥ ಉಗ್ರಸೇನ ಉವಾಚ ॥

ಯೋ ಜಯೇತ್ಸಮರೇ ಸರ್ವಾಞ್ಜಂಬೂದ್ವೀಪಸ್ಥಿತಾನ್ನೃಪಾನ್ ।
ಮನಸ್ವೀ ಶಕ್ರಕೋದಂಡೀ ಸೋಽತ್ತಿ ತಾಂಬೂಲವೀಟಿಕಾಂ ॥ ೯ ॥

॥ ಶ್ರೀ ನಾರದ ಉವಾಚ ॥

ನೃಪೇಷು ತೂಷ್ಣೀಂ ಪ್ರಗತೇಷು ಸತ್ಸು
ಶ್ರೀರುಕ್ಮಿಣೀನಂದನ ಏವಮುಗ್ರಾತ್ ।

---

೭. " ಈ ಯಾದವರೆಲ್ಲರೂ ನನ್ನ ಅಂಶದಿಂದಲೇ ಸಂಭವಿಸಿರುವುದರಿಂದ ಈ ಲೋಕವನ್ನೇ ಏಕೆ, ಸ್ವರ್ಗಲೋಕವನ್ನೂ :ಸಹ ಗೆಲ್ಲಬಲ್ಲರು. ಆದುದರಿಂದ ಇವರು ಶತ್ರುಗಳನ್ನು ಜಯಿಸುವರಲ್ಲದೆ ದಿಕ್ಕುದಿಕ್ಕುಗಳಿಂದಲೂ ಕಪ್ಪಕಾಣಿಕೆಗಳನ್ನು ತಂದೊಪ್ಪಿಸುವರು " ಎಂದನು.

೮–೯. ಎಲೈ ಮಿಥಿಲಾಧಿಪತಿಯೇ! ಈರೀತಿ ಕೃಷ್ಣನ ಒಪ್ಪಿಗೆಯನ್ನು ಪಡೆದನಂತರ ಉಗ್ರಸೇನಮಹಾರಾಜನು ಸುಧರ್ಮಾ ಎಂಬ ರಾಜಸಭೆಯಲ್ಲಿ ಇಂದ್ರನ ಸಿಂಹಾಸನದಮೇಲೆ ಮಂಡಿಸಿ ಅಂಧಕಾದಿ ಯಾದವರೆಲ್ಲರನ್ನೂ ಕರೆಸಿ ತಾಂಬೂಲದ ವೀಳಯವನ್ನು ಹಿಡಿದು " ಇಂದ್ರನಂತೆ ಪ್ರಖ್ಯಾತನಾದ ಧನುರ್ಧಾರಿಯಾದ ಯಾವ ಧೀರನು ಜಂಬೂದ್ವೀಪದಲ್ಲಿರತಕ್ಕ ಸಮಸ್ತ ನರಪತಿಗಳನ್ನೂ ಗೆದ್ದು ಬರಬಲ್ಲನೋ ಆತನೀಗ ಈ ತಾಂಬೂಲವನ್ನು ತೆಗೆದುಕೊಳ್ಳಬಹುದು " ಎಂದು ನುಡಿದನು.

೧೦. ಓ ಮಿಥಿಲಾಧಿಪತಿ! ಹೀಗೆ ಉಗ್ರಸೇನನ್ನು ನುಡಿಯುತ್ತಲೇ ಆ ಸಭೆಯಲ್ಲಿದ್ದ ಅರಸರೆಲ್ಲರೂ ಯಾರೂ ಮುಂದೆ ಬರದೆ ಸುಮ್ಮನೆ ಮಾತಿಲ್ಲದೆ ನಿಂತರು.

ಜಗ್ರಾಹ ತಾಂಬೂಲಚಯಂ ಮಹಾತ್ಮಾ
ನತ್ವಾ ನೃಪಂ ಮೈಥಿಲ ಶಂಬರಾರಿಃ　　　　॥ ೧೦ ॥

॥ ಪ್ರದ್ಯುಮ್ನ ಉವಾಚ ॥

ವಿಜಿತ್ಯ ಸಮರೇ ಸರ್ವಾಞ್ಜಂಬೂದ್ವೀಪಸ್ಥಿತಾನ್ನೃಪಾನ್ ।
ಗೃಹೀತ್ವಾ ಚ ಬಲಿಂ ತೇಭ್ಯ ಆಗಮಿಷ್ಯಾಮ್ಯಹಂ ಬಲಾತ್　　　　॥ ೧೧ ॥

ಅಗಮ್ಯಾಗಮನಂ ಬಭ್ರೋರ್ಬ್ರಾಹ್ಮಣಸ್ಯ ಗುರೋಸ್ತಥಾ ।
ಹತ್ಯಾ ಭ್ರೂಣಸ್ಯ ಮೇ ಭೂಯಾನ್ನಕುರ್ಯಾಂ ಕರ್ಮ ಚೇದಿದಂ　　　　॥ ೧೨ ॥

॥ ಶ್ರೀ ನಾರದ ಉವಾಚ ॥

ಶ್ರುತ್ವಾ ವಚಃ ಶಂಬರಾರೇಃ ಸಾಧು ಸಾಧ್ವಿತಿ ಯೂಥಪಾಃ ।
ಊಚುಸ್ತೇಷಾಂ ಪಶ್ಯತಾಂ ಚ ತಂ ಜಗ್ರಾಹ ಯದೂತ್ತಮಃ　　　　॥ ೧೩ ॥

ಆಗ ರುಕ್ಮಿಣೀದೇವಿಯ ವೀರಪುತ್ರನೂ ಶಂಬರಾಸುರ ಸಂಹಾರಿಯೂ ಆದ ಪ್ರದ್ಯುಮ್ನ ಕುಮಾರನು ದೊರೆಯಾದ ಉಗ್ರಸೇನನಿಗೆ ನಮಸ್ಕರಿಸಿ ಆ ವೀಳಯವನ್ನು ತೆಗೆದು ಕೊಂಡನು.

೧೧-೧೨. ಅನಂತರ ಆತನು ಈ ರೀತಿ ವೀರವಾಣಿಯಿಂದ ನುಡಿದನು :— "ಈ ಜಂಬೂದ್ವೀಪದಲ್ಲಿರುವ ಸಕಲ ಭೂಪಾಲಕರನ್ನು ಯುದ್ಧದಲ್ಲಿ ಗೆದ್ದು ಅವರಿಂದ ಕಪ್ಪ ಕಾಣಿಕೆಗಳನ್ನು ತೆಗೆದುಕೊಂಡು ಬಂದೇ ಬರುವೆನು. ಒಂದು ವೇಳೆ ನಾನು ಹೇಳಿದಂತೆ ಈ ಕೆಲಸವನ್ನು ಮಾಡದೆ ಇದ್ದರೆ ಆಗ ಅಗಮ್ಯಾಗಮನವನ್ನು ಮಾಡಿದ ಪಾಪಕ್ಕೂ ಮುಂಗಸಿಯನ್ನಾಗಲಿ ಬ್ರಾಹ್ಮಣನನ್ನಾಗಲಿ, ಗುರುವನ್ನಾಗಲಿ, ಭ್ರೂಣವನ್ನಾಗಲಿ ಹನನಮಾಡಿದ ಪಾತಕಕ್ಕೂ ಗುರಿಯಾಗುವೆನು." ಎಂದನು.

೧೩. ಓ ಮಿಥಿಲೇಂದ್ರ ! ಈ ರೀತಿಯಾಗಿ ಪ್ರದ್ಯುಮ್ನಕುಮಾರನಾಡಿದ ವೀರವಾಣಿಯನ್ನು ಕೇಳಿ ಆ ಸಭೆಯಲ್ಲಿದ್ದ ಸೇನಾಪತಿಗಳೆಲ್ಲರೂ ಭಲೆ, ಭಲೆ, ಎಂದು ಕೊಂಡಾಡಿದರು. ಬಳಿಕ ಆ ಯದುಶ್ರೇಷ್ಠನು ಅವರೆಲ್ಲರೂ ನೋಡುತ್ತಿರುವಂತೆ ಉಗ್ರಸೇನನಿಂದ ವೀಳಯವನ್ನು ಸ್ವೀಕರಿಸಿದನು.

ಗರ್ಗಾದ್ಯದುಕುಲಾಚಾರ್ಯಾನ್ಮುಹೂರ್ತಂ ಬೋಧ್ಯ ಯತ್ನತಃ ।
ತತ್ಸ್ನಾನಂ ಕಾರಯಾಮಾಸ ಮುನಿಭಿರ್ವೇದಸೂಕ್ತಿಭಿಃ ॥ ೧೪ ॥

ಉಗ್ರಸೇನೋಽಥ ತಿಲಕಂ ಪ್ರದ್ಯುಮ್ನಸ್ಯ ಚಕಾರ ಹ ।
ಬಲಿಂ ದತ್ವಾ ನಮಶ್ಚಕ್ರುಃ ಸರ್ವೇ ಯಾದವಯೂಥಪಾಃ ॥ ೧೫ ॥

ಉಗ್ರಸೇನೋ ದದೌ ಖಡ್ಗಂ ಪ್ರದ್ಯುಮ್ನಾಯ ಮಹಾತ್ಮನೇ ।
ಕವಚಂ ಪ್ರದದೌ ಸಾಕ್ಷಾದ್ಬಲದೇವೋ ಮಹಾಬಲಃ ॥ ೧೬ ॥

ಸ್ವತೂಣಾಭ್ಯಾಂ ವಿನಿಷ್ಕೃಷ್ಯ ತೂಣಾವಕ್ಷಯಸಾಯಕೌ ।
ಧನುಶ್ಚ ಶಾರ್ಙ್ಗಧನುಷಃ ಸಮುತ್ಪಾದ್ಯ ದದೌ ಹರಿಃ ॥ ೧೭ ॥

೧೪–೧೫. ಅನಂತರ ಉಗ್ರಸೇನರಾಜನು ಯಾದವಕುಲ ಪುರೋಹಿತನಾದ ಗರ್ಗಮುನಿಯ ಅಭಿಪ್ರಾಯದಂತೆ ಉತ್ತಮವಾದ ಮುಹೂರ್ತವೊಂದನ್ನು ನಿಶ್ಚಯಿಸಿ ಅದರಲ್ಲಿ ಆ ಪ್ರದ್ಯುಮ್ನಕುಮಾರನಿಗೆ ಮುನಿಗಳೊಡನೆ ವೇದಸೂಕ್ತಗಳ ಪಾರಾಯಣ ಪೂರ್ವಕವಾಗಿ ದಿಗ್ವಿಜಯಾಭಿಷೇಕವನ್ನು ಮಾಡಿದನು. ಬಳಿಕ ಆ ಪ್ರದ್ಯುಮ್ನನ ಹಣೆಗೆ ತಿಲಕವನ್ನಿಟ್ಟನು. ಆಗ ಯಾದವ ಸೇನಾಪತಿಗಳೆಲ್ಲರೂ ಪ್ರದ್ಯುಮ್ನನಿಗೆ ಕಪ್ಪಕಾಣಿಕೆಗಳನ್ನೊಪ್ಪಿಸಿ ನಮಸ್ಕರಿಸಿದರು.

೧೬. ಇದಾದ ಮೇಲೆ ಉಗ್ರಸೇನನು ಮಹಾತ್ಮನಾದ ಪ್ರದ್ಯುಮ್ನನಿಗೆ ಕತ್ತಿಯನ್ನು ಇತ್ತನು. ಬಳಿಕ ಮಹಾಬಲಾಢ್ಯನಾದ ಬಲರಾಮನು ತನ್ನ ಕವಚವನ್ನು ಕೊಟ್ಟನು.

೧೭. ಅನಂತರ ಶ್ರೀಕೃಷ್ಣನು ತನ್ನ ಶಾರ್ಙ್ಗಧನುಸ್ಸಿನಿಂದ ಬೇರೊಂದು ಬಿಲ್ಲನ್ನೂ, ಬತ್ತಳಿಕೆಗಳಿಂದ (ಎಷ್ಟು ತೆಗೆಯುತ್ತಿದ್ದರೂ ಬಾಣಗಳಿಂದ ತುಂಬಿಯೇ ಇರತಕ್ಕ) ಅಕ್ಷಯ ಸಾಯಕಗಳಾದ ಮತ್ತೆರಡು ಬತ್ತಳಿಕೆಗಳನ್ನು ನಿರ್ಮಿಸಿ ಅವನ್ನು ತನ್ನ ಕುಮಾರನಿಗೆ ಇತ್ತನು.

ಕಿರೀಟಕುಂಡಲೇ ದಿವ್ಯೇ ಪೀತಂ ವಾಸೋ ಮನೋಹರಂ ।
ಛತ್ರಂ ಚ ಚಾಮರೇ ಸಾಕ್ಷಾಚ್ಛೂರೋ ವೃದ್ಧೋ ದದೌ ಪುನಃ ॥ ೧೮ ॥

ಶತಚಂದ್ರಂ ದದೌ ತಸ್ಮೈ ವಸುದೇವೋ ಮಹಾಮನಾಃ ।
ಉದ್ಧವಃ ಪ್ರದದೌ ಸಾಕ್ಷಾನ್ಮಾಲಾಂ ಕಿಜಲ್ಕಿನೀಂ ಶುಭಾಂ ॥ ೧೯ ॥

ಅಕ್ರೂರೋ ದಕ್ಷಿಣಾವರ್ತಂ ಶಂಖಂ ವಿಜಯದಂ ದದೌ ।
ಶ್ರೀಕೃಷ್ಣಂ ಕವಚಂ ಯಂತ್ರಂ ಗರ್ಗಾಚಾರ್ಯೋ ದದೌ ಮುನಿಃ ॥ ೨೦ ॥

ತದೈವ ಹ್ಯಾಗತಃ ಶಕ್ರೋ ಲೋಕಪಾಲೈಃ ಸಕೌತುಕಃ ।
ಆಜಗ್ಮತುರ್ಬ್ರಹ್ಮಶಿವೌ ದೇವರ್ಷಿಗಣಸಂವೃತೌ ॥ ೨೧ ॥

---

೧೮. ಆ ಮೇಲೆ ವೃದ್ಧನಾದ ವಸುದೇವನು ತನ್ನ ಮೊಮ್ಮಗನಿಗೆ ದಿವ್ಯವಾದ ಕಿರೀಟವನ್ನೂ, ಕುಂಡಲಗಳನ್ನೂ, ಮನೋಹರವಾದ ಪೀತಾಂಬರವನ್ನೂ ಶ್ವೇತಚ್ಛತ್ರವನ್ನೂ, ಚಾಮರಗಳನ್ನೂ ಪ್ರೀತಿಯಿಂದಿತ್ತನು.

೧೯. ಅಷ್ಟೇ ಅಲ್ಲದೆ ಶತಚಂದ್ರವೆಂಬ ಆಭರಣವನ್ನೂ ಆ ಉದಾರನಾದ ವಸುದೇವನು ಇತ್ತನು. ಬಳಿಕ ಮಂತ್ರಿಯಾದ ಉದ್ಧವನು ಕೇಸರಗಳಿಂದ ರಮಣೀಯವಾಗಿರುವ ಶುಭವಾಗಿರುವ ಮಾಲಿಕೆಯನ್ನು ಅವನಿಗೆ ಕೊಟ್ಟನು.

೨೦. ಅನಂತರ ಅಕ್ರೂರನು ಬಲಗಡೆಗೆ ಸುಳಿಯಿರುವ (ಬಲಮುರಿ) ಜಯಪ್ರದವಾದ ಶಂಖವನ್ನೂ, ಗುರುವಾದ ಗರ್ಗಮಹರ್ಷಿಯು ಶ್ರೀಕೃಷ್ಣಕವಚವನ್ನೂ, ಶ್ರೀಕೃಷ್ಣಯಂತ್ರವನ್ನೂ ಅವನಿಗೆ ಇತ್ತರು.

೨೧. (ಇಷ್ಟರಲ್ಲಿ) ಆ ಹೊತ್ತಿಗೆ ಸರಿಯಾಗಿ ದೇವಲೋಕಾಧಿಪತಿಯಾದ ಇಂದ್ರನು ಕುತೂಹಲದಿಂದ ಲೋಕಪಾಲಕರೆಲ್ಲರೊಡಗೂಡಿ ಅಲ್ಲಿಗೆ ಬಂದನು. ಅನಂತರದಲ್ಲಿಯೇ ಬ್ರಹ್ಮನೂ, ಶಿವನೂ, ದೇವತೆಗಳಿಂದಲೂ, ಋಷಿಗಳಿಂದಲೂ ಕೂಡಿದವರಾಗಿ ಆ ಸಭೆಗೆ ಬಂದರು.

ಪ್ರದ್ಯುಮ್ನಾಯ ದದೌ ಶೂಲೀ ತ್ರಿಶೂಲಂ ಜ್ವಲನಪ್ರಭಂ ।
ಬ್ರಹ್ಮಾ ದದೌ ಮಹಾರಾಜ ಪದ್ಮರಾಗಂ ಶಿರೋಮಣಿಂ ॥ ೨೨ ॥

ಪಾಶೀ ಪಾಶಂ ಶಕ್ತಿಧರಃ ಶಕ್ತಿಂ ಶತ್ರುವಿಮರ್ದಿನೀಂ ।
ವಾಯುಶ್ಚ ವ್ಯಜನೇ ದಿವ್ಯೇ ಯಮೋ ದಂಡಂ ದದೌ ಪುನಃ ॥ ೨೩ ॥

ರವಿರ್ಗದಾಂ ಮಹಾಗುರ್ವೀಂ ಕುಬೇರೋ ರತ್ನಮಾಲಿಕಾಂ ।
ಚಂದ್ರಕಾಂತಮಣಿಂ ಚಂದ್ರಃ ಪರಿಘಂ ಚ ತನೂನಪಾತ್ ॥ ೨೪ ॥

ಕ್ಷಿತಿಶ್ಚ ಪಾದುಕೇ ಪ್ರಾದಾದ್ದಿವ್ಯೇ ಯೋಗಮಯೇ ಪರೇ ।
ಪ್ರದ್ಯುಮ್ನಾಯ ದದೌ ಕುಂತಂ ಭದ್ರಕಾಳೀ ತರಸ್ವಿನೀ ॥ ೨೫ ॥

ಹೇಮಾಢ್ಯಮುಚ್ಚಶಿಖರಂ ಸಹಸ್ರಹಯಸಂಯುತಂ ।
ವಿಶ್ವಕರ್ಮಕೃತಂ ಸಾಕ್ಷಾದ್ಬ್ರಹ್ಮಾಂಡಾಂತರ್ಬಹಿರ್ಗತಂ ॥ ೨೬ ॥

---

೨೨. ಆಗ ಶಿವನು ಅಗ್ನಿಯಂತೆ ತೇಜಸ್ಸಿನಿಂದ ಮೆರೆಯುತ್ತಿರುವ ತ್ರಿಶೂಲವನ್ನು ಪ್ರದ್ಯುಮ್ನನಿಗೆ ಇತ್ತನು. ಓ ಮಹಾರಾಜ! ಅದೇರೀತಿ ಬ್ರಹ್ಮನೂ ಸಹ ತಲೆಯಲ್ಲಿ ಧರಿಸತಕ್ಕ ಪದ್ಮರಾಗಮಣಿಯನ್ನು ಅವನಿಗೆ ಕೊಟ್ಟನು.

೨೩. ಅನಂತರ ವರುಣನು ಪಾಶಾಯುಧವನ್ನೂ, ಕುಮಾರಸ್ವಾಮಿಯು ಶತ್ರುಸಂಹಾರಕವಾದ ಶಕ್ತಿಯೆಂಬ ಆಯುಧವನ್ನೂ, ವಾಯುವು ದಿವ್ಯವಾದ ಎರಡು ಬೀಸಣಿಗೆಗಳನ್ನೂ, ಯಮನು ದಂಡಾಯುಧವನ್ನೂ ಆ ಪ್ರದ್ಯುಮ್ನನಿಗೆ ಕೊಟ್ಟರು.

೨೪-೨೫. ಅದರಂತೆ ಸೂರ್ಯನು ಭಾರಿಯಾದ ಗದೆಯೊಂದನ್ನೂ, ಕುಬೇರನು ರತ್ನಮಾಲಿಕೆಯನ್ನೂ, ಚಂದ್ರನು ಚಂದ್ರಕಾಂತಮಣಿಯನ್ನೂ, ಅಗ್ನಿಯು ಪರಿಘಾಯುಧವನ್ನೂ, ಭೂಮಿಯು ಯೋಗಬಲದಿಂದ ಕೂಡಿದ ದಿವ್ಯವಾದ ಎರಡು ಪಾದುಕೆಗಳನ್ನೂ, ರಣಚಂಡಿಯಾದ ಭದ್ರಕಾಳಿಯು ಕುಂತಾಯುಧವನ್ನೂ ಆ ಪ್ರದ್ಯುಮ್ನ ಕುಮಾರನಿಗೆ ಇತ್ತರು.

೨೬–೨೮. ಅನಂತರ ಇಂದ್ರನು ಆ ಪ್ರದ್ಯುಮ್ನಕುಮಾರನಿಗೆ ವಿಶ್ವಕರ್ಮನಿಂದ ನಿರ್ಮಿತವಾದ ಎತ್ತರವಾದ ಶಿಖರದಿಂದ ಶೋಭಿಸುತ್ತಿರುವ ಸುವರ್ಣನಿರ್ಮಿತವಾದ ರಥವನ್ನು ಇತ್ತನು. ಆ ರಥಕ್ಕೆ ಒಂದುಸಾವಿರ ಕುದುರೆಗಳು ಕಟ್ಟಲ್ಪಟ್ಟಿದ್ದುವು.

ಸಹಸ್ರಚಕ್ರಸಂಯುಕ್ತಂ ಮನೋವೇಗಂ ಘನಸ್ವನಂ ।
ಮಂಜೀರಕಿಂಕಿಣೀಜಾಲಂ ಘಂಟಾಟಂಕಾರಭೂಷಣಂ ॥ ೨೭ ॥

ರಥಂ ದದೌ ಮಹಾದಿವ್ಯಂ ಸಹಸ್ರಧ್ವಜಶೋಭಿತಂ ।
ಜೈತ್ರಂ ರತ್ನಮಯಂ ಶಕ್ರಃ ಪ್ರದ್ಯುಮ್ನಾಯ ಮಹಾತ್ಮನೇ ॥ ೨೮ ॥

ಶಂಖದುಂದುಭಯೋ ನೇದುಸ್ತಾಲವೀಣಾದಯಸ್ತದಾ ।
ಮೃದಂಗವೇಣುಸನ್ನಾದೈರ್ಜಯಧ್ವನಿಸಮಾಕುಲೈಃ ॥ ೨೯ ॥

ವೇದಘೋಷೈರ್ಲಾಜಪುಷ್ಪೈರ್ಮುಕ್ತಾವರ್ಷಸಮನ್ವಿತೈಃ ।
ಪ್ರದ್ಯುಮ್ನಸ್ಯೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೩೦ ॥

ಇತಿ ಶ್ರೀಮದ್ಗರ್ಗಸಂಹಿಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ಪ್ರದ್ಯುಮ್ನವಿಜಯಾಭಿಷೇಕೋ
ನಾಮ ದ್ವಿತೀಯೋಽಧ್ಯಾಯಃ

ಅದು ಬ್ರಹ್ಮಾಂಡದ ಒಳಗೂ ಹೊರಗೂ ಹೋಗಿ ಬರಬಲ್ಲ ಸಾಮರ್ಥ್ಯದಿಂದ ಕೂಡಿರುವಂತಹುದು. ಅದಕ್ಕೆ ಸಾವಿರ ಚಕ್ರಗಳು ಇದ್ದುವು. ಅದರ ವೇಗವು ಮನೋವೇಗಕ್ಕೆ ಸರಿಸಮವಾಗಿದ್ದಿತು. ಅದರ ಧ್ವನಿಯು ಮೇಘದ ಮೊಳಗನ್ನು ಹೋಲುತ್ತಿತ್ತು. ಆ ತೇರಿನ ಸುತ್ತಲೂ ಕಾಲ್ಗಡಗಗಳಲ್ಲಿರುವಷ್ಟು ಚಿಕ್ಕದಾದ ಕಿರುಗಂಟೆಗಳು ಕಟ್ಟಲ್ಪಟ್ಟು ಅವುಗಳ ಟಂಕಾರವು ಅದಕ್ಕೆ ಸೊಗಸನ್ನುಂಟುಮಾಡಿತ್ತು. ಇಂತು ಅದ್ಭುತವಾಗಿ ರತ್ನಗಳಿಂದ ಕೆತ್ತಲ್ಪಟ್ಟು ಸಾವಿರ ಧ್ವಜಗಳಿಂದ ಕಂಗೊಳಿಸುತ್ತಿರುವ ಆ ವಿಜಯ ಯಾತ್ರೋಚಿತವಾದ ರಥವನ್ನು ಇಂದ್ರನು ಮಹಾತ್ಮನಾದ ಪ್ರದ್ಯುಮ್ನನಿಗೆ ಇತ್ತನು.

೨೯–೩೦. ಆಗ ಶಂಖಗಳೂ, ನಗಾರಿಗಳೂ, ತಾಳಗಳೂ, ವೀಣೆ ಮೊದಲಾದ ವಾದ್ಯಗಳೂ ಮೊಳಗಿದುವು. ಆಗ ದೇವತೆಗಳು ಇಂಪಾದ ಮೃದಂಗ ವೇಣುಗಳ ಧ್ವನಿಗಳಿಂದಲೂ, ವೇದಘೋಷಗಳಿಂದಲೂ, ಜಯಶಬ್ದಗಳಿಂದಲೂ ಆ ಪ್ರದ್ಯುಮ್ನ ಕುಮಾರನ ಮೇಲೆ ಅರಳು ಮತ್ತು ಮುತ್ತುಗಳಿಂದೊಡಗೂಡಿದ ಪುಷ್ಪವರ್ಷವನ್ನು ಸುರಿಸಿದರು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದಲ್ಲಿ ನಾರದಬಹುಲಾಶ್ವ
ಸಂವಾದವಲ್ಲಿಯ ಪ್ರದ್ಯುಮ್ನ ವಿಜಯಾಭಿಷೇಕವೆಂಬ
ಎರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ತೃತೀಯೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ನತ್ವಾ ಹರಿಂ ಕಾರ್ಷ್ಣಿರುಗ್ರಸೇನಂ ಬಲಂ ಗುರುಂ ।
ನೀತ್ವಾಜ್ಞಾಂ ರಥಮಾರುಹ್ಯ ಕುಶಸ್ಥಲ್ಯಾ ವಿನಿರ್ಯಯೌ ॥ ೧ ॥

ತಥಾ ತಮನುಗಾಃ ಸರ್ವೇ ಯಾದವಾ ಉದ್ಧವಾದಯಃ ।
ಭೋಜವೃಷ್ಣ್ಯಂಧಕಮಧುಶೂರಸೇನದಶಾರ್ಹಕಾಃ ॥ ೨ ॥

ತಥಾ ಸ್ವಭ್ರಾತರಃ ಸರ್ವೇ ಗದಾದ್ಯಾಃ ಕೃಷ್ಣನೋದಿತಾಃ ।
ಸಪುತ್ರಾಃ ಸಬಲಾಃ ಸರ್ವೇ ಸಾಂಬಾದ್ಯಾಶ್ಚ ಮಹಾರಥಾಃ ॥ ೩ ॥

ಮೂರನೆಯ ಅಧ್ಯಾಯವು

೧. ಎಲೈ ಮಿಥಿಲೇಶ್ವರನೇ ! ಕೇಳು :—ಬಳಿಕ ಆ ಪ್ರದ್ಯುಮ್ನಕುಮಾರನು ಶ್ರೀಕೃಷ್ಣನನ್ನೂ, ಉಗ್ರಸೇನನನ್ನೂ, ಬಲರಾಮನನ್ನೂ, ಗುರುವಾದ ಗರ್ಗಾಚಾರ್ಯನನ್ನೂ ನಮಸ್ಕರಿಸಿ ಅವರ ಅಪ್ಪಣೆಯನ್ನು ಪಡೆದುಕೊಂಡು ತೇರನ್ನೇರಿ ಕುಳಿತು ಆ ಕುಶಸ್ಥಲ (ನೀರಿನಲ್ಲಿರುವ ಊರು—ದ್ವಾರಕೆ) ಯಿಂದ ಹೊರಟನು.

೨. ಆತನನ್ನು ಉದ್ಧವನೇ ಮೊದಲಾದ ಭೋಜ, ವೃಷ್ಣಿ, ಅಂಧಕ, ಮಧು, ಶೂರಸೇನ, ದಶಾರ್ಹ, ಎಂಬ ಒಳಪ್ರದೇಶಗಳನ್ನೊಳಗೊಂಡ ಸಕಲ ಯಾದವರೂ ಹಿಂಬಾಲಿಸಿ ಹೊರಟರು.

೩. ಅದೇ ರೀತಿ ಕೃಷ್ಣನ ಅಪ್ಪಣೆಯನ್ನು ಪಡೆದುಕೊಂಡು ಪ್ರದ್ಯುಮ್ನನ ಸಹೋದರರಾದ ಗದ, ಸಾಂಬ ಮೊದಲಾದ ಮಹಾರಥರೆಲ್ಲರೂ ತಮ್ಮ ತಮ್ಮ ಮಕ್ಕಳೊಂದಿಗೂ ಸೇನೆಗಳೊಡನೆಯೂ ಕೂಡಿಕೊಂಡು ಆ ಪ್ರದ್ಯುಮ್ನನನ್ನು ಹಿಂಬಾಲಿಸಿದರು.

ಕಿರೀಟಿನಃ ಕುಂಡಲಿನೋ ಲೋಹಕಂಚುಕಮಂಡಿತಾಃ ।
ಚತುರಂಗಬಲೋಪೇತಾಃ ಕೋಟಿಶಸ್ತೇ ವಿನಿರ್ಯಯುಃ ॥ ೪ ॥

ಕಲಾಪಿಹಂಸಗರುಡಮೀನತಾಲಧ್ವಜೈ ರಥೈಃ ।
ಸೂರ್ಯಮಂಡಲಸಂಕಾಶೈಶ್ಚಂಚಲಾಶ್ವನಿಯೋಜಿತೈಃ ॥ ೫ ॥

ಹೇಮಕುಂಭೈಃ ಸಶಿಖರೈರ್ಮುಕ್ತಾತೋರಣರಾಜಿತೈಃ ।
ವಿಡಂಬಯದ್ಭಿರ್ನಿತರಾಂ ವಾಯುವೇಗಮತಃಪರಂ ॥ ೬ ॥

ಚಾಮರಾಂದೋಲಿತೈರ್ದಿವ್ಯೈರ್ವೀರಮಂಡಲಮಂಡಿತೈಃ ।
ಸೌವರ್ಣೈರ್ದೇವಧಿಷ್ಣ್ಯಾಭೈ ರೇಜುರ್ವೀರಾ ಮನೋಹರಾಃ ॥ ೭ ॥

ಮದಚ್ಯುತಾಶ್ಚಿತ್ರಮುಖಾ ಹೇಮಜಾಲಸಮನ್ವಿತಾಃ ।
ಮಹೋದ್ಭಟಾ ಗಜಾ ಉಚ್ಚಾ ರಣದ್ಘಂಟಾರುಣಾಂಬರಾಃ ॥ ೮ ॥

---

೪. ಆ ಪ್ರದ್ಯುಮ್ನ ಸಹೋದರರು ಕಿರೀಟ ಕುಂಡಲಗಳನ್ನು ಧರಿಸಿ, ಉಕ್ಕಿನ ಕವಚಗಳನ್ನು ತೊಟ್ಟು, ಚತುರಂಗಸೈನ್ಯಸಮೇತರಾಗಿ ಕೋಟಿಗಟ್ಟಲೆ ಹೊರಟರು.

೫–೭. ಆ ವೀರರು ಹತ್ತಿ ಕುಳಿತಿದ್ದ ತೇರುಗಳು ನವಿಲು, ಹಂಸ, ಗರುಡ, ಮೀನು, ತಾಲವೃಕ್ಷ ಮೊದಲಾದ ಧ್ವಜಗಳಿಂದ ಮೆರೆಯುತ್ತಿದ್ದುವು. ಅವೊಂದೊಂದೂ ಕಾಂತಿಯಿಂದ ಸೂರ್ಯಮಂಡಲವನ್ನು ಹೋಲುತ್ತಿದ್ದುವು. ಆ ರಥಗಳು ನಿಂತಲ್ಲಿನಿಲ್ಲದೆ ಮುನ್ನುಗ್ಗಬೇಕೆಂದಿರುವ ಕುದುರೆಗಳಿಂದ ಕಟ್ಟಲ್ಪಟ್ಟು, ಚಿನ್ನದ ಗುಂಬಗಳಿಂದಲೂ, (ಕಲಶ) ಎತ್ತರವಾದ ಗೋಪುರಗಳಿಂದಲೂ, ತೋರಣದಂತೆ ಕಟ್ಟಿದ್ದ ಮುತ್ತಿನ ಜಾಲರಿಗಳಿಂದಲೂ ಕಂಗೊಳಿಸುತ್ತಾ ವಾಯುವಿನ ವೇಗವನ್ನು ಅಣಕಿಸುತ್ತಿರುವುವೋ ಎನ್ನುವಂತಿದ್ದುವು. ಹೀಗೆ ವೀರಾಧಿವೀರರಿಂದ ಹತ್ತಿ ಕುಳಿತುಕೊಳ್ಳಲ್ಪಟ್ಟು ತೂಗುತ್ತಿರುವ ಚಾಮರಗಳಿಂದ ಉಭಯಪಾರ್ಶ್ವಗಳಲ್ಲೂ ಕಂಗೊಳಿಸಲ್ಪಡುತ್ತಾ ಇರುವ ಆ ಸುವರ್ಣಮಯವಾದ ರಥಗಳು ದೇವಾಲಯಗಳನ್ನು ಹೋಲುತ್ತಾ ಮೆರೆಯುತ್ತಿದ್ದುವು.

೮–೯. ಓ ರಾಜೇಂದ್ರ! ಆ ಯಾದವ ಸೇನೆಯಲ್ಲಿ ಹೇರಳವಾಗಿ ಆನೆಗಳಿದ್ದುವು. ಅವೆಲ್ಲವೂ ಸರ್ವದಾ ಮತ್ತೇರಿ ಮದೋದಕವನ್ನು ಸ್ರವಿಸುವಂತಹುವು. ಅವುಗಳ ಮುಖಗಳೆಲ್ಲವೂ ಚಿನ್ನದ ಎಳೆಗಳಿಂದ ಮಾಡಲ್ಪಟ್ಟ ಜಾಲರಿಗಳಿಂದ ಅಲಂಕೃತವಾಗಿರುವುವು. ಆ ಆನೆಗಳು ಯಾರಿಗೂ ಸಗ್ಗದಂತಹವು. ಮತ್ತು ಅವುಗಳು ಬಹು ಎತ್ತರ

ಗಿರೀಂದ್ರಶಿಖರಾ ಭದ್ರಾ ದ್ವಿಪೇಂದ್ರಾಸ್ದಿಗ್ವಿಭಾವಿತಾಃ ।
ವಿಡಂಬಯಂತೋ ದೃಶ್ಯಂತೇ ರಾಜಸೈನ್ಯೇ ದ್ವಿಪಾ ನೃಪ ॥ ೯ ॥

ಕೇಚಿದ್ಭದ್ರಾಸ್ತು ಕಥಿತಾಃ ಕೇಚಿದ್ಭದ್ರಾ ಮೃಗಾಃ ಪರೇ ।
ವಿಂಧ್ಯಾಚಲಭವಾಃ ಕೇಚಿತ್ಕೇಚಿತ್ಕಾಶ್ಮೀರಸಂಭವಾಃ ॥ ೧೦ ॥

ಮಲಯಪ್ರಭವಾಃ ಕೇಚಿದ್ಧಿಮಾದ್ರಿಪ್ರಭವಾಃ ಪರೇ ।
ಮೌರಂಗಪ್ರಭವಾಃ ಕೇಚಿತ್ಕೈಲಾಸವನಸಂಭವಾಃ ॥ ೧೧ ॥

ಐರಾವತಕುಲೇಭಾಶ್ಚ ಚತುರ್ದಂತಾಃ ಕಲಾಪಿನಃ ।
ತ್ರಿಸೃಶುಂಡಾ ಊರ್ಧ್ವಭಾಗ್ಯಾ ಗಚ್ಛಂತಿ ಭುವಿ ಚಾಂಬರೇ ॥ ೧೨ ॥

ವಾದ ನಿಲುವಿನಿಂದಲೂ, ಸರ್ವದಾ ಝಣಝಣಗುಟ್ಟುತ್ತಿರುವ ಗಂಟೆಗಳಿಂದಲೂ, ತಮ್ಮ ಮೈಮೇಲೆ ಹೊದಿಸಿರುವ ಕೆಂಬಣ್ಣದ ಹೊದಿಕೆಗಳಿಂದಲೂ ಮೆರೆಯುತ್ತಿರುವುವು. ಈ ರೀತಿ ತಮ್ಮ ಆಕಾರದಿಂದ ಪರ್ವತ ಶಿಖರಗಳನ್ನು ಹೋಲುತ್ತಿರುವ ಆ ಆನೆಗಳು ಅಷ್ಟದಿಗ್ಗಜಗಳನ್ನೂ ಅಣಕಿಸುತ್ತಿರುವಂತೆ ತೋರುತ್ತಿರುವುವು.

೧೦. ಅವುಗಳಲ್ಲಿ ಕೆಲವು ಭದ್ರವೆಂಬ ಜಾತಿಗೆ ಸೇರಿದುವು. ಕೆಲವು ಭದ್ರ ಮೃಗವೆಂಬ ಜಾತಿಗೆ ಸೇರಿದುವು. ಕೆಲವು ವಿಂಧ್ಯಪರ್ವತದಲ್ಲಿ ಹುಟ್ಟಿದುವು. ಕೆಲವು ಕಾಶ್ಮೀರದೇಶದವು.

೧೧. ಕೆಲವು ಆನೆಗಳು ಮಲಯಪರ್ವತದಲ್ಲಿ ಹುಟ್ಟಿದುವು. ಮತ್ತೆ ಕೆಲವು ಹಿಮವತ್ಪರ್ವತದಲ್ಲಿ ಜನಿಸಿದುವು. ಇನ್ನು ಕೆಲವು ತುರಂಗವೆಂಬಲ್ಲಿ ಹುಟ್ಟಿದುವು. ಬೇರೆ ಕೆಲವು ಕೈಲಾಸಪರ್ವತದ ಬಳಿ ಇರುವ ಕಾಡಿನಲ್ಲಿ ಜನಿಸಿದುವು.

೧೨. ಕೆಲವು ಆನೆಗಳು ಐರಾವತದ ಕುಲದಲ್ಲಿ ಜನಿಸಿದಂತಹುವು. ಅವುಗಳಿಗೆ ನಾಲ್ಕು ಕೊಂಬುಗಳು, ಮೂರು ಸೊಂಡಲುಗಳು ಅವೆಲ್ಲವೂ ಆಭರಣಗಳಿಂದ ಅಲಂಕರಿಸಲ್ಪಟ್ಟಿದ್ದುವು. ಆ ಆನೆಗಳು ಭೂಮಿಯಲ್ಲೂ, ಅಂತರಿಕ್ಷದಲ್ಲೂ ಹೋಗಿ ಬರಬಲ್ಲ ಸಾಮರ್ಥ್ಯವನ್ನೊಳಗೊಂಡಿದ್ದುವು.

ಧ್ವಜಾಯುಕ್ತಾಃ ಕೋಟಿಗಜಾಃ ಕೋಟಿದುಂದುಭಿಸಂಯುತಾಃ ।
ಕೋಟಿಸೈನ್ಯಾ ಮಹಾಮಾತ್ಯೈ ರತ್ನಮಂಡಲಮಂಡಿತಾಃ ॥ ೧೩ ॥

ಗರ್ಜಯಂತೋ ಘನಶ್ಯಾಮಾ ನೀಡಾದುಂಬರರಾಜಿತಾಃ ।
ಇತಸ್ತತೋ ವಿರೇಜುಸ್ತೇ ಬಲೇಬ್ಧೌ ಮಕರಾ ಇವ ॥ ೧೪ ॥

ಕರೈರ್ಗುಲ್ಮಾನ್ಸಮುತ್ಪಾಟ್ಯ ಕ್ಷೇಪಯಂತೋಽರ್ಕಮಂಡಲಂ ।
ಕಂಪಯಂತೋ ಭುವಂ ಪಾದೈರ್ಮದೈರಾದ್ರೀಕೃತಾಚಲಾಃ ॥ ೧೫ ॥

ದುರ್ಗಾದ್ರಿಗಂಡಶೈಲಾದೀನ್ಪಾತಯಂತಃ ಶಿರಃಸ್ಥಲೈಃ ।
ಖಂಡಯಂತಶ್ಚ ಶತ್ರೂಣಾಂ ಬಲಮೇತಾದೃಶಾ ಗಜಾಃ ॥ ೧೬ ॥

---

೧೩. ಆ ಆನೆಗಳು ರತ್ನಖಚಿತವಾದ ಆಭರಣಗಳಿಂದ ಅಲಂಕರಿಸಲ್ಪಟ್ಟು ಭಾರಿಭಾರಿ ನಗಾರಿಗಳನ್ನು ಹೊತ್ತು ನಾನಾವಿಧವಾದ ಧ್ವಜಗಳನ್ನು ಧರಿಸಿ, ಅತ್ಯುಭ್ರಾಯ ಸ್ಥಿತಿಯಲ್ಲಿ ಮೆರೆಯುತ್ತಾ ತಮ್ಮ ತಮ್ಮ ಮಾವುತರಿಂದೊಡಗೂಡಿ ಕೋಟಿಗಟ್ಟಲೆ ಬರುತ್ತಿದ್ದುವು.

೧೪. ಮತ್ತು ಆ ಆನೆಗಳು ಕಾರ್ಮೋಡದಂತೆ ಕಪ್ಪಾಗಿ ಘೀಂಕಾರಗಳನ್ನು ಮಾಡುತ್ತಾ, ಆ ಸೈನ್ಯದಲ್ಲಿ ಇತ್ತಲಿಂದತ್ತ ಓಡಾಡುತ್ತಿದ್ದರೆ ಸಾಗರದಲ್ಲಿರುವ ಮೊಸಳೆಗಳಂತೆ ತೋರುತ್ತಿದ್ದುವು.

೧೫ ಇಷ್ಟೇ ಅಲ್ಲ. ಆ ಆನೆಗಳು ತಮ್ಮ ಸೊಂಡಲುಗಳಿಂದ ಸೇನೆಯ ಗುಲ್ಮಸ್ಥಳಗಳನ್ನು ಲೀಲಾಜಾಲವಾಗಿ ಕಿತ್ತೆಸೆಯಬಲ್ಲುವು. ಸೂರ್ಯಮಂಡಲವನ್ನು ಕಿತ್ತು ದೂರವಾಗಿ ಬಿಸಾಡಿಬರಬಲ್ಲುವು. ಮತ್ತು ತಮ್ಮ ಪದಾಘಾತದಿಂದ ಭೂಮಿಯನ್ನು ನಡುಗಿಸಬಲ್ಲುವು. ಸ್ರವಿಸುತ್ತಿರುವ ಮದೋದಕದಿಂದ ನೆಲವನ್ನು ತೋಯಿಸಬಲ್ಲುವು.

೧೬. ತಮ್ಮ ತಲೆಯ ಮುಂಭಾಗದ ಗುದ್ದಾಟದಿಂದ ಎಂತಹ ದುರ್ಗವನ್ನಾಗಲಿ, ಕೋಡುಗಲ್ಲನ್ನಾಗಲಿ, ಪರ್ವತವನ್ನಾಗಲಿ ಕೆಡವಬಲ್ಲ ಶಕ್ತಿಯುಳ್ಳವು. ಶತ್ರುಗಳ ಸೇನೆಯನ್ನು ಹೊಕ್ಕು, ಅದನ್ನು ಚೂರುಚೂರು ಮಾಡುವಷ್ಟು ಸಾಮರ್ಥ್ಯವುಳ್ಳವು. ಇಂತಹ ಆನೆಗಳೇ ಆ ಸೈನ್ಯದಲ್ಲಿ ಹೇರಳವಾಗಿದ್ದುವು.

ತುರಂಗಾ ನಿರ್ಗತಾ ರಾಜನ್ಕೇಚಿನ್ಮಾತ್ಸ್ಯಾಃ ಕಲಿಂದಜಾಃ ।
ಔಶೀನರಾಃ ಕೌಶಲಾಶ್ಚ ವೈದರ್ಭಾಃ ಕುರುಜಾಂಗಲಾಃ ॥ ೧೭ ॥

ಕಾಂಬೋಜಜಾಃ ಸೃಂಜಯಜಾಃ ಕೈಕೇಯಾಃ ಕುಂತಿಸಂಭವಾಃ ।
ದಾರದಾಃ ಕೇರಲಾ ಅಂಗಾ ವಾಂಗಾ ವಿಕಟಸಂಭವಾಃ ॥ ೧೮ ॥

ಕೌಂಕಣಾಃ ಕೋಟಕಾಃ ಕೇಚಿತ್ಕರ್ಣಾಟಾ ಗೌರ್ಜರಾ ಹಯಾಃ ।
ಸೌವೀರಾಃ ಸೈಂಧವಾಃ ಕೇಚಿತ್ಪಾಂಚಾಲಾ ಅರ್ಬುದಾಃ ಪರೇ ॥ ೧೯ ॥

ಕಾಚ್ಛಾಶ್ಚ ಕೇಚಿದಾನರ್ತಾ ಗಾಂಧಾರಾ ಮಾಲವಾದಯಃ ।
ಮಹಾರಾಷ್ಟ್ರಭವಾಃ ಕೇಚಿತ್ತೈಲಂಗಾ ಜಲಸಂಭವಾಃ ॥ ೨೦ ॥

ಪರಿಪೂರ್ಣತಮಸ್ಯಾಪಿ ಶ್ರೀಕೃಷ್ಣಸ್ಯ ಮಹಾತ್ಮನಃ ।
ವಾಜಿಶಾಲಾಸು ವರ್ತಂತೇ ತೇಽಪಿ ಸರ್ವೇ ವಿನಿರ್ಗತಾಃ ॥ ೨೧ ॥

---

೧೭. ಓ ರಾಜೇಂದ್ರ! ಇನ್ನು ಆ ಸೈನ್ಯದಲ್ಲಿ ಹೊರಟುಬಂದ ಕುದುರೆಗಳನ್ನು ವಿವರಿಸುವೆನು. ಕೆಲವು ಮತ್ಸ್ಯದೇಶದುವು. ಕೆಲವು ಕಳಿಂಗದೇಶದುವು. ಮತ್ತೆ ಕೆಲವು ಉಶೀನರ, ಕೋಸಲ, ವಿದರ್ಭ, ಕುರುಜಾಂಗಲ ಎಂಬ ಬೇರೆ ಬೇರೆ ದೇಶಗಳಲ್ಲಿ ಹುಟ್ಟಿದುವು.

೧೮–೨೦. ಮತ್ತು ಕೆಲಕೆಲವು ಕುದುರೆಗಳು ಕಾಂಬೋಜ, ಸೃಂಜಯ, ಕೇಕಯ, ಕುಂತಿದೇಶ, ದರದ, ಕೇರಲ, ಅಂಗ, ವಂಗ, ವಿಕಟ, ಕೊಂಕಣ, ಕೋಟಕ, ಕರ್ಣಾಟಕ, ಗುರ್ಜರ, ಸೌವೀರ, ಸಿಂಧು, ಪಾಂಚಾಲ, ಅರ್ಬುದ ಎಂಬ ದೇಶಗಳಲ್ಲಿ ಹುಟ್ಟಿದುವು. ಅಲ್ಲದೆ ಕೆಲವು ಕುದುರೆಗಳು ಕಚ್ಛದೇಶದಲ್ಲಿಯೂ, ಮತ್ತೆ ಕೆಲವು ಆನರ್ತದೇಶದಲ್ಲಿಯೂ, ಇನ್ನು ಕೆಲವು ಗಾಂಧಾರ ಮಾಲವದೇಶಗಳಲ್ಲಿಯೂ, ಬೇರೆ ಕೆಲವು ಮಹಾರಾಷ್ಟ್ರದೇಶದಲ್ಲಿಯೂ, ಮತ್ತೂ ಕೆಲವು ತೆಲಗುದೇಶದಲ್ಲೂ, ಜಲಪ್ರದೇಶದಲ್ಲೂ ಹುಟ್ಟಿದಂತಹವು.

೨೧. ಓ ರಾಜೇಂದ್ರ! ಈ ರೀತಿ ಆ ಸೇನೆಯಲ್ಲಿ ಹೊರಟುಬಂದ ಆ ಕುದುರೆಗಳೆಲ್ಲವೂ ತಾನು ಸ್ವಯಂಪರಿಪೂರ್ಣನಾಗಿದ್ದರೂ ಮಾನವಲೀಲೆಯನ್ನು ತೋರ್ಪಡಿಸುತ್ತಿರುವ ಮಹಾತ್ಮನಾದ ಆ ಶ್ರೀಕೃಷ್ಣನ ಕುದುರೆಯ ಲಾಯಗಳಲ್ಲಿ ಸಂರಕ್ಷಿಸಲ್ಪಡುತ್ತಿರುವುವು.

ಶ್ವೇತದ್ವೀಪಾಚ್ಚ ವೈಕುಂಠಾತ್ತಥಾ ಜಿತಪದಾ ನೃಪ ।
ರಮಾ ವೈಕುಂಠಲೋಕಾಚ್ಚ ಪ್ರಾಪ್ತಾ ಯೇ ತೇಽಪಿ ನಿರ್ಗತಾಃ ॥ ೨೨ ॥

ಹೇಮಹಾರಸಮಾಯುಕ್ತಾ ಮುಕ್ತಾಮಾಲಾ ಮನೋಹರಾಃ ।
ಶಿಖಾಮಣಿಮಹಾರಶ್ಮಿಸೇವಿತಾಃ ಸುಪರಿಚ್ಛದಾಃ ॥ ೨೩ ॥

ಚಾಮರೈರ್ಮಂಡಿತಾಃ ಪುಚ್ಛಮುಖಪಾದಸ್ಫುರತ್ಪ್ರಭಾಃ ।
ಯಾದವಾನಾಂ ಮಹಾಸೈನ್ಯೇ ದೃಶ್ಯಂತೇ ಚೇದೃಶಾ ಹಯಾಃ ॥ ೨೪ ॥

ವಾಯುವೇಗಾ ಮನೋವೇಗಾ ನ ಸ್ಪೃಶಂತಃ ಪದೈರ್ಭುವಂ ।
ಅಪಕ್ವಸೂತ್ರೇಷ್ವತಿಗಾ ಬುದ್ಬುದೇಷ್ವಪಿ ಮೈಥಿಲ ॥ ೨೫ ॥

---

೨೨. ಹಿಂದೆ ಹೇಳಿದ ಭೂಪ್ರದೇಶಗಳಲ್ಲಿ ಹುಟ್ಟಿದ ಈ ಕುದುರೆಗಳಲ್ಲದೆ ಶ್ವೇತದ್ವೀಪದಿಂದಲೂ, ಮತ್ತಾರಿಗೂ ಜಯಿಸಲಾಗದಂತಹ ಸಾಧನವಾದ ಶ್ರೀವೈಕುಂಠ ದಿಂದಲೂ, ಲಕ್ಷ್ಮಿಯ ವಾಸಸ್ಥಳದಿಂದಲೂ, ಕೃಷ್ಣನ ಕುದುರೆಯ ಲಾಯಕ್ಕೆ ಬಂದಿದ್ದ ಕುದುರೆಗಳೂ ಸಹ ಆ ಸೇನೆಯೊಡನೆ ಹೊರಟವು.

೨೩-೨೪. ಕುದುರೆಗಳು ಚಿನ್ನದ ಸರಗಳಿಂದಲೂ, ಮುತ್ತಿನ ಹಾರಗಳಿಂದಲೂ, ಉಜ್ವಲವಾದ ಶಿಖಾಮಣಿಗಳಿಂದಲೂ, ಇನ್ನೂ ಇತರ ಆಭರಣಗಳಿಂದಲೂ ಅಲಂಕರಿಸಲ್ಪಟ್ಟು ನೋಡುವವರ ಮನಸ್ಸನ್ನು ಸೆಳೆಯುತ್ತಿದ್ದುವು. ಮತ್ತು ಅಕ್ಕಪಕ್ಕ ಗಳಲ್ಲಿ ಚಾಮರಗಳಿಂದ ಅಲಂಕೃತವಾದ ಆ ಕುದುರೆಗಳು ಪುಚ್ಛಭಾಗದಲ್ಲಿಯೂ, ಮುಖಪ್ರದೇಶದಲ್ಲಿಯೂ, ಪಾದಗಳಲ್ಲಿಯೂ ವಿಶೇಷವಾದ ಕಾಂತಿಯನ್ನು ಪಡೆದಿದ್ದವು. ಇಂಥ ಕುದುರೆಗಳು ಆ ಯಾದವರ ಮಹಾಸೇನೆಯಲ್ಲಿ ಎಲ್ಲೆಲ್ಲೂ ತೋರಿಬರುತ್ತಿದ್ದುವು.

೨೫-೨೭. ಆ ಕುದುರೆಗಳು ಒಂದೊಂದೂ ವೇಗದಲ್ಲಿ ವಾಯುವನ್ನೂ, ಮನಸ್ಸನ್ನೂ ಹೋಲುವಂತಹವು. ನೆಲವನ್ನು ಸಹ ಮುಟ್ಟದಂತೆ ಹೋಗಬಲ್ಲ ಸಾಮರ್ಥ್ಯವುಳ್ಳವು. ಓ ಮಿಥಿಲೇಶ್ವರ! ಆ ಕುದುರೆಗಳು ಗುಳ್ಳೆಗಳೇಳುತ್ತಿರುವಂತಹ ನೀರು ನಿಂತ ಜೌಗುಪ್ರದೇಶಗಳಲ್ಲಿಯೂ, ಜೇಡನ ಬಲೆಯಂತೆ ಹೆಣೆದಿರತಕ್ಕ ಬಲೆಗಳನ್ನು

ವ್ರಜಂತಃ ಪಾರದವನುಜಾಲೇಷೂರ್ಣಾ ಭವೇಷು ಚ ।
ದೃಶ್ಯಂತ್ಯೇಪಿ ನಿರಾಧಾರಾಃ ಸ್ಫಾರಾ ವಾರಿಷು ಮೈಥಿಲ ॥ ೨೬ ॥

ಗಂಡಶೈಲನದೀದುರ್ಗಗರ್ತಪ್ರಾಸಾದಸಂಚಯಾನ್ ।
ವಿಲಂಘಯಂತಃ ಸತತಂ ಚಂಚಲಾಸ್ತೇ ತುರಂಗಮಾಃ ॥ ೨೭ ॥

ಮಾಯೂರೀಂ ತೈತ್ತಿರೀಂ ಕ್ರೌಂಚೀಂ ಹಂಸೀಂ ಯೇ ಖಾಂಜನೀಂ ಗತಿಂ ।
ಕುರ್ವಂತೋ ಭುವಿ ನೃತ್ಯಂತೋ ಮೈಥಿಲೇಂದ್ರ ಇತಸ್ತತಃ ॥ ೨೮ ॥

ಕೇಚಿತ್ಸಪಕ್ಷಾ ದಿವ್ಯಾಂಗಾಃ ಶ್ಯಾಮಕರ್ಣಾ ಮನೋಹರಾಃ ।
ಪೀತಪುಚ್ಛಾಶ್ಚಂದ್ರವರ್ಣಾ ವಾಜಿಶಾಲಾವಿನಿರ್ಗತಾಃ ॥ ೨೯ ॥

ಹಾಸಿದ ಜಾಗಗಳಲ್ಲಿಯೂ ಸ್ವಲ್ಪವೂ ತಡವರಿಸದೆ ಅವನ್ನು ದಾಟಿಕೊಂಡು ಪಾದರಸದಂತೆ ಹೋಗಬಲ್ಲವು. ಮತ್ತು ಕಾಲುಗಳೂರಲು ಆಸರೆಯೇ ಇಲ್ಲದೆ ಅಂತರಿಕ್ಷ ಪ್ರದೇಶದಲ್ಲಿಯೂ, ನೀರಿನಲ್ಲಿಯೂ ನಿರಾತಂಕವಾಗಿ ಸಾಗಬಲ್ಲುವು. ಹೆಚ್ಚೇನು! ಸದಾ ಚಂಚಲವಾದ ಆ ಕುದುರೆಗಳು ಪರ್ವತಗಳ ಭಾರಿ ಭಾರಿ ಬಂಡೆಗಳನ್ನಾಗಲಿ, ನದಿಗಳನ್ನಾಗಲಿ, ಕಡಿದಾದ ಎತ್ತರ ಪ್ರದೇಶಗಳನ್ನಾಗಲಿ, ಹಳ್ಳಕೊಳ್ಳಗಳನ್ನಾಗಲಿ, ಉನ್ನತವಾದ ಉಪ್ಪರಿಗೆಗಳನ್ನಾಗಲಿ ಒಂದೇ ನೆಗೆತದಿಂದ ಹಾರಿ ಆಚೆಕಡೆ ದಾಟಬಿಡ ಬಲ್ಲುವು.

೨೮. ರಾಜೇಂದ್ರ! ಆ ಕುದುರೆಗಳು ನವಿಲಿನಂತೆಯೂ, ತಿತ್ತಿರಿಪಕ್ಷಿಯಂತೆಯೂ, ಹಂಸದಂತೆಯೂ, ಖಂಜರೀಟದಂತೆಯೂ ನಡಿಗೆಯನ್ನು ಅವಲಂಬಿಸಿ ನೆಲದ ಮೇಲೆ ಕುಣಿದು ಕುಣಿದುಕೊಂಡು ನಡೆಯಬಲ್ಲುವು.

೨೯. ಈ ರೀತಿ ಕೃಷ್ಣನ ಕುದುರೆ ಲಾಯದಿಂದ ಬಂದಿದ್ದ ಆ ಕುದುರೆಗಳಲ್ಲಿ ಕೆಲವು ರೆಕ್ಕೆಗಳಿಂದ ಕೂಡಿ, ದಿವ್ಯವಾದ ಅಂಗಗಳಿಂದ ಮೆರೆಯುತ್ತ, ಕಿವಿಯೆಲ್ಲ ಕಪ್ಪಾಗಿಯೂ, ಬಾಲದಕಡೆ ಹಳದಿಯಾಗಿಯೂ, ಉಳಿದ ಪ್ರದೇಶದಲ್ಲೆಲ್ಲಾ ಚಂದ್ರನಂತೆ ಶುಭ್ರವಾದ ಕಾಂತಿಯುಳ್ಳವುಗಳಾಗಿಯೂ ಆಗಿ, ಸಕಲರ ಮನಸ್ಸನ್ನೂ ಆಕರ್ಷಿಸುತ್ತಿದ್ದುವು.

ಉಚ್ಚೈಃಶ್ರವಃಕುಲೇ ಜಾತಾಃ ಸೂರ್ಯವಾಜಿಭವಾಃ ಪರೇ |
ಅಶ್ವಿನೀಸುತವಿದ್ಯಾಢ್ಯಾ ವರುಣೇನ ಪ್ರಯೋಜಿತಾಃ || ೩೦ ||

ಕೇಚಿನ್ಮಂದಾರಭಾಃ ಕೇಚಿಚ್ಚಿತ್ರವರ್ಣಾ ಮನೋಹರಾಃ |
ಅಶ್ವಿನೀಪುಷ್ಪಸಂಕಾಶಾಃ ಸ್ವರ್ಣಾಭಾ ಹರಿತಪ್ರಭಾಃ || ೩೧ ||

ಪದ್ಮರಾಗಪ್ರಭಾಃ ಕೇಚಿತ್ಸರ್ವಲಕ್ಷಣಲಕ್ಷಿತಾಃ |
ಕೋಟಿಶಃ ಕೋಟಿಶೋ ರಾಜನ್ನನ್ಯೇಽಪಿ ನಿರ್ಗತಾ ಹಯಾಃ || ೩೨ ||

ಧನುರ್ಭೃತೋ ಭಟಾಃ ಸೈನ್ಯೇ ಸಂಗ್ರಾಮೇ ಲಬ್ಧಕೀರ್ತಯಃ |
ಶಕ್ತಿತ್ರಿಶೂಲಾಸಿಗದಾವರ್ಮಪಾಶಧರಾಃ ಪರೇ || ೩೩ ||

---

೩೦. ಮತ್ತು ಅವುಗಳಲ್ಲಿ ಕೆಲವು ಉಚ್ಚೈಶ್ರವಸ್ಸೆಂಬ ಕುದುರೆಯ ವಂಶದಲ್ಲಿ ಹುಟ್ಟಿದುವು. ಕೆಲವು ಸೂರ್ಯಾಶ್ವಗಳ ಸಂತತಿಗೆ ಸೇರಿದುವು. ಕೆಲವು ಅಶ್ವಿನೀ ಕುಮಾರರ ಕೈಲಿ ಶಿಕ್ಷಣವನ್ನು ಪಡೆದು ಚೆನ್ನಾಗಿ ಪಳಗಿ ಬಂದಿರತಕ್ಕಂತಹವು.

೩೧-೩೨. ಆ ಕುದುರೆಗಳ ಪೈಕಿ ಕೆಲವು ಮಂದಾರಪುಷ್ಪದ ಬಣ್ಣವುಳ್ಳವು. ಮತ್ತೆ ಕೆಲವು ನಾನಾ ಬಗೆಯ ಬಣ್ಣಗಳನ್ನು ತಳೆದು ಸೊಗಸಾಗಿರುವಂತಹವು. ಇನ್ನು ಕೆಲವು ಅಶ್ವಿನೀಪುಷ್ಪದ ವರ್ಣದಿಂದ ಕೂಡಿರುವಂತಹವು. ಬೇರೆ ಕೆಲವು ಚಿನ್ನದ ಬಣ್ಣವನ್ನೂ, ಎಳೆ ಗರಿಕೆಯ ಬಣ್ಣವನ್ನೂ ಹೊಂದಿರುವಂತಹವು. ಇನ್ನೂ ಕೆಲವು ಪದ್ಮರಾಗಮಣಿಯಂತೆ ಕೆಂಪಾದ ಕಾಂತಿಯನ್ನು ಒಳಗೊಂಡಿರುವಂತಹವು. ಓ ರಾಜೇಂದ್ರ! ಈ ರೀತಿಯಾಗಿ ಸಕಲ ಶುಭಲಕ್ಷಣಗಳಿಂದ ಕೂಡಿದ ಇನ್ನೂ ಅನೇಕ ಕುದುರೆಗಳು ಕೋಟಿ ಕೋಟಿಗಟ್ಟಲೆ ಆ ಸೇನೆಯೊಡನೆ ಹೊರಟುಬಂದುವು.

೩೩. ಓ ಮಿಥಿಲೇಶ್ವರ! ಇನ್ನೂ ಆ ಸೇನೆಯಲ್ಲಿರುವ ಭಟರ ವಿಷಯವನ್ನು ಕೇಳು. ಅವರೊಬ್ಬೊಬ್ಬರೂ ಯುದ್ಧದಲ್ಲಿ ಕೀರ್ತಿಯನ್ನು ಪಡೆದವರು. ಅವರೆಲ್ಲರೂ ತಮ್ಮ ತಮ್ಮ ಕೈಯಲ್ಲಿ ಬಿಲ್ಲು ಬಾಣಗಳನ್ನೂ, ಶಕ್ತಿ, ತ್ರಿಶೂಲ, ಕತ್ತಿ, ಗದೆ, ಪಾಶಗಳನ್ನೂ ಹಿಡಿದು ಉಕ್ಕಿನ ಕವಚಗಳನ್ನು ತೊಟ್ಟು ಬಂದಿದ್ದವರು.

ವರ್ಷಂತಃ ಶಸ್ತ್ರಧಾರಾಭಿಃ ಪ್ರಲಯಾಬ್ಧಿಸಮಾ ನೃಪ ।
ದಿಗ್ಗಜಾ ಇವ ದೃಶ್ಯಂತೇ ಮರ್ದಯಂತೋ ಹ್ಯರೀನ್ಮೃಧೇ ॥ ೩೪ ॥

ಏವಂ ವಿನಿರ್ಗತಂ ರಾಜನ್ಯದೂನಾಂ ವಿಪುಲಂ ಬಲಂ ।
ದೃಷ್ಟ್ವಾ ಸುರಾಸುರಾಃ ಸರ್ವೇ ವಿಸಿಸ್ಮುಃ ಪರಮಾದ್ಭುತಂ ॥ ೩೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ಯಾದವಸೈನ್ಯಗಮನಂ ನಾಮ
ತೃತೀಯೋಽಧ್ಯಾಯಃ

---

೩೪. ಅವರು ಯುದ್ಧಗಳಲ್ಲಿ ಧಾರಾಕಾರವಾಗಿ ವಿಚ್ಛಿತಿಯಿಲ್ಲದೆ ಬಾಣಗಳನ್ನು ವರ್ಷಿಸುತ್ತಾ ಪ್ರಳಯಕಾಲದ ಮೋಡಗಳಂತೆಯೂ, ಮದಧಾರೆಯನ್ನು ಅವಿರಥವಾಗಿ ಸುರಿಸುವ ದಿಗ್ಗಜಗಳಂತೆಯೂ ಶೋಭಿಸುತ್ತಾ ಎದುರಾಳಿಗಳನ್ನು ತುಂಡರಿಸಬಲ್ಲವರು.

೩೫. ಓ ರಾಜೇಂದ್ರ! ಈ ರೀತಿಯಾಗಿ ಆ ದ್ವಾರಕೆಯಿಂದ ಹೊರಟು ಬರುತ್ತಿರುವ ಅತ್ಯದ್ಭುತವೂ ಅಪಾರವೂ ಆದ ಆ ಯಾದವ ಸೇನೆಯನ್ನು ಕಂಡು, ದೇವತೆಗಳೂ, ರಾಕ್ಷಸರೂ ಎಲ್ಲರೂ " ಆಶ್ಚರ್ಯವನ್ನು ತಾಳಿದರು " ಎಂದನು.

ಇಲ್ಲಿಗೆ ಶ್ರೀಗರ್ಗ ಸಂಹಿತಾಂತರ್ಗತವಾದ ವಿಶ್ವಜಿತ್ಖಂಡದಲ್ಲಿ ನಾರದ ಬಹುಲಾಶ್ವ
ಸಂವಾದದಲ್ಲಿ ಯಾದವಸೇನಾಗಮನವೆಂಬ
ಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಚತುರ್ಥೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಇತ್ಥಂ ಸೇನಾವೃತಂ ವೀರಾ ಪ್ರದ್ಯುಮ್ನಂ ಧನ್ವಿನಾಂ ವರಂ ।
ಶ್ರೀಕೃಷ್ಣಬಲದೇವಾಭ್ಯಾಮುಗ್ರಸೇನ ಉವಾಚ ಹ ॥ ೧ ॥

॥ ಉಗ್ರಸೇನ ಉವಾಚ ॥

ಹೇ ಪ್ರದ್ಯುಮ್ನ ಮಹಾಪ್ರಾಜ್ಞ ಶ್ರೀಕೃಷ್ಣಕೃಪಯಾ ತ್ವರಂ ।
ವಿಜಿತ್ಯ ನೃಪತೀನ್ಸರ್ವಾನ್ದ್ವಾರಕಾಮಾಗಮಿಷ್ಯಸಿ ॥ ೨ ॥

ಮತ್ತಂ ಪ್ರಮತ್ತಮುನ್ಮತ್ತಂ ಸುಪ್ತಂ ಬಾಲಂ ಜಡಂ ಸ್ತ್ರಿಯಂ ।
ಪ್ರಪನ್ನಂ ವಿರಥಂ ಭೀತಂ ಮಾ ರಿಪುಂ ಹಂತಿ ಧರ್ಮವಿತ್ ॥ ೩ ॥

ನಾಲ್ಕನೆಯ ಅಧ್ಯಾಯವು

೧. ನಾರದಮಹರ್ಷಿಯು ಮತ್ತೆ ಹೇಳತೊಡಗಿದನು :—ಎಲೈ ಮಿಥಿಲಾಧಿಪತಿಯೇ! ಕೇಳು. ಈ ರೀತಿಯಾಗಿ ಸೇನಾಸಮೇತನಾಗಿ ವಿಜಯ ಯಾತ್ರೆಗೆ ಹೊರಟಿರುವ ವೀರನಾದ ಪ್ರದ್ಯುಮ್ನಕುಮಾರನನ್ನು ಕಂಡು ಶ್ರೀಕೃಷ್ಣ ಬಲರಾಮ ಸಹಿತನಾದ ಉಗ್ರಸೇನನು ಈ ರೀತಿ ನುಡಿದನು.

೨. ಎಲೈ ಮಹಾ ಪ್ರಾಜ್ಞನಾದ ಪ್ರದ್ಯುಮ್ನನೇ! ಶ್ರೀಕೃಷ್ಣನ ಕೃಪೆಯಿಂದ ರಾಜರೆಲ್ಲರನ್ನೂ ಗೆದ್ದು ಮರಳಿ ಈ ದ್ವಾರಕೆಗೆ ಹಿಂದಿರುಗುವವನಾಗು.

೩. ಧರ್ಮಜ್ಞನಾದವನು ಮತ್ತೇರಿದವನನ್ನೂ, ಹುಚ್ಚನನ್ನೂ, ನಿದ್ರಿಸುವವನನ್ನೂ, ಹುಡುಗನನ್ನೂ, ಸೋಮಾರಿಯನ್ನೂ, ಸ್ತ್ರೀಯನ್ನೂ, ಶರಣಾಗತನಾದವನನ್ನೂ, ರಥವು ಮುರಿದುಹೋಗಿರತಕ್ಕವನನ್ನೂ, ಹೆದರಿದವನನ್ನೂ ಅವನು ಶತ್ರುವಾಗಿದ್ದರೂ ಸರಿಯೆ ! ಕೊಲ್ಲಲಾರನು.

ರಾಜ್ಞೋ ಹಿ ಪರಮೋ ಧರ್ಮ ಆರ್ತಾನಾಮಾರ್ತಿನಿಗ್ರಹಃ ।
ಉತ್ಪಥಾನಾಂ ವಧಶ್ಚೇತ್ಥಮಾತತಾಯೀ ವಧಾರ್ಹಣಃ ॥ ೪ ॥

ಪುಮಾನ್ಯೋಷಿದುತ ಕ್ಲೀಬ ಆತ್ಮಸಂಭಾವಿತೋಽಧಮಃ ।
ಭೂತೇಷು ನಿರನುಕ್ರೋಶೋ ನೃಪಾಣಾಂ ತದ್ವಧೋ ವಧಃ ॥ ೫ ॥

ನೈನೋ ರಾಜ್ಞಃ ಪ್ರಜಾಭರ್ತುರ್ಧರ್ಮಯುದ್ಧೇ ವಧೋ ದ್ವಿಷಾಂ ।
ಆದಿರಾಜೋ ನೃಪಾನ್ಪೂರ್ವಂ ಪ್ರಾಹ ಸ್ವಾಯಂಭುವೋ ಮನುಃ ॥ ೬ ॥

ಯೋ ರಣೇ ನಿರ್ಭಯೋ ಭೂತ್ವಾ ಕೃತ್ವಾಂಘ್ರಿಂ ಪ್ರಾಗತೋ ವ್ಯಸುಃ ।
ಸ ಗಚ್ಛೇದ್ಧಾಮ ಪರಮಂ ಭಿತ್ವಾ ಮಾರ್ತಂಡಮಂಡಲಂ ॥ ೭ ॥

---

೪. ರಾಜನಾದವನಿಗೆ ದುಃಖಿತರಾದವರ ದುಃಖನಿವಾರಣೆಯೂ, ನ್ಯಾಯ ಮಾರ್ಗವನ್ನು ಬಿಟ್ಟು ಹದ್ದು ಮೀರಿ ನಡೆಯತಕ್ಕವರಿಗೆ ದಂಡನೆಯನ್ನು ಮಾಡುವುದೂ, ಅತ್ಯುತ್ತಮವಾದ ಧರ್ಮವೆನಿಸುವುದು. ಆತತಾಯಿಯಾದವನು (ನಿಷ್ಕಾರಣವಾಗಿ ಮತ್ತೊಬ್ಬರಿಗೆ ಹಿಂಸೆ ಮಾಡುವುದು) ನ್ಯಾಯವಾಗಿಯೂ ವಧೆಗೆ ಅರ್ಹನಾಗುವನು.

೫. ಪುರುಷನಾಗಲಿ, ಸ್ತ್ರೀಯಾಗಲಿ, ಷಂಡನಾಗಲಿ, ಯಾವ ಅಧಮನು ಕೇವಲ ತನ್ನ ಸುಖವನ್ನೇ ಕೋರುತ್ತಾ ಇತರ ಪ್ರಾಣಿಗಳಲ್ಲಿ ಸ್ವಲ್ಪವೂ ಕನಿಕರವನ್ನು ತೋರದೆ ವರ್ತಿಸುವನೋ ಅಂಥ ಪಾಪಿಯನ್ನು ದೊರೆಯಾದವನು ವಧಿಸಲೇ ಬೇಕು.

೬. ಪ್ರಜೆಗಳನ್ನು ಸಂರಕ್ಷಿಸುತ್ತಿರುವ ಪ್ರಭುವು ಧರ್ಮಸಮ್ಮತವಾದ ಯುದ್ಧದಲ್ಲಿ ತನ್ನ ಎದುರಾಳಿಗಳನ್ನು ಕೊಲ್ಲುವುದರಿಂದ ಎಂದಿಗೂ ಪಾಪವು ಸಂಘಟಿಸುವುದಿಲ್ಲ. ಹಿಂದೆ ರಾಜರಿಗೆಲ್ಲಾ ಮೊತ್ತಮೊದಲವನೆನಿಸಿದ ಸ್ವಾಯಂಭುವಮನುವು ರಾಜರನ್ನು ಕುರಿತು ಈ ರೀತಿ ಹೇಳಿರುವನು.

೭. ಯಾವ ಪುರುಷನು ಯುದ್ಧಕ್ಕೆ ನಿಂತಾಗ ಭಯಕ್ಕೊಳಗಾಗದೆ, ಮುಂದಿಟ್ಟ ಕಾಲನ್ನು ಹಿಂದೆಗೆಯದೆ ಹೋರಾಡುತ್ತಾ ಆ ರಣಾಂಗದಲ್ಲೇ ಮಡಿಯುವನೋ ಆ ವೀರಪುರುಷನು ಸೂರ್ಯಮಂಡಲವನ್ನು ಭೇದಿಸಿಕೊಂಡು ಉತ್ತಮವಾದ ಲೋಕವನ್ನು ಪಡೆಯುವನು.

ಭಯಾದ್ರಣಾದುಪರತಸ್ತ್ಯಕ್ತ್ವಾ ಯುದ್ಧೇ ಪತಿಂ ಚ ಯಃ ।
ವ್ರಜೇದ್ಯಃ ಕ್ಷತ್ರಿಯೋ ಭೂತ್ವಾ ಸ ಮಹಾರೌರವಂ ವ್ರಜೇತ್ ॥ ೮ ॥

ಸೇನಾಂ ರಕ್ಷೇತ್ತು ರಾಜಾ ಹಿ ಸೇನಾ ರಾಜಾನಮೇವ ಹಿ ।
ಸೂತಃ ಕೃಚ್ಛ್ರಗತಂ ರಕ್ಷೇದ್ರಥಿನಂ ಸಾರಥಿಂ ರಥೀ ॥ ೯ ॥

ಯೂಯಂ ಚ ಯಾದವಾಃ ಸರ್ವೇ ಸಮರ್ಥಬಲವಾಹನಾಃ ।
ಕಾರ್ಷ್ಣಿಮೇವಾಭಿರಕ್ಷಂತು ಕಾರ್ಷ್ಣಿರ್ವಃ ಪರಿರಕ್ಷತು ॥ ೧೦ ॥

ಗಾವೋ ವಿಪ್ರಾಃ ಸುರಾ ಧರ್ಮಶ್ಛಂದಾಂಸಿ ಭುವಿ ಸಾಧವಃ ।
ಪೂಜನೀಯಾಃ ಸದಾ ಸರ್ವೈರ್ಮನುಷ್ಯೈರ್ಮೋಕ್ಷಕಾಂಕ್ಷಿಭಿಃ ॥ ೧೧ ॥

---

೮. ಯಾವ ಯೋಧನು ಉತ್ತಮವಾದ ಕ್ಷತ್ರಿಯ ಕುಲದಲ್ಲಿ ಉತ್ಪನ್ನನಾಗಿದ್ದರೂ ಯುದ್ಧದಲ್ಲಿ ಹೋರಾಡುತ್ತಾ ಹೆದರಿಕೆಯಿಂದ ತನ್ನ ಪ್ರಭುವನ್ನು ಪರಿತ್ಯಜಿಸಿ ಆ ರಣರಂಗದಿಂದ ಹಿಮ್ಮೆಟ್ಟಿ ಓಡಿಹೋಗುವನೋ ಅವನು ಮಹಾ ರೌರವವೆಂಬ ನರಕಕ್ಕೆ ಈಡಾಗುವನು.

೯. ರಾಜನಾದವನು ತನ್ನ ಸೈನ್ಯವನ್ನು ಕಾಪಾಡಬೇಕು. ಆ ಸೈನ್ಯವೂ ಸಹ ತನ್ನ ಪ್ರಭುವಾದ ರಾಜನನ್ನು ಸಂರಕ್ಷಿಸಬೇಕು. ಸಾರಥಿಯಾದವನು ಕಷ್ಟಕ್ಕೆ ಸಿಲುಕಿರುವ ತನ್ನ ಸ್ವಾಮಿಯನ್ನು ಸಂರಕ್ಷಿಸಬೇಕು. ಅದೇ ರೀತಿ ಆ ರಥಿಕನೂ ಕೂಡ ತನ್ನ ಸಾರಥಿಯನ್ನು ನೋವಾಗದಂತೆ ಸಲಹಬೇಕು.

೧೦. ಆದುದರಿಂದ, ಎಲೈ ಯಾದವ ವೀರರಿರಾ! ನೀವೆಲ್ಲರೂ ಶ್ರೀಕೃಷ್ಣ ಪುತ್ರನೂ, ನಿಮ್ಮ ಸ್ವಾಮಿಯೂ ಆದ ಈ ಪ್ರದ್ಯುಮ್ನಕುಮಾರನನ್ನು ಸಂರಕ್ಷಿಸಿರಿ. ಅದೇ ರೀತಿ ಈ ಪ್ರದ್ಯುಮ್ನನೂ ಸಹ ನಿಮ್ಮೆಲ್ಲರನ್ನೂ ಚೆನ್ನಾಗಿ ಕಾಪಾಡಲಿ.

೧೧. ಮೋಕ್ಷವನ್ನಪೇಕ್ಷಿಸುವ ಸಕಲ ಮಾನವರೂ ಸಹ ಗೋವುಗಳನ್ನೂ, ದೇವತೆಗಳನ್ನೂ, ಧರ್ಮವನ್ನೂ, ವೇದಗಳನ್ನೂ, ಸಾಧು (ಸತ್ಪುರುಷರು) ಗಳನ್ನೂ ಸರ್ವದಾ ಪೂಜಿಸಬೇಕು.

ವೇದಾ ವಿಷ್ಣುವಚೋ ವಿಪ್ರಾ ಮುಖಂ ಗಾವಸ್ತನುರ್ಹರೇಃ।
ಅಂಗಾನಿ ದೇವತಾಃ ಸಾಕ್ಷಾತ್ಸಾಧವೋ ಹ್ಯಸವಃ ಸ್ಮೃತಾಃ ॥ ೧೨ ॥

ಶ್ರೀಕೃಷ್ಣೋಽಯಂ ಹರಿಃ ಸಾಕ್ಷಾತ್ಪರಿಪೂರ್ಣತಮಃ ಪ್ರಭುಃ।
ಯೇಷಾಂ ಚಿತ್ತೇ ಸ್ಥಿತೋ ಭಕ್ತ್ಯಾ ತೇಷಾಂ ತು ವಿಜಯಃ ಸದಾ ॥ ೧೩ ॥

॥ ಶ್ರೀ ನಾರದ ಉವಾಚ ॥

ಶಿರಸಾ ಜಗೃಹುಃ ಸಾಕ್ಷಾದುಗ್ರಸೇನಸ್ಯ ಶಾಸನಂ।
ಪ್ರಣೇಮುರ್ಯಾದವಾಃ ಸರ್ವೇ ಕೃತಾಂಜಲಿಪುಟಾ ನೃಪ ॥ ೧೪ ॥

ಉಗ್ರಸೇನಂ ನೃಪಂ ಶೂರಂ ವಸುದೇವಂ ಬಲಂ ಹರಿಂ।
ನನಾಮ ಕಾರ್ಷ್ಣಿಃ ಶಿರಸಾ ಗರ್ಗಾಚಾರ್ಯಂ ಮಹಾಮುನಿಂ ॥ ೧೫ ॥

---

೧೨. ವೇದಗಳು ಶ್ರೀಹರಿಯ ಮುಖದಿಂದ ಬಂದ ಮಾತುಗಳು; ಬ್ರಾಹ್ಮಣರು ಆತನ ಮುಖವು. ಗೋವುಗಳೇ ಆತನ ದೇಹವು. ದೇವತೆಗಳೇ ಆತನ ಅವಯವಗಳು. ಸತ್ಪುರುಷರೇ ಆತನ ಪ್ರಾಣಗಳು. ಎಂಬುದಾಗಿ (ಸ್ಮೃತಿಯಲ್ಲಿ) ಹೇಳಲ್ಪಟ್ಟಿರುವುದು.

೧೩. ಈ ಶ್ರೀಕೃಷ್ಣನು ಮತ್ತಾರು ಅಲ್ಲ. ಪರಿಪೂರ್ಣಸ್ವರೂಪನಾದ ಸಾಕ್ಷಾತ್ ಪರಬ್ರಹ್ಮನೇ ಇವನು. ಈ ಪ್ರಭುವು ಯಾರ ಹೃದಯದಲ್ಲಿ ನೆಲಸಿರುವನೋ ಅವರಿಗೆ ಸರ್ವದಾ ಗೆಲವು ಸಿದ್ಧವಾಗಿಯೇ ಇರುವುದು.

೧೪. ಓ ಬಹುಲಾಶ್ವರಾಜಾ! ಈ ರೀತಿಯಾಗಿ ಆ ಉಗ್ರಸೇನನು ಇತ್ತ ಆಜ್ಞಾವಚನವನ್ನು ಆ ಯಾದವರೆಲ್ಲರೂ ಶಿರಸಾವಹಿಸಿ ಅಂಗೀಕರಿಸಿದರು. ಬಳಿಕ ಅವರೆಲ್ಲರೂ ಬದ್ಧಾಂಜಲಿಪುಟರಾಗಿ ಆತನನ್ನು ನಮಸ್ಕರಿಸಿದರು.

೧೫. ಅನಂತರ ಪ್ರದ್ಯುಮ್ನಕುಮಾರನು ಉಗ್ರಸೇನ ಮಹಾರಾಜನನ್ನೂ, ತಾತನಾದ ವಸುದೇವನನ್ನೂ, ಶ್ರೀಕೃಷ್ಣ ಬಲರಾಮರನ್ನೂ, ಕುಲಗುರುವಾದ ಗರ್ಗಾಚಾರ್ಯನನ್ನೂ ತಲೆಬಾಗಿ ನಮಸ್ಕರಿಸಿದನು.

ಶ್ರೀಕೃಷ್ಣ ಬಲದೇವಾಭ್ಯಾಂ ಪುರೀಂ ಯಾತೇ ನೃಪೇಶ್ವರ ।
ದಿಗ್ಜಯಾರ್ಥೀ ಹರೇಃ ಪುತ್ರಃ ಪ್ರಯಯೌ ಯಾದವೈಃ ಸಹ ॥ ೧೬ ॥

ಚತುರ್ಯೋಜನಲಂಬೀತ್ಥಂ ರಾಜಮಾರ್ಗೋಽಪಿ ಯಸ್ಯ ವೈ ।
ಬಭೌ ಹೇಮಮಯೈಃ ಸರ್ವೈಃ ಶಿಬಿರೈರ್ಮೈಥಿಲೇಶ್ವರ ॥ ೧೭ ॥

ಅಗ್ರತೋ ವಾಹಿನೀಯುಕ್ತಃ ಕೃತವರ್ಮಾ ಮಹಾಬಲಃ ।
ಧ್ವಜಿನೀಸಹಿತಃ ಪಶ್ಚಾದಕ್ರೂರೋ ಧನ್ವಿನಾಂ ವರಃ ॥ ೧೮ ॥

ತತ್ಪಶ್ಚಾದುದ್ಧವೋ ಮಂತ್ರೀ ಪ್ರತಿಮಾಪಂಚಸಂಯುತಃ ।
ತತ್ಪಶ್ಚಾತ್ಕೃಷ್ಣಚಂದ್ರಸ್ಯ ಸುತಾಸ್ತ್ವಷ್ಟಾದಶ ಸ್ಮೃತಾಃ ॥ ೧೯ ॥

ಯಯುರ್ಮಹಾರಥಾ ರಾಜನ್ಯೇ ಶತಾಕ್ಷೌಹಿಣೀಯುತಾಃ ।
ಪ್ರದ್ಯುಮ್ನಶ್ಚಾನಿರುದ್ಧಶ್ಚ ದೀಪ್ತಿಮಾನ್ಭಾನುರೇವ ಚ ॥ ೨೦ ॥

---

೧೬. ಓ ರಾಜೇಂದ್ರ! ಆ ಉಗ್ರಸೇನ ಮಹಾರಾಜನು ಶ್ರೀಕೃಷ್ಣ ಬಲರಾಮರೊಡನೆ ದ್ವಾರಕೆಗೆ ಹಿಂದಿರುಗುತ್ತಲೇ ಶ್ರೀಕೃಷ್ಣಪುತ್ರನಾದ ಪ್ರದ್ಯುಮ್ನನು ಯದುವೀರರೊಡನೆ ದಿಗ್ವಿಜಯದ ಸಲುವಾಗಿ ಪ್ರಯಾಣ ಬೆಳಸಿದನು.

೧೭. ಎಲೈ ಮಿಥಿಲಾಧೀಶನೇ! ಆ ಸೇನೆಯು ಹೋಗುತ್ತಿರುವಾಗ ನಾಲ್ಕು ಯೋಜನಗಳಷ್ಟು ದೂರ ರಾಜಮಾರ್ಗವು ಸಂಪೂರ್ಣವಾಗಿ ಸುವರ್ಣನಿರ್ಮಿತಗಳಾದ ಶಿಬಿರಗಳಿಂದಲೇ ತುಂಬಿಹೋಗಿ ಪ್ರಕಾಶಿಸುತ್ತಿತ್ತು.

೧೮-೧೯. ಆ ಸೇನೆಯ ಮುಂಭಾಗದಲ್ಲಿ ಮಹಾಬಲಾಢ್ಯನಾದ ಕೃತವರ್ಮನು ತನ್ನ ಸೇನೆಯೊಡನೆ ಹೊರಟಿದ್ದನು. ಅದರ ಹಿಂದೆ ತನ್ನ ಸ್ವಂತ ಸೇನೆಯೊಡನೆ ಧನುರ್ಧರಾಗ್ರೇಸರನಾದ ಅಕ್ರೂರನು ಹೊರಟಿದ್ದನು. ಅವನ ಹಿಂದೆ ಯಾದವೇಶ್ವರನ ಮಂತ್ರಿಯಾದ ಉದ್ಧವನು ತನ್ನ ಪ್ರತಿಮಾಪಂಚಕರೊಡನೆ ಹೊರಟಿದ್ದನು. ಆತನ ಹಿಂದೆ ಶ್ರೀಕೃಷ್ಣನ ಪುತ್ರರಾದ ಹದಿನೆಂಟುಮಂದಿ ಮಹಾರಥರು ಹೊರಟಿದ್ದರು.

೨೦–೨೩. ಓ ರಾಜೇಂದ್ರ! ಒಂದುನೂರು ಅಕ್ಷೋಹಿಣೀ ಸೇನೆಯಿಂದ ಪರಿವೃತರಾದ ಆ ಹದಿನೆಂಟುಮಂದಿ ಮಹಾರಥರು ಯಾರೆಂದರೆ:—ಪ್ರದ್ಯುಮ್ನ, ಅನಿರುದ್ಧ,

ಸಾಂಬೋ ಮಧುರ್ಬೃಹದ್ಭಾನುಶ್ಚಿತ್ರಭಾನುರ್ವೃಕೋಽರುಣಃ ।
ಪುಷ್ಕರೋ ವೇದಬಾಹುಶ್ಚ ಶ್ರುತದೇವಃ ಸುನಂದನಃ ॥ ೨೧ ॥

ಚಿತ್ರಭಾನುರ್ವಿರೂಪಶ್ಚ ಕವಿರ್ನ್ಯಗ್ರೋಧ ಏವ ಚ ।
ತತ್ಪಶ್ಚಾತ್ತ್ರಯಯುಃ ಸರ್ವೇ ಗದಾದ್ಯಾಃ ಕೃಷ್ಣನೋದಿತಾಃ ॥ ೨೨ ॥

ಭೋಜವೃಷ್ಣ್ಯಂಧಕಮಧುಶೂರಸೇನದಶಾರ್ಹಕಾಃ ।
ಋತುಬಾಣಕೋಟಿಸಂಖ್ಯಾ ಯಾದವಾನಾಂ ಪ್ರಕಥ್ಯತೇ ॥
ತತ್ಸೈನ್ಯಸಂಖ್ಯಾಂ ನೃಪತೇ ಕಃ ಕರಿಷ್ಯತಿ ಭೂಮಿಷು ॥ ೨೩ ॥

ಇತ್ಥಂ ಯದೂನಾಂ ಚಲತಾಂ ನೃಪಾಣಾಂ
ವಿಕರ್ಷತಾಂ ತಾಂ ಮಹತೀಂ ಚ ಸೇನಾಂ ।
ಕೋದಂಡಟಂಕಾರಯುತೋಽಭವತ್ಕೌ
ಧುಂಕಾರ ಆತಾಡಿತದುಂದುಭೀನಾಂ ॥ ೨೪ ॥

ದೀಪ್ತಿಮಂತ, ಭಾನು, ಸಾಂಬ, ಮಧು, ಬೃಹದ್ಭಾನು, ಚಿತ್ರಭಾನು. ವೃಕ, ಅರುಣ, ಪುಷ್ಕರ, ವೇದಬಾಹು, ಶ್ರುತದೇವ, ಸುನಂದನ, ಚಿತ್ರಭಾನು, ವಿರೂಪ, ಕವಿ, ನ್ಯಗ್ರೋಧ ಎಂಬುವರು. ಇವರ ಹಿಂದೆ ಶ್ರೀಕೃಷ್ಣನ ಅಪ್ಪಣೆಯಂತೆ ಗದನೇ ಮೊದಲಾದ ಭೋಜ, ವೃಷ್ಣಿ, ಅಂಧಕ, ಮಧು, ಶೂರಸೇನ, ದಶಾರ್ಹ ಎಂಬ ಒಳಪ್ರಭೇದಗಳಿಗೆ ಸೇರಿದ ಯಾದವರೆಲ್ಲರೂ ಹೊರಟಿದ್ದರು. ಓ ರಾಜೇಂದ್ರ! ಆ ಯಾದವರೆಲ್ಲರ ಒಟ್ಟು ಸಂಖ್ಯೆ ಐವತ್ತಾರುಕೋಟಿಯಾಗುವುದು. ಹೀಗಿರುವಾಗ ಅವರೆಲ್ಲರ ಸೈನ್ಯಗಳ ಸಂಖ್ಯೆಯನ್ನು ಈ ಭೂಮಿಯಲ್ಲಿ ಯಾವನುತಾನೇ ಎಣಿಸಿ ಹೇಳಿಯಾನು ?

೨೪. ಹೀಗೆ ಆ ಮಹಾಸೇನೆಯನ್ನು ನಡೆಸಿಕೊಂಡು ಆ ಯಾದವ ವೀರರು ತಮ್ಮ ತಮ್ಮ ಧನುಸ್ಸುಗಳನ್ನು ಝುಂಕಾರಮಾಡುತ್ತಲೂ, ನಗಾರಿಗಳನ್ನು ಬಾರಿಸುತ್ತಲೂ ಮುಂದುವರಿಯುತ್ತಿದ್ದುದರಿಂದ ಭೂಮಿಯಲ್ಲೆಲ್ಲಾ ಆ ಧನುರ್ಧ್ವನಿಮಿಶ್ರಿತವಾದ ನಗಾರಿಯ ಧುಂ ಧುಂ ಎಂಬ ನಾದವೇ ತುಂಬಿಹೋಯಿತು.

ಇಭೇಂದ್ರಚೀತ್ಕಾರಹಯೇಂದ್ರಹೇಷಣೈ-
ರ್ನದದ್ಭುಶುಂಡೀದೃಢವೀರಗರ್ಜನೈಃ ।
ಢಕ್ಕಾನಿನಾದೈರ್ಯದವಸ್ತಡಿತ್ಸ್ವನೈಃ
ಪ್ರಚಂಡಮೇಘಾ ಇವ ತೇ ವಿಡಿಂಬಿರೇ　　॥ ೨೫ ॥

ರಾಜದ್ಭುವೋ ಮಂಡಲಮೇವ ದಿಗ್ಗಜಾ
ಮಹತ್ಸ್ವನೈಸ್ತೇ ಬಧಿರೀಕೃತಾ ಇವ ।
ಸದ್ಯೋಽಥ ದುರ್ಗಂ ರಿಪವೋ ವಿದದ್ರುವು-
ರ್ನಿಃಸಾಹಸಾ ಕೌ ಚಲತಾಂ ಮಹಾತ್ಮನಾಂ　　॥ ೨೬ ॥

ಕೂರ್ಮಸ್ತು ಕಿಂ ಕಾವಿತಿ ಕೇ ವದಂತಃ
ಕುತಃ ಕ್ವ ಗಚ್ಛಾವು ಇತಿ ದ್ರುವಂತಃ ।
ಉಪದ್ರವೋ ಹ್ಯೇಷ ವಿಧೇ ಕ್ವ ಯಾತಿ
ಚಚಾಲ ಲೋಕೈಃ ಸಹಿತಾಚಲೇತಿ　　॥ ೨೭ ॥

---

೨೫. ಆರೀತಿ ಮುಂದುವರಿಯುವಾಗ ಸೇನೆಯಲ್ಲಿರುವ ಮದ್ದಾನೆಗಳ ಘೀಂಕಾರದಿಂದಲೂ, ಕುದುರೆಗಳ ಹ್ರೇಷಾಧ್ವನಿಯಿಂದಲೂ, ವೀರರ ಸಿಂಹನಾದಗಳಿಂದಲೂ, ಡಕ್ಕೆಗಳ ಅಬ್ಬರಗಳಿಂದಲೂ ಒಡಗೂಡಿ ಸಂಭ್ರಮದಿಂದ ಬರುತ್ತಿರುವ ಆ ಯದುವೀರರು ಗುಡುಗು, ಸಿಡಿಲುಗಳಿಂದೊಡಗೂಡಿದ ಕಾರ್ಗಾಲದ ಮೋಡಗಳಂತೆ ಕಂಗೊಳಿಸಿದರು.

೨೬. ಓ ರಾಜೇಂದ್ರ! ಈರೀತಿ ಮಹಾತ್ಮರಾದ ಆ ಯದುವೀರರು ದಿಗ್ವಿಜಯಾರ್ಥವಾಗಿ ಪಯಣ ಮಾಡುತ್ತಿರುವಾಗ ಆ ಕೋಲಾಹಲದಿಂದ ಈ ಭೂಮಂಡಲವೂ, ಅಷ್ಟದಿಗ್ಗಜಗಳೂ ಕಿವುಡಾದಂತಾದುವು. ಅದನ್ನು ಕೇಳಿದೊಡನೆಯೇ ತಮ್ಮ ಸಾಹಸವೆಲ್ಲವೂ ಉಡುಗಿಹೋದಂತಾಗಿ ಶತ್ರುಗಳೆಲ್ಲರೂ ತಮ್ಮ ರಾಜ್ಯದಲ್ಲಿರುವ ದುರ್ಗಪ್ರದೇಶಗಳಿಗೆ ಓಡಿಹೋದರು.

೨೭. ಆರೀತಿ ಆ ಶತ್ರುರಾಜರು ಭಯದಿಂದ ಪಲಾಯನ ಮಾಡುವಾಗ ಈ ಭೂಮಿಯನ್ನು ಹೊತ್ತಿರುವ ಆದಿಕೂರ್ಮನು ನಿಜವಾಗಿಯೂ ಇರುವನೇನು ? ಎಂದು ಕೆಲವರೂ, ನಾವು ಏತಕ್ಕೋಸ್ಕರ ಎಲ್ಲಿಗೆ ಓಡಿಹೋಗುತ್ತಿದ್ದೇವೆ ? ಎಂದು ಕೆಲವರೂ, ಹಾ ದೈವವೇ ! ಇದೇನೀ ಉಪದ್ರವವು ? (ಪೀಡೆಯು). ಈ ಭೂಮಿಯು ಅಲುಗಾಡುತ್ತಿದೆ. ಅಷ್ಟೇ ಅಲ್ಲದೆ ಮೇಲೆ ವಾಸಿಸುವ ಜನರೊಂದಿಗೆ ಇದು ಎಲ್ಲಿಗೋ ಹೋಗುತ್ತಿರುವುದಲ್ಲಾ! ಎಂದು ಕೆಲವರೂ ಗಾಬರಿಗೊಂಡು ತಲ್ಲಣಿಸುತ್ತಿದ್ದರು.

ಛಲೇನ ಯಜ್ಞಸ್ಯ ಹರಿಃ ಪರೇಶ್ವರೋ
ಭಾರಂ ವಿದೇಹೇಶ ಭುವೋಽವತಾರಯನ್ ।
ಯೋಽಭೂಚ್ಚತುರ್ವ್ಯೂಹಧರೋ ಯದೋಃ ಕುಲೇ
ತಸ್ಮೈ ನಮೋಽನಂತಗುಣಾಯ ಭೂಭೃತೇ ॥ ೨೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ-
ಸಂವಾದೇ ಪ್ರದ್ಯುಮ್ನದಿಗ್ವಿಜಯಾರ್ಥಗಮನಂ
ನಾಮ ಚತುರ್ಥೋಽಧ್ಯಾಯಃ

---

೨೮. ಎಲೈ ವಿದೇಹಾಧೀಶನಾದ ಬಹುಲಾಶ್ವರಾಜನೇ! ಈ ರೀತಿಯಾಗಿ ಯಜ್ಞದ ನೆಪದಿಂದ ಭೂಭಾರವನ್ನು ಇಳಿಸಲು ಉದ್ಯುಕ್ತನಾದ ಆ ಪರಮಪುರುಷನಾದ ಶ್ರೀಹರಿಯೇ ಯದುವಂಶದಲ್ಲಿ ಶ್ರೀಕೃಷ್ಣ, ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣರೆಂಬ ಚತುರ್ವ್ಯೂಹಮೂರ್ತಿಗಳ ಸ್ವರೂಪದಿಂದ ರಾರಾಜಿಸುತ್ತಿರುವನು. ಇಂತಹ ಅನಂತಕಲ್ಯಾಣಗುಣಗಳಿಂದ ಕೂಡಿರುವ ಆ ಪರಮಪುರುಷನಿಗೆ ನಮಸ್ಕಾರವು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ನಾರದಬಹುಲಾಶ್ವ
ಸಂವಾದದಲ್ಲಿ ಶ್ರೀಪ್ರದ್ಯುಮ್ನ ದಿಗ್ವಿಜಯಪ್ರಯಾಣವರ್ಣನವೆಂಬ
ನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಪಂಚಮೋಽಧ್ಯಾಯಃ

॥ ಬಹುಲಾಶ್ವ ಉವಾಚ ॥

ಕಾನ್ಕಾನ್ದೇಶಾನ್ಯಯೌ ಜೇತುಂ ಕ್ರಮತಃ ಶ್ರೀಹರೇಃ ಸುತಃ ।
ತಸ್ಯ ಕರ್ಮಾಣ್ಯುದಾರಾಣಿ ಬ್ರೂಹಿ ದೇವರ್ಷಿಸತ್ತಮ ॥ ೧ ॥

ಅಹೋ ಶ್ರೀಕೃಷ್ಣಚಂದ್ರಸ್ಯ ಕೃಪಾ ಭಕ್ತೇಷು ಚೇದೃಶೀ ।
ಪುನಾತಿ ಪ್ರಶ್ರುತಾ ಧ್ಯಾತಾ ಪಾಪಿನಂ ಸಕುಲಂ ಜನಂ ॥ ೨ ॥

ಐದನೆಯ ಅಧ್ಯಾಯವು

೧. ಈರೀತಿ ನಾರದಮಹರ್ಷಿಯು ನುಡಿದುದನ್ನು ಕೇಳಿ, ಆ ಬಹುಲಾಶ್ವ ನರಪತಿಯು ಆತನನ್ನು ಕುರಿತು ಓ ದೇವರ್ಷಿ, ಶ್ರೀಕೃಷ್ಣಪುತ್ರನಾದ ಆ ಪ್ರದ್ಯುಮ್ನನು ಯಾವ ಯಾವ ದೇಶಗಳನ್ನು ಗೆಲ್ಲಲು ಹೊರಟನು ? ಅದೆಲ್ಲವನ್ನೂ ಕ್ರಮವಾಗಿ ತಿಳಿಸುವುದಲ್ಲದೆ, ಆತನ ಮಹಿಮಾನ್ವಿತವಾದ (ಮಹತ್ತಾದ) ಅದ್ಭುತಕಾರ್ಯಗಳನ್ನೂ ನನಗೆ ತಿಳಿಯಪಡಿಸು.

೨. ಆ ಶ್ರೀಕೃಷ್ಣನಿಗೆ ಭಕ್ತರ ಮೇಲಿರುವ ಕೃಪೆಯನ್ನೇನೆಂದು ಹೇಳಲಿ ! ಓ ಮಹರ್ಷಿ ! ಇದೇನಾಶ್ಚರ್ಯ ! ಆತನ ದಿವ್ಯಚರಿತ್ರವನ್ನು ಕಿವಿಯಿಂದ ಕೇಳಿದರೂ ಸರಿಯೇ, ಮನಸ್ಸಿನಲ್ಲಿ ಧ್ಯಾನಿಸಿದರೂ ಸರಿಯೇ, ಆರೀತಿ ನಡೆದ ಮನುಜನು ಎಷ್ಟೇ ಪಾಪಿಯಾಗಿದ್ದರೂ ಅವನನ್ನು ಶುದ್ಧನನ್ನಾಗಿ ಮಾಡುವುದಲ್ಲದೆ, ಅವನ ವಂಶದವರೆಲ್ಲರನ್ನೂ ಪಾವನಗೊಳಿಸುವುದಲ್ಲಾ ! ಎಂದು ಪ್ರಶ್ನಿಸಲು,

॥ ಶ್ರೀ ನಾರದ ಉವಾಚ ॥

ಸಾಧು ಸಾಧು ತ್ವಯಾ ಪೃಷ್ಟಂ ಸಾಧು ತೇ ವಿಮಲಾ ಮತಿಃ ।
ಚರಿತಂ ಕೃಷ್ಣಭಕ್ತಾನಾಂ ಪುನಾತಿ ಭುವನತ್ರಯಂ ॥ ೩ ॥

ತತ್ಕಾಲೇ ಮೇಘಧಾರಾಶ್ಚ ಭೂಮೇಃ ಸರ್ವರಜಾಂಸಿ ಚ ।
ಕವಿಶ್ಚೇದ್ಗಣಯೇದ್ರಾಜನ್ನ ಹರೇಃ ಶ್ರೀಮತೋ ಗುಣಾನ್ ॥ ೪ ॥

ಚತುರ್ಯೋಜನಮಾತ್ರಂ ಹಿ ಛಾಯಾ ಯಸ್ಯ ಪ್ರದೃಶ್ಯತೇ ।
ತೇನ ಶ್ವೇತಾತಪತ್ರೇಣ ಶೋಭಿತೋ ರುಕ್ಮಿಣೀಸುತಃ ॥ ೫ ॥

ರಥೇನ ಶಕ್ರದತ್ತೇನ ಸ್ವಸೈನ್ಯಪರಿವಾರಿತಃ ।
ಕಚ್ಛದೇಶಾನ್ಯಯೌ ಜೇತುಂ ತ್ರಿಪುರಾನ್ಗಿರಿಶೋ ಯಥಾ ॥ ೬ ॥

---

೩. ಆಗ ನಾರದಮಹರ್ಷಿಯು ಈರೀತಿ ನುಡಿಯತೊಡಗಿದನು :— ಓ ರಾಜೇಂದ್ರ ! ನೀನು ಕೇಳಿದುದು ಬಹಳ ಚೆನ್ನಾಗಿರುವುದು. ನಿಜವಾಗಿಯೂ ಅದು ಬಹು ಸಂಗತವಾದುದು. ಈರೀತಿ ಪ್ರಶ್ನಿಸಿದ ಈ ನಿನ್ನ ನಿರ್ಮಲವಾದ ಮನಸ್ಸೂ ಬಹು ಧನ್ಯವಾದುದು. ಶ್ರೀಕೃಷ್ಣನ ಭಕ್ತರ ಚರಿತ್ರವೂ ಸಹ ಮೂರುಲೋಕಗಳನ್ನೂ ಪಾವನಗೊಳಿಸುವುದು.

೪. ಬಹು ಜಾಣನಾದವನಾದರೆ ವರ್ಷಾಕಾಲದಲ್ಲಿ ಮೇಘಗಳಿಂದ ಸುರಿಯುತ್ತಿರುವ ಜಲಧಾರೆಗಳನ್ನಾದರೂ ಎಣಿಸಬಹುದು. ಭೂಮಿಯಲ್ಲಿರುವ ಧೂಳಿನ ಕಣಗಳನ್ನಾದರೂ ಎಣಿಸಬಹುದು. ಆದರೆ ಆ ಶ್ರೀಹರಿಯ ಗುಣಗಳನ್ನು ಮಾತ್ರ ಎಣಿಸಲು ಅವನಿಂದಲೂ ಸಾಧ್ಯವಿಲ್ಲ.

೫. ಓ ರಾಜೇಂದ್ರ ! ಆ ರುಕ್ಮಿಣೀಸುತನಾದ ಪ್ರದ್ಯುಮ್ನನ ತಲೆಯಮೇಲೆ ದಿವ್ಯವಾದ ಶ್ವೇತಚ್ಛತ್ರವು ಕಂಗೊಳಿಸುತ್ತಿತ್ತು. ಅದರ ನೆರಳು ನಾಲ್ಕು ಯೋಜನದಷ್ಟು ಅಗಲವಾದ ಪ್ರದೇಶದಲ್ಲಿ ಬೀಳುತ್ತಿತ್ತು.

೬. ಆ ಪ್ರದ್ಯುಮ್ನನು ಮೊತ್ತಮೊದಲನೆಯದಾಗಿ ತನ್ನ ಆ ಮಹಾಸೇನೆಯೊಡಗೂಡಿ ಇಂದ್ರದತ್ತವಾದ ರಥದಲ್ಲಿ ಕುಳಿತು ಮಹೇಶ್ವರನು ತ್ರಿಪುರಾಸುರರ ಪುರತ್ರಯವನ್ನು ಕುರಿತು ತೆರಳಿದಂತೆ ಕಚ್ಛದೇಶವನ್ನು ಗೆಲ್ಲಲು ಹೊರಟನು.

ಕಚ್ಛದೇಶಾಧಿಪಃ ಶುಭ್ರೋ ಮೃಗಯಾರ್ಥೀ ವಿನಿರ್ಗತಃ ।
ಸೇನಾಂ ಸಮಾಗತಾಂ ಜ್ಞಾತ್ವಾ ಪುರೀಂ ಹಾಲಾಂ ಸಮಾಯಯೌ ॥ ೭ ॥

ಪ್ರದ್ಯುಮ್ನಸ್ಯಾಗತಾ ಸೇನಾ ಗಜಪಾದಪ್ರತಾಡನೈಃ ।
ಚೂರ್ಣಯಂತೀ ತರೂನ್ದೇಶಾನ್ಪಾತಯಂತೀ ಚ ಮೈಥಿಲ ॥ ೮ ॥

ಉತ್ಥಿತೈಸ್ತದ್ರಜೋವೃಂದೈರಂಧೀಭೂತಂ ನಭೋಽಭವತ್ ।
ಭಯಂ ಪ್ರಾಪುರ್ಜನಾಃ ಸರ್ವೇ ಕಚ್ಛದೇಶನಿವಾಸಿನಃ ॥ ೯ ॥

ತದಾತಿಹರ್ಷಿತಃ ಶುಭ್ರೋ ಗಜಾನಾಂ ಹೇಮಮಾಲಿನಾಂ ।
ನೀತ್ವಾ ಪಂಚಶತಂ ಸದ್ಯೋ ಹಯಾನಾಮಯುತಂ ತಥಾ ॥ ೧೦ ॥

ವಿಂಶದ್ಭಾರಂ ಸುವರ್ಣಾನಾಮಾಗತಸ್ತಸ್ಯ ಸಂಮುಖೇ ।
ದತ್ತ್ವಾ ಬಲಿಂ ನನಾಮಾಶು ಸ್ರಜಾ ಬದ್ಧ್ವಾ ಕರದ್ವಯಂ ॥ ೧೧ ॥

---

೭. ಆ ವೇಳೆಯಲ್ಲಿ ಕಚ್ಛದೇಶಾಧಿಪತಿಯಾದ ಶುಭ್ರನೆಂಬ ರಾಜನು ಬೇಟೆಯಾಡಬೇಕೆಂದು ಹೊರಟಿದ್ದನು. ಆದರೆ ಪ್ರದ್ಯುಮ್ನನು ಸೇನಾಸಮೇತನಾಗಿ ಹೊರಟುಬರುತ್ತಿರುವನೆಂಬ ಸುದ್ದಿಯನ್ನು ಕೇಳಿದೊಡನೆ ಆ ಪ್ರಯತ್ನವನ್ನು ನಿಲ್ಲಿಸಿ, ತನ್ನ ಪಟ್ಟಣವಾದ ಹಾಲಾ ಎಂಬಲ್ಲಿಗೆ ಹಿಂದಿರುಗಿ ಬಂದುಬಿಟ್ಟನು.

೮. ಓ ಮೈಥಿಲೇಂದ್ರ! ಆ ವೇಳೆಗೆ ಪ್ರದ್ಯುಮ್ನನ ಸೇನೆಯು ತನ್ನ ಆನೆಗಳ ಕಾಲುಗಳ ತುಳಿತದಿಂದ ಭಾರಿ ಭಾರಿ ಮರಗಳನ್ನು ಉರುಳಿಸುತ್ತಲೂ, ದೇಶಗಳೆಲ್ಲವನ್ನೂ ಧೂಳೀಪಟಲವನ್ನಾಗಿ ಮಾಡುತ್ತಲೂ ಅಲ್ಲಿಗೆ ಬಂದಿತು.

೯. ಈರೀತಿ ಆ ಸೇನೆಯು ಬರುತ್ತಿರುವಾಗ ಅದರ ಕಾಲ್ತುಳಿತದಿಂದ ಮೇಲಕ್ಕೆದ್ದ ಧೂಳನ್ನು ನೋಡಿ ಆ ಕಚ್ಛದೇಶದ ನಿವಾಸಿಗಳಾದ ಜನರೆಲ್ಲರೂ ಭಯಗ್ರಸ್ತರಾದರು.

೧೦–೧೧. ಆಗ ಆ ಕಚ್ಛದೇಶಾಧಿಪತಿಯಾದ ಶುಭ್ರನು ಮಹಾಸಂತೋಷದಿಂದ ಚಿನ್ನದ ಸರಗಳಿಂದ ಶೃಂಗರಿಸಲ್ಪಟ್ಟ ಐನೂರು ಆನೆಗಳನ್ನೂ, ಹತ್ತುಸಾವಿರ ಕುದುರೆಗಳನ್ನೂ, ಇಪ್ಪತ್ತುಭಾರಗಳು ತೂಗುವ ಚಿನ್ನದ ಗಟ್ಟಿಗಳನ್ನೂ ತೆಗೆದುಕೊಂಡು ಆ ಪ್ರದ್ಯುಮ್ನನ ಎದುರಿಗೆ ಬಂದು ನಿಂತು ಅವೆಲ್ಲವನ್ನೂ ಕಾಣಿಕೆಯಾಗಿ ಒಪ್ಪಿಸಿ ಹೂವಿನ ಸರದಿಂದ ತನ್ನ ಕೈಗಳನ್ನು ಕಟ್ಟಿಕೊಂಡು ಆತನಿಗೆ ಪ್ರಣಾಮ ಮಾಡಿದನು.

ತಸ್ಮೈ ತುಷ್ಟಃ ಶಂಬರಾರಿಃ ಪ್ರದದೌ ರತ್ನಮಾಲಿಕಾಂ ।
ಸಂಸ್ಥಾಪ್ಯ ರಾಜ್ಯೇ ತಂ ರಾಜಂಸ್ತೇಷಾಂ ಹಿ ಪ್ರಕೃತಿಃ ಸತಾಂ ॥ ೧೨ ॥

ಕಲಿಂಗಾನ್ಪ್ರಯಯೌ ಜೇತುಂ ರುಕ್ಮಿಣೀನಂದನೋ ಬಲೀ ।
ಪತತ್ಪತಾಕೈಃ ಸತ್ಸೈನ್ಯೈರ್ಮೇಘೈರಿಂದ್ರ ಇವ ವ್ರಜನ್ ॥ ೧೩ ॥

ಕಲಿಂಗರಾಜಃ ಸ್ವಬಲೈಃ ಸಮರ್ಥದ್ವಿಪವಾಹನೈಃ ।
ನಿರ್ಯಯೌ ಸಂಮುಖೇ ಯೋದ್ಧುಂ ಪ್ರದ್ಯುಮ್ನಸ್ಯ ಮಹಾತ್ಮನಃ ॥ ೧೪ ॥

ಕಲಿಂಗಮಾಗತಂ ವೀಕ್ಷ್ಯಾನಿರುದ್ಧೋ ಧನ್ವಿನಾಂ ವರಃ ।
ರಥೇನೈಕೇನ ತತ್ಸೈನ್ಯೈರ್ಯುಯುಧೇ ಯಾದವಾಗ್ರತಃ ॥ ೧೫ ॥

---

೧೨. ಆಗ ಪ್ರದ್ಯುಮ್ನನು ಆ ಕಚ್ಛದೇಶಾಧಿಪತಿಯ ವಿಷಯದಲ್ಲಿ ಬಹಳ ಸಂತೋಷವನ್ನು ತಾಳಿದವನಾಗಿ ಆತನನ್ನು ಆ ರಾಜ್ಯದಲ್ಲಿ ಮೊದಲಿನಂತೆ ರಾಜ್ಯವಾಳುತ್ತಿರುವಂತೆ ನೇಮಿಸಿ ತನ್ನ ಪ್ರೀತಿಸೂಚಕವಾಗಿ ಆತನಿಗೆ ರತ್ನಮಾಲಿಕೆಯೊಂದನ್ನು ಇತ್ತು ಸನ್ಮಾನಿಸಿದನು. ಓ ರಾಜೇಂದ್ರ ! ಇದೀಗ ಸತ್ಪುರುಷರಾದವರ ಸ್ವಭಾವವೆಂದು ತಿಳಿ.

೧೩. ಅನಂತರ ಬಲಶಾಲಿಯಾದ ಆ ಪ್ರದ್ಯುಮ್ನಕುಮಾರನು ಆ ಕಚ್ಛದೇಶದಿಂದ ಹೊರಟು, ಇಂದ್ರನು ತನ್ನ ಸೇನೆಯಾದ ಮೇಘಗಳೊಡನೆ ಹೇಗೋ ಹಾಗೆ, ಚಂಚಲವಾದ ಧ್ವಜಪಟಗಳಿಂದ ಒಳಗೊಂಡ ತನ್ನ ಸೈನ್ಯಗಳೊಡನೆ ಕಳಿಂಗದೇಶವನ್ನು ಗೆಲ್ಲಬೇಕೆಂದು ತೆರಳಿದನು.

೧೪. ಈರೀತಿ ಸೇನಾಸಮೇತನಾಗಿ ಬರುತ್ತಿರುವ ಆ ಪ್ರದ್ಯುಮ್ನನನ್ನು ಎದುರಿಸಿ ಯುದ್ಧದಲ್ಲಿ ಹೋರಾಡಬೇಕೆಂದು ಬಯಸಿ, ಆ ಕಲಿಂಗದೇಶದ ದೊರೆಯು ಮಹಾಬಲಾಢ್ಯವಾದ ಆನೆಗಳಿಂದ ತುಂಬಿದ ತನ್ನ ಸೇನೆಯೊಡನೆ ಹೊರಟುಬಂದನು.

೧೫. ಹೀಗೆ ಯಾದವಸೇನೆಯನ್ನು ಎದುರಿಸಲು ಸಿದ್ಧನಾಗಿ ಕಳಿಂಗದೇಶದ ಅರಸು ಬಂದಿರುವುದನ್ನು ಕಂಡು ಬಿಲ್ಲುಗಾರರಿಗೆಲ್ಲಾ ಮುಂದಾಳೆನಿಸಿದ ಅನಿರುದ್ಧನು ಆ ಯಾದವರೆಲ್ಲರೂ ನೋಡುತ್ತಿರುವಂತೆಯೇ ಅವರ ಮುಂದೆ ತಾನೊಬ್ಬನೇ ತೇರನ್ನೇರಿ ಹೊರಟು ಆ ಸೇನೆಗಳೊಡನೆ ಹೋರಾಡತೊಡಗಿದನು.

ಶತಬಾಣೈಶ್ಚ ಕಾಲಿಂಗಂ ದಶಭಿರ್ದಶಭೀ ರಥಾನ್ ।
ಅತಾಡಯದ್ಗಜಾನ್ವೀರಶ್ಚಾಪಂ ಟಂಕಾರಯನ್ಮುಹುಃ ॥ ೧೬ ॥

ಸ್ವಶತ್ರವಶ್ಚ ಸ್ವೇ ಸರ್ವೇ ಸಾಧು ಸಾಧ್ವಿತಿ ವಾದಿನಃ ।
ಅನಿರುದ್ಧಃ ಪ್ರಯುಯುಧೇ ಪ್ರದ್ಯುಮ್ನಸ್ಯ ಪ್ರಪಶ್ಯತಃ ॥ ೧೭ ॥

ಅನಿರುದ್ಧಸ್ಯ ಬಾಣೌಘೈಃ ಕೇಚಿದ್ವೀರಾ ದ್ವಿಧಾಕೃತಾಃ ।
ಗಜಾಶ್ಚ ಭಿನ್ನಶಿರಸಃ ಪಾದಭಿನ್ನಾ ಹಯಾ ನೃಪ ॥ ೧೮ ॥

ರಥಾಶ್ಚ ಚೂರ್ಣಚರಣಾ ಹತಾಶ್ವಾ ಹತನಾಯಕಾಃ ।
ರಥಿಸಾರಥಯೋ ವಾತೈರ್ನಿಪೇತುಃ ಪಾದಪಾ ಇವ ॥ ೧೯ ॥

---

೧೬. ಆ ವೀರನಾದ ಅನಿರುದ್ಧನು ಪುನಃ ಪುನಃ ತನ್ನ ಬಿಲ್ಲಿನ ಹೆದೆಯನ್ನು ಝುಂಕಾರಮಾಡುತ್ತಾ ಆ ಕಳಿಂಗರಾಜನನ್ನು ನೂರು ಬಾಣಗಳಿಂದಲೂ ಆತನ ಸೇನೆಯಲ್ಲಿದ್ದ ತೇರುಗಳನ್ನೂ, ಆನೆಗಳನ್ನೂ ಒಟ್ಟೊಟ್ಟಿಗೆ ಹತ್ತು ಹತ್ತು ಬಾಣಗಳಿಂದಲೂ ಪ್ರಹರಿಸಿದನು.

೧೭. ಆಗ ಆತನ ಕೌಶಲವನ್ನು ಕಂಡು ಶತ್ರುಗಳ ಕಡೆಯವರೂ, ತನ್ನ ಕಡೆಯುವರೂ ಭಲೆ, ಭಲೆ ಎಂದು ಕೊಂಡಾಡಿದರು. ಹೀಗೆ ಅನಿರುದ್ಧನು, ಪ್ರದ್ಯುಮ್ನನು ನೋಡುತ್ತಿರುವಂತೆ ಶೌರ್ಯದಿಂದ ಕಾದಾಡಿದನು.

೧೮. ಓ ರಾಜೇಂದ್ರ! ಆ ಅನಿರುದ್ಧನ ಬಾಣಪರಂಪರೆಗಳಿಂದ ಕೆಲವರು ವೀರರು ಎರಡಾಗಿ ಸೀಳಲ್ಪಟ್ಟರು. ಅನೇಕ ಆನೆಗಳ ತಲೆಗಳು ಕತ್ತರಿಸಿ ಹೋದುವು. ಅನೇಕ ಕುದುರೆಗಳ ಕಾಲುಗಳು ತುಂಡರಿಸಲ್ಪಟ್ಟವು.

೧೯. ಮತ್ತು ರಥಗಳು ಚಕ್ರಗಳು ಮುರಿದುಹೋಗಿ, ಕುದುರೆಗಳು ಸತ್ತು, ತಮ್ಮ ನಾಯಕನನ್ನೂ ಕಳೆದುಕೊಂಡು ನೆಲಕ್ಕೆ ಕುಸಿಯಲ್ಪಟ್ಟವು. ಅವುಗಳಲ್ಲಿದ್ದ ಸಾರಥಿಯೂ, ಯೋಧನೂ ಬಿರುಗಾಳಿಯಿಂದ ಬುಡಸಹಿತ ಕಿತ್ತ ಮರಗಳಂತೆ ಸತ್ತು ಕೆಳಗೆ ಉರುಳಿ ಬಿದ್ದರು.

ಪಲಾಯಮಾನಾಂ ತಾಂ ಸೇನಾಂ ಕಾಲಿಂಗೋ ವೀಕ್ಷ್ಯ ಮೈಥಿಲ ।
ಆಜಗಾಮ ಗಜಾರೂಢೋ ವಿಚ್ಛಿನ್ನಕವಚೋ ರುಷಾ ॥ ೨೦ ॥

ದ್ವಿಸಪ್ತತಿಭಾರಯುತಾಂ ಗದಾಂ ಚಿಕ್ಷೇಪ ಸತ್ವರಂ ।
ಗಜೇನ ಪಾತಯನ್ವೀರಾ ಜಗರ್ಜ ಘನವದ್ಬಲೀ ॥ ೨೧ ॥

ಗದಾಪ್ರಹಾರಪತಿತಂ ಕಿಂಚಿದ್ವ್ಯಾಕುಲಮಾನಸಂ ।
ಅನಿರುದ್ಧಂ ಮೃಧೇ ವೀಕ್ಷ್ಯ ಯಾದವಾಃ ಕ್ರೋಧಪೂರಿತಾಃ ॥ ೨೨ ॥

ತದೈವ ತೇಡುಃ ಕಾಲಿಂಗಂ ಬಾಣೈಸ್ತೀಕ್ಷ್ಣೈಃ ಸ್ಫುರತ್ಪ್ರಭೈಃ ।
ಸಮಾಂಸಮುದ್ಭಟಂ ಶ್ಯೇನಂ ಕುರುರಾಶ್ಚಂಚುಭಿರ್ಯಥಾ ॥ ೨೩ ॥

---

೨೦. ಓ ಮೈಥಿಲೇಶ್ವರ! ಹೀಗೆ ಭವಣೆಗೊಳಗಾಗಿ ಹೋರಾಡಲಾರದೆ ಹಿಮ್ಮೆಟ್ಟಿ ಓಡಿಹೋಗುತ್ತಿರುವ ತನ್ನ ಸೇನೆಯನ್ನು ಕಂಡು ಆ ಕಲಿಂಗರಾಜನು ತನ್ನ ಕವಚವು ಛಿದ್ರವಾಗಿರುವುದನ್ನೂ ಲಕ್ಷಿಸದೆ ಕೋಪೋದ್ದೀಪಿತನಾಗಿ ಆನೆಯನ್ನೇರಿ ಬಂದನು.

೨೧. ಅನಂತರ ಆ ವೀರನು ತಾನು ಕುಳಿತಿದ್ದ ಆನೆಯನ್ನು ನುಗ್ಗಿಸಿ ಎದುರು ಪಕ್ಷದ ವೀರರನ್ನು ನೆಲಕ್ಕೆ ಉರುಳಿಸುತ್ತಾ, ಕೋಪದಿಂದ ನೂರನಲವತ್ತು ಭಾರ ತೂಕವುಳ್ಳ ಗದೆಯನ್ನು ಆ ಅನಿರುದ್ಧನಮೇಲೆ ಬೀಸಿ ಎಸೆದು, ಮೇಘದಂತೆ ಒಂದುಭಾರಿ ಸಿಂಹನಾದಮಾಡಿದನು.

೨೨. ರಾಜೇಂದ್ರ! ಆ ಗದಾಪ್ರಹಾರದಿಂದ ಅನಿರುದ್ಧನು ನೆಲಕ್ಕೆ ಬಿದ್ದು, ವ್ಯಾಕುಲತೆಗೊಳಗಾದುದನ್ನು ಕಂಡು ಯಾದವರು ಕೋಪಾಕ್ರಾಂತರಾದರು.

೨೩. ಆಗ ಆ ಯಾದವರು ಮಾಂಸವನ್ನು ತೆಗೆದುಕೊಂಡು ಹೋಗುತ್ತಿರುವ ಬಲಾಢ್ಯವಾದ ಗಿಡುಗನನ್ನು ತಮ್ಮ ಕೊಕ್ಕುಗಳಿಂದ ಕುಕ್ಕುವ ಕುರರ ಪಕ್ಷಿಗಳಂತೆ ಆ ಕಾಳಿಂಗರಾಜನನ್ನು ಅತಿ ಮೊನಚಾಗಿ ಥಳಥಳಿಸುತ್ತಿರುವ ಬಾಣಗಳಿಂದ ಪ್ರಹರಿಸಿದರು.

ಕಾಲಿಂಗೋಽಪಿ ತದಾ ಕ್ರುದ್ಧಃ ಸಜ್ಜಂ ಕೃತ್ವಾ ಧನುಃ ಸ್ವಯಂ ।
ಟಂಕಾರಯನ್ಮುಹುರ್ಬಾಣೈರ್ಬಾಣಾಂಶ್ಚೂರ್ಣೀಚಕಾರ ಹ ॥ ೨೪ ॥

ಗದೋ ಗದಾಂ ಸಮಾದಾಯ ಬಲದೇವಾನುಜೋ ಬಲೀ ।
ತದ್ಗಜಂ ತಾಡಯಾಮಾಸ ವಾಮಹಸ್ತೇನ ಮೈಥಿಲ ॥ ೨೫ ॥

ಅರ್ಧಚಂದ್ರಪ್ರಹಾರೇಣ ವಿಶೀರ್ಣೋಽಭೂದ್ಗಜಸ್ತಥಾ ।
ಇಂದ್ರವಜ್ರಪ್ರಹಾರೇಣ ಗಂಡಶೈಲೋ ಯಥಾ ನೃಪ ॥ ೨೬ ॥

ಕಲಿಂಗಃ ಪತಿತೋ ಭೂತ್ವಾ ಗೃಹೀತ್ವಾ ಮಹತೀಂ ಗದಾಂ ।
ಗದಂ ಚ ತಾಡಯಾಮಾಸ ಕಾಲಿಂಗಂ ಚ ಗದಸ್ತದಾ ॥ ೨೭ ॥

---

೨೪. ಆ ಕಳಿಂಗರಾಜನೂ ಸಹ ಆ ಪ್ರಹಾರದಿಂದ ಕುಪಿತನಾಗಿ, ತನ್ನ ಬಿಲ್ಲನ್ನು ಹೆದೆಯೇರಿಸಿ ಅದನ್ನು ಪುನಃ ಪುನಃ ಜೇವೊಡೆಯುತ್ತಾ, ಆ ಯಾದವರ ಬಾಣಗಳನ್ನು ತನ್ನ ಬಾಣಗಳಿಂದ ತುಂಡರಿಸಿಬಿಟ್ಟನು.

೨೫. ಓ ಮಿಥಿಲಾಧಿರಾಜಾ! ಆಗ ಬಲರಾಮನ ಚಿಕ್ಕ ತಮ್ಮನೂ ಬಲಾಢ್ಯನೂ ಆದ ಗದನೆಂಬುವನು ತನ್ನ ಎಡಗೈಯಿಂದ ಆ ಕಳಿಂಗರಾಜನು ಕುಳಿತಿದ್ದ ಆನೆಯನ್ನು ಅಪ್ಪಳಿಸಿದನು.

೨೬. ಓ ನೃಪೇಂದ್ರ! ಅರ್ಧಚಂದ್ರಾಕೃತಿಯಾಗಿ ಕೈಯನ್ನು ಮುಷ್ಟಿಗಟ್ಟಿ ಹೊಡೆದ ಆ ಗದನ ಏಟಿಗೆ ಆ ಕಳಿಂಗರಾಜನ ಆನೆಯು ಇಂದ್ರನ ವಜ್ರಾಯುಧ ಪ್ರಹಾರದಿಂದ ಭಾರಿ ಬೆಟ್ಟದ ಬಂಡೆಯು ಪುಡಿಪುಡಿಯಾಗಿ ಉರುಳುವಂತೆ ಅಂಗಾಂಗಗಳೆಲ್ಲವೂ ಛಿದ್ರಛಿದ್ರವಾಗಿ ಬಿದ್ದುಹೋಯಿತು.

೨೭. ಆ ಆನೆಯ ಜೊತೆಯಲ್ಲೇ ಆ ಕಳಿಂಗರಾಜನೂ ನೆಲಕ್ಕೆ ಬಿದ್ದನು. ಆದರೂ ಅವನು ಕೂಡಲೇ ಮೇಲಕ್ಕೆದ್ದು ಭಾರಿಯಾದ ಗದೆಯೊಂದನ್ನು ತೆಗೆದುಕೊಂಡು ಆ ಗದನ ಮೇಲೆ ಗುರಿಯಿಟ್ಟು ಹೊಡೆದನು. ಆದರಂತೆ ಆವನೂ ಕೂಡ ಅವನನ್ನು ಪ್ರತಿಯಾಗಿ ಪ್ರಹರಿಸಿದನು.

ಕಾಲಿಂಗಗದಯೋಸ್ತತ್ರ ಘೋರಂ ಯುದ್ಧಂ ಬಭೂವ ಹ ।
ವಿಸ್ಫುಲಿಂಗಾನ್ ಕ್ಷರಂತ್ಯೌ ದ್ವೇ ಗದೇ ಚೂರ್ಣೇ ಬಭೂವತುಃ ॥ ೨೮ ॥

ಗದೋ ಗೃಹೀತ್ವಾ ಕಾಲಿಂಗಂ ಪಾತಯಿತ್ವಾ ರಣಾಂಗಣೇ ।
ಚಕರ್ಷ ಸ್ವಕರೇಣಾಶು ಫಣಿನಂ ಗರುಡೋ ಯಥಾ ॥ ೨೯ ॥

ಗದಾಪ್ರಹಾರವ್ಯಥಿತಶ್ಚೂರ್ಣಿತಾಸ್ಥಿಃ ಕಲಿಂಗರಾಟ್ ।
ಆಯಯೌ ಶರಣಂ ಸೋಽಪಿ ಪ್ರದ್ಯುಮ್ನಸ್ಯ ಮಹಾತ್ಮನಃ ॥ ೩೦ ॥

ದತ್ವಾ ಬಲಿಂ ಪ್ರಾಹ ಕಲಿಂಗರಾಜ-
ಸ್ತ್ವಂ ದೇವದೇವಃ ಪರಮೇಶ್ವರೋಽಸಿ ।

---

೨೮. ಆಗ ಆ ಕಳಿಂಗನಿಗೂ ಗದನಿಗೂ ಭಾರಿ ಹೋರಾಟವು ಜರುಗಿತು. ಕೊನೆಗೆ ಆ ವೀರರಿಬ್ಬರ ಗದೆಗಳೆರಡೂ ಕಿಡಿಗಳನ್ನು ಕಾರುತ್ತಾ ಪುಡಿಪುಡಿಯಾಗಿ ನೆಲದ ಮೇಲೆ ಬಿದ್ದುಹೋದುವು.

೨೯. ಕೂಡಲೇ ಆ ಗದನು ಕಳಿಂಗರಾಜನನ್ನು ಗಕ್ಕನೆ ಹಿಡಿದು ನೆಲದ ಮೇಲೆ ಕೆಡಹಿದನು. ಬಳಿಕ ಗರುತ್ಮಂತನು ಹಾವನ್ನು ಹಿಡಿದೆಳೆಯುವಂತೆ ಅವನನ್ನು ತನ್ನ ಕೈಯಿಂದ ಎಳದಾಡತೊಡಗಿದನು.

೩೦. ಓ ರಾಜೇಂದ್ರ ! ಆ ವೇಳೆಗೆ ಆ ಕಳಿಂಗಾಧಿಪತಿಯು ಗದನ ಗದಾ ಪ್ರಹಾರದಿಂದ ಬಹಳವಾಗಿ ನೊಂದಿದ್ದನು. ಅವನ ಮೂಳೆಗಳೆಲ್ಲವೂ ಮುರಿದು ಹೋಗಿದ್ದಿತು. ಆದುದರಿಂದ ಮುಂದೆ ಹೋರಾಡಲು ಆಗದೆ ಆ ವೀರನೂ ಸಹ ಮಹಾತ್ಮನಾದ ಪ್ರದ್ಯುಮ್ನನಿಗೆ ಶರಣಾಗತನಾದನು.

೩೧. ಅನಂತರ ಆ ಕಲಿಂಗೇಶ್ವರನು ಪ್ರದ್ಯುಮ್ನನಿಗೆ ಕಪ್ಪಕಾಣಿಕೆಗಳನ್ನೊಪ್ಪಿಸಿ ಓ ಮಹಾತ್ಮಾ, ನೀನೇ ದೇವಾಧಿದೇವನಾದ ಪರಮಪುರುಷನಾಗಿರುವೆ. ಇಂತಹ

ಕಃ ಕ್ರೋಧವಂತಂ ಪ್ರಸಹೇತ ಕೌ ತ್ವಾಂ
ಜನೋ ಯಥಾ ದಂಡಧರಂ ನಮಸ್ತೇ ॥ ೩೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ-
ಸಂವಾದೇ ಕಚ್ಛಕಲಿಂಗದೇಶ ವಿಜಯೋ
ನಾಮ ಪಂಚಮೋಽಧ್ಯಾಯಃ

ನೀನು ಕುಪಿತನಾಗಿ ಸೆಣಸಲು ನಿಂತರೆ ಯಮನನ್ನು ಹೇಗೋ ಹಾಗೆ ಈ ಭೂಮಿಯಲ್ಲಿ ನಿನ್ನನ್ನು ತಡೆಯಬಲ್ಲವರಾರು. ?ಓ ಪ್ರಭೂ! ನಿನಗೆ ನಮಸ್ಕಾರವು ಎಂದು ಸ್ತುತಿಸಿದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ನಾರದಬಹುಲಾಶ್ವ
ಸಂವಾದದಲ್ಲಿ ಕಚ್ಛಕಲಿಂಗದೇಶವಿಜಯವೆಂಬ ಐದನೆಯ
ಅಧ್ಯಾಯವು ಮುಗಿದದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಷಷ್ಠೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಇತ್ಥಂ ಜಿತ್ವಾಥ ಕಾಲಿಂಗಂ ಪ್ರದ್ಯುಮ್ನೋ ಯಾದವೇಶ್ವರಃ ।
ಜಗಾಮ ಮರುಧನ್ವಾನಂ ಜಲಂ ವೈಶ್ವಾನರೋ ಯಥಾ ॥ ೧ ॥

ಗಿರಿದುರ್ಗಸಮಾಯುಕ್ತಂ ಧನ್ವದೇಶಾಧಿಪಂ ಗಯಂ ।
ಉದ್ಧವಂ ಪ್ರೇಷಯಾಮಾಸ ಜ್ಞಾತ್ವಾ ತಂ ಯಾದವೇಶ್ವರಃ ॥ ೨ ॥

ಗಿರಿದುರ್ಗೇ ಗತಃ ಸಾಕ್ಷಾದುದ್ಧವೋ ಬುದ್ಧಿಸತ್ತಮಃ ।
ಸಭಾಮೇತ್ಯ ಗಯಂ ಪ್ರಾಹ ಶೃಣು ರಾಜನ್ಮಹಾಮತೇ ॥ ೩ ॥

ಆರನೆಯ ಅಧ್ಯಾಯವು

೧. ಓ ರಾಜೇಂದ್ರ ! ಈರೀತಿಯಾಗಿ ಯಾದವೇಶ್ವರನಾದ ಆ ಪ್ರದ್ಯುಮ್ನನು ಕಲಿಂಗರಾಜನನ್ನು ಜಯಿಸಿದನಂತರ ಯಜ್ಞೇಶ್ವರನು ನೀರನ್ನು ಪ್ರವೇಶಿಸುವಂತೆ ಮರುಧನ್ವವೆಂಬ ದೇಶದಮೇಲೆ ದಂಡೆತ್ತಿ ಹೊರಟನು.

೨. ಆ ಧನ್ವದೇಶವು ಆಯಕಟ್ಟಾದ ಬೆಟ್ಟಗಳ ಮೇಲಿರುವ ದುರ್ಗಗಳಿಂದ ನಿಬಿಡವಾಗಿರುವುದರಿಂದ ಪ್ರದ್ಯುಮ್ನನು ತನ್ನ ಮಂತ್ರಿಯಾದ ಉದ್ಧವನನ್ನು ಕರೆದು ಆ ದೇಶದ ಅಧಿಪತಿಯಾದ ಗಯನ ಬಳಿಗೆ ಕಳುಹಿಸಿದನು.

೩. ಆಗ ಆ ಪ್ರದ್ಯುಮ್ನನ ಅಪ್ಪಣೆಯಂತೆ ಮಹಾಬುದ್ಧಿಶಾಲಿಯಾದ ಆ ಉದ್ಧವನು ಆ ಧನ್ವದೇಶದ ಗಿರಿದುರ್ಗವೊಂದರಲ್ಲಿ ನೆಲಸಿದ್ದ ರಾಜನ ಸಭಾಮಧ್ಯವನ್ನು ಪ್ರವೇಶಿಸಿ ಆತನನ್ನು ಕುರಿತು ಇಂತೆಂದು ನುಡಿದನು.

ಉಗ್ರಸೇನೋ ಯಾದವೇಂದ್ರೋ ರಾಜರಾಜೇಶ್ವರೋ ಮಹಾನ್ ।
ಜಂಬೂದ್ವೀಪನೃಪಾನ್ ಜಿತ್ವಾ ರಾಜಸೂಯಂ ಕರಿಷ್ಯತಿ　　　॥ ೪ ॥

ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ಸ್ವಯಂ ।
ಅಸಂಖ್ಯಬ್ರಹ್ಮಾಂಡಪತಿರ್ಮಂತ್ರೀ ತಸ್ಯಾಭವದ್ಧರಿಃ　　　॥ ೫ ॥

ತೇನ ವೈ ಪ್ರೇಷಿತಃ ಸಾಕ್ಷಾತ್ಪ್ರದ್ಯುಮ್ನೋ ಧನ್ವಿನಾಂ ವರಃ ।
ಶೀಘ್ರಂ ತಸ್ಮೈ ಬಲಿಂ ನೀತ್ವಾ ಕುಲಕೌಶಲಹೇತವೇ　　　॥ ೬ ॥

॥ ಶ್ರೀ ನಾರದ ಉವಾಚ ॥

ಶ್ರುತ್ವಾ ಕಿಂಚಿತ್ಪ್ರಕುಪಿತೋ ವೀರ್ಯಶೌರ್ಯಮದೋದ್ಧತಃ ।
ಉದ್ಧವಂ ಪ್ರಾಹ ನೃಪತಿರ್ಗಯೋ ನಾಮ ಮಹಾಬಲಃ　　　॥ ೭ ॥

---

೪. ಎಲೈ ಬುದ್ಧಿಶಾಲಿಯಾದ ಗಯರಾಜನೇ ! ಆಲಿಸು. ಉಗ್ರಸೇನನೆಂಬ ಯಾದವೇಶ್ವರನಿರುವನು. ಆ ಮಹಾತ್ಮನು ರಾಜರಿಗೆಲ್ಲಾ ಅಧಿರಾಜನೆನಿಸಿರುವನು. ಆತನು ಈಗ ಈ ಜಂಬೂದ್ವೀಪದಲ್ಲಿರುವ ಸಮಸ್ತರಾದ ರಾಜರನ್ನೂ ಜಯಿಸಿ ರಾಜಸೂಯವೆಂಬ ಯಾಗವನ್ನು ಮಾಡಲೆಳಸಿರುವನು.

೫. ಆ ಯಾದವೇಂದ್ರನಿಗೆ ಅಸಂಖ್ಯಾತವಾದ ಬ್ರಹ್ಮಾಂಡಗಳಿಗೆಲ್ಲಾ ಅಧಿಪತಿಯೂ, ಸಮಸ್ತಕಲ್ಯಾಣಗುಣಸಂಪನ್ನನೂ, ಭಗವಂತನೂ ಆದ ಸಾಕ್ಷಾತ್ ಶ್ರೀಕೃಷ್ಣನೇ ಮಂತ್ರಿಯಾಗಿರುವನು.

೬. ಆ ಶ್ರೀಕೃಷ್ಣನೇ ಧನುರ್ಧರಾಗ್ರೇಸರನಾದ ಪ್ರದ್ಯುಮ್ನಕುಮಾರನನ್ನು ದಿಗ್ವಿಜಯಾರ್ಥವಾಗಿ ತಾನಾಗಿ ಕಳುಹಿಸಿದನು. ಆದುದರಿಂದ ನಿನ್ನ ಸಂತತಿಯು ಕ್ಷೇಮವಾಗಿರಬೇಕೆಂದು ನೀನು ಬಯಸುವ ಪಕ್ಷಕ್ಕೆ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಹೋಗಿ ಬೇಗನೆ ಆ ಪ್ರದ್ಯುಮ್ನನಿಗೆ ಒಪ್ಪಿಸು ಎಂದನು.

೭. ಓ ಬಹುಲಾಶ್ವನರೇಂದ್ರ ! ಈ ರೀತಿ ಉದ್ಧವನು ನುಡಿದುದನ್ನು ಕೇಳಿ, ವೀರ್ಯಬಲದಿಂದಲೂ, ದೇಹಬಲದಿಂದಲೂ ಕೊಬ್ಬಿದ್ದ ಆ ಗಯನೆಂಬ ಅರಸನು ಸ್ವಲ್ಪ ಕುಪಿತನೇ ಆಗಿ ಆ ಉದ್ಧವನನ್ನು ಕುರಿತು—

॥ ಗಯ ಉವಾಚ ॥

ಬಲಿಂ ತಸ್ಮೈ ನ ದಾಸ್ಯಾಮಿ ವಿನಾ ಯುದ್ಧಂ ಮಹಾಮತೇ ।
ಅಲ್ಪಕಾಲೇನ ಯದವೋ ಗತಾ ವೃದ್ಧಿಂ ಭವಾದೃಶಾಃ ॥ ೮ ॥

ಇತ್ಯುಕ್ತ ಉದ್ಧವೋ ರಾಜಞ್ಛಂಬರಾರಿಂ ಸಮೇತ್ಯ ಸಃ ।
ಸರ್ವೇಷಾಂ ಯಾದವಾನಾಂ ಚ ಶೃಣ್ವತಾಂ ಪ್ರಶಶಂಸ ಹ ॥ ೯ ॥

ತದೈವ ರುಕ್ಮಿಣೀಪುತ್ರೋ ಗಿರಿದುರ್ಗಂ ಸಮಾಯಯೌ ।
ತತ್ಸೈನ್ಯೈರ್ಯಾದವೈಃ ಸಾರ್ಧಂ ಘೋರಂ ಯುದ್ಧಂ ಬಭೂವ ಹ ॥ ೧೦ ॥

ಚೂರ್ಣಯನ್ಗಜಪಾದ್ಯೈಶ್ಚ ನಾಗರಾನ್ಭೂಜನಾನ್ದ್ರುಮಾನ್ ।
ಅಕ್ಷೌಹಿಣೀಭ್ಯಾಂ ಸಂಯುಕ್ತೋ ಗಯೋ ಯೋದ್ಧುಂ ವಿನಿರ್ಯಯೌ ॥ ೧೧ ॥

---

೮. ಎಲೈ ಬುದ್ಧಿಶಾಲಿಯಾದ ಮಂತ್ರಿಯೇ! ಆ ಪ್ರದ್ಯುಮ್ನನೊಡನೆ ಹೋರಾಡದೆ ನಾನು ಕಪ್ಪಕಾಣಿಕೆಗಳನ್ನು ಕೊಡಲಾರೆನು. ನಿನ್ನಂತಹ ಈ ಯಾದವರೆಲ್ಲರೂ ಬಹು ಬೇಗನೆ ಅಭಿವೃದ್ಧಿಗೆ ಬಂದುಬಿಟ್ಟಿರುವರಲ್ಲವೇ? ಎಂದು ನುಡಿದನು.

೯. ಓ ರಾಜಾ! ಈ ರೀತಿ ಉತ್ತರ ಪಡೆದ ಉದ್ಧವನು ಅಲ್ಲಿಂದ ಹೊರಟು, ಪ್ರದ್ಯುಮ್ನನ ಬಳಿಗೆ ಬಂದು ಯಾದವ ವೀರರೆಲ್ಲರೂ ಕೇಳುವಂತೆ ಅಲ್ಲಿ ನಡೆದ ಸಂಗತಿಯನ್ನು ಬಿನ್ನವಿಸಿದನು.

೧೦. ಆ ಕೂಡಲೇ ಪ್ರದ್ಯುಮ್ನಕುಮಾರನು ದಂಡೆತ್ತಿ ಆ ರಾಜನಿದ್ದ ಗಿರಿದುರ್ಗಕ್ಕೆ ಮುತ್ತಿಗೆ ಹಾಕಿದನು. ಒಡನೆಯೇ ಅಲ್ಲಿದ್ದ ಸೇನೆಗಳಿಗೂ, ಯಾದವ ಸೇನೆಗಳಿಗೂ ಅತಿಭಯಂಕರವಾದ ಯುದ್ಧವು ಜರುಗಿತು.

೧೧. ಆಗ ಆ ಗಯರಾಜನು ತನ್ನ ಕಡೆಯ ಎರಡು ಅಕ್ಷೋಹಿಣಿ ಸೇನೆಗಳೊಡನೆ ಹೊರಟು, ತನ್ನ ಸೇನೆಯ ಆನೆಗಳ ತುಳಿತದಿಂದ ಎದುರಿಗೆ ಸಿಕ್ಕಿದ ಪಟ್ಟಣಿಗರನ್ನೂ, ಇತರ ಜನರನ್ನೂ, ಮರಗಿಡಗಳನ್ನೂ, ಪುಡಿಪುಡಿಮಾಡುತ್ತಾ, ಯುದ್ಧಭೂಮಿಗೆ ಬಂದನು.

ರಥಿನೋ ರಥಿಭಿಸ್ತತ್ರ ಗಜವಾಹಾ ಗಜೈಃ ಸಹ ।
ಅಶ್ವವಾಹೈರಶ್ವವಾಹಾ ವೀರಾ ವೀರೈಃ ಪರಸ್ಪರಂ ॥ ೧೨ ॥

ಯುಯುಧುಸ್ತೀಕ್ಷ್ಣಬಾಣೌಘೈಶ್ಚರ್ಮಖಡ್ಗಗದರ್ಷ್ಟಿಭಿಃ ।
ಪಾಶೈಃ ಪರಶ್ವಧೈ ರಾಜನ್ ಶತಘ್ನೀಭಿರ್ಭುಶುಂಡಿಭಿಃ ॥ ೧೩ ॥

ಹನ್ಯಮಾನಾಶ್ಚ ಯದುಭಿರ್ಗಯವೀರಾ ಭಯಾತುರಾಃ ।
ಸರ್ವೇ ಸ್ವಂ ಸ್ವಂ ರಥಂ ತ್ಯಕ್ತ್ವಾ ದುದ್ರುವುಸ್ತೇ ದಿಶೋ ದಶ ॥ ೧೪ ॥

ಪಲಾಯಮಾನೇ ಸ್ವಬಲೇ ಗಯೋ ನಾಮ ಮಹಾಬಲಃ ।
ವಿಶಾಕೀ ಪ್ರಯಯೌ ಯೋದ್ಧುಂ ಧನುಷ್ಟಂಕಾರಯನ್ಮುಹುಃ ॥ ೧೫ ॥

---

೧೨. ಓ ರಾಜೇಂದ್ರ! ಆಗ ಎರಡು ಕಡೆಯಲ್ಲಿರುವ ಯೋಧರೂ ಪರಸ್ಪರ ರಥಿಕರು ರಥಿಕರೊಡನೆಯೂ, ಆನೆಯನ್ನೇರಿದ್ದ ಭಟ್ಟರು ಅದೇ ರೀತಿ ಆನೆಯನ್ನು ಹತ್ತಿ ಕುಳಿತಿದ್ದ ವೀರರೊಡನೆಯೂ, ಕುದುರೆಯ ಪಡೆಯವರು ಕುದುರೆಯ ಪಡೆಯವರೊಡನೆಯೂ, ಕಾಲಾಳುಗಳು ಕಾಲಾಳುಗಳೊಡನೆಯೂ ಕಾದಾಡಿದರು.

೧೩. ಮತ್ತು ಆ ಉಭಯ ಸೇನೆಗಳ ವೀರರು ಕೂರಾದ ಅಲುಗುಗಳುಳ್ಳ ಬಾಣಪರಂಪರೆಗಳಿಂದಲೂ, ಪಾಶ, ಪರಶ್ವಧ, ಭುಸುಂಡಿ, ಎಂಬ ಆಯುಧಗಳಿಂದಲೂ ತೋಪುಗಳಿಂದಲೂ ಬಹು ಘೋರವಾಗಿ ಹೋರಾಡಿದರು.

೧೪. ಹೀಗೆ ಯುದ್ಧವು ನಡೆಯುತ್ತಿದ್ದಾಗ ಗಯನ ಕಡೆಯ ಸೈನಿಕರು ಯಾದವರೊಡನೆ ತಮ್ಮ ಪರಾಕ್ರಮವೇನೂ ಸಾಗದೆಂದು ತಿಳಿದವರಾಗಿ ಭಯದಿಂದ ತತ್ತರಿಸುತ್ತಾ ತಮ್ಮ ತಮ್ಮ ತೇರುಗಳನ್ನೂ, ವಾಹನಗಳನ್ನೂ ಬಿಟ್ಟು ದಿಕ್ಕು ದಿಕ್ಕುಗಳಿಗೆ ಓಡಿಹೋದರು.

೧೫. ಈ ರೀತಿ ತನ್ನ ಕಡೆಯ ಯೋಧರು ಹಿಮ್ಮೆಟ್ಟಿ ಓಡಿಹೋದರೂ ಗಮನಿಸದೆ ಆ ಮಹಾಬಲಶಾಲಿಯಾದ ಗಯನು ತಾನೊಬ್ಬನೆ ಬಿಲ್ಲಿಗೆ ಹೆದೆಯೇರಿಸಿ ಪ್ರು ಟಂಕಾರವಾಡುತ್ತಾ ಕಾದಾಡಲು ಮುಂದೆ ಬಂದನು.

ದೀಪ್ತಿಮಾನ್ಕೃಷ್ಣಪುತ್ರಸ್ತು ಧನುರ್ಬಾಣೈ ರಿಪೋರ್ಹಯಾನ್ ।
ಏಕೇನ ಸಾರಥಿಂ ಜಘ್ನೇ ದ್ವಾಭ್ಯಾಂ ಕೇತುಂ ಸಮುಚ್ಛ್ರಿತಂ ॥ ೧೬ ॥

ರಥಂ ಚ ಬಾಣವಿಂಶತ್ಯಾ ಕವಚಂ ಪಂಚಭಿಃ ಪುನಃ ।
ಧನುಸ್ತಸ್ಯಾಪಿ ಚಿಚ್ಛೇದ ಶತಬಾಣೈರ್ಮಹಾಬಲಃ ॥ ೧೭ ॥

ಗಯೋಽನ್ಯದ್ಧನುರಾದಾಯ ದೀಪ್ತಿಮಂತಂ ಹರೇಃ ಸುತಂ ।
ಜಘಾನ ಬಾಣವಿಂಶತ್ಯಾ ಜಗರ್ಜ ಘನವದ್ಬಲೀ ॥ ೧೮ ॥

ತತ್ಪ್ರಹಾರೇಣ ಸಮರೇ ಕಿಂಚಿದ್ವ್ಯಾಕುಲಮಾನಸಃ ।
ದೀಪ್ತಿಮಾನಥ ಜಗ್ರಾಹ ಶಕ್ತಿಂ ಜ್ಯೋತಿರ್ಮಯೀಂ ದೃಢಾಂ ॥ ೧೯ ॥

ಚಿಕ್ಷೇಪ ಭ್ರಾಮಯಿತ್ವಾ ತಾಂ ಗಯಾಖ್ಯಾಯ ಮಹಾತ್ಮನೇ ।
ಸಾಪಿ ತದ್ಧೃದಯಂ ಭಿತ್ವಾ ಪಪೌ ಚ ರುಧಿರಂ ಮಹತ್ ॥ ೨೦ ॥

೧೬-೧೭. ಆಗ ಶ್ರೀಕೃಷ್ಣನ ಪುತ್ರನಾದ ದೀಪ್ತಿಮಂತನೆಂಬುವನು ತನ್ನ ಧನುರ್ಬಾಣಗಳಿಂದ ಆ ವೀರನ ತೇರಿಗೆ ಕಟ್ಟಿದ್ದ ಕುದುರೆಗಳನ್ನೂ, ಬಾಣಗಳಿಂದ ಆ ವೀರನು ತೊಟ್ಟಿದ್ದ ಉಕ್ಕಿನ ಕವಚವನ್ನೂ, ನೂರು ಬಾಣಗಳಿಂದ ಆತನ ಕೈಲಿದ್ದ ಧನುಸ್ಸನ್ನೂ ತುಂಡರಿಸಿದನು.

೧೮. ಆಗ ವೀರನಾದ ಗಯನು ಜೇರೊಂದು ಬಿಲ್ಲನ್ನು ತೆಗೆದುಕೊಂಡು ಆ ಕೃಷ್ಣಪುತ್ರನಾದ ದೀಪ್ತಿಮಂತನನ್ನು ಏಕಕಾಲದಲ್ಲಿ ಇಪ್ಪತ್ತು ಬಾಣಗಳಿಂದ ಘಾಸಿಗೊಳಿಸಿ ಕಾರ್ಗಾಲದ ಮೋಡದಂತೆ ಗಟ್ಟಿಯಾಗಿ ಅಬ್ಬರಿಸಿದನು.

೧೯. ಈ ಬಾಣಪ್ರಹಾರದಿಂದ ದೀಪ್ತಿಮಂತನು ಸ್ವಲ್ಪ ಕಳವಳಕ್ಕೀಡಾದರೂ ಅದನ್ನು ಪರಿಗಣಿಸದೆ ಕೂಡಲೇ ತೇಜಸ್ಸಿನಿಂದ ಥಳಥಳಿಸುತ್ತಿರುವ ದೃಢವಾದ ಶಕ್ತಿಯೊಂದನ್ನು ಕೈಗೆ ತೆಗೆದುಕೊಂಡನು.

೨೦. ಬಳಿಕ ಅದನ್ನು ಗಿರಿಗಿರನೆ ತಿರುಗಿಸಿ ಜೋರಾಗಿ ಆ ಗಯನಿಗೆ ಗುರಿಯಿಟ್ಟು ಬೀಸಿದನು. ಕೂಡಲೇ ಆ ಶಕ್ತಿಯು ಆ ಗಯನ ಎದೆಯನ್ನು ಭೇದಿಸಿ ಬೇಕಾದಷ್ಟು ರಕ್ತವನ್ನು ಪಾನಮಾಡಿತು.

ಗಯೋಽಪಿ ಪತಿತೋ ರಾಜನ್ಮೂರ್ಚ್ಛಿತೋಽಭೂದ್ರಣಾಂಗಣೇ।
ದೀಪ್ತಿಮಾಂಶ್ಚ ಧನುಷ್ಕೋಟ್ಯಾ ಕರ್ಷಯಂಸ್ತದ್ಗಲೇ ರಿಪುಂ ॥ ೨೧ ॥

ಪ್ರದ್ಯುಮ್ನಸ್ಯ ಪುರಃ ಪ್ರಾಗಾತ್ಕದ್ರುಜಂ ಗರುಡೋ ಯಥಾ।
ನರದುಂದುಭಯೋ ನೇದುರ್ದೇವದುಂದುಭಯಸ್ತದಾ ॥
ಆಕಾಶಾದ್ವವೃಷುರ್ದೇವಾಃ ಪುಷ್ಪವರ್ಷಾಣಿ ಪಾರ್ಥಿವಾಃ ॥ ೨೨ ॥

ತದೈವ ತೇನಾಪಿ ಸಮರ್ಚಿತಾಂಘ್ರಿಃ
ಶ್ರೀಕೃಷ್ಣಪುತ್ರೋ ನೃಪ ಶಂಬರಾರಿಃ।
ಅವಂತಿಕಾಂ ಸ ಪ್ರಯಯೌ ಮಹಾತ್ಮಾ
ಶ್ರೀಕರ್ಣಿಕಾಂ ಸ್ವರ್ಣಮಯೀಮಿವಾಲಿಃ ॥ ೨೩ ॥

ಶ್ರುತ್ವಾಗತಂ ತಂ ಜಯಸೇನರಾಜಃ
ಸಮರ್ಚಯಾಮಾಸ ಸ ಮಾಲವಾಧಿಪಃ।
ಆನೀಯ ಮೃದ್ಧಾನ್ಸುಬಲಿಂ ಮಹಾತ್ಮನೇ
ಪ್ರಧರ್ಷಿತೋ ಮೈಥಿಲ ತತ್ಪ್ರಭಾವವಿತ್ ॥ ೨೪ ॥

೨೧–೨೨. ಓ ರಾಜೇಂದ್ರ! ಆಗ ಆ ವೀರನಾದ ಗಯನು ರಣಾಂಗಣದಲ್ಲಿ ಮೂರ್ಛಾಕ್ರಾಂತನಾಗಿ ನೆಲದ ಮೇಲೆ ಕುಸಿದುಬಿದ್ದನು. ಆಗ ದೀಪ್ತಿಮಂತನು ತನ್ನ ಬಿಲ್ಲಿನ ತುದಿಯಿಂದ ಆ ಗಯನ ಕುತ್ತಿಗೆಗೆ ಹಾಕಿ ಗರುತ್ಮಂತನು ಸರ್ಪವನ್ನು ಎಳದಾಡುವಂತೆ ಅವನನ್ನು ನೆಲದಮೇಲೆಳೆದುಕೊಂಡು ಪ್ರದ್ಯುಮ್ನನ ಎದುರಿಗೆ ಬಂದನು. ಆ ಸಮಯದಲ್ಲಿ ಹರ್ಷಸೂಚಕವಾಗಿ ಯಾದವರ ಕಡೆಯ ನಗಾರಿಗಳೂ ದೇವತೆಗಳ ದುಂದುಭಿಗಳೂ ಮೊಳಗಿದುವು ಮತ್ತು ಅವರ ಕಡೆಯ ರಾಜರೂ, ದೇವತೆಗಳೂ ಪುಷ್ಪವೃಷ್ಟಿಯನ್ನು ಕರೆದರು.

೨೩. ಅನಂತರ ಶ್ರೀ ಕೃಷ್ಣಪುತ್ರನಾದ ಪ್ರದ್ಯುಮ್ನನು ಆ ಗಯನಿಂದ ಪೂಜಿಸಲ್ಪಟ್ಟವನಾಗಿ ಅಲ್ಲಿಂದ ಹೊರಟು ಸ್ವರ್ಣನಿರ್ಮಿತವಾದ ಕಮಲದ ಕರ್ಣಿಕೆಗೆ ಭ್ರಮರವು ಹೋಗುವಂತೆ ಅವಂತೀನಗರಿ (ಉಜ್ಜಯಿನಿ)ಗೆ ಪ್ರಯಾಣಮಾಡಿದನು.

೨೪. ಓ ಮಿಥಿಲೇಶ್ವರಾ! ಆ ಅವಂತೀರಾಜನಾದ ಜಯಸೇನನೆಂಬ ಅರಸು ಪ್ರದ್ಯುಮ್ನನ ಶೌರ್ಯ ಸಾಹಸಗಳನ್ನು ಚೆನ್ನಾಗಿ ಅರಿತವನಾದುದರಿಂದ, ಅವನು ಬಂದನೆಂಬ ಸುದ್ದಿಯನ್ನು ಕೇಳಿದೊಡನೆಯೇ ಅವನೊಡನೆ ಸೆಣಸಲು ಹೆದರಿ ತನ್ನ

ರಾಜಾಧಿದೇವೀಂ ಸ್ವಪಿತುಃ ಪಿತುಃ ಸ್ವಸಾಂ
ಪ್ರಣಮ್ಯ ತಾಂ ಕೃಷ್ಣಸುತೋ ಮಹಾಮನಾಃ ।
ವಿಂದಾನುವಿಂದೌ ಪರಿರಭ್ಯ ತತ್ಸುತೌ
ಬಭೌ ವೃತೋ ಮಾಲವದೇಶಸಂಭವೈಃ ॥ ೨೫ ॥

ಪ್ರದ್ಯುಮ್ನೋ ಧನ್ವಿನಾಂ ಶ್ರೇಷ್ಠಃ ಪುರೀಂ ಮಾಹಿಷ್ಮತೀಂ ಯಯೌ।
ಯಾದವೈಃ ಸ್ವಬಲೈಃ ಸಾರ್ಧಂ ನರ್ಮದಾಂ ಸಂದದರ್ಶ ಹ ॥ ೨೬ ॥

ರಾಜಿತಾಮಂಬುಕಲ್ಲೋಲೈಃ ಶೃಂಗಾರತಿಲಕಾಮಿವ ।
ವಹಂತೀಂ ಪುಷ್ಪನಿಚಯಮುಷ್ಣಿಹಂ ಮುದ್ರಿಕಾಮಿವ ॥ ೨೭ ॥

ಕಡೆಯ ವೃದ್ಧರನ್ನು ಮುಂದಿಟ್ಟುಕೊಂಡು ಕಪ್ಪಕಾಣಿಕೆಗಳಿಂದ ಆ ಕೃಷ್ಣಪುತ್ರನನ್ನು ಸತ್ಕರಿಸಿದನು.

೨೫. ಅನಂತರ ಮಹಾ ಉದಾರಸ್ವಭಾವದವನಾದ ಆ ಪ್ರದ್ಯುಮ್ನನು ತನ್ನ ತಂದೆಗೆ ಸೋದರತ್ತೆಯಾದ ಆ ಜಯಸೇನರಾಜನ ಪಟ್ಟದ ರಾಣಿಯನ್ನು ನಮಸ್ಕರಿಸಿ ಅವರ ಪುತ್ರರಾದ ವಿಂದ, ಅನುವಿಂದರನ್ನು ಪ್ರೀತಿಯಿಂದ ಆಲಿಂಗಿಸಿ, ಆ ಮಾಲವ ದೇಶದ ಜನರ ನಡುವೆ ಕಂಗೊಳಿಸಿದನು.

೨೬. ಬಳಿಕ ಧನುರ್ಧರಾಗ್ರೇಸರನೆಂದು ಪ್ರಖ್ಯಾತನಾದ ಆ ಪ್ರದ್ಯುಮ್ನ ಕುಮಾರನು ತನ್ನ ಸೇನೆಯೊಡನೆ ಅಲ್ಲಿಂದ ತೆರಳಿ ಮಾಹಿಷ್ಮತೀನಗರಕ್ಕೆ ಬರುತ್ತಾ ಅದರ ಬಳಿಯಲ್ಲಿರುವ ನರ್ಮದಾನದಿಯನ್ನು ಕಂಡನು.

೨೭–೨೮. ಆ ನರ್ಮದಾನದಿಯು ಚಂಚಲವಾದ ತರಂಗಗಳಿಂದ ಕಂಗೊಳಿಸುತ್ತಾ ಇದ್ದುದರಿಂದ ಶೃಂಗಾರರಸಕ್ಕೆ ತಿಲಕಪ್ರಾಯವಾದುದೋ ಎನ್ನುವಂತೆಯೂ ಕಮಲ, ಕಲ್ಹಾರಾದಿಪುಷ್ಪಗಳಿಗೆ ಆಸರೆಯಾಗಿ ಹರಿಯುತ್ತಿದ್ದುದರಿಂದ ಉಷ್ಣಿಕ್ ಎಂಬ ಒಂದು ಬಗೆಯ ಉಂಗರವನ್ನು ಧರಿಸಿರುವಂತೆಯೂ ಶೋಭಿಸುತ್ತಿತ್ತು ಮತ್ತು ತನ್ನ ಎರಡು ಕಡೆಯ ಕರೆಗಳಲ್ಲಿಯೂ ಸಾಲಾಗಿ ಬೆಳೆದ ಸೊಗಸಾಗಿ ಹೂಗಳನ್ನು

ವೇತಸೀ ವೇಣುತರುಭಿಃ ಪುಷ್ಪಿತೈರ್ಮಾರ್ಧವೈರ್ವೃತೈಃ ।
ಸ್ಫುರದ್ಭಿರ್ಮೂರ್ತಿಮದ್ಭಿಶ್ಚ ದೇವೈಃ ಸ್ವರ್ಗನದೀಮಿವ ॥ ೨೮ ॥

ತತ್ತೀರೇ ಶಿಬಿರೈರ್ಯುಕ್ತಃ ಪ್ರದ್ಯುಮ್ನೋ ಯಾದವೇಶ್ವರಃ ।
ಸ್ಥಿತೋಽಭೂದ್ಯಾದವೈಸ್ಸಾಕಂ ದೇವೈರಿಂದ್ರ ಇವ ಪ್ರಭುಃ ॥ ೨೯ ॥

ಇಂದ್ರನೀಲೋ ಮಹಾರಾಜಾ ಜ್ಞಾನೀ ಮಾಹಿಷ್ಮತೀಪತಿಃ ।
ಸ್ವದೂತಂ ಪ್ರೇಷಯಾಮಾಸ ಪ್ರದ್ಯುಮ್ನಾಯ ಮಹಾತ್ಮನೇ ॥ ೩೦ ॥

ಪ್ರದ್ಯುಮ್ನರಾಜಶಿಬಿರೇ ದೂತೋ ನತ್ವಾ ಕೃತಾಂಜಲಿಃ ।
ಉವಾಚ ವಚನಂ ತತ್ರ ಸರ್ವೇಷಾಂ ಶೃಣ್ವತಾಂ ನೃಪ ॥ ೩೧ ॥

ಬಿಟ್ಟಿರುವ ನೀರಂಜಿ, ಬಿದಿರು, ಹಿಪ್ಪೆ ಮುಂತಾದ ಮರಗಳಿಂದ ಸುತ್ತುವರಿಯಲ್ಪಟ್ಟಿದ್ದರಿಂದ ಶರೀರವನ್ನು ಧರಿಸಿರುವ ದೇವತೆಗಳಿಂದ ಪರಿವೃತಳಾದ ಗಂಗಾನದಿಯೋ ಎನ್ನುವಂತೆ ಕಂಗೊಳಿಸುತ್ತಿತ್ತು.

೨೯. ಇಂತಹ ಆ ನರ್ಮದಾನದಿಯ ದಡದಲ್ಲಿ ಯಾದವೇಶ್ವರನಾದ ಪ್ರದ್ಯುಮ್ನನು ತನ್ನ ಸೇನೆಯನ್ನು ಬೀಡುಬಿಟ್ಟು ಆ ವೀರರೆಲ್ಲರ ನಡುವೆ, ದೇವತೆಗಳಿಂದ ಪರಿವೃತನಾದ ಇಂದ್ರನಂತೆ ಮೆರೆದನು.

೩೦. ಓ ರಾಜೇಂದ್ರ ! ಆ ಮಾಹಿಷ್ಮತೀನಗರದ ಅರಸನಾದ ಇಂದ್ರನೀಲ ಮಹಾರಾಜನು ಜಾಣನಾದುದರಿಂದ ಮಹಾತ್ಮನಾದ ಆ ಪ್ರದ್ಯುಮ್ನನ ಬಳಿಗೆ ತನ್ನ ದೂತನನ್ನಟ್ಟಿದ್ದನು.

೩೧–೩೨. ಆ ದೂತನು ಪ್ರದ್ಯುಮ್ನನ ಬಳಿಗೆ ಹೋಗಿ ತನ್ನ ಪ್ರಭುವು ಹೇಳಿ ಕಳಿಸಿದ್ದಂತೆ ಈ ರೀತಿ ನುಡಿದನು. ಹಸ್ತಿನಾಪುರದ ಪ್ರಭುವಾದ ದುರ್ಯೋಧನನಿಂದ

॥ ದೂತ ಉವಾಚ ॥

ಹಸ್ತಿನಾಪುರನಾಥೇನ ಧಾರ್ತರಾಷ್ಟ್ರೇಣ ಧೀಮತಾ ।
ಸ್ಥಾಪಿತೋಽತಿಬಲೋ ವೀರೋ ಬಲಿಂ ಕಸ್ಮೈ ನ ದಾಸ್ಯತಿ ॥ ೩೨ ॥

ಸುಯೋಧನಾಯ ಚೇಚ್ಛಾಭಿರ್ದ್ರವ್ಯಂ ಯಚ್ಛತಿ ಮಾಬಲಾತ್ ।
ಯೋದ್ಧವ್ಯಂ ಚ ಭವದ್ಭಿಶ್ಚ ವಿಫಲೋ ಹಿ ರಣೋಽತ್ರ ವೈ ॥ ೩೩ ॥

॥ ಶ್ರೀ ಪ್ರದ್ಯುಮ್ನ ಉವಾಚ ॥

ಯಥಾ ಗಯೋ ದೂತ ಕಲಿಂಗರಾಡ್ಯಥಾ
ತಥಾಭಿಭೂತೋಽಪಿ ಬಲಿಂ ಪ್ರದಾಸ್ಯತಿ ।
ನೃಪಂ ನ ಜಾನಾತಿ ಮಹೋಗ್ರಸೇನಕಂ
ಮಾಹಿಷ್ಮತೀಶೋಽಯಮತೀವ ರಾಜರಾಟ್ ॥ ೩೪ ॥

ಪ್ರತಿಷ್ಠಿಸಲ್ಪಟ್ಟ ಮಹಾ ಬಲಾಢ್ಯನಾದ ಈ ವೀರನು ಯಾರಿಗೇ ತಾನೇ ಕಪ್ಪಕಾಣಿಕೆಗಳನ್ನು ಕೊಡಹೋಗುವನು ?

೩೩. ಆ ದುರ್ಯೋಧನನಿಗೆ ಕಪ್ಪಕಾಣಿಕೆಗಳನ್ನು ಒಪ್ಪಿಸುವುದೂ ಸಹ ಸ್ವಂತ ಇಚ್ಛೆಯಿಂದಲೇ, ಅಲ್ಲದೆ ಬಲಾತ್ಕಾರದಿಂದಲ್ಲ. ಆದುದರಿಂದ ನೀವು ನನ್ನೊಡನೆ ಯುದ್ಧ ಮಾಡಲೇ ಬೇಕಾದೀತು. ಆದರೆ ನಿಮ್ಮ ಯುದ್ಧೋದ್ಯಮವು ವ್ಯರ್ಥವಾಗುವುದು.

೩೪. ಈ ರೀತಿ ದೂತನಾಡಿದ ಮಾತನ್ನು ಕೇಳಿ, ಪ್ರದ್ಯುಮ್ನನು ಅವನನ್ನು ಕುರಿತು “ಎಲೈ ದೂತನೇ ಇದಕ್ಕೆ ಮೊದಲು ನನ್ನೊಡನೆ ಸೆಣಸಿದ ಕಲಿಂಗರಾಜನಂತೆಯೂ, ಮರುಧನ್ವದೇಶದ ಅರಸನಾದ ಗಯನಂತೆಯೂ ನಿಮ್ಮ ರಾಜನು ಯುದ್ಧ ಮಾಡಿ ಸೋತನಂತರವೇ ಕಪ್ಪವನ್ನು ಕೊಡಬರುವನು. ಈ ಮಾಹಿಷ್ಮತಿಯ ರಾಜನು ತಾನೇ ರಾಜಾಧಿ ರಾಜನೆಂಬ ಹೆಮ್ಮೆಯಿಂದ ಮೆರೆಯುತ್ತಾ ಅನ್ವರ್ಥವಾದ ಹೆಸರುಳ್ಳ ನಮ್ಮ ಪ್ರಭುವಾದ ಉಗ್ರಸೇನನನ್ನು ನಿಜವಾಗಿಯೂ ತಿಳಿಯದೆ ಇರುವನು” ಎಂದು ನುಡಿದನು.

॥ ಶ್ರೀ ನಾರದ ಉವಾಚ ॥

ಉಕ್ತ್ವೋ ದೂತಸ್ತದೈವಾಶು ಗತ್ವಾ ಮಾಹಿಷ್ಮತೀಪತಿಂ ।
ಸಭಾಯಾಂ ಕಥಯಾಮಾಸ ಪ್ರದ್ಯುಮ್ನಕಥಿತಂ ವಚಃ ॥ ೩೫ ॥

ಯದೂನಾಮುದ್ಭಟಂ ಸೈನ್ಯಂ ವೀಕ್ಷ್ಯ ಮಾಹಿಷ್ಮತೀಪತಿಃ ।
ಗಜಾನಾಂ ಪಂಚಸಾಹಸ್ರಂ ಹಯಾನಾಂ ನಿಯುತಂ ಶುಭಂ ॥ ೩೬ ॥

ರಥಾನಾಮಯುತಂ ಜೈತ್ರಂ ನೀತ್ವಾ ರಾಜಾ ವಿನಿರ್ಗತಃ ।
ಬಲಿಂ ದದೌ ಸಮೇತ್ಯಾಶು ಪ್ರದ್ಯುಮ್ನಾಯ ಮಹಾತ್ಮನೇ ॥ ೩೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ಮರುಧನ್ವಮಾಲವ ಮಾಹಿಷ್ಮತೀದೇಶ ವಿಜಯೋ
ನಾಮ ಷಷ್ಠೋಽಧ್ಯಾಯಃ

---

೩೫. ಓ ರಾಜೇಂದ್ರ! ಈ ರೀತಿ ಪ್ರದ್ಯುಮ್ನನಿಂದ ಹೇಳಿಕಳಿಸಲ್ಪಟ್ಟ ಆ ದೂತನು ಬೇಗನೆ ತನ್ನ ಪ್ರಭುವಾದ ಮಾಹಿಷ್ಮತಿಯರಸನ ಬಳಿಗೆ ಹೋಗಿ, ಆತನ ಸಭೆಯಲ್ಲಿ ಪ್ರದ್ಯುಮ್ನನು ಹೇಳಿದ ಮಾತನ್ನು ತಿಳಿಸಿದನು.

೩೬–೩೭. ಬಳಿಕ ಆ ಮಾಹಿಷ್ಮತಿಯ ಅರಸು ಮಹಾಬಲಾಢ್ಯವಾದ ಆ ಯದುಸೈನ್ಯವನ್ನು ನೋಡಿ. ಹೆದರಿದವನಾಗಿ ಐದು ಸಾವಿರ ಆನೆಗಳನ್ನೂ ಒಳ್ಳೆಯ ಲಕ್ಷಣಗಳಿಂದೊಪ್ಪುವ ಒಂದು ಲಕ್ಷ ಕುದುರೆಗಳನ್ನೂ ಹತ್ತು ಸಾವಿರ ಜೈತ್ರ (ಯುದ್ಧೋಚಿತ) ರಥಗಳನ್ನೂ ತೆಗೆದುಕೊಂಡು ತನ್ನ ನಗರದಿಂದ ಹೊರಟು ಯಾದವರ ಪಾಳಯಕ್ಕೆ ಬಂದು ಅಲ್ಲಿದ್ದ ಮಹಾತ್ಮನಾದ ಪ್ರದ್ಯುಮ್ನನಿಗೆ ಕಪ್ಪ ಕಾಣಿಕೆಗಳನ್ನೊಪ್ಪಿಸಿದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ನಾರದ ಬಹುಲಾಶ್ವ
ಸಂವಾದದಲ್ಲಿ ಮಾಹಿಷ್ಮತೀದೇಶ ವಿಜಯವೆಂಬ
ಆರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಸಪ್ತಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಪ್ರದ್ಯುಮ್ನೋಽಥ ಮಹಾವೀರ್ಯೋ ಜಿತ್ವಾ ಮಾಹಿಷ್ಮತೀಪತಿಂ।
ವಿಕರ್ಷನ್ಮಹತೀಂ ಸೇನಾಂ ಗುರ್ಜರಾಜಂ ಸಮಾಯಯೌ ॥ ೧ ॥

ಗುರ್ಜರಾಡಧಿಪಂ ವೀರಮೃಷ್ಯಂ ನಾಮ ಮಹಾಬಲಂ।
ಜಗ್ರಾಹ ಸೇನಯಾ ಕಾರ್ಷ್ಣಿಸ್ತುಂಡಯಾಹಿಂ ಯಥಾ ವಿರಾಟ್ ॥ ೨ ॥

ಸದ್ಯಸ್ತಸ್ಮಾದ್ಬಲಿಂ ನೀತ್ವಾ ಯಾದವೇಂದ್ರೋ ಮಹಾಬಲಃ।
ವಿಕರ್ಷನ್ಮಹತೀಂ ಸೇನಾಂ ಚೇದಿದೇಶಾಂಸ್ತತೋ ಯಯೌ ॥ ೩ ॥

ಏಳನೆಯ ಅಧ್ಯಾಯವು

೧. ನಾರದನು ಹೇಳತೊಡಗಿದನು:—ರಾಜೇಂದ್ರ! ಆಲಿಸು. ಈ ರೀತಿಯಾಗಿ ಆ ಮಹಾವೀರಾಗ್ರೇಸರನಾದ ಪ್ರದ್ಯುಮ್ನನು ಮಾಹಿಷ್ಮತೀ ನರಪತಿಯನ್ನು ಗೆದ್ದನಂತರ ತನ್ನ ಆ ಭಾರೀ ಸೇನಾಸಮೂಹವನ್ನು ಕರೆದುಕೊಂಡು ಗುರ್ಜರದೇಶಾಧಿಪತಿಯ ಮೇಲೆ ದಂಡೆತ್ತಿ ಹೊರಟನು.

೨. ಆ ಗುರ್ಜರ ರಾಜ್ಯಕ್ಕೆ ಮಹಾ ಬಲಾಢ್ಯನಾದ ಋಷ್ಯನೆಂಬುವವನು ಅರಸನಾಗಿದ್ದನು. ಆ ಋಷ್ಯರಾಜನನ್ನು ಪ್ರದ್ಯುಮ್ನನು, ಗರುಡನು ತನ್ನ ಕೊಕ್ಕಿನಿಂದ ಹಾವನ್ನು ಹಿಡಿಯುವಂತೆ" ತನ್ನ ಸೇನೆಯಿಂದ ಮುತ್ತಿ ಬಿಟ್ಟನು.

೩. ಕೂಡಲೇ ಆ ಗುರ್ಜರಾಧೀಶ್ವರನು ಆ ಯಾದವಸೇನಾಪತಿಗೆ ಕಪ್ಪವನ್ನು ಒಪ್ಪಿಸಿಬಿಟ್ಟನು. ಆದುದರಿಂದ ಆ ಮಹಾ ಬಲಶಾಲಿಯು ಅಲ್ಲಿಂದ ತನ್ನ ಸೇನೆಯನ್ನೆತ್ತಿ ಚೇದಿದೇಶದ ಮೇಲೆ ಪಯಣ ಹೊರಟನು.

ದಮಘೋಷಶ್ಚೇದಿರಾಜೋ ವಸುದೇವಸ್ವಸುಃ ಪತಿಃ ।
ಶಿಶುಪಾಲಸ್ತಸ್ಯ ಪುತ್ರಃ ಕೃಷ್ಣಶತ್ರುಃ ಪ್ರಕೀರ್ತಿತಃ ॥ ೪ ॥

ಅಭೀಯಾಯ ಮಹಾಬುದ್ಧಿರ್ದಮಘೋಷಂ ಮಹಾಬಲಂ ।
ನತ್ವಾ ಪ್ರಾಹ ಮಹಾಬುದ್ಧಿರುದ್ಧವೋ ಬುದ್ಧಿಸತ್ತಮಃ ॥ ೫ ॥

॥ ಉದ್ಧವ ಉವಾಚ ॥

ರಾಜನ್ದೇಹಿ ಬಲಿಂ ತಸ್ಮಾ ಉಗ್ರಸೇನಾಯ ಭೂಭೃತೇ ।
ವಿಜಿತ್ಯ ನೃಪತೀನ್ಸೋಽಸೌ ರಾಜಸೂಯಂ ಕರಿಷ್ಯತಿ ॥ ೬ ॥

॥ ಶ್ರೀ ನಾರದ ಉವಾಚ ॥

ಇತ್ಥಂ ನಿಶಮ್ಯ ವಚನಂ ದಮಘೋಷಸುತಃ ಖಲಃ ।
ಸ್ಫುರದೋಷ್ಠೋ ಮನ್ಯುಪರಃ ಪ್ರಾಹೇದಂ ಸದಸಿ ತ್ವರಂ ॥ ೭ ॥

---

೪. ಆ ಚೇದಿದೇಶದ ಅರಸನಾದ ದಮಘೋಷನಿಗೆ ವಸುದೇವನ ತಂಗಿಯನ್ನು ಕೊಟ್ಟು ಮದುವೆಯಾಗಿದ್ದಿತು. ಅವನ ಮಗನೇ ಕೃಷ್ಣನ ಜನ್ಮವೈರಿಯಾದ ಶಿಶುಪಾಲನು,

೫. ಇದೇ ದಮಘೋಷನ ಮೇಲೆಯೇ ಮಹಾ ಕುಶಲಮತಿಯಾದ ಪ್ರದ್ಯುಮ್ನನು ದಂಡೆತ್ತಿ ಹೊರಟಿದ್ದನು. ಆಗ ಪ್ರದ್ಯುಮ್ನನ ಮಂತ್ರಿಯೂ ರಾಜನೀತಿ ನಿಪುಣನೂ ಆದ ಉದ್ಧವನು ಆ ದಮಘೋಷನ ಬಳಿಗೆ ಹೋಗಿ ನಮಸ್ಕರಿಸಿ.

೬. "ಓ ರಾಜೇಂದ್ರ ! ಯಾದವೇಶ್ವರನಾದ ಉಗ್ರಸೇನನು ಎಲ್ಲ ರಾಜರನ್ನೂ ಗೆದ್ದು ರಾಜಸೂಯವೆಂಬ ಯಾಗವನ್ನು ಮಾಡಬೇಕೆಂದಿರುವನು. ಆದುದರಿಂದ ನೀನು ಅವನಿಗೆ ಕಪ್ಪವನ್ನು ಒಪ್ಪಿಸು" ಎಂದು ನುಡಿದನು.

೭. ಓ ಮಿಥಿಲಾಧಿಪತೀ! ಈ ರೀತಿ ಉದ್ಧವನಾಡಿದ ಮಾತನ್ನು ಕೇಳಿ ದುಷ್ಟನಾದ ಆ ದಮಘೋಷನ ಪುತ್ರನು ಕೋಪದಿಂದ ತನ್ನ ತುಟಿಗಳನ್ನಲುಗಿಸುತ್ತಾ ಆ ತುಂಬಿದ ಸಭೆಯಲ್ಲಿ ಇಂತೆಂದು ನುಡಿದನು.

॥ ಶಿಶುಪಾಲ ಉವಾಚ ॥

ದುರತ್ಯಯಾ ಕಾಲಗತಿರಹೋ ಚಿತ್ರಮಿದಂ ಜಗತ್ ।
ವಿಧೇಃ ಕಾಲಾತ್ಮಕಸ್ಯಾಪಿ ಪ್ರಾಜಾಪತ್ಯೇ ಭವೇತ್ಕಲಿಃ ॥ ೮ ॥

ಕ್ವ ರಾಜಹಂಸಃ ಕಾಕಃ ಕ್ವ ಕ್ವ ಮೂರ್ಖಃ ಕ್ವ ಚ ಪಂಡಿತಃ ।
ಭೃತ್ಯಾ ವಿಜೇಷ್ಯಂತಿ ನೃಪಂ ಚಕ್ರವರ್ತಿನಮೀಶ್ವರಂ ॥ ೯ ॥

ಯಯಾತಿಶಾಪಾದ್ಯದವೋ ಭ್ರಷ್ಟರಾಜ್ಯಪದಾಃ ಸ್ಮೃತಾಃ ।
ರಾಜ್ಯಂ ಸ್ವಲ್ಪಂ ಜಲಂ ಪ್ರಾಪ್ಯ ಪ್ರೋಚ್ಛಲಂತ್ಯಾಪಗಾ ಇವ ॥ ೧೦ ॥

ಅವಂಶಸಂಭವೋ ರಾಜಾ ಮೂರ್ಖಪುತ್ರೋ ಹಿ ಪಂಡಿತಃ ।
ನಿರ್ಧನಶ್ಚ ಧನಂ ಪ್ರಾಪ್ಯ ತೃಣವನ್ಮನ್ಯತೇ ಜಗತ್ ॥ ೧೧ ॥

---

೮. ಅಬ್ಬಾ ' ಕಾಲದ ವೈಪರೀತ್ಯವನ್ನು ಯಾರು ತಾನೇ ಮೀರಬಲ್ಲರು ? ಈ ಜಗತ್ತೇ ಬಹು ವಿಚಿತ್ರವಾಗಿ ಪರಿಣಮಿಸುತ್ತಿರುವುದು. ಕಾಲಸ್ವರೂಪನಾದ ಆ ಬ್ರಹ್ಮನ ಅಧಿಕಾರದ ವಿಷಯದಲ್ಲಿಯೇ ಜಗಳವು ಉಂಟಾಗುವಂತಿದೆ.

೯. ರಾಜಹಂಸನೆಲ್ಲಿ ? ಕಾಗೆಯೆಲ್ಲಿ ? ಮೂರ್ಖನೆಲ್ಲಿ ? ವಿದ್ವಾಂಸನೆಲ್ಲಿ ? (ಎಂದಿಗಾದರೂ ಇವರು ಸರಿಸಮನಾಗಬಲ್ಲರೇ) ಏನನ್ಯಾಯವಿದು ? ಭೃತ್ಯರಾದವರು ಚಕ್ರವರ್ತಿಯಾದ ತಮ್ಮ ಪ್ರಭುವಿನ ಮೇಲೆಯೇ ದಂಡೆತ್ತಿ ಬಂದು ಗೆಲ್ಲುವಂತಾಗಿದೆಯಲ್ಲಾ ?

೧೦. ಈ ಯಾದವರು ಯಯಾತಿಯ ಶಾಪದಿಂದ ರಾಜ್ಯಪದವಿಗೇ ಅನರ್ಹರಾಗಿದ್ದರು. ಈಗಿವರಿಗೆಲ್ಲೋ ಅತ್ಯಲ್ಪವಾದ ರಾಜ್ಯವೊಂದು ಬಿಟ್ಟಿಯಾಗಿ ಸಿಕ್ಕಿಬಿಟ್ಟದ್ದರಿಂದ ಸ್ವಲ್ಪ ನೀರು ಬಂದ ಮಾತ್ರಕ್ಕೇ ಉಬ್ಬುವ ಕ್ಷುದ್ರನದಿಗಳಂತೆ ಇವರು ಬೀಗಿ ಮೆರೆಯುತ್ತಿರುವರು.

೧೧. ಹೀನಕುಲದಲ್ಲಿ ಹುಟ್ಟಿದವನು ಅರಸನಾದರೆ, ಮೂರ್ಖನ ಹೊಟ್ಟೆಯಲ್ಲಿ ಹುಟ್ಟಿದವನು ವಿದ್ವಾಂಸನೆನಿಸಿದರೆ, ಬಡವನು ಹಣಗಾರನಾದರೆ ಆಗ ಅವರು ಈ ಜಗತ್ತನ್ನೇ ಕಸಕ್ಕಿಂತಲೂ ಕಡೆಯಾಗಿ ಕಾಣುವರಂತೆ.

ಉಗ್ರಸೇನಃ ಕತಿದಿನೈ ರಾಜತ್ವಂ ಸಮುಪಾಗತಃ ।
ಮಂತ್ರಿಣಾ ವಾಸುದೇವೇನ ಪೂಜಿತಃ ಸಬಲಾನ್ನೃಪಃ ॥ ೧೨ ॥

ತಸ್ಯ ಮಂತ್ರೀ ವಾಸುದೇವೋ ಜರಾಸಂಧಭಯಾದ್ದ್ರುತಂ ।
ಮಧುರಾಂ ಸ್ವಪುರೀಂ ತ್ಯಕ್ತ್ವಾ ಸಮುದ್ರಂ ಶರಣಂ ಗತಃ ॥ ೧೩ ॥

ಆಭೀರಸ್ಯಾಪಿ ನಂದಸ್ಯ ಪೂರ್ವಂ ಪುತ್ರಃ ಪ್ರಕೀರ್ತಿತಃ ।
ವಸುದೇವೋ ಮನ್ಯತೇ ತಂ ಮತ್ಪುತ್ರೋಽಯಂ ಗತತ್ರಪಃ ॥ ೧೪ ॥

ವಸುದೇವಾದ್ಗೌರವರ್ಣಾದಯಂ ಶ್ಯಾಮಃ ಕುತೋಽಭವತ್ ।
ಪಿತಾಮಹೋಽಪಿ ಗೌರಶ್ಚ ದುಃಖಹಾಸ್ಯಮಿದಂ ವಚಃ ॥ ೧೫ ॥

---

೧೨. ಈ ಉಗ್ರಸೇನನು ಎಷ್ಟು ದಿನಗಳಿಂದ ರಾಜಪದವಿಯನ್ನು ಅನುಭವಿಸುತ್ತಿರುವನೋ, ಮತ್ತು ಮಂತ್ರಿಯೆನಿಸಿದ ಬಲಾಢ್ಯನಾದ ಈ ಕೃಷ್ಣನಿಂದ ಈತನು ಎಷ್ಟು ದಿವಸಗಳಿಂದ ರಾಜನೆಂದು ಸನ್ಮಾನಿಸಲ್ಪಡುತ್ತಿರುವನು ?

೧೩. ಆ ಉಗ್ರಸೇನನ ವೀರಾಗ್ರೇಸರನಾದ ಮಂತ್ರಿ ಶ್ರೀಕೃಷ್ಣನು ಜರಾಸಂಧನ ಹೆದರಿಕೆಯಿಂದ ತನ್ನೂರಾದ ಮಧುರಾಪಟ್ಟಣವನ್ನು ಬಿಟ್ಟು, ಸಮುದ್ರವನ್ನು ಮರೆಹೊಕ್ಕಿರುವನಲ್ಲವೇ ?

೧೪. ಶ್ರೀಕೃಷ್ಣನು ಗೊಲ್ಲರ ಜಾತಿಗೆ ಸೇರಿದ ನಂದನ ಮಗನೆಂದು ಮೊತ್ತ ಮೊದಲು ಎಲ್ಲೆಲ್ಲೂ ಪ್ರಸಿದ್ಧವಾಗಿರುವುದು. ಇಂಥವನನ್ನು ಆ ವಸುದೇವನು ನಾಚಿಕೆಯಿಲ್ಲದೆ ತನ್ನ ಮಗನೆಂದು ಹೇಳಿಕೊಳ್ಳುತ್ತಿರುವನಲ್ಲಾ ?

೧೫. ಬೆಳ್ಳಗಿರುವ ಈ ವಸುದೇವನು ಕಪ್ಪಾದ ಈ ಕೃಷ್ಣನಿಗೆ ಹೇಗೆ ತಾನೆ ತಂದೆಯಾದಾನು ? ಈ ಕೃಷ್ಣನು ತನ್ನ ತಾತನನ್ನಾದರೂ ಹೋಲಬಹುದೆಂದರೆ ಅದೂ ಸಾಧ್ಯವಿಲ್ಲ. ಏಕೆಂದರೆ ವಸುದೇವನ ತಂದೆಯೂ ಬಿಳುಪಾದವನೇ. ಆದುದರಿಂದ ಈ ವಿಚಾರವು ದುಃಖದಾಯಕವಾದ ಹಾಸ್ಯಕ್ಕೆ ಪಾತ್ರ ಗುರಿಯಾಗುವುದು.

ಪ್ರದ್ಯುಮ್ನಂ ತತ್ಸುತಂ ಜಿತ್ವಾ ಸಬಲಂ ಯಾದವೈಃ ಸಹ ।
ಕುಶಸ್ಥಲೀಂ ಗಮಿಷ್ಯಾಮಿ ಮಹೀಂ ಕರ್ತುಮಯಾದವೀಂ ॥ ೧೬ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಧನುರಾದಾಯ ತೂಣೌ ಚಾಕ್ಷಯಸಾಯಕೌ ।
ತಂತಮುಭ್ಯುದ್ಯತಂ ವೀಕ್ಷ್ಯ ಚೇದಿರಾಜಸ್ತಮಬ್ರವೀತ್ ॥ ೧೭ ॥

॥ ದಮಘೋಷ ಉವಾಚ ॥

ಶೃಣು ಪುತ್ರ ಪ್ರವಕ್ಷ್ಯಾಮಿ ಕ್ರೋಧಂ ಮಾ ಕುರು ಮಾ ಕುರು ।
ಅಕಸ್ಮಾದಾಚರೇತ್ಕಾರ್ಯಂ ನ ಸಿದ್ಧಿಂ ವಿಂದತೇ ಹ್ಯಸೌ ॥ ೧೮ ॥

ಧರ್ಮಾರ್ಥಕಾಮಮೋಕ್ಷಾಣಾಂ ಸಾಧನಂ ನ ಕ್ಷಮಾ ಸಮಂ ।
ತಸ್ಮಾತ್ಸಾಮ ಪ್ರಕರ್ತವ್ಯಂ ಸಾಮ್ನೋ ನ ಸದೃಶಂ ಸುಖಂ ॥ ೧೯ ॥

---

೧೬. ಆದುದರಿಂದ ಈಗ ನಾನು ಸೇನಾಸಮೇತನಾಗಿ ಬಂದಿರುವ ಈ ಶ್ರೀಕೃಷ್ಣನ ಮಗನಾದ ಪ್ರದ್ಯುಮ್ನನನ್ನು ಅವನ ಅನುಯಾಯಿಗಳಾದ ಯಾದವರೊಡನೆ ಗೆದ್ದು ಈ ಭೂಮಿಯಮೇಲೆ ಯಾದವರೇ ಇಲ್ಲವೆಂದೆನಿಸುವುದಕ್ಕೋಸ್ಕರ ದ್ವಾರಕೆಗೆ ದಂಡೆತ್ತಿ ಹೊರಡುವೆನು ಎಂದನು.

೧೭. ಓ ಬಹುಲಾಶ್ವರಾಜಾ ! ಈ ರೀತಿಯಾಗಿ ಆ ಶಿಸುಪಾಲನು ನುಡಿದು ಧನುಸ್ಸನ್ನೂ, ಅಕ್ಷಯಬಾಣಗಳಿಂದ ತುಂಬಿದ ಬತ್ತಳಿಕೆಗಳನ್ನೂ ತೆಗೆದುಕೊಂಡು ಯುದ್ಧಸನ್ನದ್ಧನಾಗಿ ಹೊರಟುದುದನ್ನು ಕಂಡು, ಚೇದಿರಾಜನಾದ ದಮಘೋಷನು ಅವನನ್ನು ತಡೆದು ಇಂತೆಂದನು.

೧೮. ಓ ಕುಮಾರಾ ! ನನ್ನ ಮಾತನ್ನು ಕೇಳು. ನೀನು ಈರೀತಿ ಕೋಪವನ್ನು ತಾಳದಿರು. ಇದ್ದಕ್ಕಿದ್ದಂತೆಯೇ ಯಾವುದಾದರೂ ಕೆಲಸವನ್ನು ಆರಂಭಿಸಿದರೆ ಅದೆಂದಿಗೂ ಸಿದ್ಧಿಯನ್ನು ಪಡೆಯಲಾರದು.

೧೯. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ವಿಧವಾದ ಪುರುಷಾರ್ಥಗಳು ಲಭಿಸಬೇಕಾದರೆ (ಕ್ಷಮೆಗಿಂತಲೂ ಕ್ಷಮೆಗೆ ಸರಿಸಮನಾದ ಉತ್ತಮವಾದ) ಬೇರೆ ಸಾಧನವಿಲ್ಲ. ಆದುದರಿಂದ ಸಾಮೋಪಾಯವನ್ನವಲಂಬಿಸುವುದು ಒಳ್ಳೆಯದು. ಇದಕ್ಕಿಂತಲೂ ಸುಖಕರವಾದುದು ಮತ್ತೊಂದಿಲ್ಲ.

ದಾನೇನ ರಾಜತೇ ಸಾಮ ದಾನಂ ಸತ್ಕ್ರಿಯಯಾ ಪುನಃ ।
ಸತ್ಕ್ರಿಯಾಪಿ ಯಥಾಯೋಗ್ಯಂ ಗುಣಂ ಸಂಪ್ರೇಕ್ಷ್ಯ ರಾಜತೇ ॥ ೨೦ ॥

ಯಾದವಾಶ್ಚೇದಿಪಾಶ್ಚೈವ ಜ್ಞಾತಿಸಂಬಂಧಿನಃ ಸ್ಮೃತಾಃ ।
ಚೇದಿಪಾನಾಂ ಚ ವೃಷ್ಣೀನಾಂ ಕಲಿಂ ನೇಚ್ಛಾಮಿ ತತ್ತ್ವತಃ ॥ ೨೧ ॥

॥ ಶ್ರೀ ನಾರದ ಉವಾಚ ॥

ಶಿಶುಪಾಲೋ ಬೋಧಿತೋಽಪಿ ದಮಘೋಷೇಣ ಧೀಮತಾ ।
ನೋವಾಚ ಕಿಂಚಿದ್ವಿಮನಾಸ್ತೂಷ್ಣೀಂ ಭೂತೋ ಮಹಾಖಲಃ ॥ ೨೨ ॥

ಶ್ರುತಿಶ್ರವಾಶ್ಚೇದಿಪರಾಜರಾಜ್ಞೀ
ಸ್ವಸಾ ಶುಭಾ ಶೂರಸುತಸ್ಯ ರಾಜನ್ ।
ಸಮೇತ್ಯ ಪುತ್ರಂ ಶಿಶುಪಾಲಸಂಜ್ಞಂ
ಪ್ರತ್ಯಾಹ ಸಮ್ಯಗ್ವಿನಯಾನ್ವಿತಾ ಸಾ ॥ ೨೩ ॥

---

೨೦. ಸಾಮೋಪಾಯವು ಶೋಭಿಸಬೇಕಾದರೆ ದಾನವಿಲ್ಲದೆ ಸಾಧ್ಯವಿಲ್ಲ. ಆ ದಾನವೂ ಸಹ ಸತ್ಕಾರ್ಯವಿಲ್ಲದಿದ್ದರೆ ಕಂಗೊಳಿಸಲಾರದು. ಆ ಸತ್ಕಾರ್ಯವೂ ಸಹ ಅನುಗುಣವಾದ ಗುಣವೊಂದು ಬೆಂಬಲವಾಗಿಲ್ಲದಿದ್ದರೆ ರಾಜಿಸಲಾರದು.

೨೧. ಇದೂ ಅಲ್ಲದೆ ಯಾದವರೂ, ಚೇದಿವಂಶದವರೂ ಮೊದಲಿನಿಂದಲೂ ಬಾಂಧವ್ಯವನ್ನು ಬೆಳೆಸಿಕೊಂಡು ಸಂಬಂಧೀಕರೆಂದು ಪ್ರಸಿದ್ಧರಾಗಿರುವರಲ್ಲವೆ ? ಹೀಗಿರುವುದರಿಂದ ಚೇದಿವಂಶದವರಿಗೂ, ವೃಷ್ಣಿಕುಲದವರಿಗೂ ಯುದ್ಧವು ನಡೆಯುವುದನ್ನು ನಾನು ತತ್ತ್ವಪೂರ್ವಕವಾಗಿಯೂ ಒಪ್ಪಲಾರೆನು ಎಂದನು.

೨೨. ಎಲೈ ಮಿಥಿಲಾಧಿಪತಿಯೇ! ಈ ರೀತಿಯಾಗಿ ವಿವೇಕಿಯಾದ ಆ ದಮಘೋಷನು ಬೋಧಿಸಿದರೂ ಕೇಳದೆ ಮಹಾದುಷ್ಟನಾದ ಆ ಶಿಶುಪಾಲನು ವೈಮನಸ್ಯವನ್ನವಲಂಬಿಸಿ ಕೋಪದಿಂದ ಏನನ್ನೂ ಮಾತನಾಡದೆ ಸುಮ್ಮನೆ ನಿಂತುಬಿಟ್ಟನು.

೨೩. ಆಗ ಚೇದಿರಾಜನಾದ ದಮಘೋಷನ ಪಟ್ಟಮಹಿಷಿಯೂ, ಶೂರಪುತ್ರನಾದ ವಸುದೇವನ ಸೋದರಿಯೂ ಆದ ಶ್ರುತಶ್ರವಸ್ಸೆಂಬುವಳು ತನ್ನ ಮಗನಾದ ಶಿಶುಪಾಲನ ಬಳಿಗೆ ಬಂದು ನಯವಾದ ಮಾತುಗಳಿಂದ ಇಂತೆಂದು ನುಡಿದಳು.

॥ ಶ್ರುತಿಶ್ರವಾ ಉವಾಚ ॥

ಮಾ ಪುತ್ರ ಖೇದಂ ಕುರುತಾತ್ಕದಾಚಿ-
ನ್ಮಾಭೂತ್ಕಲಿಶ್ಚೇದಿಪಯಾದವಾನಾಂ ।
ತೇ ಮಾತುಲೋಽಯಂ ಕಿಲ ಶೂರಸೂನು-
ರ್ಭ್ರಾತಾ ಚ ತೇ ತತ್ಸುತ ಏವ ಕೃಷ್ಣಃ ॥ ೨೪ ॥

ತಸ್ಯಾತ್ಮಜಾಯೇತ್ರ ಸಮಾಗತಾಸ್ತೇ
ಪ್ರದ್ಯುಮ್ನಮುಖ್ಯಾಃ ಶತಶೋ ಮಹಾಂತಃ ।
ಸಂಪೂಜನೀಯಾಶ್ಚ ಮಯಾ ಭವದ್ಭಿಃ
ಸಂಲಾಲನೀಯಾ ನ ಹಿ ಯುದ್ಧಯೋಗ್ಯಾಃ ॥ ೨೫ ॥

ಅಹಂ ಗಮಿಷ್ಯಾಮಿ ಸಹಾದ್ಯ ಚಿತ್ತಾ
ನೇತುಂ ತ್ವಯಾ ತಾತ ಸಮಾಗತಾಂಸ್ತಾನ್ ।
ದ್ರಷ್ಟುಂ ಚಿರೋತ್ಕಂಠಮನಾ ಮಹೋತ್ಸವೈ-
ರ್ನೈತಾದೃಶೋಽಯಂ ಸಮಯಃ ಕದಾಚಿತ್ ॥ ೨೬ ॥

---

೨೪. ಕುಮಾರ! ನೀನು ಈ ರೀತಿ ವ್ಯಥೆಯನ್ನು ಹೊಂದಬೇಡ. ಚೇದಿ ರಾಜರಿಗೂ, ಯಾದವರಿಗೂ ಎಂದೆಂದಿಗೂ ಯುದ್ಧವು ಜರುಗದಿರಲಿ. ಈ ವಸುದೇವನು ನಿನ್ನ ಸೋದರಮಾವನಲ್ಲವೆ? ಆತನ ಮಗನಾದ ಈ ಕೃಷ್ಣನೂ ನಿನಗೆ ಸಹೋದರನಂತೆಯೇ ಅಲ್ಲವೆ?

೨೫. ಆ ಕೃಷ್ಣನ ಮಕ್ಕಳೇ ಇಲ್ಲಿಗೆ ಬಂದಿರುವ ಪ್ರದ್ಯುಮ್ನ ಮುಂತಾದ ನೂರಾರು ಮಂದಿ ಕುಮಾರರು. ಅವರೆಲ್ಲರನ್ನೂ ನಾನು ಈಗ ಆದರಿಸಬೇಕು. ಅಷ್ಟೇ ಅಲ್ಲ. ನೀನೂ ಸಹ ಅವರನ್ನು ಪ್ರೀತಿಯಿಂದ ಕಾಣಬೇಕಲ್ಲದೆ ಯುದ್ಧವಲ್ಲಿ ಹೋರಾಡಬೇಕಾದುದಲ್ಲ.

೨೬. ಅಪ್ಪಾ! ಆದುದರಿಂದ ಈಗ ನಾನು ಪ್ರೇಮಪೂರಿತವಾದ ಹೃದಯದಿಂದ ಇಲ್ಲಿಗೆ ಬಂದಿರುವ ಆ ಶ್ರೀಕೃಷ್ಣಕುಮಾರನನ್ನು ಕರೆತರಲು ನಿನ್ನೊಡನೆ ಹೊರಡಬೇಕೆಂದಿರುವೆನು. ಅವರನ್ನು ಸಂಭ್ರಮದಿಂದ ಎದುರುಗೊಳ್ಳಬೇಕೆಂದು ಬಹು ದಿನಗಳಿಂದಲೂ ಕುತೂಹಲದಿಂದ ನಿರೀಕ್ಷಿಸುತ್ತಿರುವೆನು ಎಂದಳು.

॥ ಶಿಶುಪಾಲ ಉವಾಚ ॥

ಮಮ ಶತ್ರೂ ರಾಮಕೃಷ್ಣೌ ಯಾದವಾಃ ಶತ್ರವಶ್ಚ ಮೇ ।
ಘಾತಯಿಷ್ಯಾಮಿ ತಾನ್ಸರ್ವಾನ್ಯೈರಹಂ ತು ತಿರಸ್ಕೃತಃ ॥ ೨೭ ॥

ಪುರಾ ವೈ ಕುಂಡಿನಪುರೇ ಯಾಭ್ಯಾಂ ಮೇ ಹೇಲನಂ ಕೃತಂ ।
ವಿವಾಹೋ ವಾರಿತೋ ಮೇ ವೈ ರಾಮಕೃಷ್ಣಾವರೀ ಮಮ ॥ ೨೮ ॥

ಯದಿ ತೇಷಾಂ ಯಾದವಾನಾಂ ಯುವಾಂ ಪಕ್ಷಂ ಕರಿಷ್ಯಥಃ
ತದಾ ತ್ವಾಂ ಸಹ ಪಿತ್ರಾ ಚ ನಿಗೃಹ್ಯ ನಿಗಡೈರ್ದೃಢೈಃ ॥ ೨೯ ॥

ಕಾರಾಗಾರೇ ಕಾರಯಾಮಿ ಕಂಸಃ ಸ್ವಪಿತರೌ ಯಥಾ ।
ಅನ್ಯಥಾ ಚೇದ್ವಧಿಷ್ಯಾಮಿ ಶಪಥೋ ಮೇ ತು ದುರ್ಘಟಃ ॥ ೩೦ ॥

---

೨೭. ಈ ರೀತಿ ತನ್ನ ತಾಯಿಯು ನುಡಿದುದನ್ನು ಕೇಳಿ ಆ ಶಿಶುಪಾಲನು ಅಮ್ಮಾ ! ನನಗೆ ಕೃಷ್ಣ ಬಲರಾಮರಿಬ್ಬರೂ ವೈರಿಗಳು, ಆದುದರಿಂದ ಈ ಯಾದವರೆಲ್ಲರೂ ನನಗೆ ಶತ್ರುಗಳೇ ಸರಿ. ಇವರೆಲ್ಲರೂ ನನ್ನನ್ನು ತಿರಸ್ಕರಿಸಿರುವುದರಿಂದ ಇವರನ್ನೆಲ್ಲಾ ಕೊಲ್ಲಬೇಕೆಂದಿರುವೆನು.

೨೮. ಹಿಂದೆ ಇದೇ ರಾಮಕೃಷ್ಣರು ಕುಂಡಿನನಗರದಲ್ಲಿ ನನ್ನನ್ನು ಅಪಹಾಸ್ಯ ಮಾಡಿದುದಲ್ಲದೆ, ರುಕ್ಮಿಣಿಯೊಡನೆ ನನಗೆ ನಡೆಯಬೇಕಾಗಿದ್ದ ಮದುವೆಯನ್ನೂ ಮುರಿದುಬಿಟ್ಟರು. ಆದುದರಿಂದ ಅವರಿಬ್ಬರೂ ನನ್ನ ಶತ್ರುಗಳೇ ಸರಿ.

೨೯–೩೦, ಒಂದು ವೇಳೆ ನೀವಿಬ್ಬರೂ ಆ ಯಾದವರ ಪಕ್ಷವನ್ನೇ ಸೇರಿ ವಾದ ಮಾಡುವುದಾದರೆ ಆಗ ನಿನ್ನನ್ನೂ ನಿನ್ನ ಪತಿಯನ್ನೂ ಸರಪಣಿಗಳಿಂದ ಗಟ್ಟಿಯಾಗಿ ಬಿಗಿದು ಕಟ್ಟಿ ಕಂಸನು ತನ್ನ ತಂದೆತಾಯಿಗಳನ್ನಿಟ್ಟಂತೆ ನಾನೂ ಸೆರೆಯಲ್ಲಿಡುವೆನು. ಇಲ್ಲದಿದ್ದರೆ ನಿಮ್ಮನ್ನು ಕೊಂದುಬಿಡುವೆನು. ಈ ಶಪಥವು ಸಾಮಾನ್ಯವಾದುದಲ್ಲ ವೆಂದು ತಿಳಿ. ಎಂದು ಗದರಿದನು.

॥ ಶ್ರೀ ನಾರದ ಉವಾಚ ॥

ತದ್ವಚಃ ಪರುಷಂ ಶ್ರುತ್ವಾ ತೂಷ್ಣೀಂ ಯಾತೇ ಚ ಚೇದಿಪೇ ।
ತದ್ವಚಃ ಸ್ವಬಲಂ ಪ್ರಾಪ್ಯ ಪ್ರಾಹ ಸರ್ವಂ ಯಥೋದಿತಂ ॥ ೩೦ ॥

ವಾಹಿನೀ ಧ್ವಜಿನೀ ಚೈವ ಪ್ರತಿನಾಕ್ಷೌಹಿಣೀಯುತಾ ।
ಚತುರ್ಥಾ ಶಿಶುಪಾಲಸ್ಯ ಸೇನಾಯುಕ್ತಾ ಬಭೂವ ಹ ॥ ೩೧ ॥

॥ ಬಹುಲಾಶ್ವ ಉವಾಚ ॥

ವಾಹಿನ್ಯಾದ್ಯಾಶ್ಚ ಯಾ ಸೇನಾಸ್ತತ್ಸಂಖ್ಯಾಂ ವದ ಮೇ ಪ್ರಭೋ ।
ಋಷಯೋ ಹಿ ಪ್ರಜಾನಂತಿ ಭೂತಂ ಭವ್ಯಂ ಭವತ್ಪರಂ ॥ ೩೨ ॥

॥ ಶ್ರೀ ನಾರದ ಉವಾಚ ॥

ಶತಂ ದ್ವಿಪಾನಾಂ ರಥಿನಾಂ ಸಹಸ್ರಂ ಶತಸಂಯುತಂ ।
ಅಯುತಂ ತುರಗಾಣಾಂ ಚ ಪತ್ತೀನಾಂ ಲಕ್ಷಮೇವ ಚ ॥ ೩೩ ॥

---

೩೦. ಓ ರಾಜೇಂದ್ರ! ಈ ರೀತಿಯಾಗಿ ಆ ಶಿಶುಪಾಲನಾಡಿದ ಕ್ರೂರ ವಾಕ್ಯಗಳನ್ನು ಕೇಳಿ, ಚೇದಿರಾಜನಾದ ದಮಘೋಷನು ಸುಮ್ಮನೆ ಹೊರಟುಹೋದನು. ಅನಂತರ ಶಿಶುಪಾಲನು ತನ್ನ ಸೇನೆಯಿದ್ದಲ್ಲಿಗೆ ಬಂದು ಅಲ್ಲಿ ನಡೆದುದೆಲ್ಲವನ್ನೂ ಹಿಂದೆ ಹೇಳಿದಂತೆ ಅವರಿಗೆ ತಿಳಿಸಿದನು.

೩೧. ಎಲೈ ಮಿಥಿಲಾಧಿಪತಿಯೇ! ಆ ಶಿಶುಪಾಲನ ಸೇನೆಯು ವಾಹಿನಿ, ಧ್ವಜಿನಿ, ಪ್ರತಿನಾ, ಅಕ್ಷೌಹಿಣೀ, ಎಂಬ ನಾಲ್ಕು ವಿಭಾಗಗಳಿಂದ ಕೂಡಿದುದಾಗಿತ್ತು.

೩೨. ಎಂದು ನಾರದಮಹರ್ಷಿಯು ಹೇಳಲು ಆಗ ಬಹುಲಾಶ್ವನು ಆತನನ್ನು ಕುರಿತು, ‘ಓ ಬ್ರಹ್ಮರ್ಷಿ! ಋಷಿಗಳಾದವರು ಹಿಂದಾದುದನ್ನೂ, ಈಗ ನಡೆಯುವುದನ್ನೂ, ಮುಂದಾಗುವುದನ್ನೂ ಚೆನ್ನಾಗಿ ತಿಳಿದಿರುವರಲ್ಲವೇ? ಆದುದರಿಂದ ವಾಹಿನಿ ಮೊದಲಾದ ಸೇನಾ ಪ್ರಭೇದಗಳ ಲೆಖ್ಖವನ್ನು ನಿನಗೆ ತಿಳಿಸಬೇಕು’ ಎಂದು ಪ್ರಶ್ನಿಸಿದನು.

೩೩. ಅದಕ್ಕೆ ನಾರದನು ಈ ರೀತಿ ಹೇಳತೊಡಗಿದನು: ರಾಜೇಂದ್ರ! ಕೇಳು. ನೂರು ಆನೆಗಳು.. ಸಾವಿರದ ಒಂದುನೂರು ರಥಿಕರು, (ತೇರನ್ನೇರಿದ ವೀರರು) ಹತ್ತು ಸಾವಿರ ಕುದುರೆಗಳು, ಒಂದು ಲಕ್ಷ ಕಾಲಾಳುಗಳಿದ್ದರೆ ಅದು ಸೇನೆಯೆನಿಸುವುದು.

ಸೇನಾಯಾ ಲಕ್ಷಣಂ ಸ್ವಲ್ಪಂ ದ್ವಿಗುಣಂ ಚತುರಂಗಿಣೀ ।
ಚತುಃಶತಂ ದ್ವಿಪಾನಾಂ ಚ ರಥಾನಾಮಯುತಂ ತಥಾ ॥ ೩೫ ॥

ಚತುರ್ಲಕ್ಷಂ ಹಯಾನಾಂ ಚ ಪತ್ತೀನಾಮೇಕಕೋಟಯಃ ।
ಲೋಹಕಂಚುಕಸಂಯುಕ್ತಾಃ ಸಮರ್ಥಬಲವಾಹನಾಃ ॥ ೩೬ ॥

ಶಸ್ತ್ರಾಸ್ತ್ರಜ್ಞಾ ಯತ್ರ ಶೂರಾ ವಾಹಿನೀ ಸಾ ಬುಧೈಃ ಸ್ಮೃತಾ ।
ವಾಹಿನ್ಯಾ ದ್ವಿಗುಣೀಭೂತಾ ಧ್ವಜಿನೀ ಸಾ ಪ್ರಕೀರ್ತಿತಾ ॥ ೩೭ ॥

ಧ್ವಜಿನ್ಯಾ ದ್ವಿಗುಣೀ ಜ್ಞೇಯಾ ಕವಿಭಿಃ ಕಥಿತಾ ಪುರಾ ।
ಸಸಾಹಸೋಽಪಿ ಶೂರಃ ಸ್ಯಾತ್ಸಾಮಂತಃ ಶತಶೂರಭೃತ್ ॥ ೩೮ ॥

---

೩೫. ಈ ಸೇನೆಯ ಸಂಖ್ಯಾಬಲವೇ ಅತಿ ಕಡಿಮೆಯದು. ಈ ಸೇನೆಯ ಎರಡರಷ್ಟು ಆನೆ, ಕುದುರೆ, ಕಾಲಾಳು, ರಥಿಕರಿದ್ದಲ್ಲಿ ಆ ತುಕಡಿಯು ಚತುರಂಗಿಣಿ ಎನಿಸುವುದು. ನಾನೂರು ಆನೆಗಳೂ, ಹತ್ತು ಸಾವಿರ ರಥಗಳೂ,

೩೬–೩೭. ನಾಲ್ಕುಲಕ್ಷ ಕುದುರೆಗಳೂ, ಒಂದುಕೋಟಿ ಕಾಲಾಳುಗಳೂ ಇದ್ದಲ್ಲಿ, ಮತ್ತು ಅಲ್ಲಿರತಕ್ಕ ಪ್ರತಿಯೊಬ್ಬ ಶೂರನೂ ನಾನಾಬಗೆಯ ಶಸ್ತ್ರಾಸ್ತ್ರಗಳನ್ನು ಚೆನ್ನಾಗಿ ಬಲ್ಲವನಾಗಿ ಕವಚವನ್ನು ತೊಟ್ಟು ಸಾಕಾದಷ್ಟು ಬಲವುಳ್ಳ ವಾಹನವುಳ್ಳವನಾಗಿರುವ ಪಕ್ಷದಲ್ಲಿ ಅದು ವಾಹಿನಿಯೆನಿಸುವುದು. ಇವಕ್ಕೆರಡರಷ್ಟು ಸಂಖ್ಯಾಬಲವುಳ್ಳದ್ದು ಧ್ವಜಿನಿಯೆನಿಸುವುದು.

೩೮. ಇಂಥ ಧ್ವಜಿನಿಯ ಎರಡರಷ್ಟು ಸಂಖ್ಯೆಯಿದ್ದಲ್ಲಿ ಅದು (ಅಕ್ಷೋಹಿಣಿಯೆಂದು) ಪುರಾತನರಾದ ವಿದ್ವಾಂಸರಿಂದ ಹೇಳಲ್ಪಟ್ಟಿರುವುದು. ಸಾಹಸವುಳ್ಳವನು ಶೂರನೆನಿಸುವನು. ಇಂತಹ ನೂರು ಜನ ಶೂರರನ್ನು ಕಾಪಾಡಬಲ್ಲವನು ಸಾಮಂತನೆನಿಸುವನು.

ಸಾಮಂತಾನಾಂ ಶತಂ ಬಿಭ್ರತ್ಸಗಜೀ ಕಥಿತೋ ಮೃಧೇ ।
ಸಮರೇ ಸಾರಥಿಂ ಚಾಶ್ವಾನ್ರಥಂ ರಕ್ಷೇದ್ರಥೀ ಚ ಯಃ ॥ ೩೯ ॥

ಸೇನಾಂ ರಕ್ಷತಿ ಯೋ ಬಾಣೈಃ ಕಥ್ಯತೇ ಸ ಮಹಾರಥೀ ।
ಸ್ವಸೇನಾಂ ರಕ್ಷಯರ್ಞ್ಶತ್ರೂನ್ಸೂದಯನ್ರಣಮಂಡಲೇ ॥ ೪೦ ॥

ಯೋಽಕ್ಷೌಹಿಣ್ಯಾ ಸಮಂ ಯುದ್ಧ್ಯೇತ್ಸದಾ ಸೋಽತಿರಥೀ ಸ್ಮೃತಃ ॥ ೪೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಗುರ್ಜರಾಟ್ ಚೇದಿದೇಶಗಮನಂ ನಾಮ ಸಪ್ತಮೋಽಧ್ಯಾಯಃ

---

೩೯. ಇಂತಹ ನೂರು ಜನ ಸಾಮಂತರನ್ನು ಸಂರಕ್ಷಿಸುವವನು ಯುದ್ಧದಲ್ಲಿ ಗಜೀ ಎಂದರೆ ಗಜಾರೋಹಿಯೆಂದು ಪರಿಗಣಿಸಲ್ಪಡುವನು. ಯಾವನು ಯುದ್ಧ ಮಾಡುವಾಗ ತನ್ನ ರಥವನ್ನೂ, ಸಾರಥಿಯನ್ನೂ, ಕುದುರೆಗಳನ್ನೂ ಕಾಪಾಡಿಕೊಳ್ಳ ಬಲ್ಲನೋ ಅವನು ರಥಿಕನೆನಿಸುವನು.

೪೦. ಮೇಲೆ ಹೇಳಿದುದನ್ನಲ್ಲದೆ ತನ್ನ ಸೇನೆಯನ್ನೂ ಸಹ ಯಾವನು ಬಾಣ ಗಳಿಂದ ಕಾಪಾಡಿಕೊಳ್ಳಬಲ್ಲ ಸಾಮರ್ಥ್ಯವನ್ನು ಪಡೆದಿರುವನೋ ಅವನು ಮಹಾರಥಿ ಯೆನಿಸುವನು. ಯಾವ ವೀರನು ತನ್ನ ಸೇನೆಯನ್ನು ಕಾಪಾಡಿಕೊಳ್ಳುತ್ತಾ ರಣಾಂಗ ದಲ್ಲಿ ಎದುರಾಗಿ ಬಂದ ಶತ್ರುಗಳನ್ನು ಸದೆಬಡಿಯುತ್ತಾ—

೪೧. ತಾನೊಬ್ಬನೇ ಅಕ್ಷೋಹಿಣಿ ಸೇನೆಯನ್ನೂ ಎದುರಿಸಿ ಯುದ್ಧಮಾಡ ಬಲ್ಲನೋ ಆ ವೀರನು ಅತಿರಥಿಯೆಂದು ಕರೆಯಲ್ಪಡುವನು ಎಂದನು.

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ನಾರದ ಬಹುಲಾಶ್ವ ಸಂವಾದದಲ್ಲಿ ಗುರ್ಜರಚೇದಿದೇಶಗಮನವೆಂಬ ಏಳನೆಯ ಅಧ್ಯಾಯವು ಮುಗಿದುದು

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಅಷ್ಟಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ನಿರ್ಗತಃ ಶಿಶುಪಾಲೋಽಸೌ ಸಬಲಶ್ಚಂದ್ರಕಾಪುರಾತ್ ।
ಪಿತರೌ ತೌ ತಿರಸ್ಕೃತ್ಯ ಸ್ವಭಾವೋ ಹ್ಯಸತಾಮಯಂ ॥ ೧ ॥

ವಾಹಿನೀಧ್ವಜಿನೀಭ್ಯಾಂ ಚ ದ್ಯುಮಚ್ಛಕ್ರೌ ವಿನಿರ್ಗತೌ ।
ಪೃತನಾಕ್ಷೌಹಿಣೀಭ್ಯಾಂ ತೌ ರಂಗಪಿಂಗೌ ಚ ಮಂತ್ರಿಣೌ ॥ ೨ ॥

ಎಂಟನೆಯ ಅಧ್ಯಾಯವು

೧. ರಾಜೇಂದ್ರ ! ಆಲಿಸು. ಅನಂತರ ಆ ಶಿಶುಪಾಲನು ತನ್ನ ತಂದೆ ತಾಯಿಗಳನ್ನು ಕಡೆಗಣಿಸಿ ಸೇನಾಸಮೇತನಾಗಿ ರಾಜಧಾನಿಯಾದ ಚಂದ್ರಕನಗರದಿಂದ ಹೊರಟುಬಿಟ್ಟನು. ಇದಲ್ಲವೆ ದುಷ್ಟರ ಸ್ವಭಾವವೆನ್ನುವುದು.

೨. ಆ ಸೇನೆಯೊಡನೆ ದ್ಯುಮಂತ ಮತ್ತು ಶಕ್ರನೆಂಬಿಬ್ಬರು ವೀರರು ಕ್ರಮವಾಗಿ ತಮ್ಮ ವಾಹಿನಿ ಮತ್ತು ಧ್ವಜಿನಿಗಳೊಡನೆ ಹೊರಟು ಬಂದರು. ಅವರ ಜೊತೆಗೆ ರಂಗ ಮತ್ತು ಪಿಂಗರೆಂಬ ಮಂತ್ರಿಗಳಿಬ್ಬರು ತಮ್ಮ ಪೃತನಾ ಮತ್ತು ಅಕ್ಷೌಹಿಣೀ ಸೇನೆಗಳೊಡನೆ ಹೊರಟುಬಂದರು.

ಶಿಶುಪಾಲಮಹಾಸೈನ್ಯಂ ಪ್ರಲಯಾಬ್ಧಿಸಮಂ ನೃಪ ।
ಸಂವೀಕ್ಷ್ಯ ಯಾದವಸ್ತೂರ್ಣಂ ಚಾಜಗ್ಮುಃ ಕೃಷ್ಣಪೋತಕಾಃ ॥ ೩ ॥

ವಾಹಿನೀಸಹಿತಃ ಪಶ್ಚಾತ್ ದ್ಯುಮಾನ್ನಾಮಾ ಮಹಾಬಲಃ ।
ಯುಯುಧೇ ಯಾದವೈಃ ಸಾರ್ಧಂ ಶಿಶುಪಾಲಪ್ರಣೋದಿತಃ ॥ ೪ ॥

ದ್ವಯೋಶ್ಚ ಸೈನ್ಯಯೋರ್ಬಾಣೈರಂಧಕಾರೋಽಭವದ್ರಣೇ ।
ಹಯಪಾದರಜೋವೃಂದ್ಯೈಃ ಪ್ರೋತ್ಥಿತೈಶ್ಛಾದಯನ್ನಭಃ ॥ ೫ ॥

ಹಯಾಶ್ಚ ನೃಪ ಧಾವಂತಃ ಪ್ರೋತ್ಪತಂತೋ ದ್ವಿಪಾನ್ಪ್ರತಿ ।
ದ್ವಿಪಾಶ್ಚ ಸಕ್ಷತಾ ಯುದ್ಧೇ ಪಾತಯಂತಃ ಪದೈರ್ದ್ವಿಷಃ ॥ ೬ ॥

ಶುಂಡಾದಂಡಸ್ಯ ಫೂತ್ಕಾರೈರ್ಮರ್ದಯಂತ ಇತಸ್ತತಃ ।
ಕಸ್ತೂರೀಪತ್ರಸಿಂದೂರರಕ್ತಕಂಬಲಮಂಡಿತಾಃ ॥ ೭ ॥

---

೩. ಓ ನೃಪೇಂದ್ರ! ಈ ರೀತಿಯಾಗಿ ಪ್ರಳಯಕಾಲದ ಸಮುದ್ರದಂತೆ ಅಪಾರವಾದ ಆ ಶಿಶುಪಾಲನ ಮಹಾಸೇನೆಯು ಬರುತ್ತಿರುವುದನ್ನು ಕಂಡು, ಕೃಷ್ಣನ ಕುಮಾರರೂ ಇತರ ಯದುವೀರರೂ ಆ ಸೇನಾಸಾಗರವನ್ನು ದಾಟಲು ಮುಂದೆ ಬಂದರು.

೪. ಬಳಿಕ ಶಿಶುಪಾಲನಿಂದ ಆಜ್ಞಪ್ತನಾದ ದ್ಯುಮಂತನೆಂಬ ವೀರನು ತನ್ನ ವಾಹಿನಿಯೊಡನೆ ಮುಂದೆ ಬಂದು ಯಾದವ ಸೇನೆಯೊಡನೆ ಹೋರಾಡತೊಡಗಿದನು.

೫. ಆಗ ಎರಡು ಕಡೆಯ ವೀರರು ಕರೆವ ಬಾಣವರ್ಷದಿಂದಲೂ, ಕುದುರೆಗಳ ಕಾಲಿನ ತುಳಿತದಿಂದ ಮೇಲಕ್ಕೆದ್ದ ಧೂಳಿನಿಂದಲೂ ಆಕಾಶವು ಮುಚ್ಚಿಹೋದಂತಾಗಿ ಸುತ್ತಲೂ ಕತ್ತಲೆಯಾಯಿತು.

೬–೭. ಓ ನೃಪಾಲ! ಆ ಸೇನೆಗಳ ಕುದುರೆಗಳು ಇತ್ತಲಿಂದತ್ತ ಓಡುತ್ತಾ ಆನೆಗಳ ಮೇಲೆ ನೆಗೆದು ಘಾಸಿಗೊಳಿಸುತ್ತಿದ್ದುವು. ಕಸ್ತೂರೀ ಪತ್ರದಂತೆಯೂ, ಚಂದ್ರದಂತೆಯೂ ಇರತಕ್ಕ ಬಣ್ಣದಿಂದ ಕೂಡಿದ ಮೇಲು ಹೊದಿಕೆಗಳಿಂದ ಕಂಗೊಳಿಸುತ್ತಿದ್ದ ಆ ಆನೆಗಳೂ ಸಹ ಗಾಯಗಳನ್ನು ಹೊಂದಿದ್ದರೂ ಲೆಕ್ಕಿಸದೆ ತಮ್ಮ ಕಾಲುಗಳಿಂದ ಶತ್ರುಗಳನ್ನು ಎಳೆದುಕೊಂಡು ತುಳಿಯುತ್ತಾ, ತಮ್ಮ ಭಾರಿ ಸೊಂಡಲಿನಲ್ಲಿ ಬಿಡುವ ಉಸಿರುಗಳಿಂದಲೇ ಅಕ್ಕಪಕ್ಕದಲ್ಲಿರುವವರನ್ನು ಪುಡಿ ಪುಡಿಮಾಡುತ್ತಾ ಓಡಾಡುತ್ತಿದ್ದುವು.

ಬಾಣೈರ್ಗದಾಭಿಃ ಪರಿಘೈಃ ಖಡ್ಗೈಃ ಶೂಲೈಶ್ಚ ಶಕ್ತಿಭಿಃ ।
ಛಿನ್ನಾಂಗಾಃ ಪತ್ತಯಃ ಪೇತುಶ್ಛಿನ್ನಬಾಹ್ವಂಘ್ರಿಜಾನವಃ　　　　॥ ೮ ॥

ಕಶ್ಚಿತ್ತೀಕ್ಷ್ಣಾಸಿನಾ ರಾಜನ್ ಹಯಾನ್ಯುದ್ಧೇ ದ್ವಿಧಾಕರೋತ್ ।
ಕೇಚಿದ್ದಂತಾನ್ಸಂಗೃಹೀತ್ವಾ ಕುಂಭೇಷು ಕರಿಣಾಂ ಗತಾಃ　　　　॥ ೯ ॥

ಅಮಾತ್ಯಂ ಹಸ್ತಿವಾಹಂ ಚ ಮರ್ದಯಂತೋ ಮೃಗೇಂದ್ರವತ್ ।
ಉಲ್ಲಂಘಯಂತಃ ಸಹಯಾ ಗಜವೃಂದಂ ಮಹಾಬಲಾಃ　　　　॥ ೧೦ ॥

ಖಡ್ಗಪ್ರಹಾರಂ ಕುರ್ವಂತೋ ವಿದಾರ್ಯ ಪರಸೈನಿಕಾನ್ ।
ಹಯಪೃಷ್ಠಾ ನ ದೃಶ್ಯಂತೇ ದೃಶ್ಯಂತೇ ತೇ ನಟಾ ಇವ　　　　॥ ೧೧ ॥

---

೮. ಅವರಂತೆ ಕಾಲಾಳುಗಳು ಬಾಣಗಳಿಂದಲೂ, ಗದೆಗಳಿಂದಲೂ, ಕತ್ತಿಗಳಿಂದಲೂ, ಶೂಲ, ಶಕ್ತಿ, ಪರಿಘ, ಮುಂತಾದ ಶಸ್ತ್ರಗಳಿಂದಲೂ ಹೊಡೆದಾಡುತ್ತಾ ಕೈ, ಕಾಲು, ಮಂಡಿ, ಮುಂತಾದ ಅವಯವಗಳು ಕತ್ತರಿಸಿ ಬೀಳುತ್ತಿದ್ದರು.

೯. ಒಬ್ಬ ಭಟನು ಕೂರಾದ ಅಲುಗುಳ್ಳ ತನ್ನ ಕತ್ತಿಯಿಂದ ಎದುರಾಗಿ ಬರುವ ಕುದುರೆಗಳನ್ನೆಲ್ಲಾ ಎರಡು ಭಾಗವಾಗಿ ತುಂಡರಿಸುತ್ತಿದ್ದನು. ಕೆಲವುಂದಿ ಯೋಧರು ಆನೆಗಳ ದಂತಗಳನ್ನು ಹಿಡಿದುಕೊಂಡು ಅವುಗಳ ಕುಂಭಸ್ಥಳಗಳ ಮೇಲೇರಿ—

೧೦–೧೧. ಮೇಲಿದ್ದ ವೀರನನ್ನೂ, ಮಾವುತನನ್ನೂ ಸಿಂಹದಂತೆ ಸಂಹರಿಸುತ್ತಿದ್ದರು. ಕೆಲವುಂದಿ ಮಹಾ ಬಲಶಾಲಿಗಳಾದ ಅಶ್ವಾರೋಹಿಗಳು ಎದುರಿಗಿರುವ ಆನೆಯ ಸಾಲುಗಳನ್ನೂ ದಾಟಿಕೊಂಡು ಹೋಗುವಂತೆ ಕುದುರೆಗಳನ್ನು ಹಾರಿಸುತ್ತಾ ಪರ ಸೈನ್ಯದ ವೀರರನ್ನು ಕತ್ತಿಯನ್ನು ಬೀಸಿ ಹೊಡೆಯುತ್ತಾ ತುಂಡರಿಸುತ್ತಿದ್ದರು. ಆ ರೀತಿ ಅವರು ಶತ್ರು ವಧದಲ್ಲಿ ತೊಡಗಿರುವಾಗ ಆ ವೀರರು ಕುದುರೆಯ ಮೇಲೆ ಕುಳಿತಿರುವಂತೆ ಕಾಣದೆ ಗಣೆಗಳ ಮೇಲೆ ತಮ್ಮ ಚಾತುರ್ಯವನ್ನು ಪ್ರದರ್ಶಿಸುವ ದೊಂಬರಂತೆ ತೋರುತ್ತಿದ್ದರು.

ಸೈನ್ಯವೇಗಂ ಚ ಶತ್ರೂಣಾಂ ದೃಷ್ಟ್ವಾ ಕ್ರೂರಃ ಸಮಾಯಯೌ ।
ಚಕಾರ ದುರ್ದಿನಂ ಬಾಣೈರ್ಬಾಣೌಘೈಶ್ಚಾ ಪಿ ನಿರ್ಗತೈಃ ॥
ಛಾದಯಾಮಾಸ ಚಾಕ್ರೂರಂ ವರ್ಷಾಸೂರ್ಯಮಿವಾಂಬುದಃ ॥ ೧೨ ॥

ಛಿತ್ವಾ ತದ್ಬಾಣಪಟಲಮಸಿನಾ ಗಾಂದಿನೀಸುತಃ ।
ಶಕ್ತ್ಯಾ ತತಾಡ ತಂ ವೀರಂ ದ್ಯುಮಂತಂ ಕ್ರೋಧಮೂರ್ಛಿತಂ ॥ ೧೩ ॥

ತತ್ಪ್ರಹಾರೇಣ ಭಿನ್ನಾಂಗೋ ಮೂರ್ಛಿತೋ ಘಟಿಕಾದ್ವಯಂ ।
ಪುನರುತ್ಥಾಯ ಯುಯುಧೇ ಶಿಶುಪಾಲಸಖಾ ಬಲೀ ॥ ೧೪ ॥

ಗೃಹೀತ್ವಾಥ ಗದಾಂ ಗುರ್ವೀಂ ಲಕ್ಷಭಾರವಿನಿರ್ಮಿತಾಂ ।
ತತಾಡ ಹೃದಿ ಚಾಕ್ರೂರಂ ಜಗರ್ಜ ಘನವದ್ದ್ಯುಮಾನ್ ॥ ೧೫ ॥

---

೧೨. ಆಗ ಯಾದವ ವೀರನಾದ ಅಕ್ರೂರನು ಶತ್ರುಸೇನೆಯ ಈ ಉಬ್ಬರವನ್ನು ಕಂಡು ಕುಪಿತನಾಗಿ ಮುಂದೆ ಬಂದು ತನ್ನ ಧನುಸ್ಸಿನಲ್ಲಿ ಬಾಣಗಳನ್ನು ಹೂಡಿ ಒಂದೊಂದಾಗಿಯೂ, ಒಟ್ಟೊಟ್ಟಾಗಿಯೂ ಪ್ರಹರಿಸುತ್ತಾ ಆ ಬಾಣವರ್ಷದಿಂದ ಸೂರ್ಯರಶ್ಮಿಯೂ ಕೆಳಗೆ ಬೀಳದಂತೆ ಆಕಾಶವನ್ನು ಮುಚ್ಚಿಬಿಟ್ಟನು.

೧೩. ಈ ರೀತಿ ಮೇಲೆ ಬರುತ್ತಿರುವ ಆ ಅಕ್ರೂರನ ಬಾಣಪರಂಪರೆಗಳನ್ನು ಗಾಂದಿನೀಪುತ್ರನಾದ ದ್ಯುಮಂತನೆಂಬ ಆ ಶಿಶುಪಾಲನ ಕಡೆಯ ವೀರನು ಕತ್ತಿಯಿಂದ ಕತ್ತರಿಸುತ್ತಾ ಮಳೆಗಾಲದ ಮೋಡವು ಸೂರ್ಯನನ್ನು ಮರೆಮಾಡುವಂತೆ ತಾನೂ ಸಹ ಬಾಣವರ್ಷವನ್ನು ಸುರಿಸುತ್ತಾ ಆ ಅಕ್ರೂರನನ್ನು ಮುಚ್ಚಿಬಿಟ್ಟನು. ಈರೀತಿಯಾಗಿ ಕೋಪದಿಂದ ಉಬ್ಬಿ ಬರುತ್ತಿರುವ ಆ ದ್ಯುಮಂತನೆಂಬ ವೀರನನ್ನು ಅಕ್ರೂರನು ತನ್ನ ಕೈಯಲಿದ್ದ ಶಕ್ತ್ಯಾಯುಧದಿಂದ ಬೀಸಿಹೊಡೆದನು.

೧೪. ಆ ಪ್ರಹಾರದಿಂದ ಮಹಾವೀರನಾದ ಆ ಶಿಶುಪಾಲಸಖನು ಛೇದಿಸಲ್ಪಟ್ಟ ಅವಯವಗಳುಳ್ಳವನಾಗಿ ಮೂರ್ಛೆಹೊಂದಿ ಕೆಲಹೊತ್ತು ಬಿದ್ದಿದ್ದು ಕೂಡಲೇ ಮೇಲಕ್ಕೆದ್ದು ಮತ್ತೆ ಹೋರಾಡಲಾರಂಭಿಸಿದನು.

೧೫. ಅನಂತರ ಆ ದ್ಯುಮಂತನು ಒಂದುಲಕ್ಷ ಭಾರ ತೂಕವುಳ್ಳ ಭಾರಿಯಾದ ಗದೆಯೊಂದನ್ನು ತೆಗೆದುಕೊಂಡು ಆ ಅಕ್ರೂರನಮೇಲೆ ಗುರಿಯಿಟ್ಟು ಬೀಸಿ ಹೊಡೆದು ಒಂದು ಬಾರಿ ಮೇಘದಂತೆ ಗರ್ಜನೆಮಾಡಿದನು.

ಅಕ್ರೂರೇ ತತ್ಪ್ರಹಾರೇಣ ಕಿಂಚಿದ್ವ್ಯಾಕುಲಮಾನಸೇ ।
ಯುಯುಧಾನಸ್ತದಾ ಪ್ರಾಗಾಜ್ಜ್ಯಾಶಬ್ದಂ ಕಾರಯನ್ಮುಹುಃ ॥ ೧೬ ॥

ಶಿರಸ್ತಸ್ಯಾಶು ಚಿಚ್ಛೇದ ಬಾಣೇನೈಕೇನ ಲೀಲಯಾ ।
ಪತಿತೇ ದ್ಯುಮತಿ ಹ್ಯಾಜೌ ವೀರಾಸ್ತಸ್ಯ ವಿದುದ್ರುವುಃ ॥ ೧೭ ॥

ತದೈವ ಶಕ್ತಃ ಸಂಪ್ರಾಪ್ತೋ ದೃಷ್ಟ್ವಾ ಸೇನಾಂ ಪಲಾಯಿತಾಂ ।
ಶೂಲಂ ಚಿಕ್ಷೇಪ ಸಹಸಾ ಯುಯುಧಾನಾಯ ಧೀಮತೇ ॥ ೧೮ ॥

ಯುಯುಧಾನಶ್ಚ ಬಾಣೌಘೈಸ್ತಚ್ಛೂಲಂ ಶತಧಾಕರೋತ್ ।
ಶಕ್ತೌ ಗೃಹೀತ್ವಾ ಪರಿಘಂ ಯುಯುಧಾನಂ ತತಾಡ ಹ ॥ ೧೯ ॥

---

೧೬. ಆ ಪ್ರಹಾರದಿಂದ ಅಕ್ರೂರನು ಸ್ವಲ್ಪಮಟ್ಟಿಗೆ ತಲ್ಲಣಿಸಿ ಹೋದುದನ್ನು ಕಂಡು ಯುಯುಧಾನನೆಂಬ ಯಾದವ ವೀರನು ತನ್ನ ಧನುಸ್ಸಿನ ಹೆದೆಯನ್ನು ಟಂಕಾರಮಾಡುತ್ತಾ ಮುಂದೆ ಬಂದನು.

೧೭. ಹಾಗೆ ಮುಂದೆ ಬಂದವನೇ ಬಾಣವೊಂದನ್ನು ತೆಗೆದುಕೊಂಡು ಲೀಲಾಮಾತ್ರದಿಂದ ಆ ದ್ಯುಮಂತನ ತಲೆಯನ್ನು ಕತ್ತರಿಸಿಬಿಟ್ಟನು. ಈ ರೀತಿಯಾಗಿ ಯುದ್ಧಭೂಮಿಯಲ್ಲಿ ತಮ್ಮ ವೀರನು ಮಡಿದು ಬಿದ್ದುದನ್ನು ಕಂಡು ಅವನ ಕಡೆಯ ಯೋಧರು ಹೆದರಿಕೆಯಿಂದ ದಿಕ್ಕೆಟ್ಟು ಓಡಿಹೋದರು.

೧೮. ಅವನ್ನು ನೋಡಿ ಶಕ್ತನೆಂಬ ಶಿಶುಪಾಲನ ಕಡೆಯ ಮತ್ತೊಬ್ಬ ವೀರನು ತಾನು ಮುಂದೆ ಬಂದು ಯುಯುಧಾನನಿಗೆ ಗುರಿಯಿಟ್ಟು ಶೂಲದಿಂದ ಜೋರಾಗಿ ಪ್ರಹರಿಸಿದನು.

೧೯. ಆ ಶೂಲವು ತನ್ನನ್ನು ಮುಟ್ಟುವುದರೊಳಗಾಗಿಯೇ ಆ ಯುಯುಧಾನನು ತನ್ನ ಬಾಣಪರಂಪರೆಗಳಿಂದ ಅದನ್ನು ನೂರಾರು ತುಂಡುಗಳಾಗಿ ಕತ್ತರಿಸಿಬಿಟ್ಟನು. ಅದನ್ನು ಕಂಡು ಕುಪಿತನಾದ ಶಕ್ತನು ಪರಿಘಾಯುಧವನ್ನು ತೆಗೆದುಕೊಂಡು ಆ ಯುಯುಧಾನನನ್ನು ಪ್ರಹರಿಸಿದನು.

ಯುಯುಧಾನೋಽರ್ಜುನಸಖಃ ಕ್ಷಣಂ ಮೂರ್ಚ್ಛಾಮವಾಪ ಹ ।
ತದೈವ ವೀರಃ ಸಂಪ್ರಾಪ್ತಃ ಕೃತವರ್ಮಾ ಮಹಾಬಲಃ ॥ ೨೦ ॥

ಶಕ್ತಸ್ಯಾಪಿ ರಥಂ ಸಾಶ್ವಂ ಬಾಣೈಶ್ಚೂರ್ಣೀಚಕಾರ ಹ ।
ಶಕ್ರೋಽಪಿ ಚೂರ್ಣಯಾಮಾಸ ಗದಯಾ ತದ್ರಥಂ ಪರಂ ॥ ೨೧ ॥

ಕೃತವರ್ಮಾ ರಥಂ ತ್ಯಕ್ತ್ವಾ ಶಕ್ತಂ ಜಗ್ರಾಹ ರೋಷತಃ ।
ಪಾತಯಿತ್ವಾ ಭುಜಾಭ್ಯಾಂ ತಂ ಚಿಕ್ಷೇಪ ನೃಪ ಯೋಜನಂ ॥ ೨೨ ॥

ಶಕ್ತೇ ಚ ಪತಿತೇ ಯುದ್ಧೇ ಶಿಶುಪಾಲಪ್ರಣೋದಿತೌ ।
ರಂಗಪಿಂಗೌ ಮಂತ್ರಿಣೌ ತೌ ಪೃತನಾಕ್ಷೌಹಿಣೀಯುತೌ ॥ ೨೩ ॥

---

೨೦. ರಾಜೇಂದ್ರ! ಅರ್ಜುನನಿಗೆ ಸ್ನೇಹಿತನಾದ ಆ ಯುಯುಧಾನನು ಆ ಪ್ರಹಾರದಿಂದ ಒಂದು ಕ್ಷಣಕಾಲ ಮಾತ್ರ ಮೂರ್ಛಾಕ್ರಾಂತನಾದನು. ಅದನ್ನು ಕಾಣುತ್ತಲೇ ಕೃತವರ್ಮನೆಂಬ ಮಹಾಬಲಾಢ್ಯನಾದ ಮತ್ತೊಬ್ಬ ಯಾದವ ವೀರನು ಆ ಸ್ಥಳಕ್ಕೆ ನುಗ್ಗಿ ಬಂದನು.

೨೧. ಬಳಿಕ ತನ್ನ ಬಾಣಗಳಿಂದ ಆ ಶಕ್ತನ ರಥವನ್ನೂ, ಅದರ ಕುದರೆಗಳನ್ನೂ ಚೂರು ಚೂರಾಗಿ ಕತ್ತರಿಸಿಬಿಟ್ಟನು. ಆಗ ಆ ಶಕ್ತನೂ ಕುಪಿತನಾಗಿ ಕೃತವರ್ಮನು ಕುಳಿತಿದ್ದ ತೇರನ್ನು ತನ್ನ ಗದಾಪ್ರಹಾರದಿಂದ ಹುಡಿ ಹುಡಿಯಾಗಿ ಮಾಡಿಬಿಟ್ಟನು.

೨೨. ಅನಂತರ ಕೃತವರ್ಮನು ಆ ರಥವನ್ನು ಬಿಟ್ಟು ಈಚೆಗೆ ಹಾರಿಬಂದು ಮಹಾ ಕೋಪದಿಂದ ಆ ಶಕ್ತನನ್ನು ತಟಕ್ಕನೆ ಹಿಡಿದು ನೆಲದಮೇಲೆ ಬೀಳಿಸಿದನು. ಬಳಿಕ ಎರಡು ಕೈಗಳಿಂದಲೂ ಹಿಡಿದು ಗರಗರನೆ ತಿರುಗಿಸಿ ಒಂದು ಯೋಜನದಷ್ಟು ದೂರಕ್ಕೆ ಅವನನ್ನು ಎಸೆದುಬಿಟ್ಟನು.

೨೩–೨೪. ಓ ರಾಜೇಂದ್ರ! ಈ ರೀತಿ ಶಕ್ತನು ಬಿದ್ದುಹೋದ್ದನ್ನು ಕಂಡು ಶಿಶುಪಾಲನಿಂದ ಪ್ರೇರಿತರಾದ ರಂಗ ಮತ್ತು ಪಿಂಗರೆಂಬ ಆತನ ಮಂತ್ರಿಗಳಿಬ್ಬರು ತಮ್ಮ ತಮ್ಮ ಪೃತನಾ ಮತ್ತು ಅಕ್ಷೌಹಿಣೀ ಸೇನೆಗಳೊಡನೆ ಹೊರಟು ಶತ್ರುಸೇನೆಯ

ಬಾಣವರ್ಷಂ ಪ್ರಕುರ್ವಂತೌ ಮರ್ದಯಂತಾವರೀನ್ಮೃಧೇ ।
ಆಜಗ್ಮತುರ್ಮೈಥಿಲೇಂದ್ರ ಯಥಾ ವಾತಹುತಾಶನೌ ॥ ೨೪ ॥

ಉದ್ಭಟಂ ತದ್ಬಲಂ ವೀಕ್ಷ್ಯ ಯಾದವೇಂದ್ರಪಿತುಃ ಸಮಃ ।
ಆದಾಯ ಚಾಪಂ ಸದಸಿ ಪ್ರದ್ಯುಮ್ನೋ ವಾಕ್ಯಮಬ್ರವೀತ್ ॥ ೨೫ ॥

॥ ಪ್ರದ್ಯುಮ್ನ ಉವಾಚ ॥

ಅಹಂ ಗಮಿಷ್ಯಾಮಿ ಪುರೋ ರಂಗಪಿಂಗಮೃಧೇ ಜನಾಃ ।
ರಂಗಪಿಂಗೌ ಚ ದೃಶ್ಯೇತೇ ಮಹಾಬಲಪರಾಕ್ರಮೌ ॥ ೨೬ ॥

॥ ಶ್ರೀ ನಾರದ ಉವಾಚ ॥

ಏತಚ್ಛ್ರುತ್ವಾ ಮಹಾಬಾಹುರ್ಭಾನುಃ ಕೃಷ್ಣಸುತೋ ಬಲೀ ।
ಸರ್ವೇಷಾಮಗ್ರತೋ ಭೂತ್ವಾ ಭ್ರಾತರಂ ಪ್ರಾಹ ನೀತಿವಿತ್ ॥ ೨೭ ॥

ಮೇಲೆ ಬಾಣಗಳನ್ನು ಮಳೆಯಂತೆ ಸುರಿಸುತ್ತಾ ಅವರನ್ನು ನೆಲಕ್ಕೆ ಬೀಳುವಂತೆ ಕತ್ತರಿಸಿ ಕೆಡುಹುತ್ತಾ ಒಟ್ಟಾಗಿ ಸೇರಿದ ಬೆಂಕಿ ಗಾಳಿಗಳಂತೆ ಮುನ್ನುಗ್ಗಿ ಬಂದರು.

೨೫. ಹೀಗೆ ಮಹಾರಭಸದಿಂದ ಮುನ್ನುಗ್ಗುತ್ತಿರುವ ಶೂರಭಟರನ್ನೊಳಗೊಂಡ ಆ ಸೇನೆಯನ್ನು ಕಂಡು ತನ್ನ ತಂದೆಗೆ ಸರಿಸಮನಾದ ಪರಾಕ್ರಮವುಳ್ಳ ಆ ಪ್ರದ್ಯುಮ್ನನು ಬಿಲ್ಲನ್ನು ಕೈಗೆ ತೆಗೆದುಕೊಂಡು ತನ್ನ ಕಡೆಯ ಗುಂಪಿಗೆ ಈ ರೀತಿ ಹೇಳಿದನು.

೨೬. "ಎಲೈ ವೀರರಿರಾ! ಈ ರಂಗ ಪಿಂಗರು ಮಹಾಬಲಶಾಲಿಗಳಾಗಿ ತೋರುವರು ಆದುದರಿಂದ ಇವರೊಡನೆ ಹೋರಾಡಲು ನಾನೇ ಮುಂದೆ ಹೋಗುವೆನು".

೨೭. ಓ ರಾಜೇಂದ್ರ! ಈ ರೀತಿಯಾಗಿ ಪ್ರದ್ಯುಮ್ನನು ಹೇಳಿದುದನ್ನು ಕಂಡು ಶ್ರೀಕೃಷ್ಣಪುತ್ರನಾದ ಭಾನುವೆಂಬ ಮಹಾ ಬಾಹುವು ಎಲ್ಲರಿಗಿಂತಲೂ ಮುಂದೆಹೋಗಿ ತನ್ನ ಅಣ್ಣನಿಗೆ ನೀತಿ ಸಮ್ಮತವಾದ ಈ ಮಾತನ್ನು ಹೇಳಿದನು.

|| ಭಾನುರುವಾಚ ||

ತ್ರೈಲೋಕ್ಯಂ ದೃಶ್ಯತೇ ಪ್ರಾಪ್ತಂ ಯದಾ ತೇ ಸಂಮುಖೇ ಪ್ರಭೋ ।
ತದಾ ತೇ ಚಾಪಟಂಕಾರೋ ಭವಿಷ್ಯತಿ ನ ಸಂಶಯಃ || ೨೮ ||

ಕೇವಲೇನಾಪಿ ಖಡ್ಗೇನ ಶಿರಸೀ ರಂಗಪಿಂಗಯೋಃ ।
ಛಿತ್ವಾ ಚಾತ್ರ ಪ್ರವೇಕ್ಷ್ಯಾಮಿ ಕಲಿಂಗಶಕಲಾವಿವ || ೨೯ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ದ್ಯುಮಚ್ಛಕ್ತವಧೋ ನಾಮಾಽಷ್ಟಮೋಽಧ್ಯಾಯಃ

---

೨೮. "ಎಲೈ ಪ್ರಭುವೇ ! ಮೂರು ಲೋಕಗಳೂ ಒಟ್ಟಾಗಿ ಸೇರಿ ನಿನಗೆದುರಾಗಿ ಹೋರಾಡಲು ಬಂದಾಗ ಮಾತ್ರ ನಿನ್ನ ಧನುಸ್ಸಿನ ಹೆದೆಯನ್ನು ಖಂಡಿತವಾಗಿಯೂ ಟಂಕಾರಮಾಡುವೆಯಂತೆ.

೨೯. ಈಗ ಮಾತ್ರ ನಾನು ಇನ್ನಾವ ಆಯುಧಗಳನ್ನೂ ಅಪೇಕ್ಷಿಸದೆ ಬರೀ ಕತ್ತಿಯೊಂದರಿಂದಲೇ ಆ ರಂಗ ಪಿಂಗರ ತಲೆಗಳನ್ನು ಚೆಂಡಾಡಿ ಬೇಗನೆ ಇಲ್ಲಿಗೆ ಬರುವೆನು" ಎಂದನು.

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ನಾರದ ಬಹುಲಾಶ್ವ ಸಂವಾದದಲ್ಲಿ ದ್ಯುಮತ್ ಮತ್ತು ಶಕ್ತರೆಂಬ ವೀರರ ವಧವೆಂಬ ಎಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ನವಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಶತ್ರುಹಾ ಭಾನುರ್ಗೃಹೀತ್ವಾ ಖಡ್ಗಚರ್ಮಣೀ ।
ಪದಾತಿಃ ಪ್ರಯಯೌ ಸೈನ್ಯೇ ವನೇ ವನ್ಯಕರೀವ ಸಃ ॥ ೧ ॥

ಭಾನುಃ ಖಡ್ಗೇನ ಶತ್ರೂಂಸ್ತಾಂಶ್ಛಿನ್ನಬಾಹೂಂಶ್ಚಕಾರ ಹ ।
ದ್ವಿಪಾನ್ಹಯಾನ್ಸಂಮುಖಸ್ಥಾನ್ಪಾರ್ಶ್ವಸ್ಥಾಂಶ್ಚ ದ್ವಿಧಾಕರೋತ್ ॥ ೨ ॥

ಒಂಭತ್ತನೆಯ ಅಧ್ಯಾಯವು

೧. ಓ ರಾಜೇಂದ್ರ ! ಆಲಿಸು. ಈ ರೀತಿಯಾಗಿ ನುಡಿದು ಶತ್ರುಸಂಹಾರಿಯಾದ ಆ ಭಾನುಕುಮಾರನು ಕತ್ತಿ ಗುರಾಣಿಗಳನ್ನು ಕೈಗೆ ತೆಗೆದುಕೊಂಡು ಯಾವ ವಾಹನವನ್ನೂ ಅಪೇಕ್ಷಿಸದೆ ಪದಾತಿಯಾಗಿಯೇ (ಕಾಲ್ನಡಿಗೆಯಲ್ಲಿಯೇ) ಆ ಸೈನ್ಯದಲ್ಲಿ ಕಾಡಾನೆಯು ಕಾಡಿನಲ್ಲಿ ನುಗ್ಗುವಂತೆ ಮುನ್ನುಗ್ಗಿದನು.

೨. ಮತ್ತು ತನ್ನೆದುರಾದ ಶತ್ರುಗಳನ್ನು ಖಡ್ಗಪ್ರಹಾರದಿಂದ ಕೈಗಳು ಕತ್ತರಿಸಿ ಹೋಗುವಂತೆ ಮಾಡಿದುದಲ್ಲದೆ, ತನ್ನೆದುರಿನಲ್ಲಿಯೂ, ಅಕ್ಕ ಪಕ್ಕಗಳಲ್ಲಿಯೂ ಇರುವ ಶತ್ರುಗಳ ಪಡೆಗೆ ಸೇರಿದ ಆನೆಗಳನ್ನೂ, ಕುದುರೆಗಳನ್ನೂ ಎರಡೆರಡಾಗಿ ತುಂಡಾಗುವಂತೆ ಕತ್ತರಿಸಿದನು.

ಖಡ್ಗದ್ವಿತೀಯೋ ಹ್ಯೇಕಾಕೀ ರೇಜೇ ಭಿಂದನ್ನರೀನ್ಮೃಧೇ ।
ನೀಹಾರಮೇಘಪಟಲೈರ್ಭಾನುರ್ಭಾನುರಿವ ಸ್ಫುರನ್ ॥ ೩ ॥

ಹಸ್ತಿನಾಂ ಚ್ಛಿನ್ನಕುಂಭಾನಾಂ ಭಾನುಃ ಖಡ್ಗೇನ ಮೈಥಿಲ ।
ಮುಕ್ತಾ ನಿಪೇತುಶ್ಚ ಯಥಾ ತಾರಕಾಃ ಕ್ಷೀಣಕರ್ಮಣಾಂ ॥ ೪ ॥

ಲಕ್ಷಮಾತ್ರೇಣ ತತ್ಸೈನ್ಯಂ ಪಾತಯಿತ್ವಾ ರಣಾಂಗಣೇ ।
ರಂಗಪಿಂಗೋಪರಿ ಪ್ರಾಗಾದ್ಭಾನುರ್ವೀರೋ ಮಹಾಬಲಃ ॥ ೫ ॥

ಕೃಷ್ಣದತ್ತೇನ ಖಡ್ಗೇನ ರಥೌ ತೌ ರಂಗಪಿಂಗಯೋಃ ।
ಛಿತ್ವಾ ಹಯಾನ್ಸನೇತೄಂಶ್ಚ ಭಾನುರ್ಯುದ್ಧೇ ದ್ವಿಧಾಕರೋತ್ ॥ ೬ ॥

---

೩. ಈ ರೀತಿಯಾಗಿ ಬರೀ ಕತ್ತಿಯೊಂದನ್ನೇ ಕೈಲಿ ಹಿಡಿದು ಶತ್ರುಗಳನ್ನು ತುಂಡರಿಸುತ್ತಾ ಅವರ ನಡುವೆ ಮುನ್ನುಗ್ಗುತ್ತಿರುವ ಆ ಭಾನುಕುಮಾರನು ಆಕಾಶದಲ್ಲಿ ಹಿಮವನ್ನೂ ಮೇಘಗಳನ್ನೂ ಕತ್ತರಿಸಿಕೊಂಡು ಬರುವ ಸೂರ್ಯನಂತೆ ಕಂಗೊಳಿಸಿದನು.

೪. ಹೇ ಮೈಥಿಲ ನರೇಂದ್ರ! ಆ ಭಾನುಕುಮಾರನ ಖಡ್ಗಪ್ರಹಾರದಿಂದ ಕತ್ತರಿಸಿ ಹೋದ ಆನೆಗಳ ಕುಂಭಸ್ಥಳಗಳಿಂದ ತಾವು ಮಾಡಿದ ಪುಣ್ಯಫಲವು ತೀರಿದೊಡನೆ ನಕ್ಷತ್ರರೂಪದಿಂದಿರುವ ದೇವತೆಗಳು ಕೆಳಗುರುಳುವಂತೆ ಮುತ್ತುಗಳು ಉದುರಿಬಿದ್ದುವು.

೫. ಮಹಾಬಲಿಷ್ಠನೂ, ವೀರಾಗ್ರಣಿಯೂ ಆದ ಆ ಭಾನುವು ಒಂದುಲಕ್ಷ ಮಂದಿ ಸೈನಿಕರನ್ನು ಈರೀತಿಯಾಗಿ ತುಂಡರಿಸಿ ಅನಂತರ ರಂಗ, ಪಿಂಗರೆಂಬ ಆ ಶಿಶುಪಾಲಮಂತ್ರಿಗಳ ಮೇಲೇರಿ ಬಂದನು.

೬. ಬಳಿಕ ತನ್ನ ತಂದೆಯಾದ ಶ್ರೀಕೃಷ್ಣನಿಂದ ಕೊಡಲ್ಪಟ್ಟಿದ್ದ ಆ ಖಡ್ಗದಿಂದ ರಂಗ, ಪಿಂಗರು ಕುಳಿತಿದ್ದ ರಥಗಳ ಕುದುರೆಗಳನ್ನೂ, ಸಾರಥಿಗಳನ್ನೂ ಎರಡಾಗಿ ಕತ್ತರಿಸಿಬಿಟ್ಟನು.

ಖಡ್ಗೌ ನೀತ್ವಾ ರಂಗಪಿಂಗೌ ತೇಡತುಸ್ತಂ ಮಹೋದ್ಭಟೌ ।
ಭಾನುಚರ್ಮಗತೌ ಖಡ್ಗೌ ಭಂಗೀಭೂತೌ ಬಭೂವತುಃ ॥ ೭ ॥

ಭಾನುಖಡ್ಗಪ್ರಹಾರೇಣ ಶಿರಸೀ ರಂಗಪಿಂಗಯೋಃ ।
ಯುಗಪತ್ಪೇತತುರ್ಯುದ್ಧೇ ತದದ್ಭುತಮಿವಾಭವತ್ ॥ ೮ ॥

ಭಾನುಸ್ತಯೋಶ್ಚ ಶಿರಸೀ ನೀತ್ವಾ ಪ್ರದ್ಯುಮ್ನಸಂಮುಖೇ ।
ಆಯಯೌ ವಿಜಯೀ ವೀರಃ ಶ್ಲಾಘಿತಃ ಸೈನ್ಯನಾಯಕೈಃ ॥ ೯ ॥

ದಿವಿ ದುಂದುಭಯೋ ನೇದುರ್ನರದುಂದುಭಿಭಿಃ ಸಮಂ ।
ಆಭೂಜ್ಜಯಜಯಾರಾವಃ ಪುಷ್ಪವರ್ಷಾಃ ಸುರೈಃ ಕೃತಾಃ ॥ ೧೦ ॥

---

೭. ಅದನ್ನು ಕಂಡು ಮಹಾಸಾಹಸಿಗರಾದ ಆ ರಂಗ, ಪಿಂಗರು ತಮ್ಮ ತಮ್ಮ ಕತ್ತಿಗಳನ್ನು ತೆಗೆದುಕೊಂಡು ಆ ಭಾನುವಿನಮೇಲೆ ಜೋರಾಗಿ ಪ್ರಹರಿಸಿದರು. ಆದರೇನು ? ಆ ಖಡ್ಗಗಳು ಭಾನುಕುಮಾರನ ಗುರಾಣಿಯೊಳಗೆ ಹೊಕ್ಕು ಮುರಿದು ಬಿದ್ದುವು.

೮. ಅನಂತರ ಆ ಭಾನುವು ಅದೇ ಸಮಯವನ್ನು ಸಾಧಿಸಿ ತನ್ನ ಕತ್ತಿಯ ಹೊಡೆತದಿಂದ ಒಂದೇ ಏಟಿಗೆ ಆ ರಂಗ, ಪಿಂಗರ ತಲೆಗಳನ್ನು ಕತ್ತರಿಸಿಬಿಟ್ಟನು. ಓ ರಾಜೇಂದ್ರ ! ಆಗಿನ ಆಶ್ಚರ್ಯವನ್ನು ಏನು ಹೇಳಲಿ ? ಅವರಿಬ್ಬರ ತಲೆಗಳೂ ಏಕಕಾಲದಲ್ಲಿ ನೆಲದಮೇಲೆ ಉರುಳಿಬಿದ್ದುವು.

೯. ಅನಂತರ ಜಯಶೀಲನಾದ ಆ ಭಾನುಕುಮಾರನು ಆ ರಂಗ, ಪಿಂಗರ ತಲೆಗಳನ್ನು ತೆಗೆಸಿಕೊಂಡು ತನ್ನ ಕಡೆಯ ಸೇನಾಪತಿಗಳಿಂದ ಪ್ರಶಂಸಿಸಲ್ಪಡುತ್ತಾ ಪ್ರದ್ಯುಮ್ನನ ಬಳಿಗೆ ಬಂದನು.

೧೦. ಆಗ ಯಾದವರ ಕಡೆಯ ಜಯದುಂದುಭಿಗಳೊಡನೆ ದೇವತೆಗಳೂ ಸಹ ಹರ್ಷಸೂಚಕವಾಗಿ ತಮ್ಮ ದುಂದುಭಿ (ನಗಾರಿ) ಗಳನ್ನು ಬಾರಿಸಿದುದಲ್ಲದೆ ಜಯ ಜಯ ಎಂಬುದಾಗಿ ಸಂತೋಷದಿಂದ ಘೋಷಿಸುತ್ತಾ ಪುಷ್ಪವರ್ಷವನ್ನು ಸುರಿಸಿದರು.

ರಂಗಪಿಂಗೌ ಮೃತೌ ಶ್ರುತ್ವಾ ಶಿಶುಪಾಲೋ ರುಷಾನ್ವಿತಃ ।
ಜೈತ್ರಂ ರಥಂ ಸಮಾರುಹ್ಯ ಯದೂನಾಂ ಸಂಮುಖಂ ಯಯೌ ॥ ೧೧ ॥

ಮದಚ್ಯುದ್ಭಿರ್ಗಜೈರ್ದೀರ್ಘೈ ರತ್ನಕಂಬಲಮಂಡಿತೈಃ ।
ಸ್ವರ್ಣನೀಡಸಮಾಯುಕ್ತೈರ್ಲೋಲಘಂಟಾಕ್ವಣತ್ಸ್ವನೈಃ ॥ ೧೨ ॥

ರಥೈಶ್ಚ ದೇವಧಿಷ್ಣ್ಯಾಭೈರ್ನಾಯುಮೇಗೈಸ್ತುರಂಗಮೈಃ ।
ವಿದ್ಯಾಧರಸಮೈರ್ವೀರೈರ್ನಾದಯನ್ವಸುಧಾತಲಂ ॥ ೧೩ ॥

ಶಿಶುಪಾಲಬಲಂ ದೃಷ್ಟ್ವಾ ಶಕ್ರದತ್ತೇ ರಥೇ ತತಃ ।
ಸರ್ವೇಷಾಮಗ್ರತಃ ಕಾರ್ಷ್ಣಿಃ ಪ್ರಯಯೌ ಧನ್ವಿನಾಂ ವರಃ ॥ ೧೪ ॥

ಶಂಖಂ ದಧ್ಮೌ ಹರೇಃ ಪುತ್ರೋ ದಿಶಃ ಖಂ ನಾದಯನ್ನೃಪ ।
ತೇನ ನಾದೇನ ಶತ್ರೂಣಾಂ ಕಂಪೋಽಭೂದ್ಧೃದಿ ಮಾನದ ॥ ೧೫ ॥

---

೧೧. ಇತ್ತಲಾಗಿ ಶಿಶುಪಾಲನು ತನ್ನ ಮಂತ್ರಿಗಳಾದ ರಂಗ ಪಿಂಗರು ಹತರಾದರೆಂಬ ಸುದ್ದಿಯನ್ನು ಕೇಳಿ ಮಹಾ ಕೋಪವನ್ನು ತಾಳಿ, ಯುದ್ಧಯೋಗ್ಯವಾದ ರಥವೊಂದನ್ನೇರಿ ಕುಳಿತು ಯಾದವ ಸೇನೆಗೆದುರಾಗಿ ಬಂದನು.

೧೨–೧೩. ರಾಜೇಂದ್ರ! ಆ ಶಿಶುಪಾಲನ ಸೇನೆಯಲ್ಲಿ ಮದೋದಕವನ್ನು ಸುರಿಸುತ್ತಾ ರತ್ನಗಂಬಳಿಗಳಿಂದಲೂ, ಚಿನ್ನದ ಸರಗಳಿಂದಲೂ ಅಲಂಕೃತವಾಗಿ ಚಂಚಲವಾದ ಗಂಟೆಗಳನ್ನು ಝಣ ಝಣರೆನಿಸುತ್ತಾ ಬರುತ್ತಿರುವ ಮಹೋನ್ನತವಾದ ಆನೆಗಳೂ, ದೇವಾಲಯಗಳಂತೆ ಚಿನ್ನದ ಕಲಶಗಳಿಂದ ಕಂಗೊಳಿಸುವ ತೇರುಗಳೂ, ವಿದ್ಯಾಧರರಿಗೆಣೆಯಾದ ಪರಾಕ್ರಮವುಳ್ಳ ರಥಿಕರೂ ಹೇರಳವಾಗಿ ತುಂಬಿದ್ದರು ಇವರ ಕೋಲಾಹಲದಿಂದ ಭೂಮಂಡಲವೇ ತುಂಬಿಹೋಯಿತು.

೧೪. ಈ ರೀತಿ ಶಿಶುಪಾಲನ ಸೇನೆಯು ಬರುತ್ತಿರುವುದನ್ನು ಕಂಡು ಧನುರ್ಧರಾಗ್ರೇಸರನಾದ ಆ ಪ್ರದ್ಯುಮ್ನನು ತನಗೆ ಇಂದ್ರನು ಕೊಟ್ಟಿದ್ದ ರಥವನ್ನೇರಿ ಕುಳಿತು ತನ್ನ ಸೇನೆಯ ಮುಂದೆ ಬಂದು ನಿಂತನು.

೧೫. ಆಗ ಆ ಪ್ರದ್ಯುಮ್ನನು ಉತ್ಸಾಹ ಸೂಚಕವಾದ ತನ್ನ ಶಂಖವನ್ನೂದಿದನು. ಆ ಶಬ್ದದಿಂದ ದಿಕ್ಕುಗಳೂ, ಆಕಾಶವೂ ತುಂಬಿಹೋದುವು. ಆ ನಾದವನ್ನು ಕೇಳಿ ಶತ್ರುವೀರರ ಹೃದಯದಲ್ಲಿ ನಡುಕವುಂಟಾಯಿತು.

ಶಿಶುಪಾಲಮಹಾಸೈನ್ಯೇ ಪ್ರಾಸಾದ ಇವ ದುರ್ಗಮೇ ।
ಚಕ್ರೇ ನಾರಾಚಸೋಪಾನಂ ಸಹಸಾ ರುಕ್ಮಿಣೀಸುತಃ　　　　॥ ೧೬ ॥

ದಮಘೋಷಸುತೋ ಧೀಮಾನ್ಧನುಷ್ಟಂಕಾರಯನ್ಮುಹುಃ ।
ಬ್ರಹ್ಮಾಸ್ತ್ರಂ ಸಂದಧೇ ಯದ್ವೈ ದತ್ತಾತ್ರೇಯೇಣ ಶಿಕ್ಷಿತಂ　　　　॥ ೧೭ ॥

ಪ್ರಚಂಡಂ ಸರ್ವತಸ್ತೇಜೋ ದೃಷ್ಟ್ವಾ ಶ್ರೀರುಕ್ಮಿಣೀಸುತಃ ।
ಬ್ರಹ್ಮಾಸ್ತ್ರೇಣಾಪಿ ತದ್ಯುದ್ಧೇ ಸಂಜಹಾರ ಸಲೀಲಯಾ　　　　॥ ೧೮ ॥

ಶಿಶುಪಾಲೋ ಮಹಾಧೀಮಾನಂಗಾರಾಸ್ತ್ರಂ ಸಮಾದಧೇ ।
ಜಾಮದಗ್ನ್ಯೇನ ಯದ್ದತ್ತಂ ಮಹೇಂದ್ರೇ ಪರ್ವತೇ ನೃಪ　　　　॥ ೧೯ ॥

---

೧೬. ಭಾರಿಯಾದ ಉಪ್ಪರಿಗೆಯ ಮನೆಯಂತೆ ಪ್ರವೇಶಿಸಲು ಸಾಧ್ಯವಿಲ್ಲದಿರುವ ಆ ಶಿಶುಪಾಲನ ಮಹಾಸೇನೆಯನ್ನು ಒಳಹೊಗುವುದಕ್ಕೋಸ್ಕರ ಆ ಪ್ರದ್ಯುಮ್ನನು ತನ್ನ ಬಾಣಗಳಿಂದ ಸೋಪಾನವನ್ನು ವಿರಚಿಸಿದನು.

೧೭. ಆಗ ಕುಶಲಮತಿಯಾದ ಆ ದಮಘೋಷ ಪುತ್ರನು (ಶಿಶುಪಾಲನು) ತನ್ನ ಧನುಸ್ಸನ್ನು ಟಂಕಾರಮಾಡುತ್ತಾ ದತ್ತಾತ್ರೇಯನಿಂದ ಉಪದೇಶಿಸಲ್ಪಟ್ಟಿದ್ದ ಬ್ರಹ್ಮಾಸ್ತ್ರವನ್ನು ಅದರಲ್ಲಿ ಸಂಧಾನಮಾಡಿದನು.

೧೮. ಅದರಿಂದ ಎಲ್ಲ ಕಡೆಯಲ್ಲೂ ಅತಿಶಯವಾದ ಬೆಳಕುಂಟಾದುದನ್ನು ಕಂಡು, ರುಕ್ಮಿಣೀ ಪುತ್ರನಾದ ಆ ಪ್ರದ್ಯುಮ್ನನು ತಾನೂ ಸಹ ಅದಕ್ಕೆ ಪ್ರತಿಯಾಗಿ ಬ್ರಹ್ಮಾಸ್ತ್ರವನ್ನು ಹೂಡಿ ಅದನ್ನು ಶಮನಗೊಳಿಸಿದನು.

೧೯. ಅನಂತರ ಯುದ್ಧಕಲಾಕೋವಿದನಾದ ಆ ಶಿಶುಪಾಲನು ಮಹೇಂದ್ರ ಪರ್ವತದಲ್ಲಿ ತನಗೆ ಪರಶುರಾಮನಿಂದ ಕೊಡಲ್ಪಟ್ಟಿದ್ದ ಆಗ್ನೇಯಾಸ್ತ್ರವನ್ನು ಧನುಸ್ಸಿನಲ್ಲಿ ಹೂಡಿದನು.

ತಸ್ಮಾದಂಗಾರವರ್ಷಾಭಿಃ ಕಾರ್ಷ್ಣಿಸೇನಾತಿವಿಹ್ವಲಾ ।
ಪರ್ಜನ್ಯಾಸ್ತ್ರಂ ಮಹಾದಿವ್ಯಂ ತದಾ ಕಾರ್ಷ್ಣಿಃ ಸಮಾದಧೇ ॥ ೨೦ ॥

ಸ್ಥೂಲಾಭಿರ್ಮೇಘಧಾರಾಭಿರಂಗಾರಾಃ ಶಾಂತಿಮಾಯಯುಃ ।
ಶಿಶುಪಾಲಸ್ತದಾ ಕ್ರುದ್ಧೋ ಗಜಾಸ್ತ್ರಂ ತಂ ಸಮಾದಧೇ ॥ ೨೧ ॥

ಯದಗಸ್ತ್ಯೇನ ಮುನಿನಾ ಶಿಕ್ಷಿತಂ ಮಲಯಾಚಲೇ ।
ಮಹೋದ್ಭಟಾ ಗಜಾ ದೀರ್ಘಾಃ ಕೋಟಿಶಸ್ತದ್ವಿನಿರ್ಗತಾಃ ॥ ೨೨ ॥

ತೇ ಸೈನ್ಯಂ ಪಾತಯಾಮಾಸುಃ ಪ್ರದ್ಯುಮ್ನಸ್ಯ ಮಹಾತ್ಮನಃ ।
ಹಾಹಾಕಾರೋ ಮಹಾನಾಸೀದ್ಯದೂನಾಂ ವಾಹಿನೀಷು ಚ ॥ ೨೩ ॥

---

೨೦. ಆ ಅಸ್ತ್ರದಿಂದುಂಟಾದ ಬೆಂಕಿಯ ಕಿಡಿಗಳಿಂದ ಪ್ರದ್ಯುಮ್ನನ ಸೇನೆಯು ಬಹಳವಾಗಿ ಕಳವಳಕ್ಕೀಡಾಯಿತು. ಅದನ್ನು ಕಂಡು ಪ್ರದ್ಯುಮ್ನನು ಪರ್ಜನ್ಯಾಸ್ತ್ರವನ್ನು ತನ್ನ ಬಿಲ್ಲಿನಲ್ಲಿ ಹೂಡಿದನು.

೨೧. ಆಗ ಆ ಅಸ್ತ್ರಪ್ರಭಾವದಿಂದುಂಟಾದ ವರ್ಷಧಾರೆಗಳಿಂದ ಆ ಬೆಂಕಿಯ ಕಿಡಿಗಳೆಲ್ಲಾ ಆರಿಹೋದುವು. ಅದನ್ನು ನೋಡಿ ಮಹಾ ಕೋಪವನ್ನು ತಾಳಿದ ಆ ಶಿಶುಪಾಲನು—

೨೨. ಹಿಂದೆ ಅಗಸ್ತ್ಯಮಹರ್ಷಿಯು ಮಲಯಪರ್ವತದಲ್ಲಿ ತನಗೆ ಉಪದೇಶಿಸಿದ್ದ ಗಜಾಸ್ತ್ರವನ್ನು ತೆಗೆದುಕೊಂಡು ಬಿಲ್ಲಿನಲ್ಲಿ ಹೂಡಿದನು. ಅದರಿಂದ ಮಹಾ ಬಲಾಢ್ಯವಾದ ಭಾರಿ ಆನೆಗಳು ಕೋಟಿಗಟ್ಟಲೆ ಬರಲಾರಂಭಿಸಿದುವು.

೨೩. ಆ ಆನೆಗಳು ಪ್ರದ್ಯುಮ್ನನ ಸೈನ್ಯವನ್ನು ಹೊಕ್ಕು ಅಲ್ಲಿದ್ದವರನ್ನೆಲ್ಲಾ ನೆಲಕ್ಕೆ ಕೆಡವುತ್ತಾ ನುಗ್ಗಿಬಂದುವು. ಆಗ ಆ ಸೇನೆಯಲ್ಲಿ ಪ್ರಬಲವಾದ ಹಾಹಾಕಾರವೆದ್ದಿತು.

ಪ್ರದ್ಯುಮ್ನೋಽಥ ರಣಶ್ಲಾಘೀ ನೃಸಿಂಹಾಸ್ತ್ರಂ ಸಮಾದಧೇ ।
ನೃಸಿಂಹೋ ನಿರ್ಗತಸ್ತಸ್ಮಾನ್ನಾದಯನ್ಸ್ವಸುಧಾತಲಂ　　　　॥ ೧೪ ॥

ಸ್ಫುರತ್ಸಟೋ ದೀರ್ಘವಾಲೋ ನಖಲಾಂಗಲಭೀಷಣಃ ।
ನನಾದ ಹುಂಕೃತೈಃ ಶಬ್ದೈರ್ಭಕ್ಷಯಂಸ್ತಾನ್ಗಜಾನ್ರಣೇ　　　　॥ ೧೫ ॥

ವಿದಾರ್ಯ ಗಜಕುಂಭಾನ್ತಮುತ್ಪತನ್ಭಗವಾನ್ಹರಿಃ ।
ಗಜವೃಂದಂ ಮರ್ದಯಿತ್ವಾ ತತ್ರೈವಾಂತರಧೀಯತ　　　　॥ ೧೬ ॥

ಚಿಕ್ಷೇಪ ಪರಿಘಂ ರೋಷಾಚ್ಛಿಶುಪಾಲೋ ಮಹಾಬಲಃ ।
ಚಿಚ್ಛೇದ ಪರಿಘಂ ತದ್ವೈ ಯಮದಂಡೇನ ಮಾಧವಃ　　　　॥ ೧೭ ॥

---

೧೪. ಆಗ ರಣಪಂಡಿತನಾದ ಪ್ರದ್ಯುಮ್ನನು ತನ್ನ ಧನುಸ್ಸಿನಲ್ಲಿ ನೃಸಿಂಹಾಸ್ತ್ರವನ್ನು ಸಂಧಾನ ಮಾಡಿದನು. ಕೂಡಲೇ ಆ ಅಸ್ತ್ರದಿಂದ ಜಗತ್ತೆಲ್ಲವನ್ನೂ ತನ್ನ ಕೋಲಾಹಲದಿಂದ ತುಂಬುತ್ತಿರುವ ನೃಸಿಂಹನು ಹೊರಟುಬಂದನು.

೧೫. ಓ ರಾಜೇಂದ್ರ ! ಆ ನೃಸಿಂಹನ ಸ್ವರೂಪವನ್ನು ಏನೆಂದು ವರ್ಣಿಸಲಿ ? ಹೊಳೆಯುತ್ತಿರುವ ಕೇಸರಗಳು ! ಉದ್ದವಾದ ಬಾಲ ! ನೇಗಿಲಿನಂತಿರುವ ಕೂರಾದ ಉಗುರುಗಳು ! ಹೀಗೆ ಭಯಂಕರ ಸ್ವರೂಪದಿಂದ ಬರುತ್ತಿದ್ದ ಆ ನೃಸಿಂಹನು ಯುದ್ಧರಂಗದಲ್ಲಿ ನುಗ್ಗಿ ಬರುತ್ತಿದ್ದ ಆ ಆನೆಗಳನ್ನು ತಿಂದು ಹಾಕುತ್ತಾ ಗಟ್ಟಿಯಾಗಿ ಹುಂಕಾರಮಾಡುತ್ತಾ ಒಂದು ಬಾರಿ ಗರ್ಜನೆಮಾಡಿದನು.

೧೬. ಬಳಿಕ ಆ ನೃಸಿಂಹನು ಆನೆಗಳ ಕುಂಭಸ್ಥಳಗಳನ್ನು ಒಳಗಿನ ಭಾಗವು ಚೆನ್ನಾಗಿ ಕಾಣುವಂತೆ ಉಗುರುಗಳಿಂದ ಸೀಳಿ ಆ ಆನೆಗಳ ಹಿಂಡೆಲ್ಲವನ್ನೂ ಸಂಪೂರ್ಣವಾಗಿ ನಾಶಗೊಳಿಸಿದದಂತರ ಆಕಾಶಕ್ಕೆ ನೆಗೆದು ಅಲ್ಲಿಯೇ ಕಣ್ಮರೆಯಾದನು.

೧೭. ಅದನ್ನು ಕಂಡು ಆ ಮಹಾಬಲಶಾಲಿಯಾದ ಶಿಶುಪಾಲನು ಕೋಪದಿಂದ ಪರಿಘವೊಂದನ್ನು ಪ್ರದ್ಯುಮ್ನನಮೇಲೆ ಪ್ರಯೋಗಿಸಿದನು. ಆಗ ಆ ಪ್ರದ್ಯುಮ್ನನು ತನಗೆ ಯಮನು ಕೊಟ್ಟಿದ್ದ ಕಾಲದಂಡದಿಂದ ಆ ಪರಿಘವನ್ನು ಕತ್ತರಿಸಿ ಕೆಡಹಿದನು.

ತತಶ್ಚೈದ್ಯೋ ರುಷಾವಿಷ್ಟೋ ಗೃಹೀತ್ವಾ ಖಡ್ಗಚರ್ಮಣೀ ।
ಪ್ರದ್ಯುಮ್ನಂ ತಮುಪಾಧಾವತ್ಪತಂಗ ಇವ ಪಾವಕಂ ॥ ೨೮ ॥

ಕಾರ್ಷ್ಣಿಸ್ತತಾಡ ತಂ ಖಡ್ಗಂ ಯಮುದಂಡೇನ ವೇಗತಃ ।
ಚೂರ್ಣೀಬಭೂವ ತೇನಾಪಿ ನಿಸ್ತ್ರಿಂಶಶ್ಚರ್ಮಣಾ ಸಹ ॥ ೨೯ ॥

ಪಾಶಿದತ್ತೇನ ಪಾಶೇನ ಸಹಸಾ ಯಾದವೇಶ್ವರಃ ।
ದಮಘೋಷಸುತಂ ಬದ್ಧ್ವಾ ವಿಚಕರ್ಷ ರಣಾಂಗಣೇ ॥ ೩೦ ॥

ಶಿಶುಪಾಲಂ ಘಾತಯಿತುಂ ಖಡ್ಗಂ ಜಗ್ರಾಹ ರೋಷತಃ ।
ತದೈವ ತತ್ಕರೌ ಸಾಕ್ಷಾದ್ಗದೋ ಜಗ್ರಾಹ ವೇಗತಃ ॥ ೩೧ ॥

---

೨೮. ಬಳಿಕ ಕುಪಿತನಾದ ಆ ಚೇದಿರಾಜನು ಕತ್ತಿ, ಗುರಾಣಿಗಳನ್ನು ತೆಗೆದುಕೊಂಡು ಬೆಂಕಿಯನ್ನು ತಿನ್ನಬೇಕೆಂದು ನುಗ್ಗುವ ಶಲಭದಂತೆ ಪ್ರದ್ಯುಮ್ನನ ಮೇಲೆ ನುಗ್ಗಿದನು.

೨೯. ಆಗ ಪ್ರದ್ಯುಮ್ನನು ತಾನು ಕೈಲಿ ಹಿಡಿದಿದ್ದ ಯಮುದಂಡದಿಂದಲೇ ಜೋರಾಗಿ ಬೀಸಿ ಹೊಡೆಯಲು ಆ ಶಿಶುಪಾಲನು ಹಿಡಿದಿದ್ದ ಕತ್ತಿಯೂ ಗುರಾಣಿಯೂ ಪುಡಿಪುಡಿಯಾಗಿ ನೆಲದಮೇಲೆ ಉದುರಿಹೋದುವು.

೩೦. ಬಳಿಕ ಆ ಪ್ರದ್ಯುಮ್ನನು ಸ್ವಲ್ಪವೂ ಕಾಲಾವಕಾಶವನ್ನೀಯದೆ ವರುಣನು ತನಗೆ ಇತ್ತಿದ್ದ ಪಾಶಾಯುಧವನ್ನು ಬೀಸಿ ದಮಘೋಷಪುತ್ರನಾದ ಆ ಶಿಶುಪಾಲನನ್ನು ಕಟ್ಟಿಹಾಕಿ ಆ ರಣಾಂಗದಲ್ಲಿ ಎಳೆದಾಡಿದನು.

೩೧. ಅನಂತರ ಅವನನ್ನು ಕೊಲ್ಲಬೇಕೆಂದು ಕತ್ತಿಯನ್ನು ಕೈಗೆ ತೆಗೆದುಕೊಳ್ಳುವಷ್ಟರಲ್ಲಿಯೇ ಸಶ್ರನೆ ಗದನೆಂಬ ಯಾದವನು ಬಂದು ಆ ಪ್ರದ್ಯುಮ್ನನ ಕೈಗಳನ್ನು ಹಿಡಿದುಕೊಂಡನು.

॥ ಗದ ಉವಾಚ ॥

ಪರಿಪೂರ್ಣತಮೇನಾಪಿ ಶ್ರೀಕೃಷ್ಣೇನ ಮಹಾತ್ಮನಾ ।
ವಧ್ಯೋಽಯಂ ವೇದವಚನಂ ವಚನಂ ಮಾ ವೃಥಾ ಕುರು ॥ ೩೨ ॥

॥ ಶ್ರೀ ನಾರದ ಉವಾಚ ॥

ತದಾ ಕೋಲಾಹಲೇ ಜಾತೇ ಶಿಶುಪಾಲಸ್ಯ ಬಂಧನೇ ।
ದಮಘೋಷೋ ಬಲಿಂ ನೀತ್ವಾ ಪ್ರಾಗಾತ್ಪ್ರದ್ಯುಮ್ನಸಂಮುಖೇ ॥ ೩೩ ॥

ಕಾರ್ಷ್ಣಿಸ್ತಮಾಗತಂ ದೃಷ್ಟ್ವಾ ತ್ಯಕ್ತ್ವಾ ಶಸ್ತ್ರಾಣಿ ಶೀಘ್ರತಃ ।
ಅಗ್ರತಶ್ಚೇದಿಪಂ ಶಶ್ವನ್ನನಾಮ ಶಿರಸಾ ಭುವಿ ॥ ೩೪ ॥

ಮಿಲಿತ್ವಾ ಚಾಶಿಷಂ ದತ್ತ್ವಾ ಪ್ರದ್ಯುಮ್ನಾಯ ಮಹಾತ್ಮನೇ ।
ದಮಘೋಷೋ ಮಹಾರಾಜಃ ಪ್ರಾಹ ಗದ್ಗದಯಾ ಗಿರಾ ॥ ೩೫ ॥

---

೩೨. ಬಳಿಕ ಆ ಪ್ರದ್ಯುಮ್ನನನ್ನು ಕುರಿತು "ಈ ಶಿಶುಪಾಲನು ಪರಿಪೂರ್ಣಸ್ವರೂಪನೂ ಮಹಾನುಭಾವನೂ ಆದ ಶ್ರೀಕೃಷ್ಣನಿಂದಲೇ ಕೊಲ್ಲಲ್ಪಡುವನು" ಎಂದು ವೇದವಾಕ್ಯವಿದೆ. ಆ ಮಾತನ್ನು ನೀನು ವ್ಯರ್ಥಗೊಳಿಸದಿರಬೇಕು ಎಂದು ನುಡಿದನು.

೩೩. ಓ ಬಹುಲಾಶ್ವನರೇಂದ್ರ ! ಅಷ್ಟರಲ್ಲಿ ಶಿಶುಪಾಲನು ಬಂಧಿತನಾದುದನ್ನು ಕಂಡು ಭಾರಿ ಗದ್ದಲವುಂಟಾಯಿತು. ಅದನ್ನು ಕೇಳಿ ನಡೆದ ಸಂಗತಿಯನ್ನರಿತ ದಮಘೋಷನು ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಪ್ರದ್ಯುಮ್ನನ ಬಳಿಗೆ ಬಂದನು.

೩೪. ಆ ದಮಘೋಷನು ಬಂದುದನ್ನು ಕಂಡು ಪ್ರದ್ಯುಮ್ನನು ತನ್ನ ಕೈಯಲ್ಲಿದ್ದ ಆಯುಧಗಳನ್ನು ತಟ್ಟನೆ ಕೆಳಗೆ ಹಾಕಿ ಆ ವೃದ್ಧನಾದ ಚೇದಿರಾಜನೆದುರಿಗೆ ತಲೆಬಾಗಿ ನೆಲದಮೇಲೆ ದಂಡಪ್ರಣಾಮಮಾಡಿದನು.

೩೫. ಅನಂತರ ಆ ದಮಘೋಷಮಹಾರಾಜನು ಮುಂದೆ ಬಂದು ಮಹಾತ್ಮನಾದ ಆ ಪ್ರದ್ಯುಮ್ನನೊಡನೆ ಕಲೆತು ಅವನನ್ನು ಆಶೀರ್ವದಿಸಿ ಗದ್ಗದಸ್ವರಭರಿತವಾದ ವಾಣಿಯಿಂದ

॥ ದಮಘೋಷ ಉವಾಚ ॥

ಪ್ರದ್ಯುಮ್ನ ತ್ವಂ ತು ಧನ್ಯೋಽಸಿ ಶ್ರೀಯದೂನಾಂ ಶಿರೋಮಣೇ ।
ಮತ್ಪುತ್ರೇಣ ಕೃತಂ ಯದ್ವೈ ತತ್ಕ್ಷಮಸ್ವ ದಯಾನಿಧೇ ॥ ೩೬ ॥

॥ ಶ್ರೀ ಪ್ರದ್ಯುಮ್ನ ಉವಾಚ ॥

ಮಮ ದೋಷೋ ನ ತೇ ಚಾಯಂ ನ ತೇ ಪುತ್ರಸ್ಯ ಹೇ ಪ್ರಭೋ ।
ಸರ್ವಂ ಕಾಲಕೃತಂ ಮನ್ಯೇ ಪ್ರಿಯಮಪ್ರಿಯಮೇವ ವಾ ॥ ೩೭ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತೋ ದಮಘೋಷೋಽಪಿ ಪ್ರದ್ಯುಮ್ನೇನ ಪ್ರಯಂತ್ರಿತಃ ।
ಶಿಶುಪಾಲಂ ಮೋಚಯಿತ್ವಾ ನೀತ್ವಾಗಾಚ್ಚಂದ್ರಕಾಂ ಪುರೀಂ ॥ ೩೮ ॥

---

೩೬. ಯದುವಂಶಶಿರೋಮಣಿಯಾದ ಎಲೈ ಪ್ರದ್ಯುಮ್ನನೇ, ನೀನು ಧನ್ಯನು. ಎಲೈ ಕೃಪಾನಿಧಿಯೇ, ನನ್ನ ಮಗನು ಮಾಡಿದ ಅಪರಾಧವನ್ನು ಕ್ಷಮಿಸಿಬಿಡು ಎಂದನು.

೩೭. ಆಗ ಪ್ರದ್ಯುಮ್ನನು ಅವನನ್ನು ಕುರಿತು, ರಾಜೇಂದ್ರ ! ಈ ತಪ್ಪು ನನ್ನದೂ ಅಲ್ಲ, ನಿನ್ನದೂ ಅಲ್ಲ, ನಿನ್ನ ಮಗನದೂ ಅಲ್ಲ. ಪ್ರಿಯವೇ ಆಗಲಿ, ಅಪ್ರಿಯವೇ ಆಗಲಿ ಅದೆಲ್ಲವೂ ಕಾಲಕೃತವಾದುದೇ ಎಂದು ಭಾವಿಸುವೆನು ಎಂದು ಹೇಳಿದನು.

೩೮. ಎಲೈ ಬಹುಲಾಶ್ವರಾಜನೇ, ಈರೀತಿ ಪ್ರದ್ಯುಮ್ನನಿಂದ ಹೇಳಲ್ಪಟ್ಟ ಆ ದಮಘೋಷನು ತನ್ನ ಮಗನಾದ ಶಿಶುಪಾಲನನ್ನು ಬಿಡಿಸಿಕೊಂಡು ರಾಜಧಾನಿಯಾದ ಚಂದ್ರಕಾನಗರಕ್ಕೆ ತೆರಳಿದನು.

ಪ್ರದ್ಯುಮ್ನಸ್ಯ ಬಲಂ ಶ್ರುತ್ವಾ ಸಾಕ್ಷಾಚ್ಛ್ರೀಕೃಷ್ಣತೇಜಸಃ ।
ನ ಕೇಽಪಿ ಯುಯುಧುಸ್ತೇನ ರಾಜಾನಶ್ಚ ಬಲಿಂ ದದುಃ ॥ ೩೯ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ರಂಗಪಿಂಗವಧೇ ಶಿಶುಪಾಲಯುದ್ಧೇ ಚೇದಿದೇಶ ವಿಜಯೋ ನಾಮ ನವಮೋಽಧ್ಯಾಯಃ

---

೩೯. ಓ ರಾಜೇಂದ್ರ! ಶ್ರೀಕೃಷ್ಣನಿಗೆ ಸರಿಸಮನಾದ ಪರಾಕ್ರಮವುಳ್ಳ ಆ ಪ್ರದ್ಯುಮ್ನನ ಸಾಹಸವನ್ನು ಕೇಳಿ ಯಾವ ರಾಜನೂ ಕೂಡ ಯುದ್ಧಮಾಡಲು ಬರಲಿಲ್ಲ. ಎಲ್ಲರೂ ಕಪ್ಪಕಾಣಿಕೆಗಳನ್ನು ತಂದೊಪ್ಪಿಸಿದರು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀನಾರದ ಬಹುಲಾಶ್ವ ಸಂವಾದದಲ್ಲಿ ಚೇದಿದೇಶವಿಜಯವೆಂಬ ಒಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ದಶಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಮನುತೀರ್ಥೇ ತತಃ ಸ್ನಾತ್ವಾ ಪ್ರದ್ಯುಮ್ನೋ ಯದುಭಿಃ ಸಹ ।
ಪ್ರಯಯೌ ಕೌಂಕಣಾನ್ದೇಶಾನ್ದುಂದುಭೀನ್ನಾದಯನ್ಮುಹುಃ ॥ ೧ ॥

ಕೌಂಕಣಸ್ಥೋಽಥ ಮೇಧಾವೀ ಗದಾಯುದ್ಧ ವಿಶಾರದಃ ।
ಏಕಾಕೀ ಮಲ್ಲಯುದ್ಧೇನ ಪರೀಕ್ಷನ್ನಾಯಯೌ ಬಲಂ ॥ ೨ ॥

ಹತ್ತನೆಯ ಅಧ್ಯಾಯವು

೧. ನಾರದನು ಹೇಳತೊಡಗಿದನು :—ಓ ರಾಜೇಂದ್ರ ! ಆಲಿಸು. ಅನಂತರ ಪ್ರದ್ಯುಮ್ನನು ತನ್ನ ಜೊತೆಯಲ್ಲಿದ್ದ ಯಾದವರೊಡನೆ ಆ ಪ್ರದೇಶದಲ್ಲಿದ್ದ ಮನು ತೀರ್ಥದಲ್ಲಿ ಸ್ನಾನವನ್ನು ಮಾಡಿ ಪುನಃ ಪ್ರಯಾಣಸೂಚಕವಾದ ನಗಾರಿಗಳನ್ನು ಬಾರಿಸುತ್ತಾ ಕೊಂಕಣದೇಶಕ್ಕೆ ಅಭಿಮುಖವಾಗಿ ಪಯಣ ಬೆಳಸಿದನು.

೨. ಆ ಕೊಂಕಣದೇಶದ ಅಧಿಪತಿಯಾದ ಮೇಧಾವಿಯೆಂಬ ರಾಜನು ಗದಾ ಯುದ್ಧದಲ್ಲಿ ಬಹು ಕುಶಲನಾಗಿದ್ದನು. ಆ ಮೇಧಾವಿಯು ತಾನೊಬ್ಬಂಟಿಗನಾಗಿಯೇ ಮಲ್ಲಯುದ್ಧವನ್ನು ಮಾಡಬೇಕೆಂಬ ಆಸೆಯಿಂದ ಆ ಯದುಸೇನೆಯನ್ನು ಪರೀಕ್ಷಿ ಸುತ್ತಾ ಅಲ್ಲಿಗೆ ಬಂದನು.

ಪ್ರದ್ಯುಮ್ನಂ ಸಬಲಂ ಪ್ರಾಹ ಶೃಣು ಮೇ ಯಾದವೇಶ್ವರ ।
ಗದಾಯುದ್ಧಂ ದೇಹಿ ಮಹ್ಯಂ ಮದ್ಬಲಂ ನಾಶಯ ಪ್ರಭೋ ॥ ೩ ॥

॥ ಪ್ರದ್ಯುಮ್ನ ಉವಾಚ ॥

ಏಕತೋ ಹ್ಯೇಕತೋ ವೀರಾ ಬಲವಂತೋ ಮಹೀತಲೇ ।
ಮಾನಂ ಮಾ ಕುರು ಹೇ ಮಲ್ಲ ವಿಷ್ಣುಮಾಯಾತಿದುರ್ಗಮಾ ॥ ೪ ॥

ವಯಂ ತು ಬಹವೋ ವೀರಾಸ್ತ್ವಮೇಕಾಕೀ ಸಮಾಗತಃ ।
ಅಧರ್ಮೋಽಯಂ ಮಹಾಮಲ್ಲ ದೃಶ್ಯತೇ ಯಾಹಿ ಸಾಂಪ್ರತಂ ॥ ೫ ॥

॥ ಮಲ್ಲ ಉವಾಚ ॥

ಯದಾ ಯುದ್ಧಂ ನ ಕುರುತ ಭವಂತೋ ಬಲಶಾಲಿನಃ ।
ಮತ್ಪಾದೋಽಧೋಽತ್ರ ನಿರ್ಯಾಂತು ತದಾ ಯಾಸ್ಯಾಮಿ ಸಾಂಪ್ರತಂ ॥ ೬ ॥

---

೩. ಬಂದವನೇ ಸೇನಾಸಮೇತನಾಗಿದ್ದ ಆ ಪ್ರದ್ಯುಮ್ನನನ್ನು ಕಂಡು "ಓ ಯಾದವೇಶ್ವರ! ನನ್ನ ಮಾತನ್ನು ಕೇಳು! ನನಗೆ ಗದಾಯುದ್ಧವನ್ನು ನೀಡು. ಅದರಲ್ಲಿ ನನ್ನ ಬಲವನ್ನು ನೀನು ಅಡಗಿಸು" ಎಂದು ನುಡಿದನು.

೪. ಅದನ್ನು ಕೇಳಿ ಪ್ರದ್ಯುಮ್ನನು! ಎಲೈ ಮಲ್ಲಾಗ್ರಣಿಯೇ! ಈ ಭೂಮಂಡಲದಲ್ಲಿ ಒಂದೊಂದು ಕಡೆಯೂ ಬಲಾಢ್ಯರಾದ ವೀರರು ಇರುವರು. ನೀನು ಈ ರೀತಿ ಹೆಮ್ಮೆಪಡಬೇಡ. ವಿಷ್ಣು ಮಾಯೆಯನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ.

೫. ನಮ್ಮ ಕಡೆ ಅನೇಕ ಮಂದಿ ವೀರರು ಇರುವರು. ನೀನಾದರೋ ಒಬ್ಬಂಟಿಗನಾಗಿ ಬಂದಿರುವೆ. ಆದುದರಿಂದ ಓ ಮಲ್ಲಶಿರೋಮಣಿ! ಇದು ಭಾರಿ ಅಧರ್ಮವೆಂದು ಚೆನ್ನಾಗಿ ಕಾಣಿಸುತ್ತಿರುವುದು. ಈಗ ನೀನು ಹಿಂದಿರುಗಿ ಹೋಗು, ಎಂದನು.

೬. ಅದನ್ನು ಕೇಳಿ ಮಲ್ಲಯುದ್ಧ ಪ್ರಿಯನಾದ ಆ ಕೊಂಕಣರಾಜನು ಅವನನ್ನು ಕುರಿತು "ನೀವೆಲ್ಲರೂ ಮಹಾಬಲಶಾಲಿಗಳಾಗಿದ್ದರೂ ಯುದ್ಧ ಮಾಡಲು ಹಿಂಜರಿಯುವುದಾದರೆ ನನ್ನ ಕಾಲುಗಳ ಕೆಳಗೆ ನೀವು ನುಸಿದುಕೊಂಡು ಹೋಗಬೇಕು. ಹಾಗಾದರೆ ನಾನು ಆಮೇಲೆ ಬಂದ ಹಾಗೆ ಹಿಂದಿರುಗುವೆನು" ಎಂದನು.

|| ಶ್ರೀ ನಾರದ ಉವಾಚ ||

ಏವಂ ವದತಿ ಮಲ್ಲೇ ವೈ ಸರ್ವೇ ಯಾದವಪುಂಗವಾಃ ।
ಬಭೂವುಃ ಕ್ರೋಧಸಂಯುಕ್ತಾಃ ಪಶ್ಯತಸ್ತಸ್ಯ ಮೈಥಿಲ || ೭ ||

ಗದೋ ಗದಾಂ ಸಮಾದಾಯ ಬಲದೇವಾನುಜೋ ಬಲೀ ।
ತಸ್ಥೌ ಸೋಽಪಿ ಗದಾಂ ನೀತ್ವಾ ಸರ್ವೇಷಾಂ ಪಶ್ಯತಾಂ ನೃಪ || ೮ ||

ಗದಾಂ ವರಿಷ್ಠಾಂ ಚಿಕ್ಷೇಪ ಗದಾಯ ಸ ಮಹಾಬಲಃ ।
ಗದೋಪರಿ ಗದಾಂ ನೀತ್ವಾ ಸ್ವಗದಾಂ ಪ್ರಾಕ್ಷಿಪದ್ಗದಃ || ೯ ||

ಗದಸ್ಯ ಗದಯಾ ಸೋಽಪಿ ತಾಡಿತಃ ಪತಿತೋ ಭುವಿ ।
ಮೃಧೇಚ್ಛಾಂ ನ ಚಕಾರಾಶು ಉದ್ವಮನ್ರುಧಿರಂ ಮುಖಾತ್ || ೧೦ ||

ಕೌಂಕಣಸ್ಥೋಽಥ ಮೇಧಾವೀ ನತ್ವಾ ಪ್ರಾಹ ಹರೇಃ ಸುತಂ ।
ಪರೀಕ್ಷಾರ್ಥಂ ಚ ಭವತಾಮೇತತ್ಕಾರ್ಯಂ ಮಯಾ ಕೃತಂ || ೧೧ ||

---

೭. ಓ ರಾಜೇಂದ್ರ! ಈ ರೀತಿ ಅವನಾಡಿದ ಮಾತನ್ನು ಕೇಳಿದ ಕೂಡಲೇ ಆ ಯದುವೀರರೆಲ್ಲರೂ ಅವನು ನೋಡುತ್ತಿರುವಂತೆಯೇ ಬಹಳವಾಗಿ ಕೋಪಾಕ್ರಾಂತರಾದರು.

೮. ಆಗ ಬಲರಾಮನ ತಮ್ಮನೂ ಮಹಾ ಬಲಿಷ್ಠನೂ ಆದ ಗದನೆಂಬುವನು ತನ್ನ ಗದೆಯನ್ನು ತೆಗೆದುಕೊಂಡು ಮುಂದೆ ಬಂದನು. ಆ ಕೊಂಕಣರಾಜನೂ ಸಹ ತಾನೂ ಗದೆಯನ್ನು ಹಿಡಿದು ಅವರೆಲ್ಲರೂ ನೋಡುತ್ತಿರುವಂತೆಯೇ,

೯. ಬಹು ಭಾರಿಯಾದ ಆ ಗದೆಯನ್ನು ಗದನ ಮೇಲೆ ಬೀಸಿ ಎಸೆದನು. ನಿಪುಣನಾದ ಆ ಗದನೂ ಸಹ ಬರುತ್ತಿರುವ ಆ ಗದೆಯನ್ನು ತಪ್ಪಿಸಿಕೊಂಡು ತನ್ನ ಗದೆಯಿಂದ ಆ ಕೊಂಕಣರಾಜನ ಮೇಲೆ ಬೀಸಿ ಹೊಡೆದನು.

೧೦. ಆ ಗದಾಪ್ರಹಾರದಿಂದ ಕೊಂಕಣರಾಜನು ಬಾಯಿಂದ ರಕ್ತವನ್ನು ಕಕ್ಕುತ್ತಾ ನೆಲದ ಮೇಲೆ ಬಿದ್ದುಹೋಗಿ ಮತ್ತೆ ಯುದ್ಧದ ಆಸೆಯನ್ನು ತೋರಿಸಲಿಲ್ಲ.

೧೧. ಅನಂತರ ಆ ಕೊಂಕಣದೇಶದ ಅರಸನಾದ ಮೇಧಾವಿಯು ಕೃಷ್ಣಪುತ್ರನಾದ ಪ್ರದ್ಯುಮ್ನನನ್ನು ನಮಸ್ಕರಿಸಿ " ನಿಮ್ಮೆಲ್ಲರನ್ನೂ ಪರೀಕ್ಷಿಸುವ ಸಲುವಾಗಿ ನಾನೀ ಕೆಲಸವನ್ನು ಮಾಡಿದೆನು.

ತ್ವಮೇವ ಭಗವಾನ್ಸಾಕ್ಷಾತ್ತುಕತೋಽಹಂ ಪ್ರಾಕೃತೋ ಜನಃ ।
ಕ್ಷಮಸ್ವ ಮೇಽಪರಾಧಂ ಭೋ ತ್ವಾಮಹಂ ಶರಣಂ ಗತಃ ॥ ೧೨ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾಥ ಬಲಿಂ ದತ್ವಾ ನಮಸ್ಕೃತ್ಯ ಹರೇಃ ಸುತಂ ।
ಕೌಂಕಣಸ್ಥಃ ಪುರೀಂ ಪ್ರಾಗಾನ್ಮೇಧಾವೀ ಕ್ಷತ್ರಿಯೋತ್ತಮಃ ॥ ೧೩ ॥

ಕುಟಕಾಧಿಪತಿಂ ಮೌಲಿಂ ಮೃಗಯಾಯಾಂ ವಿನಿರ್ಗತಂ ।
ಜಗ್ರಾಹ ಸ ಮಹಾಬಾಹುಃ ಸಾಂಬೋ ಜಾಂಬವತೀಸುತಃ ॥ ೧೪ ॥

ಕಾರ್ಷ್ಣಿಸ್ತಸ್ಮಾದ್ಬಲಿಂ ನೀತ್ವಾ ದಂಡಕಾಖ್ಯಂ ವನಂ ಯಯೌ ।
ಮುನೀನಾಮಾಶ್ರಮಾನ್ಪಶ್ಯನ್ಸ್ವಸೈನ್ಯಪರಿವಾರಿತಃ ॥ ೧೫ ॥

---

೧೨. ನೀನು ಸಾಕ್ಷಾತ್ ಭಗವಂತನೇ ಆಗಿರುವೆ. ನಿನ್ನ ಮುಂದೆ ಹುಲ್ಲು ಮನುಜನಾದ ನಾನೆಲ್ಲಿಯವನು ? ನನ್ನ ಈ ಅಪರಾಧವನ್ನು ಮನ್ನಿಸು. ನಾನು ನಿನ್ನನ್ನು ಮರೆಹೊಕ್ಕಿರುವೆನು" ಎಂದು ಪ್ರಾರ್ಥಿಸಿದನು.

೧೩. ಓ ಮೈಥಿಲೇಂದ್ರ ! ಈ ರೀತಿಯಾಗಿ ಆ ಕೊಂಕಣರಾಜನಾದ ಮೇಧಾವಿಯು ಆ ಪ್ರದ್ಯುಮ್ನನಿಗೆ ಹೇಳಿ ಕಪ್ಪಕಾಣಿಕೆಗಳನ್ನೊಪ್ಪಿಸಿ ಆತನಿಗೆ ನಮಸ್ಕಾರ ಮಾಡಿ ತನ್ನ ರಾಜಧಾನಿಗೆ ತೆರಳಿದನು.

೧೪. ಅನಂತರ ಜಾಂಬವತೀ ಪುತ್ರನಾದ ಸಾಂಬನೆಂಬ ವೀರನು ಬೇಟೆಗಾಗಿ ತೆರಳಿದ್ದ ಕುಟೀಕದೇಶದ ಅರಸನಾದ ಮೌಲಿಯೆಂಬುವನನ್ನು ಹಿಡಿದುಕೊಂಡು ಬಂದನು.

೧೫. ಆಗ ಪ್ರದ್ಯುಮ್ನನು ಅವನಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು, ಅಲ್ಲಿಂದ ತನ್ನ ಸೇನೆಯೊಡನೆ ಹೊರಟು ಅಕ್ಕಪಕ್ಕದಲ್ಲಿದ್ದ ಋಷ್ಯಾಶ್ರಮಗಳನ್ನು ನೋಡುತ್ತಾ ದಂಡಕಾವನವನ್ನು ಪ್ರವೇಶಿಸಿದನು.

ನಿರ್ವಿಂಧ್ಯಾಂ ಚ ಪಯೋಷ್ಣೀಂ ಚ ತಾಪೀಂ ಸ್ನಾತ್ವಾ ಹರೇಃ ಸುತಃ ।
ಶೂರ್ಪಾರಕಂ ಮಹಾಕ್ಷೇತ್ರಮಾರ್ಯಾಂ ದ್ವೈಪಾಯನೀಂ ತತಃ ॥ ೧೬ ॥

ಋಷ್ಯಮೂಕಂ ತತಃ ಪಶ್ಯನ್ಪ್ರವರ್ಷಣಗಿರಿಂ ಗತಃ ।
ಪರ್ಜನ್ಯೋ ಭಗವಾನ್ಸಾಕ್ಷಾನ್ನಿತ್ಯದಾ ಯತ್ರ ವರ್ಷತಿ ॥ ೧೭ ॥

ಗೋಕರ್ಣಾಖ್ಯಂ ಶಿವಕ್ಷೇತ್ರಂ ದೃಷ್ಟ್ವಾ ಕಾರ್ಷ್ಣಿಃ ಸ್ವಸೈನ್ಯಕೈಃ ।
ತ್ರಿಗರ್ತಾನ್ಕೇರಲಾನ್ದೇಶಾನ್ಯಯೌ ಜೇತುಂ ಮಹಾಬಲಃ ॥ ೧೮ ॥

ಅಂಬಷ್ಠಃ ಕೇರಲಾಧೀಶಃ ಶ್ರುತ್ವಾ ವಾರ್ತಾಂ ತು ಮನ್ಮುಖಾತ್ ।
ದದೌ ತಸ್ಮೈ ಬಲಿಂ ಶೀಘ್ರಂ ಪ್ರದ್ಯುಮ್ನಾಯ ಮಹಾತ್ಮನೇ ॥ ೧೯ ॥

ಕೃಷ್ಣಾಂ ವೇಣೀಂ ತದೋತ್ತೀರ್ಯ ತೈಲಂಗಾನ್ವಿಷಯಾನ್ಯಯೌ ।
ಸೈನ್ಯಪಾದರಜೋವೃಂದೈರಂಧೀಕುರ್ವನ್ನಭಃಸ್ಥಲಂ ॥ ೨೦ ॥

---

೧೬. ಅಲ್ಲಿ ಮಾರ್ಗಮಧ್ಯದಲ್ಲಿ ಸಿಕ್ಕುವ ನಿರ್ವಿಂಧ್ಯೆ, ಪಯೋಷ್ಣಿ, ತಾಪಿ ಎಂಬ ನದಿಗಳಲ್ಲಿ ಸ್ನಾನಮಾಡುತ್ತಾ ಶೂರ್ಪಾರಕವೆಂಬ ಮಹಾ ಕ್ಷೇತ್ರವನ್ನು ಸೇರಿ ಅಲ್ಲಿಂದ ಹೊರಟು ದ್ವೈಪಾಯಿನೀ ಎಂಬಲ್ಲಿಗೆ ಬಂದನು.

೧೭–೧೮. ಅನಂತರ ಅಲ್ಲಿಂದ ತೆರಳಿ ಋಷ್ಯಮೂಕಪರ್ವತವನ್ನೂ, ವೃಷ್ಟ್ಯಭಿಮಾನದೇವತೆಯಾದ ಪರ್ಜನ್ಯನು ಸರ್ವದಾ ಮಳೆ ಸುರಿಸುತ್ತಿರುವ ಪ್ರವರ್ಷಣವೆಂಬ ಪರ್ವತವನ್ನೂ, ಅಲ್ಲಿಂದಾಚೆಗೆ ಗೋಕರ್ಣವೆಂಬ ಪ್ರಸಿದ್ಧವಾದ ಶಿವಕ್ಷೇತ್ರವನ್ನೂ, ಸಂದರ್ಶಿಸಿಕೊಂಡು ಬಳಿಕ, ತ್ರಿಗರ್ತದೇಶವನ್ನೂ, ಕೇರಳದೇಶವನ್ನೂ ಜಯಿಸಬೇಕೆಂಬುದಾಗಿ ಪ್ರಯಾಣಮಾಡಿದನು.

೧೯. ಓ ರಾಜೇಂದ್ರ ! ಕೇರಲದೇಶಾಧಿಪತಿಯಾದ ಅಂಬಷ್ಠನೆಂಬ ರಾಜನು ನನ್ನ ಮುಖದಿಂದ ಪ್ರದ್ಯುಮ್ನನು ದಂಡೆತ್ತಿ ಬರುವ ವೃತ್ತಾಂತವನ್ನು ಕೇಳಿ ಆತನಿಗೆ ಬೇಗ ಕಪ್ಪಕಾಣಿಕೆಗಳನ್ನೊಪ್ಪಿಸಿದನು.

೨೦. ಅವನಿಂದ ಕಪ್ಪವನ್ನು ತೆಗೆದುಕೊಂಡನಂತರ ಆ ಪ್ರದ್ಯುಮ್ನನು ಅಲ್ಲಿಂದ ಹೊರಟು ಕೃಷ್ಣವೇಣಿ ಎಂಬ ಹೊಳೆಯನ್ನು ದಾಟಿ ತನ್ನ ಸೈನಿಕರ ಕಾಲುತುಳಿತದಿಂದ ಮೇಲಕ್ಕೆದ್ದ ಧೂಳಿನಿಂದ ಆಕಾಶದಲ್ಲೆಲ್ಲಾ ಕತ್ತಲೆ ಕವಿಯುವಂತೆ ಮಾಡುತ್ತಾ ತೆಲಗು ದೇಶಕ್ಕೆ ಬಂದನು.

ತೈಲಂಗಸ್ಯಾಧಿಪೋ ರಾಜಾ ವಿಶಾಲಾಕ್ಷಃ ಪ್ರಕೀರ್ತಿತಃ ।
ಪುರಸ್ಯೋಪವನೇ ರೇಮೇ ಸುಂದರೀಗಣಸಂವೃತಃ ॥ ೨೧ ॥

ಮೃದಂಗಾದ್ಯೈಶ್ಚ ವಾದಿತ್ರೈರ್ಮಧುರಧ್ವನಿಸಂಕುಲೈಃ ।
ಪರ್ವೈರಪ್ಸರಸಾಂ ರಾಗೈರ್ಗೀಯಮಾನೋ ದ್ಯುರಾಡಿವ ॥ ೨೨ ॥

ತಂ ಪ್ರಾಹ ಸುಂದರೀ ರಾಮಾ ರಾಜ್ಞೀ ಮಂದಾರಮಾಲಿನೀ ।
ರಜೋವ್ಯಾಪ್ತಂ ನಭೋ ವೀಕ್ಷ್ಯ ಶುಷ್ಯದ್ಬಿಂಬಾಧರಾ ಪರಾ ॥ ೨೩ ॥

॥ ಮಂದಾರಮಾಲಿನ್ಯುವಾಚ ॥

ರಾಜನ್ನ ಜಾನಾಸಿ ಸದಾ ವಿಹಾರಾ–
ದಹರ್ನಿಶಂ ಕಾಮವಿಶಾಲಲೋಲಃ ।
ಅಹಂ ನ ಜಾನಾಮಿ ಕದಾಪಿ ದುಃಖಂ
ಮುಖಾಲಕಾಲಿಭ್ರಮರಾಸ್ತವೇಷಾ ॥ ೨೪ ॥

---

೨೧. ಆ ಸಮಯದಲ್ಲಿ ಆ ತೆಲಗು ದೇಶದ ಅರಸನಾದ ವಿಶಾಲಾಕ್ಷನೆಂಬುವನು ತನ್ನ ಪುರೋದ್ಯಾನದಲ್ಲಿ ಸುಂದರಿಯರಾದ ರಮಣಿಯರೊಡನೆ ವಿಹರಿಸುತ್ತಿದ್ದನು.

೨೨. ಅಲ್ಲಿ ವೀಣಾ, ವೇಣು, ಮೃದಂಗ, ತಾಲಗಳೆಂಬ ನಾಲ್ಕು ಬಗೆಯ ವಾದ್ಯಗಳನ್ನು ನುಡಿಸುತ್ತಾ ಮಧುರವಾದ ಕಂಠದಿಂದ ಹಾಡುತ್ತಿದ್ದ ಆ ರಮಣಿಯರ ನಡುವೆ ವಿಹರಿಸುತ್ತಿದ್ದ ಆ ರಾಜನು ಇಂಪಾಗಿ ಹಾಡುತ್ತಿರುವ ಅಪ್ಸರೆಯರ ಮಧ್ಯದಲ್ಲಿರುವ ದೇವೇಂದ್ರನಂತೆ ಕಂಗೊಳಿಸಿದನು.

೨೩. ಆ ರೀತಿ ವಿಹರಿಸುತ್ತಿರುವಾಗ ಮಂದಾರಮಾಲಿನಿಯೆಂಬ ಚೆಲುವೆಯಾದ ಆವನ ಪಟ್ಟದ ರಾಣಿಯು ಆಕಾಶದಲ್ಲಿ ಧೂಳು ತಾನೇ ತಾನಾಗಿರುವುವನ್ನು ಕಂಡು ಭಯದಿಂದ ತುಟಿಗಳೊಣಗಿ ಹೋಗಿ ತನ್ನ ಪ್ರಿಯನನ್ನು ಕುರಿತು,

೨೪. ಓ ರಾಜೇಂದ್ರ! ನೀನು ಹಗಲಿರುಳೂ ಕಾಮವಿಲಾಸದಲ್ಲಿಯೇ ಆಸಕ್ತನಾಗಿ ಸದಾಕಾಲದಲ್ಲಿಯೂ ವಿಹರಿಸುತ್ತಿರುವುವೆಯಾದುದರಿಂದಲೇ ಹೊರಗಿನ ವಿಷಯವೇನೆಂಬುದನ್ನು ಅರಿಯದವನಾಗಿರುವೆ. ನಾನೂಸಹ ನಿನ್ನ ಇಚ್ಛಾನುವರ್ತಿನಿಯಾಗಿರುತ್ತ ನಿನ್ನ ಸಹವಾಸ ಸುಖದಲ್ಲೇ ಮಗ್ನಳಾಗಿ ಭ್ರಮರದಂತೆ ಕಪ್ಪಾದ ಮುಂಗುರುಳುಗಳು ಹಣೆಯಲ್ಲಿ ಓಲಾಡುತ್ತಿರುವಂತೆ : ಸರ್ವದಾ ವಿಹರಿಸುತ್ತಿರುವುದರಿಂದ ದುಃಖವೆಂಬುದನ್ನೇ ಅರಿಯದಿರುವೆನು.

ದ್ವಾರಾವತೀಶಾಧ್ವರನಾಗವಲ್ಲೀ–
ಚಯಂ ಸಮುತ್ಥಾಪ್ಯ ದಿಶೋ ಜಯಾರ್ಥಂ ।
ವಿಜಿತ್ಯ ಸರ್ವಾನ್ನೃಪ ಚೇದಿಪಾನ್ಸ
ಸಮಾಗತೋಽಸೌ ಯದುರಾಜರಾಜಃ ॥ ೨೫ ॥

ಧುಂಕಾರಶಬ್ದಂ ಶೃಣು ದುಂದುಭೀನಾಂ
ಚೀತ್ಕಾರಫೂತ್ಕಾರಯುತಂ ದ್ವಿಪಾನಾಂ ।
ಕೋದಂಡಟಂಕಾರಮಯಂ ಪರಾಣಾಂ
ಕಲ್ಪಾಂತಸಾರಸ್ವತನಾದಕಾರಂ ॥ ೨೬ ॥

ತ್ವರಂ ಬಲಿಂ ಪ್ರೇಷಯ ಶಂಬರಾರಯೇ
ಪ್ರಧಾವತೀಃ ಪಶ್ಯ ನರೇಂದ್ರಸುಂದರೀಃ ।
ಚ್ಯುತಪ್ರಸೂನಾಃ ಶ್ರಮವಾರಿವರ್ಷಿಣೀ–
ರ್ವನಪ್ರವೇಶಾ ಸ್ಫುಟಕೇಶಮುಂಡನಾಃ ॥ ೨೭ ॥

---

೨೫. ದ್ವಾರಕಾನಗರದ ಅಧೀಶ್ವರನಾದ ಉಗ್ರಸೇನನು ಮಾಡಬೇಕೆಂದಿರುವ ರಾಜಸೂಯಯಾಗದ ಅಂಗಭೂತವಾದ ದಿಗ್ವಿಜಯವನ್ನು ಮಾಡಿಕೊಂಡು ಬರುತ್ತೇನೆಂದು ವೀಳಯವನ್ನು ಸ್ವೀಕರಿಸಿದ ಪ್ರದ್ಯುಮ್ನಕುಮಾರನು ತನ್ನೆದುರಾದ ಎಲ್ಲಾ ರಾಜರನ್ನೂ ಚೇದಿದೇಶಾಧಿಪತಿಯನ್ನೂ ಗೆದ್ದು ಇತ್ತಲಾಗಿ ಬಂದಿರುವನು.

೨೬. ಓ ರಾಜೇಂದ್ರ! ಆತನ ಸೇನೆಯ ದುಂದುಭಿಗಳ ಧುಂಧುಂ ಎಂಬ ನಾದವು ಸೇನಾಗಜಗಳ ಘೀಂಕಾರಗಳೊಡನೆಯೂ ಸೊಂಡಿಲುಗಳ ಫೂತ್ಕಾರ ಶಬ್ದದೊಡನೆಯೂ ಬಿಲ್ಲಾರರ ಧನುಷ್ಟಂಕಾರ ಧ್ವನಿಯೊಂದಿಗೂ ಸೇರಿ ಪ್ರಳಯಕಾಲದ ಸಾಗರಘೋಷದಂತೆ ಕೇಳಿಬರುತ್ತಿರುವುದು.

೨೭. ನಾಥಾ, ಇದೋ ನೋಡು. ಈ ಚೆಲುವೆಯರು ಹೆದರಿಕೆಯಿಂದ ಮುಡಿಯು ಸಡಿಲಿಹೋಗಿ ಹೂಗಳುದುರುತ್ತಿದ್ದರೂ ಗಮನವಿಡದೆ ಬಳಲಿಕೆಯಿಂದ ಬೆವರನ್ನು ಧಾರಾಕಾರವಾಗಿ ಸುರಿಸುತ್ತಾ ಮರಗಳ ನಡುವೆ ನುಗ್ಗುವುದರಿಂದ ಅವಕುಂಠನವು ತೆರೆದುಹೋಗಿ ತಲೆಯ ಕೇಶಪಾಶವೂ, ಧರಿಸಿದ್ದ ಆಭರಣಗಳೂ ಎಲ್ಲರಿಗೂ ಸ್ಫುಟವಾಗಿ ಕಾಣಿಸುವಂತೆ ಓಡಿಹೋಗುತ್ತಿರುವರು. ಆದುದರಿಂದ ಬೇಗನೆ ಆ ಪ್ರದ್ಯುಮ್ನನ ಬಳಿಗೆ ಕಪ್ಪಕಾಣಿಕೆಗಳನ್ನು ಕಳುಹಿಸು ಎಂದು ಕಾತರಳಾಗಿ ನುಡಿದಳು.

ಪತ್ನೀವಾಕ್ಯಂ ತತಃ ಶ್ರುತ್ವಾ ವಿಶಾಲಾಕ್ಷೋಽತಿಹರ್ಷಿತಃ ।
ಪ್ರದ್ಯುಮ್ನಸಂಮುಖೇ ಸೋಽಪಿ ಬಲಿಂ ನೀತ್ವಾ ಸಮಾಯಯೌ ॥ ೨೮ ॥

ತೇನ ಸಂಪೂಜಿತಃ ಸಾಕ್ಷಾತ್ಪ್ರದ್ಯುಮ್ನೋ ಧನ್ವಿನಾಂ ವರಃ ।
ಸ್ನಾತ್ವಾ ಪಂಪಾಸರಸ್ತೀರ್ಥಂ ಮಹಾರಾಷ್ಟ್ರಂ ತತೋ ಯಯೌ ॥ ೨೯ ॥

ಮಹಾರಾಷ್ಟ್ರಾಧಿಪೋ ರಾಜಾ ವಿಮಲೋ ನಾಮ ವೈಷ್ಣವಃ ।
ಭಕ್ತ್ಯಾ ಪರಮಯಾ ಕಾರ್ಷ್ಣಿಂ ಪೂಜಯಾಮಾಸ ಸರ್ವತಃ ॥ ೩೦ ॥

ತಥಾ ಹಿ ಕರ್ಣಾಟಪತಿಃ ಸಹಸ್ರಜಿತ್
ಸ್ವತಃ ಸಮಾನೀಯ ಬಲಿಂ ಮಹಾತ್ಮನೇ ।
ಸಂಪೂಜಯಾಮಾಸ ಶುಭಾರ್ಥಹೇತವೇ
ಶ್ರೀಶಂಬರಾರಿಂ ಜಗತಃ ಪ್ರಭುಂ ಪರಂ ॥ ೩೧ ॥

---

೨೮. ಈರೀತಿಯಾಗಿ ತನ್ನ ಮಡದಿಯು ನುಡಿದ ಮಾತನ್ನು ಕೇಳಿ, ಆ ವಿಶಾಲಾಕ್ಷನು ಮಹಾಸಂತೋಷವನ್ನು ತಾಳಿದವನಾಗಿ ಕಪ್ಪವನ್ನು ತೆಗೆದುಕೊಂಡು ತಾನೇ ಪ್ರದ್ಯುಮ್ನನಿಗೆದುರಾಗಿ ಹೋದನು.

೨೯. ಆ ರಾಜನಿಂದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿದನಂತರ ಧನುರ್ಧರಾಗ್ರೇಸರನಾದ ಆ ಪ್ರದ್ಯುಮ್ನನು ಪಂಪಾಸರೋವರಕ್ಕೆ ಬಂದು ಅಲ್ಲಿ ಸ್ನಾನಾದಿಗಳನ್ನು ಮಾಡಿ ಅಲ್ಲಿಂದ ಮಹಾರಾಷ್ಟ್ರದೇಶಕ್ಕೆ ಹೋದನು.

೩೦. ಆ ಮಹಾರಾಷ್ಟ್ರಾಧಿಪತಿಯಾದ ವಿಮಲನೆಂಬ ವಿಷ್ಣುಭಕ್ತಾಗ್ರೇಸರನಾದ ರಾಜನು ಬಹುಮಾದ ಭಕ್ತಿಯಿಂದ ಆ ಪ್ರದ್ಯುಮ್ನನನ್ನು ಸಕಲ ವಿಧದಿಂದಲೂ ಸತ್ಕರಿಸಿದನು.

೩೧. ಅದೇ ರೀತಿಯಲ್ಲಿ ಕರ್ಣಾಟದೇಶಾಧಿಪತಿಯಾದ ಸಹಸ್ರಜಿತನೆಂಬುವನು ತನ್ನ ಕ್ಷೇಮದಮೇಲೆ ದೃಷ್ಟಿಯಿಟ್ಟು ತಾನಾಗಿಯೇ ಕಪ್ಪವನ್ನು ತೆಗೆದುಕೊಂಡು ಬಂದು ಜಗತ್ಪ್ರಭುವಾದ ಆ ಪ್ರದ್ಯುಮ್ನನಿಗೆ ಒಪ್ಪಿಸಿ ಅವನನ್ನು ಪೂಜಿಸಿದನು.

ಪ್ರದ್ಯುಮ್ನೋ ಭಗವಾನ್ಸಾಕ್ಷಾದ್ಯಾದವೈಃ ಸಹ ಮೈಥಿಲ ।
ಕರೂಷಾನ್ವಿಷಯಾನ್ಪ್ರಾಗಾಜ್ಜೇತುಂ ಯೋಗೀವ ದೇಹಜಾನ್ ॥ ೩೨ ॥

ಮಹಾರಂಗಪುರೇ ತತ್ರ ವೃದ್ಧಶರ್ಮಾ ಮಹಾಮತಿಃ ।
ಭರ್ತಾಥ ಶ್ರುತದೇವಾಯಾ ವಸುದೇವಸ್ವಸುರ್ನೃಪ ॥ ೩೩ ॥

ತಸ್ಯ ಪುತ್ರೋ ದಂತವಕ್ತ್ರಃ ಕೃಷ್ಣಶತ್ರುಃ ಪ್ರಕೀರ್ತಿತಃ ।
ಶಿಶುಪಾಲ ಇವ ಕ್ರುದ್ಧೋ ಯೋದ್ಧುಂ ಚಕ್ರೇ ಮನಃ ಸ್ವಯಂ ॥ ೩೪ ॥

ಮಾತಾಪಿತ್ರಾ ವಾರಿತೋಽಪಿ ದೈತ್ಯೋ ದೈತ್ಯಾನನುವ್ರತಃ ।
ಯಾದವಾನ್ಘಾತಯಿಷ್ಯಾಮಿ ಕೋಽಯಮಿತ್ಥಂ ಚಕಾರ ಹ ॥ ೩೫ ॥

ಆದಾಯ ಸ ಗದಾಂ ಗುರ್ವೀಂ ಲಕ್ಷಭಾರವಿನಿರ್ಮಿತಾಂ ।
ಏಕಾಕೀ ಪ್ರಯಯೌ ಯೋದ್ಧುಂ ಪ್ರದ್ಯುಮ್ನಬಲಸಂಮುಖೇ ॥ ೩೬ ॥

---

೩೨. ಓ ಮೈಥಿಲೇಂದ್ರ! ಬಳಿಕ ಆ ಪ್ರದ್ಯುಮ್ನನು ಯಾದವರೊಂದಿಗೆ ಯೋಗಿಯು ದೈಹಿಕವಾದ ವಿಷಯಾಭಿಲಾಷೆಯನ್ನು ಜಯಿಸುವಂತೆ ಕರೂಷವೆಂಬ ದೇಶವನ್ನು ಜಯಿಸಲು ಹೊರಟನು.

೩೩. ಆ ದೇಶದ ರಾಜಧಾನಿಯಾದ ಮಹಾರಂಗಪುರದಲ್ಲಿ ಶ್ರುತದೇವಾ ಎಂಬ ವಸುದೇವನ ತಂಗಿಯ ಗಂಡನಾದ ವೃದ್ಧಶರ್ಮನೆಂಬ ದೊರೆಯಿದ್ದನು.

೩೪. ಅವನ ಮಗನಾದ ದಂತವಕ್ರನು ಕೃಷ್ಣನ ಶತ್ರುವೆಂದೇ ಪ್ರಖ್ಯಾತನಾಗಿದ್ದನು. ಅವನೂ ಸಹ ಶಿಶುಪಾಲನಂತೆ ಪ್ರದ್ಯುಮ್ನನೊಡನೆ ಹೋರಾಡಲು ನಿಶ್ಚಯಿಸಿದನು.

೩೫. ದೈತ್ಯಸ್ವಭಾವದ ಆ ದಂತವಕ್ರನು ದೈತ್ಯರ ಮಾರ್ಗವನ್ನೇ ಅವಲಂಬಿಸಿ, ತನ್ನ ತಾಯಿ ತಂದೆಗಳು ಬೇಡವೆಂದರೂ ಕೇಳದೆ 'ಯಾದವರನ್ನು ಕೊಂದೇ ಕೊಲ್ಲುವೆನು. ಇವನಾರು ಹೇಳುವುದಕ್ಕೆ?' ಎಂದು ಕಾದಾಡಲು ನಿಶ್ಚಯಿಸಿದನು.

೩೬. ಹಾಗೆ ನಿಶ್ಚಯಿಸಿದನಂತರ ಒಂದು ಲಕ್ಷ ಭಾರದಷ್ಟು ತೂಕವುಳ್ಳ ಗದೆಯನ್ನು ಕೈಲಿ ಹಿಡಿದುಕೊಂಡು ತಾನೊಬ್ಬನೇ ಪ್ರದ್ಯುಮ್ನನ ಸೇನೆಗೆದುರಾಗಿ ಹೊರಟನು.

ದಂತವಕ್ತ್ರಂ ಕೃಷ್ಣವರ್ಣಂ ಕಜ್ಜಲಾದ್ರಿಸಮಪ್ರಭಂ ।
ಲಲಜ್ಜಿಹ್ವಂ ಘೋರರೂಪಂ ತಾಲವೃಕ್ಷದಶೋಚ್ಛ್ರಿತಂ　　॥ ೩೭ ॥

ಕಿರೀಟಕುಂಡಲಧರಂ ಹೇಮವರ್ಮವಿಭೂಷಿತಂ ।
ಕಿಂಕಿಣೀಜಾಲಸಂಯುಕ್ತಂ ಚಲಚ್ಚರಣನೂಪುರಂ　　॥ ೩೮ ॥

ಕಂಪಯಂತಂ ಭುವಂ ವೇಗಾತ್ಪಾತಯಂತಂ ಗಿರೀನ್ದ್ರುಮಾ ।
ಘಾತಯಂತಂ ಸ್ವಗದಯಾ ಕೃತಾಂತಮಿವ ದುರ್ಜನಾ　　॥ ೩೯ ॥

ತಂ ದೃಷ್ಟ್ವಾ ಯಾದವಾಃ ಸರ್ವೇ ಭಯಂ ಪ್ರಾಪುರ್ಮೃಧಾಂಗಣೇ ।
ಆಗತೇ ದಂತವಕ್ತ್ರೇ ಚ ಮಹಾನ್ಕೋಲಾಹಲೋ ಹ್ಯಭೂತ್　　॥ ೪೦ ॥

---

೩೭. ರಾಜೇಂದ್ರ! (ಆಗಿನ ಅವನ ರೂಪವನ್ನು ಏನೆಂದು ಹೇಳಲಿ?) ಅಂಜನಪರ್ವತದಂತೆ ಕಪ್ಪಾದ ಕಾಂತಿಯನ್ನು ಚೆಲ್ಲುತ್ತಿರುವ ಭಾರಿ ದೇಹ! ಚೆಲಿಸುತ್ತಿರುವ ನಾಲಿಗೆ, ವಿಕಾರವಾದ ರೂಪು, ತಾಳೆಯ ಮರದಂತೆ ಎತ್ತರವಾದ ಆಕಾರ.

೩೮. ತಲೆಯ ಮೇಲೆ ಒಪ್ಪುವ ಕಿರೀಟ, ಕಿವಿಗಳಲ್ಲಿರುವ ಅಂದವಾದ ಕುಂಡಲಗಳು, ತೊಟ್ಟಿರುವ ಚಿನ್ನದ ಕವಚ, ಕಿರುಗಂಟೆಗಳ ಸಾಲಿನಿಂದ ಝಣ ಝಣರೆನ್ನುತ್ತಿರುವ ನಡುದಾರ, ಅಲುಗುತ್ತಿರುವ ಕಾಲಂದುಗೆಗಳು,

೩೯. ಇಂಥ ವೇಷದಿಂದೊಪ್ಪುತ್ತಿರುವ ಆ ದಂತವಕ್ರನು ಪಾಪಿಗಳನ್ನು ಸದೆಬಡಿಯುವ ಯಮನಂತೆ ತನ್ನ ಕೈಲಿರುವ ಗದೆಯಿಂದ ಎದುರಾದವರನ್ನು ಕೊಲ್ಲುತ್ತಾ ತಾನು ಬರುವ ವೇಗದಿಂದ ಬೆಟ್ಟಗಳೂ, ಮರಗಳೂ ನೆಲಕ್ಕುರುಳುವಂತೆಯೂ, ಭೂಮಿಯು ಅಲ್ಲಾಡಿಹೋಗುವಂತೆಯೂ ಹೆಜ್ಜೆಯಿಕ್ಕುತ್ತಾ ಯುದ್ಧಭೂಮಿಗೆ ಬಂದನು.

೪೦. ಅವನನ್ನು ನೋಡುತ್ತಲೇ ರಣರಂಗದಲ್ಲಿದ್ದ ಯಾದವರೆಲ್ಲರೂ ಹೆದರಿಕೆಯಿಂದ ತಲ್ಲಣಿಸಿಹೋದರು. ಮತ್ತು ಯುದ್ಧಭೂಮಿಯನ್ನು ಅವನು ಪ್ರವೇಶಿಸುತ್ತಲೇ ಗಾಬರಿಯಿಂದ ಗಟ್ಟಿಯಾಗಿ ಅರಚಿಬಿಟ್ಟರು.

ಪ್ರದ್ಯುಮ್ನಃ ಪ್ರೇಷಯಾಮಾಸ ತಸ್ಯೋಪರಿ ಮಹದ್ಬಲಂ ।
ಅಷ್ಟಾದಶಾ ಕ್ಷೌಹಿಣೀನಾಂ ಧನುಷ್ಟಂಕಾರಯನ್ಮುಹುಃ ॥ ೪೧ ॥

ಬಾಣೈಃ ಪರಶ್ವಧೈ ರಾಜನ್ ಶತಘ್ನೀಭಿರ್ಭುಶುಂಡಿಭಿಃ ।
ತಂ ತೇಡುರ್ಯಾದವಾಃ ಸರ್ವೇ ಸರ್ವತೋಽದ್ರಿಂ ಯಥಾ ಗಜಾಃ ॥ ೪೨ ॥

ದಂತವಕ್ರಃ ಸ್ವಗದಯಾ ಕರೀಂದ್ರಾನುತ್ಕಟಾನ್ಬಹೂನ್ ।
ಪಾತಯಾಮಾಸ ರಾಜೇಂದ್ರ ಭಿನ್ನಕುಂಭಸ್ಥಲಾನ್ಮೃಧೇ ॥ ೪೩ ॥

ಕಾಂಶ್ಚಿತ್ಪಾದೇಷು ಚೋನ್ನೀಯ ಕಿಂಕಿಣೀಜಾಲನಾದಿತಾನ್ ।
ಸಶೃಂಖಲಾನ್ಸನೀಕಾಂಸ್ತಾಂಲ್ಲೋಲಘಂಟಾರಣತ್ಸ್ವರಾನ್ ॥ ೪೪ ॥

ವಾತಸ್ತೂಲಮಿವಾಕಾಶೇ ಚಿಕ್ಷೇಪ ಶತಯೋಜನಂ ।
ಶುಂಡಾದಂಡೇಷು ಕಾಂಶ್ಚಿದ್ವೈ ಗೃಹೀತ್ವಾ ದೈತ್ಯಪುಂಗವಃ ॥ ೪೫ ॥

---

೪೧. ಆಗ ಪ್ರದ್ಯುಮ್ನನು ತನ್ನ ಧನುಸ್ಸಿನ ಹೆದೆಯನ್ನು ಥನ್ ಎನ್ನುವಂತೆ ಮಿಡಿಯುತ್ತಾ ತನ್ನ ಹದಿನೆಂಟು ಅಕ್ಷೌಹಿಣೀ ಸೇನೆಯನ್ನು ಅವನ ಮೇಲೆ ಬೀಳುವಂತೆ ಕಳುಹಿಸಿದನು.

೪೨. ಓ ಬಹುಲಾಶ್ವನೃಪಾಲ! ಅವನ ಅಪ್ಪಣೆಯಾಗುತ್ತಲೇ ಆ ಯಾದವ ವೀರರು ಪರ್ವತವನ್ನು ಗುದ್ದಾಡುವ ಆನೆಗಳಂತೆ ಆ ದಂತವಕ್ರನ ಮೇಲೆ ಬಾಣಗಳನ್ನೂ, ಪರಶ್ವಧಗಳನ್ನೂ, ಶತಘ್ನಿಗಳನ್ನೂ, (ತೋಪು) ಭುಸುಂಡಿಗಳನ್ನೂ ಪ್ರಯೋಗಿಸುತ್ತಾ ನುಗ್ಗಿದರು.

೪೩. ಆ ದಂತವಕ್ರನು ತನ್ನ ಮೇಲೆ ಬೀಳುತ್ತಿರುವ ಆ ಕೊಬ್ಬಿದ ಮದ್ದಾನೆಗಳ ಕುಂಭಸ್ಥಳದಮೇಲೆ ತನ್ನ ಗದೆಯಿಂದ ಚುಕ್ಕುಚೂರಾಗುವಂತೆ ಅಪ್ಪಳಿಸುತ್ತಾ ಅವನನ್ನು ನೆಲಕ್ಕುರುಳಿಸಿದನು.

೪೪–೪೬. ಮತ್ತು ಕಿರುಗಂಟೆಗಳ ಸಾಲುಗಳನ್ನು ಝಣ ಝಣರೆನಿಸುತ್ತಾ ಕತ್ತಿನಲ್ಲಿಯೂ ಮತ್ತು ಅಕ್ಕಪಕ್ಕಗಳಲ್ಲಿಯೂ ತೂಗುಬಿಟ್ಟಿರುವ ದೊಡ್ಡ ಗಂಟೆಗಳನ್ನೂ ಧ್ವನಿಮಾಡುತ್ತಾ ಸರಪಣಿಯ ಸಮೇತ ಹೋರಾಡುತ್ತಿರುವ ಆ ಮದ್ದಾನೆಗಳಲ್ಲಿ ಕೆಲವನ್ನು ತನ್ನ ಕಾಲಿನ ತುದಿಯಿಂದ ಚಿಮ್ಮಿ ಗಾಳಿಯು ಹತ್ತಿಯನ್ನು ತೂರುವಂತೆ

ಭ್ರಾಮಯಿತ್ವಾ ಗಜಾನ್ದಿಕ್ಷು ನದತಃ ಪ್ರಾಕ್ಷಿಪದ್ರುಷಾ ।
ಕಾಂಶ್ಚಿದ್ಗಜಾನ್ಸ್ವಂಶಯೋಶ್ಚ ಕಕ್ಷಯೋರುಭಯೋಪರಿ || ೪೬ ||

ಪದ್ಭ್ಯಾಮಾಕ್ರಮ್ಯ ಶುಶುಭೇ ದೈತ್ಯಃ ಕಾಲಾಗ್ನಿರುದ್ರವತ್ ।
ರಥಾನ್ಸಸೂತಾನ್ಸಾಶ್ವಾಂಶ್ಚ ಸಧ್ವಜಾನ್ಸಮಹಾರಥಾನ್ ||
ಚಿಕ್ಷೇಪ ಗಗನೇ ವೀರಃ ಪದ್ಮಾನೀವ ಪ್ರಭಂಜನಃ || ೪೭ ||

ತುರಗಾಂಶ್ಚ ಪದಾತೀಂಶ್ಚ ಪ್ರಾಕ್ಷಿಪದ್ಗಗನೇ ಬಲಾತ್ ।
ಅಧೋಮುಖಾ ಊರ್ಧ್ವಮುಖಾ ರಾಜಪುತ್ರಾ ಮಹಾಬಲಾಃ || ೪೮ ||

ಸಶಸ್ತ್ರಾ ರತ್ನಕೇಯೂರಸಂಯುಕ್ತಾಸ್ತಾರಕಾ ಇವ ।
ಆಕಾಶಾತ್ಪ್ರಪತಂತಸ್ತೇ ವಮಂತೋ ರುಧಿರಂ ಮುಖಾತ್ || ೪೯ ||

ಅಂತರಿಕ್ಷದಲ್ಲಿ ನೂರುಯೋಜನದ ದೂರಕ್ಕೆ ಎಸೆದುಬಿಟ್ಟನು. ಮತ್ತೆ ಕೆಲವು ಆನೆಗಳ ಸೊಂಡಲನ್ನು ಹಿಡಿದುಕೊಂಡು ಅವು ಆ ಬಾಧೆಯನ್ನು ತಾಳಲಾರದೆ ಗಟ್ಟಿಯಾಗಿ ಕಿರಿಚಿಕೊಳ್ಳುವಂತೆ ಕೋಪದಿಂದ ಗರಗರನೆ ತಿರುಗಿಸಿ ದಿಕ್ಕುದಿಕ್ಕುಗಳಿಗೆ ಎಸೆದುಬಿಟ್ಟನು. ಮತ್ತು ಆ ದೈತ್ಯಪುಂಗವನು ಕೆಲವು ಆನೆಗಳನ್ನು ಜಿನ್ನೆಲುಬುಗಳಲ್ಲಿಯೂ, ಕಂಕುಳುಗಳಲ್ಲಿಯೂ ಅದುಮಿ ಹಿಡಿದು ಅವುಗಳನ್ನು ಕಾಲಿನಲ್ಲಿ ಮೆಟ್ಟಿ ನಿಂತು (ಗಜಾಸುರ ಸಂಹಾರಿಯಾದ) ಪ್ರಳಯಕಾಲದ ರುದ್ರನಂತೆ ತೋರಿದನು.

೪೭—೪೯. ಅನಂತರ ಆ ವೀರನು ಕಮಲಗಳನ್ನು ಕಿತ್ತೆಸೆಯುವ ಬಿರುಗಾಳಿಯಂತೆ ಧ್ವಜದಂಡದಿಂದ ಅಲಂಕೃತವಾದ ರಥಗಳನ್ನೂ, ಅವರಲ್ಲಿರುವ ಮಹಾರಥರು, ಸಾರಥಿಗಳು, ಕುದುರೆಗಳು ಇವುಗಳ ಸಮೇತವಾಗಿ ಆಕಾಶದಲ್ಲಿ ಬೀಸಿ ಎಸೆದನು. ಮತ್ತು ತನ್ನ ಕೈಗೆ ಸಿಕ್ಕಿದ ಕುದುರೆಗಳನ್ನೂ, ಕಾಲಾಳುಗಳನ್ನೂ ತನ್ನ ಬಲವನ್ನೆಲ್ಲಾ ಬಿಟ್ಟು ಅಂತರಿಕ್ಷದಲ್ಲಿ ರೊಯ್ಯನೆ ಬಿಸಾಡಿದನು. ರಾಜೇಂದ್ರ! ರತ್ನಖಚಿತವಾದ ಬಾಹುಪರಿ (ತೋಳು, ಬಳೆ)ಗಳಿಂದಲೂ ಆಯುಧಗಳಿಂದಲೂ ಅಲಂಕೃತರಾಗಿದ್ದ ಮಹಾ ಬಲಾಢ್ಯರಾದ ರಾಜಪುತ್ರರು ಈ ರೀತಿಯಾಗಿ ಆ ದೈತ್ಯನಿಂದ ಮೇಲ್ಮುಖನಾಗಿಯೂ, ಕೆಳಮುಖನಾಗಿಯೂ ಆಕಾಶದಲ್ಲಿ ಎಸೆಯಲ್ಪಟ್ಟು ಕೆಲಹೊತ್ತಿನ ನಂತರ ಬಾಯಿಂದ ಹೇರಳವಾಗಿ ರಕ್ತವನ್ನು ಕಕ್ಕುತ್ತಾ ನಕ್ಷತ್ರಗಳಂತೆ ನೆಲದ ಮೇಲೆ ಉದುರಿಬಿದ್ದರು.

ಬಲಂ ವಿಲೋಡಯಾಮಾಸ ಗದಯಾ ದೈತ್ಯಪುಂಗವಃ ।
ದಂಷ್ಟ್ರಯಾ ಪ್ರಲಯಾಬ್ಧಿಂ ಶ್ರೀವರಾಹ ಇವ ಮೈಥಿಲ ॥ ೫೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಕೌಂಕಣ, ಕುಟಕ, ತ್ರಿಗರ್ತ, ಕೇರಳ, ತೈಲಂಗ, ಮಹಾರಾಷ್ಟ್ರ ಕರ್ಣಾಟವಿಜಯೇ ಕಾರೂಷದೇಶಗಮನಂ ನಾಮ ದಶಮೋಽಧ್ಯಾಯಃ

---

೫೦. ಓ ಮಿಥಿಲಾಧಿಪತೀ! ಆ ದೈತ್ಯಶ್ರೇಷ್ಠನು ಹಿಂದೆ ಪ್ರಳಯ ಸಮುದ್ರವನ್ನು ಆದಿವರಾಹನು ತನ್ನ ದಾಡೆಗಳಿಂದ ಕಲಕಿಬಿಟ್ಟಂತೆ ತನ್ನ ಗದೆಯಿಂದ ಆ ಯಾದವರ ಸೇನೆಯನ್ನು ಕ್ಷೋಭೆಗೊಳಿಸಿದನು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಕರೂಷದೇಶ ಗಮನವೆಂಬ ಹತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಏಕಾದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ತದಾ ಶ್ರೀಕೃಷ್ಣಪುತ್ರಾಣಾಮಷ್ಟಾದಶಮಹಾರಥಾಃ ।
ಸಕ್ಷತಂ ಕಾರಯಾಮಾಸುರ್ದಂತವಕ್ರಂ ಮಹಾಬಲಂ ॥ ೧ ॥

ದಂತವಕ್ರೋಽತಿಶುಶುಭೇ ಸಕ್ಷತೋ ರಕ್ತಧಾರಯಾ ।
ಲಾಕ್ಷಯೇವ ಯಥಾ ಸೌಧಂ ಪ್ರಹಾರಂ ನಾನುಚಿಂತಯನ್ ॥ ೨ ॥

ಕೃತವರ್ಮಾ ಚ ಬಾಣೌಘೈಸ್ತಂ ಜಘಾನ ರಣಾಂಗಣೇ ।
ಯುಯುಧಾನಶ್ಚ ಖಡ್ಗೇನ ಶಕ್ತ್ಯಾಕ್ರೂರೋ ಮಹಾಬಲಂ ॥ ೩ ॥

ಹನ್ನೊಂದನೆಯ ಅಧ್ಯಾಯವು

೧. ಎಲೈ ಬಹುಲಾಶ್ವಭೂಪಾಲನೇ! ಆಲಿಸು. ಆಗ ಶ್ರೀಕೃಷ್ಣನ ಪುತ್ರರಾದ ಹದಿನೆಂಟು ಮಹಾರಥರು ಮಹಾ ಬಲಿಷ್ಠನಾದ ಆ ದಂತವಕ್ರನನ್ನು ತಮ್ಮ ಆಯುಧಗಳಿಂದ ಗಾಯಗೊಳಿಸಿದರು.

೨. ಆ ಗಾಯಗಳಿಂದ ಸುರಿಯುತ್ತಿರುವ ರಕ್ತಧಾರೆಗಳಿಂದ ತೋಯ್ದು ಹೋದ ಆ ದಂತವಕ್ರನು ಆ ಪ್ರಹಾರಗಳನ್ನು ಲಕ್ಷ್ಯಕ್ಕೆ ತಾರದೆ ಅರಗಿನ ರಸವನ್ನು ಲೇಪಿಸಿರುವ ಭಾರಿ ಉಪ್ಪರಿಗೆಯಂತೆ ಕಂಗೊಳಿಸಿದನು.

೩. ಅವನ ಮೇಲೆ ಕೃತವರ್ಮನು ಬಾಣದ ಮಳೆಯನ್ನು ಸುರಿಸಿದನು. ಯುಯುಧಾನನು ಕತ್ತಿಯಿಂದ ಪ್ರಹರಿಸಿದನು. ಅಕ್ರೂರನು ಶಕ್ತ್ಯಾಯುಧದಿಂದ ಘಾತಿಸಿದನು.

ಸಾರಣಸ್ತಂ ಕುಠಾರೇಣಾಽಹನತ್ತಂ ರೋಹಿಣೀಸುತಃ ।
ದಂತವಕ್ರೋಽಪಿ ಗದಯಾ ಯುಯುಧಾನಂ ತತಾಡ ಹ ॥ ೪ ॥

ಕರೇಣ ಕೃತವರ್ಮಾಣಮಕ್ರೂರಂ ಸ್ವಾಂಘ್ರಿಣಾಽಹನತ್ ।
ಸಾರಣಂ ಭುಜವೇಗೇನ ಕಾರೂಷೋ ರಣದುರ್ಮದಃ ॥ ೫ ॥

ಅಕ್ರೂರಃ ಕೃತವರ್ಮಾ ಚ ಯುಯುಧಾನೋಽಥ ಸಾರಣಃ ।
ನಿಪೇತುರ್ಮೂರ್ಛಿತಾ ಭೂಮೌ ಮರುತಾ ಪಾದಪಾ ಇವ ॥ ೬ ॥

ತತೋ ಗದಾಂ ಸಮಾದಾಯ ಸಾಂಬೋ ಜಾಂಬವತೀಸುತಃ ।
ಗದೋಪರಿ ಗದಾಂ ನೀತ್ವಾ ಗದಯಾ ತಂ ತತಾಡ ಹ ॥ ೭ ॥

---

೪. ಅವರ ಜೊತೆಗೆ ರೋಹಿಣಿಯ ಮಗನಾದ ಸಾರಣನೆಂಬವನು ತನ್ನ ಕುಠಾರ (ಕೊಡಲಿ)ದಿಂದ ಪ್ರಹರಿಸಿದನು. ಆಗ ದಂತವಕ್ರನು ಕುಪಿತನಾಗಿ ಯುಯುಧಾನನನ್ನು ಗದೆಯಿಂದ ಅಪ್ಪಳಿಸಿದನು.

೫. ಬಳಿಕ ಆ ರಣದುರ್ಮದನಾದ ದಂತವಕ್ರನು ಕೃತವರ್ಮನನ್ನು ಕೈಯಿಂದಲೂ, ಅಕ್ರೂರನನ್ನು ಕಾಲಿನಿಂದಲೂ, ಸಾರಣನನ್ನು ತನ್ನ ಬಾಹುವೇಗದಿಂದಲೂ ಗಾಸಿಗೊಳಿಸಿದನು.

೬. ಅದರಿಂದ ಆ ಅಕ್ರೂರನೂ, ಕೃತವರ್ಮನೂ, ಯುಯುಧಾನ, ಸಾರಣರೂ ಮೂರ್ಛಾಕ್ರಾಂತರಾಗಿ ಬಿರುಗಾಳಿಗೆ ಸಿಕ್ಕಿದ ಮರಗಳಂತೆ ನೆಲದ ಮೇಲೆ ಉರುಳಿ ಬಿದ್ದರು.

೭. ಅದನ್ನು ಕಂಡು ಜಾಂಬವತೀ ಪುತ್ರನಾದ ಸಾಂಬನು ತನ್ನ ಗದೆಯನ್ನು ತೆಗೆದುಕೊಂಡು ಆ ದಂತವಕ್ರನ ಗದೆಯನ್ನು ಇಕ್ಕಡೆಗೆ ತಳ್ಳಿ ಅವನನ್ನು ಅಪ್ಪಳಿಸಿದನು.

ದಂತವಕ್ರೋ ಗದಾಂ ತ್ಯಕ್ತ್ವಾ ಸಾಂಬಂ ಜಾಂಬವತೀಸುತಂ ।
ಗೃಹೀತ್ವಾ ಪಾತಯಾಮಾಸ ಭುಜಾಭ್ಯಾಂ ರಣಮಂಡಲೇ ॥ ೮ ॥

ಸಾಂಬಸ್ತದಾ ಸಮುತ್ಥಾಯ ಗೃಹೀತ್ವಾ ಪಾದಯೋಶ್ಚ ತಂ ।
ಅಪೋಥಯದ್ಭೂಮಿಪೃಷ್ಠೇ ತದದ್ಭುತಮಿವಾಭವತ್ ॥ ೯ ॥

ದಂತವಕ್ರಃ ಸಮುತ್ಥಾಯ ಸಾಟ್ಟಹಾಸಂ ತದಾಕರೋತ್ ।
ಸನಾದ ತೇನ ಬ್ರಹ್ಮಾಂಡಂ ಸಪ್ತಲೋಕೈರ್ಬಿಲೈಃ ಸಹ ॥ ೧೦ ॥

ಪತಾಕಾಢ್ಯೇನ ದಿವ್ಯೇನ ಸಹಸ್ರಾದಿತ್ಯವರ್ಚಸಾ ।
ಸಹಸ್ರಹಯಯುಕ್ತೇನ ಪ್ರದ್ಯುಮ್ನಂ ಧನ್ವಿನಾಂ ವರಂ ।
ದಂತವಕ್ರೋಽಪಿ ತಂ ವೀಕ್ಷ್ಯ ಪ್ರಾಹೇದಂ ಪರುಷಂ ವಚಃ ॥ ೧೧ ॥

---

೮. ಆಗ ಆ ದಂತವಕ್ರನು ಗದೆಯನ್ನು ಬಿಟ್ಟು ತನ್ನೆರಡು ಕೈಗಳಿಂದಲೂ ಜಾಂಬವತೀ ಪುತ್ರನಾದ ಆ ವೀರನನ್ನು ಗಟ್ಟಿಯಾಗಿ ಹಿಡಿದುಕೊಂಡು ನೆಲದ ಮೇಲೆ ಬೀಳಿಸಿದನು.

೯. ಕೂಡಲೆ ಆ ಸಾಂಬನು ತಟಕ್ಕನೆ ಮೇಲಕ್ಕೆದ್ದು ಆ ದಂತವಕ್ರನನ್ನು ಕಾಲುಗಳಲ್ಲಿ ಹಿಡಿದುಕೊಂಡು ಮೇಲಕ್ಕೆತ್ತಿ ನೆಲದ ಮೇಲೆ ಬಲವಾಗಿ ಅಪ್ಪಳಿಸಿದನು. ಅದನ್ನು ಕಂಡು ಅಲ್ಲಿದ್ದವರಿಗೆಲ್ಲಾ ಪರಮಾಶ್ಚರ್ಯವಾಯಿತು.

೧೦. ಆ ದಂತವಕ್ರನೂ ಸಹ ಆ ಏಟನ್ನು ಗಣನೆಗೇ ತಾರದೆ ತಟ್ಟನೆ ಎದ್ದು ನಿಂತು ಒಂದು ಬಾರಿ ಅಟ್ಟಹಾಸವನ್ನು ಮಾಡಿದನು. ಆ ನಗುವಿನ ಶಬ್ದದಿಂದ ಅತಲವಿತಲಾದಿ ಅಧೋಲೋಕಗಳೂ ಸ್ವರ್ಗಲೋಕಾದ್ಯುಪರಿಲೋಕಗಳೂ ಸೇರಿದ ಬ್ರಹ್ಮಾಂಡವೂ ತುಂಬಿಹೋಯಿತು.

೧೧. ಓ ರಾಜೇಂದ್ರ ! ಆ ದಂತವಕ್ರನು ದಿವ್ಯವಾದ ಧ್ವಜದಿಂದಲೂ, ಸಾವಿರ ಕುದುರೆಗಳಿಂದಲೂ, ಮನೋಹರವಾಗಿದ್ದು ತೇಜಸ್ಸಿನಿಂದ ಸಾವಿರ ಮಂದಿ ಸೂರ್ಯರನ್ನು ಹೋಲುತ್ತಿರುವ ಇಂದ್ರದತ್ತವಾದ ರಥದಲ್ಲಿ ಕುಳಿತು ತನ್ನ ಬಳಿಗೆ ಬಂದ ಪ್ರದ್ಯುಮ್ನನನ್ನು ನೋಡಿ ಈ ರೀತಿ ಕ್ರೂರವಾಕ್ಯಗಳನ್ನಾಡಿದನು.

॥ ದಂತವಕ್ರ ಉವಾಚ ॥

ಯೂಯಂ ಚ ಯಾದವಾಃ ಸರ್ವೇ ವೃಷ್ಣಯೋ ಹ್ಯಂಧಕಾದಯಃ ।
ಅಲ್ಪಸತ್ತ್ವಾ ಜನಾಸ್ತುಚ್ಛಾ ವಿದ್ರುತಾ ಯುದ್ಧಭೀರವಃ ॥ ೧೨ ॥

ಯಯಾತಿಶಾಪಸಂಭ್ರಷ್ಟಾ ಭ್ರಷ್ಟರಾಜ್ಯಾ ಗತತ್ರಪಾಃ ।
ಏಕೋಽಹಂ ಬಹವೋ ಯೂಯಂ ಯುಷ್ಮಾಭಿಶ್ಚ ಕೃತಂ ಮೃಧಂ ॥ ೧೩ ॥

ಅಧರ್ಮವರ್ತಿಭಿಸ್ತುಚ್ಛೈರ್ಧರ್ಮಶಾಸ್ತ್ರವಿಲೋಪಿಭಿಃ ।
ಪೂರ್ವಂ ಪಿತಾ ತೇ ಶ್ರೀಕೃಷ್ಣೋ ನಂದಸ್ಯ ಪಶುರಕ್ಷಕಃ ॥ ೧೪ ॥

ಗೋಪಾಲೋಚ್ಛಿಷ್ಟಭೋಜೀ ಚ ಸೋಽದ್ಯೈವ ಯಾದವೇಶ್ವರಃ ।
ಹಯ್ಯಂಗವೀನದಧ್ಯಾಜ್ಯದುಗ್ಧತಕ್ರಾದಿಕಂ ರಸಂ ॥ ೧೫ ॥

ಚೋರಯಾಮಾಸ ಗೋಪೀನಾಂ ರಸಿಕೋ ರಾಸಮಂಡಲೇ ।
ಜರಾಸಂಧಭಯಾತ್ಸೋಽಪಿ ಸಮುದ್ರಂ ಶರಣಂ ಗತಃ ॥ ೧೬ ॥

---

೧೨. "ಓ ಪ್ರದ್ಯುಮ್ನ ! ವೃಷ್ಣಿ, ಅಂಧಕ, ಮುಂತಾದ ಪ್ರಭೇದಗಳನ್ನೊಳಗೊಂಡ ನೀವೆಲ್ಲ ಯಾದವರೂ ಶಕ್ತಿಹೀನರು. ಯುದ್ಧಮಾಡಲು ಪೌರುಷವಿಲ್ಲದೆ ಹೇಡಿಗಳಾಗಿ ಓಡಿಹೋಪ ಅತಿ ನೀಚರಾದ ಜನರು.

೧೩. ಯಯಾತಿಯ ಶಾಪದಿಂದ ಪತಿತರಾದ ನೀವು ರಾಜಪದವಿಗೇ ಅನರ್ಹರಾಗಿದ್ದರೂ ನಾಚಿಕೆಯೇ ಇಲ್ಲದೆ ವರ್ತಿಸುತ್ತಿರುವಿರಿ. ನೀವು ಬಹು ಮಂದಿ, ನಾನು ಒಬ್ಬಂಟಿಗನು ಹೀಗಿದ್ದರೂ ನೀವು ನನ್ನೊಡನೆ ಯುದ್ಧಮಾಡಿದಿರಿ.

೧೪. ನೀವುಗಳು ಧರ್ಮಶಾಸ್ತ್ರದ ನಿಬಂಧನೆಗಳನ್ನು ಮೀರಿ ಅಧರ್ಮವನ್ನೇ ಆಚರಿಸುತ್ತಿರುವ ತುಚ್ಛ ಜನರು. ನಿನ್ನ ತಂದೆಯಾದ ಶ್ರೀಕೃಷ್ಣನು ಹಿಂದೆ ನಂದನ ಹಸುಗಳ ಮಂದೆಯನ್ನು ಕಾಯುತ್ತಿದ್ದನು.

೧೫–೧೬. ಆ ಗೊಲ್ಲರು ತಿಂದು ಮಿಕ್ಕಿದ್ದನ್ನೇ ತಾನೂ ತಿನ್ನುತ್ತಿದ್ದನು. ಇಂಥವನು ಈಗ ಯಾದವರಿಗೆಲ್ಲಾ ಪ್ರಭುವೆನಿಸಿರುವನು. ಆ ಕೃಷ್ಣನು ಹಾಲು, ಮೊಸರು, ಬೆಣ್ಣೆ, ತುಪ್ಪ, ಮಜ್ಜಿಗೆ ಮೊದಲಾದ ಗೋರಸಗಳನ್ನು ಕಳ್ಳತನದಿಂದ ಅಪಹರಿಸಿದನು. ಅರಿಯದ ಗೊಲ್ಲತಿಯರನ್ನೆಲ್ಲಾ ಸೇರಿಸಿಕೊಂಡು ರಾಸಕ್ರೀಡೆಯನ್ನು ಆಡುತ್ತಾ ತನ್ನ ರಸಿಕತೆಯನ್ನು ವ್ಯಕ್ತಪಡಿಸಿದನು. ಇಂಥವನೂ ಕೂಡ ಜರಾಸಂಧನ ಹೆದರಿಕೆಯಿಂದ ಓಡಿಹೋಗಿ ಸಮುದ್ರವನ್ನು ಮರೆಹೊಕ್ಕಿರುವನು.

ಸೋಽದ್ಯೈವ ಯದುನಾಥೋಽಭೂದ್ಯೋ ಭೀರುಃ ಕಾಲಸಂಮುಖೇ ।
ತೇನ ದತ್ತಂ ಸ್ವಲ್ಪರಾಜ್ಯಮುಗ್ರಸೇನಃ ಸಮೇತ್ಯ ಸಃ ॥ ೧೭ ॥

ಕರಿಷ್ಯತ್ಯಲ್ಪಸಾರಾರ್ಥೇ ರಾಜಸೂಯಂ ಕ್ರತೂತ್ತಮಂ ।
ದುರತ್ಯಯಾ ಕಾಲಗತಿರ್ಜಾತಂ ಚಿತ್ರಮಹೋ ಜಗತ್ ॥
ಅಧ್ಯಾಸ್ತೇ ಸಿಂಹಶಾರ್ದೂಲಂ ಶೃಗಾಲೋ ಹ್ಯತಿದುರ್ಬಲಃ ॥ ೧೮ ॥

॥ ಶ್ರೀ ಪ್ರದ್ಯುಮ್ನ ಉವಾಚ ॥

ಪುರಾ ವೈ ಕುಂಡಿನಪುರೇ ಯದೂನಾಂ ಬಲಮೂರ್ಜಿತಂ ।
ತ್ವಯಾ ದೃಷ್ಟಂ ನ ಕಿಂತ್ವತ್ರ ಪಶ್ಯಾದ್ಯೈವ ವಿನಿಂದಕ ॥ ೧೯ ॥

ಯುಷ್ಮಾನ್ಸಂಬಂಧಿನೋ ಜ್ಞಾತ್ವಾ ನೇಚ್ಛೇದ್ಯುದ್ಧಂ ಕರೂಷಪ ।
ಬಲಾತ್ತ್ವಂ ಯುದ್ಧಮಾಕಾರ್ಷೀರ್ಧರ್ಮಶಾಸ್ತ್ರಂ ತ್ವಯಾ ಕೃತಂ ॥ ೨೦ ॥

---

೧೭. ಸಮಯವು ಎದುರಾದಾಗ ಹೆದರಿಕೊಂಡು ಓಡಿಹೋಗುವ ಆ ಪುಕ್ಕಲನೂ ಸಹ ಈಗ ಯಾದವ ಪ್ರಭುವಾಗಿ ಬಿಟ್ಟಿರುವನು. ಅವನೆಲ್ಲೋ ಇತ್ತ ರಾಜ್ಯದ ತುಂಡನ್ನು ಪಡೆದ ಈ ಉಗ್ರಸೇನನು

೧೮. ಯಾವುದೋ ಅಲ್ಪ ಪ್ರಯೋಜನಕ್ಕಾಗಿ ಯಜ್ಞಗಳಲ್ಲೆಲ್ಲಾ ಅತ್ಯುತ್ತಮವೆನಿಸಿದ ರಾಜಸೂಯಯಾಗವನ್ನು ಮಾಡಲೆಳಸಿರುವನು. ಕಾಲದ ಗತಿಯನ್ನು ಮೀರಲು ಯಾರಿಗೆ ತಾನೆ ಸಾಧ್ಯವಿದೆ ? ಆಹಾ ! ಪ್ರಪಂಚವೇ ಆಶ್ಚರ್ಯಕರವಾಗಿ ಪರಿಣಮಿಸುತ್ತಿರುವುದು. ಅತಿ ದುರ್ಬಲಪ್ರಾಣಿಯಾದ ಸೃಗಾಲವು (ನರಿಯು) ಸಿಂಹಶಾರ್ದೂಲಗಳ ಮೇಲೆ ತನ್ನ ಪ್ರಭಾವವನ್ನು ತೋರುವಂತಾಯಿತು. ಎಂದು ನಿಂದಿಸಿದನು.

೧೯. ಆಗ ಪ್ರದ್ಯುಮ್ನನು ಅವನನ್ನು ಕುರಿತು-ಹಿಂದೆ ಕುಂಡಿನನಗರದಲ್ಲಿ ಯಾದವರ ಸಾಹಸವನ್ನು ಕಂಡಿಲ್ಲವೇನು ? ಆಗ ಅದರ ಅಪಾರವಾದ ಸಾಹಸವನ್ನು ನೋಡಿಲ್ಲದಿದ್ದರೆ ಈಗ ಕ್ಷಣಮಾತ್ರದಲ್ಲಿಯೇ ನೋಡುವೆಯಂತೆ.

೨೦. ಓ ಕರೂಷದೇಶಾಧಿಪತೀ ! ನೀವು ಸಂಬಂಧಿಕರೆಂದು ಭಾವಿಸಿ ನಿಮ್ಮೊಡನೆ ಯುದ್ಧ ಮಾಡಲು ಅಪೇಕ್ಷಿಸಿರಲಿಲ್ಲ. ನೀನೇ ಒತ್ತಾಯದಿಂದ ಯುದ್ಧಕ್ಕೆ ಹೊರಟುಬಂದೆ. ನೀನು ಧರ್ಮಶಾಸ್ತ್ರವನ್ನೇ ಅನುಸರಿಸಿದೆಯಲ್ಲವೇ ?

ನಂದೋ ದ್ರೋಣೋ ವಸುಃ ಸಾಕ್ಷಾಜ್ಜಾತೋ ಗೋಪಕುಲೇಽಪಿ ಸಃ ।
ಗೋಪಾಲಾ ಯೇ ಚ ಗೋಲೋಕೇ ಕೃಷ್ಣರೋಮಸಮುದ್ಭವಾಃ ॥ ೨೧ ॥

ರಾಧಾರೋಮೋದ್ಭವೋ ಗೋಪ್ಯಸ್ತಾಶ್ಚ ಸರ್ವಾ ಇಹಾಗತಾಃ ।
ಕಾಶ್ಚಿತ್ಪುಣ್ಯೈಃ ಕೃತೈಃ ಪೂರ್ವೈಃ ಪ್ರಾಪ್ತಾಃ ಕೃಷ್ಣಂ ವರೈಃ ಪರೈಃ ॥ ೨೨ ॥

ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ಸ್ವಯಂ ।
ಅಸಂಖ್ಯಬ್ರಹ್ಮಾಂಡಪತಿರ್ಗೋಲೋಕೇಶಃ ಪರಾತ್ಪರಃ ॥ ೨೩ ॥

ಯಸ್ಮಿನ್ಸರ್ವಾಣಿ ತೇಜಾಂಸಿ ವಿಲೀಯಂತೇ ಸ್ವತೇಜಸಿ ।
ತಂ ವದಂತಿ ಪರೇ ಸಾಕ್ಷಾತ್ಪರಿಪೂರ್ಣತಮಃ ಸ್ವಯಂ ॥ ೨೪ ॥

---

೨೧. ನೀನು ಗೊಲ್ಲನೆಂದು ತಿಳಿದಿರುವ ನಂದನು ಮತ್ತಾರೂ ಅಲ್ಲ. ದ್ರೋಣನೆಂಬ ವಸುವು. ಆತನು ನಂದರೂಪದಿಂದ ಗೋಕುಲದಲ್ಲಿ ಅವತರಿಸಿರುವನು. ಮತ್ತು ಇತರ ಗೋಪಾಲಕರೂ ಸಹ ಗೋಲೋಕದಲ್ಲಿ ಶ್ರೀಕೃಷ್ಣನ ರೋಮಗಳಿಂದ ಉದ್ಭವಿಸಿರುವ ಪುಣ್ಯಶಾಲಿಗಳು.

೨೨. ಈ ಗೋಪಿಯರೂ ಸಹ ಜಗನ್ಮಾತೆಯಾದ ರಾಧಿಕೆಯ ರೋಮಗಳಿಂದ ಸಂಜನಿಸಿದ ಗೋಲೋಕನಿವಾಸಿಗಳು. ಅವರೆಲ್ಲರೂ ಇಲ್ಲಿ ಗೋಪೀರೂಪದಿಂದ ಅವತರಿಸಿರುವರು. ಮತ್ತೆ ಕೆಲವು ಸ್ತ್ರೀಯರು ಪೂರ್ವಜನ್ಮಗಳಲ್ಲಿ ಮಾಡಿದ ಅಪಾರವಾದ ಪುಣ್ಯಕರ್ಮಫಲದಿಂದ ಶ್ರೀಕೃಷ್ಣನನ್ನು ಪತಿಯನ್ನಾಗಿ ಪಡೆದಿರುವರು.

೨೩. ಈ ಶ್ರೀಕೃಷ್ಣನು ಮತ್ತಾರೂ ಅಲ್ಲ. ಸಂಪೂರ್ಣತಮನೆಂಬದಾಗಿ ಪ್ರಾಜ್ಞರಾದವರಿಂದ ವಿವರಿಸಲ್ಪಟ್ಟ ಸಾಕ್ಷಾತ್ ಭಗವಂತನೇ ಎಂದು ತಿಳಿ. ಈತನೇ ಅಸಂಖ್ಯಾತವಾದ ಬ್ರಹ್ಮಾಂಡಗಳಿಗೆಲ್ಲಾ ಅಧಿಪತಿಯು. ಸರ್ವಲೋಕಗಳಿಗಿಂತಲೂ ಮೇಲೆನಿಸಿದ ಗೋಲೋಕಕ್ಕೆ ಪ್ರಭುವು, ಪರಾತ್ಪರನಾದವನು.

೨೪. ಸ್ವಯಂಪ್ರಕಾಶನಾಗಿ ಬೆಳಗುತ್ತಿರುವ ಯಾವನಲ್ಲಿ ಇತರ ಸಕಲ ತೇಜಸ್ಸುಗಳೂ ಲೀನವಾಗುವುವೋ ಅಂತಹ ಜ್ಯೋತಿಸ್ಸ್ವರೂಪವನ್ನೇ ಸಾಕ್ಷಾತ್ ಪರಿಪೂರ್ಣತಮನೆಂಬುದಾಗಿ ಜ್ಞಾನಿಗಳು ಹೇಳುವರು.

ಉಗ್ರಸೇನೋಽಥ ರಾಜೇಂದ್ರೋ ಮರುತೋ ನಾಮ ಯಃ ಪುರಾ ।
ಶ್ರೀಕೃಷ್ಣಸ್ಯ ವರೇಣಾಸೌ ಯಾದವೇಂದ್ರೋ ಬಭೂವ ಹ ॥ ೨೫ ॥

ನಿರಂಕುಶೋ ಮಹಾಮೂರ್ಖೋ ನಿನಿಂದಸಿ ಮಹದ್ಗುಣಂ ।
ಸ ನಃ ಪ್ರಾರ್ಥಯತೇ ಕಿಂಚಿದ್ಯಥಾ ಸಿಂಹಃ ಶಿವಾರುತಂ ॥ ೨೬ ॥

॥ ಶ್ರೀ ನಾರದ ಉವಾಚ ॥

ಏವಂ ವಚಸ್ತದಾ ಶ್ರುತ್ವಾ ದಂತವಕ್ರೋ ಮದೋತ್ಕಟಃ ।
ಗದಾಂ ಗುರ್ವೀಂ ಸಮಾದಾಯ ಪ್ರಾದ್ರವತ್ತದ್ರಥೋಪರಿ ॥ ೨೭ ॥

ಗದಯಾ ಪಾತಯಾಮಾಸ ಸಹಸ್ರಂ ಘೋಟಕಾನ್ನದನ್ ।
ಘೋಟಕಾ ದುದ್ರುವುಃ ಸರ್ವೇ ದೃಷ್ಟ್ವಾ ರೂಪಂ ಭಯಂಕರಂ ॥ ೨೮ ॥

---

೨೫. ಈ ಉಗ್ರಸೇನರಾಜನೂ ಸಹ ಹಿಂದೆ ಮರುತನೆಂಬ ರಾಜನಾಗಿ ಹುಟ್ಟಿ ಶ್ರೀಕೃಷ್ಣನ ಕೃಪೆಗೆ ಪಾತ್ರನಾಗಿ ಆತನ ವರದ ಬಲದಿಂದ ಈಗ ಯಾದವೇಶ್ವರನಾಗಿ ಜನಿಸಿರುವನು.

೨೬. ನೀನು ಶುದ್ಧ ತಿಳಿಗೇಡಿ. ಯಾವೊಂದು ಅಡ್ಡಿ ತಡೆಯೂ ಇಲ್ಲದೆ ಬಾಯಿಗೆ ಬಂದಂತೆ ಆ ಅನಂತಗುಣಶಾಲಿಯನ್ನು ನಿಂದಿಸುತ್ತಿರುವೆ. ಸಿಂಹವು ನರಿಯ ಕೂಗಿಗೆ ಹೆದರಿ ಮತ್ತಾರನ್ನೂ ಸಹಾಯಕ್ಕಾಗಿ ಪ್ರಾರ್ಥಿಸದಿರುವಂತೆ ಆ ಪರಿಪೂರ್ಣಸ್ವರೂಪನು ಮತ್ತಾರನ್ನೂ ಪ್ರಾರ್ಥಿಸಬೇಕಾದ ಅಗತ್ಯವಿಲ್ಲದಿರುವನು.

೨೭. ಓ ಬಹುಲಾಶ್ವಭೂಪಾಲ! ಈರೀತಿಯಾಗಿ ಪ್ರದ್ಯುಮ್ನನು ಹೇಳಿದ ಮಾತನ್ನು ಕೇಳಿ, ಶೌರ್ಯಮದೋನ್ಮತ್ತನಾದ ಆ ದಂತವಕ್ರನು ತನ್ನ ಭಾರಿಯಾದ ಗದೆಯನ್ನು ಹಿಡಿದುಕೊಂಡು ಪ್ರದ್ಯುಮ್ನನ ರಥದ ಮೇಲೇರಿ ಹೋದನು.

೨೮. ಅರಚಿ ಮುನ್ನುಗ್ಗಿ ಸಿಂಹನಾದಮಾಡುತ್ತಾ ತೇರಿಗೆ ಕಟ್ಟಿದ್ದ ಸಾವಿರ ಕುದುರೆಗಳನ್ನೂ ಗದೆಯಿಂದ ನೆಲಕ್ಕೆ ಕೆಡವಿದನು. ಆ ಕುದುರೆಗಳು ದಂತವಕ್ರನ ಭಯಂಕರ ಸ್ವರೂಪವನ್ನು ಕಂಡು ದಿಕ್ಕಾಪಾಲಾಗಿ ಓಡಿಹೋದುವು.

ಪ್ರದ್ಯುಮ್ನೋಽಪಿ ಗದಾಂ ನೀತ್ವಾ ತಂ ತತಾಡ ದೃಢಂ ಹೃದಿ ।
ತತ್ಪ್ರಹಾರೇಣ ದೈತ್ಯೇಂದ್ರಃ ಕಿಂಚಿದ್ವ್ಯಾಕುಲಮಾನಸಃ ॥ ೨೯ ॥

ತಯೋಶ್ಚ ಗದಯಾ ಯುದ್ಧಂ ಘೋರರೂಪಂ ಬಭೂವ ಹ ।
ಗದಾಭ್ಯಾಂ ಪ್ರಹರಂತೌ ದ್ವೌ ಮರ್ದಯಂತೌ ಪರಸ್ಪರಂ ॥
ನದಂತೌ ಸಂಗರೇ ರಾಜನ್ ಗಿರೌ ಕೇಸರಿಣೌ ಯಥಾ ॥ ೩೦ ॥

ದಂತವಕ್ರೋ ಭುಜಾಭ್ಯಾಂ ತಂ ಗೃಹೀತ್ವಾ ಶ್ರೀಹರೇಃ ಸುತಂ ।
ಭೂಮೌ ನಿಪಾತಯಾಮಾಸ ಸಿಂಹಃ ಸಿಂಹಮಿವೌಜಸಾ ॥ ೩೧ ॥

ಪ್ರದ್ಯುಮ್ನೋಽಪಿ ಸಮುತ್ಥಾಯ ಗೃಹೀತ್ವಾ ಭುಜಯೋರ್ಬಲಾತ್ ।
ಭ್ರಾಮಯಿತ್ವಾ ಭುಜಾಭ್ಯಾಂ ತಂ ಪಾತಯಾಮಾಸ ಭೂತಲೇ ॥ ೩೨ ॥

---

೨೯. ಆಗ ಪ್ರದ್ಯುಮ್ನನೂ ಸಹ ತನ್ನ ಗದೆಯನ್ನು ತೆಗೆದುಕೊಂಡು ಬಲವಾಗಿ ಆ ದಂತವಕ್ರನ ಎದೆಯಮೇಲೆ ಅಪ್ಪಳಿಸಿದನು. ಆ ಏಟಿನಿಂದ ದೈತ್ಯೇಂದ್ರನು ಸ್ವಲ್ಪಮಟ್ಟಿಗೆ ಕಳವಳಕ್ಕೀಡಾದನು.

೩೦. ಓ ರಾಜೇಂದ್ರ ! ಆಗ ಅವರಿಬ್ಬರಿಗೂ ಭಯಂಕರವಾದ ಗದಾಯುದ್ಧವು ಜರುಗಿತು. ಆ ವೀರರಿಬ್ಬರೂ ಪರ್ವತಾಗ್ರದಲ್ಲಿ ಹೋರಾಡುವ ಸಿಂಹಗಳಂತೆ ಗರ್ಜಿಸುತ್ತಾ ಪರಸ್ಪರವಾಗಿ ಗದೆಗಳಿಂದ ಹೊಡೆದಾಡುತ್ತಾ ಒಬ್ಬರನ್ನೊಬ್ಬರು ಮರ್ದನಮಾಡುತ್ತಿದ್ದರು.

೩೧. ಅನಂತರ ಆ ದಂತವಕ್ರನು, ಸಿಂಹವು ಮತ್ತೊಂದು ಸಿಂಹವನ್ನು ತನ್ನ ಪರಾಕ್ರಮದಿಂದ ಬೀಳಿಸುವಂತೆ ಆ ಪ್ರದ್ಯುಮ್ನನನ್ನು ಎರಡು ತೋಳುಗಳಿಂದಲೂ ಗಟ್ಟಿಯಾಗಿ ಅಪ್ಪಿಹಿಡಿದು ನೆಲದಮೇಲೆ ಕೆಡವಿದನು.

೩೨. ಆರೀತಿ ಕೆಳಗೆ ಬಿದ್ದೊಡನೆಯೇ ಪ್ರದ್ಯುಮ್ನನು ತಟಕ್ಕನೆ ಮೇಲಕ್ಕೆ ಎದ್ದು ನಿಂತು ತನ್ನೆರಡು ಕೈಗಳಿಂದಲೂ ಅವನನ್ನು ಪಕ್ಕನೆ ಹಿಡಿದು ಗರಗರನೆ ತಿರುಗಿಸಿ ನೆಲದಮೇಲೆ ದೊಪ್ಪನೆ ಕೆಡವಿದನು.

ಪ್ರದ್ಯುಮ್ನಸ್ಯ ಪ್ರಹಾರೇಣ ಸೋಽಪತದ್ರುಧಿರಂ ವಮನ್ ।
ಚೂರ್ಣಿತಾಸ್ಥಿಃ ಛಿನ್ನಗಾತ್ರೋ ಮೂರ್ಛಿತೋ ವಿಹ್ವಲಾಕೃತಿಃ ॥ ೩೩ ॥

ಗಿರೀಂದ್ರ ಇವ ಭೂಪೃಷ್ಠೇ ರೇಜೇ ಶಕ್ರಾಯುಧಾಹತಃ ।
ತತ್ಪ್ರಹಾರೇಣ ವಸುಧಾ ಚಚಾಲ ಸಜಲಾಭವತ್ ॥ ೩೪ ॥

ವಿಚೇಲುರ್ದಿಗ್ಗಜಾಸ್ತಾರಾಃ ಸಮುದ್ರಾಶ್ಚ ಚಕಂಪಿರೇ ।
ಪಾತಶಬ್ದೇನ ರಾಜೇಂದ್ರ ತ್ರಿಲೋಕೀ ಬಧಿರೀಕೃತಾ ॥ ೩೫ ॥

ತದೈವ ಕಾರೂಷಪತಿರ್ಮಹಾತ್ಮಾ
ಶ್ರೀವೃದ್ಧಶರ್ಮಾ ಸುತದೇವಯಾ ಚ ।
ರಾಜ್ಞ್ಯಾ ಮಹಾರಂಗಪುರಾದ್ಯದೂನಾಂ
ಸಮಾಯಯೌ ಸುಂದರಸಂಧಿಕಾರೀ ॥ ೩೬ ॥

---

೩೩. ಓ ರಾಜೇಂದ್ರ ! ಆ ದಂತವಕ್ರನು ಪ್ರದ್ಯುಮ್ನನ ಈ ಪೆಟ್ಟನ್ನು ತಾಳಲಾರದೆ ಮೂಳೆಗಳೆಲ್ಲಾ ಮುರಿದುಹೋಗಿ ಮೈಯೆಲ್ಲಾ ಅಜ್ಜುಬುಜ್ಜಾಗಿ ರಕ್ತವನ್ನು ಕಕ್ಕುತ್ತಾ ಆಕಾರವೆಲ್ಲವೂ ವಿಕಾರಕ್ಕೀಡಾಗಿ ಮೂರ್ಛೆಹೊಂದಿ ನೆಲದಮೇಲೆ ಬಿದ್ದುಬಿಟ್ಟನು.

೩೪. ಆರೀತಿ ನೆಲಕ್ಕುರುಳಿದ ದಂತವಕ್ರನು ಇಂದ್ರನ ವಜ್ರಾಯುಧದಿಂದ ಕತ್ತರಿಸಿ ಕೆಡಹಲ್ಪಟ್ಟ ಭಾರಿ ಪರ್ವತದಂತೆ ತೋರಿದನು. ಅವನು ನೆಲಕ್ಕೆ ಬಿದ್ದ ವೇಗದಿಂದ ಭೂಮಿಯು ನಡುಗಿಹೋಯಿತು. ಒಳಗಡೆಯಿಂದ ನೀರು ಮೇಲಕ್ಕೆ ಉಕ್ಕಿ ಹರಿಯತೊಡಗಿತು.

೩೫. ಅಷ್ಟದಿಗ್ಗಜಗಳೂ, ನಕ್ಷತ್ರಗಳೂ ಅಲ್ಲಾಡಿಹೋದುವು. ಸಮುದ್ರಗಳು ಅಲ್ಲೋಲಕಲ್ಲೋಲವಾದುವು. ಮತ್ತು ಆ ಸದ್ದಿನಿಂದ ಮೂರು ಲೋಕಗಳೂ ಕಿವುಡಾದುವು.

೩೬. ಆಗ ಕರೂಷದೇಶಾಧಿಪತಿಯೂ ಉದಾರಮನಸ್ಕನೂ ಆದ ವೃದ್ಧಶರ್ಮನು ತನ್ನ ರಾಣಿಯಾದ ಸುತದೇವಾ ಎಂಬುವಳೊಡನೆ ರಾಜಧಾನಿಯಾದ ಮಹಾರಂಗಪುರದಿಂದ ಹೊರಟು ಯಾದವರೊಡನೆ ಸಂಧಿಯನ್ನು ಮಾಡಿಕೊಳ್ಳಲೋಸುಗ ಅಲ್ಲಿಗೆ ಬಂದನು.

ದತ್ತ್ವಾ ಬಲಿಂ ಮೈಥಿಲ ಶಂಬರಾರಯೇ
ಸುತಂ ಗೃಹೀತ್ವಾ ಕೃತಸಂಧಿರಗ್ರತಃ ।
ತಥಾ ಯದೂನಾಂ ಪ್ರವರೈಃ ಪ್ರಪೂಜಿತಃ
ಪುನರ್ಮಹಾರಂಗಪುರಂ ಸಮಾಯಯೌ ॥ ೩೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ದಂತವಕ್ರಯುದ್ಧೇ ಕಾರೂಷದೇಶವಿಜಯೋ ನಾಮೈಕಾದಶೋಽಧ್ಯಾಯಃ

---

೩೭. ಓ ಮೈಥಿಲೇಂದ್ರ! ಆ ವೃದ್ಧಶರ್ಮನು ಪ್ರದ್ಯುಮ್ನನಿಗೆ ಕಪ್ಪಕಾಣಿಕೆಗಳನ್ನೊಪ್ಪಿಸಿ ಅವನೊಡನೆ ಸಂಧಿಯನ್ನು ಮಾಡಿಕೊಂಡು ಯಾದವ ವೀರರೆಲ್ಲರಿಂದಲೂ ಸನ್ಮಾನಿತನಾಗಿ ತನ್ನ ಮಗನೊಡನೆ ರಾಜಧಾನಿಯಾದ ಮಹಾರಂಗಪುರಕ್ಕೆ ಹಿಂದಿರುಗಿದನು.

ಇಲ್ಲಿಗೆ ಶ್ರೀಗರ್ಗ ಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ದಂತವಕ್ರಯುದ್ಧ ಕರೂಷದೇಶ ವಿಜಯವೆಂಬ ಹನ್ನೊಂದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ದ್ವಾದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅರ್ಣವಂ ದಕ್ಷಿಣಂ ಸ್ನಾತ್ವಾ ಪ್ರದ್ಯುಮ್ನೋ ಯಾದವಾಧಿಪಃ ।
ಉಶೀನರಾಂಸ್ತತೋ ಜೇತುಮಾಜಗಾಮ ಬಲೈಃ ಸಹ ॥ ೧ ॥

ಕೋಟಿಶಃ ಕೋಟಿಶೋ ಗಾವೋ ಯತ್ರ ದೇಶೇ ಚರಂತಿ ಹಿ ।
ಗೋಪಾಲಮಂಡಲೈರ್ಯುಕ್ತಾ ವ್ರಜಂತ್ಯೋ ಭವ್ಯಮೂರ್ತಯಃ ॥ ೨ ॥

ಔಶೀನರಾಃ ಕ್ಷೀರಪಾನಾ ಗೌರವರ್ಣಮನೋಹರಾಃ ।
ಹಯ್ಯಂಗವೀನಮಾದಾಯ ತೇ ಯಯುಃ ಕಾರ್ಷ್ಣಿಸಂಮುಖೇ ॥ ೩ ॥

ಹನ್ನೆರಡನೆಯ ಅಧ್ಯಾಯವು

೧. ಓ ಮೈಥಿಲೇಂದ್ರ! ಮುಂದಿನ ಸಂಗತಿಯನ್ನು ಕೇಳು. ಬಳಿಕ ಆ ಯಾದವೇಶ್ವರನಾದ ಪ್ರದ್ಯುಮ್ನನು ದಕ್ಷಿಣಸಮುದ್ರದಲ್ಲಿ ಸ್ನಾನಮಾಡಿ ಅಲ್ಲಿಂದ ತನ್ನ ಸೇನೆಯೊಡನೆ ಉಶೀನರವೆಂಬ ದೇಶವನ್ನು ಗೆಲ್ಲಲು ಪ್ರಯಾಣಮಾಡಿದನು.

೨. ಆ ಉಶೀನರದೇಶದಲ್ಲಿ ರಮಣೀಯವಾದ ಆಕಾರದಿಂದೊಪ್ಪುವ ಕೋಟಿಕೋಟಿಗಟ್ಟಲೆ ಗೋವುಗಳು ಹಿಂಡು ಹಿಂಡಾಗಿ ತಮ್ಮನ್ನು ಕಾಯುವ ಗೋವಳರೊಡನೆ ಸಂಚರಿಸುತ್ತಿರುವುವು.

೩. ಆ ಉಶೀನರದೇಶದಲ್ಲಿ ವಾಸಿಸುವ ಜನರು ಯಥೇಚ್ಛವಾಗಿ ದೊರೆಯುವ ಹಾಲನ್ನೇ ಆಹಾರವಾಗಿ ಉಪಯೋಗಿಸುತ್ತಾ ಬಿಳುಪಾದ ಮೈಬಣ್ಣದಿಂದ ಮೆರೆಯುತ್ತಿರುವರು. ಆ ಔಶೀನರು ಪ್ರದ್ಯುಮ್ನನು ದಂಡೆತ್ತಿ ಬಂದಿರುವುದನ್ನು ಕಂಡು ಆಗತಾನೆ ಮೊಸರನ್ನೂ, ಹೊಸದಾಗಿ ಕಡೆದು ತೆಗೆದ ಬೆಣ್ಣೆಯನ್ನೂ, ಕಾಸಿ ಬಂದ ತುಪ್ಪವನ್ನೂ, ತೆಗೆದುಕೊಂಡು ಆ ಪ್ರದ್ಯುಮ್ನನಿಗೆ ಅಭಿಮುಖವಾಗಿ ಬಂದರು.

ತೈಃ ಪೂಜಿತಃ ಶಂಖರಾರಿರ್ದದೌ ತೇಭ್ಯೋ ಮಹಾಧನಂ ।
ಗಜಾನ್ರಥಾನ್ಹಯಾನ್ರತ್ನವಸ್ತ್ರಭೂಷಾದಿಹರ್ಷಿತಃ ॥ ೪ ॥

ಚಂಪಾವತೀ ನಾಮ ಪುರೀ ಮಣಿರತ್ನಸಮನ್ವಿತಾ ।
ವಿರಾಜತೇ ಯತ್ರ ನೃಪೈಃ ಸರ್ಪೈರ್ಭೋಗವತೀ ಯಥಾ ॥ ೫ ॥

ಚಂಪಾವತೀಪತಿರ್ವೀರೋ ನಾಮ್ನಾ ಹೇಮಾಂಗದೋ ನೃಪಃ ।
ನೀತ್ವಾ ಬಲಿಂ ಸಮೇತ್ಯಾಶು ಶ್ರೀಕಾರ್ಷ್ಣಿಂ ಪ್ರಣನಾಮ ಹ ॥ ೬ ॥

ತಸ್ಮೈ ತುಷ್ಟಃ ಶಂಬರಾರಿರ್ಮಾಲಾಂ ಕಿಂಜಲ್ಕಿನೀಂ ದದೌ ।
ಸಹಸ್ರದಳಶೋಭಾಢ್ಯಂ ಪದ್ಮಂ ದಿವ್ಯಂ ದದೌ ಪುನಃ ॥ ೭ ॥

---

೪. ಅವರಿಂದ ಸತ್ಕರಿಸಲ್ಪಟ್ಟ ಪ್ರದ್ಯುಮ್ನನು ಮಹಾಸಂತೋಷವನ್ನು ತಾಳಿ ಆ ಉಶೀನರದೇಶದ ಜನರಿಗೆ ಬೇಕಾದಷ್ಟು ಹಣವನ್ನೂ, ಆನೆ ಕುದುರೆಗಳನ್ನೂ, ತೇರುಗಳನ್ನೂ. ಹೇರಳವಾದ ರತ್ನಖಚಿತವಾದ ಆಭರಣಗಳನ್ನೂ, ಮಹಾರ್ಹವಾದ ವಸ್ತ್ರಗಳನ್ನೂ ಇತ್ತು ಪ್ರತಿ ಸನ್ಮಾನಮಾಡಿದನು.

೫. ಅಲ್ಲಿಂದ ಹೊರಟು ಚಂಪಾವತಿಯೆಂಬ ರಾಜಧಾನಿಯ ಬಳಿಗೆ ಬಂದನು. ಆ ಚಂಪಾವತಿಯು ಉತ್ಕೃಷ್ಟವಾದ ನವರತ್ನಗಳಿಂದ ಸಮೃದ್ಧವಾಗಿ ಸರ್ಪಗಳಿಂದ ಕಿಕ್ಕಿರಿದಿರುವ ಭೋಗವತಿಯಂತೆ ರಾಜ ಮಹಾರಾಜರುಗಳಿಂದ ತುಂಬಿದುದಾಗಿ ಶೋಭಿಸುತ್ತಿತ್ತು.

೬. ಆ ನಗರಿಯ ಅರಸನಾದ ಹೇಮಾಂಗದನೆಂಬ ವೀರನು ಪ್ರದ್ಯುಮ್ನನು ಬಂದ ಸಂಗತಿಯನ್ನು ಅರಿತಕೂಡಲೇ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಆ ಪ್ರದ್ಯುಮ್ನನ ಬಳಿಗೆ ಬಂದು ಆತನನ್ನು ನಮಸ್ಕರಿಸಿದನು.

೭. ಆಗ ಪ್ರದ್ಯುಮ್ನನು ಆತನ ವಿಷಯದಲ್ಲಿ ಪ್ರಸನ್ನನಾಗಿ ಕಿಂಜಲ್ಕಿನಿಯೆಂಬ ಮಾಲಿಕೆಯನ್ನೂ, ಸಾವಿರ ಎಸಳುಗಳಿಂದ ಕೂಡಿ ಮನೋಹರವಾಗಿರುವ ದಿವ್ಯವಾದ ಕಮಲವೊಂದನ್ನೂ ಅವನಿಗಿತ್ತನು.

ಅಥ ಕಾರ್ಷ್ಣಿರ್ಮಹಾಬಾಹುಃ ಸ್ವಸೈನ್ಯಪರಿವಾರಿತಃ ।
ವಿದರ್ಭಾನ್ಪ್ರಯಯೌ ಧನ್ವೀ ದುಂದುಭೀನ್ನಾದಯನ್ಮುಹುಃ ॥ ೮ ॥

ಭೀಷ್ಮಕಃ ಕುಂಡಿನಪತಿರಾಗತಂ ರುಕ್ಮಿಣೀಸುತಂ ।
ಆನೀಯ ಪೂಜಯಾಮಾಸ ಸಸೈನ್ಯಂ ಬಹುಭಿರ್ಧನೈಃ ॥ ೯ ॥

ಮಾತಾಮಹಂ ತತೋ ನತ್ವಾ ರುಕ್ಮಿಣೀನಂದನೋ ಬಲೀ ।
ಕುಂತದೇಶಾಂಶ್ಚ ದರದಾನ್ಪ್ರಯಯೌ ಯಾದವೇಶ್ವರಃ ॥ ೧೦ ॥

ಮಲಯಾಚಲಪಾಟೀರವಾಯುಭಿಃ ಪರಿಸೇವಿತಃ ।
ಶ್ರೀಖಂಡಕೇತಕೀಪುಷ್ಪಗಂಧೋಕ್ತೇ ಮಲಯಾಚಲೇ ॥ ೧೧ ॥

ಅಗಸ್ತ್ಯಂ ಮುನಿಶಾರ್ದೂಲಂ ಪೀತಾಬ್ಧಿಂ ಸ ದದರ್ಶ ಹ ।
ಕೃತಾಂಜಲಿಪುಟಃ ಕಾರ್ಷ್ಣಿರ್ನಮಸ್ಕೃತ್ಯ ಮಹಾಮುನಿಂ ॥
ಸ್ಥಿತೋಽಭೂದುಟಜೇ ಸಾಕ್ಷಾದಾಶೀರ್ಭಿರಭಿನಂದಿತಃ ॥ ೧೨ ॥

---

೮. ಅನಂತರ ಮಹಾಬಾಹುವಾದ ಆ ಪ್ರದ್ಯುಮ್ನನು ಯಾತ್ರಾಸೂಚಕವಾದ ನಗಾರಿಗಳ ನಾದದೊಡನೆ ತನ್ನ ಸೈನ್ಯವನ್ನು ಕರೆದುಕೊಂಡು ವಿದರ್ಭದೇಶಕ್ಕೆ ಪ್ರಯಾಣಮಾಡಿದನು.

೯. ಆ ದೇಶದ ರಾಜಧಾನಿಯಾದ ಕುಂಡಿನನಗರದ ಅರಸನಾದ ಭೀಷ್ಮಕನು ತನ್ನ ಮಗಳಾದ ರುಕ್ಮಿಣಿಯ ಪುತ್ರನಾದ ಪ್ರದ್ಯುಮ್ನನನ್ನು ಸೈನ್ಯಸಮೇತನಾಗಿ ಆದರದಿಂದ ಬರಮಾಡಿಕೊಂಡು ಹೇರಳವಾದ ಹಣವನ್ನಿತ್ತು ಸತ್ಕರಿಸಿದನು.

೧೦. ಈ ರೀತಿ ತನ್ನನ್ನು ಸತ್ಕರಿಸಿದ ಆ ಮಾತಾಮಹನನ್ನು ನಮಸ್ಕರಿಸಿ ಆ ಯಾದವೇಂದ್ರನು ಅಲ್ಲಿಂದ ಕುಂತದೇಶಕ್ಕೂ ದರದದೇಶಕ್ಕೂ ಪಯಣ ಬೆಳಸಿದನು.

೧೧-೧೨. ದಾರಿಯಲ್ಲಿ ಆ ಪ್ರದ್ಯುಮ್ನನು ಗಂಧದಮರಗಳಮೇಲೆ ಹಾಯ್ದು ಬರುವ ಸುಗಂಧಮಿಶ್ರವಾದ ಗಾಳಿಯನ್ನು ಸೇವಿಸುತ್ತಾ ಶ್ರೀಗಂಧ ಮತ್ತು ತಾಳೆ ಹೂಗಳ ಪರಿಮಳದಿಂದ ತುಂಬಿರುವ ಮಲಯಪರ್ವತವನ್ನು ಪ್ರವೇಶಿಸಿದನು. ಅಲ್ಲಿ ಸಮುದ್ರವನ್ನೇ ಏಕಾಪೋಶನವಾಗಿ ತೆಗೆದುಕೊಂಡ ಮುನಿಶ್ರೇಷ್ಠನಾದ ಅಗಸ್ತ್ಯಋಷಿಯನ್ನು ಕಂಡು ಬದ್ಧಾಂಜಲಿಪುಟನಾಗಿ ಆತನನ್ನು ನಮಸ್ಕರಿಸಿದನು. ಬಳಿಕ ಆತನ ಆಶೀರ್ವಾದಗಳನ್ನು ಕೈಗೊಂಡು ಆ ಪರ್ಣಶಾಲೆಯಲ್ಲಿಯೇ ತಂಗಿದನು.

॥ ಶ್ರೀ ಪ್ರದ್ಯುಮ್ನ ಉವಾಚ ॥

ದೃಶ್ಯಂ ಪದಾರ್ಥಂ ತು ಜಗತ್ಸತ್ಯವದ್ವರ್ತತೇ ಕಥಂ ।
ಮುಕ್ತೋ ಬ್ರಹ್ಮಾಂಶಕೋ ಭೂತ್ವಾ ಬದ್ಧ್ಯತೇಯಂ ಕಥಂ ಗುಣೈಃ ॥ ೧೩ ॥

ಏತತ್ಪ್ರಶ್ನಂ ಮಮ ಬ್ರೂಹಿ ನಿತರಾಂ ಮುನಿಸತ್ತಮ ।
ತ್ವಂ ಸರ್ವವಿದ್ದಿವ್ಯಚಕ್ಷುಃ ಸರ್ವಬ್ರಹ್ಮವಿದಾಂ ವರಃ ॥ ೧೪ ॥

॥ ಅಗಸ್ತ್ಯ ಉವಾಚ ॥

ತ್ವಂ ಸಾಕ್ಷಾತ್ಕೃಷ್ಣಚಂದ್ರಸ್ಯ ಪರಿಪೂರ್ಣತಮಸ್ಯ ಚ ।
ಪುತ್ರೋಽಸಿ ಪೃಚ್ಛಸೇ ಮಾಂ ವಾ ಲೀಲಾಮಾತ್ರಮಿದಂ ವಚಃ ॥ ೧೫ ॥

ಲೋಕಸಂಗ್ರಹಮೇವಾರ್ಥಂ ಕುರ್ವನ್ದೇವೋ ಹರಿರ್ಯಥಾ ।
ತಥಾ ನೃಣಾಂ ಚ ಕಲ್ಯಾಣಂ ಕುರ್ವನ್ವಿಚರಸಿ ಪ್ರಭೋ ॥ ೧೬ ॥

---

೧೩. ಅನಂತರ ಆ ಪ್ರದ್ಯುಮ್ನನು ಆ ಮಹರ್ಷಿಯನ್ನು ಕುರಿತು ಓ ಮುನಿಸತ್ತಮ! ಕಣ್ಣಿಗೆ ಕಾಣುವೀ ದೃಶ್ಯ ಜಗತ್ತು ಪರಮಾರ್ಥತಃ ಸತ್ಯವಾದ ವಸ್ತುವಿನಂತೆ ತೋರುವುದಾದರೂ ಹೇಗೋ? ಸ್ವಲ್ಪ ಭಾಗದಲ್ಲಿರುವಾಗ ಯಾವೊಂದು ಬಂಧಕ್ಕೂ ಸಿಲುಕದಿರುವ ಪರಬ್ರಹ್ಮನ ಅಂಶಭೂತವಾದ ಈ ಜೀವನು ಗುಣಗಳಿಗೆ ಅಧೀನನಾಗಿ ಬಂಧನಕ್ಕೊಳಗಾಗುವುದಾದರೂ ಹೇಗೆ?

೧೪. ಓ ಮುನಿಶ್ರೇಷ್ಠ! ಈ ಪ್ರಶ್ನೆಯು ನನ್ನನ್ನು ಬಹುವಾಗಿ ಬಾಧಿಸುತ್ತಿರುವುದು. ನೀನು ಎಲ್ಲವನ್ನೂ ಬಲ್ಲವನು. ದಿವ್ಯದೃಷ್ಟಿಯುಳ್ಳವನು. ಬ್ರಹ್ಮಜ್ಞಾನಿಗಳಲ್ಲೆಲ್ಲಾ ಮೇಲಾದವನು. ಆದುದರಿಂದ ಈ ಪ್ರಶ್ನೆಯನ್ನು ನನಗೆ ಸರಿಯಾಗಿ ಬಗೆಹರಿಸಬೇಕು ಎಂದು ಪ್ರಾರ್ಥಿಸಿದನು.

೧೫. ಈ ರೀತಿ ಪ್ರದ್ಯುಮ್ನನು ಪ್ರಶ್ನಿಸಿದುದನ್ನು ಕೇಳಿ ಅಗಸ್ತ್ಯಮಹಾಮುನಿಯು ಅವನನ್ನಿಂತೆಂದನು:—ಓ ಪ್ರಭು! ನೀನು ಪರಿಪೂರ್ಣತಮನಾದ ಸಾಕ್ಷಾತ್ ಶ್ರೀಕೃಷ್ಣಚಂದ್ರನ ಪುತ್ರನಾಗಿರುವೆ. ಹೀಗಿದ್ದರೂ ನೀನು ನನ್ನನ್ನು ಕೇಳಬೇಕೆ? ನೀನು ಈ ಮಾತನ್ನು ಎಲ್ಲಿಯೋ ವಿನೋದಕ್ಕಾಗಿ ಕೇಳಿರಬೇಕು.

೧೬. ಪ್ರಭುವಾದ ಆ ಶ್ರೀಹರಿಯು ಜಗತ್ತಿಗೆ ಮಾರ್ಗದರ್ಶನವನ್ನು ಮಾಡಲೋಸುಗ ತಾನು ನಾನಾವಿಧವಾದ ಲೀಲೆಗಳನ್ನು ತೋರ್ಪಡಿಸುವಂತೆ ನೀನೂ ಸಹ ಮಾನವರ ಮಂಗಳಕ್ಕೋಸ್ಕರವಾಗಿ ಈ ರೀತಿ ಸಂಚರಿಸುತ್ತಿರುವೆ.

ಯಥಾ ಸತ್ಯಸ್ಯ ಸೂರ್ಯಸ್ಯ ಬಿಂಬಂ ವಾರಿಷು ಸತ್ಯವತ್ ।
ದೃಶ್ಯತೇ ಸತ್ಯವದ್ದೃಶ್ಯಂ ಪ್ರಧಾನಪರಯೋಸ್ತಥಾ ॥ ೧೭ ॥

ಕಾಚೇ ಮುಖಂ ಗುಣೇ ಸರ್ಪಂ ಸೈಕತೇ ಜೀವನಂ ಯಥಾ ।
ತಥಾಯಂ ಸಂದೇಹಗುಣೈರ್ಬಧ್ಯತೇ ಪ್ರೇಕ್ಷತಾತ್ಸ್ವಯಂ ॥ ೧೮ ॥

॥ ಪ್ರದ್ಯುಮ್ನ ಉವಾಚ ॥

ಕಥಂ ನ ಬಧ್ಯತೇ ದೇಹೀ ಯೇನೋಪಾಯೇನ ತದ್ವದ ।
ವೈರಾಗ್ಯೇಣ ದೃಢೇನಾಪಿ ಬ್ರೂಹಿ ಬ್ರಹ್ಮವಿದಾಂ ವರ ॥ ೧೯ ॥

---

೧೭. ಆಕಾಶದಲ್ಲಿರುವ ನಿಜವಾದ ಸೂರ್ಯನ ಬಿಂಬವು ನೀರಿನಲ್ಲಿ ಪ್ರತಿಫಲಿತವಾದಾಗ ಯಾವ ರೀತಿ ಆ ಪ್ರತಿಬಿಂಬವು ನಿಜವಾದ ಸೂರ್ಯನಂತೆಯೇ ತೋರುತ್ತದೆಯೋ. ಅದೇ ರೀತಿ ಏಕೈಕಮಾತ್ರ ಸದ್ವಸ್ತುವಾದ ಪರಬ್ರಹ್ಮವು ಪ್ರಧಾನ(ಪ್ರಕೃತಿ-ಮಾಯಾ)ದಲ್ಲಿ ಪ್ರತಿಭಾಸಿತವಾಗಲು ಜಡವಸ್ತುವು ಸತ್ಯವಾಗಿ ತೋರುವುದು.

೧೮. "ಓ ಪ್ರದ್ಯುಮ್ನ! ಕನ್ನಡಿಯಲ್ಲಿ ಮುಖವೂ, ಹಗ್ಗದಲ್ಲಿ ಹಾವೂ, ಮರಳಿನಲ್ಲಿ ನೀರೂ ತೋರುವಂತೆ, ಈ ಅಹಂಪದವಾಚ್ಯನಾದ ಜೀವನು ದೈಹಿಕವಾದ ಗುಣಗಳಿಗೊಳಗಾಗಿ ಸಂಸಾರವೆಂಬ ಪಾಶದಲ್ಲಿ ಸಿಕ್ಕಿಬೀಳುವನು. ಈ ಅಂಶವನ್ನು ನೀನೇ ಪರ್ಯಾಲೋಚಿಸಬಹುದು" ಎಂದನು.

೧೯. ಈ ರೀತಿ ಅಗಸ್ತ್ಯಮುನಿಯು ನುಡಿದುದನ್ನು ಕೇಳಿ ಪ್ರದ್ಯುಮ್ನನು "ಓ ಮಹರ್ಷಿ! ಈ ಜೀವನು ಹೇಗೆ ಬಂಧನಕ್ಕೊಳಗಾಗದಿರುವನು? ಹಾಗಾಗ ಬೇಕಾದರೆ ಉಪಾಯವಾವುದು? ಎಂತಹ ದೃಢವಾದ ವೈರಾಗ್ಯವು ಅವಶ್ಯಕವು? ಓ ಬ್ರಹ್ಮಜ್ಞಾ! ಇವೆಲ್ಲವನ್ನೂ ನನಗೆ ತಿಳಿಯಪಡಿಸಬೇಕು" ಎಂದು ಪುನಃ ಪ್ರಶ್ನಿಸಿದನು.

॥ ಅಗಸ್ತ್ಯ ಉವಾಚ ॥

ವಿವೇಕಂ ಯಃ ಸಮಾಶ್ರಿತ್ಯ ಭಜೇದ್ಬ್ರಹ್ಮ ಸನಾತನಂ ।
ಮನೋಮಯಂ ಜಗನ್ಮತ್ವಾ ಸ ವ್ರಜೇತ್ಪರಮಂ ಪದಂ ॥ ೨೦ ॥

ಜನ್ಮಮೃತ್ಯೂ ಶೋಕಮೋಹೌ ಜರಾಬಾಲಯುವಾದಯಃ ।
ಅಹಂಮದೋ ವ್ಯಾಧಿಭಯಂ ಸುಖಂ ಶೋಕಃ ಕ್ಷುಧಾ ರತಿಃ ॥ ೨೧ ॥

ಆಧಿರ್ಭಯಂ ತಸ್ಯ ರಾಜನ್ನ ಭವಂತಿ ಕದಾಚನ ।
ಆತ್ಮಾ ನಿರೀಹೋ ಹ್ಯತನುಃ ಸರ್ವತಶ್ಚಾನಹಂಕೃತಿಃ ॥
ಶುದ್ಧೋ ಗುಣಾಶ್ರಯಃ ಸಾಕ್ಷಾತ್ಪರೋ ನಿಷ್ಕಲ ಆತ್ಮದೃಕ್ ॥ ೨೨ ॥

---

೨೦. ಆಗ ಅಗಸ್ತ್ಯಮುನಿಯು ಹೇಳತೊಡಗಿದನು :—ಪ್ರದ್ಯುಮ್ನಕುಮಾರ! ಆಲಿಸು. ಯಾವನು ವಿವೇಕವನ್ನು ಅವಲಂಬಿಸಿ ಕಣ್ಣಿಗೆ ಕಾಣುವ ಈ ಪ್ರಪಂಚವೆಲ್ಲವೂ ಮನಸಾ ಕಲ್ಪಿತವಾದುದೆಂದು ನಿರ್ಧರಿಸಿ, ಅವಿನಾಶಿಯೂ ಚಿರಂತನನೂ ಆದ ಆ ಪರಬ್ರಹ್ಮವಸ್ತುವನ್ನು ಹೃದಯದಲ್ಲಿ ಭಜಿಸುವನೋ ಅವನು ಅತ್ಯುತ್ತಮವಾದ ಪದವಿಯನ್ನು (ಮೋಕ್ಷವನ್ನು) ಹೊಂದುವನು.

೨೧–೨೨. ಅಂತಹ ಆತ್ಮಜ್ಞಾನಿಗೆ ಹುಟ್ಟುಸಾವುಗಳೂ, ದುಃಖವೂ, ಅಜ್ಞಾನವೂ, ಬಾಲ್ಯ, ಯೌವನ, ವಾರ್ಧಕ್ಯಗಳೆಂಬ ಅವಸ್ಥಾವೈಪರೀತ್ಯಗಳೂ, ನಾನು ತಾನೆಂಬ ಅಹಂಕಾರವೂ, ವ್ಯಾಧಿ, ಭಯ, ಸುಖ, ದುಃಖ, ಹಸಿವು, ಬೇಸರ, ಮಾನಸಿಕವಾದ ವ್ಯಥೆ, ಇವುಗಳೂ ಎಂದೆಂದಿಗೂ ಸಂಭವಿಸಲಾರವು; ಈ ಆತ್ಮನಿಗೆ ಯಾವೊಂದು ಆಸೆಯೂ ಇಲ್ಲ, ಶರೀರವೂ ಇಲ್ಲ. ಯಾವ ವಸ್ತುವಿನಲ್ಲಿಯೂ ನಾನು ನನ್ನದೆಂಬ ದುರಭಿಮಾನವಿಲ್ಲ. ಮತ್ತೇನೆಂದರೆ ಈ ಆತ್ಮನು ಶುದ್ಧನು. (ನಿರ್ಲೇಪನು) ಸತ್ತ್ವ, ರಜ, ಸ್ತಮೋಗುಣಗಳಿಗೆ ಆಶ್ರಯನಾದವನು, ಎಲ್ಲಕ್ಕಿಂತಲೂ ಶ್ರೇಷ್ಠನೆನಿಸಿದವನು. ಕಲಾತೀತನು, ತನ್ನನ್ನು ತಾನೇ ಅವಲೋಕಿಸುತ್ತಿರುವವನು.

ಜ್ಞಾನಾತ್ಮಕಃ ಸದಾಪೂರ್ಣೋ ವಿದಿತೋ ಯೋ ಮುನೀಶ್ವರೈಃ ।
ತಂ ಬ್ರಹ್ಮ ಪರಮಾತ್ಮಾನಂ ಜ್ಞಾತ್ವಾ ಯಂ ವಿಚರೇತ್ಸುಖೀ　　॥ ೨೩ ॥

ಅಸ್ಮಿನ್ ಶಯಾನೇ ಜಾಗರ್ತಿ ಸರ್ವಂ ಪಶ್ಯತಿ ಯಃ ಪುಮಾನ್ ।
ನಾಯಂ ತಂ ವೇತ್ತಿ ಪಶ್ಯಂತಂ ನ ಪಶ್ಯಂತಿ ಕದಾಚನ　　॥ ೨೪ ॥

ನಭೋಽಗ್ನಿಪವನಾಃ ಕೋಷ್ಠಕಾಷ್ಠಪೂರೇದ್ಧತರೇಣುಭಿಃ ।
ನ ಸಜ್ಜಂತೇ ಗುಣೈರ್ಬ್ರಹ್ಮ ವರ್ಣೈಶ್ಚ ಸ್ಫಟಿಕೋ ಯಥಾ　　॥ ೨೫ ॥

---

೨೩. ಮತ್ತು ಆ ಆತ್ಮನು ಜ್ಞಾನಸ್ವರೂಪನು. ಸರ್ವದಾ ಪರಿಪೂರ್ಣನು, ಈ ರೀತಿಯಾಗಿ ಆ ಪರಬ್ರಹ್ಮ ತತ್ತ್ವವನ್ನು ಬಲ್ಲ ಮುನಿಶ್ರೇಷ್ಠರು ತಿಳಿದಿರುವರು. ಈ ಪರಬ್ರಹ್ಮ ಪದವಾಚ್ಯನಾದ ಪರಮಪುರುಷನು ನಾನೇ ಎಂಬುದಾಗಿ ಅನುಸಂಧಾನ ಮಾಡುತ್ತಾ ಜೀವನಾದವನು ಸುಖವಾಗಿರಬಲ್ಲನು.

೨೪. ಮತ್ತು ಈ ಜೀವನು ಶಯನಿಸಿರುವಾಗ ಅಂದರೆ ಮಾಯಾಭಿಭೂತನಾಗಿ ಸ್ವಸ್ವರೂಪವನ್ನು ಅರಿಯದಿರುವಾಗ ಪುರುಷಪದವಾಚ್ಯನಾದ ಯಾವಾತನು ಸಕಲ ವ್ಯಾಪಾರಗಳಿಗೂ ಸಾಕ್ಷಿಭೂತನಾಗಿ ಜಾಗರೂಕನಾಗಿರುವನೋ ಆ ಪರಮಪುರುಷನನ್ನು ಈ ಮಾಯಾವಶನಾದ ಜೀವನು ಸರಿಯಾಗಿ ಅರಿತುಕೊಳ್ಳಲಾರನು. ಹೀಗಾಗಿ ಸರ್ವತಶ್ಚಕ್ಷುವಾಗಿ ಸರ್ವವ್ಯಾಪಾರಗಳನ್ನೂ ಸಾಕ್ಷಾತ್ಕರಿಸುತ್ತಿರುವ ಆ ಸರ್ವೇಶ್ವರನನ್ನು ಸಂಸಾರಸಾಗರದಲ್ಲಿ ಮಗ್ನರಾಗಿ ಹೋಗಿರುವ ಜೀವರು ಎಂದೆಂದಿಗೂ ಸಾಕ್ಷಾತ್ಕರಿಸಲಾರರು.

೨೫. ಬೃಹತ್ತಾದ ಆಕಾಶವು ಗೃಹ, ಮಠಾದ್ಯವಕಾಶದಿಂದ ಹೇಗೋ, ಅಗ್ನಿಯು ತನ್ನ ಜ್ವಾಲೆಗೆ ಕಾರಣವಾದ ಸೌದೆ ಮೊದಲಾದ ಇಂಧನಗಳಿಂದ ಹೇಗೋ, ವಾಯುವು ತನ್ನಲ್ಲಿ ತೇಲಿ ಬರುವ ಧೂಳೀಕರಣಗಳಿಂದ ಹೇಗೋ ಹಾಗೆ ಈ ಪರಬ್ರಹ್ಮ ವಸ್ತುವು ಸತ್ತ್ವರಜಸ್ತಮೋಗುಣಗಳ ಸಂಬಂಧದಿಂದ ಯಾವೊಂದು ಪರಿಚ್ಛೇದಕ್ಕಾಗಲಿ, ವಿಕಾರಕ್ಕಾಗಲಿ ಈಡಾಗಲಾರದು, ಇದಕ್ಕೆ ಇನ್ನೂ ಒಂದು ದೃಷ್ಟಾಂತವಿರುವುದು. ಸ್ವಭಾವತಃ ಶುದ್ಧವಾದ ಸ್ಫಟಿಕವು ತನ್ನ ಬಳಿಯಲ್ಲಿರುವ ಜಪಾಕುಸುಮ (ದಾಸವಾಳದ ಹೂ) ಮೊದಲಾದ ಉಪಾಧಿಗಳ ಸಂಸರ್ಗವಶದಿಂದ ಕೆಂಪು, ಹಸಿರು ಮೊದಲಾದ ಬಣ್ಣಗಳನ್ನು ತಳೆದಿರುವಂತೆ ತೋರಿದರೂ ಯಾವ ರೀತಿ ವಸ್ತುತಃ ಸ್ವಚ್ಛವಾದ ಶುದ್ಧ ವರ್ಣದಿಂದಲೇ ಕೂಡಿರುವುದೋ ಅದೇ ರೀತಿ ಸತ್ತ್ವಾದಿ ಗುಣ ಸಂಸರ್ಗ ವಶದಿಂದ ವಿಕಾರಾಸ್ಪದನಾಗಿ ತೋರಿದರೂ ವಾಸ್ತವ ಸ್ಥಿತಿಯಲ್ಲಿ ನಿರ್ವಿಕಾರನಾಗಿರುವನು.

ಲಕ್ಷಣಾಭಿಧ್ವರ್ನಿವ್ಯಂಗ್ಯೈರ್ಜ್ಞಾಯತೇ ನ ಕದಾಚನ ।
ಕುತಸ್ತು ಲೌಕಿಕೈರ್ವಾಕ್ಯೈಸ್ತಸ್ಮೈ ಶ್ರೀಬ್ರಹ್ಮಣೇ ನಮಃ ॥ ೨೬ ॥

ಕೇಚಿತ್ಕರ್ಮ ವದಂತ್ಯೇನಂ ಕೇಚಿತ್ಕಾಲಂ ತಥಾ ಪರೇ ।
ಕರ್ತಾರಂ ಯೋಗಮಪರೇ ಸಾಂಖ್ಯಂ ಬ್ರಹ್ಮ ವದಂತಿ ಕಂ ॥ ೨೭ ॥

ಕೇಚಿತ್ತಂ ಪರಮಾತ್ಮಾನಂ ವಾಸುದೇವಂ ವದಂತಿ ಕೇ ।
ಪ್ರತ್ಯಕ್ಷೇನಾನುಮಾನೇನ ನಿಗಮೇನಾತ್ಮಸಂವಿದಾ ॥ ೨೮ ॥

ವಿಚಾರ್ಯ ತದ್ಬ್ರಹ್ಮಪರಂ ನಿಃಸಂಗೋ ವಿಚರೇದಿಹ ।
ಯಥಾಂಭಸಾ ಪ್ರಚಲತಾ ತರವೋಽಪಿ ಚಲಾ ಇವ ॥ ೨೯ ॥

---

೨೬. ಯಾವಾತನನ್ನು ಅಭಿಧಾ, ಲಕ್ಷಣಾ, ವ್ಯಂಜನಾ ಎಂಬ ಮೂರು ಬಗೆಯ ತನ್ನ ವ್ಯಾಪಾರಗಳಿಂದಲೂ ಯಾವ ಪದವಾಗಲಿ, ಅಥವಾ ಪದಸಮೂಹ ರೂಪವಾದ ವಾಕ್ಯವಾಗಲಿ ಬೋಧಿಸಲಾರದೋ ಅಂತಹ ಶಬ್ದಾತೀತನಾದ ಪರಬ್ರಹ್ಮ ವಸ್ತುವಿಗೆ ನಮಸ್ಕಾರವು.

೨೭. ಈ ಪರಬ್ರಹ್ಮನನ್ನು ಕೆಲವರು ಕರ್ಮವೆನ್ನುವರು. ಕೆಲವರು ಕಾಲವೆಂದು ಕರೆಯುವರು. ಇನ್ನು ಕೆಲವರು ಕರ್ತೃವೆಂದೂ, ಬೇರೆ ಕೆಲವರು ಯೋಗವೆಂದೂ ಹೇಳುವರು. ಮತ್ತೆ ಕೆಲವರು ಸಾಂಖ್ಯಪುರುಷನೆಂದೂ, ಇನ್ನೂ ಕೆಲವರು ಬ್ರಹ್ಮವೆಂದೂ ಕರೆಯುವರು.

೨೮. ಇನ್ನು ಹಲವು ಜನರು ಆ ವಸ್ತುವನ್ನು ಪರಮಾತ್ಮನಾದ ವಾಸುದೇವ ನೆನ್ನುವರು. ಯಾವುದಾದರೂ ಇರಲಿ, ಪ್ರತ್ಯಕ್ಷ ಪ್ರಮಾಣದಿಂದಾಗಲಿ, ಅನುಮಾನ ಪ್ರಮಾಣದಿಂದಾಗಲಿ, ಶುದ್ಧ ಪ್ರಮಾಣದಿಂದಾಗಲಿ, ಆತ್ಮಸಂವಿತ್ ಅಂದರೆ ಸ್ವಾನು ಭಾವರೂಪವಾದ ಸಾಕ್ಷಾತ್ಕಾರದಿಂದಾಗಲಿ,

೨೯. ಉತ್ತಮೋತ್ತಮವಾದ ಆ ಬ್ರಹ್ಮವಸ್ತುವನ್ನು ಅನುಸಂಧಾನ ಮಾಡುತ್ತಾ ಇದ್ದಲ್ಲಿ ಜೀವನಾದವನು ಸುಖದುಃಖಾದಿಗಳಿಗಾವುದೊಂದಕ್ಕೂ ಈಡಾಗದೆ ವಿಹರಿಸುವನು. ಓ ಪ್ರದ್ಯುಮ್ನಕುಮಾರಾ! ನೀರು ಗಾಳಿಯಿಂದ ಅಲುಗಾಡಿದರೆ ಅದರಲ್ಲಿ ಪ್ರತಿಬಿಂಬಿಸಿರುವ ಮರಗಳೂ ಅಲ್ಲಾಡಿದಂತೆ ಯಾವ ರೀತಿ ತೋರುವುದೋ—

ಚಕ್ಷುಷಾ ಭ್ರಾಮ್ಯಮಾಣೇನ ದೃಶ್ಯತೇ ಚಲತೀವ ಭೂಃ ।
ತಥಾ ಗುಣಾನಾಂ ಭ್ರಮಣೈರ್ಭ್ರಮತಾ ಮನಸಾ ಯುತಃ ॥ ೩೦ ॥

ಭ್ರಾಮ್ಯಮಾಣಃ ಸದಾ ರಾಜನ್ಕರೇಣಾಲಾತಚಕ್ರವತ್ ।
ಕರಿಷ್ಯಾಮಿ ಕರೋಮೀತಿ ಮಮೇದಂ ತವ ಚಾಬ್ರುವನ್ ।
ತ್ವಮಹಂ ಚ ಸುಖೀ ದುಃಖೀ ಸದಾಜ್ಞಾನವಿಮೋಹಿತಃ ॥ ೩೧ ॥

ಸತ್ತ್ವಂ ರಜಸ್ತಮ ಇತಿ ಪ್ರಕೃತೇರ್ನಾತ್ಮನೋ ಗುಣಾಃ ।
ತೈರಿದಂ ಜಗದಾವ್ಯಾಪ್ತಮೋತಪ್ರೋತಪಟಂ ಯಥಾ ॥ ೩೨ ॥

ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋ ಗಚ್ಛಂತಿ ತಾಮಸಾಃ ॥ ೩೩ ॥

೩೦–೩೧. ಕಣ್ಣು ಪಿತ್ತವಿಕಾರದಿಂದ ತೊಳಲುತ್ತಿದ್ದರೆ ನೆಲವೇ ತಿರುಗುತ್ತಿರುವಂತೆ ಯಾವ ರೀತಿ ತೋರುವುದೋ ಅದೇ ರೀತಿ ಸತ್ತ್ವಾದಿಗುಣಗಳ ಭ್ರಮಣೆಯಿಂದಲೂ ಮನಸ್ಸಿನ ಭ್ರಮಣೆಯಿಂದಲೂ ಈ ಜೀವನಾದವನು 'ಇದೋ ನಾನು ಈಗ ಮಾಡುವೆನು. ಮುಂದೆ ಮಾಡುವೆನು, ಇದು ನನ್ನದು, ಇದು ನಿನ್ನದು ಎಂದು ಮುಂತಾಗಿ ಹೇಳುತ್ತಾ ಅಜ್ಞಾನಕ್ಕೆ ಈಡಾದವನಾಗಿ' ನಾನು, ನೀನು, ಇದೋ ಸುಖದುಃಖವನ್ನು ಅನುಭವಿಸುತ್ತಿರುವೆನು. ಅಯ್ಯೋ ದುಃಖಕ್ಕೆ ಗುರಿಯಾದೆನು, ಎಂಬುದಾಗಿ ನಾನಾ ತೆರದಲ್ಲಿ ಕೈಯಿಂದ ತಿರುಗಿಸುತ್ತಿರುವ ಅಲಾತಚಕ್ರದಂತೆ ಸಂಸಾರಕ್ಕೆ ಸಿಕ್ಕಿ ತೊಳಲುತ್ತಿರುವನು.

೩೨. ಈ ಸತ್ತ್ವ, ರಜಸ್ಸು, ತಮಸ್ಸು ಎಂಬ ಗುಣತ್ರಯವು ಪ್ರಕೃತಿಯದೇ ವಿನಾ ಆತ್ಮನದಲ್ಲ. ಈ ಗುಣತ್ರಯದಿಂದಲೇ ಹಾಸುಹೊಕ್ಕಾಗಿ ಸೇರಿರುವ ನೂಲಿನಿಂದ ಬಟ್ಟೆಯು ಹೇಗೋ ಹಾಗೆ ಜಗತ್ತು ವ್ಯಾಪ್ತವಾಗಿರುವುದು.

೩೩. ಸತ್ತ್ವ ಗುಣವನ್ನವಲಂಬಿಸಿರುವರು ಉತ್ತಮವಾದ ಲೋಕಗಳನ್ನು ಪಡೆಯುವರು. ರಾಜಸ ಗುಣವನ್ನಾಶ್ರಯಿಸಿದವರು ಮಧ್ಯಮಲೋಕಗಳನ್ನು ಹೊಂದುವರು. ತಾಮಸಗುಣಕ್ಕೆ ಅವಕಾಶವಿತ್ತವರು ಕೀಳಾದ ಗತಿಯನ್ನು ಹೊಂದುವರು.

ಅಂಧಕಾರೇ ಗುಣಾತ್ಕೃಷ್ಣೇ ಸರ್ಪಬುದ್ಧಿರ್ಭವೇದ್ಯಥಾ ।
ಆರಾನ್ಮರೀಚಿಕಾಂ ವಾರಿ ತಥೇದಂ ಮನ್ಯತೇ ಜಗತ್ ॥ ೩೪ ॥

ಗತಾಗತಂ ಸುಖಂ ವಿದ್ಧಿ ಯಥಾ ಮಂಡಲವರ್ತಿನಾಂ ।
ತಥಾ ನೃಣಾಂ ಚ ತದ್ದುಃಖಂ ಯಥಾ ನರಕವಾಸಿನಾಂ ॥
ಘನಾವಲಿರ್ದೇಹಗುಣಾ ಅಹೋರಾತ್ರಮೃತೇರ್ಯಥಾ ॥ ೩೫ ॥

ಯಥಾ ಸಾರ್ಥಂ ತಥಾ ದೃಶ್ಯಂ ನ ಕಿಂಚಿತ್ಸರ್ವದೈವ ಹಿ ।
ಪಕ್ಷೇ ಜಾತೇ ಯಥಾ ನೀಡಾತ್ಪಾರೇ ಯಾತೇ ಯಥೋಡುಪಾತ್ ॥ ೩೬ ॥

ಜ್ಞಾನೇ ಪ್ರಾಪ್ತೇ ತಥಾ ಲೋಕಾದ್ದರ್ಪಣಾತ್ಕಿಂ ಪ್ರಯೋಜನಂ ।
ತಥಾ ಮಾರ್ಗಂ ನಿಧಾಯಾಶು ವಿಚರೇತ್ಸಮದೃಙ್ಮುನಿಃ ॥ ೩೭ ॥

---

೩೪. ಓ ಕೃಷ್ಣಕುಮಾರ! ಕತ್ತಲಲ್ಲಿ ಹಗ್ಗವನ್ನು ನೋಡಿ ಯಾವ ರೀತಿ ಹಾವೆಂದು ಭಾವಿಸುವರೋ, ಬಿಸಿಲುಕುದುರೆಯನ್ನು ಕಂಡು ಯಾವ ರೀತಿ ನೀರೆಂದು ಭಾವಿಸುವರೋ ಅದೇ ರೀತಿ ಅವಿದ್ಯಾವಾಸನಾವಶನಾದವನು ಈ ಜಗತ್ತನ್ನು ನಿಜವೆಂದು ಭಾವಿಸುವನು.

೩೫. ಈ ಸುಖವೆನ್ನುವುದು ಚಕ್ರದಲ್ಲಿರುವ ಅಡ್ಡಪಟ್ಟಿಗಳಂತೆ ಅಸ್ಥಿರವಾದುದು. ಅದೇ ರೀತಿ ದುಃಖವೆನ್ನುವುದೂ ಸಹ ನರಕವಾಸಿಗಳಿಗಿರುವಂತೆ ಕರ್ಮಾಧೀನವಾಗಿ ಅಶಾಶ್ವತವಾಗಿರುವಂತಹುದು.

೩೬–೩೭. ಮೋಡಗಳ ಸಾಲೂ, ಶರೀರಧರ್ಮಗಳೂ, ಹಗಲುರಾತ್ರಿಗಳೂ, ಋತುಗಳೂ ಹೇಗೋ ಅದೇ ರೀತಿ ಕಣ್ಣಿಗೆ ಕಾಣತಕ್ಕ ಸಮಸ್ತ ವಸ್ತುವೂ ಸಹ ಎಂದೆಂದಿಗೂ ಸ್ಥಿರವಾಗಿರುವಂತಹುದಲ್ಲ. ಹಕ್ಕಿಗಳಿಗೆ ರೆಕ್ಕೆಯು ಹುಟ್ಟಿದ ಮೇಲೆ ಗೂಡು ಹೇಗೋ, ಆಚೆಕಡೆಯ ಹೊಳೆಯ ಕರೆಯನ್ನು ಸೇರಿದ ಬಳಿಕ ತೆಪ್ಪವು ಹೇಗೋ, ಅದೇರೀತಿ ಕನ್ನಡಿಯಂತೆ ಸ್ವಯಂಪ್ರಕಾಶವಾದ ಜ್ಞಾನವು ಲಭಿಸಿದ ಮೇಲೆ ಮಾನವನಿಗೆ ಈ ಜಗತ್ತು ಬೇಡವೆನಿಸುವುದು. ಆದುದರಿಂದ ಮಾನವನು ನಿಜವಾದ ಸಾಧನ ಮಾರ್ಗವನ್ನವಲಂಭಿಸಿ ಸಮದರ್ಶಿಯಾಗಿ ವಿಹರಿಸಬೇಕು.

ಯಥೇಂದುರುದಪಾತ್ರೇಷು ಯಥಾಗ್ನಿಃ ಕಾಷ್ಠಸಂಚಯೇ ।
ತಥೈಕೋ ಭಗವಾನ್ಸಾಕ್ಷಾತ್ಪರಮಾತ್ಮಾ ವ್ಯವಸ್ಥಿತಃ ॥ ೩೮ ॥

ಘಟೇ ಮಠೇ ಯಥಾಕಾಶೋ ವರ್ತತೇಂತರ್ಬಹಿರ್ಮಹಾನ್ ।
ತಥಾ ಪರಾತ್ಮಾ ನಿರ್ಲಿಪ್ತೋ ದೇಹಿಷು ಸ್ವಕೃತೇಷು ಚ ॥ ೩೯ ॥

ಯಃ ಕೃಷ್ಣಭಕ್ತಃ ಶಾಂತಾತ್ಮಾ ಜ್ಞಾನನಿಷ್ಠೋ ವಿರಾಗವಾನ್ ।
ತಂ ನ ಸ್ಪೃಶಂತೀಹ ಗುಣಾಃ ಕಾನೀವ ಬಿಸಿನೀದಲಂ ॥ ೪೦ ॥

ಜ್ಞಾನೀ ಸದಾನಂದಮಯೋ ಬಾಲವದ್ವಿಚರೇತ್ತನುಂ ।
ನ ಪಶ್ಯತಿ ಧೃತಂ ವಾಸೋ ಮದಿರಾಮದಮತ್ತವತ್ ॥ ೪೧ ॥

---

೩೮. ಯಾವ ರೀತಿ ಒಬ್ಬನೇ ಒಬ್ಬ ಚಂದ್ರನು ನಾನಾ ನೀರಿನ ಪಾತ್ರೆಗಳಲ್ಲಿ ತೋರುವನೋ, ಯಾವ ರೀತಿ ಒಟ್ಟಿಗೆ ಜ್ವಲಿಸುತ್ತಿರುವ ಅಗ್ನಿಯು ಪ್ರತಿಯೊಂದು ಕಾಷ್ಠದಲ್ಲಿಯೂ ತೋರುವನೋ ಅದೇ ರೀತಿ ಭಗವಂತನಾದ ಆ ಪರಮಾತ್ಮನು ಸಕಲ ವಸ್ತುಗಳಲ್ಲಿ ನೆಲಸಿರುವನು.

೩೯. ಬೃಹತ್ತಾದ ಆಕಾಶವು ಯಾವ ರೀತಿ ಗಡಿಗೆಯಲ್ಲೂ ವಿಶಾಲವಾದ ಮನೆಯಲ್ಲಿಯೂ ಒಳಗೂ ಹೊರಗೂ ವ್ಯಾಪಿಸಿರುವುದೋ ಅದೇ ರೀತಿ ನಿರ್ಲೇಪನಾದ ಆ ಭಗವಂತನು ಸಕಲ ಜೀವರಲ್ಲಿಯೂ ಸಕಲ ಕಾರ್ಯಗಳಲ್ಲಿಯೂ ವ್ಯಾಪಿಸಿ ನೆಲಸಿರುವನು.

೪೦. ಯಾವಾತನು ಶ್ರೀಕೃಷ್ಣನಲ್ಲಿ ಭಕ್ತಿಯನ್ನಿಟ್ಟು ಶಾಂತವಾದ ವೈರಾಗ್ಯವನ್ನವಲಂಬಿಸಿ ಜ್ಞಾನಿಯಾಗಿರುವನೋ ಅಂಥವನನ್ನು ಈ ಸತ್ತ್ವಾದಿಗುಣಗಳು ಕಮಲದ ಎಲೆಯನ್ನು ನೀರಿನ ಬಿಂದುಗಳು ಹೇಗೋ ಹಾಗೆ ಅಂಟಲಾರವು.

೪೧. ಸರ್ವದಾ ಆನಂದದಲ್ಲೇ ಮಗ್ನನಾಗಿರುವ ಜ್ಞಾನಿಯು ಎಳೆಯ ಮಗುವಿನಂತೆ-ತನ್ನ ಶರೀರದ ಮೇಲೆ ಎಚ್ಚರವಿಲ್ಲದೆ ಇರುವನು. ಮದ್ಯಪಾನದಿಂದ ಮತ್ತನಾದ ಮನುಜನಿಗೆ ಉಟ್ಟ ಬಟ್ಟೆಯೂ ಕಾಣದೆ ಇರುವುದಷ್ಟೆ.

ಸೂರ್ಯೋದಯೇ ಯಥಾ ವಸ್ತು ಗೃಹೇ ರಾಜನ್ಪ್ರದೃಶ್ಯತೇ।
ದೂರೀಕೃತ್ಯ ತಥಾ ಜ್ಞಾನಂ ಸಾಕ್ಷಾತ್ತತ್ತ್ವಂ ತತೋ ಬೃಹತ್ ॥ ೪೨ ॥

ಯಥೇಂದ್ರಿಯಂ ಪೃಥಗ್ದ್ವಾರೈರರ್ಥೋ ಬಹುಗುಣಾಶ್ರಯಃ।
ನಾನೇಯತೇ ತಥಾ ಬ್ರಹ್ಮ ವಾಚಿಭಿಃ ಶಾಸ್ತ್ರವರ್ತ್ಮಭಿಃ ॥ ೪೩ ॥

ಪರಂ ಪದಂ ವತಂತ್ಯೇತತ್ಕೇಚಿದ್ವೈ ವೈಷ್ಣವಂ ನೃಪ।
ಕೇಚಿದ್ವೈ ವ್ಯಾಪ್ಯ ವೈಕುಂಠಂ ಶಾಂತಂ ಕೇಽಪಿ ತತಃ ಪರಂ ॥ ೪೪ ॥

ಕೈವಲ್ಯಂ ತದ್ಬ್ರಹ್ಮ ಕೇಚಿತ್ಪರಮಂ ಧಾಮ ಚಾವ್ಯಯಂ।
ಅಕ್ಷರಂ ಚ ಪರಾಂ ಕಾಷ್ಠಾಂ ಗೋಲೋಕಂ ಪ್ರಕೃತೇಃ ಪರಂ ॥ ೪೫ ॥

---

೪೨. ಓ ಯಾದವರಾಜೇಂದ್ರ! ಯಾವ ರೀತಿ ಸೂರ್ಯೋದಯವಾದರೆ ಮನೆಯೊಳಗಿದ್ದ ವಸ್ತುವೆಲ್ಲವೂ ಚೆನ್ನಾಗಿ ಕಾಣುವುದೋ ಅದೇ ರೀತಿ ಜ್ಞಾನವು ಉಂಟಾಗಲು ಹೃದಯಮಂದಿರದಲ್ಲಿ ತತ್ತ್ವವು ಸ್ಫುಟವಾಗಿ ಸಾಕ್ಷಾತ್ಕರಿಸಲ್ಪಡುವುದು.

೪೩. ನಾನಾ ವಿಧವಾದ ಗುಣಗಳಿಗೆ ಆಶ್ರಯವಾದ ಪದಾರ್ಥವು ಯಾವ ರೀತಿ ಆಯಾ ಇಂದ್ರಿಯಗಳ ದ್ವಾರಾ ಪ್ರತ್ಯೇಕ ಪ್ರತ್ಯೇಕವಾಗಿ ತೋರುವುದೋ ಅದೇ ರೀತಿಯಾಗಿ ಈ ಏಕೈಕವಾದ ಪರಬ್ರಹ್ಮವಸ್ತುವು ಬೇರೆ ಬೇರೆಯಾದ ಸಾಂಖ್ಯಾದಿ ಶಾಸ್ತ್ರಮಾರ್ಗಗಳಿಂದ ಒಂದೊಂದು ರೀತಿಯಾಗಿ ವಿವರಿಸಲ್ಪಟ್ಟಿರುವುದು.

೪೪. ಕೆಲವರು ಈ ಪರಬ್ರಹ್ಮ ವಸ್ತುವನ್ನು ಪರಮಪದವೆನ್ನುವರು. ಕೆಲವರು ವೈಷ್ಣವವೆಂಬ ಸ್ಥಾನವೆನ್ನುವರು. ಮತ್ತೆ ಕೆಲವರು ಮೇಲೆ ಹೇಳಿದ ವೈಷ್ಣವಸ್ಥಾನವೆಂಬ ವೈಕುಂಠವನ್ನೂ ವ್ಯಾಪಿಸಿ ಅದಕ್ಕಿಂತಲೂ ಮೇಲಿರುವ ಶಾಂತವಾದ ನಿವಾಸವೆನ್ನುವರು.

೪೫. ಕೆಲವರು ಆ ಬ್ರಹ್ಮವು ಕೈವಲ್ಯವೆಂದೂ, ಮತ್ತೆ ಕೆಲವರು ನಾಶರಹಿತವಾದ ಪರಮಧಾಮವೆಂತಲೂ, ಅಕ್ಷರವೆಂತಲೂ, ಪರಾಕಾಷ್ಠೆಯೆಂತಲೂ, ಗೋಲೋಕವೆಂತಲೂ, ಪ್ರಕೃತಿಗಿಂತಲೂ ಪರವೆಂತಲೂ ವರ್ಣಿಸುವರು.

ಕೇಚಿನ್ನಿಕುಂಜಂ ವಿಶದಂ ವದಂತೀಹ ಪುರಾವಿದಃ ।
ಜ್ಞಾನವೈರಾಗ್ಯಭಕ್ತಿಭ್ಯಃ ಪ್ರಾಪ್ನೋತೀಹ ನ ಚಾನ್ಯತಃ　　|| ೪೬ ||

ಶ್ರೀಕೃಷ್ಣಚಂದ್ರಸ್ಯ ಹರೇಃ ಪರಸ್ಯ
ಕೈವಲ್ಯನಾಥಸ್ಯ ಪರಾತ್ಪರಸ್ಯ ।
ವ್ರಜೇತ್ಪದಂ ಶ್ರೀಪುರುಷೋತ್ತಮಸ್ಯ
ಯತ್ಪ್ರಾಪ್ಯ ಭಕ್ತೋ ನ ನಿವರ್ತತೇಽಥ　　|| ೪೭ ||

|| ಶ್ರೀ ನಾರದ ಉವಾಚ ||

ಇತಿ ಭಾಗವತಂ ಜ್ಞಾನಂ ಶ್ರುತ್ವಾ ಕಾರ್ಷ್ಣಿರ್ಮಹಾಮುನಿಂ ।
ಅಗಸ್ತ್ಯಂ ಪೂಜಯಾಮಾಸ ಭಕ್ತ್ಯಾ ನತ್ವಾ ಕೃತಾಂಜಲಿಃ　　|| ೪೮ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಉಶೀನರವಿದರ್ಭಕುಂತದರದದೇಶವಿಜಯೇ ಅಗಸ್ತ್ಯ ಕಾರ್ಷ್ಣಿಜ್ಞಾನಪ್ರಸ್ತಾವೋ ನಾಮ ದ್ವಾದಶೋಽಧ್ಯಾಯಃ

---

೪೬. ಕೆಲವರು ವಿಶಾಲವಾದ ನಿಕುಂಜವೆನ್ನುವರು. ಈ ರೀತಿಯಾಗಿ ಪ್ರಾಚೀನರಾದ ತತ್ತ್ವಜ್ಞರು ಹೇಳುವರು: ಮೇಲೆ ಹೇಳಿದ ಪರಮಪದವನ್ನು ಪಡೆಯ ಬೇಕಾದರೆ ಜ್ಞಾನ, ವೈರಾಗ್ಯ, ಭಕ್ತಿಗಳನ್ನು ಬಿಟ್ಟು ಮತ್ತಾವುದರಿಂದಲೂ ಸಾಧ್ಯವಿಲ್ಲ.

೪೭. ಯಾವುದನ್ನು ಪಡೆದನಂದರ ಭಕ್ತನಾದವನು ಮತ್ತೆ ಹಿಂದಿರುಗ ಲಾರನೋ, ಅಂತಹ ಪರಮಪುರುಷನೂ, ಕೈವಲ್ಯನಾಥನೂ, ಪರಾತ್ಪರನೂ, ಪುರು ಷೋತ್ತಮನೂ ಆದ ಶ್ರೀಕೃಷ್ಣಚಂದ್ರನ ನಿತ್ಯನಿವಾಸವನ್ನು ಮೇಲೆ ಹೇಳಿದ ಜ್ಞಾನ ವೈರಾಗ್ಯ, ಭಕ್ತಿಗಳಿಂದಲೇ ಮಾನವನು ಹೊಂದುವನು" ಎಂದನು.

೪೮. "ಓ ಬಹುಲಾಶ್ವರಾಜಾ! ಈ ರೀತಿಯಾಗಿ ಅಗಸ್ತ್ಯಮಹಾಮುನಿಯಿಂದ ಆ ಪ್ರದ್ಯುಮ್ನನು ಭಗವದ್ವಿಷಯಕವಾದ ಜ್ಞಾನೋಪದೇಶವನ್ನು ಪಡೆದನಂತರ ಆತ ನನ್ನು ಭಕ್ತಿಯಿಂದ ನಮಸ್ಕರಿಸಿ ಬದ್ಧಾಂಜಲಿಪುಟನಾಗಿ ಪೂಜಿಸಿದನು" ಎಂದನು.

ಇಲ್ಲಿಗೆ ಶ್ರೀಗರ್ಗ ಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವ ಸಂವಾದದಲ್ಲಿ ಅಗಸ್ತ್ಯೋಪದೇಶವೆಂಬ
ಹನ್ನೆರಡನೆಯ ಅಧ್ಯಾಯವು ಮುಗಿದುದು.

—|| ಶ್ರೀಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ತ್ರಯೋದಶೋಽಧ್ಯಾಯಃ

|| ಶ್ರೀ ನಾರದ ಉವಾಚ ||

ಕೃತಮಾಲಾಂ ತಾಮ್ರಪರ್ಣೀಂ ಸ್ನಾತ್ವಾ ಶ್ರೀಯಾದವೇಶ್ವರಃ |
ಯದುಭಿಃ ಸೈನಿಕೈಃ ಸಾರ್ಧಂ ರಾಜನ್ರಾಜಪುರಂ ಯಯೌ || ೧ ||

ಶಾಲ್ವೋ ರಾಜಪುರಾಧೀಶಃ ಶ್ರುತ್ವಾ ನುನ್ಮುಖತೋ ಯದೂನ್ |
ಆಗತಾನ್ಸ ಯಯೌ ಶೀಘ್ರಂ ದ್ವಿವಿದಂ ವಾನರಾಧಿಪಂ || ೨ ||

ದ್ವಿವಿದೋ ಹ್ಯತಿಸಂಕ್ರುದ್ಧೋ ವೀರೋ ಮಿತ್ರಸಹಾಯಕೃತ್ |
ಶಂಬರಾರಿಬಲಂ ಪ್ರಾಗಾಚ್ಚಾಲಯನ್ವಸುಧಾತಲಂ || ೩ ||

ಹದಿಮೂರನೆಯ ಅಧ್ಯಾಯವು

೧. ಓ ರಾಜೇಂದ್ರ ! ಆಲಿಸು. ಅನಂತರ ಆ ಪ್ರದ್ಯುಮ್ನನು ಅಗಸ್ತ್ಯಾಶ್ರಮದಿಂದ ಹೊರಟು ಕೃತಮಾಲಾ ಎಂಬ ನದಿಯಲ್ಲಿಯೂ ತಾಮ್ರಪರ್ಣೀ ಎಂಬ ನದಿಯಲ್ಲಿಯೂ ಸ್ನಾನಮಾಡಿ ತನ್ನ ಯಾದವ ಸೈನ್ಯದೊಡನೆ ರಾಜಪುರಕ್ಕೆ ತೆರಳಿದನು.

೨. ಆ ರಾಜಪುರದರಸನಾದ ಶಾಲ್ವನು ನನ್ನ ಮುಖಾಂತರ ಯಾದವಸೇನೆಯು ಬಂದಿರುವುದನ್ನು ಅರಿತು ಕೂಡಲೇ ವಾನರಾಧಿಪತಿಯಾದ ದ್ವಿವಿದನಲ್ಲಿಗೆ ಹೊರಟನು.

೩. ಆ ದ್ವಿವಿದನೆಂಬ ವಾನರನು ತನ್ನ ಸ್ನೇಹಿತನಿಗೆ ಸಹಾಯವನ್ನು ಮಾಡಲೆಳಸಿ ಮಹಾಕೋಪದಿಂದ ಭೂಮಿಯು ನಡುಗುವಂತೆ ಕಾಲಿಡುತ್ತಾ ಯಾದವಸೇನೆಯಿದ್ದಲ್ಲಿಗೆ ಹೊರಟನು.

ವಿದದಾರ ನಖೈರ್ದಂತೈಃ ಪತಾಕಾಧ್ವಜಪಟ್ಟಿಕಾಃ ।
ಕಾಶ್ಮೀರಕಂಬಲೈರ್ಯುಕ್ತಾನ್ಸಮುದ್ರಾನ್ಸ್ವರ್ಣಭೂಷಿತಾನ್ ॥ ೪ ॥

ರಥಾನುತ್ಪಾತಯಾಮಾಸ ಗಜಾನಾರುಹ್ಯ ವೇಗತಃ ।
ಅಶ್ವಾನ್ವಿದ್ರಾವಯಾಮಾಸ ಭ್ರೂಭಂಗೈರ್ವಾನರಸ್ವನೈಃ ॥ ೫ ॥

ಇತ್ಥಂ ಕೋಲಾಹಲೇ ಜಾತೇ ಪ್ರದ್ಯುಮ್ನೋ ಧನ್ವಿನಾಂ ವರಃ ।
ಆಜಗಾಮ ರಥೇನಾಸೌ ಧನುಷ್ಟಂಕಾರಯನ್ಮುಹುಃ ॥ ೬ ॥

ದ್ವಿವಿದಸ್ತದ್ರಥಸ್ಯಾರಾದುಚ್ಚಚಕ್ರಾಮ ಮದೋತ್ಕಟಃ ।
ಛತ್ರಂ ಧ್ವಜಂ ಸ್ವಪುಚ್ಛೇನ ಕಂಪಯನ್ಸಹಯಂ ರಥಂ ॥ ೭ ॥

೪–೫. ಯಾದವ ಸೇನೆಯನ್ನು ಎದುರುಗೊಳ್ಳುತ್ತಲೇ ಆ ಕಪಿಯು ಅದರಲ್ಲಿದ್ದ ತೇರುಗಳ ಧ್ವಜಪಟಗಳನ್ನು ತನ್ನ ಉಗುರುಗಳಿಂದಲೂ, ಹಲ್ಲುಗಳಿಂದಲೂ ಸೀಳಿ ಕಚ್ಚಿ ತುಂಡುತುಂಡುಮಾಡಿದನು. ಮತ್ತು ಕಾಶ್ಮೀರದೇಶದ ಬೆಲೆಬಾಳುವ ಕಂಬಳಿಯನ್ನು ಹಾಸಿರುವ ಮುದ್ರಿಕಾಸಹಿತವಾದ ಸುವರ್ಣ ಚಿತ್ರಿತವಾದ ತೇರುಗಳನ್ನೂ, ಆನೆಗಳನ್ನೂ ಹತ್ತಿ ಜೋರಾಗಿ ನೂಕಿ ಕೆಳಕ್ಕೆ ಕೆಡವಿದನು. ಅಷ್ಟೇ ಅಲ್ಲದೆ ಆ ಸೇನೆಯ ಕುದುರೆಗಳನ್ನು ತನ್ನ ವಾನರ ಸ್ವಭಾವದಂತೆ ಹುಬ್ಬುಗಳನ್ನು ಗಂಟುಹಾಕುತ್ತಲೂ ಗುರ್ ಗುರ್ ಎಂದು ಧ್ವನಿಮಾಡುತ್ತಲೂ ಹೆದರಿಸಿ ಓಡಿಸಿಬಿಟ್ಟನು.

೬. ಈ ರೀತಿಯಾಗಿ ತನ್ನ ಸೇನೆಯಲ್ಲಿ ಗದ್ದಲವುಂಟಾಗಲು ಬಿಲ್ಲುಗಾರರಿಗೆಲ್ಲಾ ಮುಂದಾಳಿನಿಸಿದ ಆ ಪ್ರದ್ಯುಮ್ನನು ತನ್ನ ಬಿಲ್ಲಿನ ಹೆದೆಯನ್ನು ಟಂಕಾರಮಾಡುತ್ತಾ ರಥದಲ್ಲಿ ಕುಳಿತು ಆ ಕಪಿಯಿದ್ದಲ್ಲಿಗೆ ಬಂದನು.

೭. ಅವನು ಬಂದುದನ್ನು ದೂರದಿಂದಲೇ ಕಂಡ ಆ ಮದೋನ್ಮತ್ತನಾದ ದ್ವಿವಿದನೆಂಬ ವಾನರನು ತನ್ನ ಬಾಲದ ಏಟಿನಿಂದ ಅವನು ಕುಳಿತಿದ್ದ ತೇರನ್ನೂ, ಛತ್ರಿಯನ್ನೂ, ಧ್ವಜವನ್ನೂ, ಅದಕ್ಕೆ ಕಟ್ಟಿದ್ದ ಕುದುರೆಗಳನ್ನೂ ನಡುಗಿಸುತ್ತಾ ಹಾರಿದನು.

ಪ್ರದ್ಯುಮ್ನಃ ಸ್ವಧನುಷ್ಕೋಟ್ಯಾಂ ಧೃತ್ವಾ ಕಂಠೇ ಚಕರ್ಷ ಹ ।
ಕಪಿಸ್ತದಾತಿಕುಪಿತೋ ಮುಷ್ಟಿನಾ ತಂ ತತಾಡ ಹ ॥ ೮ ॥

ಪ್ರದ್ಯುಮ್ನೋ ಧನುರಾದಾಯ ಸಜ್ಯಂ ಕೃತ್ವಾ ವಿಧಾನತಃ ।
ಆಕೃಷ್ಯ ಕರ್ಣಪರ್ಯಂತಂ ವಿಶಿಖೇನ ತತಾಡ ತಂ ॥ ೯ ॥

ವಿಶಿಖೋ ಭ್ರಾಮಯಿತ್ವಾ ತಂ ಗಗನೇ ಶತಯೋಜನಂ ।
ಪ್ರಹರಾರ್ದ್ಧೇನ ರಾಜೇಂದ್ರ ಲಂಕಾಯಾಂ ಸಂನ್ಯಪಾತಯತ್ ॥ ೧೦ ॥

ರಕ್ಷೋಭಿಃ ಸಹ ತದ್ಯುದ್ಧಂ ಬಭೂವ ಘಟಿಕಾದ್ವಯಂ ।
ನ್ಯಪಾತಯತ್ಸರಕ್ಷಾಂಸಿ ಪ್ರದ್ಯುಮ್ನೋಽಥ ಯದೂತ್ತಮಃ ॥ ೧೧ ॥

---

೮. ಆಗ ಪ್ರದ್ಯುಮ್ನನು ತನ್ನ ಬಿಲ್ಲಿನ ತುದಿಯಿಂದ ಆ ದ್ವಿವಿದನನ್ನು ಕುತ್ತಿಗೆಯ ಪ್ರದೇಶದಲ್ಲಿ ಇರುಕಿಸಿಕೊಂಡು ಎಳೆದನು. ಆಗ ಆ ಕಪಿಯು ಬಹು ಕೋಪವನ್ನು ತಾಳಿ ಮುಷ್ಟಿಯಿಂದ ಅವನನ್ನು ಅಪ್ಪಳಿಸಿದನು.

೯. ಕೂಡಲೇ ಯುದ್ಧಕಲಾಕುಶಲನಾದ ಆ ಪ್ರದ್ಯುಮ್ನನು ತನ್ನ ಬಿಲ್ಲಿಗೆ ಹೆದೆಯೇರಿಸಿ ಬಾಣವನ್ನು ಹೂಡಿ ಕಿವಿಯವರೆಗೆ ಎಳೆದು ಅದನ್ನು ಆ ಕಪಿಯ ಮೇಲೆ ಪ್ರಯೋಗಿಸಿದನು.

೧೦. ಪ್ರದ್ಯುಮ್ನನ ಬಿಲ್ಲಿನಿಂದ ಬಿಡಲ್ಪಟ್ಟ ಆ ಬಾಣವು ದ್ವಿವಿದನನ್ನು ಅಂತರಿಕ್ಷದಲ್ಲಿ ಗರ್ರನೆ ಸುತ್ತಿಸಿ ಪ್ರಹರಾರ್ಧದಷ್ಟು ಕಾಲದಲ್ಲಿ ಅಲ್ಲಿಂದ ಒಂದುನೂರು ಯೋಜನದಾಚೆಯಿದ್ದ ಲಂಕಾಪಟ್ಟಣದಲ್ಲಿ ಕೆಡವಿಬಿಟ್ಟಿತು.

೧೧. ಅಷ್ಟೇ ಅಲ್ಲದೆ ಎರಡು ಗಳಿಗೆಗಳ ಕಾಲ ಆ ಲಂಕೆಯಿಲ್ಲದ್ದ ರಾಕ್ಷಸರೊಡನೆ ಹೋರಾಡಿ ಅವರೆಲ್ಲರನ್ನೂ ಆ ಬಾಣವು ಸೋಲಿಸಿ ನೆಲದಮೇಲೆ ಉರುಳಿಸಿತು ಬಳಿಕ ಯದುಶ್ರೇಷ್ಠನಾದ ಆ ಪ್ರದ್ಯುಮ್ನನು.

ನಾದಯುನ್ದುಂದುಭಿಂ ರಾಜನ್ನಿಜಿತ್ಯ ಜಗೃಹೇ ಬಲಿಂ ।
ದಕ್ಷಿಣಾಂ ಮಧುರಾಂ ದೃಷ್ಟ್ವಾ ತ್ರಿಕೂಟಂ ಚಾರುರೋಹ ಹ　　|| ೧೨ ||

ಪ್ರೋಚ್ಚಕ್ರಾಮ ತ್ರಿಕೂಟಾತ್ಸ ಮೈನಾಕಶಿಖರೋಪರಿ ।
ಮೈನಾಕಾತ್ಸಿಂಹಲಂ ಚೈತ್ಯ ಭಾರತಂ ಚಾಯಯೌ ಪುನಃ　　|| ೧೩ ||

ಶನೈಃ ಶನೈರ್ವಾನರೇಂದ್ರೋ ಹಿಮಾಚಲಗಿರಿಂ ಗತಃ ।
ಹಿಮಾಚಲಸ್ಯ ಶಿಖರಾತ್ಪ್ರಾಗ್ಜ್ಯೋತಿಷಪುರಂ ಯಯೌ　　|| ೧೪ ||

ಮತ್ಸರವೇಶಾಧಿಪತಿಂ ಪ್ರದ್ಯುಮ್ನೋ ಯಾದವೇಶ್ವರಃ ।
ಮಹಾಕ್ಷೇತ್ರಂ ರಾಮಕೃಷ್ಣಂ ಪ್ರಯಯೌ ಸೇತುಬಂಧನಂ　　|| ೧೫ ||

---

೧೨. ವಿಜಯಸೂಚಕವಾದ ನಗಾರಿಯನ್ನು ಹೊಡಿಸಿ ತಾನು ಗೆದ್ದ ಆ ಸಾಲ್ವನಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ದಕ್ಷಿಣದಲ್ಲಿರುವ ಮಧುರಾನಗರವನ್ನು ಸಂದರ್ಶಿಸಿ ಬಳಿಕ ತ್ರಿಕೂಟಪರ್ವತವನ್ನೇರಿದನು.

೧೩. ಆ ತ್ರಿಕೂಟಪರ್ವತದಲ್ಲಿ ಸಂಚರಿಸಿದ ಮೇಲೆ ಅಲ್ಲಿಂದ ಮೈನಾಕಪರ್ವತವನ್ನೂ, ಅಲ್ಲಿಂದ ಸಿಂಹಲದ್ವೀಪವನ್ನೂ ಸಂಚರಿಸಿ, ಆ ಸಿಂಹಲದ್ವೀಪದಿಂದ ಮರಳಿ ಭಾರತಭೂಮಿಗೆ ಹಿಂದಿರುಗಿದನು.

೧೪. ರಾಜೇಂದ್ರ ! ಪ್ರದ್ಯುಮ್ನನ ಬಾಣದಿಂದ ಲಂಕೆಯಲ್ಲಿ ಕೆಡವಲ್ಪಟ್ಟಿದ್ದ ಆ ದ್ವಿವಿದನೆಂಬ ವಾನರನು ಅಲ್ಲಿಂದೆದ್ದು ಮೆಲ್ಲಮೆಲ್ಲನೆ ಹಿಮವತ್ಪರ್ವತಕ್ಕೆ ಹೋಗಿ, ಅಲ್ಲಿಂದ ಪ್ರಾಗ್ಜ್ಯೋತಿಷನಗರಕ್ಕೆ ಹೋಗಿ ನೆಲಸಿದನು.

೧೫. ಇತ್ತಲಾಗಿ ಆ ಪ್ರದ್ಯುಮ್ನನು ಮತ್ಸರವೇಷವೆಂಬ ದೇಶಕ್ಕೆ ಅಧಿಪತಿಯೆಂತೆ ಇರುವ ರಾಮಕೃಷ್ಣಪ್ರೀತ್ಯಾಸ್ಪದವಾದ ಸೇತುವನ್ನು ಕಟ್ಟಿದ್ದ ಮಹಾಕ್ಷೇತ್ರಕ್ಕೆ ಬಂದನು.

ಶತಯೋಜನವಿಸ್ತೀರ್ಣಂ ಸಮುದ್ರಂ ಮಕರಾಲಯಮ್ ।
ವೀಕ್ಷ್ಯ ಕಾರ್ಷ್ಣಿರ್ಮಹಾವೀರಸ್ತಸ್ಥೌ ವೇಲಾಂ ಸಮೇತ್ಯ ಸಃ ॥ ೧೬ ॥

ಸಾಂಬಾದೀನ್ಸ ಸಮಾಹೂಯಾಕ್ರೂರಾದ್ಯಾನ್ಯಾದವಾನ್ಸ್ವಕಾನ್ ।
ಸಭಾಯಾಮುದ್ಧವಂ ಪ್ರಾಹ ಕಾರ್ಷ್ಣಿರ್ಯೋಗೇಶ್ವರೇಶ್ವರಃ ॥ ೧೭ ॥

॥ ಪ್ರದ್ಯುಮ್ನ ಉವಾಚ ॥

ವಿಭೀಷಣೋ ದ್ವೀಪಪತಿರ್ಮಹೋಜ್ಜ್ವಲೋ
ಲಂಕಾಪತಿಃ ಕೌಣಪವೃಂದಮುಖ್ಯಃ ।
ವದಾಥ ಕಿಂ ಭೋಜವರಾಯ ಮಂತ್ರಿ–
ನ್ನಚೇದ್ಬಲಿಂ ಯಚ್ಛತಿ ಮೇ ತದಾಶು ॥ ೧೮ ॥

---

೧೬. ಅಲ್ಲಿ ಕೃಷ್ಣಪುತ್ರನಾದ ಆ ಪ್ರದ್ಯುಮ್ನನು ನೂರುಯೋಜನ ವಿಸ್ತಾರವಾಗಿರುವ ಮೊಸಳೆ ಮೊದಲಾದ ಜಲಜಂತುಗಳಿಗೆ ಆವಾಸವಾದ ಸಮುದ್ರವನ್ನು ನೋಡಿ ಅದರ ದಡದಲ್ಲಿಯೇ ಬೀಡುಬಿಟ್ಟನು.

೧೭. ಬಳಿಕ ಸಾಂಬ ಅಕ್ರೂರ ಮುಂತಾದ ಯಾದವರನ್ನು ಕರೆಸಿ ಅವರೆಲ್ಲರೂ ಕುಳಿತಿದ್ದ ಸಭೆಯಲ್ಲಿ ಯೋಗೇಶ್ವರರಿಗೆಲ್ಲಾ ಪ್ರಭುವೆನಿಸಿದ ಆ ಪ್ರದ್ಯುಮ್ನನು ಉದ್ಧವನನ್ನು ಕುರಿತು ಇಂತೆಂದನು.

೧೮. "ಎಲೈ ಮಂತ್ರಿಶ್ರೇಷ್ಠನೇ, ರಾಕ್ಷಸರಿಗೆಲ್ಲಾ ಅತಿಶಯವಾದ ತೇಜಸ್ಸಿನಿಂದ ಬೆಳಗುತ್ತಾ ಲಂಕಾದ್ವೀಪಕ್ಕೆ ಅಧಿಪತಿಯಾಗಿರುವ ಈ ವಿಭೀಷಣನು ಭೋಜಾಧಿಪತಿಯಾದ ಈ ಉಗ್ರಸೇನನಿಗೆ ಕಪ್ಪವನ್ನು ಕೊಡುವನೇ, ಇಲ್ಲವೇ, ಎಂಬುವನ್ನು ತಿಳಿಸು" ಎನ್ನಲು,

॥ ಉದ್ಧವ ಉವಾಚ ॥

ತ್ವಂ ದೇವದೇವಃ ಪುರುಷೋತ್ತಮೋತ್ತಮಃ
ಶ್ರೀಕೃಷ್ಣಚಂದ್ರಃ ಪರಮಂ ತ್ವಮೇವ ಹಿ।
ತ್ವಂ ಪೃಚ್ಛಸೇ ಲೋಕ ಇವ ಪ್ರಭೋ ಮಾಂ
ಮಾಯಾಪಿ ತೇ ಯೋಗಿವರ್ಯೈರ್ದುರತ್ಯಯಾ ॥ ೧೯ ॥

ಬ್ರಹ್ಮಾದಯೋ ಯಸ್ಯ ಪರಾನುಶಾಸನಂ
ವಹಂತಿ ಮೂರ್ಧ್ನಾ ಸತತಂ ಪ್ರಧರ್ಷಿತಾಃ।
ಸ ಏವ ಸಾಕ್ಷಾತ್ಪುರುಷೋಽಸಿ ಭೂಮನ್
ದಾಸಾನುದಾಸೋಽಸ್ಮಿ ವದಾಮಿ ಕಿಂ ತೇ ॥ ೨೦ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತಃ ಪಶ್ಯತಾಂ ತೇಷಾಂ ಪ್ರದ್ಯುಮ್ನೋ ಭಗವಾನ್ಹರಿಃ।
ಪತ್ರಂ ಗೃಹೀತ್ವಾ ವ್ಯಲಿಖತ್ಸಂದೇಶಂ ಮೈಥಿಲೇಶ್ವರ ॥ ೨೧ ॥

---

೧೯. ಆ ಉದ್ಧವನು ತನ್ನ ಪ್ರಭುವನ್ನು ಕುರಿತು, 'ದೇವಾ! ನೀನು ದೇವದೇವನೂ, ಪುರುಷಶ್ರೇಷ್ಠರಲ್ಲೆಲ್ಲಾ ಶ್ರೇಷ್ಠನೂ, ಪರಮಸ್ವರೂಪನೂ ಆದ ಶ್ರೀಕೃಷ್ಣಚಂದ್ರನೇ ಆಗಿರುವೆ. ಹೀಗಿರುವಲ್ಲಿ ಸಾಮಾನ್ಯ ಮನುಷ್ಯನಂತೆ ನನ್ನನ್ನು ಕೇಳುತ್ತಿರುವೆಯಲ್ಲಾ! ಹೇ ಪ್ರಭು! ನಿನ್ನ ಮಾಯೆಯನ್ನು ಮೀರಲು ಯೋಗಿವರ್ಯರಿಗೂ ಸಾಧ್ಯವಿಲ್ಲವು.

೨೦. ಎಲೈ ಸ್ವಾಮಿಯೇ, ಯಾವಾತನ ಕಟ್ಟಾಜ್ಞೆಯನ್ನು ಬ್ರಹ್ಮಾದಿಗಳೂ ಸಹ ಹೆದರಿ ಹೆದರಿಕೊಂಡು ಶಿರಸಾವಹಿಸಿ ಪಾಲಿಸುವರೋ ಅಂತಹ ಸಾಕ್ಷಾತ್ಪುರುಷೋತ್ತಮನೇ ನೀನಾಗಿರುವೆ. ಇಂತಹ ನಿನಗೆ ದಾಸಾನುದಾಸನಾದ ನಾನು ಏನು ತಾನೇ ಹೇಳಬಲ್ಲೆನು." ಎಂದು ನುಡಿದನು.

೨೧. ಎಲೈ ಮಿಥಿಲಾಧಿಪತಿಯೇ, ಈ ರೀತಿಯಾಗಿ ಉದ್ಧವನು ಹೇಳಲು ಸಾಕ್ಷಾತ್ ಹರಿಸ್ವರೂಪನಾದ ಆ ಪ್ರದ್ಯುಮ್ನನು ಅವರೆಲ್ಲರೂ ನೋಡುತ್ತಿರುವಂತೆಯೇ ಪತ್ರವೊಂದನ್ನು ತೆಗೆದುಕೊಂಡು.

ಶ್ರೀಭೋಜರಾಜಾಯ ಬಲಿಂ ಪ್ರಯಚ್ಛ
ಬಲಾನ್ನ ಚೇನ್ಮೇ ವಚನಂ ಶೃಣು ತ್ವಂ ।
ಕೋದಂಡಮುಕ್ತೈರ್ವಿಶಿಖೈಸ್ತು ಸೇತುಂ
ಬದ್ಧ್ವಾ ಗಮಿಷ್ಯಾಮಿ ಸಸೈನ್ಯಸಂಘಃ || ೨೨ ||

ಲಿಖಿತ್ವೇದಂ ಸಮಾದಾಯ ಕೋದಂಡಂ ಚಂಡವಿಕ್ರಮಃ ।
ಬಾಣೇ ಪತ್ರಂ ಸಮಾಧಾಯ ಕರ್ಣಾಂತಂ ತಂ ತತಾನ ಹ || ೨೩ ||

ಪ್ರಸ್ಫುಟಂ ಸ್ಫೋಟಿತೇನೈವ ಟಂಕಾರೋಽಭೂತ್ತಡಿತ್ಸ್ವನಃ ।
ನನಾದ ತೇನ ಬ್ರಹ್ಮಾಂಡಂ ಸಪ್ತಲೋಕೈರ್ಬಿಲೈಃ ಸಹ || ೨೪ ||

ಕೋದಂಡಮುಕ್ತೋ ವಿಶಿಖೋ ದ್ಯೋತಯನ್ಮಂಡಲಂ ದಿಶಾಂ ।
ವಿಭೀಷಣಸಭಾಮಧ್ಯೇ ಸಂಪಪಾತ ತಡಿತ್ಸ್ವನಃ || ೨೫ ||

---

೨೨. ಭೋಜರಾಜನಾದ ಶ್ರೀ ಉಗ್ರಸೇನ ಮಹಾರಾಜನಿಗೆ ನೀನು ಕಪ್ಪ ಕಾಣಿಕೆಗಳನ್ನು ಒಪ್ಪಿಸು. ಹಾಗೆ ಒಪ್ಪಿಸದಿದ್ದರೆ, ಇದೋ ನನ್ನ ಮಾತನ್ನು ಕೇಳು. ಈ ನನ್ನ ಬಿಲ್ಲಿನಿಂದ ಬಿಡಲ್ಪಟ್ಟ ಬಾಣಗಳಿಂದಲೇ ಈ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಅದರ ಮೇಲೆ ಸೇನೆಯನ್ನು ತೆಗೆದುಕೊಂಡು ನಿನ್ನ ಮೇಲೆ ದಂಡೆತ್ತಿ ಬರುವೆನು. ಎಂಬುದಾಗಿ ಸಂದೇಶವನ್ನು ಬರೆದನು.

೨೩. ಈ ರೀತಿಯಾಗಿ ಬರೆದನಂತರ ಆ ಕಾಗದವನ್ನು ಬಾಣದ ತುದಿಗೆ ಕಟ್ಟಿ ಆ ಬಾಣವನ್ನು ಬಿಲ್ಲಿಗೆ ಹೂಡಿ ಅದರ ಹೆದೆಯನ್ನು ಕಿವಿಯವರೆಗೆ ಸೆಳೆದನು.

೨೪. ಆ ರೀತಿ ಸೆಳೆಯುವಾಗ ಸಿಡಲಿನ ನಾದದಂತೆ ಭಾರಿಯಾದ ಟಂಕಾರವುಂಟಾಯಿತು. ಅದರಿಂದ ಈ ಭೂಮಿಯ ಕೆಳಗೂ ಮೇಲೂ ಇರುವ ಏಳು ಲೋಕಗಳಿಂದ ಕೂಡಿದ ಈ ಬ್ರಹ್ಮಾಂಡವೇ ತುಂಬಿಹೋಯಿತು.

೨೫. ಈ ರೀತಿ ಟಂಕಾರಮಾಡಿ ಆ ಬಾಣವನ್ನು ಪ್ರಯೋಗಿಸುತ್ತಲೇ ಅದು ದಿಕ್ಕು ದಿಕ್ಕುಗಳೆಲ್ಲವನ್ನೂ ಬೆಳಗುತ್ತಾ ಸಿಡಲಿನ ದನಿಯಿಂದ ವಿಭೀಷಣನ ಸಭೆಯ ನಡುವೆ ಹೋಗಿ ಬಿದ್ದಿತು.

ತದೈವ ರಾಕ್ಷಸಾಸ್ಸರ್ವೇ ಪ್ರೋತ್ಥಿತಾಶ್ಚಕಿತಾ ಇವ ।
ಸಕಂಚುಕಾನಿ ಶಸ್ತ್ರಾಣಿ ಜಗೃಹುರ್ವೇಗತಃ ಖಲಾಃ ॥ ೨೬ ॥

ಪತ್ರಂ ಬಾಣಾತ್ಸಮಾಕೃಷ್ಯ ಪಠಿತ್ವಾಥ ವಿಭೀಷಣಃ ।
ವಿಸ್ಮಿತೋಽಭೂತ್ಸಭಾಮಧ್ಯೇ ರಾಕ್ಷಸೇಂದ್ರೋ ಮಹಾಬಲಃ ॥ ೨೭ ॥

ಪ್ರಾಪ್ತಂ ತದೈವ ಸದಸಿ ಶುಕ್ರಾಚಾರ್ಯಂ ವಿಭೀಷಣಃ ।
ಪೂಜಯಾಮಾಸ ಪಾದ್ಯಾದ್ಯೈರ್ನತ್ವಾ ಪ್ರಾಹ ಕೃತಾಂಜಲಿಃ ॥ ೨೮ ॥

॥ ವಿಭೀಷಣ ಉವಾಚ ॥

ಭಗವನ್ಕಸ್ಯ ಬಾಣೋಽಯಂ ಭೋಜರಾಜಸ್ತು ಕಃ ಕ್ಷಿತೌ ।
ಕಿಂ ಬಲಂ ತಸ್ಯ ಮೇ ಬ್ರೂಹಿ ತ್ವಂ ಸಾಕ್ಷಾದ್ದಿವ್ಯದರ್ಶನಃ ॥ ೨೯ ॥

---

೨೬. ಆಗ ಅಲ್ಲಿದ್ದ ರಾಕ್ಷಸರೆಲ್ಲರೂ ಗಾಬರಿ ಹೊಂದಿದವರಂತೆ ತಟ್ಟನೆ ಮೇಲಕ್ಕೆದ್ದು ನಿಂತರು. ಕೂಡಲೇ ದುಷ್ಟ ವಾಸನೆಯುಳ್ಳ ಆ ರಾಕ್ಷಸರು ಉಕ್ಕಿನ ಕವಚಗಳನ್ನು ತೊಟ್ಟು ತಮ್ಮ ತಮ್ಮ ಆಯುಧಗಳನ್ನು ಕೈಗೆ ತೆಗೆದುಕೊಂಡರು.

೨೭. ಆಗ ವಿಭೀಷಣನು ಆ ಬಾಣದ ಕೊನೆಗೆ ಕಟ್ಟಿದ್ದ ಪತ್ರವನ್ನೆಳೆದುಕೊಂಡು ಅದನ್ನು ಓದಿ ಬಹುವಾಗಿ ಆಶ್ಚರ್ಯವನ್ನು ತಾಳಿದನು.

೨೮. ಆ ವೇಳೆಗೆ ಸರಿಯಾಗಿ ದೈತ್ಯರ ಗುರುವಾದ ಶುಕ್ರಾಚಾರ್ಯನು ಆ ಸಭೆಗೆ ದಯಮಾಡಿಸಿದನು. ಆಗ ಆ ರಾಕ್ಷಸೇಂದ್ರನು ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿ ಅಂಜಲಿಬದ್ಧನಾಗಿ ನಮಸ್ಕರಿಸಿ ಆತನನ್ನು ಕುರಿತು,

೨೯. "ಪೂಜ್ಯನೇ! ಈ ಬಾಣವಾವನು! ಭೋಜರಾಜನೆನ್ನುವವನು ಈ ಭೂಮಿಯಲ್ಲಿ ಯಾವನಿರುವನು? ಅವನ ಬಲವಾದರೂ ಏನು? ನೀನು ದಿವ್ಯದೃಷ್ಟಿಯುಳ್ಳವನಾದುದರಿಂದ ಇದೆಲ್ಲವನ್ನೂ ನನಗೆ ತಿಳಿಸಬೇಕು? ಎಂದು ಪ್ರಾರ್ಥಿಸಿದನು.

|| ಶ್ರೀ ಶುಕ್ರ ಉವಾಚ ||

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಯಸ್ಯ ಶ್ರವಣಮಾತ್ರೇಣ ರಾಜನ್ಪಾಪಂ ಪ್ರಶಾಮ್ಯತಿ || ೩೦ ||

ಪುರಾ ಹಿ ಬ್ರಹ್ಮಣಃ ಪುತ್ರಾಃ ಸನಕಾದ್ಯಾ ದಿವಂ ಗತಾಃ ।
ವಿಷ್ಣೋರ್ಲೋಕಂ ಯಯುರ್ದಿವ್ಯಂ ಚರಂತೋ ಭುವನತ್ರಯಂ || ೩೧ ||

ದಿಗಂಬರಾನ್ ಶಿಶೂನ್ಮತ್ವಾ ಜಯೋ ವಿಜಯ ಏವ ತಾನ್ ।
ದ್ವಾರಪಾಲೌ ರುರುಧತುರ್ವೇತ್ರೇಣಾಂತಃಪುರಸ್ಥಿತೌ || ೩೨ ||

ಅಶಪಂಸ್ತೌ ಚ ತೇ ಕ್ರುದ್ಧಾಃ ಕೃಷ್ಣದರ್ಶನಲಾಲಸಾಃ ।
ಭೂಯಾಸ್ತಮಸುರೌ ದುಷ್ಟೌ ಶುದ್ಧೌ ಹಿ ಜನ್ಮಭಿಸ್ತ್ರಿಭಿಃ || ೩೩ ||

---

೩೦. ಆಗ ಶುಕ್ರಾಚಾರ್ಯನು ಅವನನ್ನು ಕುರಿತು ಇಂತೆಂದು ನುಡಿದನು :— ಓ ರಾಕ್ಷಸೇಂದ್ರ ! ಆಲಿಸು. ಈ ಸಂದರ್ಭದಲ್ಲಿ ನಿನಗೆ ಪ್ರಾಜ್ಞರಾದವರು ಹೇಳುವ ಪುರಾತನವಾದ ಇತಿಹಾಸವನ್ನು ತಿಳಿಸುವೆನು. ಅದನ್ನು ಕೇಳಿದೊಡನೆಯೇ ಸಮಸ್ತ ಪಾಪಗಳೂ ಪರಿಹಾರವಾಗುವುವು.

೩೧. ಹಿಂದೆ ಬ್ರಹ್ಮಮಾನಸಪುತ್ರರಾದ ಸನಕಾದಿ ಮುನಿಗಳು ಮೂರು ಲೋಕಗಳನ್ನೂ ಸಂಚರಿಸುತ್ತಾ ದೇವತೆಗಳ ನಿವಾಸವಾದ ಸ್ವರ್ಗಲೋಕವನ್ನು ಸೇರಿ ಅಲ್ಲಿ ದಿವ್ಯವಾದ ವಿಷ್ಣುಲೋಕಕ್ಕೆ ಹೋದರು.

೩೨. ಅಲ್ಲಿ ವಿಷ್ಣುವಿನ ಅಂತಃಪುರದ ಬಾಗಿಲನ್ನು ಕಾಯುತ್ತಿದ್ದ ಜಯ ವಿಜಯರೆಂಬ ದ್ವಾರಪಾಲಕರಿಬ್ಬರೂ ಅವಧೂತರಾಗಿ ಮೈಮೇಲೆ ಬಟ್ಟೆಯಿಲ್ಲದೆ ಇದ್ದ ಆ ಮುನಿಗಳನ್ನು ಶಿಶುಗಳೆಂದು ಭಾವಿಸಿ ಒಳಗೆ ಹೋಗದಂತೆ ತಮ್ಮ ಕೈಲಿದ್ದ ಬೆತ್ತದಿಂದ ತಡೆದರು.

೩೩. ಆಗ ಶ್ರೀಹರಿಯನ್ನು ಸಂದರ್ಶಿಸಬೇಕೆಂದು ಬಹು ಆಸೆಯಿಂದ ಅಲ್ಲಿಗೆ ಬಂದಿದ್ದ ಆ ಮುನಿಗಳು ಬಹಳ ಕೋಪವನ್ನು ತಾಳಿ ನೀವಿಬ್ಬರೂ ರಾಕ್ಷಸರಾಗಿ.” ಎಂದು ಶಾಪವಿತ್ತರು ಅನಂತರ ಈ ರೀತಿ ಮೂರು ಜನ್ಮಗಳನ್ನೆತ್ತಿದ ನಂತರ ಈ ಶಾಪದಿಂದ ಮೋಕ್ಷವನ್ನು ಹೊಂದಿ, ಮರಳಿ, ಪೂರ್ವರೂಪವನ್ನು ಹೊಂದುವಿರಂತೆ ಎಂದು ವಿಶಾಪವನ್ನು ಇತ್ತರು.

ಏವಂ ಶಪ್ತೌ ಸ್ವಭವನಾತ್ಪತಂತೌ ಭೂಮಿಮಂಡಲೇ ।
ಜಜ್ಞಾತೇ ತೌ ದಿತೇಃ ಪುತ್ರೌ ದೈತ್ಯದಾನವಪೂಜಿತೌ ॥ ೩೪ ॥

ಹಿರಣ್ಯಕಶಿಪುರ್ಜ್ಯೇಷ್ಠೋ ಹಿರಣ್ಯಾಕ್ಷೋಽನುಜಸ್ತಥಾ ।
ಭಗವಾನ್ಯಜ್ಞವಾರಾಹೋ ಭೂತ್ವಾ ಕ್ಷ್ಮಾಮುದ್ಧರಂಜಲಾತ್ ॥ ೩೫ ॥

ಜಘಾನ ಮುಷ್ಟಿನಾ ದೈತ್ಯಂ ಹಿರಣ್ಯಾಕ್ಷಂ ಮಹಾಬಲಂ ।
ಹಿರಣ್ಯಕಶಿಪುಂ ಸಾಕ್ಷಾನ್ನೃಸಿಂಹಶ್ಚಂಡವಿಕ್ರಮಃ ॥ ೩೬ ॥

ದದಾರ ಜಠರೇ ತಂ ವೈ ಕಾಯಾಧವಸಹಾಯಕೃತ್ ।
ಭ್ರಾತರೌ ತೌ ಪ್ರಸಜಾತೌ ಕೇಶಿನ್ಯಾಂ ವಿಶ್ರವಃ ಸುತೌ ॥ ೩೭ ॥

---

೩೪. ಈ ರೀತಿ ಶಾಪಕ್ಕೀಡಾದ ಆ ದ್ವಾರಪಾಲಕರು ಕೂಡಲೇ ತಮ್ಮ ಸ್ಥಾನದಿಂದ ಪರಿಚ್ಯುತರಾಗಿ ಭೂಮಿಯಲ್ಲಿ ದಿತಿಯ ಪುತ್ರರಾಗಿ ಜನಿಸಿ ದೈತ್ಯದಾನವರಿಂದ ಬಹಳ ಗೌರವವನ್ನು ಪಡೆದರು.

೩೫. ಅವರಿಬ್ಬರಲ್ಲಿ ಹಿರಣ್ಯಕಶಿಪುವು ಹಿರಿಯವನು. ಹಿರಣ್ಯಾಕ್ಷನು ಕಿರಿಯವನು. ಓ ರಾಕ್ಷಸೇಂದ್ರ! ಕೆಲವು ಕಾಲಾನಂತರ ಶ್ರೀಹರಿಯು ನೀರಿನಲ್ಲಿ ಮುಳುಗಿ ಹೋಗುತ್ತಿದ್ದ ಭೂಮಿಯನ್ನು ಉದ್ಧರಿಸುವ ಸಲುವಾಗಿ ಯಜ್ಞವರಾಹರೂಪವನ್ನು ತಾಳಿದಾಗ--

೩೬. ಮಹಾಬಲಾಢ್ಯನಾದ ಹಿರಣ್ಯಾಕ್ಷನೆಂಬ ದೈತ್ಯನನ್ನು ತನ್ನ ಮುಷ್ಟಿಪ್ರಹಾರದಿಂದ ಸಂಹರಿಸಿದನು. ಅವನ ಅಣ್ಣನಾದ ಹಿರಣ್ಯಕಶಿಪುವನ್ನು ಅದೇ ಹರಿಯೇ ಅತಿತೀಕ್ಷ್ಣವಾದ ಪರಾಕ್ರಮವುಳ್ಳ ನರಸಿಂಹ ರೂಪವನ್ನು ತಾಳಿ -

೩೭. ಕಯಾದುವಿನ ಪುತ್ರನಾದ ಪ್ರಹ್ಲಾದನನ್ನು ಸಲಹುವ ಸಲುವಾಗಿ ಹೊಟ್ಟೆಯನ್ನು ಬಗೆದು ಕೊಂದುಬಿಟ್ಟನು. ಈ ರೀತಿ ತಮ್ಮ ಮೊದಲನೆಯ ಜನ್ಮವು ಕಳೆದನಂತರ ಆ ಸಹೋದರರು ವಿಶ್ರವಸ್ಸಿನ ಪತ್ನಿಯಾದ ಕೇಶಿನಿಯಲ್ಲಿ ರಾವಣ ಕುಂಭಕರ್ಣರೆಂಬ ಹೆಸರಿನಿಂದ ಜನ್ಮವೆತ್ತಿದರು.

ರಾವಣಃ ಕುಂಭಕರ್ಣಶ್ಚ ಸರ್ವಲೋಕೈಕತಾಪನೌ
ಸಾಯಕೈ ರಾಘವಸ್ಯಾಪಿ ಪೇತತುರ್ಯುದ್ಧಮಂಡಲೇ || ೩೮ ||

ರಾಕ್ಷಸೇಂದ್ರೌ ಮಹಾವೇಗೌ ಸಸೈನ್ಯೌ ಪಶ್ಯತಸ್ತವ |
ತೃತೀಯೇಽಸ್ಮಿನ್ಭವೇ ಜಾತೌ ಕ್ಷತ್ರಿಯಾಣಾಂ ಕುಲೇ ಕಿಲ || ೩೯ ||

ಶಿಶುಪಾಲೋ ದಂತವಕ್ತ್ರೋ ವರ್ತಮಾನೌ ಮಹಾಬಲೌ |
ಪರಿಪೂರ್ಣತಮಸ್ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ಸ್ವಯಂ || ೪೦ ||

ಅಸಂಖ್ಯಬ್ರಹ್ಮಾಂಡಪತಿರ್ಗೋಲೋಕೇಶಃ ಪರಾತ್ಪರಃ |
ಜಾತಸ್ತಯೋರ್ವಧಾರ್ಥಾಯ ಯದುವಂಶೇ ಹರಿಸ್ಸ್ವಯಂ || ೪೧ ||

ಯಾದವೇಂದ್ರೋ ಭೂರಿಲೀಲೋ ದ್ವಾರಕಾಯಾಂ ವಿರಾಜತೇ |
ಯುಧಿಷ್ಠಿರಮಹಾಯಜ್ಞೇ ಯುದ್ಧೇ ಶಾಲ್ವಸ್ಯ ಮಾಧವಃ || ೪೨ ||

ಶಿಶುಪಾಲಂ ದಂತವಕ್ತ್ರಂ ಹನಿಷ್ಯತಿ ನ ಸಂಶಯಃ |
ತಸ್ಯ ಪುತ್ರಃ ಶಂಬರಾರಿರ್ದಿಗ್ಜಯಾರ್ಥಂ ವಿನಿರ್ಗತಃ || ೪೩ ||

೩೮–೩೯. ಸಕಲ ಲೋಕಗಳಿಗೂ ಕಂಟಕರಾಗಿದ್ದ ಆ ಸೋದರರು ಶ್ರೀರಾಮನ ಬಾಣಗಳಿಂದ ಯುದ್ಧರಂಗದಲ್ಲಿ ನಿನ್ನ ಕಣ್ಣೆದುರಿಗೇ ಮಡಿದು ಬಿದ್ದರು. ಅನಂತರ ಮೂರನೆಯದಾದ ಈ ಜನ್ಮದಲ್ಲಿ–

೪೦. ಅವರಿಬ್ಬರೂ ಕ್ಷತ್ರಿಯ ವಂಶದಲ್ಲಿ ಶಿಶುಪಾಲ, ದಂತವಕ್ತ್ರರೆಂಬ ಮಹಾ ಶೂರರಾಗಿ ಅವತರಿಸಿರುವರು. ಅವರನ್ನು ಕೊಲ್ಲುವ ಸಲುವಾಗಿ ಸಂಪೂರ್ಣ ಸ್ವರೂಪನೂ,

೪೧. ಅಸಂಖ್ಯಾತವಾದ ಬ್ರಹ್ಮಾಂಡಗಳಿಗೆಲ್ಲಾ ಅಧಿಪತಿಯೂ, ಗೋಲೋಕ ನಾಥನೂ, ಪರಾತ್ಪರನೂ ಆದ ಸಾಕ್ಷಾತ್ ಶ್ರೀಹರಿಯೇ ಯದುವಂಶದಲ್ಲಿ ಶ್ರೀಕೃಷ್ಣ ನೆಂಬ ಹೆಸರಿನಿಂದ ಅವತರಿಸಿ ಯಾದವರಿಗೆಲ್ಲಾ ಪ್ರಭುವೆನಿಸಿ ನಾನಾ ವಿಧವಾದ ಲೀಲೆಗಳನ್ನು ತೋರ್ಪಡಿಸುತ್ತಾ ದ್ವಾರಕಾನಗರದಲ್ಲಿ ಮೆರೆಯುತ್ತಿರುವನು.

೪೨–೪೩. ಆ ಶ್ರೀಕೃಷ್ಣನು ಯುಧಿಷ್ಠಿರನು ರಾಜಸೂಯಯಾಗವನ್ನು ಮಾಡುವಾಗ ಶಾಲ್ವನೊಡನೆ ಯುದ್ಧ ಸಂಭವಿಸಿದ ಸಮಯದಲ್ಲಿ ಈ ಶಿಶುಪಾಲ, ದಂತವಕ್ತ್ರರನ್ನು ಅವಶ್ಯವಾಗಿ ನಿಗ್ರಹಿಸುವನು. ಆ ಕೃಷ್ಣನ ಪುತ್ರನಾದ ಪ್ರದ್ಯುಮ್ನನೇ ಈಗ ದಿಗ್ವಿಜಯಾರ್ಥವಾಗಿ ಹೊರಟಿರುವನು.

ವಿಜೇಷ್ಯತಿ ನೃಪಾನ್ಸರ್ವಾನ್ಜಂಬೂದ್ವೀಪಸ್ಥಿತಾನ್ನೃಪಾನ್ ।
ಜಿತೇಷು ಸತ್ಸು ದೇವೇಷು ದ್ವಾರಕಾಯಾಂ ಯದೂತ್ತಮಃ ॥
ಉಗ್ರಸೇನೋ ಭೋಜರಾಜೋ ರಾಜಸೂಯಂ ಕರಿಷ್ಯತಿ ॥ ೪೪ ॥

ತಸ್ಯಾಪಿ ಕೋದಂಡವಿನಿರ್ಗತೋ ಬಲಾ-
ತ್ಪ್ರಚಂಡವೇಗೋ ವಿಶಿಖಸ್ತ್ವಿಹಾಗತಃ ।
ತನ್ನಾಮ ಚಿಹ್ನೋಽತಿತಡಿತ್ಸ್ವನೋ ಬಭೌ
ಪ್ರದ್ಯೋತಯನ್ರಾಕ್ಷಸಮಂಡಲಂ ದಿಶಾಂ ॥ ೪೫ ॥

॥ ಶ್ರೀ ನಾರದ ಉವಾಚ ॥

ಶ್ರೀರಾಮಭಕ್ತೋಽಥ ವಿಭೀಷಣೋಽಸೌ
ವಿಜ್ಞಾಯ ಕೃಷ್ಣಂ ನೃಪ ರಾಮಚಂದ್ರಂ ।
ನೀತ್ವಾ ಬಲಿಂ ಕೌಣಪವೃಂದಮುಖ್ಯಃ
ಸಮಾಯಯೌ ಸುಂದರಶತ್ರುಸೇನಾಂ ॥ ೪೬ ॥

---

೪೪. ಆತನು ತನ್ನ ಪ್ರತಿಜ್ಞೆಯಂತೆ ಜಂಬೂದ್ವೀಪದಲ್ಲಿರುವ ಸಮಸ್ತರಾದ ರಾಜರನ್ನೂ ಗೆಲ್ಲುವನು. ಆ ರೀತಿ ಎಲ್ಲಾ ರಾಜರೂ ಜಯಿಸಲ್ಪಟ್ಟ ನಂತರ ದ್ವಾರಕಾ ನಗರಿಯಲ್ಲಿ ಯದುಶ್ರೇಷ್ಠನಾದ ಉಗ್ರಸೇನನೆಂಬ ಭೋಜವಂಶಕ್ಕೆ ಸೇರಿದ ರಾಜನು ರಾಜಸೂಯಯಾಗವನ್ನು ಮಾಡುವನು.

೪೫. ಓ ರಾಕ್ಷಸೇಂದ್ರ ! ಆ ಪ್ರದ್ಯುಮ್ನನ ಧನುರ್ಮಂಡಲದಿಂದ ಬಾಹುವೇಗ ಪೂರ್ವಕವಾಗಿ ಬಿಡಲ್ಪಟ್ಟ ಆತನ ನಾಮಚಿಹ್ನವನ್ನೊಳಗೊಂಡಿರುವ ಈ ಬಾಣವು ಸಿಡಿಲಿನಂತೆ ಧ್ವನಿಮಾಡುತ್ತಾ ದಿಕ್ಕುಗಳೆಲ್ಲವನ್ನೂ ತನ್ನ ತೇಜಸ್ಸಿನಿಂದ ತುಂಬುತ್ತಾ ಈ ಸಭಾಮಧ್ಯದಲ್ಲಿ ಬಂದು ಬಿದ್ದಿರುವುದು " ಎಂದನು.

೪೬. ಓ ಬಹುಲಾಶ್ವ ನರೇಂದ್ರ ! ಈ ರೀತಿ ಶುಕ್ರಾಚಾರ್ಯರು ಹೇಳಿದ ಮಾತನ್ನು ಕೇಳಿ, ಶ್ರೀರಾಮಚಂದ್ರನ ಭಕ್ತಾಗ್ರೇಸರನಾದ ಆ ವಿಭೀಷಣನು ತನ್ನ ಸ್ವಾಮಿಯಾದ ಶ್ರೀರಾಮಚಂದ್ರನೆಂದೇ ತಿಳಿದವನಾಗಿ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಮನೋಹರವಾಗಿರುವ ಆ ಯಾದವಸೇನೆಯ ಬಳಿಗೆ ಬಂದನು.

ತದಾವತೀರ್ಯಾಶು ಮಹಾಂಬರಾತ್ಸ್ಫುರ-
ದ್ಘನದ್ಯುತಿರ್ದೀರ್ಘವಪುರ್ಜಯೇಕ್ಷಣಃ ।
ಪ್ರದಕ್ಷಿಣೀಕೃತ್ಯ ಹರೇಃಸುತಂ ಪುನಃ
ಕೃತಾಂಜಲಿಃ ಸಂಮುಖ ಆಸ್ಥಿತೋಽಭೂತ್ ॥ ೪೭ ॥

॥ ವಿಭೀಷಣ ಉವಾಚ ॥

ನಮೋ ಭಗವತೇ ತುಭ್ಯಂ ವಾಸುದೇವಾಯ ವೇಧಸೇ ।
ಪ್ರದ್ಯುಮ್ನಾಯಾನಿರುದ್ಧಾಯ ನಮಃ ಸಂಕರ್ಷಣಾಯ ಚ ॥ ೪೮ ॥

ನಮೋ ಮತ್ಸ್ಯಾಯ ಕೂರ್ಮಾಯ ವರಾಹಾಯ ನಮೋ ನಮಃ ।
ನಮಃ ಶ್ರೀರಾಮಚಂದ್ರಾಯ ಭಾರ್ಗವಾಯ ನಮೋ ನಮಃ ॥ ೪೯ ॥

ವಾಮನಾಯ ನಮಸ್ತುಭ್ಯಂ ನೃಸಿಂಹಾಯ ನಮೋ ನಮಃ ।
ನಮೋ ಬುದ್ಧಾಯ ಶುದ್ಧಾಯ ಕಲ್ಕಯೇ ಚಾರ್ತಿಹಾರಿಣೇ ॥ ೫೦ ॥

---

೪೭. ಅಲ್ಲಿಗೆ ಬಂದೊಡನೆಯೇ ಮೇಘದಂತೆ ಕಪ್ಪಾದ ಕಾಂತಿಯಿಂದಲೂ ಎತ್ತರವಾದ ಶರೀರದಿಂದಲೂ, ಸರ್ವದಾ ಜಯವನ್ನು ಸೂಚಿಸುವ ಶುಭದೃಷ್ಟಿಯಿಂದಲೂ ಕಂಗೊಳಿಸುತ್ತಿದ್ದ ಆ ವಿಭೀಷಣನು ಅಂತರಿಕ್ಷದಿಂದ ಭೂಮಿಗೆ ಇಳಿದು ಬಂದು ಆ ಕೃಷ್ಣಪುತ್ರನಾದ ಪ್ರದ್ಯುಮ್ನನನ್ನು ಪ್ರದಕ್ಷಿಣೆಮಾಡಿ ಕೈಗಳನ್ನು ಮುಗಿದು ಕೊಂಡು ವಿನಯದಿಂದ ಆತನ ಎದುರಿನಲ್ಲಿ ನಿಂತುಕೊಂಡನು.

೪೮. ಅನಂತರ ಹೇ ಭಗವನ್, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣರೆಂಬ ಚತುರ್ವ್ಯೂಹ ಮೂರ್ತಿಸ್ವರೂಪನಾದ ನಿನಗೆ ನಮಸ್ಕಾರವು.

೪೯–೫೦. ಅದೇ ರೀತಿ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಬುದ್ಧ ಕಲ್ಕಿಗಳೆಂಬ ದಶಾವತಾರ ಮೂರ್ತಿಸ್ವರೂಪನಾಗಿ ಲೋಕಗಳ ದುಃಖವನ್ನು ಪರಿಹರಿಸುವ ಶುದ್ಧಸ್ವರೂಪನಾದ ನಿನಗೆ ನಮಸ್ಕಾರವು. ಎಂಬುದಾಗಿ ಸ್ತೋತ್ರಮಾಡಿದನು.

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಶ್ರೀಹರೇಃ ಪುತ್ರಂ ಪೂಜಯಾಮಾಸ ಮಾನದಃ ।
ಉಪಚಾರೈಃ ಷೋಡಶಭಿರ್ಭಕ್ತ್ಯಾ ಪರಮಯಾರ್ದ್ರವಾಕ್ ॥ ೫೧ ॥

ತಸ್ಮೈ ತುಷ್ಟಃ ಶಂಬರಾರಿರ್ದದೌ ಜ್ಞಾನಂ ವಿರಕ್ತಿಮತ್ ।
ಭಕ್ತಿಂ ಶಾಂತಿಕರೀಂ ಸಾಕ್ಷಾದ್ಯಾಂ ವಿದುಃ ಪ್ರೇಮಲಕ್ಷಣಾಂ ॥ ೫೨ ॥

ಬ್ರಹ್ಮದತ್ತಂ ಮಹಾದಿವ್ಯಂ ಪದ್ಮರಾಗಂ ಶಿರೋಮಣಿಂ ।
ಪೌಲಸ್ತ್ಯೇನ ಪುರಾ ದತ್ತಾಂ ರತ್ನಮಾಲಾಂ ಸ್ಫುರತ್ಪ್ರಭಾಂ ॥ ೫೩ ॥

ಚಂದ್ರಕಾಂತಮಣಿಂ ತಸ್ಮೈ ಚಂದ್ರದತ್ತಂ ದದೌ ಪುನಃ ।
ಪೀತಾಂಬರಂ ಪರಂ ಸಾಕ್ಷಾತ್ಪ್ರದ್ಯುಮ್ನಃ ಪರಮಃ ಪ್ರಭುಃ ॥ ೫೪ ॥

---

೫೧. ಓ ಮೈಥಿಲೇಂದ್ರ ! ಈ ರೀತಿಯಾಗಿ ಆ ರಾಕ್ಷಸೇಂದ್ರನಾದ ವಿಭೀಷಣನು ಸ್ತೋತ್ರಮಾಡಿದನಂತರ ಭಕ್ತ್ಯತಿಶಯದಿಂದ ಗದ್ಗದ ಸ್ವರವುಳ್ಳವನಾಗಿ ಷೋಡಶ ವಿಧವಾದ ಉಪಚಾರಗಳಿಂದ ಆ ಶ್ರೀಕೃಷ್ಣಪುತ್ರನನ್ನು ಪೂಜಿಸಿದನು.

೫೨. ಆಗ ಆ ಪ್ರದ್ಯುಮ್ನನು ವಿಭೀಷಣನ ವಿಷಯದಲ್ಲಿ ಸಂತೋಷವನ್ನು ತಾಳಿದವನಾಗಿ ಆತನಿಗೆ ವೈರಾಗ್ಯದಾಯಕವಾದ ಜ್ಞಾನವನ್ನೂ, ಶಾಂತಿಪ್ರದವಾದ ಪ್ರೇಮವಿಶೇಷವೆನಿಸಿದ ಭಕ್ತಿಯನ್ನೂ ಉಪದೇಶಿಸಿದನು.

೫೩–೫೪. ಅನಂತರ ಬ್ರಹ್ಮನಿಂದ ತನಗೆ ಕೊಡಲ್ಪಟ್ಟ ಅತ್ಯದ್ಭುತವಾದ ಪದ್ಮರಾಗಮಯವಾದ ಚೂಡಾಮಣಿಯನ್ನೂ, ಕುಬೇರನು ತನಗೆ ಇತ್ತಿದ್ದ ಅತಿಶಯವಾದ ಕಾಂತಿಯಿಂದ ಬೆಳಗುತ್ತಿರುವ ರತ್ನಮಾಲಿಕೆಯನ್ನೂ. ಚಂದ್ರನು ಕೊಟ್ಟಿದ್ದ ಚಂದ್ರಕಾಂತ ಮಣಿಯನ್ನೂ, ಬಹುಮಾನವಾಗಿ ಇತ್ತುದಲ್ಲದೆ, ತನ್ನ ದಿವ್ಯದುಕೂಲವಾದ ಪೀತಾಂಬರವನ್ನೂ ಪ್ರೀತಿಯಿಂದ ಇತ್ತನು.

ವಿಭೀಷಣೋಽಥ ಪ್ರದ್ಯುಮ್ನಂ ನತ್ವಾ ದತ್ವಾ ಬಲಿಂ ತತಃ ।
ಜಗಾಮ ಲಂಕಾಂ ಸಗಣೋ ರಾಕ್ಷಸೇಂದ್ರೋ ಮಹಾಬಲಃ ॥ ೫೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಶಾಲ್ವಮಲ್ಲಾರಲಂಕಾವಿಜಯೋ ನಾಮ ತ್ರಯೋದಶೋಽಧ್ಯಾಯಃ

---

೫೫. ಅನಂತರ ಮಹಾಬಲಶಾಲಿಯೂ, ರಾಕ್ಷಸಚಕ್ರವರ್ತಿಯೂ ಆದ ಆ ವಿಭೀಷಣನು ಪ್ರದ್ಯುಮ್ನನಿಗೆ ಕಪ್ಪಕಾಣಿಕೆಯನ್ನು ಒಪ್ಪಿಸಿ ಆತನನ್ನು ನಮಸ್ಕರಿಸಿ, ತನ್ನ ಪರಿವಾರದೊಡನೆ ಲಂಕಾನಗರಿಗೆ ಹಿಂದಿರುಗಿದನು" ಎಂದನು.

ಇಲ್ಲಿಗೆ ಶ್ರೀಗರ್ಗ ಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಶಾಲ್ವ, ಮಲ್ಲಾರಲಂಕಾವಿಜಯ ವೆಂಬ ಹದಿಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಚತುರ್ದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಋಷಭಾದ್ರಿಂ ತತೋ ದೃಷ್ಟ್ವಾ ಶ್ರೀರಂಗಾಖ್ಯಂ ಹರೇಃ ಸುತಃ ।
ಕಾಮಃ ಕಾರ್ಷ್ಣಿಃ ಪುರೀಂ ಕಾಂಚೀಂ ನದೀಂ ಪ್ರಾಚೀಂ ಸರಿದ್ವರಾಂ ॥ ೧ ॥

ಕಾವೇರೀಂ ಚ ತದೋತ್ತೀರ್ಯ ಸಹ್ಯಾದ್ರಿವಿಷಯಂ ಯಯೌ ।
ಯಾದವೈಃ ಸಹಿತಃ ಸಾಕ್ಷಾತ್ಪ್ರದ್ಯುಮ್ನೋ ಭಗವಾನ್ಹರಿಃ ॥ ೨ ॥

ಶಿಬಿರೇಷು ಸಮಾಯಾಂತಂ ಮುಕ್ತಕೇಶಂ ದಿಗಂಬರಂ ।
ಅವಧೂತಂ ಪ್ರಧಾವಂತಂ ಪುಷ್ಟಾಂಗಂ ರಜಸಾವೃತಂ ॥ ೩ ॥

ಹದಿನಾಲ್ಕನೆಯ ಅಧ್ಯಾಯವು

೧–೨. ಓ ಬಹುಲಾಶ್ವನರೇಂದ್ರ! ಅನಂತರ ಭಗವಂತನಾದ ಸಾಕ್ಷಾತ್ ಶ್ರೀಹರಿಸ್ವರೂಪನಾದ ಆ ಪ್ರದ್ಯುಮ್ನನು ಯಾದವರೆಲ್ಲರೊಡನೆ ಶ್ರೀರಂಗವೆಂದು ಪ್ರಖ್ಯಾತವಾದ ವೃಷಭಾಚಲವನ್ನು ಸಂದರ್ಶಿಸಿ ಅಲ್ಲಿಂದ ಕಾಂಚೀನಗರಿಯನ್ನೂ ನದಿಗಳಲ್ಲೆಲ್ಲಾ ಶ್ರೇಷ್ಠವೆನಿಸಿದ ಪ್ರಾಚೀನದಿಯನ್ನೂ ಅವಲೋಕಿಸಿ, ಆದಾದ ಬಳಿಕ ಕಾವೇರೀನದಿಯನ್ನು ದಾಟಿ ಸಹ್ಯಪರ್ವತದ ತಪ್ಪಲಿಗೆ ಸೇರಿದ ಪ್ರದೇಶಕ್ಕೆ ಬಂದನು.

೩–೪. ಓ ಮಿಥಿಲಾಧಿಪತೀ! ಆ ಪ್ರದ್ಯುಮ್ನನು ತನ್ನ ಸೇನಾಶಿಬಿರದಲ್ಲಿ ಮೈಮೇಲೆ ಬಟ್ಟೆಯಿಲ್ಲದೆ ತಲೆಯನ್ನು ಬಿರಿಹೊಯ್ದುಕೊಂಡು ಧೂಳುಮುಸುಕಿ ಮಲಿನವಾಗಿರುವ ತುಂಬಿದ ದೇಹದಿಂದ ಕೂಡಿರುವ ಅವಧೂತನೊಬ್ಬನು ಓಡುತ್ತಾ

ಬಾಲಾಸ್ತಮನುಧಾವಂತಸ್ತಲಶಬ್ದೈರಿತಸ್ತತಃ ।
ಕೋಲಾಹಲಂ ಪ್ರಕುರ್ವಂತೋ ಹಸಂತೋ ಮೈಥಿಲೇಶ್ವರ ॥ ೪ ॥

ತಂ ದೃಷ್ಟ್ವಾ ಚೋದ್ಧವಂ ಪ್ರಾಹ ಕಾರ್ಷ್ಣಿರ್ಬುದ್ಧಿಮತಾಂ ವರಃ ।

॥ ಪ್ರದ್ಯುಮ್ನ ಉವಾಚ ॥

ಕೋಽಯಂ ಪುಷ್ಟವಪುರ್ಧಾವನ್ಬಾಲೋನ್ಮತ್ತಪಿಶಾಚವತ್ ॥ ೫ ॥

ತಿರಸ್ಕೃತೋಽಪಿ ಹಸತಿ ಜನೈರಾನಂದವಾನ್ಮಹಾನ್ ॥ ೬ ॥

॥ ಉದ್ಧವ ಉವಾಚ ॥

ಅಯಂ ಪರಮಹಂಸಾಖ್ಯೋಽವಧೂತೋ ವಾ ಹರೇಃ ಕಲಾ ।
ಸದಾನಂದಮಯಃ ಸಾಕ್ಷಾದ್ದತ್ತಾತ್ರೇಯೋ ಮಹಾಮುನಿಃ ॥ ೭ ॥

ಬರುತ್ತಿರುವುದನ್ನು ಕಂಡನು. ಆ ಅವಧೂತನನ್ನು ಅಕ್ಕಪಕ್ಕದಲ್ಲಿ ಮುತ್ತಿಕೊಂಡು ಚಪ್ಪಾಳೆಗಳನ್ನು ತಟ್ಟುತ್ತಾ ಗಪ್ಪಲ ಮಾಡುತ್ತಿರುವ ಹುಡುಗರ ತಂಡವೊಂದು ಹಿಂದೆ ಹಿಂದೆ ಓಡಿಬರುತ್ತಿತ್ತು.

೫. ಅದನ್ನು ಕಂಡು ಪ್ರಾಜ್ಞರಲ್ಲೆಲ್ಲಾ ಅಗ್ರೇಸರನೆನಿಸಿದ ಪ್ರದ್ಯುಮ್ನನು ಮಂತ್ರಿಯಾದ ಉದ್ಧವನನ್ನು ಕುರಿತು ಈ ರೀತಿ ಧೃಷ್ಟಪುಷ್ಟನಾಗಿ ಹುಡುಗನಂತೆಯೂ, ಹುಚ್ಚನಂತೆಯೂ, ಪಿಶಾಚಗ್ರಸ್ತನಾದವನಂತೆಯೂ ಮೈಮೇಲೆ ಎಚ್ಚರಿಕೆಯಿಲ್ಲದೆ ಬರುತ್ತಿರುವ ಈತನಾರು ?

೬. ಆನಂದದಲ್ಲಿಯೇ ಮಗ್ನನಾಗಿರುವ ಈತನು ತನ್ನನ್ನು ಹೀಯಾಳಿಸಿದರೂ ಸಹ ನಗುನಗುತ್ತಲೇ ಇರುವನಲ್ಲಾ ! ಎಂಬುದಾಗಿ ಪ್ರಶ್ನಿಸಲು,

೭. ಆ ಉದ್ಧವನು ಈತನು ಸಾಕ್ಷಾತ್ ಶ್ರೀಹರಿಯ ಅವತಾರವೂ, ಸದಾನಂದ ಮಯನೂ, ಆದ ದತ್ತಾತ್ರೇಯ ಮಹಾಮುನಿಯು, ಈತನು ಸನ್ಯಾಸಾಶ್ರಮದಲ್ಲೆಲ್ಲಾ ಅತ್ಯುತ್ತಮವೆನಿಸಿದ ಪರಮಹಂಸವೆಂಬ ಗುಂಪಿಗೆ ಸೇರಿ ಅವಧೂತನಾಗಿ ಸಂಚರಿಸುತ್ತಿರುವನು.

ಯಸ್ಯ ಪ್ರಸಾದಾತ್ಪರಮಾಂ ಸಿದ್ಧಿಂ ಪ್ರಾಪುಃ ಪರೇಽನೃಪಾಃ ।
ಸಹಸ್ರಾರ್ಜುನಮುಖ್ಯಾ ಯೇ ಯದುಕಾಯಾಥವಾದಯಃ ॥ ೮ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ಶಂಬರಾರಿರ್ನತ್ವಾ ಸಂಪೂಜ್ಯ ತಂ ಮುನಿಂ ।
ಸಂಸ್ಥಾಪ್ಯ ಚಾಸನೇ ದಿವ್ಯೇ ಪಪ್ರಚ್ಛೇದಂ ಯದೂತ್ತಮಃ ॥ ೯ ॥

॥ ಪ್ರದ್ಯುಮ್ನ ಉವಾಚ ॥

ಭಗವನ್ಮೇ ಹೃದಿಸ್ಥಂ ವೈ ಸಂದೇಹಂ ನಾಶಯ ಪ್ರಭೋ ।
ಜಗತೋ ಬ್ರಹ್ಮಮಾರ್ಗಾಂಶ್ಚ ಹೇತ್ವಂತಂ ಬ್ರೂಹಿ ತತ್ತ್ವತಃ ॥ ೧೦ ॥

॥ ದತ್ತಾತ್ರೇಯ ಉವಾಚ ॥

ದೃಶ್ಯತೇ ನ ವಸುರ್ಯಾವತ್ತಾವದುಲ್ಕಾಪ್ರಯೋಜನಂ ।
ಪ್ರಾಪ್ತೇ ವಶೇ ಮಹಾನಂದೇಽಥೋಲ್ಕಾಯಾಃ ಕಿಂ ಪ್ರಯೋಜನಂ ॥ ೧೧ ॥

---

೮. ಈ ಮಹಾ ಮುನಿಯ ಅನುಗ್ರಹದಿಂದಲೇ ಕಾರ್ತವೀರ್ಯಾರ್ಜುನನೇ ಮೊದಲಾದ ಅನೇಕ ಮಂದಿ ನೃಪಾಲರೂ, ಯದು, ಪ್ರಹ್ಲಾದ ಮುಂತಾದವರೂ ಸಿದ್ಧಿಯನ್ನು ಪಡೆದರು ಎಂದನು.

೯. ಓ ಬಹುಲಾಶ್ವನೃಪಾಲ! ಈ ರೀತಿಯಾಗಿ ಉದ್ಧವನು ಹೇಳಿದ ಮಾತನ್ನು ಕೇಳಿ, ಆ ಪ್ರದ್ಯುಮ್ನಕುಮಾರನು ಆ ದತ್ತಾತ್ರೇಯ ಮಹಾಮುನಿಯನ್ನು ದಿವ್ಯವಾದ ಆಸನದಲ್ಲಿ ಕುಳ್ಳಿರಿಸಿ ನಮಸ್ಕಾರಪೂರ್ವಕವಾಗಿ ಪೂಜಾದಿಗಳಿಂದ ಸತ್ಕರಿಸಿ ಈ ರೀತಿ ಪ್ರಶ್ನಿಸಿದನು.

೧೦. ಹೇ ಭಗವನ್, ನನ್ನ ಮನಸ್ಸಿಗುಂಟಾಗಿರುವ ಸಂದೇಹವನ್ನು ಕೃಪೆಯಿಟ್ಟು ನಿವಾರಿಸು. ಈ ಜಗತ್ತು ಬ್ರಹ್ಮನನ್ನು ಸಾಕ್ಷಾತ್ಕರಿಸಲು ಇರುವ ಸಾಧನಗಳೇನು ? ಮತ್ತು ಇದರ ಕಾರಣವೇನು ? ಮತ್ತು ಈ ಜಗತ್ತಿನ ಕೊನೆಯಾದರೂ ಏನು ? ಇವೇ ನನ್ನ ಹೃದಯದಲ್ಲಿರುವ ಸಂದೇಹಗಳು.

೧೧. ಈ ರೀತಿ ಪ್ರದ್ಯುಮ್ನನು ಪ್ರಶ್ನಿಸಿದುದನ್ನು ಕೇಳಿ ದತ್ತಾತ್ರೇಯಮುನಿಯು ಇಂತೆಂದು ಉತ್ತರವಿತ್ತನು :—“ ಎಲ್ಲಿಯವರೆಗೆ ಬೆಂಕಿಯು ಕಾಣಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಕೊಳ್ಳಿಯ ಅಗತ್ಯವಿರುವುದು. ಆ ಬೆಂಕಿಯು ನಮ್ಮ ಕೈವಶವಾದ ನಂತರ ಕೊಳ್ಳಿಯು ಏತಕ್ಕೆ ಬೇಕಾಗುವುದು ?

ತಾವದಾಸ್ತೇ ಜಗತ್ಸಾರ್ಥೋ ಯಾವತ್ತತ್ತ್ವಂ ನ ವೇದ್ಯತೇ।
ಪರಸ್ಮಿನ್ಬ್ರಹ್ಮಣಿ ಪ್ರಾಪ್ತೇ ಜಗತಃ ಕಿಂ ಪ್ರಯೋಜನಂ ॥ ೧೨ ॥

ಆಸ್ಯಬಿಂಬೋ ಯಥಾದರ್ಶೇ ಪಶ್ಯತೇ ನ ಪರಂ ವಪುಃ।
ಪ್ರಧಾನಾರ್ಥೇ ತಥಾ ಜೀವೋ ಜ್ಞಾನೇನಾಸೌ ಪರಾತ್ಪರಂ ॥ ೧೩ ॥

ಯಥಾ ಸೂರ್ಯೋದಯೇ ಸರ್ವಂ ವಸ್ತು ನೇತ್ರೇಣ ದೃಶ್ಯತೇ।
ತಥಾ ಜ್ಞಾನೋದಯೇ ಬ್ರಹ್ಮ ತತ್ತ್ವಂ ಜೀವೇನ ಸರ್ವತಃ ॥ ೧೪ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾಽಥ ತಂ ನತ್ವಾ ಪ್ರದ್ಯುಮ್ನೋ ಯಾದವೇಶ್ವರಃ।
ವೈಕುಂಠಾದ್ರಿಂ ದ್ರಾವಿಡೇಷು ಯಯೌ ಸೇನಾಸಮನ್ವಿತಃ ॥ ೧೫ ॥

---

೧೨. "ಅದರಂತೆ ಈ ಜಗತ್ತೂ ಸಹ ತತ್ತ್ವವು ಮನವರಿಕೆಯಾಗುವವರೆಗೆ ನಮಗೆ ಬೇಕಾಗಿ ಇರುವುದು. ಆ ಪರವಸ್ತುವಾದ ಬ್ರಹ್ಮವು ಸಾಕ್ಷಾತ್ಕರಿಸಲ್ಪಟ್ಟ ನಂತರ ನಮಗೆ ಈ ಜಗತ್ತಿನ ಅವಶ್ಯಕತೆಯಾದರೂ ಏನು ?"

೧೩. ನಾವು ಕನ್ನಡಿಯನ್ನು ನೋಡಿಕೊಳ್ಳುವುದೇತಕ್ಕೆ ? ಮುಖವನ್ನು ಕಾಣುವುದಕ್ಕೋಸ್ಕರವಲ್ಲವೆ ? ಆರೀತಿ ದೇಹದಲ್ಲಿ ಉಳಿದ ಅಂಗಗಳನ್ನೆಲ್ಲಾ ಬಿಟ್ಟು ಮುಖವನ್ನೇ ನೋಡಿಕ್ಕೊಳ್ಳುವುದೇತಕ್ಕೆಂದರೆ, ಆ ಮುಖವು ದೇಹಕ್ಕೆಲ್ಲಾ ಪ್ರಧಾನ ವಾದುದೆಂದು ಹೇಳುವರಲ್ಲವೆ ? ಅದೇರೀತಿ ಜೀವನು ಜ್ಞಾನವೆಂಬ ದರ್ಪಣದಲ್ಲಿ ತನ್ನ ಪರಸ್ವರೂಪವಾದ ಆ ಪರಬ್ರಹ್ಮವನ್ನೇ ಸಾಕ್ಷಾತ್ಕರಿಸುವನು.

೧೪. ಸೂರ್ಯೋದಯವಾದನಂತರ ನಮ್ಮ ಕಣ್ಣು ಸಕಲ ವಸ್ತುಗಳನ್ನೂ ನೋಡಬಹುದಾದಂತೆ ಜ್ಞಾನೋದಯವಾದನಂತರ ಈ ಜೀವನು ಪರತತ್ತ್ವವೆನಿಸಿದ ಆ ಬ್ರಹ್ಮವಸ್ತುವನ್ನು ಸರ್ವತ್ರ ಸಾಕ್ಷಾತ್ಕರಿಸುವನು.

೧೫. ಓ ಮೈಥಿಲೇಂದ್ರ! ಈ ರೀತಿ ದತ್ತಾತ್ರೇಯ ಮಹಾಮುನಿಯಿಂದ ಉಪದೇಶವನ್ನು ಪಡೆದು, ತನ್ನ ಸಂಶಯಗಳೆಲ್ಲವನ್ನೂ ಪರಿಹರಿಸಿಕೊಂಡು, ಅಲ್ಲಿಂದ ಹೊರಟು ತನ್ನ ಸೇನೆಯೊಡನೆ ದ್ರಾವಿಡದೇಶದಲ್ಲಿರುವ ವೈಕುಂಠಾಚಲಕ್ಕೆ ಬಂದನು.

ಸತ್ಯವಾಕ್ ಧರ್ಮತತ್ತ್ವಜ್ಞೋ ರಾಜರ್ಷಿರ್ದ್ರಾವಿಡೇಶ್ವರಃ ।
ಪ್ರದ್ಯುಮ್ನಂ ಪೂಜಯಾಮಾಸ ಭಕ್ತ್ಯಾ ಪರಮಯಾ ಯುತಃ ॥ ೧೬ ॥

ಶ್ರೀಶೈಲದರ್ಶನಂ ಕೃತ್ವಾ ಗಿರಿಶಾಲಯಮದ್ಭುತಂ ।
ಸ್ಕಂದಂ ವೀಕ್ಷ್ಯ ತತೋ ರಾಜನ್ಯಯೌ ಪಂಪಾಸರೋವರೇ ॥ ೧೭ ॥

ಗೋದಾವರೀಂ ಭೀಮರಥೀಂ ಗತಃ ಶ್ರೀದ್ವಾರಕೇಶ್ವರಃ ।
ಪ್ರದರ್ಶಯನ್ಹರೇಸ್ತೀರ್ಥಂ ಮಹೇಂದ್ರಾದ್ರಿಂ ತತೋ ಯಯೌ ॥ ೧೮ ॥

ಮಹೇಂದ್ರಾದ್ರಿಂ ಸ್ಥಿತಂ ರಾಮಂ ಭಾರ್ಗವಂ ಕ್ಷತ್ರಿಯಾಂತಕಂ ।
ನತ್ವಾ ಪ್ರದಕ್ಷಿಣೀಕೃತ್ಯ ತತ್ರ ತಸ್ಥೌ ಹರೇಃ ಸುತಃ ॥ ೧೯ ॥

೧೬. ಅಲ್ಲಿ ದ್ರಾವಿಡದೇಶದ ಅಧಿಪತಿಯೂ ಧರ್ಮತತ್ತ್ವವನ್ನು ಚೆನ್ನಾಗಿ ಬಲ್ಲವನೂ ಆದ ಸತ್ಯವಾಕ್ಕೆಂಬ ರಾಜಋಷಿಯು ಅತಿಶಯವಾದ ಭಕ್ತಿಯಿಂದ ಆ ಪ್ರದ್ಯುಮ್ನನನ್ನು ಪೂಜಿಸಿದನು.

೧೭. ಬಳಿಕ ಅಲ್ಲಿಂದ ಹೊರಟು, ಶ್ರೀಶೈಲಕ್ಕೆ ಹೋಗಿ, ಅಲ್ಲಿರುವ ಅದ್ಭುತವಾದ ಶಿವದೇವಾಲಯವನ್ನೂ, ಅಲ್ಲಿಯೇ ನೆಲಸಿರುವ ಕುಮಾರಸ್ವಾಮಿಯನ್ನೂ ಸಂದರ್ಶಿಸಿದನಂತರ ಪಂಪಾಸರೋವರಕ್ಕೆ ತೆರಳಿದನು.

೧೮. ಅನಂತರ ಆ ದ್ವಾರಕಾಧಿಪತಿಯು ಗೋದಾವರಿಯನ್ನೂ, ಭೀಮರಥೀ ನದಿಯನ್ನೂ, ಹರಿತೀರ್ಥವನ್ನೂ ಸಂದರ್ಶನ ಮಾಡಿ, ಅಲ್ಲಿಂದ ಮಹೇಂದ್ರಪರ್ವತಕ್ಕೆ ಬಂದನು. ಬಳಿಕ

೧೯. ಆ ಮಹೇಂದ್ರಪರ್ವತದಲ್ಲಿಯೇ ನೆಲಸಿರುವ ಕ್ಷತ್ರಿಯರಿಗೆ ಮೃತ್ಯುವೆನಿಸಿದ ಭಾರ್ಗವರಾಮನನ್ನು ಕಂಡು ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸಿ ಅವನ ಬಳಿಯಲ್ಲಿ ನಿಂತನು.

ರಾಮಸ್ತಸ್ಮಾಶಿಷಂ ದತ್ವಾ ಯಾದವಾನಾಂ ಬಲಾಯ ವೈ ।
ಚತುರಂಗಾಯ ರಾಜೇಂದ್ರ ಯೋಗೇನಾರ್ಹಣಮಾಚರತ್ ॥ ೨೦ ॥

ಭಕ್ತಸೂಯಃ ಪ್ರಲೇಹಶ್ಚ ರುದಿಕಾದಧಿಶಾಕಜಾಃ ।
ಶಿಖರಿಣ್ಯವಲೇಹಶ್ಚ ಬಲಕಾಚಕ್ಷುಷೇರಿಣೇ ॥ ೨೧ ॥

ತ್ರಿಕೋಣಶರ್ಕರಾಯುಕ್ತೋ ಪಟಿಕೋ ಮಧುಶೀರ್ಷಕಃ ।
ಫೇಣಿಕಾ ಚೋಪರಿಷ್ಟಶ್ಚ ಶತಪತ್ರಃ ಸಛಿದ್ರಕಃ ॥ ೨೨ ॥

ಚಕ್ರಾಭಚಿಸ್ಥಕಾ ಚೇತ್ಥಂ ಸುಧಾಕುಂಡಲಿಕಾಃ ಸ್ಮೃತಾಃ ।
ಘೃತಪೂರೋ ವಾಯುಪೂರಸ್ತಥಾ ಚಂದ್ರಕಲಾಃ ಸ್ಮೃತಾಃ ॥ ೨೩ ॥

---

೨೦. ಆಗ ಆ ಪರಶುರಾಮನು ತನಗೆ ನಮಸ್ಕರಿಸಿದ ಆ ಪ್ರದ್ಯುಮ್ನನನ್ನು ಆಶೀರ್ವದಿಸಿ, ಗಜ, ತುರುಗ, ರಥ, ಪದಾತಿ ಸಮೇತವಾದ ಆ ಯಾದವಸೇನೆಗೆ ತನ್ನ ಯೋಗಶಕ್ತಿಯಿಂದ ಸತ್ಕಾರವನ್ನಾಚರಿಸಿದನು.

೨೧. ಆ ಸತ್ಕಾರವಲ್ಲಿ ಬೇಕುಬೇಕಾದ ಅನ್ನದ ರಾಶಿಗಳೂ, ತಾಳದಗಳೂ, ಮೊಸರು ಮತ್ತು ತರಕಾರಿಗಳನ್ನು ಹಾಕಿ ಮಾಡಿದ ರುದಿಕಾ ಎಂಬ ಒಂದು ಬಗೆಯ ಪಳಿದ್ಯಗಳೂ, ಶೀಖರಿಣಿಯೆಂಬ ನಂಜಿಕೊಳ್ಳುವಂತಹ ಉಪ್ಪಿನಕಾಯಿತರಹದ ರಸವೂ, ನೋಡಿದ ಮಾತ್ರಕ್ಕೆ ಕಣ್ಣನ್ನು ಅಪಹರಿಸುವಂತಹ ಬಲಕಾ ಎಂಬ ಪುಷ್ಟಿಕರವಾದ ಭಕ್ಷ್ಯವೂ ಒದಗಿಸಲ್ಪಟ್ಟಿದ್ದುವು.

೨೨. ಇದಲ್ಲದೆ ಮೂರು ಮೂಲೆಯುಳ್ಳ ಸಕ್ಕರೆಯಿಂದ ಮಾಡಿದ ಜೇನು ತುಪ್ಪದಲ್ಲಿ ಅದ್ದಿರುವ ಒಂದುಬಗೆಯ ಹೋಳಿಗೆಯೂ, ಪೇಣಿಯೂ, ನೂರಾರು ಪದರಗಳನ್ನೊಳಗೊಂಡ ಮಧ್ಯೆಮಧ್ಯೆ ರಂಧ್ರಗಳಿರುವ ಚಿರೋಟಿಯಂತಹ ಉಪರಿಷ್ಟ (?) ವೆಂಬ ಭಕ್ಷ್ಯವಿಶೇಷವೂ ಮಾಡಲ್ಪಟ್ಟಿತ್ತು.

೨೩. ಮತ್ತು ಚಕ್ರದಂತೆ ಗುಂಡಗಿರುವ ಸುರಳಿ ಸುರಳಿಯಾಗಿರುವ ಅಮೃತದಂತಿರುವ ಪಾಕದಿಂದ ತುಂಬಿದ ಭಕ್ಷ್ಯಗಳೂ, ತುಪ್ಪದಲ್ಲಿ ಕರಿದ ಪೂರಿಗಳೂ, ಚಂದ್ರಕಲಾ ಎಂಬ ಭಕ್ಷ್ಯಗಳೂ,

ದಧಿಸ್ಥಲಶ್ಚ ಕರ್ಪೂರನಾಡೀಸ್ಥಂ ಖಂಡಮಂಡಲಂ ।
ಗೋಧೂಮಪರಿರವಾಶ್ಚೈವ ಸುಫಲಾಢ್ಯಾಸ್ತಥೈವ ಚ　　　　॥ ೨೪ ॥

ದಧಿರೂಪೋ ಮೋದಕಶ್ಚ ಶಾಕಸೌಧಾನ ಏವ ಚ ।
ಮಂಡಕಾಪಾಯಸಂಯುಕ್ತಂ ದಧಿಗೋಘೃತಮೇವ ಚ　　　　॥ ೨೫ ॥

ಹೈಯ್ಯಂಗವೀನಮಂಡೂರೀಕುಪಿಕಾ ಪರ್ಪಟಸ್ತಥಾ ।
ಶಕ್ತಿಕಾ ಲಸಿಕಾ ಚೈವ ಸುವೃತ್ಸಂಧಾಯ ಏವ ಹಿ　　　　॥ ೨೬ ॥

ಸುಫಲೈಶ್ಚ ಸಿತಾಯುಕ್ತೈಃ ಫಲಾನಿ ವಿವಿಧಾನಿ ಚ ।
ಯಥಾ ಮೋಹನಭೋಗೈಶ್ಚ ಲವಣಂ ಚ ತಥೈವ ಚ　　　　॥ ೨೭ ॥

---

೨೪. ದಧಿಸ್ಥಲ, ಖಂಡಮಂಡಲವೆಂಬ ಕರ್ಪೂರದ ಸುವಾಸನೆಯನ್ನೊಳಗೊಂಡ ಬಳ್ಳಿಗಳಂತಿರುವ ತಿಂಡಿಗಳೂ, ರವೆಯ ಭಕ್ಷ್ಯಗಳೂ, ಬೇಕಾದಂತಹ ಹಣ್ಣುಗಳೂ.

೨೫. ದಧಿರೂಪ (?) ಮೋದಕಗಳು, ಶಾಕಸೌದಾನ (?) ಮಂಡಿಗೆ, ಪಾಯಸ, ಬೇಕಾದಷ್ಟು ಮೊಸರು, ಹಸುವಿನ ತುಪ್ಪ,

೨೬. ಆಗತಾನೇ ಕಾಸಿದ ತುಪ್ಪದಲ್ಲಿ ಮಾಡಿದ ಮಂಡೂರೀ ಕುಪಿಕಾ (?) ಎಂಬ ಭಕ್ಷ್ಯವೂ, ಹಪ್ಪಳ, ಶಕ್ತಿಕಾ (?) ಲಸಿಕಾ (ಲಸ್ಸೀ ಎಂಬುದಾಗಿ ಕರೆಯುವ ಮಜ್ಜಿಗೆ) ಸುವೃತ್, ಸಂದಾಯ ಎಂಬ ಭಕ್ಷ್ಯಗಳೂ,

೨೭. ನಾನಾವಿಧವಾದ ಸಕ್ಕರೆ ಹಚ್ಚಿದ ಹಣ್ಣುಗಳೂ, ಮೋಹನ ಭೋಗಗಳೆಂಬುದೂ, ಭಕ್ಷ್ಯಗಳೂ ಒದಗಿಸಲ್ಪಟ್ಟಿದ್ದುವು. ಮೇಲೆ ಹೇಳಿದ ಭಕ್ಷ್ಯಗಳಲ್ಲಿ ಕೆಲವುದರ ರುಚಿ ಉಪ್ಪು, ಕೆಲವುವರ ರುಚಿ ಒಗಚು. ಕೆಲವು ಸಿಹಿಯಾದ ರುಚಿಯುಳ್ಳವು. ಮತ್ತೆ ಕೆಲವು ಸ್ವಲ್ಪನುಚ್ಚಿಗೆ ಕಹಿಯನ್ನೊಳಗೊಂಡವು. ಇನ್ನು ಕೆಲವು ಖಾರದಿಂದ ಕೂಡಿದುವು. ಬೇರೆ ಕೆಲವು ಹುಳಿಯಾಗಿರುವಂತಹವು.

ಕಷಾಯೋ ಮಧುರಸ್ತಿಕ್ತಃ ಕಟುರಮ್ಲಸ್ತ್ವನೇಕಧಾ ।
ಷಟ್ಪಂಚಾಶತ್ತಮಶ್ಚೈವ ಹ್ಯೇತೇ ಭೋಗಾಃ ಪ್ರಕೀರ್ತಿತಾಃ ॥ ೨೮ ॥

ಏತೇಷಾಂ ಭಾರ್ಗವಃ ಶೈಲಾನಕಾರ್ಷೀದ್ಯೋಗಮಾಸ್ಥಿತಃ ।
ಸೈನ್ಯೇ ಸಂಭೋಜಿತೇ ತತ್ರ ಹ್ಯಸ್ತನ್ಯೂನಾ ನ ತೇ ಭವನ್ ॥ ೨೯ ॥

ವೈಭವಂ ಭಾರ್ಗವಸ್ಯಾಪಿ ದೃಷ್ಟ್ವಾ ಸರ್ವೇತಿವಿಸ್ಮಿತಾಃ ।
ಪ್ರದ್ಯುಮ್ನಸ್ತಂ ನಮಸ್ಕೃತ್ಯ ಯಾದವೈಃ ಸಹಿತಸ್ತದಾ ॥ ೩೦ ॥

ಸರ್ವೇಷಾಂ ಶೃಣ್ವತಾಂ ರಾಜನ್ಸಪ್ರಚ್ಛೇದಂ ಹರೇಃ ಸುತಃ ।

॥ ಪ್ರದ್ಯುಮ್ನ ಉವಾಚ ॥

ಭಗವನ್ಭವತಾ ದತ್ತಂ ಸರ್ವೇಭ್ಯೋ ಭೋಜನಂ ಪರಂ ॥ ೩೧ ॥

---

೨೮. ಹೀಗೆ ನಾನಾವಿಧವಾದ ರುಚಿಗಳನ್ನೊಳಗೊಂಡ ಆ ಭಕ್ಷ್ಯಗಳು ಐವತ್ತಾರು ಬಗೆಗಳಲ್ಲಿ ಮಾಡಲ್ಪಟ್ಟಿದ್ದುವು.

೨೯. ಓ ರಾಜೇಂದ್ರ! ಈ ಭಕ್ಷ್ಯಗಳ ಬೆಟ್ಟಗಳನ್ನೇ ಆ ಪರಶುರಾಮನು ತನ್ನ ಯೋಗಶಕ್ತಿಯಿಂದ ನಿರ್ಮಿಸಿಬಿಟ್ಟನು. ಪ್ರದ್ಯುಮ್ನನ ಸೇನೆಯು ಯಥೇಚ್ಛವಾಗಿ ತಿಂದು ತೇಗಿದರೂ ಆ ಭಕ್ಷ್ಯಪರ್ವತಗಳು ಒಂದು ಮೊಳದಷ್ಟಾದರೂ ಕಮ್ಮಿಯಾಗಲಿಲ್ಲ.

೩೦. ಈ ರೀತಿಯಾಗಿ ಆ ಭಾರ್ಗವರಾಮನ ಮಹಿಮೆಯನ್ನು ಕಂಡು ಎಲ್ಲರೂ ಬಹು ಆಶ್ಚರ್ಯವನ್ನು ತಾಳಿದರು. ಅನಂತರ ಪ್ರದ್ಯುಮ್ನನು ತನ್ನ ಕಡೆಯ ಯಾದವರೆಲ್ಲರೊಡನೆ ಆತನನ್ನು ನಮಸ್ಕರಿಸಿ ಎಲ್ಲರೂ ಕೇಳುವ ಹಾಗೆ ಈರೀತಿ ಹೇಳಿದನು.

೩೧. ಎಲೈ ಪೂಜ್ಯನೇ, ನಮ್ಮೆಲ್ಲರಿಗೂ ಅತ್ಯುತ್ಕೃಷ್ಟವಾದಂತಹ ಭೋಜನವನ್ನಿತ್ತು ನಮ್ಮನ್ನು ಸಂತೋಷಗೊಳಿಸಿರುವೆ.

ಸಮೃದ್ಧಯಃ ಸಿದ್ಧಯಶ್ಚ ತ್ವದಂಘ್ರಾವಾಸ್ಥಿತಾಃ ಪ್ರಭೋ ।
ಸರ್ವೇಷಾಂ ಹರಿಭಕ್ತಾನಾಂ ಪ್ರಿಯೋ ಭಕ್ತಸ್ತು ಕೋ ಹರೇಃ ॥
ಏತನ್ಮೇ ಬ್ರೂಹಿ ವಿಪ್ರೇಂದ್ರ ತ್ವಂ ಪರಾವರವಿತ್ತಮಃ ॥ ೩೨ ॥

॥ ಪರಶುರಾಮ ಉವಾಚ ॥

ತ್ವಂ ಪ್ರಭೋ ಕಿಂ ನ ಜಾನಾಸಿ ಲೋಕವತ್ಪೃಚ್ಛಸೇಽಥ ಮಾಂ ।
ಲೋಕಸಂಗ್ರಹಮೇವಾರಾತ್ಕುರ್ವನ್ವಿಚರಸಿ ಕ್ಷಿತೌ ॥ ೩೩ ॥

ನಿಷ್ಕಿಂಚನೋ ಹರಿಪಾದಾಬ್ಜಪರಾಗಲುಬ್ಧಃ
ಶ್ರೀಮತ್ಕಥಾಶ್ರವಣಕೀರ್ತನತತ್ಪರೋ ಯಃ ।
ತದ್ರೂಪಸಿಂಧುಲಹರೀವಿನಿಮಗ್ನಚಿತ್ತಃ
ಶ್ರೀಕೃಷ್ಣಚಂದ್ರದಯಿತಃ ಕಥಿತಃ ಸ ಭಕ್ತಃ ॥ ೩೪ ॥

---

೩೨. "ನಿನ್ನ ಪಾದಗಳಲ್ಲಿಯೇ ಎಲ್ಲ ಸಮೃದ್ಧಿಗಳೂ, ಸಿದ್ಧಿಗಳೂ ನೆಲಸಿರುವುವು. ಓ ಬ್ರಾಹ್ಮಣೋತ್ತಮ! ನೀನು ಪರಾಪರಗಳೆಲ್ಲವನ್ನೂ ಬಲ್ಲವನು. ಆದುದರಿಂದ ನನಗೆ ಶ್ರೀಹರಿಯ ಭಕ್ತರಲ್ಲೆಲ್ಲಾ ಯಾವನು ಆತನಿಗೆ ಪ್ರೀತಿಪಾತ್ರನಾದವನು" ಎಂಬುದನ್ನು ತಿಳಿಸಬೇಕು.

೩೩. ಎಂಬುದಾಗಿ ಆ ಪ್ರದ್ಯುಮ್ನನು ಪ್ರಾರ್ಥಿಸಲು ಪರಶುರಾಮನು ಇಂತೆಂದನು:—ಓ ಪ್ರಭು! ಇದೇನೀರೀತಿ ಸಾಮಾನ್ಯನಾದ ಮಾನವನಂತೆ ನನ್ನನ್ನು ಪ್ರಶ್ನಿಸುತ್ತಿರುವೆ? ನಿನಗೆ ತಿಳಿಯದೆ? ನೀನು ಲೋಕದ ಸ್ಥಿತಿಗತಿಗಳನ್ನು ಏರ್ಪಡಿಸುವ ಸಲುವಾಗಿಯೇ ಈರೀತಿ ಭೂಮಿಯಲ್ಲಿ ಸಂಚರಿಸುತ್ತಿರುವೆ.

೩೪. ಯಾವನು ತನ್ನದೆನ್ನುವುದು ಯಾವುದೂ ಇಲ್ಲದೆ ಶ್ರೀಹರಿಯ ಅರವಿಂದಸದೃಶವಾದ ಪಾದಯುಗಲದ ಧೂಳಿಯೊಂದರಲ್ಲೇ ಆಸಕ್ತನಾಗಿಯೂ, ಆ ಪರಮಾತ್ಮನ ಪುಣ್ಯಕಥೆಯನ್ನು ಶ್ರವಣಮಾಡುವುದರಲ್ಲೂ, ಕೀರ್ತನಮಾಡುವುದರಲ್ಲೂ ತಲ್ಲೀನನಾಗಿಯೂ, ಆ ಪ್ರಭುವಿನ ರೂಪವೆಂಬ ನದೀತರಂಗಗಳಲ್ಲಿ ಮಗ್ನವಾದ ಮನಸ್ಸುಳ್ಳವನಾಗಿಯೂ ಇರುವನೋ ಆತನೇ ಶ್ರೀಕೃಷ್ಣನಿಗೆ ಪ್ರೀತಿಪಾತ್ರನಾದವನು.

ದಾಂತೋ ಮಹಾನಖಿಲಜಂಗಮವತ್ಸಲೋಽಯಂ
ಶಾಂತಸ್ತಿತಿಕ್ಷುರತಿಕಾರುಣಿಕಃ ಸುಹೃತ್ಸತ್ ।
ಲೋಕಂ ಪುನಾತಿ ನಿಜಪಾದರಜೋಽಭಿರಾರಾ–
ಚ್ಛ್ರೀಕೃಷ್ಣಚಂದ್ರದಯಿತಃ ಕಥಿತಃ ಪರೇಶ ॥ ೩೫ ॥

ಯಃ ಪಾರಮೇಷ್ಠ್ಯಮಖಿಲಂ ನ ಮಹೇಂದ್ರಧಿಷ್ಣ್ಯಂ
ನೋ ಸಾರ್ವಭೌಮಮನಿಶಂ ನ ರಸಾಧಿಪತ್ಯಂ ।
ನೋ ಯೋಗಸಿದ್ಧಿಮಭಿತೋ ನ ಪುನರ್ಭವಂ ವಾ
ವಾಂಛತ್ಯಲಂ ಪರಮಪಾದರಜಃ ಸ ಭಕ್ತಃ ॥ ೩೬ ॥

ನಿಷ್ಕಿಂಚನಾಃ ಸ್ವಕೃತಕರ್ಮಫಲೈರ್ವಿರಾಗಾ
ಯತ್ತತ್ಪದಂ ಹರಿಜನಾ ಮುನಯೋ ಮಹಾಂತಃ ।

---

೩೫. ಯಾವನು ಇಂದ್ರಿಯಗಳನ್ನು ದಮನಮಾಡಿ, ದೊಡ್ಡತನದಿಂದ ವರ್ತಿಸುತ್ತಾ ಸಕಲ ಪ್ರಾಣಿಗಳಲ್ಲಿಯೂ ಮೈತ್ರಿಯನ್ನು ವಹಿಸಿ ಶಮೆ, ಕ್ಷಮೆ, ಕರುಣೆ ಮೊದಲಾದ ದಿವ್ಯಗುಣಗಳಿಂದ ಕೂಡಿದವನಾಗಿ ಒಳ್ಳೆಯ ಸ್ವಭಾವದಿಂದ ಇರುತ್ತಾ ಪ್ರಪಂಚವೆಲ್ಲವನ್ನೂ ತನ್ನ ಪಾದಧೂಳಿಯಿಂದಲೇ ಪಾವನಗೊಳಿಸುವನೋ ಅಂಥ ಭಕ್ತನು ನಿಜವಾಗಿಯೂ ಶ್ರೀಕೃಷ್ಣಚಂದ್ರನ ಪ್ರೀತಿಗೆ ಪಾತ್ರನಾದವನು.

೩೬. ಯಾವನು ಬ್ರಹ್ಮಪಟ್ಟವನ್ನಾಗಲೀ, ಸಾರ್ವಭೌಮ ಪದವಿಯನ್ನಾಗಲೀ, ಭೂಮಂಡಲದ ಆಧಿಪತ್ಯವನ್ನಾಗಲೀ, ಯೋಗಸಿದ್ಧಿಯನ್ನಾಗಲೀ, ಮರಳಿ ಜನ್ಮವನ್ನು ಪಡೆಯದಂತಹ ಸ್ಥಿತಿಯನ್ನಾಗಲೀ, ಅಪೇಕ್ಷಿಸದೆ ಕೇವಲ ಶ್ರೀಹರಿಯ ಚರಣಧೂಳಿಯೊಂದನ್ನೇ ಅಪೇಕ್ಷಿಸುವನೋ ಅವನೀಗ ನಿಜವಾದ ಭಕ್ತನೆನಿಸುವನು.

೩೭. ಯಾರು ನಿಷ್ಕಿಂಚನರಾಗಿ (ತನ್ನದೆನ್ನುವುದು ಯಾವುದೂ ಇಲ್ಲದವರು) ತಾವು ಮಾಡಿದ ಪುಣ್ಯಫಲವನ್ನಾಗಲಿ ಬಯಸದೆ ವೈರಾಗ್ಯವನ್ನು ವಹಿಸಿರುತ್ತಾ ಶ್ರೀಹರಿಯ ಪಾದಧೂಳಿಯೊಂದನ್ನೇ ನಂಬಿ ಇರುವರೋ ಅಂಥ ಮಹಾನುಭಾವರಾದ

ಭಕ್ತಾ ಜುಷಂತಿ ಹರಿಪಾದರಜಃ ಪ್ರಸಕ್ತಾ
ಅನ್ಯೇ ವಿದಂತಿ ನ ಸುಖಂ ಕಿಲ ನೈರಪೇಕ್ಷ್ಯಂ || ೩೭ ||

ಭಕ್ತಾತ್ಪ್ರಿಯೋ ನ ವಿದಿತಃ ಪುರುಷೋತ್ತಮಸ್ಯ
ಶಂಭುರ್ವಿಧಿರ್ನ ಚ ರಮಾ ನ ಚ ರೌಹಿಣೇಯಃ ।
ಭಕ್ತಾ ನನು ವ್ರಜತಿ ಭಕ್ತನಿಬದ್ಧಚಿತ್ತ-
ಚೂಡಾಮಣಿಃ ಸಕಲಲೋಕಜನಸ್ಯ ಕೃಷ್ಣಃ || ೩೮ ||

ಗಚ್ಛನ್ನಿಜಂ ಜನಮನು ಪ್ರಪುನಾತಿ ಲೋಕಾ-
ನಾವೇದಯನ್ಹರಿಜನೇ ಸ್ವರುಚಿಂ ಮಹಾತ್ಮಾ ।
ತಸ್ಮಾದತೀವ ಭಜತಾಂ ಭಗವಾನ್ಮುಕುಂದೋ
ಮುಕ್ತಿಂ ದದಾತಿ ನ ಕದಾಪಿ ಸುಭುಕ್ತಿಯೋಗಂ || ೩೯ ||

ಮುನಿಗಳು ಪಡೆಯುವಂತಹ ಸುಖಕರವಾದ ಪದವಿಯನ್ನು ಮತ್ತಾರೂ ಹೊಂದ ಲಾರರು.

೩೮. ಆ ಪುರುಷೋತ್ತಮನಾದ ಶ್ರೀಹರಿಗೆ ಶಿವನಾಗಲಿ, ಬ್ರಹ್ಮನಾಗಲಿ, ಬಲದೇವನಾಗಲಿ, ಯಾರಾದರೂ ಸಹ ತನ್ನ ಭಕ್ತನಿಗಿಂತಲೂ ಹೆಚ್ಚಾಗಿ ಪ್ರೀತಿಯ ನ್ನುಂಟುಮಾಡಲಾರರು. ಸಮಸ್ತವಾದ ಲೋಕಗಳಲ್ಲಿರುವ ಜನರಿಗೆಲ್ಲಾ ಚೂಡಾಮಣಿ ಯಂತಿರುವ ಆ ಶ್ರೀಹರಿಯು ಭಕ್ತರಲ್ಲಿಯೇ ನೆಲಸಿಹೋದ ಮನಸ್ಸುಳ್ಳವನಾಗಿ ಅವರ ಹಿಂದೆ ಹಿಂದೆಯೇ ತಿರುಗುತ್ತಿರುವನು.

೩೯. ಆ ಮಹಾನುಭಾವನು ಭಕ್ತರಲ್ಲಿ ತನಗಿರುವ ನಿಜವಾದ ಪ್ರೇಮವನ್ನು ವ್ಯಕ್ತಗೊಳಿಸುತ್ತಾ ಅವರನ್ನು ಹಿಂಬಾಲಿಸಿಯೇ ನಡೆಯುತ್ತಾ ಇರುವುದರಿಂದ ಪ್ರಪಂಚ ವನ್ನೇ ಪಾವನಗೊಳಿಸುತ್ತಿರುವನು. ಆದುದರಿಂದ ಭಗವಂತನಾದ ಆ ಮುಕುಂದನು ತನ್ನನ್ನು ವಿಶೇಷವಾಗಿ ಭಜಿಸುವಂತಹ ಭಕ್ತರಿಗೆ ಮುಕ್ತಿಯನ್ನು ಎಂದಿಗೂ ಕೊಡದೆ ದಿವ್ಯವಾದ ಭಕ್ತಿಯೋಗವನ್ನೇ ಕರುಣಿಸುವನು" ಎಂದನು.

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ಯಾದವೇಂದ್ರೋ ನತ್ವಾ ಶ್ರೀ ಭಾರ್ಗವೋತ್ತಮಂ ।
ಪ್ರಾಚ್ಯಾಂ ದಿಶಿ ಯಯೌ ರಾಜನ್ಗಂಗಾಸಾಗರಸಂಗಮಂ ॥ ೪೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ದ್ರಾವಿಡದೇಶವಿಜಯೋ ನಾಮ ಚತುರ್ದಶೋಽಧ್ಯಾಯಃ

---

೪೦. ಈ ರೀತಿಯಾಗಿ ಪರಶುರಾಮನು ಉಪದೇಶಿಸಿದುದನ್ನು ಕೇಳಿ ಪ್ರದ್ಯುಮ್ನನು ಆತನನ್ನು ನಮಸ್ಕರಿಸಿ ಅಲ್ಲಿಂದ ಪೂರ್ವಾಭಿಮುಖನಾಗಿ ಗಂಗಾಸಾಗರ ಸಂಗಮಕ್ಕೆ ತೆರಳಿದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ದ್ರಾವಿಡದೇಶದ ವಿಜಯವೆಂಬ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಪಂಚದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ದಿಗ್ಜಯಸ್ಯ ಮಿಷೇಣಾಸೌ ಭೂಭಾರಂ ಹಾರಯನ್ಮುಹುಃ ।
ಪ್ರದ್ಯುಮ್ನೋ ಭಗವಾನ್ಸಾಕ್ಷಾದಂಗದೇಶಂ ತತೋ ಯಯೌ ॥ ೧ ॥

ಅಂಗೇಶೋಽಂತಃಪುರಾಧೀಶೋ ಗೃಹೀತೋ ಯಾದವೈರ್ವನೇ ।
ಸೋಽಪಿ ತಸ್ಮೈ ಬಲಿಂ ಪ್ರಾದಾತ್ಪ್ರದ್ಯುಮ್ನಾಯ ಮಹಾತ್ಮನೇ ॥ ೨ ॥

ಉಡ್ಡೀಶಡಾಮರಾಧೀಶೋ ಬೃಹದ್ಬಾಹುರ್ಮಹಾಬಲಃ ।
ನ ತದೌ ಸ ಬಲಿಂ ತಸ್ಮೈ ಪ್ರದ್ಯುಮ್ನಾಯ ಮದೋತ್ಕಟಃ ॥ ೩ ॥

ಹದಿನೈದನೆಯ ಅಧ್ಯಾಯವು

೧. ನಾರದಮಹರ್ಷಿಯು ಹೇಳತೊಡಗಿದನು :—ರಾಜೇಂದ್ರ ! ಆಲಿಸು. ಬಳಿಕ ಸಾಕ್ಷಾದ್ಭಗವಂತನೆನಿಸಿದ ಆ ಪ್ರದ್ಯುಮ್ನನು ದಿಗ್ವಿಜಯದ ನೆವದಿಂದ ಭೂಮಿಯ ಭಾರವನ್ನು ಪರಿಹರಿಸಲೆಳಸಿ ಅಂಗದೇಶಕ್ಕೆ ಅಭಿಮುಖನಾಗಿ ತೆರಳಿದನು.

೨. ಆ ಅಂಗದೇಶಾಧಿಪತಿಯು ತನ್ನ ಅಂತಃಪುರಸ್ತ್ರೀಯರೊಡನೆ ಆಗ ಉಪವನದಲ್ಲಿ ವಿಹರಿಸುತ್ತಿದ್ದನು. ಆ ಸಮಯದಲ್ಲಿಯೇ ಯದುವೀರರು ಅವನನ್ನು ಮುತ್ತಿ ಹಿಡಿದುಬಿಟ್ಟರು. ಆ ರಾಜನು ಪ್ರದ್ಯುಮ್ನನಿಗೆ ಕಪ್ಪಕಾಣಿಕೆಗಳನ್ನೊಪ್ಪಿಸಿದನು.

೩. ಅಲ್ಲಿಂದ ಮುಂದಕ್ಕೆ ಬರುತ್ತಿರುವಾಗ ಉಡ್ಡೀಶಡಾಮರವೆಂಬ ದೇಶಕ್ಕೆ ಅಧಿಪತಿಯಾದ ಮಹಾಬಲಿಷ್ಠನಾದ ಬೃಹದ್ಬಾಹುವೆಂಬ ಅರಸನು ಮದಾಂಧನಾಗಿ ಪ್ರದ್ಯುಮ್ನನಿಗೆ ಕಪ್ಪಕಾಣಿಕೆಗಳನ್ನೊಪ್ಪಿಸಲಿಲ್ಲ.

ಪ್ರದ್ಯುಮ್ನಪ್ರೇಷಿತೋ ವೀರಃ ಸಾಂಬೋ ಜಾಂಬವತೀಸುತಃ ।
ಏಕಾಕೀ ಪ್ರಯಯೌ ಧನ್ವೀ ರಥೇನಾದಿತ್ಯವರ್ಚಸಾ ॥ ೪ ॥

ಛಾದಯಾಮಾಸ ಬಾಣೌಘೈರ್ಡಾಮರಂ ನಗರಂ ನೃಪ ।
ಗಿರಿಂ ತುಷಾರಪಟಲೈರ್ಜೀಮೂತ ಇವ ಸರ್ವತಃ ॥ ೫ ॥

ತದಾ ತು ಡಾಮರಾಧೀಶೋ ಧರ್ಷಿತಃ ಸನ್ಕೃತಾಂಜಲಿಃ ।
ಬಲಿಂ ದದೌ ನಮಸ್ಕೃತ್ಯ ಪ್ರದ್ಯುಮ್ನಾಯ ಮಹಾತ್ಮನೇ ॥ ೬ ॥

ವಂಗದೇಶಾಧಿಪೋ ವೀರೋ ವೀರಧನ್ವಾ ಮದೋತ್ಕಟಃ ।
ಆಯಯೌ ಸಂಮುಖೇ ಯೋದ್ಧುಮಕ್ಷೌಹಿಣ್ಯಾ ವೃತೋ ಬಲೀ ॥ ೭ ॥

ಚಂದ್ರಭಾನುರ್ಹರೇಃ ಪುತ್ರಃ ಪ್ರದ್ಯುಮ್ನಸ್ಯ ಪ್ರಪಶ್ಯತಃ ।
ಬಿಭೇದ ತದ್ಬಲಂ ಬಾಣೈಃ ಕುವಾಕ್ಯೈರ್ಮಿತ್ರತಾಮಿವ ॥ ೮ ॥

---

೪. ಆಗ ಪ್ರದ್ಯುಮ್ನನ ಅಪ್ಪಣೆಯನ್ನು ಪಡೆದು ಜಾಂಬವತೀಪುತ್ರನಾದ ಸಾಂಬನು ತಾನೊಬ್ಬನೇ ಏಕಾಂಗಿಯಾಗಿ, ಸೂರ್ಯನಂತೆ ಜ್ವಲಿಸುತ್ತಿರುವ ರಥವನ್ನೇರಿ ಕುಳಿತು ಆ ರಾಜನ ಮೇಲೆ ಧನುರ್ಧಾರಿಯಾಗಿ ತೆರಳಿದನು.

೫. ಆ ವೀರನು ಆ ಡಾಮರವೆಂಬ ನಗರವನ್ನು ಮೇಘವು ಹಿಮವರ್ಷದಿಂದ ಮಹಾಗಿರಿಯನ್ನು ಮುಚ್ಚಿಬಿಡುವಂತೆ ತನ್ನ ಬಾಣವರ್ಷದಿಂದ ಮುಚ್ಚಿಬಿಟ್ಟನು.

೬. ಆಗ ಆ ಡಾಮರದೇಶಾಧಿಪತಿಯು ಸಾಂಬನಿಂದ ಪರಾಜಿತನಾಗಿಬಿಟ್ಟನು. ಬಳಿಕ ಅವನು ಬದ್ಧಾಂಜಲಿಯಾಗಿ ಆ ಮಹಾನುಭಾವನಾದ ಪ್ರದ್ಯುಮ್ನನನ್ನು ನಮಸ್ಕರಿಸಿ ಆತನಿಗೆ ಕಪ್ಪಕಾಣಿಕೆಗಳನ್ನೊಪ್ಪಿಸಿದನು.

೭. ಅನಂತರ ಅಲ್ಲಿಂದ ಮುಂದಕ್ಕೆ ಬರುತ್ತಿರುವಾಗ ವಂಗದೇಶಾಧಿಪತಿಯಾದ ವೀರಧನ್ವನೆಂಬ ರಾಜನು ಮಹಾಮದದಿಂದ ಮೆರೆಯುತ್ತಾ ತನ್ನ ಕಡೆಯ ಒಂದು ಅಕ್ಷೋಹಿಣೀ ಸೇನೆಯೊಡಗೂಡಿ ಆ ಪ್ರದ್ಯುಮ್ನನ ಮೇಲೆ ಯುದ್ಧಕ್ಕೆ ಬಂದನು.

೮. ಆಗ ಶ್ರೀಕೃಷ್ಣನ ಮಗನಾದ ಚಂದ್ರಭಾನುವು ಆ ಪ್ರದ್ಯುಮ್ನನು ನೋಡುತ್ತಿರುವಂತೆಯೇ ಆ ವಂಗದೇಶಾಧಿಪತಿಯ ಸೇನೆಯನ್ನು ಕುತ್ಸಿತ ವಾಕ್ಯಗಳಿಂದ ಮೈತ್ರಿಯನ್ನು ಮುರಿಯುವಂತೆ ತನ್ನ ಬಾಣಗಳಿಂದ ಕತ್ತರಿಸಿಬಿಟ್ಟನು.

ಕರಿಣಾಂ ಬಾಣಭಿನ್ನಾನಾಂ ಶಿರಸೋ ಮೌಕ್ತಿಕಾನಿ ಚ ।
ಪ್ರಸ್ಫುರಂತಿ ನಿಪೇತುಃ ಕೌ ರಾತ್ರೌ ತಾರಾಗಣಾ ಇವ　　　　॥ ೯ ॥

ನಿಪೇತೂ ರಥಿನೋಽನೇಕಾ ಗಜಾಶ್ವಾಶ್ಚ ಪದಾತಯಃ ।
ತದ್ಬಾಣೈಶ್ಛಿನ್ನ ಶಿರಸಃ ಕೂಷ್ಮಾಂಡಶಕಲಾ ಇವ　　　　॥ ೧೦ ॥

ಕ್ಷಣಮಾತ್ರೇಣ ತತ್ಸೈನ್ಯಕ್ಷತಜಾನಾಂ ನದೀ ಹ್ಯಭೂತ್ ।
ಮನಸ್ವಿನಾಂ ಹರ್ಷಕರೀ ತ್ರಸ್ತಾನಾಂ ಭಯಕಾರಿಣೀ　　　　॥ ೧೧ ॥

ಮುಂಡೈಃ ಕಬಂಧೈರ್ಧಾವದ್ಭಿರ್ಹಾರಕೇಯೂರಕುಂಡಲೈಃ ।
ಕಿರೀಟೈಃ ಕಂಕಣೈಃ ಶಸ್ತ್ರೈರ್ಮಹಾಮಾರೀವ ಭೂರ್ಬಭೌ　　　　॥ ೧೨ ॥

---

೯. ರಾಜೇಂದ್ರ ! ಆ ಚಂದ್ರಭಾನುವಿನ ಬಾಣಪ್ರಹಾರಗಳಿಂದ ಆ ವಂಗ ರಾಜನ ಕಡೆಯ ಸೇನೆಯಲ್ಲಿದ್ದ ಆನೆಗಳ ಕುಂಭಸ್ಥಳಗಳೆಲ್ಲವೂ ಭೇದಿಸಲ್ಪಟ್ಟು ಹೊಳೆ ಹೊಳೆಯುತ್ತಿರುವ ಮುತ್ತುಗಳು ರಾತ್ರಿಯ ವೇಳೆ ಆಕಾಶದಿಂದ ಉದುರುವ ನಕ್ಷತ್ರಗಳಂತೆ ಕಂಗೊಳಿಸಿದುವು.

೧೦. ಮತ್ತು ಆ ಬಾಣಗಳ ಪೆಟ್ಟಿನಿಂದ ತಲೆ ಕಡಿಯಲ್ಪಟ್ಟ ಅನೇಕ ಮಂದಿ ರಥಿಕರೂ, ಆನೆಗಳೂ, ಕುದುರೆಗಳೂ, ಕಾಲಾಳುಗಳೂ ತುಂಡರಿಸಿದ ಕುಂಬಳಕಾಯಿ ಹೋಳುಗಳಂತೆ ಕೆಳಗೆ ಉರುಳಿದರು.

೧೧. ಆ ಯುದ್ಧರಂಗದಲ್ಲಿ ಕ್ಷಣಮಾತ್ರದಲ್ಲಿಯೇ ಮಡಿದು ಬಿದ್ದ ಆ ಶತ್ರು ಸೇನೆಯ ಶರೀರಗಳಿಂದ ರಕ್ತವು ಹೊಳೆಯಂತೆ ಹರಿಯತೊಡಗಿತು. ಅದನ್ನು ಕಂಡರೆ ವೀರರಾದವರಿಗೆ ಮತ್ತಷ್ಟು ಹರ್ಷವೂ, ಹೇಡಿಗಳಿಗೆ ಅತಿಶಯವಾದ ಹೆದರಿಕೆಯೂ ಉಂಟಾಗುತ್ತಿದ್ದಿತು.

೧೨. ಆಗ ಆ ಯುದ್ಧಭೂಮಿಯು ಮಡಿದುಬಿದ್ದ ವೀರರ ಇತ್ತಲಿಂದತ್ತ ಹರಿದಾಡುವ ತಲೆ ಕಡಿದುಹೋದ ಮುಂಡಗಳಿಂದಲೂ, ಕೆಳಗೆ ಉರುಳಿಬಿದ್ದ ಹಾರ, ತೋಳು ಬಳೆ, ಕಿರೀಟ, ಕಡಗ, ಮುಂತಾದ ಆಭರಣಗಳಿಂದಲೂ ಆಯುಧಗಳಿಂದಲೂ ಕೂಡಿ ಮಹಾ ಮಾರಿಯಂತೆ ಕಂಗೊಳಿಸಿತು.

ಕೂಷ್ಮಾಂಡೋನ್ಮಾದವೇತಾಲಾ ಭೈರವಾ ಬ್ರಹ್ಮರಾಕ್ಷಸಾಃ ।
ಶಿರಾಂಸಿ ಜಗೃಹುರ್ವೇಗಾದ್ಧರಮಾಲಾರ್ಥ ಹೇತವೇ ॥ ೧೩ ॥

ಇತ್ಥಂ ನಿಪಾತಿತೇ ಸೈನ್ಯೇ ವೀರಧನ್ವಾ ಸಮಾಗತಃ ।
ಚಂದ್ರಭಾನುಂ ತತಾಡಾಶು ಗದಯಾ ವಜ್ರಕಲ್ಪಯಾ ॥ ೧೪ ॥

ತದ್ಗದಾತಿಪ್ರಹಾರೇಣ ನ ಚಚಾಲ ಹರೇಃ ಸುತಃ ।
ಚಂದ್ರಭಾನುರ್ಗದಾಂ ನೀತ್ವಾ ತಂ ತತಾಡ ಭುಜಾಂತರೇ ॥ ೧೫ ॥

ಗದಾಪ್ರಹಾರವ್ಯಥಿತೋ ಮೂರ್ಚ್ಛಿತೋ ಧರಣೀತಲೇ ।
ಪಪಾತ ಪಾದಪ ಇವ ಪ್ರೋದ್ವಮನ್ರುಧಿರಂ ಮುಖಾತ್ ॥ ೧೬ ॥

---

೧೩. ಆಗ ಕೂಶ್ಮಾಂಡ, ಉನ್ಮಾದ, ವೇತಾಲ, ಭೈರವ, ಬ್ರಹ್ಮರಾಕ್ಷಸರೆಂಬ ಪ್ರಭೇದಗಳಿಗೊಳಪಟ್ಟ ಪಿಶಾಚಗಣಗಳು ಶಿವನ ರುಂಡಮಾಲೆಯ ಸಲುವಾಗಿ ಆ ಕಡಿದುರುಳಿದ ತಲೆಗಳನ್ನು ತಟ್ಟನೆ ತೆಗೆದುಕೊಳ್ಳುತ್ತಿದ್ದುವು.

೧೪. ಈ ರೀತಿ ತನ್ನ ಕಡೆಯ ಸೇನೆಯೆಲ್ಲವೂ ಮಡಿದುಹೋಗಲಾಗಿ, ಕುಪಿತನಾದ ಆ ವೀರಧನ್ವರಾಜನು ಚಂಪ್ರಭಾನುವಿಗೆದುರಾಗಿ ಬಂದು ತನ್ನ ವಜ್ರಸಮಾನವಾದ ಗದೆಯಿಂದ ಅವನ ಮೇಲೆ ಬೀಸಿ ಹೊಡೆದನು.

೧೫. ಆದರೇನು ? ಆ ಗದಾಪ್ರಹಾರದಿಂದ ಶ್ರೀಕೃಷ್ಣಪುತ್ರನಾದ ಆ ಚಂದ್ರಭಾನುವು ಸ್ವಲ್ಪವೂ ಅಲುಗಲಿಲ್ಲ. ಕೂಡಲೇ ತನ್ನ ಗದೆಯನ್ನು ತೆಗೆದುಕೊಂಡು ಆ ವೀರಧನ್ವನ ಎದೆಯ ಮೇಲೆ ಬಲವಾಗಿ ಅಪ್ಪಳಿಸಿದನು.

೧೬. ಆ ಗದಾಪ್ರಹಾರವನ್ನು ತಾಳಲಾರದೆ ಅವರ ನೋವಿನಿಂದ ಆ ವಂಗದೇಶಾಧಿಪತಿಯು ಬಾಯಿಂದ ರಕ್ತವನ್ನು ಕಕ್ಕುತ್ತಾ, ಬುಡಸಹಿತ ಬೀಳುವ ಭಾರಿ ಮರವಂತೆ ನೆಲದಮೇಲೆ ಮೂರ್ಛಿತನಾಗಿ ಬಿದ್ದುಬಿಟ್ಟನು.

ಲಬ್ಧಸಂಜ್ಞೋ ಮುಹೂರ್ತೇನ ವಂಗದೇಶಾಧಿಪೋ ನೃಪಃ ।
ಪ್ರಯಯೌ ಶರಣಂ ಸೋಽಪಿ ಪ್ರದ್ಯುಮ್ನಸ್ಯ ಮಹಾತ್ಮನಃ ॥ ೧೭ ॥

ಯಾತೇ ದತ್ತಬಲೌ ರಾಜನ್ನಗರಂ ವೀರಧನ್ವನಿ ।
ಬ್ರಹ್ಮಪುತ್ರಂ ಸಮುತ್ತೀರ್ಯ ಪ್ರದ್ಯುಮ್ನೋಽಮಿತವಿಕ್ರಮಃ ॥ ೧೮ ॥

ಆಸೀಮಾಧಿಪತಿಂ ಬಿಂಬಂ ಗೃಹೀತ್ವಾ ಯಾದವೇಶ್ವರಃ ।
ಬಲಿಮಾದಾಯ ಯದುಭಿಃ ಕಾಮರೂಪಂ ಸಮಾಯಯೌ ॥ ೧೯ ॥

ಕಾಮರೂಪೇಶ್ವರಃ ಪುಂಡ್ರ ಐಂದ್ರಜಾಲವಿಶಾರದಃ ।
ನಿರ್ಗತಃ ಸೇನಯಾ ಸಾರ್ಧಂ ಯೋದ್ಧುಂ ಪ್ರದ್ಯುಮ್ನಸಂಮುಖೇ ॥ ೨೦ ॥

---

೧೭. ಅನಂತರ ಒಂದು ಮುಹೂರ್ತದಷ್ಟು ಕಾಲದಲ್ಲೇ ಆ ವಂಗದೇಶಾಧೀಶನು ಎಚ್ಚರವನ್ನು ಹೊಂದಿದವನಾಗಿ ಆ ಮಹಾನುಭಾವನಾದ ಪ್ರದ್ಯುಮ್ನನಿಗೆ ಶರಣಾಗತನಾದನು.

೧೮–೧೯. ಬಳಿಕ ಆ ವೀರಧನ್ವರಾಜನು ಆ ಪ್ರದ್ಯುಮ್ನನಿಗೆ ಕಪ್ಪಕಾಣಿಕೆಗಳನ್ನೊಪ್ಪಿಸಿ ತನ್ನ ಊರಿಗೆ ಹೊರಟುಹೋದನು. ಇತ್ತಲಾಗಿ ಅಪರಿಮಿತ ಪರಾಕ್ರಮಿಶಾಲಿಯಾದ ಆ ಪ್ರದ್ಯುಮ್ನನು ಬ್ರಹ್ಮಪುತ್ರಾನದಿಯನ್ನು ದಾಟಿ ಆಸೀಮಾ ಎಂಬ ಹೆಸರಿನ ದೇಶದ ಅಧಿಪತಿಯಾದ ಬಿಂಬನೆಂಬುವನನ್ನು ಹಿಡಿದು, ಆತನಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು, ಅಲ್ಲಿಂದ ಮುಂದೆ ತನ್ನ ಯದುಸೇನೆಯೊಡನೆ ಕಾಮರೂಪದೇಶಕ್ಕೆ ಬಂದನು.

೨೦. ಆ ಕಾಮರೂಪದೇಶಾಧಿಪತಿಯಾದ ಪುಂಡ್ರನೆಂಬುವನು ಇಂದ್ರಜಾಲವಿದ್ಯೆಯಲ್ಲಿ ಬಹಳ ನಿಪುಣನಾಗಿದ್ದನು. ಆ ಪುಂಡ್ರನು ಪ್ರದ್ಯುಮ್ನನು ಬರುತ್ತಿರುವುದನ್ನು ಅರಿತು ತನ್ನ ಸೇನೆಯೊಡನೆ ಅವನ ಮೇಲೆ ಯುದ್ಧಕ್ಕೆಂದು ಹೊರಟನು.

ಆಸೀಮಾನಾಂ ಯದೂನಾಂ ಚ ಘೋರಂ ಯುದ್ಧಂ ಬಭೂವ ಹ ।
ಬಾಣೈಃ ಕುಠಾರೈಃ ಪರಿಘೈಃ ಶೂಲೈಃ ಖಡ್ಗರ್ಷ್ಟಿಶಕ್ತಿಭಿಃ ॥ ೨೧ ॥

ಪುಂಡ್ರೋ ವಿದ್ಯಾಶ್ಚ ಕಾರಾಶು ಪೈಶಾಚೋರಗರಾಕ್ಷಸೀಃ ।
ತತೋ ಗುಹ್ಯಕಗಂಧರ್ವಾಃ ಸರ್ವತೋ ಮೈಥಿಲೇಶ್ವರ ॥ ೨೨ ॥

ಪ್ರಧಾವಂತೋ ರಣೇ ರಾಜನ್ಪಿಶಾಚಾಃ ಪಿಶಿತಾಶನಾಃ ।
ಕೋಟಿಶಃ ಕೋಟಿಶೋಂಗಾರಾನ್ ಕ್ಷೇಪಯಂತೋ ಮುಹುರ್ಮುಹುಃ ॥ ೨೩ ॥

ಕ್ಷಣಮಾತ್ರೇಣ ತತ್ಸೈನ್ಯಂ ವಮಂತೋ ಗರಲಂ ಮುಖಾತ್ ।
ಫೂತ್ಕಾರಮಪಿ ಕುರ್ವಂತೋ ದಂದಶೂಕಾಃ ಸಮಾಗತಾಃ ॥ ೨೪ ॥

---

೨೧. ಆಗ ಯಾದವರಿಗೂ ಆ ಪುಂಡ್ರನ ಕಡೆಯ ಆಸೀಮದೇಶದ ವೀರರಿಗೂ ಭಾರಿಯಾದ ಯುದ್ಧವು ಜರುಗಿತು. ಆ ಸಮಯದಲ್ಲಿ ಉಭಯ ಪಕ್ಷದ ವೀರರೂ ಬಾಣಗಳನ್ನೂ, ಗಂಡುಗೊಡಲಿಗಳನ್ನೂ, ಪರಿಘಗಳನ್ನೂ, ಶೂಲಗಳನ್ನೂ, ಕತ್ತಿ, ಋಷ್ಟಿ, ಶಕ್ತಿ ಎಂಬ ಆಯುಧಗಳನ್ನೂ ಪ್ರಯೋಗಿಸುತ್ತಿದ್ದರು.

೨೨. ಓ ಮಿಥಿಲಾನರೇಶ! ಆಗ ಆ ಪುಂಡ್ರನು ತನ್ನ ಐಂದ್ರಜಾಲಿಕ ಕುಶಲತೆಯಿಂದ ಪಿಶಾಚ, ಉರಗ, ರಾಕ್ಷಸ, ಗುಹ್ಯಕ, ಗಂಧರ್ವ ವಿದ್ಯೆಗಳನ್ನು ಪ್ರಯೋಗಿಸಲಾರಂಭಿಸಿದನು.

೨೩. ಕೂಡಲೇ ಆ ರಣರಂಗದಲ್ಲಿ ತತ್ತಲೂ ಮಾಂಸಾಹಾರಿಗಳಾದ ಪಿಶಾಚಗಳು ಮೇಲೆ ಮೇಲೆ ಕೆಂಡದ ಮಳೆಯನ್ನು ಸುರಿಸುತ್ತಾ ಕೋಟಿಗಟ್ಟಲೆ ಓಡಾಡತೊಡಗಿದವು.

೨೪. ಅದರಂತೆ ಬಾಯಿಂದ ವಿಷವನ್ನು ಕಕ್ಕುತ್ತಾ, ಭಯಂಕರವಾಗಿ ಫೂತ್ಕಾರವನ್ನು ಮಾಡುತ್ತಾ ಬರುತ್ತಿರುವ ಬಗೆಬಗೆಯ ಹಾವುಗಳು ಕ್ಷಣಮಾತ್ರದಲ್ಲಿ ಆ ಯದುಸೈನ್ಯವನ್ನು ಮುತ್ತಿಬಿಟ್ಟುವು.

ಖರಾರೂಢಾ ದಂತವಕ್ತ್ರಾ ಲಲಜ್ಜಿಹ್ವಾ ಭಯಂಕರಾಃ ।
ಚರ್ವಯಂತೋ ನರಾನ್ಯುದ್ಧೇ ಧಾವಂತೋ ರಾಕ್ಷಸಾಸ್ತತಃ ॥ ೨೫ ॥

ಯಕ್ಷಾಶ್ಚ ಸಿಂಹವದನಾ ತುರಂಗವದನಾ ನೃಪ ।
ಭಿಂಧಿ ಭಿಂಧೀತಿ ಗರ್ಜಂತಃ ಶೂಲಹಸ್ತಾ ಇತಸ್ತತಃ ॥ ೨೬ ॥

ಕ್ಷಣಮಾತ್ರೇಣ ಮೇಘಾನಾಂ ಸಮೂಹೈಶ್ಛಾದಿತಂ ನಭಃ ।
ಅಂಧಕಾರೋ ಹ್ಯಭೂದ್ರಾಜನ್ ರಜಸಾ ವಾತವೇಗತಃ ॥ ೨೭ ॥

ಭೋಜವೃಷ್ಣ್ಯಂಧಕಮಧುಶೂರಸೇನದಶಾರ್ಹಕಾಃ ।
ಭಯಂ ಪ್ರಾಪುರ್ಮಹಾಯುದ್ಧೇ ನ್ಯಸ್ತಶಸ್ತ್ರಾ ಯದೂತ್ತಮಾಃ ॥ ೨೮ ॥

೨೫. ಹಾಗೆಯೇ ವಕ್ರವಾದ ಹಲ್ಲುಗಳಿಂದಲೂ, ಅತ್ತಿತ್ತ ಹೊರಳುತ್ತಿರುವ ಚಾಚಿದ ನಾಲಿಗೆಗಳಿಂದಲೂ ಕೂಡಿ ನೋಡಿದರೆ ಹೆದರಿಕೆಯಾಗುವಂತಿದ್ದ ಅನೇಕ ಮಂದಿ ರಾಕ್ಷಸರು ಆ ಯುದ್ಧಭೂಮಿಯಲ್ಲಿ ಇತ್ತಲಿಂದತ್ತ ಓಡಾಡಿ ಬರುತ್ತಾ ಕೈಗೆ ಸಿಕ್ಕಿದ ಮನುಷ್ಯರನ್ನು ತಿನ್ನುತ್ತಾ ಬಂದರು.

೨೬. ಅದೇ ರೀತಿಯಲ್ಲಿ ಯಕ್ಷರು ಸಿಂಹದಂತೆಯೂ, ಕುದುರೆಯಂತೆಯೂ ಇರುವ ಮುಖಗಳನ್ನು ಧರಿಸಿ, ಶೂಲಗಳನ್ನು ಕೈಗಳಲ್ಲಿ ಹಿಡಿದು ಝಳಪಿಸುತ್ತಾ, ಕಡಿ, ಬಡಿ ಎಂದು ಮುಂತಾಗಿ ಗರ್ಜಿಸುತ್ತಾ ಅತ್ತಿತ್ತ ಓಡತೊಡಗಿದುವು.

೨೭. ಓ ರಾಜೇಂದ್ರ! ಆಗ ಕ್ಷಣಮಾತ್ರದಲ್ಲಿ ಆಕಾಶವೆಲ್ಲವೂ ಮೋಡಗಳಿಂದ ಕವಿಯಲ್ಪಟ್ಟಿತಲ್ಲದೆ, ಎಲ್ಲೆಲ್ಲಿಯೂ ಬಿರುಗಾಳಿಯಿಂದೆದ್ದ ಧೂಳು ಮುಸುಕಿಕೊಂಡು ಸುತ್ತಲೂ ಕತ್ತಲೆ ಕವಿದುಬಿಟ್ಟಿತು.

೨೮. ಆಗ ಆ ಪ್ರದ್ಯುಮ್ನ ಸೇನೆಯಲ್ಲಿದ್ದ ಭೋಜ, ವೃಷ್ಣಿ, ಅಂಧಕ, ಮಧು, ಶೂರಸೇನ, ದಶಾರ್ಹ ಎಂಬ ಒಳಪಂಗಡಗಳಿಗೆ ಸೇರಿದ ಆ ಯಾದವ ವೀರರೆಲ್ಲರೂ ಬಹುಮಟ್ಟಿಗೆ ಹೆದರಿಕೆಯಿಂದ ತಲ್ಲಣಿಸಿಹೋದರು.

ಕೃಷ್ಣದತ್ತಂ ಧನುಃ ಕಾರ್ಷ್ಣಿರಾದಾಯ ಪ್ರತಿಕಾರವಿತ್ ।
ಸತ್ವಾತ್ಮಿಕಾಂ ಮಹಾವಿದ್ಯಾಂ ಬಾಣೈಃ ಪ್ರಾಯುಂಕ್ತ ಮೈಥಿಲ ॥ ೨೯ ॥

ಬಾಣೈಃ ಪಿಶಾಚಾನುರಗಾನ್ಸಯಕ್ಷಾ-
ನ್ರಕ್ಷಾಂಸಿ ಗಂಧರ್ವಘನಾಂಧಕಾರಾನ್ ।
ಬಿಭೇದ ದಿವ್ಯೈಃ ಪ್ರಭವೈರ್ಯಥಾ ಹಿ
ನೀಹಾರಮೇಘಾನ್ಕಿರಣೈರ್ವಿವಸ್ವಾನ್ ॥ ೩೦ ॥

ಬಾಣೈಶ್ಚ ಪುಂಡ್ರಂ ಸರಥಂ ಸವಾಹನಂ
ತಂ ಭ್ರಾಮಯಿತ್ವಾ ಘಟಿಕಾದ್ವಯಂ ಖೇ ।
ನಿಪಾತಯಾಮಾಸ ರಣೇ ಸಪತ್ನಂ
ಪದ್ಮಂ ಪೃಥಿವ್ಯಾಮಿವ ಮಾರುತಃ ಕಿಲ ॥ ೩೧ ॥

---

೨೯. ಆಗ ಈ ದುಃಸ್ಥಿತಿಯನ್ನು ಕಂಡು ಕೃಷ್ಣಪುತ್ರನಾದ ಆ ಪ್ರದ್ಯುಮ್ನನು ಕುಪಿತನಾಗಿ, ಮಾಯಾವಿದ್ಯೆಯ ಪ್ರತೀಕಾರವನ್ನರಿತವನಾದುದರಿಂದ ಕೂಡಲೇ ಸತ್ತ್ವಗುಣಪ್ರಧಾನವಾದ ಮಹಾವಿದ್ಯೆಯನ್ನು ತನ್ನ ಬಾಣಗಳ ಮುಖಾಂತರ ಪ್ರಯೋಗಿಸಿದನು.

೩೦. ಓ ಮಿಥಿಲಾಧೀಶ! ಸೂರ್ಯನು ತನ್ನ ಕಿರಣಗಳಿಂದ ಮಂಜಿನಿಂದ ಆವರಿಸಲ್ಪಟ್ಟ ಮೋಡಗಳನ್ನು ಭೇದಿಸುವಂತೆ ಆ ಪ್ರದ್ಯುಮ್ನನು ತನ್ನ ಬಾಣಗಳಿಂದ ಆ ಪಿಶಾಚಗಳನ್ನೂ, ಸರ್ಪಗಳನ್ನೂ, ಯಕ್ಷ ರಾಕ್ಷಸರನ್ನೂ, ಗಂಧರ್ವರನ್ನೂ, ಗಾಢವಾಗಿ ಕವಿದಿದ್ದ ಆ ಮಹಾಂಧಕಾರವನ್ನೂ ಕ್ಷಣಮಾತ್ರದಲ್ಲಿ ಭೇದಿಸಿದನು.

೩೧. ಬಳಿಕ ಆ ಪುಂಡ್ರರಾಜನನ್ನು ಅವನ ರಥದೊಡನೆಯೂ, ಆ ರಥದ ಅಶ್ವಗಳೊಡನೆಯೂ ಎರಡು ಘಳಿಗೆಗಳಕಾಲ ಆಕಾಶದಲ್ಲಿ ಗರಗರನೆ ತಿರುಗಿಸಿ, ಬಿರುಗಾಳಿಯು ಕಮಲವನ್ನು (ಅದರ ನಾಳದಿಂದ) ಕಿತ್ತು ಉರುಳಿಸುವಂತೆ ಅವನನ್ನು ನೆಲದಮೇಲೆ ಕುಕ್ಕರಿಸುವಂತೆ ಕೆಡಹಿದನು.

ಬುದ್ಧಸ್ತದಾ ತಂ ಶರಣಂ ಸಮೇತ್ಯ
ಪ್ರಧರ್ಷಿತಃ ಸದ್ಯ ಉಪಾಯನಾನಿ ।
ಲಕ್ಷೈರ್ಹಯಾನಾಮಯುತೈರ್ಗಜಾನಾಂ
ಯುತಾನಿ ದತ್ವಾ ಪ್ರಣನಾಮ ಕಾರ್ಷ್ಣಿಂ ॥ ೩೨ ॥

ವಿಪಾಶಾಂ ಸ ತದೋತ್ತೀರ್ಯ ಸೈನ್ಯೈಃ ಶೋಣನದಂ ನೃಪ ।
ಕೈಕಯಾನಾಯಯೌ ಧನ್ವೀ ಪ್ರದ್ಯುಮ್ನೋ ಯದುನಂದನಃ ॥ ೩೩ ॥

ಕೈಕಯಸ್ಯಾಧಿಪೋ ರಾಜಾ ಧೃತಕೇತುರ್ಮಹಾಬಲಃ ।
ವಸುದೇವಸ್ವಸುಃ ಸಾಕ್ಷಾಚ್ಛ್ರುತಕೀರ್ತೇಃ ಪತಿರ್ಮಹಾನ್ ॥ ೩೪ ॥

ಪ್ರದ್ಯುಮ್ನಮರ್ಹಯಾಮಾಸ ಧೃತಕೇತುಃ ಸಯಾದವಂ ।
ಭಕ್ತ್ಯಾ ಪರಮಯಾ ರಾಜಂಛ್ರೀಕೃಷ್ಣಸ್ಯ ಪ್ರಭಾವವಿತ್ ॥ ೩೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ಕೈಕಯ ವಿಜಯೋ ನಾಮ ಪಂಚದಶೋಽಧ್ಯಾಯಃ

---

೩೨. ಆ ರೀತಿ ನೆಲಕ್ಕೆ ಉರುಳಿದ ಆ ಪುಂಡ್ರರಾಜನು ಕೆಲಹೊತ್ತು ಮೂರ್ಛಿತನಾಗಿದ್ದು, ಆ ಮೇಲೆ ಎಚ್ಚರವನ್ನು ಹೊಂದಿ, ಆ ಪ್ರದ್ಯುಮ್ನನಿಗೆ ಶರಣಾಗತನಾಗಿ, ಒಂದು ಲಕ್ಷ ಕುದುರೆಗಳನ್ನೂ, ಹತ್ತು ಸಾವಿರ ಆನೆಗಳನ್ನೂ ಆತನಿಗೆ ಕಾಣಿಕೆಯಾಗಿ ಇತ್ತು ಆ ಪ್ರದ್ಯುಮ್ನನನ್ನು ನಮಸ್ಕರಿಸಿದನು.

೩೩. ಅನಂತರ ಆ ಪ್ರದ್ಯುಮ್ನನು ಅಲ್ಲಿಂದ ಹೊರಟು, ವಿಪಾಶಾ ಎಂಬ ನದಿಯನ್ನೂ, ಶೋಣವೆಂಬ ನದವನ್ನೂ ದಾಟಿ ಕೇಕಯದೇಶಕ್ಕೆ ಬಂದನು.

೩೪. ಆ ಕೇಕಯದೇಶಾಧಿಪತಿಯು ಧೃತಕೇತುವೆಂಬುವನು. ಮಹಾಬಲಾಢ್ಯನು. ಆತನಿಗೆ ವಸುದೇವನ ತಂಗಿಯಾದ ಶ್ರುತಕೀರ್ತಿಯೆಂಬುವಳನ್ನು ಕೊಟ್ಟು ಮದುವೆಯಾಗಿದ್ದಿತು.

೩೫. ಆ ಧೃತಕೇತುವು ಶ್ರೀಕೃಷ್ಣನ ಪ್ರಭಾವವನ್ನು ಚೆನ್ನಾಗಿ ಅರಿತವನಾದುದರಿಂದ ಆ ಕೃಷ್ಣಪುತ್ರನಾದ ಪ್ರದ್ಯುಮ್ನನನ್ನು ಆ ಯಾದವ ಸೇನೆಯೊಡನೆ ಬಹು ಭಕ್ತಿಯಿಂದ ಪೂಜಿಸಿ ಸತ್ಕರಿಸಿದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀನಾರದಬಹುಲಾಶ್ವ ಸಂವಾದದಲ್ಲಿ ಕೈಕಯ ವಿಜಯವೆಂಬ ಹದಿನೈದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಷೋಡಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ದುಂದುಭೀನ್ನಾದಯಂಸ್ತಸ್ಮಾತ್ಪ್ರದ್ಯುಮ್ನೋ ಯದುನಂದನಃ ।
ಮೈಥಿಲಾನಾಯಯೌ ರಾಜಂಸ್ತವ ದೇಶಾನ್ಸುಖಾವೃತಾ್ನ ॥ ೧ ॥

ಸುವರ್ಣಸೌಧೈರತ್ಯುಚ್ಚೈಃ ಸಘಟೈ ರಾಜತಾಂ ಪುರೀಂ ।
ಮಿಥಿಲಾಂ ವೀಕ್ಷ್ಯ ತಾಮಾರಾದುದ್ಧವಂ ಪ್ರಾಹ ಮಾಧವಃ ॥ ೨ ॥

ಹದಿನಾರನೆಯ ಅಧ್ಯಾಯವು

೧. ಓ ರಾಜೇಂದ್ರ! ಅನಂತರ ಯದುನಂದನನಾದ ಆ ಪ್ರದ್ಯುಮ್ನನು ಪ್ರಯಾಣಸೂಚಕವಾದ ಭೇರಿಗಳನ್ನು ಧ್ವನಿಗೈಯುತ್ತಾ, ಅಲ್ಲಿಂದ ಹೊರಟು ಸುಖದಿಂದ ತುಂಬಿ ತುಳುಕುತ್ತಿರುವ ನಿನ್ನ ದೇಶಕ್ಕೆ ಬಂದನು.

೨. ನಿನ್ನ ದೇಶದ ರಾಜಧಾನಿಯಾದ ಮಿಥಿಲಾನಗರಿಯು ದಿವ್ಯವಾದ ಕಲಶಗಳಿಂದ ಕಂಗೊಳಿಸುತ್ತಿರುವ ಚಿನ್ನದಿಂದ ನಿರ್ಮಿಸಲ್ಪಟ್ಟ ಬಹು ಎತ್ತರವಾದ ಭಾರಿ ಭಾರಿ ಉಪ್ಪರಿಗೆಗಳಿಂದ ರಮಣೀಯವಾಗಿದ್ದಿತು. ಇದನ್ನು ದೂರದಿಂದಲೇ ಕಂಡು ಕೃಷ್ಣಪುತ್ರನಾದ ಆ ಪ್ರದ್ಯುಮ್ನನು ಮಂತ್ರಿಯಾದ ಉದ್ಧವನನ್ನು ಕುರಿತು ಇಂತೆಂದನು

॥ ಪ್ರದ್ಯುಮ್ನ ಉವಾಚ ॥

ಕಸ್ಯೈಷಾ ನಗರೀ ಮಂತ್ರಿನ್ದೃಶ್ಯತೇ ಸಾಂಪ್ರತಂ ಮಯಾ ।
ರಾಜತೇ ಬಹುಸೌಧೈಶ್ಚ ಪುರೀ ಭೋಗವತೀ ಯಥಾ ॥ ೩ ॥

॥ ಉದ್ಧವ ಉವಾಚ ॥

ಜನಕಸ್ಯ ಪುರೀ ಹ್ಯೇಷಾ ಮಿಥಿಲಾ ನಾಮ ಮಾನದ ।
ಮಿಥಿಲೇಂದ್ರೋ ಧೃತಿಸ್ತಸ್ಯಾಂ ಮಹಾಭಾಗವತಃ ಕವಿಃ ॥ ೪ ॥

ಸರ್ವಧರ್ಮಭೃತಾಂ ಶ್ರೇಷ್ಠಃ ಶ್ರೀಕೃಷ್ಣೇಷ್ಟೋ ಹರಿಪ್ರಿಯಃ ।
ಬಹುಲಾಶ್ವಸ್ತಸ್ಯ ಸುತ ಆಬಾಲ್ಯಾದ್ಭಕ್ತಿಕೃದ್ಧರೇಃ ॥ ೫ ॥

ತಸ್ಮೈ ಸಂದರ್ಶನಂ ದಾತುಂ ಭಗವಾನಾಗಮಿಷ್ಯತಿ ।
ಬಹುಲಾಶ್ವಂ ರಾಜಪುತ್ರಂ ಶ್ರುತದೇವಂ ದ್ವಿಜಂ ತಥಾ ॥ ೬ ॥

---

೩. ಓ ಮಂತ್ರಿಶ್ರೇಷ್ಠ! ನಾನೀಗ ನೋಡುತ್ತಿರುವ ಅಸಂಖ್ಯಾತವಾದ ಉಪ್ಪರಿಗೆಗಳಿಂದ ಕೂಡಿ ಭೋಗವತಿಯಂತೆ ಕಂಗೊಳಿಸುತ್ತಿರುವ ಈ ನಗರಿಯು ಯಾವ ರಾಜನಿಗೆ ಸೇರಿದುದು?

೪. ಹೀಗೆಂದು ಪ್ರದ್ಯುಮ್ನನು ಪ್ರಶ್ನಿಸಲು, ಆ ಉದ್ಧವನು ಹೇ ಪ್ರಭು! ಇದು ಜನಕವಂಶೀಯರಾದ ಅರಸರಿಗೆ ನಿವಾಸವಾದ ಮಿಥಿಲೆಯೆಂಬ ರಾಜಧಾನಿಯು. ಇದರಲ್ಲಿ ಈಗ ಮಹಾಭಾಗವತನಾದ ಧೃತಿಯೆಂಬ ಅರಸನು ಆಳುತ್ತಿರುವನು.

೫. ಈತನು ಎಲ್ಲ ವಿಧವಾದ ಧರ್ಮಗಳನ್ನೂ ಬಲ್ಲ ಮಹಾತ್ಮರಲ್ಲೆಲ್ಲಾ ಮೇಲೆನಿಸಿರುವನು. ಮತ್ತು ಶ್ರೀಕೃಷ್ಣನಿಗೆ ಬಹಳ ಬೇಕಾದವನು. ಈತನ ಮಗನು ಬಹುಲಾಶ್ವನೆಂಬುವನು. ಈ ರಾಜಕುಮಾರನು ಬಾಲ್ಯದಿಂದಲೂ ಶ್ರೀಕೃಷ್ಣನಲ್ಲೇ ಅಪರಿಮಿತವಾದ ಭಕ್ತಿಯನ್ನಿಟ್ಟಿರುವನು.

೬–೭. ಆ ಬಹುಲಾಶ್ವನೆಂಬ ರಾಜಕುಮಾರನಿಗೂ, ಶ್ರುತದೇವನೆಂಬ ಬ್ರಾಹ್ಮಣೋತ್ತಮನಿಗೂ ಸಂದರ್ಶನವನ್ನು ಕೊಡಬೇಕೆಂಬುದಾಗಿ ಸಾಕ್ಷಾತ್ ಶ್ರೀಹರಿಯೇ ಮುಂದೆ ಇಲ್ಲಿಗೆ ಬರುವವನಾಗಿರುವನು. ಆ ಭಗವಂತನು ದ್ವಾರಕೆಯಲ್ಲಿದ್ದರೂ

ಸ್ಮರತ್ಯಲಂ ದ್ವಾರಕಾಯಾಂ ಶ್ರೀಕೃಷ್ಣೋ ಭಗವಾನ್ಹರಿಃ ।
ಜೇತುಂ ನ ಶಕ್ಯೋ ದೇವೇಂದ್ರೈರ್ಮನುಜೈಶ್ಚ ಕುತಃ ಪ್ರಭೋ ॥ ೭ ॥
ಧೃತಿಃ ಪರಮಯಾ ಭಕ್ತ್ಯಾ ಶ್ರೀಕೃಷ್ಣವಶಕಾರಕಃ ।

॥ ಶ್ರೀ ನಾರದ ಉವಾಚ ॥

ತಚ್ಛ್ರುತ್ವಾ ಭಗವಾನ್ಕಾರ್ಷ್ಣಿರುದ್ಧವೇನ ಸಮನ್ವಿತಃ ।
ಸ್ವಶಿಷ್ಯಮುದ್ಧವಂ ಕೃತ್ವಾ ಧೃತಿಂ ದ್ರಷ್ಟುಂ ಸಮಾಯಯೌ ॥ ೮ ॥

ಭಕ್ತೇರೇವ ಪರೀಕ್ಷಾಂ ಹಿ ಕರ್ತುಂ ತಸ್ಯ ನೃಪಸ್ಯ ಚ ।
ದದರ್ಶ ಮಿಥಿಲಾಂ ಕಾರ್ಷ್ಣಿರುದ್ಧವೇನ ಸಮನ್ವಿತಃ ॥ ೯ ॥

ಚರ್ಮಶಸ್ತ್ರಧೃತಾವೀರಾ ಮಾಲಾತಿಲಕಶೋಭಿತಾಃ ।
ಜಪಂತಃ ಕೃಷ್ಣನಾಮಾನಿ ಸರ್ವೇ ವೈ ಯತ್ರ ಮಾಲಯಾ ॥ ೧೦ ॥

ಈ ಈರ್ವರನ್ನು ವಿಶೇಷವಾಗಿ ನೆನಸಿಕೊಳ್ಳುತ್ತಿರುವನು. ಈ ಮಿಥಿಲಾಧೀಶನನ್ನು ದೇವತೆಗಳೂ ಸಹ ಗೆಲ್ಲಲು ಅಸಾಧ್ಯವಾಗಿರುವುದು. ಹೀಗಿರುವಾಗ ಮನುಷ್ಯರು ಈತನನ್ನು ಗೆಲ್ಲುವುದೆಂದರೇನು ?

೮. ಈ ಮಿಥಿಲಾಧಿಪತಿಯಾದ ಧೃತಿಯು ತನ್ನ ನಿರತಿಶಯವಾದ ಭಕ್ತಿಯಿಂದ ಶ್ರೀಕೃಷ್ಣನನ್ನೂ ವಶಪಡಿಸಿಕೊಂಡಿರುವನು” ಎಂದನು. ಓ ರಾಜೇಂದ್ರ ! ಈ ರೀತಿ ಉದ್ಧವನು ಹೇಳಿದುದನ್ನು ಕೇಳಿ, ಆ ಪ್ರದ್ಯುಮ್ನನು ಬ್ರಹ್ಮಚಾರಿಯಂತೆ ವೇಷವನ್ನು ಧರಿಸಿ ತನ್ನ ಮಾತಿನಂತೆ ಶಿಷ್ಯ ವೇಷವನ್ನು ಧರಿಸಿದ್ದ ಉದ್ಧವನೊಡನೆ ಮಿಥಿಲೇಶ್ವರನಾದ ಧೃತಿಯನ್ನು ಕಾಣಲು ಮಿಥಿಲೆಗೆ ಬಂದನು.

೯. ಆ ಧೃತಿಯ ಭಕ್ತಿಯನ್ನೇ ಪರೀಕ್ಷೆ ಮಾಡುವೆನೆಂಬ ಉದ್ದೇಶದಿಂದ ಆ ಪ್ರದ್ಯುಮ್ನನು ಶಿಷ್ಯನಾದ ಉದ್ಧವನೊಡನೆ ಮಿಥಿಲಾನಗರವನ್ನು ನೋಡುತ್ತಾ ಬಂದನು.

೧೦. ಓ ರಾಜೇಂದ್ರ ! ಆ ನಗರಿಯಲ್ಲಿ ಪ್ರತಿಯೊಬ್ಬರೂ ವೀರರು. ಅವರೆಲ್ಲರೂ ನಾನಾವಿಧವಾದ ಆಯುಧಗಳನ್ನೂ, ಗುರಾಣಿಗಳನ್ನೂ ಧರಿಸಿ, ದಿವ್ಯವಾದ ಹೂವಿನ ಸರಗಳಿಂದಲೂ, ಅಂದವಾದ ತಿಲಕಗಳಿಂದಲೂ ಶೋಭಿಸುತ್ತಾ ಶ್ರೀಕೃಷ್ಣನ ದಿವ್ಯನಾಮವನ್ನು ಮುಖದಿಂದ ಉಚ್ಚರಿಸುತ್ತಾ ಸಾಲುಸಾಲಾಗಿ ಸಂಚರಿಸುತ್ತಿದ್ದರು.

ಲಿಖಿತಾನಿ ಚ ನಾಮಾನಿ ದ್ವಾರಿ ದ್ವಾರಿ ಹರೇರ್ನೃಣಾಂ ।
ತಥಾ ಶ್ರೀಕೃಷ್ಣಚಿತ್ರಾಣಿ ಲಿಖಿತಾನಿ ಶುಭಾನಿ ಚ ॥ ೧೧ ॥

ಕುಡ್ಯೇ ಕುಡ್ಯೇ ಗೃಹಾಣಾಂ ಚ ಗದಾಪದ್ಮಾನಿ ಮಾನದ ।
ದಶಾವತಾರಚಿತ್ರಾಣಿ ಶಂಖಚಕ್ರಾಣಿ ಯತ್ರ ವೈ ॥ ೧೨ ॥

ತುಲಸೀಮಂದಿರಾಣೀತ್ಥಂ ಪ್ರಾಂಗಣೇ ಚ ಗೃಹೇ ಗೃಹೇ ।
ಏವಂ ಪಶ್ಯನ್ಸ ಸೌಧಾನಿ ಮಿಥಿಲಾಯಾಂ ಜನಾನ್ಬಹೂನ್ ॥ ೧೩ ॥

ಮಾಲಾತಿಲಕಸಂಯುಕ್ತಾನ್ಸರ್ವಾನ್ಭಕ್ತಾನ್ದದರ್ಶ ಹ ।
ತಿಲಕೈರ್ದ್ವಾದಶಾಖ್ಯೈಶ್ಚ ಯುಕ್ತೈಃ ಕುಂಕುಮಜೈರ್ನೃತಾನ್ ॥ ೧೪ ॥

---

೧೧. ಆ ನಗರದಲ್ಲಿರುವ ಪ್ರತಿಯೊಂದು ಮನೆಯ ಬಾಗಿಲಿನಲ್ಲೂ ಮಂಗಳಕರವಾದ ಶ್ರೀಹರಿಯ ನಾಮಗಳೂ, ಶ್ರೀಕೃಷ್ಣನ ಚಿತ್ರಗಳೂ ಬರೆಯಲ್ಪಟ್ಟಿದ್ದುವು.

೧೨. ಮತ್ತು ಆ ಮನೆಗಳ ಪ್ರತಿಯೊಂದು ಗೋಡೆಯ ಮೇಲೂ ಗದಾ, ಪದ್ಮ, ಶಂಖ, ಚಕ್ರ ಮೊದಲಾದ ಚಿಹ್ನಗಳೂ, ದಶಾವತಾರದ ಚಿತ್ರಗಳೂ ಅಂದವಾಗಿ ಬರೆಯಲ್ಪಟ್ಟಿದ್ದುವು.

೧೩. ಅದೇ ರೀತಿ ಆ ಪ್ರತಿಯೊಂದು ಮನೆಯ ಅಂಗಳದಲ್ಲೂ ತುಲಸಿಯ ಬೃಂದಾವನಗಳು ಕಂಗೊಳಿಸುತ್ತಿದ್ದುವು. ಈ ರೀತಿಯಾಗಿ ಮೆರೆಯುತ್ತಿದ್ದ ಆ ಉಪ್ಪರಿಗೆಗಳನ್ನು ನೋಡುತ್ತಾ ಆ ಮಿಥಿಲಾನಗರಿಯಲ್ಲಿ ವಾಸವಾಗಿದ್ದ ಅನೇಕ ಮಂದಿ ಜನರನ್ನು ಆ ಪ್ರದ್ಯುಮ್ನನು ಕಂಡನು.

೧೪. ಓ ರಾಜೇಂದ್ರ! ಅವರೆಲ್ಲರೂ ಭಗವದ್ಭಕ್ತರು. ಪ್ರತಿಯೊಬ್ಬರೂ ಮಾಲೆಗಳಿಂದಲೂ, ತಿಲಕಗಳಿಂದಲೂ ಶೋಭಿಸುತ್ತಿದ್ದರು. ಆ ತಿಲಕಗಳು ಸೊಗಸಾದ ಕುಂಕುಮಕೇಸರಿಯಿಂದ ರಚಿಸಲ್ಪಟ್ಟು ಹನ್ನೆರಡು ಸಂಖ್ಯೆಗಳಲ್ಲಿ ಮೆರೆಯುತ್ತಿದ್ದುವು.

ಗೋಪೀಚಂದನಮುದ್ರಾಭಿಶ್ಚರ್ಚಿತಾನ್ ಶಾಂತವಿಗ್ರಹಾನ್ ।
ಊರ್ಧ್ವಪುಂಡ್ರಧರಾನ್ವಿಪ್ರಾನ್ಹರಿಮಂದಿರಚಿತ್ರಿತಾನ್ ॥ ೧೫ ॥

ಗದಾಂ ಮುದ್ರಾಂ ಲಲಾಟೇ ಚ ಊರ್ಧ್ವಂ ವಾ ಹರಿನಾಮತಃ ।
ಚಕ್ರಂ ಶಂಖಂ ಚ ಕಮಲಂ ಕೂರ್ಮಂ ಮತ್ಸ್ಯಂ ಭುಜದ್ವಯೇ ॥ ೧೬ ॥

ದಧತಶ್ಚ ಧನುರ್ಬಾಣಂ ಮೂರ್ಧ್ನಿ ಶ್ರೀನಂದಕಂ ಹೃದಿ ।
ಮುಸಲಂ ಚ ಹಲಂ ರಾಜನ್ನಥ ಕಾರ್ಷ್ಣಿರ್ದದರ್ಶ ಹ ॥ ೧೭ ॥

ಕಸ್ಯಾಂ ವೀಥ್ಯಾಂ ಭಾಗವತಂ ಕೇಚಿಚ್ಛೃಣ್ವಂತಿ ಮಾನವಾಃ ।
ಇತಿಹಾಸಂ ಭಾರತಂ ಚ ಹರಿವಂಶಂ ತಥಾಪರೇ ॥ ೧೮ ॥

ಸನತ್ಕುಮಾರವಾಸಿಷ್ಠಯಾಜ್ಞವಲ್ಕ್ಯಪರಾಶರಾಃ ।
ಗರ್ಗಪೌಲಸ್ತ್ಯಧರ್ಮಾದಿಸಂಹಿತಾಃ ಕೇ ಪಠಂತಿ ವೈ ॥ ೧೯ ॥

---

೧೫. ಇದೂ ಅಲ್ಲದೆ ಆ ಜನರು ವಿಧವಿಧವಾದ ಗೋಪೀಚಂದನದ ಮುದ್ರೆಯನ್ನೂ ಶ್ರೀಹರಿಯ ಮಂದಿರದಂತೆ ಆಕಾರಗಳನ್ನೂ ತಮ್ಮ ಮೈಮೇಲೆ ಚಿತ್ರಿಸಿಕೊಂಡು ಊರ್ಧ್ವಪುಂಡ್ರಗಳನ್ನು ಧರಿಸಿ ಸೌಮ್ಯವಾದ ಆಕೃತಿಯಿಂದ ಒಪ್ಪುತ್ತಿದ್ದರು.

೧೬-೧೭. ಆ ವಿಪ್ರರು ಹರಿನಾಮೋಚ್ಚಾರಣಪೂರ್ವಕವಾಗಿ ಲಲಾಟಪ್ರದೇಶದಲ್ಲಿ ಗದೆ, ಶಂಖ, ಚಕ್ರ, ಕಮಲಗಳ ಮುದ್ರೆಗಳನ್ನೂ ತಲೆಯ ಮೇಲುಗಡೆ ಧನುರ್ಭಾಣಾಕೃತಿಯ ಮುದ್ರೆಯನ್ನೂ ಎದೆಯ ಮೇಲೆ ನಂದಕ ಚಿಹ್ನವನ್ನೂ ಹಲ, ಮುಸಲಗಳ ಆಕೃತಿಗಳನ್ನೂ ಧರಿಸಿರುತ್ತಿದ್ದರು. ಇಂಥ ವಿಪ್ರರನ್ನು ನೋಡುತ್ತಾ ಆ ಮಿಥಿಲಾನಗರಿಯಲ್ಲಿ ಪ್ರದ್ಯುಮ್ನನು ಬರುತ್ತಿದ್ದನು.

೧೮. ಆ ನಗರದ ಒಂದಾನೊಂದು ಬೀದಿಯಲ್ಲಿ ಕೆಲ ಜನರು ಭಾಗವತವನ್ನು ಶ್ರವಣಮಾಡುತ್ತಿರುವರು. ಮತ್ತೊಂದು ಬೀದಿಯಲ್ಲಿ ಇನ್ನು ಕೆಲವುಮಂದಿ ಭಾರತದ ಇತಿಹಾಸವನ್ನೂ ಹರಿವಂಶವನ್ನೂ ಆಲಿಸುತ್ತಿರುವರು.

೧೯. ಮತ್ತೊಂದು ಕಡೆ ಕೆಲ ಮಂದಿ ಜನರು ಸನತ್ಕುಮಾರ, ವಸಿಷ್ಠ, ಯಾಜ್ಞವಲ್ಕ್ಯ, ಪರಾಶರ, ಮುನಿಪ್ರಣೀತಗಳಾದ ಸ್ಮೃತಿಗಳನ್ನೂ, ಗರ್ಗಾಚಾರ್ಯ, ಪುಲಸ್ತ್ಯ, ಧರ್ಮ ಮುಂತಾದ ಮುನಿವರ್ಯರ ಸಂಹಿತೆಗಳನ್ನೂ ಪರಿಶೀಲಿಸುತ್ತಿರುವರು.

ಬ್ರಾಹ್ಮಂ ಪಾದ್ಮಂ ವೈಷ್ಣವಂ ಚ ಶೈವಂ ಲೈಂಗಂ ಚ ಗಾರುಡಂ ।
ನಾರದೀಯಂ ಭಾಗವತಮಾಗ್ನೇಯಂ ಸ್ಕಂದಸಂಜ್ಞಿತಂ ॥ ೨೦ ॥

ಭವಿಷ್ಯಂ ಬ್ರಹ್ಮವೈವರ್ತಂ ಮಾರ್ಕಂಡೇಯಂ ಸವಾಮನಂ ।
ವಾರಾಹಮಾತ್ಸ್ಯಕೌರ್ಮಾಣಿ ಬ್ರಹ್ಮಾಂಡಾಖ್ಯಂ ತಥೈವ ಚ ॥ ೨೧ ॥

ವೀಥ್ಯಾಂ ವೀಥ್ಯಾಂ ಸ್ಮ ಶೃಣ್ವಂತಿ ಜನಾಃ ಸರ್ವೇ ಗೃಹೇ ಗೃಹೇ ।
ವಾಲ್ಮೀಕಿಕಾವ್ಯಂ ಕೇಚಿದ್ವೈ ಶ್ರೀರಾಮಚರಿತಾಮೃತಂ ॥ ೨೨ ॥

ಸ್ಮೃತೀಃ ಪಠಂತಿ ಕೇಚಿದ್ವೈ ಕೇಚಿದ್ವೇದತ್ರಯೀಂ ದ್ವಿಜಾಃ ।
ಕೇಚಿತ್ಕುರ್ವಂತಿ ಯಜ್ಞಂ ವೈ ವೈಷ್ಣವಂ ಮಂಗಲಾಯನಂ ॥ ೨೩ ॥

೨೦–೨೧. ಮತ್ತು ಆ ನಗರದಲ್ಲಿ ಎಲ್ಲೆಲ್ಲೂ ಪ್ರತಿಯೊಬ್ಬರೂ ಬ್ರಹ್ಮ, ಪದ್ಮ, ವಿಷ್ಣು, ಶಿವ, ಲಿಂಗ, ಗರುಡ, ನಾರದ, ಅಗ್ನಿ, ಸ್ಕಂದ, ಭವಿಷ್ಯ, ಬ್ರಹ್ಮವೈವರ್ತ, ಮಾರ್ಕಂಡೇಯ, ವಾಮನ, ವರಾಹ, ಮತ್ಸ್ಯ, ಕೂರ್ಮ, ಬ್ರಹ್ಮಾಂಡವೆಂಬ ಹೆಸರುಗಳುಳ್ಳ ಹದಿನೆಂಟು ಪುರಾಣಗಳನ್ನೂ ಶ್ರವಣಮಾಡುತ್ತಿರುವರು.

೨೨. ಅದೇ ರೀತಿ ಕೆಲವು ಮಂದಿ ಪ್ರತಿಯೊಂದು ಮನೆಯಲ್ಲಿಯೂ ವಾಲ್ಮೀಕಿ ಮಹರ್ಷಿ ಪ್ರಣೀತವಾದ ಅಮೃತಸದೃಶವಾದ ಶ್ರೀರಾಮಚಂದ್ರನ ದಿವ್ಯಚರಿತವನ್ನೂ ಆಲಿಸುತ್ತಿರುವರು.

೨೩. ಕೆಲಮಂದಿ ವಿಪ್ರರು ಸ್ಮೃತಿಗಳನ್ನು ಪಠಿಸುತ್ತಿರುವರು. ಕೆಲವುಮಂದಿ ಋಗ್ಯಜುಸ್ಸಾಮಗಳೆಂಬ ವೇದತ್ರಯವನ್ನೂ ಪಾರಾಯಣ ಮಾಡುತ್ತಿರುವರು. ಕೆಲವು ಮಂದಿ ದ್ವಿಜ ಶ್ರೇಷ್ಠರು ವಿಷ್ಣುವಿನ ಪ್ರೀತಿಯಾಗಲೆಂದು ಮಂಗಲಕರವಾದ ಯಜ್ಞಗಳನ್ನು ಮಾಡುತ್ತಿರುವರು.

ರಾಧಾಕೃಷ್ಣೇತಿ ಕೃಷ್ಣೇತಿ ಕೇ ವದಂತಿ ಮುಹುರ್ಮುಹುಃ ।
ಕೇಚಿನ್ನೃತ್ಯಂತಿ ಗಾಯಂತಿ ಹರಿಕೀರ್ತನತತ್ಪರಾಃ ॥ ೨೪ ॥

ಮೃದಂಗತಾಲವಾದಿತ್ರೈಃ ಕಾಂಸ್ಯವೀಣಾಮನೋಹರೈಃ ।
ಮಂದಿರೇ ಮಂದಿರೇ ವಿಷ್ಣೋಃ ಕೀರ್ತನಂ ಶ್ರೂಯತೇ ಜನೈಃ ॥ ೨೫ ॥

ನವಲಕ್ಷಣಸಂಯುಕ್ತಾಂ ಭಕ್ತಿಂ ಯಾಂ ಪ್ರೇಮಲಕ್ಷಣಾಂ ।
ಕುರ್ವಂತಿ ಮೈಥಿಲಾ ರಾಜನ್ಮಿಥಿಲಾಯಾಂ ಗೃಹೇ ಗೃಹೇ ॥ ೨೬ ॥

ಏವಂ ತು ನಗರೀಂ ದೃಷ್ಟ್ವಾ ಪ್ರದ್ಯುಮ್ನೋ ಭಗವಾನ್ಹರಿಃ ।
ರಾಜದ್ವಾರಂ ಸಮೇತ್ಯಾಶು ಮೈಥಿಲೇಶಂ ದದರ್ಶ ಹ ॥ ೨೭ ॥

೨೪--೨೫. ಕೆಲವು ಮಂದಿ ರಾಧಾಕೃಷ್ಣ ಎಂಬುದಾಗಿಯೂ, ಮತ್ತೆ ಕೆಲವುಮಂದಿ ಕೃಷ್ಣ ಕೃಷ್ಣ ಎಂಬುದಾಗಿಯೂ, ಯಾವಾಗಲೂ ಪುನಃ ಪುನಃ ಉಚ್ಚರಿಸುತ್ತಿರುವರು. ಕೆಲವುಮಂದಿ ಶ್ರೀಹರಿಯ ನಾಮಸಂಕೀರ್ತನದಲ್ಲಿ ತಲ್ಲೀನರಾಗಿ ಮಧುರವಾಗಿ ಹಾಡುವರು. ಕೆಲವರು ಆ ಗೀತಕ್ಕೆ ಅನುಸಾರವಾಗಿ ನರ್ತನವನ್ನು ಮಾಡುವರು. ಆ ನಗರದಲ್ಲಿರುವ ಪ್ರತಿಯೊಂದು ವಿಷ್ಣುದೇವಾಲಯದಲ್ಲಿಯೂ ಕಂಚಿನ ತಾಳಗಳಿಂದಲೂ, ವೀಣಾಧ್ವನಿಯಿಂದಲೂ ಕೂಡಿ ರಮಣೀಯವಾಗಿರುವ ಮೃದಂಗ, ತಾಳ ಮೊದಲಾದ ಚತುರ್ವಿಧ ವಾದ್ಯಗಳ ಮಧುರವಾದ ನಾದದೊಂದಿಗೆ ಸಂಮಿಲಿತವಾದ ದಿವ್ಯವಾದ ಹರಿಕೀರ್ತನವು ಪ್ರತಿಯೊಬ್ಬನಿಗೂ ಕೇಳಿಬರುತ್ತಿರುವುದು.

೨೬. ಓ ಮಿಥಿಲಾರಾಜೇಂದ್ರ! ಒಂಭತ್ತು ವಿಧವಾದ ಲಕ್ಷಣಗಳಿಂದೊಡಗೂಡಿರುವ ಪ್ರೇಮ ವಿಶೇಷರೂಪವಾದ ಭಕ್ತಿಯೆಂಬ ಯೋಗವನ್ನು ಯಾರು ಕೈಗೊಂಡಿರುವರೋ ಅಂತಹ ಪುರುಷಶ್ರೇಷ್ಠರೇ ಆ ಮಿಥಿಲಾನಗರಿಯ ಪ್ರತಿಯೊಂದು ಮನೆಯಲ್ಲಿಯೂ ಕಂಡುಬರುತ್ತಿರುವರು.

೨೭. ಓ ರಾಜೇಂದ್ರ! ಈ ರೀತಿಯಾಗಿ ಮೆರೆಯುತ್ತಿದ್ದ ಆ ಮಿಥಿಲಾನಗರಿಯನ್ನು ನೋಡುತ್ತಾ, ಸಾಕ್ಷಾತ್ ಭಗವತ್ಸ್ವರೂಪನೆನಿಸಿದ ಆ ಪ್ರದ್ಯುಮ್ನನು ಜಾಗ್ರತೆಯಾಗಿ ಅರಮನೆಯ ಬಾಗಿಲಿಗೆ ಬಂದು ಸೇರಿ ಸಭಾಸೀನನಾಗಿದ್ದ ಮಿಥಿಲಾನರೇಶ್ವರನನ್ನು ಸಂದರ್ಶಿಸಿದನು.

ಮೈಥಿಲೇಶಸಭಾಯಾಂ ತು ವೇದವ್ಯಾಸಃ ಶುಕೋ ಮುನಿಃ ।
ಯಾಜ್ಞವಲ್ಕ್ಯೋ ವಸಿಷ್ಠಶ್ಚ ಗೌತಮೋಽಹಂ ಬೃಹಸ್ಪತಿಃ ॥ ೨೮ ॥

ಅನ್ಯೇ ಚ ಮುನಯಸ್ತತ್ರ ವೇದಮೂರ್ತಿಧರಾ ಇವ ।
ದೃಶ್ಯಂತೇ ಧರ್ಮವಕ್ತಾರೋ ಹರಿನಿಷ್ಠಾ ಇತಸ್ತತಃ ॥ ೨೯ ॥

ಮೈಥಿಲೇಂದ್ರ ಧೃತಿಸ್ತತ್ರ ಭಕ್ತಿಭಾವನತಾನನಃ ।
ಬಲಸ್ಯ ಪಾದುಕಾಪೂಜಾಂ ಕುರುತೇ ವಿಧಿವನ್ನೃಪ ॥ ೩೦ ॥

ಜಪನ್ಮುಕ್ತಿಕರಂ ನಾಮ ಶ್ರೀಕೃಷ್ಣಬಲದೇವಯೋಃ ।
ದೃಷ್ಟ್ವೋತ್ಥಾಯ ನಮಶ್ಚಕ್ರೇ ಸಶಿಷ್ಯಂ ಬ್ರಹ್ಮಚಾರಿಣಂ ॥ ೩೧ ॥

ತಂ ಪೂಜಯಿತ್ವಾ ವಿಧಿವತ್ಪಾದ್ಯಾದ್ಯೈರ್ಮೈಥಿಲೇಶ್ವರಃ ।
ಕೃತಾಂಜಲಿಪುಟೋ ರಾಜಾ ತದಗ್ರೇ ಚಾಸ್ಥಿತೋಽಭವತ್ ॥ ೩೨ ॥

೨೮–೨೯. ಗೌತಮ ನಾನು (ನಾರದ) ಬೃಹಸ್ಪತಿ ಮತ್ತು ಇನ್ನೂ ಅನೇಕಮಂದಿ ಮುನಿಗಳು ಶರೀರವನ್ನು ಧರಿಸಿ ಬಂದ ವೇದಗಳೋ ಎನ್ನುವಂತೆ ಮಂಡಿಸಿದ್ದರು. ಆ ಮುನಿಗಳೆಲ್ಲರೂ ಪ್ರತಿಯೊಬ್ಬರೂ ಧರ್ಮತತ್ತ್ವವನ್ನು ಚೆನ್ನಾಗಿ ಅರಿತು ಉಪದೇಶ ಮಾಡುವವರು: ಮತ್ತು ಶ್ರೀಹರಿಯಲ್ಲಿ ಅನನ್ಯವಾದ ಭಕ್ತಿಯನ್ನು ಇಟ್ಟಿರುವವರು.

೩೦. ಇಂಥ ಆ ದಿವ್ಯ ಸಭೆಯಲ್ಲಿ ಮಿಥಿಲಾಧಿಪತಿಯಾದ ಆ ಧೃತಿಯು ಭಕ್ತ್ಯತಿಶಯದಿಂದ ತಲೆಬಾಗಿ ವಿಧಿವತ್ತಾಗಿ ಬಲದೇವನ ಪಾದುಕೆಗಳನ್ನು ಪೂಜಿಸುತ್ತಿದ್ದನು.

೩೧. ಓ ರಾಜೇಂದ್ರ! ಆ ಧೃತಿರಾಜೇಂದ್ರನು ಮೋಕ್ಷದಾಯಕವಾದ ಶ್ರೀಕೃಷ್ಣನ ಮತ್ತು ಬಲದೇವನ ದಿವ್ಯನಾಮಗಳನ್ನು ಜಪಿಸುತ್ತಾ, ತನ್ನ ಸಭೆಗೆ ಶಿಷ್ಯ ಸಮೇತನಾದ ಬ್ರಹ್ಮಚಾರಿಯೊಬ್ಬನು ಪ್ರವೇಶಿಸಿದುದನ್ನು ಕಂಡು ಥಟ್ಟನೆ ಎದ್ದು ಆತನಿಗೆ ನಮಸ್ಕಾರ ಮಾಡಿದನು.

೩೨. ಬಳಿಕ ಆ ಮಿಥಿಲೇಶ್ವರನು ಆ ಬ್ರಹ್ಮಚಾರಿಯನ್ನು ವಿಧಿವತ್ತಾಗಿ ಅರ್ಘ್ಯಪಾದ್ಯಾದ್ಯುಪಚಾರಗಳಿಂದ ಸತ್ಕರಿಸಿ, ಆತನ ಮುಂದೆ ಕೈಗಳನ್ನು ಮುಗಿದು ಕೊಂಡು ನಿಂತುಕೊಂಡನು.

॥ ಜನಕ ಉವಾಚ ॥

ಅದ್ಯಮೇ ಸಫಲಂ ಜನ್ಮ ಮಂದಿರಂ ವಿಶದೀಕೃತಂ ।
ದೇವರ್ಷಿಪಿತರಃ ಸರ್ವೇ ಸಂತುಷ್ಟಾ ಆಗತೇ ತ್ವಯಿ ॥ ೩೩ ॥

ನಿರ್ವಿಕಲ್ಪಾಃ ಸಮುದೃಶಸ್ತ್ವಾದೃಶಾಃ ಸಾಧವಃ ಕ್ಷಿತೌ ।
ನಿಃಶ್ರೇಯಸಾಯ ಭಗವನ್ದೀನಾನಾಂ ವಿಚರಂತಿ ಹಿ ॥ ೩೪ ॥

॥ ಬ್ರಹ್ಮಚಾರ್ಯುವಾಚ ॥

ಧನ್ಯೋಽಸಿ ರಾಜಶಾರ್ದೂಲ ಧನ್ಯಾ ತೇ ಮಿಥಿಲಾಪುರೀ ।
ಧನ್ಯಾಃ ಪ್ರಜಾಶ್ಚ ತೇ ಸರ್ವಾ ವಿಷ್ಣುಭಕ್ತಿಸಮನ್ವಿತಾಃ ॥ ೩೫ ॥

॥ ಜನಕ ಉವಾಚ ॥

ಮಮೇಯಂ ನಗರೀ ನಾಸ್ತಿ ನ ಪ್ರಜಾ ನ ಗೃಹಂ ಧನಂ ।
ಕಲತ್ರಪುತ್ರಪೌತ್ರಾದಿಸರ್ವಂ ಕೃಷ್ಣಸ್ಯ ಚೈವ ಹಿ ॥ ೩೬ ॥

---

೩೩. ಅನಂತರ ಆ ಜನಕವಂಶದ ರಾಜನು ಆತನನ್ನು ಕುರಿತು "ಓ ಪ್ರಭು! ಇಂದು ನೀನು ನಮ್ಮ ಮನೆಗೆ ದಯಮಾಡಿಸಲಾಗಿ ನನ್ನ ಜನ್ಮವು ಸಫಲತೆಯನ್ನು ಪಡೆಯಿತು. ನನ್ನೀ ಮನೆಯು ಪರಿಶುದ್ಧವೆನಿಸಿತು. ನನ್ನ ವಿಷಯದಲ್ಲಿ ದೇವತೆಗಳೂ, ಋಷಿಗಳೂ, ಪಿತೃಗಳೂ ಸುಪ್ರೀತರಾದರು.

೩೪. ಹೇ ಭಗವನ್! ನಿಮ್ಮಂತಹ ಯಾವೊಂದೂ ವಿಕಲ್ಪವೂ ಇಲ್ಲದ ನಿಷ್ಪಕ್ಷಪಾತರಾದ ಸತ್ಪುರುಷರು, ನಮ್ಮಂತಹ ದೀನರು ಮೋಕ್ಷಭಾಗಿಗಳಾಗುವುದಕ್ಕೋಸ್ಕರವೇ ಈ ರೀತಿಯಾಗಿ ಭೂಮಿಯಲ್ಲಿ ಸಂಚರಿಸುತ್ತಿರುವರೆಂದು ನಾನು ಭಾವಿಸಿರುವೆನು." ಎಂದು ನುಡಿಯಲು, ಆ ಬ್ರಹ್ಮಚಾರಿಯು ಆತನನ್ನು ಕುರಿತು—

೩೫. "ಹೇ ನೃಪಶ್ರೇಷ್ಠ! ನೀನೇ ಧನ್ಯನು. ನಿನ್ನೀ ಮಿಥಿಲಾನಗರವೂ ಬಹಳ ಧನ್ಯವಾದುದು. ವಿಷ್ಣುವಿನಲ್ಲೇ ತಮ್ಮ ಭಕ್ತಿಯನ್ನು ಇರಿಸಿರುವ ನಿನ್ನೀ ಪ್ರಜೆಗಳೇ ಪರಮ ಧನ್ಯರು." ಎಂಬುದಾಗಿ ಪ್ರಶಂಸಿಸಿ ನುಡಿದನು.

೩೬. ಅದನ್ನು ಕೇಳಿ ಆ ಜನಕವಂಶದ ರಾಜನು ಆ ಬ್ರಹ್ಮಚಾರಿಯನ್ನು ಕುರಿತು "ಹೇ ಪ್ರಭು! ಈ ನಗರವು ನನ್ನದಲ್ಲ. ಈ ಪ್ರಜೆಗಳೂ, ಈ ಮನೆ ಮಠಗಳೂ, ಈ ಪತ್ನೀ ಪುತ್ರರೂ, ಪೌತ್ರಾದಿಗಳೂ ಯಾವುವೂ ನನ್ನದಲ್ಲ. ಇವೆಲ್ಲವೂ ಸಾಕ್ಷಾತ್ ಶ್ರೀಕೃಷ್ಣನದೇನೇ.

ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ಸ್ವಯಂ ।
ಅಸಂಖ್ಯಬ್ರಹ್ಮಾಂಡಪತಿರ್ಗೋಲೋಕೇ ಧಾಮ್ನಿ ರಾಜತೇ ॥ ೩೭ ॥

ವಾಸುದೇವಃ ಸಂಕರ್ಷಣಃ ಪ್ರದ್ಯುಮ್ನಃ ಪುರುಷಃ ಸ್ವಯಂ ।
ಅನಿರುದ್ಧಸ್ತಥಾ ಚೈಕಶ್ಚತುರ್ವ್ಯೂಹೋಽಭವತ್ಕ್ಷಿತೌ ॥ ೩೮ ॥

ಕಾಯೇನ ಮನಸಾ ವಾಚಾ ಬುದ್ಧ್ಯಾ ವಾ ಚೇಂದ್ರಿಯೈಃ ಕೃತಂ ।
ಕಸ್ಮೈ ಸಮರ್ಪಿತಂ ಕೌಶಲ್ಯಂ ಮಯಾ ಬ್ರಹ್ಮನ್ಮಹಾಮುನೇ ॥ ೩೯ ॥

॥ ಶ್ರೀ ಬ್ರಹ್ಮಚಾರ್ಯುವಾಚ ॥

ಹೇ ವೈದೇಹ ಮಹಾಭಾಗ ವಿಷ್ಣುಭಕ್ತಿಮತಾಂ ವರ ।
ತ್ವದ್ಭಕ್ತ್ಯಾ ತೋಷಿತಃ ಕೃಷ್ಣಸ್ತ್ವೈಕತ್ವಂ ಪ್ರದಾಸ್ಯತಿ ॥ ೪೦ ॥

---

೩೭. ಈ ಶ್ರೀಕೃಷ್ಣನು ಪರಿಪೂರ್ಣತಮನೆನಿಸಿದ ಸಾಕ್ಷಾತ್ ಭಗವಂತನೇ ಆಗಿರುವನು. ಈತನೇ ಅಸಂಖ್ಯಾತವಾದ ಬ್ರಹ್ಮಾಂಡಗಳಿಗೆ ಅಧಿಪತಿಯು. ಈತನು ದಿವ್ಯವಾದ ಗೋಲೋಕಧಾಮದಲ್ಲಿ ನೆಲಸಿ ರಾರಾಜಿಸುತ್ತಿರುವನು.

೩೮. ಈ ಪರಮಪುರುಷನು ತಾನು ಏಕೈಕಪುರುಷನಾಗಿದ್ದರೂ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ರೂಪಗಳಿಂದ ಈ ಭೂಮಿಯಲ್ಲಿ ಚತುರ್ವ್ಯೂಹಮೂರ್ತಿಯಾಗಿ ನೆಲಸಿರುವನು.

೩೯. ಓ ಬ್ರಾಹ್ಮಣೋತ್ತಮ! ಶರೀರದಿಂದಾಗಲಿ, ವಾತಿನಿಂದಾಗಲಿ, ಮನಸ್ಸಿನಿಂದಾಗಲಿ, ಬುದ್ಧಿಯಿಂದಾಗಲಿ, ಹೆಚ್ಚೇಕೆ ಯಾವ ಇಂದ್ರಿಯಗಳಿಂದ ಲಾಗಲಿ ನಾನು ಯಾವ್ಯಾವ ಕರ್ಮಗಳನ್ನು ಮಾಡಿರುವೆನೋ ಅವೆಲ್ಲವನ್ನೂ ನಾನು ಸಂಪೂರ್ಣವಾಗಿ ಶ್ರೀಕೃಷ್ಣನಿಗೇ ಸಮರ್ಪಿಸಿಬಿಟ್ಟಿರುವೆನು " ಎಂದನು.

೪೦. ಇದನ್ನು ಕೇಳಿ ಆ ಬ್ರಹ್ಮಚಾರಿಯು ಆ ಮಿಥಿಲಾನಗರಾಧೀಶನನ್ನು ಕುರಿತು "ಎಲೈ ವಿಷ್ಣುಭಕ್ತಾಗ್ರಣಿಯೇ! ನೀನು ಮಹಾನುಭಾವನು. ನಿನ್ನ ಭಕ್ತಿಗೆ ಮೆಚ್ಚಿ, ಶ್ರೀಕೃಷ್ಣನು ನಿನಗೆ ಸ್ವಾತ್ಮೈಕತ್ವವನ್ನು ಕರುಣಿಸುವನು " ಎನ್ನಲು,

॥ ಜನಕ ಉವಾಚ ॥

ದಾಸೋಽಹಂ ಕೃಷ್ಣಭಕ್ತಾನಾಂ ತ್ವಾದೃಶಾನಾಂ ಮಹಾತ್ಮನಾಂ ।
ಮುಕ್ತಿಂ ನೇಚ್ಛಾಮಿ ಹೇ ಬ್ರಹ್ಮನ್ನೇಕತಾಂ ಹೇತುವರ್ಜಿತಃ ॥ ೪೧ ॥

॥ ಬ್ರಹ್ಮಚಾರ್ಯುವಾಚ ॥

ಕರೋಷ್ಯಹೈತುಕೀಂ ಭಕ್ತಿಂ ರಾಜಂಸ್ತ್ವಂ ಹೇತುವರ್ಜಿತಃ ।
ನಿರ್ಗುಣೈರ್ಭಕ್ತಿಭಾವೈಶ್ಚ ಪ್ರೇಮಲಕ್ಷಣಸಂಯುತಃ ॥ ೪೨ ॥

ಪ್ರದ್ಯುಮ್ನೋ ಭಗವಾನ್ಸಾಕ್ಷಾದ್ದಿಗ್ಜಯಾರ್ಥಂ ವಿನಿರ್ಗತಃ ।
ನಾಯಾತಸ್ತವ ಗೇಹೇಷು ಸಂದೇಹೋ ಮೇ ಮಹಾನಭೂತ್ ॥ ೪೩ ॥

॥ ಜನಕ ಉವಾಚ ॥

ಪ್ರದ್ಯುಮ್ನೋ ಭಗವಾನ್ಸಾಕ್ಷಾದಂತರ್ಯಾಮೀ ಹರಿಃ ಸ್ವಯಂ ।
ಸರ್ವಗಃ ಸರ್ವವಿಚ್ಛಶ್ವದತ್ರ ನಾಸ್ತಿ ಚ ಕಿಂ ಪ್ರಭೋ ॥ ೪೪ ॥

---

೪೧. ಆ ಮಿಥಿಲೇಶ್ವರನು "ಓ ಬ್ರಾಹ್ಮಣೋತ್ತಮ! ಮಹಾನುಭಾವರಾದ ನಿನ್ನಂತಹ ಕೃಷ್ಣಭಕ್ತರ ದಾಸನಾದ ನಾನು ಸಾಕ್ಷಾದ್ಬ್ರಹ್ಮೈಕ್ಯಸ್ವರೂಪವಾದ ಮೋಕ್ಷ ಸುಖವನ್ನು ಬಯಸಲಾರೆನು" ಎಂದನು.

೪೨. ಅದನ್ನು ಕೇಳಿ ಆ ಬ್ರಹ್ಮಚಾರಿಯು ಆತನನ್ನು ಕುರಿತು "ಓ ರಾಜೇಂದ್ರ! ನೀನು ಆ ಪರಮಾತ್ಮನಲ್ಲಿ ಯಾವೊಂದು ಉದ್ದೇಶವನ್ನೂ ಇಟ್ಟುಕೊಳ್ಳದೆ, ಗುಣಾತೀತವೂ, ದಿವ್ಯವೂ, ಪ್ರೇಮರೂಪವೂ ಆದ ಅಹೇತುಕವಾದ ಭಕ್ತಿಯನ್ನು ಇಟ್ಟಿರುವೆಯಷ್ಟೆ."

೪೩. ಹೀಗಿದ್ದರೂ ಭಗವಂತನ ಸಾಕ್ಷಾತ್ಸ್ವರೂಪನೆನಿಸಿದ ಆ ಪ್ರದ್ಯುಮ್ನನು ದಿಗ್ವಿಜಯದ ಸಲುವಾಗಿ ಹೊರಟನು. ಇದುವರೆಗೂ ನಿನ್ನ ಮನೆಗೇಕೆ ಬಂದಿರುವುದಿಲ್ಲ? ಈ ವಿಷಯದಲ್ಲಿ ನನಗೆ ಬಹಳ ಸಂದೇಹವುಂಟಾಗಿರುವುದು" ಎಂದು ನುಡಿಯಲು—

೪೪. ಆ ಮಿಥಿಲಾರಾಜನು ಆ ಬ್ರಹ್ಮಚಾರಿಯನ್ನು ಕುರಿತು "ಎಲೈ ಪ್ರಭುವೆ! ಸರ್ವಾಂತರ್ಯಾಮಿಯೂ, ಸರ್ವತ್ರ ಸಂಚಾರಿಯೂ ಆದ ಸಾಕ್ಷಾತ್ ಶ್ರೀಹರಿಯ ಸ್ವಯಂರೂಪನೂ ಆದ ಆ ಪ್ರದ್ಯುಮ್ನನು ಇಲ್ಲಿ ಎಂದಿಗೂ ಇಲ್ಲವೇ ಇಲ್ಲವೆಂದು ನಿಮ್ಮ ಅಭಿಪ್ರಾಯವೇನು?" ಎಂದು ಪ್ರಶ್ನಿಸಲು,

॥ ಬ್ರಹ್ಮಚಾರ್ಯುರ್ವಾಚ ॥

ಜ್ಞಾನದೃಷ್ಟ್ಯಾಪಿ ಚೇತ್ಕಾರ್ಷ್ಣಿಂ ಮನ್ಯಸೇಽತ್ರ ನಿರಂತರಂ ।
ತರ್ಹಿ ದರ್ಶಯ ತಂ ದೇವಂ ಪ್ರಹ್ಲಾದ ಇವ ದಿವ್ಯದೃಕ್ ॥ ೪೫ ॥

॥ ಶ್ರೀ ನಾರದ ಉವಾಚ ॥

ಏತಚ್ಛ್ರುತ್ವಾ ತದಾ ರಾಜಾ ಮಹಾಭಾಗವತೋ ಧೃತಿಃ ।
ಅಶ್ರುಪೂರ್ಣಮುಖೋ ಭೂತ್ವಾ ಪ್ರಾಹ ಗದ್ಗದಯಾ ಗಿರಾ ॥ ೪೬ ॥

॥ ಜನಕ ಉವಾಚ ॥

ಯದಿ ಮೇ ಶ್ರೀಹರೇರ್ಭಕ್ತಿರನಿಮಿತ್ತಾ ಕೃತಾ ಭುವಿ ।
ತರ್ಹಿ ಕಾರ್ಷ್ಣಿರ್ಹರೇಃ ಪುತ್ರಃ ಪ್ರಾದುರ್ಭೂಯಾನ್ಮಮಾಗ್ರತಃ ॥ ೪೭ ॥

---

೪೫. ಆಗ ಆ ಬ್ರಹ್ಮಚಾರಿಯು, "ಶ್ರೀಕೃಷ್ಣಪುತ್ರನಾದ ಆ ಪ್ರದ್ಯುಮ್ನನು ಇಲ್ಲಿರುವನೆಂಬುದಾಗಿ ನೀನು ಜ್ಞಾನದೃಷ್ಟಿಯಿಂದಲಾದರೂ ನೋಡುವೆಯಾದರೆ, ಹಾಗಿದ್ದ ಪಕ್ಷದಲ್ಲಿ ಆ ಪರಮಪುರುಷನನ್ನು ದಿವ್ಯದೃಷ್ಟಿಯುಳ್ಳ ಪ್ರಹ್ಲಾದನಂತೆ ನನಗೆ ತೋರಿಸುವವನಾಗು" ಎಂದು ನುಡಿದನು.

೪೬. ಓ ಬಹುಳಾಶ್ವನರೇಂದ್ರ! ಈರೀತಿ ಆತನು ನುಡಿದುದನ್ನು ಕೇಳಿ, ಆ ಭಾಗವತೋತ್ತಮನಾದ ಧೃತಿಯೆಂಬ ರಾಜನು ಕಣ್ಣಿನಲ್ಲಿ ಆನಂದಬಾಷ್ಪವನ್ನು ಸುರಿಸುತ್ತಾ, ಗದ್ಗದ ಕಂಠದಿಂದ—

೪೭. "ನಾನು ಶ್ರೀಹರಿಯಲ್ಲಿ ಯಾವೊಂದು ಇಷ್ಟಾರ್ಥಸಾಧನೆಗಾಗಿಯೂ ಅಲ್ಲದೆ, ನಿರ್ಹೇತುಕವಾದ ಭಕ್ತಿಯನ್ನು ವಹಿಸಿರುವುದೇ ನಿಜವಾಗಿದ್ದಲ್ಲಿ ಶ್ರೀಕೃಷ್ಣಪುತ್ರನಾದ ಆ ಪ್ರದ್ಯುಮ್ನನು ನನ್ನ ಮುಂದೆ ಪ್ರತ್ಯಕ್ಷನಾಗಲಿ.

ಯದಿ ಶ್ರೀಕೃಷ್ಣಭಕ್ತಾನಾಂ ದಾಸೋಽಹಂ ಯದಿ ತತ್ಕೃಪಾ ।
ಸರ್ವತ್ರ ಯದಿ ತದ್ಭಾವಸ್ತರ್ಹಿ ಭೂಯಾನ್ಮನೋರಥಃ ॥ ೪೮ ॥

॥ ಶ್ರೀ ನಾರದ ಉವಾಚ ॥

ಪ್ರಾದುರ್ಬಭೂವಾಶು ತದೈವ ಕಾರ್ಷ್ಣಿ-
ರ್ವಿಸೃಜ್ಯ ಸದ್ಯಃ ಕಿಲ ವರ್ಣರೂಪಂ ।
ಪಶ್ಯತ್ಸು ಸರ್ವೇಷು ಜನೇಷು ಶಿಷ್ಯಃ
ಸಗದ್ಗದೋಽಭೂದ್ಧರಿಭಕ್ತಿನಿಷ್ಠಃ ॥ ೪೯ ॥

ಘನಪ್ರಭಂ ಪದ್ಮದಲಾಯತೇಕ್ಷಣಂ
ಪ್ರಲಂಬಬಾಹುಂ ಜಗತಾಂ ಮನೋಹರಂ ।
ಪೀತಾಂಬರಂ ನೀಲಗುಡಾಲಕಾಲಿಭಿಃ
ಸ್ವಲಂಕೃತಂ ಶ್ರೀಮುಖಪದ್ಮಮಂಡಲಂ ॥ ೫೦ ॥

---

೪೮. ಮತ್ತು ನಾನು ಶ್ರೀಕೃಷ್ಣಭಕ್ತರಿಗೆ ಸೇವಕನೇ ಆಗಿದ್ದಲ್ಲಿ ಆ ಶ್ರೀಕೃಷ್ಣನ ಅನುಗ್ರಹವು ನನ್ನ ಮೇಲೆ ಇರುವುದೇ ಆದಲ್ಲಿ, ಮತ್ತು ಆ ಶ್ರೀಕೃಷ್ಣನು ಸರ್ವತ್ರ ನೆಲಸಿರುವುದು ನಿಜವೇ ಆದಲ್ಲಿ ನನ್ನೀ ಬಯಕೆಯು ನೆರವೇರಲಿ" ಎಂದು ನುಡಿದನು.

೪೯. ಓ ರಾಜೇಂದ್ರ! ಹೀಗೆ ಆತನು ನುಡಿಯುತ್ತಲೇ ಆ ಶ್ರೀಕೃಷ್ಣ ಪುತ್ರನಾದ ಪ್ರದ್ಯುಮ್ನನು ಥಟ್ಟನೆ ಅಲ್ಲಿದ್ದ ಸಭಿಕರೆಲ್ಲರೂ ನೋಡುತ್ತಿರುವಂತೆ ಆ ಕಪಟ ಬ್ರಹ್ಮಚಾರಿ ರೂಪವನ್ನು ಬಿಟ್ಟು, ನಿಜರೂಪದಿಂದ ಪ್ರತ್ಯಕ್ಷನಾದನು. ಆಗ ಆ ಹರಿಭಕ್ತಾಗ್ರೇಸರನಾದ ಧೃತಿರಾಜನು ಗದ್ಗದಿತನಾದನು.

೫೦. ಓ ಬಹುಲಾಶ್ವನರೇಂದ್ರ! ಆ ಪ್ರದ್ಯುಮ್ನನ ದಿವ್ಯರೂಪವನ್ನು ಏನೆಂದು ವರ್ಣಿಸಲಿ. ಮೇಘದಂತೆ ಶ್ಯಾಮಲವಾದ ಶರೀರಕಾಂತಿ! ಕಮಲದ ದಳದಂತೆ ವಿಶಾಲವಾದ ಕಣ್ಣುಗಳು! ಉದ್ದವಾದ ತೋಳುಗಳು! ಜಗತ್ತಿನ ಮನಸ್ಸನ್ನೇ ಸೂರೆಗೊಳ್ಳುವಂತಹ ದಿವ್ಯ ಸೌಂದರ್ಯ! ಕಪ್ಪಾದ ಮುಂಗುರುಳುಗಳಿಂದ ಕಂಗೊಳಿಸುವ ಮುದ್ದಾದ ಕಮಲದಂತೆ ಅರಳಿರುವ ಮುಖಮಂಡಲ!

ಶೀತರ್ತುಬಾಲಾರ್ಕಕಿರೀಟಕುಂಡಲಂ
ಕಾಂಚ್ಯಂಗದಸ್ಫೂರ್ಜಿತದಿವ್ಯವಿಗ್ರಹಂ ।
ವಿಲೋಕ್ಯ ತಂ ಕೃಷ್ಣಸುತಂ ಕೃತಾಂಜಲಿ-
ರ್ನನಾಮ ಸಾಷ್ಟಾಂಗಮಲಂ ಧೃತಿರ್ನೃಪಃ ॥ ೫೧ ॥

॥ ಜನಕ ಉವಾಚ ॥

ಅಹೋಽತಿಧನ್ಯಂ ಮಮ ಭೂರಿಭಾಗ್ಯಂ
ದತ್ತಂ ತ್ವಯಾ ಮೇ ನಿಜದರ್ಶನಂ ಹಿ ।
ಜಾತೋಽದ್ಯ ಕಾಯಾಧವತುಲ್ಯ ಆರಾ-
ದ್ಗೃಹಂ ಕೃತಾರ್ಥೋಽಸ್ಮಿ ಕುಲೇನ ಭೂರ್ಮೇ ॥ ೫೨ ॥

॥ ಶ್ರೀ ಪ್ರದ್ಯುಮ್ನ ಉವಾಚ ॥

ಧನ್ಯಸ್ತ್ವಂ ನೃಪಶಾರ್ದೂಲ ಭಕ್ತಸ್ತ್ವಂ ಮತ್ಪ್ರಭಾವವಿತ್ ।
ಭಕ್ತಿಭಾವಪರೀಕ್ಷಾರ್ಥಂ ಪ್ರಾಪ್ತೋಽಹಂ ತವ ಸಾಂಪ್ರತಂ ॥ ೫೩ ॥

---

೫೧. ಮತ್ತು ಶಿಶಿರಋತುವಿನ ಪ್ರಭಾತ ಸಮಯದಲ್ಲಿ ಶೋಭಿಸುವ ಎಳೆಯ ಸೂರ್ಯನಂತೆ ಮನೋಹರವಾಗಿರುವ ಕಿರೀಟ! ಮತ್ತು ಕುಂಡಲಗಳು, ಅಂದವಾದ ಒಡ್ಯಾಣದಿಂದಲೂ, ತೋಳು ಬಳೆಗಳಿಂದಲೂ ಹೊಳೆಯುತ್ತಿರುವ ಸೊಗಸಾದ ಶರೀರ! ಇಂತಹ ದಿವ್ಯರೂಪದಿಂದ ಒಪ್ಪುತ್ತಿರುವ ಆ ಪ್ರದ್ಯುಮ್ನಕುಮಾರನನ್ನು ಕಂಡು ಆ ಧೃತಿರಾಜನು ಭಕ್ತಿಯಿಂದ ಕೈಮುಗಿದುಕೊಂಡು ಸಾಷ್ಟಾಂಗಪ್ರಣಾಮವನ್ನು ಮಾಡಿದನು.

೫೨. ಬಳಿಕ ಆ ಜನಕವಂಶೀಯನಾದ ಧೃತಿಯು ಆ ಪ್ರದ್ಯುಮ್ನನನ್ನು ಕುರಿತು “ಓ ಮಹಾಮಹಿಮ! ನನ್ನ ಭಾಗ್ಯವು ಅಸದೃಶವಾದುದು. ಪಾವನವಾದ ನಿನ್ನ ಸಂದರ್ಶನವನ್ನು ನನ್ನ ಮನೆಯ ಬಳಿಯಲ್ಲಿಯೇ ನೀನು ನನಗೆ ಕರುಣಿಸಿರುವೆ. ಈಗ ನಾನು ನಿಜವಾಗಿಯೂ ಪ್ರಹ್ಲಾದನಿಗೆ ಸಮಾನನಾದವನೆನಿಸಿದೆ. ನಾನೂ, ನನ್ನ ವಂಶವೂ ಇಂದು ಕೃತಕೃತ್ಯರಾದೆವು” ಎಂದು ಸ್ತುತಿಸಿದನು.

೫೩. ಆಗ ಪ್ರದ್ಯುಮ್ನನು ಆ ಧೃತಿರಾಜನನ್ನು ಕುರಿತು “ಓ ನೃಪೋತ್ತಮ! ನೀನು ಧನ್ಯನು! ನಿಜವಾಗಿಯೂ ನೀನು ಭಕ್ತನೆನಿಸಿ ನನ್ನ ಪ್ರಭಾವವನ್ನು ಚೆನ್ನಾಗಿ ಅರಿತಿರುವೆ. ನಿನ್ನ ಭಕ್ತಿಯನ್ನು ಪರೀಕ್ಷಿಸಬೇಕೆಂಬುದಾಗಿಯೇ ಈಗ ನಿನ್ನ ಬಳಿಯನ್ನು ಕುರಿತು ಬಂದೆನು.

ಅದ್ಯೈವ ಮಮ ಸಾರೂಪ್ಯಂ ಭೂಯಾತ್ತೇ ಮೈಥಿಲೇಶ್ವರ ।
ಬಲಮಾಯುರ್ಯಶಃ ಕೀರ್ತಿರಿಹಲೋಕೇ ಭವತ್ವಲಂ ॥ ೫೪ ॥

॥ ಶ್ರೀ ನಾರದ ಉವಾಚ ॥

ತವ ಪಿತ್ರಾ ಚ ಧೃತಿನಾ ಪೂಜಿತಃ ಪಶ್ಯತಾಂ ಸತಾಂ ।
ಪ್ರಯಯೌ ಶಿಬಿರಾನ್ರಾಜನ್ಪ್ರದ್ಯುಮ್ನೋ ಭಕ್ತವತ್ಸಲಃ ॥ ೫೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಜನಕೋಪಾಖ್ಯಾನಂ ನಾಮ ಷೋಡಶೋಽಧ್ಯಾಯಃ

---

೫೪. "ಓ ಮಿಥಿಲಾನರಾಧೀಶ! ಈಗಲೇ ನಿನಗೆ ನನ್ನ ಸಾರೂಪ್ಯವು ಸಿದ್ಧಿಸಲಿ. ಮತ್ತು ಈ ಲೋಕದಲ್ಲಿ ನಿನಗೆ ಬಲವೂ, ಆಯುಸ್ಸೂ, ಯಶಸ್ಸೂ, ಸಮೃದ್ಧಿಯಾಗಿ ದೊರೆಯಲಿ" ಎಂದು ಅನುಗ್ರಹಿಸಿದನು.

೫೫. ಓ ಬಹುಲಾಶ್ವನರೇಂದ್ರ! ಈ ರೀತಿಯಾಗಿ ನಿನ್ನ ತಂದೆಯಾದ ಧೃತಿರಾಜನಿಂದ ಭಕ್ತವತ್ಸಲನಾದ ಆ ಪ್ರದ್ಯುಮ್ನನು ಸಂಪೂಜಿತನಾಗಿ ಆ ಸಭೆಯಲ್ಲಿದ್ದ ಸಜ್ಜನರು ನೋಡುತ್ತಿರುವಂತೆಯೇ ತನ್ನ ಶಿಬಿರವನ್ನು ಕುರಿತು ತೆರಳಿದನು.

ಇಲ್ಲಿಗೆ ಶ್ರೀಗರ್ಗ ಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವ ಸಂವಾದದಲ್ಲಿ ಜನಕೋಪಾಖ್ಯಾನವೆಂಬ
ಹದಿನಾರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಸಪ್ತದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥಾತೋ ಮಾಗಧಾನ್ಜೇತುಂ ಪ್ರದ್ಯುಮ್ನೋ ಮೀನಕೇತನಃ ।
ಗಿರಿವ್ರಜಂ ಜಗಾಮಾಶು ಸ್ವಸೈನ್ಯೈಃ ಪರಿವಾರಿತಃ ॥ ೧ ॥

ಶ್ರುತ್ವಾಗತಂ ಹರೇಃ ಪುತ್ರಂ ದಿಗ್ಜಯಾರ್ಥಂ ವಿಶೇಷತಃ ।
ಜರಾಸಂಧೋ ಮಾಗಧೇಂದ್ರೋ ಮಹಾಕೋಪಂ ಚಕಾರ ಹ ॥ ೨ ॥

ಹದಿನೇಳನೆಯ ಅಧ್ಯಾಯವು

೧. ನಾರದಮಹರ್ಷಿಯು ಹೇಳತೊಡಗಿದನು :—ಓ ರಾಜೇಂದ್ರ ! ಆಲಿಸು. ಬಳಿಕ ಮೀನಧ್ವಜನಾದ ಪ್ರದ್ಯುಮ್ನನು ತನ್ನ ಸೇನೆಯಿಂದ ಪರಿವೃತನಾಗಿ ಮಗಧ ದೇಶವನ್ನು ಜಯಿಸಲು ಗಿರಿವ್ರಜನೆಂಬ ನಗರಕ್ಕೆ ಅಭಿಮುಖವಾಗಿ ಬೇಗನೆ ತೆರಳಿದನು.

೨. ಆ ಮಗಧದೇಶದ ಅಧಿಪತಿಯಾದ ಜರಾಸಂಧನು ಶ್ರೀಕೃಷ್ಣಪುತ್ರನಾದ ಪ್ರದ್ಯುಮ್ನನು ತನ್ನ ದೇಶಕ್ಕೆ ಅದರಲ್ಲೂ ವಿಜಯಾರ್ಥಿಯಾಗಿ ಬಂದಿರುವನೆಂಬ ವೃತ್ತಾಂತವನ್ನು ಕೇಳಿ ಬಹುವಾಗಿ ಕೋಪವನ್ನು ತಾಳಿದನು.

|| ಜರಾಸಂಧ ಉವಾಚ ||

ತುಚ್ಛಾ ಯೇ ಯಾದವಾಃ ಸರ್ವೇ ಯುಧಿ ವಿಕ್ಲಲಚೇತಸಃ ।
ತೇಽದ್ಯ ನೈ ಜಗತೀಂ ಜೇತುಂ ನಿರ್ಗತಾ ಗತಬುದ್ಧಯಃ || ೩ ||

ಮಧುರಾಂ ಸ್ವಪುರೀಂ ತ್ಯಕ್ತ್ವಾ ಮದ್ಭಯಾನ್ಮಾಧವೋಽಪಿ ಹಿ ।
ಸಮುದ್ರಂ ಶರಣಂ ಪ್ರಾಗಾತ್ಪಿತಾ ಚಾಸ್ಯ ದುರಾತ್ಮನಃ || ೪ ||

ಪ್ರವರ್ಷಣೇ ರಾಮಕೃಷ್ಣೌ ಮಯಾ ಭಸ್ಮೀಕೃತೌ ಬಲಾತ್ ।
ಛಲಾದ್ದುದ್ರುವತುಸ್ತೌ ದ್ವೌ ದ್ವಾರಕಾಯಾಂ ಸಮಾಶ್ರಿತೌ || ೫ ||

ಬದ್ಧ್ವಾ ತೌ ಚಾನಯಿಷ್ಯಾಮಿ ಸೋಗ್ರಸೇನೌ ಕುಶಸ್ಥಲೀಂ ।
ಅಯಾದವೀಂ ಕರಿಷ್ಯಾಮಿ ಪೃಥ್ವೀಂ ಸಾಗರಮೇಖಲಾಂ || ೬ ||

---

೩. ಬಳಿಕ ಆ ಜರಾಸಂಧನು ಈ ರೀತಿ ನುಡಿದನು:—ಈ ಯಾದವರೆಲ್ಲರೂ ಅತಿ ಕ್ಷುದ್ರ ಜನರು. ಯುದ್ಧವೆಂದರೆ ಧೈರ್ಯವಿಲ್ಲದೆ ತಲ್ಲಣಿಸುವ ಹೇಡಿಗಳು. ಇಂಥ ಈ ಯಾದವರು ಈಗ ಬುದ್ಧಿ ಕೆಟ್ಟು ಪ್ರಪಂಚವನ್ನೇ ಗೆಲ್ಲುವೆವೆಂದು ಹೊರಟಿರುವರು.

೪. ಈಗ ದಂಡೆತ್ತಿ ಬಂದಿರುವ ದುರಾತ್ಮನಾದ ಪ್ರದ್ಯುಮ್ನನ ತಂದೆಯಾದ ಶ್ರೀಕೃಷ್ಣನೂ ಸಹ ನನ್ನ ಹೆದರಿಕೆಯಿಂದ ತನ್ನ ಊರಾದ ಮಥುರೆಯನ್ನು ಪರಿತ್ಯಜಿಸಿ ಸಮುದ್ರವನ್ನು ಮರೆಹೊಕ್ಕಿರುವನು.

೫. ಹಿಂದೆ ಪ್ರವರ್ಷಣವೆಂಬಲ್ಲಿ ಆ ಕೃಷ್ಣನೂ ಬಲರಾಮನೂ ನನ್ನ ಪರಾಕ್ರಮವನ್ನು ತಡೆಯಲಾರದೆ ಭಸ್ಮೀಭೂತರಾದಂತಾಗಿ ಯಾವುದೋ ಒಂದು ನೆಪದಿಂದ ಆ ರಣರಂಗವನ್ನು ಬಿಟ್ಟೋಡಿ ಬಂದು ದ್ವಾರಕೆಯನ್ನು ಹೊಕ್ಕಿಕೊಂಡಿರುವರು.

೬. ನಾನೀಗ ಆ ಕುಶಸ್ಥಲಿಯನ್ನು (ದ್ವಾರಕೆ) ಮುತ್ತಿ, ಆ ಬಲರಾಮಕೃಷ್ಣರನ್ನೂ, ಉಗ್ರಸೇನನನ್ನೂ ಸೆರೆ ಹಿಡಿದು ಇಲ್ಲಿಗೆ ಕರೆತರುವೆನು. ಮತ್ತು ಸಾಗರಗಳೇ ಒಡ್ಯಾಣವೆನಿಸಿರುವ (ಮೇರೆಯಾಗಿರುವ) ಈ ಭೂಮಿಯಲ್ಲೆಲ್ಲಾ ಯಾದವರೇ ಇಲ್ಲದಂತೆ ಮಾಡಿಬರುವೆನು.

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ನಿರ್ಗತೋ ರಾಜಾ ಗಿರಿವ್ರಜಪುರಾದ್ಬಹಿಃ ।
ಅಕ್ಷೌಹಿಣೀಭಿರ್ವಿಂಶತ್ಯಾ ತಿಸೃಭಿಃ ಸಂಯುತೋ ಬಲೀ ॥ ೭ ॥

ಗೋಮೂತ್ರಚಯಸಿಂದೂರಕಸ್ತೂರೀಪತ್ರಭೃನ್ಮುಖೇ ।
ಸ್ರವನ್ಮದೈಶ್ಚತುರ್ದಂತೈರೈರಾವತಕುಲೋದ್ಭವೈಃ ॥ ೮ ॥

ಶುಂಡಾದಂಡಸ್ಯ ಫೂತ್ಕಾರೈಃ ಕ್ಷೇಪಯದ್ಭಿಸ್ತರೂನ್ಮಹೂನ್ ।
ಬಭೌ ಗಜೈರ್ಮಾಗಧೇಂದ್ರೋ ಮೇಘೈರಿಂದ್ರ ಇವ ಪ್ರಭುಃ ॥ ೯ ॥

ರಥೈಶ್ಚ ದೇವಧಿಷ್ಣ್ಯಾಭೈಃ ಸಧ್ವಜೈರಶ್ವನೇತೃಭಿಃ ।
ಚಾಮರೈರ್ದೋಲಿತೈ ರಾಜನ್ ಲೋಲಚಕ್ರಧ್ವನಿದ್ಯುತಿಃ ॥ ೧೦ ॥

---

೭. ಓ ಬಹುಲಾಶ್ವನರೇಂದ್ರ! ಈ ರೀತಿಯಾಗಿ ಆ ಮಗಧೇಶ್ವರನಾದ ಜರಾಸಂಧನು ಕೋಪದಿಂದ ನುಡಿದು ತನ್ನ ಊರಾದ ಗಿರಿವ್ರಜದಿಂದ ಇಪ್ಪತ್ತು ಮೂರು ಅಕ್ಷೌಹಿಣೀ ಸೇನೆಯೊಡನೆ ಹೊರಹೊರಟನು.

೮-೯. ಓ ರಾಜೇಂದ್ರ! ಆ ಮಗಧೇಂದ್ರನ ಸೇನೆಯಲ್ಲಿದ್ದ ಆನೆಗಳೆಲ್ಲವೂ ಐರಾವತದ ವಂಶದಲ್ಲಿ ಹುಟ್ಟಿದುವು. ಪ್ರತಿಯೊಂದೂ ಸರ್ವದಾ ಧಾರಾಕಾರವಾಗಿ ಮದೋದಕವನ್ನು ಸುರಿಸುತ್ತಿರುವಂತಹುದು. ಒಂದೊಂದೂ ನಾಲ್ಕು ನಾಲ್ಕು ಕೊಂಬುಗಳಿಂದ ಶೋಭಿಸುತ್ತಿರುವಂತಹುವು. ಮತ್ತು ಮುಖಗಳಲ್ಲಿ ಗೋಮೂತ್ರಿಕಾದಿ ಕ್ರಮಗಳಲ್ಲಿ ಸಿಂದೂರವನ್ನೂ (ಚಂದ್ರ), ಕಸ್ತೂರಿ ಪತ್ರರಚನೆಯನ್ನೂ ತಿದ್ದಲ್ಪಟ್ಟಂತಹವು. ಮತ್ತು ಆ ಆನೆಗಳು ತಮ್ಮ ಸೊಂಡಲುಗಳ ಫೂತ್ಕಾರಗಳಿಂದಲೇ ಅನೇಕ ಮರಗಳನ್ನೂ ಉರುಳಿಸಿಬಿಡಬಲ್ಲುವು. ಇಂಥ ಆನೆಗಳಿಂದ ಪರಿವೃತನಾದ ಆ ಜರಾಸಂಧನು ಮೇಘಗಳಿಂದ ಪರಿವೃತನಾದ ದೇವೇಂದ್ರನಂತೆ ಕಂಗೊಳಿಸುತ್ತಿದ್ದನು.

೧೦. ಮತ್ತು ಆತನ ಸೇನೆಯಲ್ಲಿದ್ದ ರಥಗಳು ಪ್ರತಿಯೊಂದೂ ಧ್ವಜಗಳಿಂದ ಅಲಂಕೃತವಾಗಿ ದೇವಾಲಯಗಳಂತೆ ಕಂಗೊಳಿಸುತ್ತಿದ್ದುವು. ಆ ರಥಗಳ ಕುದುರೆಗಳೂ, ಸಾರಥಿಗಳೂ, ಅಲುಗಾಡುತ್ತಿರುವ ಚಾಮರಗಳೂ, ಕಿರಕಿರನೆ ಸದ್ದು ಮಾಡುತ್ತಿರುವ, ಚಲಿಸುತ್ತಿರುವ ಚಕ್ರಗಳೂ ರಮಣೀಯವಾಗಿದ್ದುವು.

ತುರಂಗಮೈರ್ವಾಯುವೇಗೈಶ್ಚಿತ್ರವರ್ಣೈರ್ಮದೋತ್ಕಟೈಃ ।
ಸೌವರ್ಣಪಟ್ಟಹಾರಾದ್ಯೈಃ ಶಿಖಾರಶ್ಮ್ಯರ್ಧ್ವಚಾಮರೈಃ ॥ ೧೧ ॥

ಸಕಂಚುಕೈರ್ವೀರಜನ್ಯೈಃ ಖಡ್ಗಚರ್ಮಧನುರ್ಧರೈಃ ।
ವಿದ್ಯಾಧರಸಮೈಃ ಪ್ರಾಗಾನ್ಮಾಗಧೇಂದ್ರೋ ಮಹಾಬಲಃ ॥ ೧೨ ॥

ಧುಂಕಾರೈರ್ದುಂದುಭೀನಾಂ ಚ ದಿಶೋ ನೇದುರ್ಧನುಃ ಸ್ವನೈಃ ।
ಚಚಾಲ ವಸುಧಾ ಸೈನ್ಯೈ ರಜೋಭಿಶ್ಛಾದಿತಂ ನಭಃ ॥ ೧೩ ॥

ಜರಾಸಂಧಸ್ಯ ತತ್ಸೈನ್ಯಂ ಪ್ರಲಯಾಬ್ಧಿಮಿವೋಲ್ಬಣಂ ।
ವಿಸ್ಮಿತಾ ಯಾದವಾಃ ಸರ್ವೇ ಬಭೂವುರ್ವೀಕ್ಷ್ಯ ಮೈಥಿಲ ॥ ೧೪ ॥

---

೧೧. ಆ ರಥಗಳಂತೆಯೇ ಆ ಮಗಧರಾಜನ ಪಡೆಯಲ್ಲಿದ್ದ ಕುದುರೆಗಳೂ ಸಹ ವೇಗದಲ್ಲಿ ವಾಯುವಿಗೆ ಸಮವೆನಿಸಿ ನಾನಾವಿಧವಾದ ಬಣ್ಣಗಳಿಂದ ಕಂಗೊಳಿಸುತ್ತಾ, ಮದದಿಂದ ಕೊಬ್ಬಿದವುಗಳಾಗಿ ಚಿನ್ನದ ಸರಗಳಿಂದಲೂ, ರೇಶಿಮೆಯ ಕುಚ್ಚುಗಳಿಂದಲೂ, ಶಿಲಾಭರಣಗಳಿಂದಲೂ, ಲಗಾಮುಗಳಿಂದಲೂ, ಮೇಲ್ಮುಖವಾದ ಕಿರುಚಾಮರಗಳಿಂದಲೂ ಅಲಂಕರಿಸಲ್ಪಟ್ಟು ಮೆರೆಯುತ್ತಿದ್ದುವು.

೧೨. ಅದರಂತೆ ಆ ಸೇನೆಯಲ್ಲಿದ್ದ ಕಾಲಾಳುಗಳು ಪ್ರತಿಯೊಬ್ಬನೂ ಉಕ್ಕಿನ ಕವಚವನ್ನು ತೊಟ್ಟು, ಕತ್ತಿ ಗುರಾಣಿಗಳನ್ನೂ, ಬಿಲ್ಲು ಬಾಣಗಳನ್ನೂ ಧರಿಸಿ, ಪರಾಕ್ರಮದಲ್ಲಿ ವಿದ್ಯಾಧರರಿಗೆ ಎಣೆಯೆನಿಸಿದ್ದರು. ಇಂಥ ಚತುರಂಗಬಲದೊಡಗೂಡಿ ಆ ಮಗಧರಾಜನಾದ ಜರಾಸಂಧನು ಪ್ರದ್ಯುಮ್ನನಿಗೆದುರಾಗಿ ಬಂದನು.

೧೩. ಈ ರೀತಿ ಬರುವಾಗ ಅವನ ಕಡೆಯ ರಣಭೇರಿಗಳ ಧಂಧುಂ ಎಂಬ ಶಬ್ದಗಳಿಂದಲೂ, ಬಿಲ್ಲುಗಳ ಝೇಂಕಾರಗಳಿಂದಲೂ ದಿಕ್ಕುಗಳು ಮೊಳಗಿಹೋದುವು. ಆ ಸೇನೆಯ ಪದಾಘಾತದಿಂದ ಭೂಮಿಯು ನಡುಗಿಹೋಯಿತು. ಆಗ ನೆಲದಿಂದ ಎದ್ದ ದೂಳಿನಿಂದ ಆಕಾಶವೇ ಮುಚ್ಚಿಹೋಯಿತು.

೧೪. ಓ ಮಿಥಿಲಾನರೇಂದ್ರ ! ಪ್ರಳಯಕಾಲದ ಸಮುದ್ರದಂತೆ ಮೇರೆ ಮೀರಿ ಬರುತ್ತಿರುವ ಆ ಜರಾಸಂಧನ ಸೇನೆಯನ್ನು ಕಂಡು ಯಾದವರೆಲ್ಲರೂ ಬಹು ಅಚ್ಚರಿಗೊಂಡರು.

ಪ್ರದ್ಯುಮ್ನೋ ಭಗವಾನ್ವೀಕ್ಷ್ಯ ಮಾಗಧೇಂದ್ರಬಲಾರ್ಣವಂ ।
ಶಂಖಂ ದಧ್ಮೌ ದಕ್ಷಿಣಾಖ್ಯಂ ಮಾ ಭೈಷ್ಟೇತ್ಯಭಯಂ ದದನ್ ॥ ೧೫ ॥

ತತಃ ಸಾಂಬೋ ಮಹಾಬಾಹುಃ ಪ್ರದ್ಯುಮ್ನಸ್ಯ ಪ್ರಪಶ್ಯತಃ ।
ಅಕ್ಷೌಹಿಣೀನಾಂ ದಶಭಿರ್ಯುಯುಧೇ ಮಾಗಧೇನ ಸಃ ॥ ೧೬ ॥

ಗಜಾ ಗಜೈರ್ಯುಯುಧಿರೇ ರಥಿಭೀ ರಥಿನೋ ಮೃಧೇ ।
ಹಯಾ ಹಯೈಃ ಪತ್ತಯಶ್ಚ ಪತ್ತಿಭಿರ್ಮೈಥಿಲೇಶ್ವರ ॥ ೧೭ ॥

ಬಭೂವ ತುಮುಲಂ ಯುದ್ಧಮದ್ಭುತಂ ರೋಮಹರ್ಷಣಂ ।
ಮಾಗಧಾನಾಂ ಯದೂನಾಂ ಚಾಸುರಾಣಾಂ ನಿರ್ಜರೈರ್ಯಥಾ ॥ ೧೮ ॥

---

೧೫. ಆಗ ಭಗವಂತನಾದ ಪ್ರದ್ಯುಮ್ನನು ಸಾಗರದಂತೆ ಅಪಾರವಾಗಿ ಬರುತ್ತಿರುವ ಜರಾಸಂಧನ ಸೇನೆಯನ್ನು ಕಾಣುತ್ತಲೇ ತನ್ನ ಕಡೆಯವರಿಗೆ ಹೆದರ ಬೇಡಿರೆಂದು ಅಭಯವನ್ನೀಯುತ್ತಾ ದಕ್ಷಿಣವೆಂಬ ತನ್ನ ಶಂಖವನ್ನು ಒಂದುಬಾರಿ ಊದಿದನು.

೧೬. ಆಗ ಮಹಾಬಾಹುವಾದ ಸಾಂಬನು ಪ್ರದ್ಯುಮ್ನನು ನೋಡುತ್ತಿರುವಂತೆ ಹತ್ತು ಅಕ್ಷೌಹಿಣೀ ಸೇನೆಯನ್ನು ತೆಗೆದುಕೊಂಡು ಆ ಮಗಧರಾಜನೊಡನೆ ಯುದ್ಧಕ್ಕೆ ತೊಡಗಿದನು.

೧೭. ಓ ಮಿಥಿಲಾನರೇಂದ್ರ! ಆ ಯುದ್ಧದಲ್ಲಿ ಆನೆಗಳು ಆನೆಗಳೊಂದಿಗೂ, ರಥಿಕರು ರಥಿಕರೊಡನೆಯೂ, ಕುದುರೆಗಳು ಕುದುರೆಗಳೊಡನೆಯೂ, ಕಾಲಾಳುಗಳು ಕಾಲಾಳುಗಳೊಂದಿಗೂ ಕಲೆತು ಹೋರಾಡತೊಡಗಿದರು.

೧೮. ಆಗ ಯಾದವರಿಗೂ, ಜರಾಸಂಧನ ಕಡೆಯವರಿಗೂ ದೇವಾಸುರರಿಗೆ ನಡೆದಂತೆ ಬಹು ಘೋರವಾದ ಭಾರಿ ಯುದ್ಧವು ಜರುಗಿತು. ಅದನ್ನು ಕಂಡರೆ ಎಂಥವರಿಗೂ ವಿಸ್ಮಯ ಜುಮ್ಮೆನಿಸುತ್ತಿತ್ತು.

ಅಶ್ವಾರೂಢಾಃ ಕೇಽಪಿ ವೀರಾ ಭಲ್ಲಹಸ್ತಾ ಇತಸ್ತತಃ ।
ಮರ್ದಯಂತೋ ಗಜಾರೂಢಾಃ ಕರಿಕುಂಭಗತಾರ್ಚಯಃ ॥ ೧೯ ॥

ಕೇಚಿಚ್ಛಕ್ತೀಸ್ತಡಿದ್ವರ್ಣಾ ಗೃಹೀತ್ವಾ ಚಿಕ್ಷಿಪುರ್ಬಲಾತ್ ।
ತಾಃ ಶಕ್ತಯಸ್ತ್ವರೀನ್ಭಿತ್ವಾ ದಂಶಿತಾ ಧರಣೀಂ ಗತಾಃ ॥ ೨೦ ॥

ಕೇಚಿದ್ವೀರಾ ನದಂತಃ ಕೌ ರಥಾಂಗಾನಿ ಚ ಚಿಕ್ಷಿಪುಃ ।
ಚಿಚ್ಛಿದುರ್ವೀರಪಟಲಂ ನೀಹಾರಂ ರವಯೋ ಯಥಾ ॥ ೨೧ ॥

ಭಿಂಡಿಪಾಲೈರ್ಮುದ್ಗರೈಶ್ಚ ಕುಠಾರೈರಸಿಪಟ್ಟಿಶೈಃ ।
ಅಚ್ಛೂರಿಕಾಭಿರ್ಋಷ್ಟಿಭಿಸ್ತೀಕ್ಷ್ಣೈರ್ನಿಸ್ತ್ರಿಂಶೈರ್ಯುಯುಧುಶ್ಚ ಕೇ ॥ ೨೨ ॥

---

೧೯. ಆ ಕದನದಲ್ಲಿ ಕೆಲಮಂದಿ ಅಶ್ವಾರೋಹಿಗಳಾದ ವೀರರು ಕೈಲಿ ಭಲ್ಲೆಗಳನ್ನು ಹಿಡಿದು ಎದುರಿಗೆ ಸಿಕ್ಕಿದವರನ್ನು ತುಂಡರಿಸುತ್ತಾ ಇತ್ತಲಿಂದತ್ತ ಓಡಾಡುತ್ತಿದ್ದರು. ಅದರಂತೆ ಗಜಾರೂಢರಾದ ವೀರರೂ ಸಹ ತಮ್ಮ ಎದುರಾಳಿಗಳ ಆನೆಗಳ ಕುಂಭಸ್ಥಳಗಳಲ್ಲಿ ತಮ್ಮ ಆಯುಧಗಳನ್ನು ಪ್ರಹರಿಸುತ್ತಿದ್ದರು.

೨೦. ಕೆಲಮಂದಿ ಯೋಧರು ಮಿಂಚಿನಂತೆ ಥಳಥಳಿಸುತ್ತಿರುವ ಶಕ್ತಿಯೆಂಬ ಆಯುಧಗಳನ್ನು ಹಿಡಿದು ತಮ್ಮ ಶಕ್ತಿಯನ್ನೆಲ್ಲಾ ಬಿಟ್ಟು ಪ್ರಹರಿಸುತ್ತಿದ್ದರು. ಆ ರೀತಿ ಬೀಸಲ್ಪಟ್ಟ ಶಕ್ತಿಗಳು ಶತ್ರುವೀರರು ಕವಚಗಳನ್ನು ತೊಟ್ಟಿದ್ದರೂ ಅವುಗಳನ್ನು ಭೇದಿಸಿಕೊಂಡು ಅವರನ್ನು ಕೊಂದು ನೆಲವನ್ನು ಹೋಗುತ್ತಿದ್ದುವು.

೨೧. ಕೆಲಮಂದಿ ವೀರಭಟರು ಸಿಂಹನಾದಗಳನ್ನು ಮಾಡುತ್ತಾ ನೆಲದಮೇಲೆ ನಿಂತು ಚಕ್ರಾಯುಧಗಳನ್ನು ಪ್ರಯೋಗಿಸುತ್ತಿದ್ದರು. ಆ ಚಕ್ರಗಳು ತಮ್ಮ ಎದುರಾದ ವೀರರ ತಂಡವನ್ನು ಸೂರ್ಯನು ಮಂಜಿನ ಮೊತ್ತವನ್ನು ಭೇದಿಸುವಂತೆ ಕತ್ತರಿಸುತ್ತಿದ್ದುವು.

೨೨. ಇನ್ನು ಕೆಲವು ವೀರರು ಭಿಂಡಿಪಾಲಗಳಿಂದಲೂ, ಮುದ್ಗರಗಳಿಂದಲೂ, ಗಂಡುಗೊಡಲಿಗಳಿಂದಲೂ, ಕಿರುಗತ್ತಿ. ಋಷ್ಟಿ, ಚೂಪಾದ ನೊನೆಗತ್ತಿ ಇವುಗಳಿಂದಲೂ ಪರಸ್ಪರ ಹೋರಾಡಿದರು.

ತೋಮರೈಶ್ಚ ಗದಾಭಿಶ್ಚ ಬಾಣೈಶ್ಛಿನ್ನಾನಿ ಭೂತಲೇ ।
ನಿಪೇತುರ್ವೀರಕರಿಣಾಮಶ್ವಾನಾಂ ಚ ಶಿರಾಂಸಿ ಚ ॥ ೨೩ ॥

ಕಬಂಧಾಸ್ತತ್ರ ಚೋತ್ಪೇತುಃ ಪಾತಯಂತೋ ಹಯಾನ್ನರಾನ್ ।
ಖಡ್ಗಹಸ್ತಾಃ ಪ್ರಧಾವಂತಃ ಸಂಗ್ರಾಮೇಷು ಭಯಂಕರಾಃ ॥ ೨೪ ॥

ವೀರೋಪರಿ ಗತಾ ವೀರಾ ನಿಪೇತುಶ್ಛಿನ್ನಬಾಹವಃ ।
ಹಯೋಪರಿ ಹಯಾಃ ಕೇಚಿದ್ಬಾಣೈಃ ಸಚ್ಛಿನ್ನಕಂಧರಾಃ ॥ ೨೫ ॥

ವಿದ್ಯಾಧರ್ಯಶ್ಚ ಗಂಧರ್ವ್ಯೋ ವವ್ರಿರೇ ಹ್ಯಂಬರೇ ಗತಾನ್ ।
ವೀರಾನ್ಪತೀನ್ಸಮಚ್ಛಂತ್ಯಸ್ತಾಸಾಂ ಚಾಭೂತ್ಕಲಿರ್ಮಹಾನ್ ॥ ೨೬ ॥

---

೨೩. ಹೀಗೆ ಪರಸ್ಪರವಾಗಿ ಪ್ರಹರಿಸಲ್ಪಟ್ಟ ತೋಮರ, ಗದೆ, ಬಾಣ ಮೊದಲಾದುವುಗಳಿಂದ ಆನೆ ಕುದುರೆಗಳಿಗೂ, ವೀರರಿಗೂ ತಲೆಗಳು ಕತ್ತರಿಸಿ ಹೋಗಿ ಅವು ನೆಲದ ಮೇಲೆ ಬಿದ್ದುವು.

೨೪. ಆಗ ಆ ರಣಾಂಗದಲ್ಲಿ ತಲೆ ಕತ್ತರಿಸಲ್ಪಟ್ಟಂತಹ ಕಬಂಧಗಳು (ರುಂಡವಿಲ್ಲದ ಮುಂಡ) ಕೈಲಿ ಕತ್ತಿಯನ್ನು ಹಿಡಿದಿದ್ದಂತೆಯೇ ಭಯಂಕರವಾಗಿ ಓಡುತ್ತಾ ಎದುರಿಗೆ ಸಿಕ್ಕಿದ ಕುದುರೆಗಳನ್ನೂ ಭಟರುಗಳನ್ನೂ ಕೆಳಗುರುಳಿಸುತ್ತಿದ್ದುವು.

೨೫. ಕೆಲಮಂದಿ ವೀರರಾದ ಕಾಲಾಳುಗಳು ತಮ್ಮೆದುರಾಳಿಗಳೊಡನೆ ಹೋರಾಡುತ್ತಾ ಕೈಗಳು ಕತ್ತರಿಸಿ ಹೋಗಿ ಅವರ ಮೇಲೆಯೇ ಬಿದ್ದುಬಿಟ್ಟರು. ಅದರಂತೆ ಹಲವಾರು ಕುದುರೆಗಳು ಬಾಣಗಳಿಂದ ತಮ್ಮ ತಲೆಗಳು ಕತ್ತರಿಸಿ ಹೋಗಲು ಎದುರಿಗಿದ್ದ ಕುದುರೆಗಳ ಮೇಲೆಯೇ ಉರುಳಿಬಿಟ್ಟುವು.

೨೬. ಆಗ ಆಕಾಶದಲ್ಲಿ ಸೇರಿದ್ದ ವಿದ್ಯಾಧರಿಯರೂ, ಗಂಧರ್ವಸ್ತ್ರೀಯರೂ ಆ ಯುದ್ಧದಲ್ಲಿ ಮಡಿಯಲ್ಪಟ್ಟು ತಮಗುಚಿತವಾದ ವೀರಸ್ವರ್ಗವನ್ನು ಹೊಂದಲು ಬರುತ್ತಿರುವಂತಹ ವೀರರನ್ನು ವರಿಸಲು ನಾನು ತಾನೆಂದು ಮುಂಬರಿದು ಬರುತ್ತಿದ್ದರು. ಆ ಕಾರಣದಿಂದ ಅವರವರಿಗೇ ಭಾರಿ ಜಗಳವು ಹತ್ತಿಬಿಟ್ಟಿತು.

ಕ್ಷತ್ರಧರ್ಮಪರಾಃ ಕೇಚಿದ್ಯುದ್ಧದತ್ತಾಸವೋ ನೃಪ।
ನ ಚಲಂತಃ ಪದಂ ಪೃಷ್ಠೇ ಸದಾ ಸಂಗ್ರಾಮಶಾಲಿನಃ ॥ ೨೭ ॥

ಜಗ್ಮುಃ ಪರಪದಂ ತೇ ವೈ ಭಿತ್ವಾ ಮಾರ್ತಂಡಮಂಡಲಂ।
ನನೃತುಃ ಶಿಂಶುಮಾರೇ ವೈ ಮಂಡಲೇ ಚ ನಟಾ ಇವ ॥ ೨೮ ॥

ಏವಂ ಸಾಂಬಮಹಾವೀರೈರ್ಮರ್ದಿತಂ ಮಾಗಧಂ ಬಲಂ।
ದುದ್ರಾವ ಪಶ್ಯತಾಂ ತೇಷಾಂ ಕೃಷ್ಣಭಕ್ತ್ಯಾ ಯಥಾ ಶುಭಂ ॥ ೨೯ ॥

ಕೇಚಿದ್ವೈ ವೃಕ್ಣವರ್ಮಾಣಶ್ಛಿನ್ನಚಾಪಾಸ್ತಥಾ ಪರೇ।
ಪಲಾಯಮಾನಾ ಧಾವಂತಸ್ತ್ಯಕ್ತಖಡ್ಗಷ್ಟಿಪಾಣಯಃ ॥ ೩೦ ॥

೨೭–೨೮. ಓ ರಾಜೇಂದ್ರ! ಸರ್ವದಾ ಯುದ್ಧೋನ್ಮುಖರಾದ ಕೆಲಮಂದಿ ಕ್ಷತ್ರಿಯ ಧರ್ಮನಿರತರಾದ ವೀರರು ಒಂದು ಹೆಜ್ಜೆಯೂ ಕೂಡ ಹಿಮ್ಮೆಟ್ಟದೆ ಎದುರಾಳಿಗಳೊಡನೆ ಹೋರಾಡುತ್ತಿರುವಂತೆಯೇ ತಮ್ಮ ಪ್ರಾಣಗಳನ್ನು ತ್ಯಜಿಸಿ, ಸೂರ್ಯಮಂಡಲವನ್ನು ಭೇದಿಸಿಕೊಂಡು ಉತ್ತಮವಾದ ಗತಿಯನ್ನು ಪಡೆದವರಲ್ಲದೆ ಅಲ್ಲಿರುವ ಶಿಂಶುಮಾರಚಕ್ರವೆಂಬ ಉತ್ತಮ ಸ್ಥಾನದಲ್ಲಿ ಸಂತೋಷದಿಂದ ನರ್ತಕರಂತೆ ನೃತ್ಯವನ್ನು ಮಾಡಿದರು.

೨೯. ಈ ರೀತಿಯಾಗಿ ಆ ಸಾಂಬ ಮುಂತಾದ ಯಾದವ ಸೇನೆಯ ಮಹಾ ವೀರರುಗಳಿಂದ ಜರಾಸಂಧನ ಕಡೆಯ ಮಾಗಧ ಸೇನೆಯೆಲ್ಲವೂ ಹರಿಭಕ್ತಿಯಿಂದ ಇಲ್ಲದಂತಾಗುವ ಅಶುಭ ಪರಂಪರೆಯಂತೆ ಕ್ಷಣಮಾತ್ರದಲ್ಲಿ ನುಚ್ಚುನೂರಾಗಿ ಅವರೆಲ್ಲರೂ ನೋಡುತ್ತಿರುವಂತೆಯೇ ದಿಕ್ಕೆಟ್ಟು ಓಡಿಹೋಯಿತು.

೩೦. ಹಾಗೆ ಓಡಿಹೋಗುತ್ತಿದ್ದ ಮಗಧಸೇನೆಯ ಭಟರಲ್ಲಿ ಕೆಲಮಂದಿಗೆ ಎದೆಗೆ ತೊಟ್ಟಿದ್ದ ಉಕ್ಕಿನ ಕವಚಗಳೇ ಛಿನ್ನಭಿನ್ನವಾಗಿದ್ದುವು. ಕೆಲವರಿಗೆ ಬಿಲ್ಲುಗಳು ಕತ್ತರಿಸಿಹೋಗಿದ್ದುವು. ಕೆಲವರ ಕೈಲಿ ಹಿಡಿಯಲ್ಪಟ್ಟಿದ್ದ ಕತ್ತಿ ಋಷ್ಟಿ ಮುಂತಾದ ಆಯುಧಗಳೂ ಭಯದಿಂದ ತ್ಯಜಿಸಿ ಬಿಸುಡಲ್ಪಟ್ಟಿದ್ದುವು.

ಪಲಾಯಮಾನಂ ಸ್ವಬಲಂ ವೀಕ್ಷ್ಯ ತನ್ಮಾಗಧೇಶ್ವರಃ ।
ಧನುಷ್ಟಂಕಾರಯನ್ಪ್ರಾಪ್ತೋ ಮಾ ಭೈಷ್ಟೇತ್ಯಭಯಂ ದದೌ　　॥ ೩೧ ॥

ಸ್ವಬಲಂ ನೋದಯಾಮಾಸ ಜರಾಸಂಧೋ ಧನುರ್ಜ್ಯಯಾ ।
ಮಹಾಮಾತ್ಯಃ ಪ್ರೇರಯತಿ ಹ್ಯಂಕುಶೇನ ಗಜಂ ಯಥಾ　　॥ ೩೨ ॥

ಸಾಂಬಸ್ತದೈವ ಸಂಪ್ರಾಪ್ತೋ ದಶಭಿಶ್ಚಾಪನಿರ್ಗತೈಃ ।
ಬಾಣೈರ್ವಿವ್ಯಾಧ ಸಮರೇ ಮಾಗಧೇಂದ್ರಂ ಮಹಾಬಲಂ　　॥ ೩೩ ॥

ಧನುರ್ಜ್ಯಾಮಬ್ಧಿಕಲ್ಲೋಲಭೀಮಸಂಘರ್ಷನಾದಿನೀಂ ।
ಚಿಚ್ಛೇದ ದಶಭಿರ್ಬಾಣೈಃ ಸಾಂಬೋ ಜಾಂಬವತೀಸುತಃ　　॥ ೩೪ ॥

೩೧. ಹೀಗೆ ತಲ್ಲಣಿಸಿ ಓಡಿಹೋಗುತ್ತಿರುವ ತನ್ನ ಸೇನೆಯನ್ನು ಕಂಡು ಮಗಧ ದೇಶಾಧಿಪತಿಯಾದ ಆ ಜರಾಸಂಧನು ತನ್ನ ಬಿಲ್ಲನ್ನು ಟಂಕಾರಮಾಡುತ್ತಾ, ತನ್ನ ಕಡೆಯವರಿಗೆ ಹೆದರಬೇಡಿರೆಂದು ಅಭಯವನ್ನೀಯುತ್ತಾ ಆ ಯದುವೀರರಿದ್ದಲ್ಲಿಗೆ ಬಂದನು.

೩೨. ರಾಜೇಂದ್ರ! ಆ ಜರಾಸಂಧನು, ಮಾವುತನು ಅಂಕುಶದಿಂದ ತನ್ನ ಆನೆಯನ್ನು ಮುನ್ನುಗ್ಗುವಹಾಗೆ ಪ್ರೇರಿಸುವಂತೆ ತನ್ನ ಸೇನೆಯನ್ನು ತನ್ನ ಬಿಲ್ಲಿನ ಹೆದೆಯಿಂದಲೇ ಹಿಂಜರಿಯದೆ ಮುಂದೆ ನುಗ್ಗುವಂತೆ ಪ್ರೇರೇಪಿಸಿದನು.

೩೩. ಆ ಸಮಯಕ್ಕೆ ಸರಿಯಾಗಿ ಅವನೆದುರಾಗಿ ಬಂದ ಸಾಂಬನು ಹತ್ತು ಬಾಣಗಳನ್ನು ತೆಗೆದುಕೊಂಡು ಬಿಲ್ಲಿನಲ್ಲಿ ಹೂಡಿ, ಆ ಮಹಾ ಬಲಾಢ್ಯನಾದ ಮಗಧೇಶ್ವರನನ್ನು ಜೋರಾಗಿ ಪ್ರಹರಿಸಿದನು.

೩೪. ಮತ್ತು ಆ ಜಾಂಬವತೀ ಪುತ್ರನು ಸಮುದ್ರದ ಅಲೆಗಳು ಪರಸ್ಪರವಾಗಿ ಸಂಘರ್ಷಿಸಿದಾಗ ಉಂಟಾಗುವ ಮೊರೆತದಂತೆ ಝುಂಕಾರಮಾಡುತ್ತಾ ಇರುವ ಆ ಜರಾಸಂಧನ ಬಿಲ್ಲಿನ ಹೆದೆಯನ್ನು ಹತ್ತು ಬಾಣಗಳಿಂದ ಕತ್ತರಿಸಿಬಿಟ್ಟನು.

ಧನುರನ್ಯತ್ಸಮಾದಾಯ ಜರಾಸಂಧೋ ಮಹಾಬಲಃ ।
ಧನುಃ ಸಾಂಬಸ್ಯ ಚಿಚ್ಛೇದ ಬಾಣೈರ್ದಶಭಿರಗ್ರತಃ ॥ ೩೫ ॥

ಚತುರ್ಭಿಶ್ಚತುರೋ ವಾಹಾನ್ದ್ವಾಭ್ಯಾಂ ಕೇತುಂ ರಥಂ ತ್ರಿಭಿಃ ।
ಏಕೇನ ಸಾರಥಿಂ ಜಘ್ನೇ ಮಾಗಧೇಂದ್ರೋ ಜರಾಸುತಃ ॥ ೩೬ ॥

ಸಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಪುನರನ್ಯಂ ಸಮಾಸ್ಥಾಯ ರಥಂ ಸಾಂಬೋ ಮಹಾಬಲಃ ॥ ೩೭ ॥

ಗೃಹೀತ್ವಾ ಚಾಪಮತ್ಯುಗ್ರಂ ಸಜ್ಯಂ ಕೃತ್ವಾ ವಿಧಾನತಃ ।
ತದ್ರಥಂ ಚೂರ್ಣಯಾಮಾಸ ಸಾಂಬೋ ಬಾಣಶತೈರಪಿ ॥ ೩೮ ॥

---

೩೫. ಆಗ ಆ ಜರಾಸಂಧನು ಕೂಡಲೇ ಬೇರೊಂದು ಬಿಲ್ಲನ್ನು ತೆಗೆದುಕೊಂಡು ಮುಂಚಿತವಾಗಿ ಆ ಸಾಂಬನ ಧನುಸ್ಸನ್ನು ಹತ್ತು ಬಾಣಗಳಿಂದ ತುಂಡರಿಸಿಬಿಟ್ಟನು.

೩೬. ಬಳಿಕ ನಾಲ್ಕು ಬಾಣಗಳಿಂದ ಅವನ ರಥಕ್ಕೆ ಕಟ್ಟಿದ್ದ ನಾಲ್ಕು ಕುದುರೆಗಳನ್ನೂ, ಎರಡು ಬಾಣಗಳಿಂದ ಆ ರಥದ ಧ್ವಜದಂಡವನ್ನೂ, ಮೂರು ಬಾಣಗಳಿಂದ ಆ ರಥವನ್ನೂ, ಒಂದು ಬಾಣದಿಂದ ಸಾರಥಿಯನ್ನೂ ಪ್ರಹರಿಸಿದನು.

೩೭–೩೮. ಕೂಡಲೇ ಆ ಸಾಂಬನ ಧನುಸ್ಸೂ, ರಥವೂ, ತುಂಡುತುಂಡಾಗಿ ಸಾರಥಿಯೂ, ಕುದುರೆಗಳೂ ಪ್ರಾಣವನ್ನು ತೊರೆದುವು. ಆಗ ಆ ಮಹಾರಥನು ಬೇರೊಂದು ತೇರನ್ನೇರಿ ಕುಳಿತು, ಭಯಂಕರವಾದಂತಹ ಬೇರೊಂದು ಬಿಲ್ಲನ್ನು ತೆಗೆದುಕೊಂಡು ಅದಕ್ಕೆ ಹೆದೆಯೇರಿಸಿ ಒಂದೇಬಾರಿಗೆ ನೂರು ಬಾಣಗಳನ್ನು ಹೂಡಿ ಆ ಜರಾಸಂಧನ ರಥವನ್ನು ಹುಡಿಹುಡಿಮಾಡಿಬಿಟ್ಟನು.

ರಥಂ ತ್ಯಕ್ತ್ವಾ ಜರಾಸಂಧೋ ಗಜಮಾರುಹ್ಯ ವೇಗತಃ ।
ಬಭೌ ಗಜೇ ಮಾಗಧೇಂದ್ರ ಇಂದ್ರ ಐರಾವತೇ ಯಥಾ ॥ ೩೯ ॥

ಚಿತ್ರಪತ್ರವಿಚಿತ್ರಾಂಗಂ ಕಾಲಾಂತಕಯಮೋಪಮಂ ।
ಸಾಂಬಾಯ ನೋದಯಾಮಾಸ ಮತ್ತೇಭಂ ಕ್ರುದ್ಧಮಾನಸಃ ॥ ೪೦ ॥

ಗೃಹೀತ್ವಾ ಸರಥಂ ಸಾಂಬಂ ಶುಂಡಾದಂಡೇನ ನಾಗರಾಟ್ ।
ಕುರ್ವಂಶ್ಚೀತ್ಕಾರಂ ವಿಕಲಶ್ಚಿಕ್ಷೇಪ ನವಯೋಜನಂ ॥ ೪೧ ॥

ತದಾ ಕೋಲಾಹಲೇ ಜಾತೇ ಸಾಂಬಸೇನಾಸು ಮೈಥಿಲ।
ಪ್ರದ್ಯುಮ್ನಪಾರ್ಶ್ವಾಚ್ಚ ಗದಃ ಪ್ರಾಪ್ತೋಽಭೂದ್ವೇಗತೋ ಬಲಂ ॥ ೪೨ ॥

---

೩೯. ಕೂಡಲೇ ಆ ಜರಾಸಂಧನು ಆ ರಥವನ್ನು ತ್ಯಜಿಸಿ, ಹತ್ತಿರದಲ್ಲಿಯೇ ಇದ್ದ ಭಾರಿ ಆನೆಯೊಂದನ್ನೇರಿ ಕುಳಿತು ಐರಾವತವನ್ನೇರಿದ ದೇವೇಂದ್ರನಂತೆ ಕಂಗೊಳಿಸಿದನು.

೪೦. ಬಳಿಕ ಅವನು ಮಹಾ ಕೋಪದಿಂದ ನಾನಾವಿಧವಾದ ರೀತಿಯಲ್ಲಿ ಅಂದವಾಗಿ ಚಿತ್ರಗಳನ್ನು ಬರೆದಿದ್ದಂತಹ ಪ್ರಳಯಕಾಲದ ಯಮನನ್ನು ಹೋಲುತ್ತಿದ್ದ ಆ ಮದ್ದಾನೆಯನ್ನು ಸಾಂಬನಮೇಲೆ ನುಗ್ಗುವಂತೆ ಪ್ರೇರಿಸಿದನು.

೪೧. ಆಗ ಆ ಮದ್ದಾನೆಯು ಚೀತ್ಕಾರವನ್ನು ಮಾಡುತ್ತಾ ತನ್ನ ಸೊಂಡಿಲಿನಿಂದ ಆ ಸಾಂಬನನ್ನು ಅವನ ರಥದ ಸಮೇತವಾಗಿ ಒಂಭತ್ತು ಯೋಜನಗಳಷ್ಟು ದೂರಕ್ಕೆ ಎಸೆದುಬಿಟ್ಟಿತು.

೪೨. ಅದನ್ನು ನೋಡಿದ ಕೂಡಲೇ ಸಾಂಬನ ಸೈನ್ಯದಲ್ಲಿ ಭಾರಿ ಗದ್ದಲವಾಯಿತು. ಆಗ ಪ್ರದ್ಯುಮ್ನನ ಬಳಿ ಇದ್ದ ಗದನೆಂಬ ವೀರನು ಬೇಗ ಬೇಗನೆ ಆ ಸೇನೆಯ ಬಳಿಗೆ ಬಂದನು.

ವಿನಾಶಯನ್ನಂಧಕಾರಂ ಯಥಾರ್ಕ ಉದಯಾಚಲಾತ್ ।
ಜರಾಸಂಧಸ್ಯಾಪಿ ಗಜಂ ಮುಷ್ಟಿನಾ ವಸುದೇವಜಃ ॥ ೪೩ ॥

ಜಘಾನ ಶಕ್ರೋ ವಜ್ರೇಣ ಯಥಾ ಪ್ರೋಚ್ಚಂ ದರೀಭೃತಂ ।
ಗಜೋ ಮುಷ್ಟಿಪ್ರಹಾರೇಣ ವಿಹ್ವಲೋ ಧರಣೀಂ ಗತಃ ॥ ೪೪ ॥

ಜಗಾಮ ಪಂಚತಾಂ ರಾಜಂಸ್ತದದ್ಭುತಮಿವಾಭವತ್ ।
ಜರಾಸಂಧಃ ಸಮುತ್ಥಾಯ ಗದಾಮಾದಾಯ ವೇಗತಃ ॥ ೪೫ ॥

ಗದಂ ತತಾಡ ಸಹಸಾ ಜಗರ್ಜ ಘನವದ್ಬಲೀ ।
ತತ್ಪ್ರಹಾರೇಣ ಸ ಗದೋ ನ ಚಚಾಲ ರಣಾಂಗಣಾತ್ ॥ ೪೬ ॥

ತ್ವರಂ ಗದಾಂ ಸಮಾದಾಯ ಲಕ್ಷಭಾರವಿನಿರ್ಮಿತಾಂ ।
ಅತಾಡಯಜ್ಜರಾಸಂಧಂ ಸಿಂಹನಾದಮಥಾಕರೋತ್ ॥ ೪೭ ॥

೪೩–೪೪. ಬಂದವನೇ ಆ ಗದನು ಉದಯಾದ್ರಿಯ ಮೇಲಿರುವಂತೆಯೇ ಅಂಧಕಾರವನ್ನೆಲ್ಲಾ ಒಕ್ಕಲಿಕ್ಕುವ ಸೂರ್ಯನಂತೆ ಪ್ರಜ್ವಲಿಸುತ್ತಾ, ಇಂದ್ರನು ವಜ್ರಾಯುಧದಿಂದ ಪರ್ವತವನ್ನು ಪ್ರಹರಿಸುವಂತೆ ತನ್ನ ಮುಷ್ಟಿಯಿಂದ ಆ ಜರಾಸಂಧನ ಮದ್ದಾನೆಯನ್ನು ಜೋರಾಗಿ ಪ್ರಹರಿಸಿದನು. ಆ ಏಟಿನಿಂದ ಆ ಗಜರಾಜನು ತತ್ತಳಿಸುತ್ತಾ ನೆಲದಮೇಲೆ ಬಿದ್ದು ತನ್ನ ಪ್ರಾಣಗಳನ್ನು ತೊರೆಯಿತು.

೪೫. ಓ ರಾಜೇಂದ್ರ ಆ ಗದನ ಸಾಹಸವು ಅತ್ಯದ್ಭುತವಾಗಿ ತೋರಿತು. ಆಗ ಆ ಜರಾಸಂಧನು ತಟ್ಟನೆ ಆನೆಯ ಮೇಲಿಂದ ಎದ್ದು ಸರ್ರನೆ ಗದೆಯೊಂದನ್ನು ತೆಗೆದುಕೊಂಡು ಆ ಗದನನ್ನು ಪ್ರಹರಿಸಿ ಕಾರ್ಮೋಡದಂತೆ ಗಟ್ಟಿಯಾಗಿ ಒಂದು ಬಾರಿ ಗರ್ಜನೆ ಮಾಡಿದನು.

೪೬–೪೭. ಆದರೇನು? ಆ ಗದನು ತಾನಿದ್ದ ರಣಾಂಗಣದಿಂದ ಒಂದು ಎಳೆಯಷ್ಟೂ ಕೂಡ ಅಲುಗಾಡಲಿಲ್ಲ. ಕೂಡಲೇ ಒಂದು ಲಕ್ಷ ಭಾರಗಳಷ್ಟು ತೂಕವಿರುವಂತಹ ಭಾರಿ ಗದೆಯೊಂದನ್ನು ತೆಗೆದುಕೊಂಡು ಆ ಜರಾಸಂಧನ ಮೇಲೆ ಬೀಸಿ ಹೊಡೆದನು. ಮತ್ತು ಜೋರಾಗಿ ಸಿಂಹನಾದ ಮಾಡಿದನು.

ತತ್ಪ್ರಹಾರೇಣ ವ್ಯಥಿತೋ ಬೃಹದ್ರಥಸುತೋ ಬಲೀ ।
ಜರಾಸಂಧಃ ಸಮುತ್ಥಾಯ ಗೃಹೀತ್ವಾ ಸಗದಂ ಗದಂ ॥ ೪೮ ॥

ಚಿಕ್ಷೇಪ ರೋಷತೋ ರಾಜನ್ನಾಕಾಶೇ ಶತಯೋಜನಂ ।
ಗದೋಽಪಿ ಮಾಗಧಂ ನೀತ್ವಾ ಭ್ರಾಮಯಿತ್ವಾ ಮಹಾಬಲಃ ॥ ೪೯ ॥

ಚಿಕ್ಷೇಪ ಗಗನೇ ತಂ ವೈ ಯೋಜನಾನಾಂ ಸಹಸ್ರಕಂ ।
ಆಕಾಶಾತ್ಪತಿತೋ ರಾಜಾ ಮಾಗಧೋ ವಿಂಧ್ಯಪರ್ವತೇ ॥ ೫೦ ॥

ಉತ್ಥಾಯ ಯುಯುಧೇ ತೇನ ಗದೇನಾಪಿ ಮಹಾಬಲಃ ।
ತದೈವ ಸಾಂಬಃ ಸಂಪ್ರಾಪ್ತೋ ಗೃಹೀತ್ವಾ ಮಾಗಧೇಶ್ವರಂ ॥ ೫೧ ॥

೪೮–೪೯. ಆ ಗದಾಪ್ರಹಾರದಿಂದ ಮಹಾ ಬಲಶಾಲಿಯಾಗಿದ್ದರೂ ಆ ಬೃಹದ್ರಥಾತ್ಮನಾದ ಜರಾಸಂಧನು ವಿಶೇಷವಾಗಿ ನೋವಿಗೀಡಾದನು. ಆದರೂ ಥಟ್ಟನೆ ಮೇಲೆದ್ದು ಆ ಗದನೆಂಬ ಯದುವೀರನನ್ನು ಅವನ ಗದೆಯೊಡನೆಯೇ ತನ್ನೆರಡು ತೋಳುಗಳಿಂದಲೂ ಬಿಗಿಯಾಗಿ ಹಿಡಿದು ಮಿತಿಮೀರಿದ ಕೋಪದಿಂದ ಆಕಾಶದಲ್ಲಿ ನೂರು ಯೋಜನಗಳಷ್ಟು ದೂರಕ್ಕೆಸೆದುಬಿಟ್ಟನು.

೫೦. ರಾಜೇಂದ್ರ! ಆ ಗದನು ತಾನೇ ಸಾಮಾನ್ಯನೇ? ಮಹಾ ಬಲಶಾಲಿ! ಅವನು ಕೂಡಲೇ ಹಿಂದಿರುಗಿ ಆ ಮಗಧ ರಾಜನನ್ನು ಹಿಡಿದು ಆಕಾಶದಲ್ಲಿ ಗರಗರನೆ ತಿರುಗಿಸಿ ಒಂದು ಸಾವಿರ ಯೋಜನದಷ್ಟು ದೂರ ಎಸೆದುಬಿಟ್ಟನು. ಈ ರೀತಿಯಾಗಿ ಎಸೆಯಲ್ಪಟ್ಟ ಆ ಜರಾಸಂಧನು ಆಕಾಶದಿಂದ ಉರುಳಿ ವಿಂಧ್ಯಪರ್ವತದ ಮೇಲೆ ಬಿದ್ದುಬಿಟ್ಟನು.

೫೧. ಅವರೇನು! ಆ ಮಹಾ ಬಲಾಢ್ಯನು ಕ್ಷಣಮಾತ್ರವಿದ್ದು ಹಿಂದಿರುಗಿ ಬಂದು ಆ ಗದನೊಡನೆ ಯುದ್ಧಮಾಡತೊಡಗಿದನು. ಅಷ್ಟು ಹೊತ್ತಿಗೆ ಸಾಂಬನು ಅಲ್ಲಿಗೆ ಬಂದನು.

ಭೂಪೃಷ್ಠೇ ಪೋಥಯಾಮಾಸ ಸಿಂಹಃ ಸಿಂಹಮಿವೌಜಸಾ ।
ಏಕೇನ ಮುಷ್ಟಿನಾ ಸಾಂಬಂ ದ್ವಿತೀಯೇನ ಗದಂ ತಥಾ ॥ ೫೨ ॥

ತತಾಡ ಮಾಗಧೋ ರಾಜಾ ಜಗರ್ಜಾಶು ರಣಾಂಗಣೇ ।
ಮುಷ್ಟಿಪ್ರಹಾರವ್ಯಥಿತೌ ಗದಃ ಸಾಂಬಶ್ಚ ಮೂರ್ಛಿತೌ ॥ ೫೩ ॥

ಹಾಹಾಕಾರೋ ಮಹಾನಾಸೀತ್ತದ್ಯೈವಾಶು ರಣಾಂಗಣೇ ।
ರಥೇನಾತಿಪತಾಕೇನ ಪ್ರದ್ಯುಮ್ನೋ ಯಾದವೇಶ್ವರಃ ॥ ೫೪ ॥

ಅಕ್ಷೌಹಿಣೀಯುತಃ ಪ್ರಾಪ್ತೋ ಮಾ ಭೈಷ್ಟೇತ್ಯಭಯಂ ದದೌ ।
ಜರಾಸಂಧೋ ಗದಾಂ ನೀತ್ವಾ ಲಕ್ಷಭಾರವಿನಿರ್ಮಿತಾಂ ॥ ೫೫ ॥

---

೫೨. ಬಂದವನೇ ಆ ಜರಾಸಂಧನನ್ನು ಬಲವಾಗಿ ಹಿಡಿದುಕೊಂಡು ಸಿಂಹವು ಸಿಂಹವನ್ನು ನೆಲದ ಮೇಲೆ ಕೆಡಹುವಂತೆ ನೆಲಕ್ಕುರುಳಿಸಿ ಅಜ್ಜಿಗುಜ್ಜಿ ಮಾಡಿದನು.

೫೩. ಆ ಮಗಧರಾಜನು ಅಷ್ಟಾದರೂ ಸ್ವಲ್ಪವೂ ಲಕ್ಷ್ಯವೇ ಮಾಡದೆ ಸರ್ರನೆ ಮೇಲಕ್ಕೆದ್ದು ಒಂದು ಮುಷ್ಟಿಯಿಂದ ಸಾಂಬನನ್ನೂ, ಮತ್ತೊಂದು ಮುಷ್ಟಿಯಿಂದ ಗದನನ್ನೂ ಬಲವಾಗಿ ಬೀಸಿ ಹೊಡೆದು ಜೋರಾಗಿ ಸಿಂಹನಾದ ಮಾಡಿದನು. ಆ ಮುಷ್ಟಿಪ್ರಹಾರದಿಂದ ಸಾಂಬನೂ, ಗದನೂ ಬಹಳ ನೋವಿಗೀಡಾಗಿ ಮೂರ್ಛಾಕ್ರಾಂತರಾದರು.

೫೪. ಅದನ್ನು ಕಂಡು ಆ ಯಾದವ ಸೇನೆಯಲ್ಲಿ ಎಲ್ಲೆಲ್ಲೂ ಬಲವಾಗಿ ಹಾಹಾಕಾರವುಂಟಾಯಿತು. ಅದನ್ನು ನೋಡಿ ಯಾದವ ಸೇನಾಪತಿಯಾದ ಪ್ರದ್ಯುಮ್ನನು ಉನ್ನತವಾದ ಧ್ವಜದಂಡದಿಂದ ಶೋಭಿಸುತ್ತಿರುವ ರಥವನ್ನೇರಿ ಕುಳಿತು ಒಂದು ಅಕ್ಷೌಹಿಣೀ ಸೇನೆಯೊಂದಿಗೆ ಅವರಿದ್ದಲ್ಲಿಗೆ ಬಂದು ಹೆದರಬೇಡಿರೆಂದು ಅವರಿಗೆ ಅಭಯವಿತ್ತನು.

೫೫. ಆಗ ಆ ಜರಾಸಂಧನು ಲಕ್ಷ ಭಾರಗಳಷ್ಟು ತೂಕವಿರುವ ಭಾರಿಯಾದ ಗದೆಯೊಂದನ್ನು ಕೈಲಿ ಹಿಡಿದು ಅರಣ್ಯದಲ್ಲಿ ಕಾಳ್ಗಿಚ್ಚು ಬೇಗನೆ ಒಳಹೋಗುವಂತೆ ಆ ಯಾದವ ಸೇನೆಯ ನಡುವೆ ನುಗ್ಗಿಬಿಟ್ಟನು.

ವಿವೇಶ ಯದುಸೇನಾಯಾಮರಣ್ಯೇಽಗ್ನಿರಿವಃ ಪ್ರಭುಃ ।
ರಥಾನ್ಗಜಾನ್ಸವೀರಾಂಶ್ಚ ತುರಂಗಾನ್ಸೈಂಧವಾನ್ಬಹೂನ್ || ೫೬ ||

ಪಾತಯಾಮಾಸ ರಾಜೇಂದ್ರ ಪದ್ಮಾನೀವ ಮಹಾಗಜಃ ।
ಜರಾಸಂಧಸ್ಯ ಯಾ ಸೇನಾ ಸಾಪಿ ಸರ್ವಾ ಸಮಾಗತಾ || ೫೭ ||

ಜಘಾನ ನಿಶಿತೈರ್ಬಾಣೈರ್ಯದೂನಾಂ ಸರ್ವತೋ ಬಲಂ ।
ಪ್ರದ್ಯುಮ್ನೋ ಯುಯುಧೇ ಯುದ್ಧೇ ನಿರ್ಭಯೋ ಯಾದವೇಶ್ವರಃ|| ೫೮ ||

ನಿಪಾತಯನ್ನರೀನ್ಬಾಣೈರ್ಧನುಷ್ಟಂಕಾರಯನ್ಮುಹುಃ ।
ತದೈವ ಯದುಪುರ್ಯಾಸ್ತು ಬಲದೇವಃ ಸಮಾಗತಃ || ೫೯ ||

---

೫೬. ಓ ರಾಜೇಂದ್ರ! ಭಾರಿಯಾದ ಮದ್ದಾನೆಯು ಸರೋವರವನ್ನು ಹೊಕ್ಕು ಅದರಲ್ಲಿರುವ ಕಮಲಗಳನ್ನು ಕಿತ್ತು ಬಿಸಾಡುವಂತೆ, ಆ ಜರಾಸಂಧನು ಯದುಸೇನೆಯಲ್ಲಿದ್ದ ರಥಗಳನ್ನೂ, ಆನೆ ಕುದುರೆಗಳನ್ನೂ, ವೀರರಾದ ವೀರರನ್ನೂ, ಹೆಚ್ಚುಹೆಚ್ಚಾಗಿ ಕಡಿದುರುಳಿಸುತ್ತಾ ಬಂದನು.

೫೭–೫೮. ಅಷ್ಟು ಹೊತ್ತಿಗೆ ಸರಿಯಾಗಿ ಅವನಿಗೆ ಸಹಾಯಕವಾಗಿ ಅವನ ಸೇನೆಯೆಲ್ಲವೂ ಬಂದು ಚೂಪಾದ ಬಾಣಗಳಿಂದ ಆ ಯದುಸೇನೆಯನ್ನು ಎಲ್ಲ ಕಡೆಯಲ್ಲೂ ಪ್ರಹರಿಸತೊಡಗಿತು. ಆ ಸಮಯದಲ್ಲಿ ಯಾದವರಿಗೆಲ್ಲಾ ಪ್ರಭುವಾದ ಆ ಪ್ರದ್ಯುಮ್ನನು ಎಳ್ಳಷ್ಟೂ ಅಂಜದೆ ಶತ್ರುಗಳೊಡನೆ ಹೋರಾಡಿದನು.

೫೯. ಮತ್ತು ಮೇಲೆ ಮೇಲೆ ಧನುಸ್ಸನ್ನು ಟಂಕಾರಮಾಡುತ್ತಾ ತನ್ನ ಬಾಣ ಪ್ರಯೋಗಗಳಿಂದ ಶತ್ರುಗಳನ್ನು ಕತ್ತರಿಸಿ ಕೆಡಹುತ್ತಿದ್ದನು. ಅಷ್ಟು ಹೊತ್ತಿಗೆ ಸರಿಯಾಗಿ ಯಾದವರ ನಗರವಾದ ದ್ವಾರಕೆಯಿಂದ ಬಲರಾಮನು ಅಲ್ಲಿಗೆ ಬಂದು ಅವರೆಲ್ಲರೂ ನೋಡುತ್ತಿರುವಂತೆ ತನ್ನ ಆಯುಧಗಳೊಡನೆ ಆ ರಣಾಂಗಣದಲ್ಲಿ ಆವಿರ್ಭವಿಸಿದನು.

ಪ್ರಾದುರ್ಬಭೂವ ತತ್ರಾಪಿ ಸರ್ವೇಷಾಂ ಪಶ್ಯತಾಂ ಸತಾಂ ।
ಸಮಾಕೃಷ್ಯ ಹಲಾಗ್ರೇಣ ಮಾಗಧೇಂದ್ರಂ ಮಹಾಬಲಂ ॥ ೬೦ ॥

ಮುಸಲೇನಾಹನತ್ಕ್ರುದ್ಧೋ ಬಲದೇವೋ ಮಹಾಬಲಃ ।
ಶತಯೋಜನಪರ್ಯಂತಂ ರಥಾಶ್ವಗಜಪತ್ತಯಃ ॥ ೬೧ ॥

ಪತಿತಾ ಭಿನ್ನಶಿರಸಃ ಸರ್ವೇ ವೈ ನಿಧನಂ ಗತಾಃ ।
ದೇವದುಂದುಭಯೋ ನೇದುರ್ನರದುಂದುಭಯಸ್ತದಾ ॥ ೬೨ ॥

ಬಲದೇವೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ।
ತದಾ ಜಯಜಯಾರಾವೋ ಯದೂನಾಂ ಸ್ವಬಲೇ ಮಹಾನ್ ॥ ೬೩ ॥

ಪ್ರದ್ಯುಮ್ನಾದ್ಯಾಸ್ತತೋ ನೇಮುಃ ಕಾಮಪಾಲಂ ಗತವ್ಯಥಾಃ ।
ಇತ್ಥಂ ಜಿತ್ವಾ ಮಾಗಧೇಂದ್ರಂ ಬಲದೇವೋ ಮಹಾಬಲಃ ॥ ೬೪ ॥

೬೦–೬೨. ಕೂಡಲೇ ಆ ಮಹಾಬಲಶಾಲಿಯಾದ ಬಲದೇವನು ಬಹು ಕುಪಿತನಾಗಿ ತನ್ನ ಹಲಾಯುಧದಿಂದ ಆ ಮಗಧರಾಜನ ಸೈನ್ಯವನ್ನು ಸೆಳೆದುಕೊಂಡು ತನ್ನ ಮುಸಲಾಯುಧದಿಂದ ಆ ಸೇನೆಯನ್ನು ಕೊಲ್ಲುತ್ತಾ ಬಂದನು. ಓ ರಾಜೇಂದ್ರ! ಈ ರೀತಿಯಾಗಿ ಆ ಬಲದೇವನ ಪ್ರಹಾರದಿಂದ ಆ ಶತ್ರುಸೇನೆಯೆಲ್ಲವೂ ಒಂದುನೂರು ಯೋಜನಗಳಷ್ಟು ವಿಸ್ತಾರವಾದ ಆ ರಣಾಂಗಣದಲ್ಲಿ ತಲೆ ಕಡಿಯಲ್ಪಟ್ಟು, ನೆಲದಮೇಲೆ ಉರುಳಿಬಿದ್ದು ತನ್ನ ಪ್ರಾಣವನ್ನು ತೊರೆಯಿತು. ಆಗ ದೇವಲೋಕದ ದುಂದುಭಿಗಳೂ, ಯದುವೀರರ ವಿಜಯಭೇರಿಗಳೂ ಸಂತೋಷಸೂಚಕವಾಗಿ ಮೊಳಗಿದುವು.

೬೩. ಆಗ ದೇವತೆಗಳು ಬಲರಾಮನ ಮೇಲೆ ಹೂವಿನ ಮಳೆಯನ್ನು ಸುರಿಸಿದರು. ಯಾದವರ ಸೇನೆಯಲ್ಲಿ ಎಲ್ಲೆಲ್ಲೂ ಜಯಧ್ವನಿಗಳು ತುಂಬಿಹೋದುವು.

೬೪. ಬಳಿಕ ಪ್ರದ್ಯುಮ್ನ ಮೊದಲಾದ ಯಾದವವೀರರು ತಮ್ಮ ಆವರೆಗಿನ ವ್ಯಥೆಯೆಲ್ಲವನ್ನೂ ತೊರೆದು ಆ ಬಲರಾಮನನ್ನು ಸಂತೋಷದಿಂದ ನಮಸ್ಕರಿಸಿದರು. ಓ ರಾಜೇಂದ್ರ! ಈ ರೀತಿಯಲ್ಲಿ ತನ್ನ ಭಕ್ತರಲ್ಲಿ ಮಿತಿಮೀರಿದ ವಾತ್ಸಲ್ಯವುಳ್ಳ ಆ ಭಗವಂತನಾದ ಬಲದೇವನು ಮಗಧದೇಶಾಧಿಪತಿಯಾದ ಆ ಜರಾಸಂಧನನ್ನು ಜಯಿಸಿ ದ್ವಾರಕೆಗೆ ತೆರಳಿದನು.

ಪ್ರಯಯೌ ದ್ವಾರಕಾಂ ರಾಜನ್ಭಗವಾನ್ಭಕ್ತವತ್ಸಲಃ ।
ಜರಾಸಂಧಸುತೋ ಧೀಮಾನ್ಸಹದೇವ ಉಪಾಯನಂ ॥ ೬೫ ॥

ನೀತ್ವಾ ಪುರಃ ಶಂಬರಾರೇರ್ಗಿರಿದುರ್ಗಾದ್ವಿನಿರ್ಗತಃ ।
ಅಶ್ವಾರ್ಬುದಂ ರಥಾನಾಂ ಚ ದ್ವಿಲಕ್ಷಂ ಹಸ್ತಿನಾಂ ತಥಾ ॥ ೬೬ ॥

ದದೌ ಷಷ್ಟಿಸಹಸ್ರಾಣಿ ನತ್ವಾ ಕಾರ್ಷ್ಣಿಂ ಪ್ರಭಾವವಿತ್ ॥ ೬೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಮಾಗಧವಿಜಯೋ ನಾಮ ಸಪ್ತದಶೋಽಧ್ಯಾಯಃ

೬೫–೬೬. ಆಗ ವಿವೇಕಶಾಲಿಯಾದ ಸಹದೇವನೆಂಬ ಜರಾಸಂಧನ ಪುತ್ರನು ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ತನ್ನ ರಾಜಧಾನಿಯಾದ ಗಿರಿದುರ್ಗ (ಗಿರಿವ್ರಜ) ದಿಂದ ಹೊರಟು ಪ್ರದ್ಯುಮ್ನನ ಬಳಿಗೆ ಬಂದನು.

೬೭. ಕೃಷ್ಣಪುತ್ರನಾದ ಆ ಪ್ರದ್ಯುಮ್ನನ ಪ್ರಭಾವವನ್ನು ಆ ಸಹದೇವನು ಚೆನ್ನಾಗಿ ಅರಿತವನಾದುದರಿಂದ ಆತನಿಗೆ ನಮಸ್ಕಾರವನ್ನು ಮಾಡಿ ಒಂದು ಅರ್ಬುದ ದಷ್ಟು ಕುದುರೆಗಳನ್ನೂ, ಎರಡು ಲಕ್ಷ ರಥಗಳನ್ನೂ, ಅರವತ್ತು ಸಾವಿರ ಆನೆಗಳನ್ನೂ, ಕಾಣಿಕೆಯ ರೂಪವಾಗಿ ಸಲ್ಲಿಸಿ ಸತ್ಕರಿಸಿದನು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ನಾರದಬಹುಲಾಶ್ವ ಸಂವಾದದಲ್ಲಿ ಹದಿನೇಳನೆಯ ಅಧ್ಯಾಯವು ಮುಗಿದುದು

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಅಷ್ಟಾದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ: ಕಾರ್ಷ್ಣಿರ್ಗಯಾಮೇತ್ಯ ಫಲ್ಗುಂ ಸ್ನಾತ್ವಾ ಸಸೈನಿಕಃ ।
ಅನ್ಯಾನ್ದೇಶಾಂಸ್ತತೋ ಜೇತುಂ ಪ್ರಸ್ಥಾನಮಕರೋತ್ಪುನಃ ॥ ೧ ॥

ಶ್ರುತ್ವಾ ಜಿತಂ ಜರಾಸಂಧಂ ತದಾತಂಕಾನ್ನೃಪಾಃ ಪರೇ ।
ಉಪಾಯನಂ ದದುಸ್ತೇ ವೈ ಭಯಾರ್ತಾಃ ಶರಣಂ ಗತಾಃ ॥ ೨ ॥

ಹದಿನೆಂಟನೆಯ ಅಧ್ಯಾಯವು

೧. ರಾಜೇಂದ್ರ ! ಆಲಿಸು. ಈ ರೀತಿ ಮಗಧರಾಜ್ಯವನ್ನು ಜಯಿಸಿದನಂತರ ಪ್ರದ್ಯುಮ್ನನು ಗಯೆಗೆ ಹೋಗಿ ಅಲ್ಲಿರುವ ಫಲ್ಗುನೀ ನದಿಯಲ್ಲಿ ಸ್ನಾನಮಾಡಿ ಅಲ್ಲಿಂದ ತನ್ನ ಸೈನ್ಯದೊಡನೆ ಇನ್ನೂ ಇತರ ದೇಶಗಳನ್ನು ಜಯಿಸುವುದಕ್ಕೋಸ್ಕರ ಮತ್ತೆ ಪಯಣ ಬೆಳಸಿದನು.

೨. ಜರಾಸಂಧನನ್ನೂ ಪ್ರದ್ಯುಮ್ನನು ಗೆದ್ದುಬಿಟ್ಟನೆಂಬ ಸಂಗತಿಯನ್ನರಿತು ಅನೇಕ ಮಂದಿ ರಾಜರು ಆ ಪ್ರದ್ಯುಮ್ನನ ವಿಷಯವಾಗಿ ಹೆದರಿಕೆಯಿಂದ ತತ್ತಳಿಸುತ್ತಾ ಆತನಿಗೆ ಮರೆಹೊಕ್ಕು ಕಾಣಿಕೆಗಳನ್ನು ಸಲ್ಲಿಸಿದರು.

ಗೌತಮೀಂ ಸರಯೂಂ ಪುಣ್ಯಾಮನುಸ್ರೋತಂ ತತೋಽಗಮತ್ ।
ತತೋ ಭಾಗೀರಥೀ ತೀರೇ ಕಾಶೀಮಭಿಜಗಾಮ ಹ ॥ ೩ ॥

ಪಾರ್ಷ್ಣಿಗ್ರಾಹಃ ಕಾಶಿರಾಜೋ ಗೃಹೀತೋ ಮೃಗಯಾಂ ಗತಃ ।
ಸೋಽಪಿ ತಸ್ಮೈ ಬಲಿಂ ಪ್ರಾದಾಚ್ಛ್ರುತ್ವಾ ತಸ್ಯ ಬಲಂ ಮಹತ್ ॥ ೪ ॥

ಪ್ರದ್ಯುಮ್ನಃ ಸೈನಿಕೈಃ ಸಾರ್ಧಂ ಕೌಶಲಾನ್ಪ್ರಗತೋ ಬಲೀ ।
ಅಯೋಧ್ಯಾನಿಕಟೇ ರಾಜನ್ನಂದಿಗ್ರಾಮೇ ಸ್ಥಿತೋಽಭವತ್ ॥ ೫ ॥

ಕೌಶಲೇಂದ್ರೋ ನಗ್ನಜಿಚ್ಚ ತುರಂಗೈರ್ಗಜೈ ರಥೈಃ ।
ಮಹಾಧನೈಃ ಶಂಬರಾರಿಮರ್ಹಯಾಮಾಸ ತತ್ತ್ವವಿತ್ ॥ ೬ ॥

ಉತ್ತರೇಶೋ ದೀಪತಮೋ ನಯಪಾಲಾಧಿಪೋ ಗಜಃ ।
ವಿಶಾಲೇಶೋ ಬರ್ಹಿಣಶ್ಚ ಏತೇ ವೈ ತಂ ಬಲಿಂ ದದುಃ ॥ ೭ ॥

---

೩. ಅನಂತರ ಪ್ರದ್ಯುಮ್ನನು ಗೌತಮೀನದಿಯನ್ನೂ, ಸರಯೂ ನದಿಯನ್ನೂ ದಾಟಿ ಆ ನದಿಯ ದಡದಲ್ಲಿಯೇ ನಡೆಯುತ್ತಾ ಗಂಗಾನದಿಯ ತೀರದಲ್ಲಿದ್ದ ಕಾಶೀ ನಗರಕ್ಕೆ ಬಂದನು.

೪. ಆ ಕಾಶೀರಾಜನು ಬೇಟೆ ಹೋಗಿದ್ದವನು ಯಾದವ ಸೈನಿಕರಿಂದ ಹಿಡಿಯಲ್ಪಟ್ಟು ಆತನ ಅಪಾರವಾದ ಸೇನಾಬಲವನ್ನು ಕೇಳಿ, ತಾನೂ ಆತನ ಬೆಂಗಾವಲು ಪಡೆಯಾಗಿರಲು ಒಪ್ಪಿ ಕಪ್ಪಕಾಣಿಕೆಗಳನ್ನು ಸಲ್ಲಿಸಿದನು.

೫. ಅನಂತರ ಪರಾಕ್ರಮಶಾಲಿಯಾದ ಆ ಪ್ರದ್ಯುಮ್ನನು ತನ್ನ ಸೈನಿಕರೊಡನೆ ಕೋಸಲದೇಶಕ್ಕೆ ತೆರಳಿ ಅಯೋಧ್ಯಾನಗರದ ಸಮೀಪದಲ್ಲಿರುವ ನಂದಿಗ್ರಾಮದಲ್ಲಿ ಬೀಡುಬಿಟ್ಟನು.

೬. ಆ ಅಯೋಧ್ಯಾಧಿಪತಿಯಾದ ನಗ್ನಜಿತ್ ಎಂಬ ರಾಜನುಪ್ರದ್ಯುಮ್ನನ ತತ್ತ್ವವನ್ನು ಚೆನ್ನಾಗಿ ಅರಿತವನಾದುದರಿಂದ ಆತನನ್ನು ಆನೆ ಕುದುರೆಗಳಿಂದಲೂ, ರಥಗಳಿಂದಲೂ ಅಪರಿಮಿತವಾದ ಧನರಾಶಿಗಳಿಂದಲೂ ಸತ್ಕರಿಸಿದನು.

೭. ಅಲ್ಲಿಂದ ಮುಂದಕ್ಕೆ ಬರುವಾಗ ಉತ್ತರದ ಅಧಿಪತಿಯಾದ ದೀಪತಮನೆಂಬುವನೂ, ನಯಪಾಲವೆಂಬ ದೇಶದ ಅರಸನಾದ ಗಜನೂ, ವಿಶಾಲವೆಂಬ ರಾಜ್ಯದ ಪ್ರಭುವಾದ ಬರ್ಹಿಣನೂ ಆ ಪ್ರದ್ಯುಮ್ನನಿಗೆ ಕಪ್ಪವನ್ನೊಪ್ಪಿಸಿದರು.

ನೈಮಿಷೇಶೋ ಹರೇರ್ಭಕ್ತಃ ಶ್ರೀಕೃಷ್ಣಸ್ಯ ಪ್ರಭಾವವಿತ್ ।
ಕೃತಾಂಜಲಿಪುಟೋ ಭೂತ್ವಾ ದದೌ ತಸ್ಮೈ ಬಲಿಂ ನೃಪಃ ॥ ೮ ॥

ಪ್ರಯಾಗಂ ಗತವಾನ್ಕಾರ್ಷ್ಣಿಸ್ತ್ರಿವೇಣೀಂ ಪಾಪನಾಶಿನೀಂ ।
ಸ್ನಾತ್ವಾ ದದೌ ಮಹಾದಾನಂ ತೀರ್ಥರಾಜಪ್ರಭಾವವಿತ್ ॥ ೯ ॥

ಗಜಾ ವಿಂಶತಿಸಾಹಸ್ರಮಶ್ವಾನಾಂ ದಶಲಕ್ಷಕಂ ।
ರಥಾನಾಂ ಚ ಚತುರ್ಲಕ್ಷಂ ಗವಾಂ ತತ್ರ ದಶಾರ್ಬುದಂ ॥ ೧೦ ॥

ಹೇಮಮಾಲಾಸಮಾಯುಕ್ತಂ ಹೇಮಾಂಬರಸಮನ್ವಿತಂ ।
ದಶಭಾರಂ ಸುವರ್ಣಾನಾಂ ಮುಕ್ತಾನಾಂ ಲಕ್ಷಮೇವ ಹಿ ॥ ೧೧ ॥

ದ್ವಿಲಕ್ಷಂ ನವರತ್ನಾನಾಂ ವಸ್ತ್ರಾಣಾಂ ದಶಲಕ್ಷಕಂ ।
ಕಾಶ್ಮೀರಕಂಬಲಾನಾಂ ಚ ದ್ವಿಲಕ್ಷಂ ನವಕಂಚಲಂ ॥ ೧೨ ॥

---

೮. ನೈಮಿಷವೆಂಬಲ್ಲಿಯ ಅಧಿಪತಿಯಾದ ಶ್ರೀಹರಿಯ ಭಕ್ತನೋರ್ವನು ಶ್ರೀಕೃಷ್ಣನ ಮಹಿಮೆಯನ್ನು ಚೆನ್ನಾಗಿ ಅರಿತಿದ್ದುದರಿಂದ ಆ ಪ್ರದ್ಯುಮ್ನನಿಗೆ ಕೈಗಳನ್ನು ಮುಗಿದುಕೊಂಡು ಕಪ್ಪವನ್ನು ಒಪ್ಪಿಸಿದನು.

೯. ಹಾಗೆ ಬರುತ್ತಿರುವಾಗ ಆ ಕೃಷ್ಣಕುಮಾರನು ಪ್ರಯಾಗಕ್ಷೇತ್ರವನ್ನು ಸೇರಿ ಅಲ್ಲಿ ಪಾಪಗಳೆಲ್ಲವನ್ನೂ ಪರಿಹರಿಸುವ ತ್ರಿವೇಣೀ ಸಂಗಮದಲ್ಲಿ ಸ್ನಾನಮಾಡಿ ತೀರ್ಥರಾಜನೆನಿಸಿದ ಆ ಪ್ರಯಾಗದ ಮಹಿಮೆಯನ್ನು ತಾನು ತಿಳಿದಿದ್ದುದರಿಂದ ಅನೇಕ ಮಹಾ ದಾನಗಳನ್ನು ಮಾಡಿದನು.

೧೦-೧೨. ಶ್ರೀಹರಿಗೆ ಪ್ರೀತಿದಾಯಕವಾದ ಆ ತೀರ್ಥರಾಜದಲ್ಲಿ ಕೃಷ್ಣಪುತ್ರನು ಇಪ್ಪತ್ತು ಸಾವಿರ ಆನೆಗಳನ್ನೂ, ಹತ್ತು ಲಕ್ಷ ಕುದುರೆಗಳನ್ನೂ, ನಾಲ್ಕು ಲಕ್ಷ ರಥಗಳನ್ನೂ, ಹತ್ತು ಅರ್ಬುದ ಗೋವುಗಳನ್ನೂ, ಚಿನ್ನದ ಸರಗಳಿಂದಲೂ, ಮತ್ತು ಚಿನ್ನದ ಎಳೆಗಳಿಂದ ರಚಿಸಲ್ಪಟ್ಟ ಬೆಲೆಬಾಳುವ ವಸ್ತ್ರಗಳಿಂದಲೂ ಸಮೇತವಾಗಿರುವ ಹತ್ತು ಭಾರ ಚಿನ್ನವನ್ನೂ, ಐದು ಲಕ್ಷ ಆಣಿ ಮುತ್ತುಗಳನ್ನೂ, ಎರಡು ಲಕ್ಷ ನವವಿಧ ರತ್ನಗಳನ್ನೂ, ಹತ್ತು ಲಕ್ಷ ವಸ್ತ್ರಗಳನ್ನೂ, ಕಾಶ್ಮೀರದಲ್ಲಿಯ ಪ್ರಖ್ಯಾತವಾದ ಎರಡು ಲಕ್ಷ ಹೊಸ ಉಣ್ಣೆಯ ಬಟ್ಟೆ (ಶಾಲು)ಗಳನ್ನೂ, ಬ್ರಾಹ್ಮಣರಿಗೆ ದಾನವಾಗಿ

ಬ್ರಾಹ್ಮಣೇಭ್ಯೋ ದದೌ ಕಾರ್ಷ್ಣಿಸ್ತೀರ್ಥರಾಜೇ ಹರಿಪ್ರಿಯೇ ।
ಕಾರೂಷಾಧಿಪತಿಸ್ತತ್ರ ಪೌಂಡ್ರಕೋ ನಾಮ ಮೈಥಿಲ ॥ ೧೩ ॥

ಕೃಷ್ಣಶತ್ರುಃ ಸೋಽಪಿ ಕಾರ್ಷ್ಣಿಂ ಪೂಜಯಾಮಾಸ ಶಂಕಿತಃ ।
ಪ್ರದ್ಯುಮ್ನಂ ಚಾಗತಂ ವೀಕ್ಷ್ಯ ಪಾಂಚಾಲೇ ಕಾನ್ಯಕುಬ್ಜಕೇ ॥ ೧೪ ॥

ಭಯಂ ಪ್ರಾಪುರ್ನೃಪಾಃ ಸರ್ವೇ ದುರ್ಗೇ ದುರ್ಗೇ ಕೃತಾರ್ಗಲಾಃ ।
ನಿಚೇಲುರ್ಯಾದವಾತ್ಸರ್ವೇ ಭಯಾರ್ತಾ ದುರ್ಗಮಾಶ್ರಿತಾಃ ॥ ೧೫ ॥

ಬಿಂದುದೇಶಾಧಿಪೋ ರಾಜಾ ದೀರ್ಘಬಾಹುರ್ಮಹಾಬಲಃ ।
ಶಂಬರಾರೇಃ ಪರಂ ಸಂಧಿಂ ಕರ್ತುಂ ಸೈನ್ಯೈಃ ಸಮಾಯಯೌ ॥ ೧೬ ॥

॥ ದೀರ್ಘಬಾಹುರುವಾಚ ॥

ಯೂಯಂ ಸರ್ವೇ ಯಾದವೇಂದ್ರಾ ಆಗತಾ ಜಯಿನೋ ದಿಶಾಂ ।
ಮನೋರಥಂ ಮೇ ಕುರುತಾಂ ಭವೇಯಂ ತುಷ್ಟಮಾನಸಃ ॥ ೧೭ ॥

ಇತ್ತನು. ಓ ಮಿಥಿಲಾ ರಾಜೇಂದ್ರ! ಆ ತೀರ್ಥರಾಜದಲ್ಲಿ ಪೌಂಡ್ರಕನೆಂಬ ಕಾರೂಷ ದೇಶಾಧಿಪತಿಯು ಕೃಷ್ಣನಿಗೆ ಕಡುಹಗೆಯಾಗಿದ್ದರೂ, ಆ ಪ್ರದ್ಯುಮ್ನನ ಪರಾಕ್ರಮಕ್ಕೆ ಹೆದರಿ ಆತನಿಗೆ ಸತ್ಕಾರವನ್ನು ಮಾಡಿದನು,

೧೪–೧೫. ಬಳಿಕ ಪ್ರದ್ಯುಮ್ನನು ಅಲ್ಲಿಂದ ಹೊರಟು ಬರುತ್ತಿರಲು ಪಾಂಚಾಲ ದೇಶದಲ್ಲಿಯೂ ಕನ್ಯಾಕುಬ್ಜದಲ್ಲಿಯೂ ಇರುವ ಅನೇಕ ಮಂದಿ ರಾಜರು ಆತನ ವಿಷಯವಾಗಿ ವಿಶೇಷವಾಗಿ ಭಯದಿಂದ ತತ್ತಳಿಸುತ್ತಾ ಮೂಲೆ ಮೂಲೆಗಳಲ್ಲಿದ್ದ ದುರ್ಗಗಳೆಲ್ಲವನ್ನೂ ಸೇರಿ ಬಾಗಿಲಿಗೆ ಅಗುಳಿಹಾಕಿ ಅಲ್ಲಿ ಅಡಗಿ ಕುಳಿತುಬಿಟ್ಟರು.

೧೬. ಅಲ್ಲಿಂದ ಮುಂದೆ ಬರುವಾಗ ಬಿಂದುದೇಶದ ಅರಸನಾದ ಮಹಾ ಬಲಾಢ್ಯನಾದ ದೀರ್ಘಬಾಹುವೆಂಬ ದೊರೆಯು ಪ್ರದ್ಯುಮ್ನನೊಡನೆ ಸಂಧಿಮಾಡಿ ಕೊಳ್ಳಲೆಳಸಿ ಸೈನ್ಯದೊಡನೆ ಬಂದನು.

೧೭. ಹಾಗೆ ಸಂಧಿಗೆಂದು ಬಂದ ದೀರ್ಘಬಾಹುವು ಆ ಯಾದವರನ್ನು ಕುರಿತು "ಎಲೈ ಯಾದವ ವೀರರಿರಾ! ನೀವೆಲ್ಲರೂ ದಿಕ್ಕು ದಿಕ್ಕುಗಳೆಲ್ಲವನ್ನೂ ಜಯಿಸಿ ಬಂದಿರುವಿರಲ್ಲವೆ? ನೀವು ನನ್ನ ಬಯಕೆಯೊಂದನ್ನು ಈಡೇರಿಸಿದರೆ ನನಗೆ ಬಹಳ ಸಂತೋಷವಾಗುವುದು.

ಸಜಲಸ್ಯಾಪಿ ಕಾಚಸ್ಯ ಪಾತ್ರಸ್ಯ ಶರವೇಧತಃ ।
ನ ಕ್ಷರೇದ್ಬಿಂದುರೇಕೋಽಪಿ ಬಾಣಸ್ತದಧಿತಿಷ್ಠತಿ ॥ ೧೮ ॥

ನ ಪಾತ್ರಂ ಶಕಲೀಭೂತಂ ತನ್ಮಧ್ಯೇ ಹಸ್ತಲಾಘವಂ ।
ಯೇ ಕುರ್ವಂತಿ ಪ್ರತಿಜ್ಞಾಂ ಮೇ ತೇಭ್ಯೋ ದಾಸ್ಯಾಮಿ ಕನ್ಯಕಾಃ ॥ ೧೯ ॥

ಯೂಯಂ ಸರ್ವೇ ಯಾದವೇಂದ್ರಾ ಧನುರ್ವೇದವಿಶಾರದಾಃ ।
ಮಯಾಪಿ ನಾರದಮುಖಾಚ್ಛ್ರುತಾಃ ಪೂರ್ವಂ ಮಹಾಬಲಾಃ ॥ ೨೦ ॥

॥ ಶ್ರೀ ನಾರದ ಉವಾಚ ॥

ಸರ್ವೇಷಾಂ ವಿಸ್ಮಿತಾನಾಂ ಚ ಪ್ರದ್ಯುಮ್ನೋ ಧನ್ವಿನಾಂ ವರಃ ।
ತಥೇತ್ಯುವಾಚ ಸದಸಿ ಬಿಂದುದೇಶಾಧಿಪಂ ನೃಪ ॥ ೨೧ ॥

೧೮–೧೯. ಅದೇನಂದರೆ, ನನ್ನ ಪ್ರತಿಜ್ಞೆಯೊಂದಿರುವುದು. ಸಂಪೂರ್ಣವಾಗಿ ನೀರು ತುಂಬಿರುವ ಗಾಜಿನ ಪಾತ್ರೆಯನ್ನು ಒಂದು ತೊಟ್ಟು ನೀರು ಚಲ್ಲದಂತೆ ಮತ್ತು ಆ ಗಾಜಿನ ಪಾತ್ರೆಯು ತುಂಡು ತುಂಡಾಗದಂತೆ ಮತ್ತು ಹೊಡೆದ ಬಾಣವು ಅಲ್ಲಿಯೇ ಸಿಕ್ಕಿಕೊಂಡು ನಡುವೆ ನೀರಿರುವಂತೆ ಯಾವ ವೀರನು ಬಾಣವನ್ನು ಪ್ರಯೋಗಿಸಿ ತನ್ನ ಕೈಚಳಕವನ್ನು ತೋರುವನೋ ಆ ವೀರನಿಗೆ ಕನ್ಯೆಯನ್ನು ದಾನಮಾಡಬೇಕೆಂದಿರುವೆನು. ಇದು ನನ್ನ ಪ್ರತಿಜ್ಞೆ.

೨೦. ಎಲೈ ಯದುವೀರರಿರಾ! ನೀವು ಪ್ರತಿಯೊಬ್ಬರೂ ಧನುರ್ವೇದವಲ್ಲಿ ಬಹುಮಟ್ಟಿಗೆ ನಿಪುಣತೆಯನ್ನು ಪಡೆದಿರತಕ್ಕವರೆಂದೂ, ಮಹಾ ಬಲಶಾಲಿಗಳೆಂದೂ ಶ್ರೀ ನಾರದ ಮಹರ್ಷಿಗಳ ಮುಖದಿಂದಲೇ ಕೇಳಿ ತಿಳಿದಿರುವೆನು. ಎಂದು ನುಡಿದನು.

೨೧. ಓ ಮಿಥಿಲಾಧ್ಪನರೇಂದ್ರ! ಈ ರೀತಿಯಾಗಿ ಆ ದೀರ್ಘಬಾಹುವು ನುಡಿದುದನ್ನು ಕೇಳಿ ಆ ಯದುವೀರರೆಲ್ಲರಿಗೂ ಬಹು ಆಶ್ಚರ್ಯವಾಯಿತು. ಆಗ ಧನುರ್ಧಾರಿಗಳಲ್ಲಿ ಅಗ್ರೇಸರನೆನಿಸಿದ ಆ ಪ್ರದ್ಯುಮ್ನನು ಹಾಗೆಯೇ ಆಗಲಿ, ಎಂದು ಆ ತುಂಬಿದ ಸಭೆಯಲ್ಲಿ ನುಡಿದು,

ದೀರ್ಘವಂಶೌ ಸುವಿಸ್ಥಾಪ್ಯ ಗುಣಂ ಬಧ್ವಾ ತದಂತರೇ ।
ಗುಣೇ ಬಧ್ವಾ ಕಾಚಕುಂಭಂ ಸಜಲಂ ಪಶ್ಯತಾಂ ಸತಾಂ ॥ ೨೨ ॥

ಧನುರ್ಗೃಹೀತ್ವಾ ತದ್ವೀಕ್ಷ್ಯ ಬಾಣಂ ಕಾರ್ಷ್ಣಿಃ ಸಮಾದಧೇ ।
ಕಾಚಪಾತ್ರಂ ಶರೋ ಭಿತ್ವಾ ತಸ್ಥೌ ಮಧ್ಯೇಽರ್ಧನಿಃಸೃತಃ ॥ ೨೩ ॥

ಏಕತೋ ಮುಖಪುಂಖಾಭ್ಯಾಂ ರವಿರಶ್ಮಿರಿವಾಂಬುದೇ ।
ಕಾಚಪಾತ್ರೇ ಬಭೌ ಬಾಣಸ್ತದದ್ಭುತಮಿವಾಭವತ್ ॥ ೨೪ ॥

ನ ಪಾತ್ರಂ ಶಕಲೀಭೂತಂ ತ್ರಿಕುಶಸ್ಯ ಫಲಂ ಯಥಾ ।
ನ ಚಾಲನಂ ಕಂಪನಂ ಚ ಬಿಂದುಸ್ರಾವೋಽಪಿ ನಾಭವತ್ ॥ ೨೫ ॥

ಪ್ರದ್ಯುಮ್ನೋ ಭಗವಾನ್ಬಾಣಂ ದ್ವಿತೀಯಂ ಸಂದಧೇ ಪುನಃ ।
ಸೋಽಪಿ ಪೂರ್ವಂ ಸಮುತ್ಸೃಜ್ಯ ತತ್ರ ತಸ್ಥೌ ವಿದೇಹರಾಟ್ ॥ ೨೬ ॥

೨೨–೨೫. ಅಲ್ಲಿದ್ದ ಸಜ್ಜನರೆಲ್ಲರೂ ನೋಡುತ್ತಿರುವಂತೆ ಎರಡು ಉದ್ದನೆಯ ಬೊಂಬುಗಳನ್ನು ಅಲ್ಲಾಡದಂತೆ ನಡಿಸಿ ಅವೆರಡಕ್ಕೂ ನಡುವೆ ಒಂದು ಹಗ್ಗವನ್ನು ಕಟ್ಟಿಸಿ ಆ ಹಗ್ಗದ ನಡುವೆ ಸರಿಯಾಗಿ ಮೇಲೆ ಹೇಳಿದಂತೆ ನೀರು ತುಂಬಿದ ಗಾಜಿನ ಗಡಿಗೆಯೊಂದನ್ನು ತೂಗಬಿಟ್ಟು ಬಿಲ್ಲನ್ನು ಕೈಗೆ ತೆಗೆದುಕೊಂಡು ಆ ಗಾಜಿನ ಗಡಿಗೆಗೆ ಸರಿಯಾಗಿ ಗುರಿಯಿಟ್ಟು ಬಾಣವನ್ನು ಹೂಡಿ ಅದನ್ನೆಳೆದು ಬಿಟ್ಟನು. ಆ ಬಾಣವು ಆ ಗಾಜಿನ ಪಾತ್ರೆಯನ್ನು ತೂತುಮಾಡಿಕೊಂಡು ಅದರ ನಡುವೆ ಮೇಘದ ಮಧ್ಯೆ ತೂರಿ ಬರುವ ಸೂರ್ಯರಶ್ಮಿಯಂತೆ ಒಂದು ಕಡೆ ಅಲುಗೂ, ಮತ್ತೊಂದು ಕಡೆ ತುದಿಯೂ (ಬುಡವೂ) ಬರುವ ಹಾಗೆಯೂ, ಉಳಿದ ಭಾಗವು ಆ ಪಾತ್ರೆಯೊಳಗಿರುವಂತೆಯೂ ಹೊಂದಿಕೆಯಾಗಿ ನಿಂತುಕೊಂಡಿತು. ಓ ರಾಜೇಂದ್ರ! ಆ ಆಶ್ಚರ್ಯವನ್ನು ಏನೆಂದು ಹೇಳಲಿ! ಆ ಬಾಣದ ಏಟಿನಿಂದ ಆ ಪಾತ್ರೆಯು ಚೂರು ಚೂರಾಗಲಿಲ್ಲ. ಜೋರಾಗಿ ಅಲ್ಲಾಡುವುದು ಹಾಗಿರಲಿ; ಸ್ವಲ್ಪವೂ ಸಹ ಅಲುಗಲಿಲ್ಲ; ಒಂದು ತೊಟ್ಟು ನೀರೂ ಚೆಲ್ಲಲಿಲ್ಲ.

೨೬. ಅನಂತರ ಆ ಭಗವಂತನಾದ ಪ್ರದ್ಯುಮ್ನನು ಮರಳಿ ಮತ್ತೊಂದು ಬಾಣವನ್ನು ತೆಗೆದುಕೊಂಡು ಬಿಲ್ಲಿನಲ್ಲಿ ಹೂಡಿ ಅದನ್ನು ಪ್ರಯೋಗಿಸಲು ಆ ಎರಡನೆಯ ಬಾಣವು ಮೊದಲನೆಯ ಬಾಣವನ್ನು ತಳ್ಳಿ ತಾನು ಅದರ ಜಾಗದಲ್ಲಿ ಅದರಂತೆಯೇ ನಿಂತುಕೊಂಡಿತು.

ಸಾಂಬೋऽಪಿ ಧನುರಾದಾಯ ಬಾಣಾನ್ಪಂಚ ಸಮಾದಧೇ ।
ಕಾಚಪಾತ್ರಂ ಚ ತೇ ಭಿತ್ವಾ ತಸ್ಥುಸ್ತತ್ರಾರ್ಧನಿಃಸೃತಾಃ ॥ ೨೭ ॥

ಯುಯುಧಾನೋ ಧನುರ್ನೀತ್ವಾ ಬಾಣಮೇಕಂ ಸಮಾಕ್ಷಿಪತ್ ।
ಸರ್ವೇಷಾಂ ಪಶ್ಯತಾಂ ತೇಷಾಂ ಪಾತ್ರಂ ಚೂರ್ಣೀಬಭೂವ ಹ ॥ ೨೮ ॥

ಉಚ್ಚೈರ್ಜಹಸುಃ ಸರ್ವೇ ಯಾದವಾಃ ಪರಸೈನಿಕಾಃ ।
ತ್ವಂ ಮಹಾನ್ಬಾಣಧಾರೀಹ ಕಾರ್ತವೀರ್ಯಾರ್ಜುನೋ ಯಥಾ ॥ ೨೯ ॥

ಅರ್ಜುನೋ ಭರತೋ ರಾಮಸ್ತ್ರಿಪುರಘ್ನೋ ಹಿ ನಾ ಭವಾನ್ ।
ದ್ರೋಣೋ ಭೀಷ್ಮೋऽಥವಾ ಕರ್ಣೋ ಜಾಮದಗ್ನ್ಯ ಇವಾಭವತ್॥ ೩೦ ॥

---

೨೭. ಅನಂತರ ಸಾಂಬಕುಮಾರನು ತನ್ನ ಬಿಲ್ಲಿನಲ್ಲಿ ಐದು ಬಾಣಗಳನ್ನು ಆ ಗಾಜಿನ ಗಡಿಗೆಗೆ ಗುರಿಯಿಟ್ಟು ಹೊಡೆಯಲು ಆ ಬಾಣಗಳು ಅದನ್ನು ಭೇದಿಸಿ ಅರೆಭಾಗ ಒಳಗೂ, ಅರೆಭಾಗ ಹೊರಗೂ (ಪ್ರದ್ಯುಮ್ನನ ಬಾಣದಂತೆ) ನಿಂತು ಕೊಂಡುವು.

೨೮. ಅನಂತರ ಯುಯುಧಾನನು ತನ್ನ ಬಿಲ್ಲಿನಲ್ಲಿ ಬಾಣವೊಂದನ್ನು ಹೂಡಿ ಸಭಿಕರೆದುರಿಗೆ ಪ್ರಯೋಗಿಸಲು ಆ ಗಾಜಿನ ಪಾತ್ರೆಯು ಪುಡಿಪುಡಿಯಾಗಿ ಹೋಯಿತು.

೨೯. ಅದನ್ನು ಕಂಡು ಯಾದವವೀರರೂ ಆ ಬಿಂದುರಾಜನ ಸೈನಿಕರೂ ಗಟ್ಟಿಯಾಗಿ ನಗುತ್ತಾ ನೀನು ನಿಜವಾಗಿಯೂ ಕಾರ್ತವೀರ್ಯಾರ್ಜುನನಂತೆ ಭಾರಿ ಬಿಲ್ಲುಗಾರನೇ ಸರಿ.

೩೦. ಇಲ್ಲವೇ ಅರ್ಜುನನೋ, ಭರತನೋ, ರಾಮನೋ, ತ್ರಿಪುರಸಂಹಾರಿ ಯಾದ ಶಿವನೋ, ಇಲ್ಲದಿದ್ದರೆ ದ್ರೋಣನೋ, ಭೀಷ್ಮನೋ, ಕರ್ಣನೋ, ಪರಶು ರಾಮನೋ ಯಾರಾದರೂ ಆಗಿರಬೇಕು ಎಂಬುದಾಗಿ ಅಪಹಾಸ್ಯಮಾಡಿದರು.

ಅನ್ಯತ್ಪಾತ್ರಂ ಸಮಾಧಾಯಾನಿರುದ್ಧೋ ಧನ್ವಿನಾಂ ವರಃ ।
ಅಧೋ ಗತ್ವಾಥ ತದ್ದೃಷ್ಟ್ವಾ ಬಾಣಂ ಚಿಕ್ಷೇಪ ಲಾಘವಾತ್ ॥ ೩೧ ॥

ಸೋಽಪಿ ಪಾತ್ರತಲಂ ಭಿತ್ವಾ ತಸ್ಥೌ ತತ್ರಾಪಿ ನಿಃಸೃತಃ ।
ತತ್ಪಾತ್ರಾದ್ಧಸ್ತಪಂಚೋರ್ಧ್ವಂ ಬಧ್ವಾ ಪಾಷಾಣಮಂಬರೇ ॥ ೩೨ ॥

ದೀಪ್ತಿಮಾನ್ಧನುರಾದಾಯ ಬಾಣಮೇಕಂ ಸಮಾದಧೇ ।
ಸೋಽಪಿ ಪಾತ್ರತಲಂ ಭಿತ್ವಾ ಬಾಣಮುತ್ಸೃಜ್ಯ ಚಾಗ್ರತಃ ॥ ೩೩ ॥

ತಾಡಯಿತ್ವಾ ಚ ಪಾಷಾಣಂ ಪುನಸ್ತತ್ರ ಸಮಾಶ್ರಿತಃ ।
ಬಾಣವೇಗೇನ ತದಪಿ ಬಿಂದುಸ್ರಾವೋಽಪಿ ನಾಭವತ್ । ॥ ೩೪ ॥

ಗತಾಗತೇನ ಯಾವದ್ವೈ ಬಿಂದುಸ್ರಾವೋಽಪಿ ನಾಭವತ್ ।
ತದಾ ವೀರಾಶ್ಚ ತೇ ಸರ್ವೇ ಸಾಧು ಸಾಧ್ವಿತಿ ವಾದಿನಃ ॥ ೩೫ ॥

---

೩೧. ಅನಂತರ ಬಿಲ್ಲುಗಾರರಲ್ಲೆಲ್ಲಾ ಮೊದಲನೆಯವನೆನಿಸಿದ ಅನಿರುದ್ಧನು ಬೇರೊಂದು ಗಾಜಿನ ಪಾತ್ರೆಯನ್ನು ಆ ಹಗ್ಗಕ್ಕೆ ತೂಗುಕಟ್ಟಿಸಿ ಆ ಪಾತ್ರೆಯ ಕೆಳಗಡೆ ಹೋಗಿ ನಿಂತು ಮೇಲ್ಮುಖವಾಗಿ ನೋಡುತ್ತಾ ಬಹು ಕೈಚಳಕದಿಂದ ಬಾಣವನ್ನು ಬಿಟ್ಟನು.

೩೨–೩೪. ಆ ಅನಿರುದ್ಧನ ಬಾಣವೂ ಸಹ ಆ ಪಾತ್ರೆಯ ತಳವನ್ನು ಕೊರೆದು ಕೊಂಡು ಒಳಹೊಕ್ಕು ಸ್ವಲ್ಪಭಾಗ ಹೊರಗೆ ಇರುವಂತೆ ಅಲ್ಲಿ ನಿಂತುಕೊಂಡಿತು. ಅನಂತರ ದೀಪ್ತಿಮಂತನೆಂಬ ವೀರನು ಆ ಪಾತ್ರೆಯ ಮೇಲುಗಡೆ ಐದು ಮೊಳದಷ್ಟು ಎತ್ತರವಲ್ಲಿ ಒಂದು ಕಲ್ಲನ್ನು ನಿಲ್ಲಿಸಿ ತಾನು ಬಿಲ್ಲನ್ನು ತೆಗೆದುಕೊಂಡು ಬಾಣವೊಂದನ್ನು ತೊಟ್ಟು ಅದನ್ನು ಪ್ರಯೋಗಿಸಲು ಆ ಬಾಣವು ಪಾತ್ರೆಯ ತಳವನ್ನು ಕೊರೆದು ಕೊಂಡು ಅದರ ಮೊದಲು ನಾಟಿಕೊಂಡಿದ್ದ ಬಾಣವನ್ನು ಹೊರಕ್ಕೆ ತಳ್ಳಿ ಮೇಲೆ ಕಟ್ಟಿದ್ದ ಕಲ್ಲನ್ನೂ ನೂಕಿ ಮತ್ತೆ ಆ ಗಾಜಿನ ಪಾತ್ರೆಯಲ್ಲಿ ನೆಟ್ಟನೆ ನಿಂತುಕೊಂಡಿತು. ಆ ಬಾಣದ ವೇಗದಿಂದ ಅಷ್ಟಾದರೂ ಒಂದು ತೊಟ್ಟು ಸಹ ನೀರು ಕೆಳಗೆ ಬೀಳಲಿಲ್ಲ.

೩೫. ಈ ರೀತಿಯಾಗಿ ಆ ದೀಪ್ತಿಮಂತನ ಬಾಣವು ಪಾತ್ರೆಯ ಒಳಗಿಂದ ಹೊರಕ್ಕೆ ಹೋಗಿ ಮತ್ತೆ ಒಳಗೆ ಬಂದರೂ ಒಂದು ತೊಟ್ಟು ನೀರೂ ಉದರದಿರುವು ದನ್ನು ಕಂಡು ಅಲ್ಲಿ ನೆರೆದಿದ್ದ ವೀರರೆಲ್ಲರೂ ಭಲೆ! ಭಲೆ! ಎಂದು ಆತನನ್ನು ಪ್ರಶಂಸಿಸಿದರು.

ಭಾನುರ್ಧನುಃ ಸಂಗೃಹೀತ್ವಾ ವೀಕ್ಷ್ಯ ಮಿಾಲಿತಲೋಚನಃ ।
ಆರಾಚ್ಚಿಕ್ಷೇಪ ನಾರಾಚಂ ಸರ್ವೇಷಾಂ ಪಶ್ಯತಾಂ ಸತಾಂ ॥ ೩೬ ॥

ಸೋಽಪಿ ಪಾತ್ರಂ ತದಾ ಭಿತ್ವಾ ಪಾತ್ರಂ ಕೃತ್ವಾ ಹ್ಯಧೋಮುಖಂ ।
ಪುನರೂರ್ಧ್ವಮುಖಂ ಕೃತ್ವಾ ತಸ್ಥೌ ತತ್ರಾರ್ಧನಿಃಸೃತಃ ॥ ೩೭ ॥

ಬಾಣವೇಗೇನ ತದಪಿ ಬಿಂದುಸ್ರಾವೋಽಪಿ ನಾಭವತ್ ।
ನ ಪಾತ್ರಂ ಶಕಲೀಭೂತಂ ತದದ್ಭುತಮಿವಾಭವತ್ ॥ ೩೮ ॥

ಏವಂ ಶ್ರೀಕೃಷ್ಣಪುತ್ರಾ ಯೇ ಅಷ್ಟಾದಶಮಹಾರಥಾಃ ।
ಸರ್ವೇ ತೇ ಬಿಭಿದುಃ ಪಾತ್ರಂ ಜಲಸ್ರಾವೋಽಪಿ ನಾಭವತ್ ॥ ೩೯ ॥

ಬಿಂದುದೇಶಾಧಿಪೋ ರಾಜಾ ದೀರ್ಘಬಾಹುಃ ಸುವಿಸ್ಮಿತಃ ।
ತೇಭ್ಯೋಽದಾತ್ಕನ್ಯಕಾಃ ಸೃಷ್ಟಾ ಅಷ್ಟಾದಶಸುಲೋಚನಾಃ ॥ ೪೦ ॥

೩೬–೩೭. ಅನಂತರ ಭಾನುವೆಂಬ ವೀರನು ತನ್ನ ಬಿಲ್ಲನ್ನು ತೆಗೆದುಕೊಂಡು ಕಣ್ಣುಗಳನ್ನು ಮುಚ್ಚಿಕೊಂಡೇ ದೂರದಿಂದ ಆ ವೀರರೆಲ್ಲರೂ ನೋಡುತ್ತಿರುವಂತೆ ಬಾಣವನ್ನು ಬಿಡಲು ಆ ಶರವು ಆ ಗಾಜಿನ ಪಾತ್ರೆಯನ್ನು ಕೊರೆದುಕೊಂಡು ಅದನ್ನು ಕೆಳಮುಖವಾಗಿ ನಿಲ್ಲಿಸಿ ತಾನು ಅದರಲ್ಲಿ ಹೊಕ್ಕು ತನ್ನ ಅರೆಭಾಗವು ಹೊರಗೆ ಇರುವಂತೆ ನಾಟಿ ನಿಂತಿತು.

೩೮. ಇಷ್ಟಾದರೂ ಆ ಬಾಣದ ವೇಗದಿಂದ ಒಂದು ತೊಟ್ಟೂ ಸಹ ನೀರು ಉದುರಲಿಲ್ಲ. ಪಾತ್ರೆಯೂ ಕೂಡ ಚೂರಾಗಲಿಲ್ಲ. ಭಾನುವಿನ ಕೌಶಲವು ಅತಿಶಯವಾಗಿ ಅಚ್ಚರಿಯನ್ನುಂಟುಮಾಡಿತು.

೩೯. ಈ ರೀತಿಯಾಗಿ ಮಹಾರಥರಾದ ಆ ಕೃಷ್ಣನ ಹದಿನೆಂಟು ಮಂದಿ ಪುತ್ರರೂ ಆ ಗಾಜಿನ ಪಾತ್ರೆಯನ್ನು ಎಲ್ಲ ಕಡೆಯಲ್ಲೂ ಭೇದಿಸಿದರು. ಆದರೂ ನೀರು ಒಂದು ಹನಿಯಷ್ಟೂ ಬೀಳಲಿಲ್ಲ.

೪೦. ಆಗ ಬಿಂದುದೇಶಾಧಿಪತಿಯಾದ ಆ ದೀರ್ಘಬಾಹುರಾಜನು ಬಹು ಆಶ್ಚರ್ಯವನ್ನು ತಾಳಿ ತಾನು ಪ್ರತಿಜ್ಞೆಮಾಡಿದ್ದಂತೆ ಆ ಕುಮಾರರಿಗೆ ಹದಿನೆಂಟು ಮಂದಿ ಮುದ್ದಾದ ಕಣ್ಣುಗಳುಳ್ಳ ಸುಕುಮಾರಿಯರನ್ನು ಇತ್ತು ಮದುವೆಮಾಡಿದನು.

ತೇಷಾಂ ವಿವಾಹಸಮಯೇ ಶಂಖಭೇರ್ಯಾನಕಾದಯಃ ।
ನೇದುರ್ಜಗುಶ್ಚ ಗಂಧರ್ವಾ ನನೃತುಶ್ಚಾಪ್ಸರೋ ಗಣಾಃ ॥ ೪೧ ॥

ತೇಷಾಮುಪರಿ ದೇವಾಸ್ತೇ ಜಯಧ್ವನಿಸಮಾಕುಲಾಃ ।
ವವೃಷುಃ ಪುಷ್ಪವರ್ಷಾಣಿ ಚಕ್ರುಃ ಶ್ಲಾಘಾಂ ದಿವಿ ಸ್ಥಿತಾಃ ॥ ೪೨ ॥

ಗಜಾನ್ ಷಷ್ಟಿಸಹಸ್ರಾಣಿ ಹಯಾನಾಮರ್ಬುದಂ ತಥಾ ।
ದಶಲಕ್ಷಂ ರಥಾನಾಂ ಚ ದಾಸೀನಾಂ ಲಕ್ಷಮೇವ ಚ ॥ ೪೩ ॥

ಶಿಬಿಕಾನಾಂ ಚತುರ್ಲಕ್ಷಂ ಪಾರಿಬರ್ಹೇ ದದೌ ನೃಪಃ ।
ತಾಃ ಪ್ರಾಹಿಣೋದ್ದ್ವಾರವತೀಂ ಬಭೌ ಕಾರ್ಷ್ಣಿರ್ಯದೂತ್ತಮಃ ॥ ೪೪ ॥

ದೀರ್ಘಬಾಹುಮನುಪ್ರಾಪ್ಯ ನಿಷಧಾನ್ಪ್ರಯಯೌ ತತಃ ।
ನಿಷಧಾಧಿಪತಿರ್ವೀರಸೇನಜಿನ್ನಾಮ ಮೈಥಿಲ ॥ ೪೫ ॥

---

೪೧. ಆ ಕುಮಾರರ ಮದುವೆಯ ಸಂದರ್ಭದಲ್ಲಿ ಶಂಖಗಳೂ, ಭೇರಿಗಳೂ, ನಗಾರಿಗಳೂ ಸಂತೋಷದಿಂದ ಬಾರಿಸಲ್ಪಟ್ಟವು. ಅಂತರಿಕ್ಷದಲ್ಲಿ ಗಂಧರ್ವರು ಗಾನಮಾಡಿದರು. ಅಪ್ಸರಸ್ತ್ರೀಯರು ನರ್ತನಮಾಡಿದರು.

೪೨. ಆಗ ವಿವಾಹಮಂಟಪದ ಮೇಲುಗಡೆ ನೆರೆದಿದ್ದ ದೇವತೆಗಳು ಜಯ ಜಯ ಎಂಬುದಾಗಿ ಕೊಂಡಾಡುತ್ತಾ ಆ ವಧೂವರರ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು.

೪೩-೪೪. ಆ ದೀರ್ಘಬಾಹುರಾಜನು ವಿವಾಹ ಸಮಾರಂಭವು ಮುಗಿದ ನಂತರ ಅರುವತ್ತು ಸಾವಿರ ಆನೆಗಳನ್ನೂ, ಒಂದು ಅರ್ಬುದ ಕುದುರೆಗಳನ್ನೂ, ಹತ್ತು ಲಕ್ಷ ತೇರುಗಳನ್ನೂ, ಒಂದು ಲಕ್ಷ ದಾಸಿಯರನ್ನೂ, ನಾಲ್ಕು ಲಕ್ಷ ಮೇನೆಗಳನ್ನೂ, ಬಳುವಳಿಯಾಗಿ ಇತ್ತನು. ಯದುಶ್ರೇಷ್ಠನಾದ ಪ್ರದ್ಯುಮ್ನನು ಆ ಕುಮಾರಿಯರನ್ನೂ, ಅವೆಲ್ಲ ಬಳುವಳಿಯನ್ನೂ ದ್ವಾರಕೆಗೆ ಕಳುಹಿಸಿಕೊಟ್ಟನು.

೪೫. ಅನಂತರ ದೀರ್ಘಬಾಹುವನ್ನು ಬೀಳ್ಕೊಂಡು ಅಲ್ಲಿಂದ ನಿಷಧದೇಶಕ್ಕೆ ಅಭಿಮುಖನಾಗಿ ಪಯಣ ಬೆಳಸಿದನು. ಓ ಮಿಥಿಲೇಂದ್ರ! ಆ ನಿಷಧ ದೇಶದಲ್ಲಿ ವೀರಸೇನಜಿತ್ ಎಂಬ ಪ್ರಖ್ಯಾತನಾದ ಅರಸು ರಾಜ್ಯಭಾರ ಮಾಡುತ್ತಿದ್ದನು.

ಉಪಾಯನಂ ದದೌ ಸೋಽಪಿ ಪ್ರದ್ಯುಮ್ನಾಯ ಮಹಾತ್ಮನೇ।
ತಥಾ ಹಿ ಭದ್ರಾಧಿಪತಿಃ ಶ್ರೀಕೃಷ್ಣೇಷ್ಟೋ ಹರಿಪ್ರಿಯಃ ॥ ೪೬ ॥

ಪೂಜಯಾಮಾಸ ಬಲಂ ಬೃಹತ್ಸೇನೋ ಹರೇಃ ಸುತಂ।
ಮಾಥುರಾ್ ಶೂರಸೇನಾಂಶ್ಚ ಮಧೂನ್ಪ್ರಾತಃ ಸಸೈನಿಕಃ ॥ ೪೭ ॥

ಸ್ವಾಗತೈಃ ಪೂಜಿತಃ ಕಾರ್ಷ್ಣಿರ್ಮಥುರಾಯಾಂ ಯಯೌ ಪುನಃ।
ತತಃ ಪ್ರದಕ್ಷಿಣೀಕೃತ್ಯ ಮಥುರಾಂ ಸವನಾಂ ಕಿಲ ॥ ೪೮ ॥

ಗೋಪಾನ್ಗೋಪೀಂ ಯಶೋದಾಂ ಚ ನಂದರಾಜಂ ವ್ರಜೇಶ್ವರಂ।
ವೃಷಭಾನೂಪನಂದಾಂಶ್ಚ ನತ್ವಾ ಕಾರ್ಷ್ಣಿರ್ಬಭೌ ನೃಪ ॥ ೪೯ ॥

---

೪೬. ಆ ನಿಷಧದೇಶಾಧಿಪತಿಯು ಮಹಾತ್ಮನಾದ ಪ್ರದ್ಯುಮ್ನನಿಗೆ ಕಪ್ಪವನ್ನು ತಂದೊಪ್ಪಿಸಿದನು. ಅದರಂತೆ ಶ್ರೀಕೃಷ್ಣನಿಗೆ ಬಹಳ ಬೇಕಾದವನೂ, ಭದ್ರದೇಶದ ಅಧಿಪತಿಯೂ ಆದ ಬೃಹತ್ಸೇನನೆಂಬ ದೊರೆಯು ಸೈನ್ಯಸಮೇತನಾದ ಆ ಪ್ರದ್ಯುಮ್ನನನ್ನು ಪೂಜಿಸಿದನು.

೪೭. ಅನಂತರ ಕೃಷ್ಣಕುಮಾರನು ಅಲ್ಲಿಂದ ಹೊರಟು, ಮಥುರೆ, ಶೂರಸೇನ, ಮಧು ಮೊದಲಾದ ದೇಶಗಳಿಗೆ ಸೈನ್ಯಸಮೇತನಾಗಿ ಪಯಣ ಬೆಳಸಿದನು.

೪೮–೪೯. ಮಥುರೆಯಲ್ಲಿ ಅಲ್ಲಿನ ನಿವಾಸಿಗಳು ಕೃಷ್ಣಪುತ್ರನಾದ ಆ ಪ್ರದ್ಯುಮ್ನನನ್ನು ಸುಸ್ವಾಗತಗಳಿಂದ ಸತ್ಕರಿಸಿದನು. ಬಳಿಕ ಆ ಪ್ರದ್ಯುಮ್ನನು ಮಥುರೆಯನ್ನೂ, ಅದರ ಸುತ್ತಮುತ್ತಲೂ ಇದ್ದ ವನೋಪವನಗಳನ್ನೂ ಪ್ರದಕ್ಷಿಣೆ ಮಾಡಿಕೊಂಡು ಬಂದು ವ್ರಜದಲ್ಲಿ (ಗೋಕುಲದಲ್ಲಿ) ಗೋಪ ಗೋಪಿಯರನ್ನೂ, ವೃಷಭಾನು, ಉಪನಂದರನ್ನೂ ನಮಸ್ಕರಿಸಿ ಸಂತೋಷದಿಂದ ಕಂಗೊಳಿಸಿದನು.

ಬಲಿಂ ಚ ನಂದರಾಜಾಯ ದತ್ವಾ ದತ್ವಾ ಪುನಃ ಪುನಃ ।
ತೈಃ ಪೂಜಿತಃ ಕತಿದಿನೈಃ ಸ್ಥಿತೋಽಭೂನ್ನಂದಗೋಕುಲೇ ॥ ೫೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಮಾಥುರಶೂರಸೇನದೇಶವಿಜಯೋ ನಾಮಾಷ್ಟಾದಶೋಽಧ್ಯಾಯಃ

---

೫೦. ಅನಂತರ ನಂದರಾಜನಿಗೆ ನಾನಾ ವಿಧವಾದ ಕಾಣಿಕೆಗಳನ್ನು ಸಲ್ಲಿಸಿ, ಅವರೆಲ್ಲರಿಂದಲೂ ಪುನಃ ಪುನಃ ಸತ್ಕೃತನಾಗಿ ಕೆಲವು ದಿನಗಳು ಆನಂದದಿಂದ ಗೋಕುಲದಲ್ಲೇ ಸುಖವಾಗಿ ಇರುತ್ತಿದ್ದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಮಧುರಶೂರಸೇನ ವಿಜಯವೆಂಬ ಹದಿನೆಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಏಕೋನವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಕಾರ್ಷ್ಣಿರ್ಮಹಾಬಾಹುರ್ಧ್ವಜಿನೀಭಿಃ ಸಮನ್ವಿತಃ ।
ನಾದಯನ್ದುಂದುಭೀನ್ದೀರ್ಘಾನ್ದೀರ್ಘವೇಗಃ ಕುರೂನ್ಯಯೌ ॥ ೧ ॥

ವಿಂಶತಿರ್ಯೋಜನಾನಾಂ ಚ ಮರ್ಯಾದೀಕೃತತದ್ಬಲೇ ।
ತಸ್ಥೌ ತಚ್ಛಿಬಿರಾಣಾಂ ಚ ವಿಸ್ತಾರೋ ದಶಯೋಜನಂ ॥ ೨ ॥

ಪಂಚಯೋಜನಮಾಶ್ರಿತ್ಯ ತದ್ಬಲೇ ರಾಜಪದ್ಧತಿಃ ।
ಧನಾಢ್ಯಾನಾಂ ಚ ವೈಶ್ಯಾನಾಮಾಪಣಾನಿ ಸಹಸ್ರಶಃ ॥ ೩ ॥

ಹತ್ತೊಂಭತ್ತನೆಯ ಅಧ್ಯಾಯವು.

೧. ರಾಜೇಂದ್ರ! ಆಲಿಸು. ಅನಂತರ ಮಹಾಬಾಹುವಾದ ಆ ಕೃಷ್ಣಪುತ್ರನು ಪ್ರಯಾಣಸೂಚಕವಾದ ಭೇರಿಗಳನ್ನು ಹೊಡೆಸುತ್ತಾ ತನ್ನ ಸೇನೆಗಳೊಡಗೂಡಿ ಬೇಗ ಬೇಗನೆ ಕುರುದೇಶಕ್ಕೆ ಅಭಿಮುಖವಾಗಿ ಹೊರಟನು.

೨. ಆ ಸೈನ್ಯವು ಇಪ್ಪತ್ತು ಯೋಜನಗಳಷ್ಟು ಉದ್ದವಾಗಿಯೂ, ಹತ್ತು ಯೋಜನಗಳಷ್ಟು ಅಗಲವಾಗಿಯೂ ಇರುವ ಪ್ರದೇಶದ ತುಂಬಾ ಶಿಬಿರಗಳನ್ನು ಏರ್ಪಡಿಸಿಕೊಂಡು ಕುರು ರಾಜಧಾನಿಯ ಬಳಿ ನಿಂತಿತು.

೩. ಆ ಶಿಬಿರದಲ್ಲಿ ಐದು ಯೋಜನಗಳಷ್ಟು ದೂರ ರಾಜಮಾರ್ಗವು ನಿರ್ಮಿಸಲ್ಪಟ್ಟಿದ್ದಿತು. ಅದರ ಇಕ್ಕಡೆಗಳಲ್ಲಿಯೂ ಸಾವಿರಾರು ಧನಿಕರಾದ ವೈಶ್ಯರ ಅಂಗಡಿಗಳು ತೆರೆಯಲ್ಪಟ್ಟಿದ್ದುವು.

ತಥಾ ರತ್ನಪರೀಕ್ಷಾಣಾಂ ವಸ್ತ್ರವ್ಯಾಪಾರಕಾರಿಣಾಂ ।
ಕಾಚಕಾರನಾಯಕಾಶ್ಚ ರಂಗಕಾರಾಃ ಕುಲಾಲಕಾಃ ॥ ೪

ಕಂದಕಾರಾಸ್ತೂಲಕಾರಾಃ ಪಟಕಾರಾಸ್ತಥೈವ ಚ ।
ಟಂಕಕಾರಾಶ್ಚಿತ್ರಕಾರಾಃ ಪತ್ರಕಾರಾಶ್ಚ ನಾಪಿತಾಃ ॥ ೫ ॥

ಪಟ್ಟಕಾರಾ ಹೇತಿಕಾರಾಃ ಪರ್ಣಕಾರಾಶ್ಚ ಶಿಲ್ಪಿನಃ ।
ಲಾಕ್ಷಾಕಾರಾ ಮಾಲಿನಶ್ಚ ರಜಕಾಸ್ತೈಲಿನಸ್ತಥಾ ॥ ೬ ॥

ತಾಂಬೂಲಶೋಧಿನಸ್ತತ್ರ ಚಿತ್ರಪಾಷಾಣಕರ್ಮಕಾಃ ।
ಅನ್ನಭರ್ಜಕರಾಸ್ತತ್ರ ಕಾಚಭೇದಿನ ಏವ ಹಿ ॥ ೭ ॥

ಮುಕ್ತಾದೀನಾಂ ಚ ರತ್ನಾನಾಂ ಸೂಕ್ಷ್ಮಾಣಾಂ ರತ್ನವೇಧಿನಃ ।
ಏತೇ ಕಾರುಜನಾಃ ಸರ್ವೇ ದೃಶ್ಯಂತೇ ರಾಜಪದ್ಧತೌ ॥ ೮ ॥

---

೪. ಇದಲ್ಲದೆ ರತ್ನಗಳ ಪರೀಕ್ಷೆಯನ್ನು ಬಲ್ಲವರೂ, ಜವಳಿಯ ವ್ಯಾಪಾರಗಾರರೂ, ಬಳೆಗಾರರೂ, ನೇಯ್ಗೆಯುವರೂ, ಬಣ್ಣದವರೂ, ಕುಂಬಾರರೂ ತಮ್ಮತಮ್ಮ ಅಂಗಡಿಗಳನ್ನು ಅಲ್ಲಿ ತೆರೆದಿದ್ದರು.

೫–೮. ಇಷ್ಟೇ ಅಲ್ಲದೆ ಗೆಡ್ಡೆ ಗೆಣಸುಗಳನ್ನು ಮಾರುವವರೂ, ಹತ್ತಿಯ ವ್ಯಾಪಾರಗಾರರೂ, ಬಟ್ಟೆಗಳ ನೇಕಾರರೂ, ಶಿಲ್ಪವನ್ನು ಕಡೆಯುವವರೂ, ಚಿತ್ರಗಾರರೂ, ಪತ್ರರಚನಾಕುಶಲರೂ, ಕ್ಷುರಕರ್ಮನಿಪುಣರೂ, ರೇಶಿಮೆ ವ್ಯಾಪಾರಗಾರರೂ, ಎಲೆ ಮಾರುವವರೂ, ಕಟ್ಟಡದ ಕೆಲಸಗಾರರೂ. ಅರಗಿನ ಸಾಮಾನುಗಳವರೂ, ಹೂವಾಡಿಗರೂ, ಅಗಸರೂ, ಗಾಣಿಗರೂ, ತಾಂಬೂಲವನ್ನು ಸಿದ್ಧಪಡಿಸುವವರೂ, ಚಿತ್ರಕಲೆಯಲ್ಲೂ ಕಲ್ಲಿನ ಕೆಲಸದಲ್ಲೂ ನುರಿತವರೂ, ಪಾಕಶಾಸ್ತ್ರವನ್ನು ಬಲ್ಲವರೂ, ಪುರಿಯನ್ನು ಹುರಿಯುವವರೂ, ಗಾಜನ್ನು ರಂಧ್ರಮಾಡುವವರೂ, ಮುತ್ತು ಮೊದಲಾದ ಸೂಕ್ಷ್ಮವಾದ ರತ್ನಗಳನ್ನು ಕೊರೆಯುವಂತಹ ರತ್ನಪಡಿಯುವರೂ ಮೊದಲಾದ ಅನೇಕ ಮಂದಿ ವಿಧವಿಧವಾದ ಉದ್ಯೋಗಗಳಲ್ಲಿ ಕುಶಲರಾದವರು ಆ ರಾಜಮಾರ್ಗದಲ್ಲಿ ಎತ್ತೆತ್ತಲೂ ಕಾಣಬರುತ್ತಿದ್ದರು.

ಕ್ವಚಿದ್ಭಾನುಮತೀರ್ಲೀಲಾ ಐಂದ್ರಜಾಲವಿಧಾಯಕಾಃ ।
ಕ್ವಚಿನ್ನಟಾಶ್ಚ ನೃತ್ಯಂತೇ ಯುದ್ಧಂ ಭಲ್ಲೂಕಯೋಃ ಕ್ವಚಿತ್ ॥ ೯ ॥

ಕ್ವಚಿತ್ತು ವಾನರೀಲೀಲಾ ಡಮರೂವಾದ್ಯಸಂಯುತಾಃ ।
ಗಾಯಂತಿ ಕುತ್ರಚಿದ್ರಾಜನ್ಸೂತಮಾಗಧಬಂದಿನಃ ॥ ೧೦ ॥

ವಾರಾಂಗನಾಶ್ಚ ನೃತ್ಯಂತಿ ಭೂಷೈರ್ದ್ವಾದಶಭಿರ್ಯುತಾಃ ।
ದಿವ್ಯೈಃ ಷೋಡಶಶೃಂಗಾರೈರ್ಹರಂತ್ಯಪ್ಸರಸಾಂ ಮನಃ ॥ ೧೧ ॥

ಬಂಧೂನಾಮಪಿ ಸೇನಾನಾಂ ಮಹಾತಂಕಾ ಗಜಾಹ್ವಯೇ ।
ಚಾಲನಂ ಸಂಭ್ರಮೋಪೇತಂ ವಿಹ್ವಲೈಶ್ಚ ಜನೈರಭೂತ್ ॥ ೧೨ ॥

---

೯. ಆ ಶಿಬಿರದಲ್ಲಿ ಒಂದುಕಡೆ ಐಂದ್ರಜಾಲಕವಾದ ಕುಶಲತೆಯನ್ನು ತೋರ್ಪಡಿಸುವ ಯಕ್ಷಿಣೀ ಪ್ರದರ್ಶನಗಳು ನಡೆಯುತ್ತಿದ್ದುವು. ಒಂದುಕಡೆ ದೊಂಬರು ತಮ್ಮ ಕುಣಿತವನ್ನು ತೋರ್ಪಡಿಸುತ್ತಿದ್ದರು. ಒಂದುಕಡೆ ಕರಡಿಗಳ ಕಾಳಗವು ಜರುಗುತ್ತಿತ್ತು.

೧೦. ಇನ್ನೊಂದುಕಡೆ ಬುಡುಬುಡಿಕೆಯನ್ನು ಬಡಿಯುತ್ತಾ ಕೋತಿಯ ಆಟವನ್ನು ತೋರಿಸುತ್ತಿದ್ದರು. ಬೇರೊಂದುಕಡೆ ಸೂತರೂ, ಮಾಗಧರೂ, ವಂದಿಗಳೂ ಮಧುರವಾಗಿ ಹಾಡುತ್ತಿದ್ದರು.

೧೧. ಮತ್ತೊಂದುಕಡೆ ವಾರನಾರಿಯರು ಮನೋಹರವಾದ ಹನ್ನೆರಡು ಬಗೆಯ ಒಡವೆಗಳನ್ನು ತೊಟ್ಟುಕೊಂಡು, ಹದಿನಾರು ಬಗೆಯ ಹಾವಭಾವಾದಿ ಶೃಂಗಾರ ಲೀಲೆಗಳನ್ನು ಪ್ರದರ್ಶಿಸುತ್ತಾ ತಮ್ಮ ಅಭಿನಯದಿಂದ ಅಪ್ಸರ ಸ್ತ್ರೀಯರ ಮನಸ್ಸನ್ನೂ ಅಪಹರಿಸುತ್ತಿದ್ದರು.

೧೨. ಇತ್ತಲಾಗಿ ಹಸ್ತಿನಾವತಿಯ ಪುರಜನರು, ಯಾದವರು ತಮ್ಮ ಬಂಧುಗಳೇ ಆಗಿದ್ದರೂ ಅವರ ಸೇನೆಯು ಬಂದಿರುವುದನ್ನು ತಿಳಿದು ವಿಶೇಷವಾದ ಆತಂಕವನ್ನು ತಳೆದು, ಇಲ್ಲದ ಕಳವಳಕ್ಕೀಡಾಗಿ ಗಡಿಬಿಡಿಯಿಂದ ಓಡಾಡತೊಡಗಿದರು.

ವಿದುದ್ರುವುರ್ಜನಾಃ ಸರ್ವೇ ಗೃಹೇಷ್ವಾಪಾತಿತಾರ್ಗಲಾಃ ।
ಕೋಲಾಹಲೋ ಮಹಾನಾಸೀದ್ಗೇಹೇ ಗೇಹೇ ಜನೇ ಜನೇ ॥ ೧೩ ॥

ವೀರ್ಯಶೌರ್ಯಬಲೋಪೇತಾಃ ಕೌರವಾಶ್ಚ ಕ್ರವರ್ತಿನಃ ।
ಆಸಮುದ್ರಾಃ ಕ್ಷಿತೀಶೇಂದ್ರೋ ಜಾತಾಸ್ತದಪಿ ಶಂಕಿಕಾಃ ॥ ೧೪ ॥

ಪ್ರದ್ಯುಮ್ನಪ್ರೇಷಿತಃ ಸಾಕ್ಷಾದುದ್ಧವೋ ಬುದ್ಧಿಸತ್ತಮಃ ।
ಕೌರವೇಂದ್ರಪುರಂ ಪ್ರಾಪ್ತೋ ಧೃತರಾಷ್ಟ್ರಂ ದದರ್ಶ ಹ ॥ ೧೫ ॥

ಮದಚ್ಯುತಾಮಸ್ಯ ನೃಪಸ್ಯ ದಂತಿನಾಂ
ಕಸ್ತೂರಿಕಾಕುಂಕುಮಗಂಡಶಾಲಿನಾಂ ।

---

೧೩. ಮತ್ತು ಆ ಪಟ್ಟಣಿಗರು ಗಾಬರಿಯಿಂದ ಓಡಿ ಓಡಿ ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡರಲ್ಲದೆ ಮನೆಯ ಬಾಗಿಲಿನ ಅಗಳಿಯನ್ನೂ ಭದ್ರಪಡಿಸಿ ಒಳಗೆ ಹೊಕ್ಕಿಕೊಳ್ಳತೊಡಗಿದರು. ಈ ರೀತಿಯಾಗಿ ಆ ಹಸ್ತಿನಾವತಿಯಲ್ಲಿ ಯಾವ ಮನೆಯನ್ನೇ ನೋಡಲಿ, ಯಾವ ಮನುಷ್ಯನನ್ನೇ ನೋಡಲಿ ಎಲ್ಲೆಲ್ಲೂ ಗದ್ದಲವೇ ಗದ್ದಲವು ತೋರಿಬರಹತ್ತಿತು.

೧೪. ಆ ಹಸ್ತಿನಾವತಿಯ ಅರಸರಾದ ಕೌರವರಾದರೋ ವೀರ್ಯದಿಂದಲೂ, ಶೌರ್ಯದಿಂದಲೂ, ದೈಹಿಕವಾದ ಬಲದಿಂದಲೂ ಪರಿಪೂರ್ಣರಾದವರು: ಮತ್ತು ಸಾಗರಗಳೇ ಎಲ್ಲೆಯಾಗಿರುವ ಭೂಮಿಗೆಲ್ಲಾ ಅಧಿಪತಿಗಳೆನಿಸಿ ಚಕ್ರವರ್ತಿ ಪದವಿಯನ್ನು ಅನುಭವಿಸುತ್ತಿರುವವರು. ಆದರೂ ಕೂಡ ಯದುಸೇನೆಯು ಬಂದಿರುವುದನ್ನು ನೋಡಿ ಅವರು ಇಲ್ಲದ ಚಿಂತೆಗೊಳಗಾದರು.

೧೫. ಇಷ್ಟರಲ್ಲಿ ಯದುಸೇನಾಪತಿಯಾದ ಪ್ರದ್ಯುಮ್ನನು ಅಸಾಧಾರಣಬುದ್ಧಿಸಂಪನ್ನನಾದ ತನ್ನ ಮಂತ್ರಿ ಉದ್ಧವನನ್ನು ಕುರುರಾಜನಾದ ಧೃತರಾಷ್ಟ್ರನ ಬಳಿಗೆ ಕಳುಹಿಸಲು, ಆ ಉದ್ಧವನು ಪ್ರಭುವಿನ ಆಜ್ಞೆಯಂತೆ ಹಸ್ತಿನಾವತಿಯನ್ನು ಹೊಕ್ಕು ಧೃತರಾಷ್ಟ್ರನನ್ನು ಕಂಡನು.

೧೬. ಆ ಧೃತರಾಷ್ಟ್ರನ ಅರಮನೆಯ ಒಳ ಅಂಗಳದಲ್ಲಿ ಕಸ್ತೂರಿ ಮತ್ತು ಕುಂಕುಮಕೇಸರಿಯ ಪತ್ರರಚನೆಗಳನ್ನೊಳಗೊಂಡಿರುವ ಗಂಡ (ಕಪೋಲ) ಪ್ರದೇಶಗಳಿಂದ ಕಂಗೊಳಿಸುತ್ತಿರುವ, ನಿರಂತರವೂ ಧಾರಾಕಾರವಾಗಿ ಮದೋದಕವನ್ನು

ಸಿಂದೂರಶುಂಡಾಸ್ಪದಕರ್ಣತಾಡಿತೈಃ
ಷಡಂಘ್ರಿಭಿರ್ಮಂಡಿತಮಂದಿರಾಜಿರಂ ॥ ೧೬ ॥

ಯಂ ಭೀಷ್ಮಕರ್ಣಗುರುಶಲ್ಯಕೃಪೈಶ್ಚ ಭೂರಿ
ಬಾಹ್ಲೀಕಧೌಮ್ಯಶಕುನ್ಯೈಃ ಸಹ ಸಂಜಯೇನ ।
ದುಃಶಾಸನೇನ ವಿದುರೇಣ ಚ ಲಕ್ಷ್ಮಣೇನ
ದುರ್ಯೋಧನೇನ ಚ ಕೃಪೀಸುತಸೋಮದತ್ತೈಃ ॥ ೧೭ ॥

ಶ್ರೀಯಜ್ಞಕೇತುಸಹಿತೈಃ ಸಹಿತಂ ನೃಪೇಂದ್ರಂ
ಲೀಲಾತಪತ್ರಸಿತಚಾಮರಹೇಮಪೀಠೈಃ ।
ಸಂಸೇವಿತಂ ಪರಿಸಮೇತ್ಯ ಗಜಾಹ್ವಯೇಶಂ
ನತ್ವೋದ್ಧವಃ ಪ್ರಣತ ಆಹ ಕೃತಾಂಜಲಿಸ್ತಂ ॥ ೧೮ ॥

ಪ್ರವಿಸುತ್ತಿರುವ ಮದ್ದಾನೆಗಳ ಬಳಿಯಲ್ಲಿ ಅವುಗಳ ಮದೋದಕಕ್ಕೆ ಆಸೆಗೊಂಡು ಸುಳಿದಾಡುತ್ತಾ, ಆ ಆನೆಗಳ ಸಿಂದೂರವರ್ಣರಂಜಿತವಾದ ದಂಡಾಕಾರವಾದ ಸೊಂಡಲಿಗೆ ಆಗಾಗ್ಗೆ ಆಸ್ಪದವೆನಿಸಿ ಅವುಗಳ ಕಿವಿಗಳ ಏಟಿಗೆ ಹೆದರಿ ದೂರವಾಗುವ ಭ್ರಮರಗಳು ಆ ಅರಮನೆಯ ಅಂಗಳಕ್ಕೆ ಕಾಂತಿಯನ್ನುಂಟುಮಾಡುತ್ತಿದ್ದುವು.

೧೭–೧೮. ಮತ್ತು ಆ ಹಸ್ತಿನಾಪುರಾಧೀಶನ ಆಸ್ಥಾನದಲ್ಲಿ ಭೀಷ್ಮ ದ್ರೋಣರೂ, ಕರ್ಣ, ಶಲ್ಯ, ಕೃಪ, ಭೂರಿಶ್ರವಸ್ಸು, ಬಾಹ್ಲೀಕ, ಧೌಮ್ಯ, ಶಕುನಿ, ಸಂಜಯ, ದುಃಶಾಸನ, ವಿದುರ, ಲಕ್ಷ್ಮಣ, ದುರ್ಯೋಧನ, ಅಶ್ವತ್ಥಾಮ, ಸೋಮದತ್ತ, ಯಜ್ಞಕೇತು ಮುಂತಾದ ವೀರಾಗ್ರಣಿಗಳು ಅತನನ್ನು ಓಲೈಸುತ್ತಿದ್ದರು. ಇಂಥ ಸಭಾಸದರಿಂದ ಸೇವಿಸಲ್ಪಡುತ್ತಾ ರಾಜೋಚಿತವಾದ ಶ್ವೇತಚ್ಛತ್ರದಿಂದಲೂ, ಬಿಳಿಯ ಚಾಮರಗಳಿಂದಲೂ, ಸ್ವರ್ಣಸಿಂಹಾಸನದಿಂದಲೂ ಶೋಭಿಸುತ್ತಿರುವ ಆ ಕೌರವೇಶ್ವರನನ್ನು ಉದ್ಧವನು ನಮಸ್ಕರಿಸಿ ಬದ್ಧಾಂಜಲಿಯಾಗಿ ಈ ರೀತಿ ನುಡಿದನು.

॥ ಉದ್ಧವ ಉವಾಚ ॥

ಪ್ರದ್ಯುಮ್ನೇನ ಪ್ರಕಥಿತಂ ಶೃಣು ರಾಜೇಂದ್ರಸತ್ತಮ ।
ಉಗ್ರಸೇನಃ ಕ್ಷಿತೀಶೇಂದ್ರೋ ಯಾದವೇಂದ್ರೋ ಮಹಾಬಲಃ ॥ ೧೯ ॥

ವಿಜಿತ್ಯ ನೃಪತೀನ್ಸರ್ವಾನ್ರಾಜಸೂಯಂ ಕರಿಷ್ಯತಿ ।
ಪ್ರೇಷಿತಸ್ತೇನ ಸೇನಾಭಿಃ ಪ್ರದ್ಯುಮ್ನೋ ರುಕ್ಮಿಣೀಸುತಃ ॥ ೨೦ ॥

ಜೇತುಂ ಮಹೋದ್ಭಟಾನ್ವೀರಾನ್ಜಂಬೂದ್ವೀಪಸ್ಥಿತಾನ್ನೃಪಾನ್ ।
ಚೈದ್ಯಶಾಲ್ವಜರಾಸಂಧದಂತವಕ್ತ್ರಾದಿಭೂಪತೀಃ ॥ ೨೧ ॥

ವಿಜಿತ್ಯ ಚಾಗತಃ ಕಾರ್ಷ್ಣಿಸ್ತಸ್ಮೈ ಯಚ್ಛ ಬಲಿಂ ಬಹುಂ ।
ಉಪಾಯನಂ ಚ ದಾತವ್ಯಂ ಬಂಧೂನಾಮೈಕ್ಯಕಾಮಯಾ ॥ ೨೨ ॥

ಮಾಭೂತ್ಕುರೂಣಾಂ ವೃಷ್ಣೀನಾಂ ಕಲಿರ್ನೋ ಚೇದ್ಭವಿಷ್ಯತಿ ।
ತೇನೋದಿತಂ ಮೇ ಕಥಿತಂ ತತ್ಕ್ಷಮಸ್ವ ನೃಪೇಶ್ವರ । ॥ ೨೩ ॥

---

೧೯. ಓ ರಾಜಶ್ರೇಷ್ಠ ! ಪ್ರದ್ಯುಮ್ನನು ನನ್ನ ಮುಖಾಂತರ ಹೇಳಿ ಕಳುಹಿಸಿರುವ ಮಾತನ್ನು ಆಲಿಸು. ರಾಜರೆಲ್ಲರಿಗಿಂತಲೂ ಮೇಲಾದವನೂ, ಮಹಾಬಲಶಾಲಿಯೂ ಯಾದವೇಶ್ವರನೂ ಆದ ಉಗ್ರಸೇನನು

೨೦–೨೨ ಎಲ್ಲಾ ರಾಜರನ್ನು ಗೆದ್ದು ರಾಜಸೂಯಯಾಗವನ್ನು ಮಾಡಲಿರುವನು. ಮಹೋದ್ಭಟರಾದ ರಾಜರೆಲ್ಲರನ್ನೂ ಗೆದ್ದು ಬರುವಂತೆ ಸೇನಾಸಮೇತವಾಗಿ ಕಳುಹಿಸಿರುವನು. ಆ ಪ್ರದ್ಯುಮ್ನನು ಚೇದಿರಾಜನಾದ ಶಿಶುಪಾಲನನ್ನೂ ಶಾಲ್ವನನ್ನೂ, ಜರಾಸಂಧ, ದಂತವಕ್ರ ಮೊದಲಾದ ಅನೇಕ ಮಂದಿ ಅರಸರನ್ನೂ ಗೆದ್ದು ಇಲ್ಲಿಗೆ ಬಂದಿರುವನು. ಅವನಿಗೆ ಬೇಕಾದಷ್ಟು ಕಪ್ಪಕಾಣಿಕೆಗಳನ್ನು ತಂದೊಪ್ಪಿಸು ಬಂಧುಗಳಾದವರೆಲ್ಲರೂ ಒಗ್ಗಟ್ಟಾಗಿರಬೇಕೆಂಬ ಅಭಿಲಾಷೆಯಿಂದ ಮೊದಲು ಕಾಣಿಕೆಯನ್ನು ತಂದುಕೊಡಬೇಕಾಗಿರುವುದು.

೨೩. ಕುರುವೀರರಿಗೂ, ಯದುವೀರರಿಗೂ ಯುದ್ಧವು ಜರುಗಬಾರದು ಹಾಗೆ ಮಾಡದೆ ಇದ್ದಲ್ಲಿ ಯುದ್ಧವು ಜರುಗುವುದಂತೂ ಖಂಡಿತವೇ ಸರಿ. ಈ ರೀತಿಯಾಗಿ ಆ ಪ್ರದ್ಯುಮ್ನನು ಹೇಳಿಕಳುಹಿಸಿರುವ ಸಂದೇಶವನ್ನೇ ನಾನೀಗ ತಿಳಿಸಿರುವೆನು. ಓ ರಾಜೇಂದ್ರ ! ಅದಕ್ಕಾಗಿ ನನ್ನನ್ನು ಕ್ಷಮಿಸು.

ದೂತಸ್ಯ ಹೀನದೋಷಸ್ಯ ತ್ವಯೋಕ್ತಂ ಯದ್ವದಾಮಿ ತತ್ ।

॥ ಶ್ರೀ ನಾರದ ಉವಾಚ ॥

ತಚ್ಛ್ರುತ್ವಾ ಕೌರವಾಃ ಸರ್ವೇ ರಾಜನ್ಸಂಜಾತಮನ್ಯವಃ ।
ವೀರ್ಯಶೌರ್ಯಮದೋನ್ನದ್ಧಾ ಊಚುಃ ಪ್ರಸ್ಫುರಿತಾಧರಾಃ ॥ ೨೪ ॥

॥ ಕೌರವಾ ಊಚುಃ ॥

ದುರತ್ಯಯಾ ಕಾಲಗತಿರಹೋ ಚಿತ್ರಮಿದಂ ಜಗತ್ ।
ಸಿಂಹೋಪರಿ ಪ್ರಧಾವಂತಿ ಶೃಗಾಲಾ ದುರ್ಬಲಾ ವನೇ ॥ ೨೫ ॥

ಅಸ್ಮತ್ಸಕಾಶಾತ್ಸಂಬಂಧಾ ಅಸ್ಮದ್ದತ್ತನೃಪಾಸನಾಃ ।
ದಾತ್ರೂಣಾಂ ಪ್ರತಿಕೂಲಾಸ್ತು ದಾತ್ರೂಣಾಂ ಫಣಿನೋ ಯಥಾ ॥ ೨೬ ॥

ವೃಷ್ಣಯೋ ಭೀರವಃ ಸರ್ವೇ ಯುಧಿ ವಿಪ್ಲವಚೇತಸಃ ।
ತಥೈವ ಶಾಸನಂ ಕರ್ತುಂ ಪ್ರವೃತ್ತಾ ಹಿ ಗತಹ್ರಿಯಃ ॥ ೨೭ ॥

---

೨೪. ದೂತನಾದವನು ಎಂದಿಗೂ ತಪ್ಪಿಗೆ ಬಾಧ್ಯನಲ್ಲ. ನೀನು ಏನು ಹೇಳಿದರೂ ಅದನ್ನು ನಾನು ಅಲ್ಲಿಗೆ ಹೋಗಿ ತಿಳಿಸುವೆನು. ಓ ಬಹುಲಾಶ್ವನರೇಂದ್ರ ! ಈ ರೀತಿ ಉದ್ಧವನು ನುಡಿದ ಸಂದೇಶವನ್ನು ಕೇಳಿ ವೀರ್ಯದಿಂದಲೂ, ಶೌರ್ಯದಿಂದಲೂ ಕೊಬ್ಬಿ ಮೆರೆಯುತ್ತಿದ್ದ ಆ ಕುರುವೀರರೆಲ್ಲರೂ ಕೋಪಾಕ್ರಾಂತರಾಗಿ ನಡುಗುತ್ತಿರುವ ತುಟಿಗಳಿಂದ ಈ ರೀತಿ ನುಡಿದರು.

೨೫. ಅಬ್ಬಾ ! ಕಾಲದಗತಿಯನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಆಹಾ ! ಈ ಪ್ರಪಂಚವು ಬಹು ಆಶ್ಚರ್ಯಕರವಾದುದು. ಬಲಹೀನವಾದ ಜಂಬುಕಗಳು ಮೃಗರಾಜನಾದ ಸಿಂಹದ ಮೇಲೆ ಬೀಳಲು ಓಡೋಡಿ ಬರುತ್ತಿರುವುವು.

೨೬. ಈ ಯದುಗಳಿಗೆ ನಮ್ಮಿಂದಲೇ ಮೊದಲು ಸಂಬಂಧವು ಬೆಳೆದುದು. ನಮ್ಮಿಂದಲೇ ಇವರಿಗೆ ರಾಜಾರ್ಹವಾದ ಪೀಠವೂ ದೊರೆತಿರುವುದು. ಹೀಗಿದ್ದರೂ ಈ ಯದುಗಳು ಸರ್ಪಗಳಂತೆ ದಾನವಿತ್ತ ನಮಗೇ ಪ್ರತಿಕೂಲವನ್ನು ಆಚರಿಸತೊಡಗಿರುವರು.

೨೭. ಈ ವೃಷ್ಣಿಗಳೆಲ್ಲರೂ ಬಹಳ ಅಂಜುಬುರುಕರು. ಯುದ್ಧವೆಂದರೆ ಎದೆಗೆಟ್ಟು ಕುಸಿದುಬೀಳುವವರು. ಹೀಗಿದ್ದರೂ ನಾಚಿಕೆಯಿಲ್ಲದೆ ಎಲ್ಲರ ಮೇಲೂ ತಮ್ಮ ಆಳ್ವಿಕೆಯನ್ನು ನಡೆಸಲು ಹವಣಿಸುತ್ತಿರುವರು.

ಉಗ್ರಸೇನೋಽಲ್ಪವೀರ್ಯಶ್ಚ ಜಂಬೂದ್ವೀಪಸ್ಥಿತಾನ್ನೃಪಾನ್ ।
ವಿಜಿತ್ಯಾಹೋ ಬಲಿಂ ನೀತ್ವಾ ರಾಜಸೂಯಂ ಕರಿಷ್ಯತಿ ॥ ೨೮ ॥

ಯತ್ರ ಭೀಷ್ಮಶ್ಚ ಕರ್ಣಶ್ಚ ದ್ರೋಣೋ ದುರ್ಯೋಧನಾದಯಃ ।
ತತ್ರ ತ್ವಂ ಪ್ರೇಷಿತೋ ಮಂತ್ರೀ ಪ್ರದ್ಯುಮ್ನೇನ ಕುಬುದ್ಧಿನಾ ॥ ೨೯ ॥

ತಸ್ಮಾದ್ಯಾತ ಪುರೀಮಧ್ಯೇ ಯೂಯಂ ವೈ ಜೀವನೇಚ್ಛಯಾ ।
ನ ಚೇದ್ಯಾಸ್ಯಥ ವಃ ಸರ್ವಾನ್ನಯಾಮೋ ಯಮಸಾದನಂ ॥ ೩೦ ॥

॥ ಶ್ರೀ ನಾರದ ಉವಾಚ ॥

ಇತ್ಥಂ ಶ್ರೀಕೃಷ್ಣವಿಮುಖೈಃ ಕೌರವೈಃ ಪರಿಭಾಷಿತಂ ।
ಶ್ರುತ್ವೋದ್ಧವಃ ಶಂಬರಾರಿಮೇತ್ಯ ಸರ್ವಮುವಾಚ ಹ ॥ ೩೧ ॥

ಕೌರವೋಕ್ತಂ ವಚಶ್ಶ್ರುತ್ವಾ ಪ್ರದ್ಯುಮ್ನೋ ಧನ್ವಿನಾಂ ವರಃ ।
ಪ್ರತಿಶಾರ್ಙ್ಗಂ ಸಂಗೃಹೀತ್ವಾ ರೋಷಾತ್ಪ್ರಸ್ಫುರಿತಾಧರಃ ॥ ೩೨ ॥

---

೨೮. ಆಹಾ! ಎಲ್ಲೋ ಅಲ್ಪ ಸ್ವಲ್ಪ ವೀರ್ಯವುಳ್ಳ ಈ ಉಗ್ರಸೇನನು ಜಂಬೂದ್ವೀಪದಲ್ಲಿರುವ ವೀರಾಗ್ರಣಿಗಳಾದ ಅರಸರೆಲ್ಲರನ್ನೂ ಗೆದ್ದು ಅವರಿಂದ ಕಪ್ಪ ಕಾಣಿಕೆಗಳನ್ನು ಕೈಗೊಂಡು ರಾಜಸೂಯಯಾಗವನ್ನು ಮಾಡುವನಂತೆ!

೨೯. ಈ ಪ್ರದ್ಯುಮ್ನನ ದುಷ್ಟಬುದ್ಧಿಯನ್ನು ಏನೆಂದು ಹೇಳೋಣ! ಎಲ್ಲಿ ಭೀಷ್ಮನೂ, ದ್ರೋಣನೂ, ಕರ್ಣ, ದುರ್ಯೋಧನಾದಿಗಳೂ ಇರುವರೋ ಅಂಥ ಕಡೆಗೇ ಮಂತ್ರಿಯಾದ ನಿನ್ನನ್ನು ಕಳುಹಿಸಿರುವನಲ್ಲಾ!

೩೦. ಆದುದರಿಂದ ನಿಮಗೆ ಬದುಕಬೇಕೆಂಬ ಆಸೆಯಿದ್ದರೆ ನೀವೀಗಲೇ ಬೇಗನೆ ನಿಮ್ಮೂರನ್ನು ಹೋಗಿ ಸೇರಿಕೊಳ್ಳಿರಿ. ಇಲ್ಲದಿದ್ದರೆ ನಾವೇ ನಿಮ್ಮೆಲ್ಲರನ್ನೂ ಯಮನ ಪಟ್ಟಣಕ್ಕೆ ಕಳುಹಿಸಿಕೊಡುವೆವು.

೩೧. ಓ ರಾಜೇಂದ್ರ! ಈ ರೀತಿಯಾಗಿ ಶ್ರೀಕೃಷ್ಣನಲ್ಲಿ ವಿಮುಖರಾದ ಆ ಕೌರವರು ನುಡಿದ ಮಾತನ್ನು ಕೇಳಿ ಉದ್ಧವನು ಅಲ್ಲಿಂದ ಹಿಂದಿರುಗಿ ಪ್ರದ್ಯುಮ್ನನ ಬಳಿಗೆ ಬಂದು ಅದೆಲ್ಲವನ್ನೂ ಆತನಿಗೆ ತಿಳಿಸಿದನು.

೩೨. ಆಗ ಧನುರ್ಧಾರಿಗಳಲ್ಲೆಲ್ಲಾ ಅಗ್ರೇಸರನೆನಿಸಿದ ಆ ಪ್ರದ್ಯುಮ್ನನು ಕೌರವರು ಆಡಿದ ಮಾತನ್ನು ಕೇಳಿ ಕೋಪದಿಂದ ತುಟಿಗಳನ್ನು ಅಲುಗಿಸುತ್ತಾ, ಪ್ರತಿಶಾರ್ಙ್ಗವೆಂಬ ಧನುಸ್ಸನ್ನು ಕೈಗೆ ತೆಗೆದುಕೊಂಡು—

॥ ಪ್ರದ್ಯುಮ್ನ ಉವಾಚ ॥

ಕೌರವಾನ್ಘಾತಯಿಷ್ಯಾಮಿ ಬಂಧೂನಪಿ ಮದೋದ್ಧತಾನ್ ।
ಬಾಣೈಸ್ತೀಕ್ಷ್ಣೈರ್ಯಥಾ ಯೋಗೀ ನಿಯಮೈರ್ದೇಹಜಾ ರುಜಃ ॥ ೩೩ ॥

ಯದೂನಾಂ ಸೈನ್ಯಚಕ್ರೇಷು ಬಲಿಂ ಯೋ ನ ಪ್ರದಾಸ್ಯತಿ ।
ಕೌರವೇಭ್ಯೋಽಪಿ ಸ ಪುಮಾನ್ಪಿತುರ್ಮಾತುರ್ನ ಚೌರಸಃ ॥ ೩೪ ॥

॥ ಶ್ರೀ ನಾರದ ಉವಾಚ ॥

ತದೈವ ಯಾದವಾಃ ಸರ್ವೇ ಭೋಜವೃಷ್ಣ್ಯಂಧಕಾದಯಃ ।
ಗಜಾಹ್ವಯಂ ಯಯುಃ ಸೈನ್ಯೈ ರಾಜನ್ಸಂಜಾತಮನ್ಯವಃ ॥ ೩೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಕೌರವೋಪಾಖ್ಯಾನಂ ನಾಮೈಕೋನವಿಂಶೋಽಧ್ಯಾಯಃ

---

೩೩. ಈ ಕೌರವರು ಬಂಧುಗಳಾಗಿದ್ದರೂ ಮದೋದ್ಧತರಾಗಿ ಮೆರೆಯುತ್ತಿರುವುದರಿಂದ ಇವರನ್ನು ನನ್ನ ತೀಕ್ಷ್ಣವಾದ ಬಾಣಗಳಿಂದ ಯೋಗಿಯಾದವನು ತನ್ನ ದೇಹದಲ್ಲಿ ಹುಟ್ಟಿದ ರೋಗಗಳನ್ನು ಕಠಿಣವಾದ ನಿಯಮಗಳಿಂದ ಅಡಗಿಸಿಬಿಡುವಂತೆ ಕ್ಷಣಮಾತ್ರದಲ್ಲಿ ನಿಗ್ರಹಿಸಿಬಿಡುವೆನು.

೩೪. "ಈ ಯದುಸೇನೆಯಲ್ಲಿರುವ ಯಾವ ವೀರನೇ ಆಗಲಿ, ಕೌರವನಿಂದ ಕಪ್ಪಕಾಣಿಕೆಗಳನ್ನು ಸಲ್ಲಿಸುವಂತೆ ಮಾಡದೆ ಇದ್ದರೆ ಅವನು ತನ್ನ ಮಾತಾಪಿತೃಗಳಿಗೆ ಜನಿಸಿದವನಲ್ಲವೆಂದೇ ಭಾವಿಸುವೆನು" ಎಂದು ನುಡಿದನು.

೩೫. ಓ ಬಹುಲಾಶ್ವರಾಜೇಂದ್ರ! ಈ ರೀತಿ ಭೋಜ, ವೃಷ್ಣಿ, ಅಂಧಕ ಎಂಬ ಪ್ರಭೇದಗಳಿಗೊಳಪಟ್ಟ ಆ ಯಾದವರೆಲ್ಲರೂ ಬಹು ಕೋಪವನ್ನು ತಾಳಿ, ತಮ್ಮ ಸೈನ್ಯಗಳೊಂದಿಗೆ ಹಸ್ತಿನಾವತಿಯನ್ನು ಕುರಿತು ತೆರಳಿದರು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀನಾರದಬಹುಲಾಶ್ವ ಸಂವಾದದಲ್ಲಿ ಕೌರವೋಪಾಖ್ಯಾನವೆಂಬ ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ವಿಂಶೋಽಧ್ಯಾಯಃ

॥ ನಾರದ ಉವಾಚ ॥

ತದೈವ ಕೌರವಾಃ ಸರ್ವೇ ನಿರ್ಗತಾ ದೀಪ್ತಮನ್ಯವಃ ।
ಸ್ವೈಃ ಸ್ವೈರ್ಬಲೈಃ ಸಮಾಯುಕ್ತಾ ಯೋದ್ಧುಂ ಪ್ರದ್ಯುಮ್ನಸಂಮುಖೇ॥ ೧ ॥

ವಿಜಯಧ್ವಜಸಂಯುಕ್ತಾ ರತ್ನಕಂಬಲಮಂಡಿತಾಃ ।
ಗಜಾಃ ಷಷ್ಟಿಸಹಸ್ರಾಣಿ ನಿರ್ಯಯುಃ ಸ್ವರ್ಣಶೃಂಖಲಾಃ ॥ ೨ ॥

ಪ್ರಲಯಾಬ್ಧಿಮಹಾವರ್ತಸಂಘರ್ಷಧ್ವನಿಕಾರಿಣಾಂ ।
ಗಜಾಃ ಷಷ್ಟಿಸಹಸ್ರಾಣಿ ದುಂದುಭೀನಾಂ ವಿನಿರ್ಗತಾಃ ॥ ೩ ॥

ಇಪ್ಪತ್ತನೆಯ ಅಧ್ಯಾಯವು

೧. ಮಿಥಿಲೇಶ್ವರ ! ಆಲಿಸು. ಆ ಕ್ಷಣದಲ್ಲಿಯೇ ಕೌರವರು ಮಹಾಕೋಪದಿಂದ ತಮ್ಮ ತಮ್ಮ ಸೈನ್ಯಗಳೊಡನೆ ಯುದ್ಧಕ್ಕೆಂದು ಪ್ರದ್ಯುಮ್ನನಿಗೆದುರಾಗಿ ಹೊರಟರು.

೨. ಆಗ ವಿಜಯಪತಾಕೆಗಳಿಂದಲೂ, ರತ್ನಗಂಬಳಿಗಳಿಂದಲೂ, ಚಿನ್ನದ ಸರಪಳಿಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಅರವತ್ತು ಸಾವಿರ ಆನೆಗಳು ಅವರೊಡನೆ ಹೊರಟವು.

೩. ಇವುಗಳೊಡನೆ ಪ್ರಳಯಕಾಲದ ಸಮಯದಲ್ಲಿ ಸಾಗರಗಳಲ್ಲೇಳುವ ಭಾರಿ ಭಾರಿ ಸುಳಿಗಳು ಪರಸ್ಪರ ಸಂಘರ್ಷಿಸಿದಾಗ ಉಂಟಾಗುವಂತೆ ಬಹು ಭಾರಿ ನಾದ ಧ್ವನಿಯನ್ನು ಮಾಡುವಂತಹ ಭೇರಿಗಳನ್ನು ಕಟ್ಟಿರುವ ಇನ್ನೂ ಅರವತ್ತು ಸಹಸ್ರ ಆನೆಗಳು ಹೊರಟವು.

ಗಜಾ ಗಾವ್ಲೋ ಬೃಹದ್ಭಲ್ಲಾ ಲೋಹಕಂಚುಕಮಂಡಿತಾಃ ।
ಶಿರಸ್ತ್ರಮೌಲಿಸಂಯುಕ್ತಾ ದ್ವಿಲಕ್ಷಾಣಿ ವಿನಿರ್ಯಯುಃ ॥ ೪ ॥

ಹೇಮಕಂಕಣಕೇಯೂರಕಿರೀಟವರಕುಂಡಲಾಃ ।
ಗಜಾಸ್ಥಾಶ್ಚ ದ್ವಿಲಕ್ಷಾಣಿ ನಿರ್ಯಯುಃ ಸ್ವರ್ಣಕಂಚುಕಾಃ ॥ ೫ ॥

ಪೀತಕಂಚುಕಸಂಯುಕ್ತಾಸ್ತಿರ್ಯಗುಷ್ಣೀಷಶಾಲಿನಃ ।
ಗಜಾಸ್ಥಾಶ್ಚ ದ್ವಿಲಕ್ಷಾಣಿ ಸಂಗ್ರಾಮೇ ಲಬ್ಧಕೀರ್ತಯಃ ॥ ೬ ॥

ರಕ್ತಾಂಬರಧರಾಃ ಕೇಚಿದ್ರಕ್ತಭೂಷಣಭೂಷಿತಾಃ ।
ರಕ್ತಕಂಬಲಸಂಯುಕ್ತೈರ್ಗಜೈರುಚ್ಚೈರ್ವಿನಿರ್ಗತಾಃ ॥ ೭ ॥

---

೪. ಕೆಲಮಂದಿ ಗಜಾರೋಹಿಗಳಾದ ವೀರರು ಉದ್ದುದ್ದವಾದ ಭಲ್ಲಾಯುಧಗಳನ್ನು ಹಿಡಿದು ಉಕ್ಕಿನ ಕವಚಗಳನ್ನು ತೊಟ್ಟು ಲೋಹದ ಶಿರಸ್ತ್ರಾಣವನ್ನು ತಲೆಗಳಲ್ಲಿ ತಳೆದು ಎರಡುಲಕ್ಷ ಸಂಖ್ಯೆಯಲ್ಲಿ ಹೊರಟರು.

೫. ಇವರೊಡನೆ ಚಿನ್ನದ ಕಡಗಗಳನ್ನೂ, ತೋಳುಬಳೆಗಳನ್ನೂ, ಕಿರೀಟಗಳನ್ನೂ, ಉತ್ತಮವಾದ ಕುಂಡಲಗಳನ್ನೂ, ಚಿನ್ನದಿಂದಲೇ ನಿರ್ಮಿಸಲ್ಪಟ್ಟ ಕವಚಗಳನ್ನೂ ತೊಟ್ಟು ಇನ್ನೂ ಎರಡುಲಕ್ಷ ಮಂದಿ ವೀರರು ಗಜಾರೂಢರಾಗಿ ಹೊರಟರು.

೬. ಇಷ್ಟೇ ಅಲ್ಲದೆ ಹಳದೀ ಬಣ್ಣದ ಕವಚಗಳನ್ನು ತೊಟ್ಟು ಅಡ್ಡಡ್ಡಲಾಗಿರುವ ಉಷ್ಣೀಷ (ಪಾಗು) ಗಳನ್ನು ಧರಿಸಿ ಇನ್ನು ಎರಡುಲಕ್ಷ ಮಂದಿ ಯುದ್ಧದಲ್ಲಿ ವಿಶೇಷ ಖ್ಯಾತಿಯನ್ನು ಗಳಿಸಿದ ವೀರರು ಆನೆಗಳನ್ನೇರಿ ಕುಳಿತು ಹೊರಟರು.

೭. ಇವರುಗಳಲ್ಲದೆ ಇನ್ನೂ ಕೆಲಮಂದಿ ಶೂರರು ಕೆಂಪು ಬಟ್ಟೆಗಳನ್ನುಟ್ಟು ಕೆಂಪುಬಣ್ಣದ ಕಂಬಳಿಯನ್ನು ಹಾಸಿದ್ದ ಭಾರಿ ಭಾರಿ ಆನೆಗಳನ್ನು ಹತ್ತಿ ಕುಳಿತು ಆ ಹಸ್ತಿನಾವತಿಯಿಂದ ಹೊರಟರು.

ಕೃಷ್ಣಾಂಬರಧರಾ ನಾಗೈರ್ಹರಿದ್ವಸ್ತ್ರಸಮಾವೃತಾಃ ।
ಕೇಚಿಚ್ಛುಕ್ಲಾಂಬರಾಃ ಕೇಚಿನ್ನಿರ್ಯಯುಃ ಪಾಟಲಾಂಬರಾಃ ॥ ೮ ॥

ರಥೈಶ್ಚ ದೇವಧಿಷ್ಣ್ಯಾಭೈರ್ಮೃಗೇಂದ್ರಧ್ವಜಶೋಭಿತೈಃ ।
ಪತತ್ಪತಾಕೈರತ್ಯುಚ್ಚೈರ್ನಿರ್ಯಯುಃ ಕೋಟಿಶೋ ನೃಪಾಃ ॥ ೯ ॥

ಆಂಗೈರ್ವಾಂಗೈಃ ಸೈಂಧವೈಶ್ಚ ಚಂಚಲೈಸ್ತುರಗೈರ್ನೃಪಾಃ ।
ಮನೋಜವೈಃ ಸ್ವರ್ಣಭೂಷೈರ್ನಿರ್ಯಯುಃ ಶಸ್ತ್ರಸಂವೃತಾಃ ॥ ೧೦ ॥

ಸಮಂತಾನ್ನಿರ್ಯಯುರ್ವೀರಾ ಲೋಹಕಂಚುಕಮಂಡಿತಾಃ ।
ವಿದ್ಯಾಧರಸಮಾ ರಾಜನ್ಸಂಕುಲಾ ಯುದ್ಧಶಾಲಿನಃ ॥ ೧೧ ॥

---

೮. ಇನ್ನು ಕೆಲಮಂದಿ ಯೋಧರು ಕಪ್ಪು ಬಣ್ಣದ ಬಟ್ಟೆಗಳನ್ನು ಧರಿಸಿದವರಾಗಿ ಆನೆಗಳಮೇಲೆ ಕುಳಿತು ಹೊರಟುಬಂದರು. ಇವರಲ್ಲದೆ ಹಸಿರು ಬಣ್ಣದ ಬಟ್ಟೆಯುಟ್ಟ ಯೋಧರೂ, ಬಿಳಿಯ ವಸ್ತ್ರವನ್ನು ಧರಿಸಿದ ಭಟರೂ, ಮಾಸಲುಕೆಂಪಾದ ವಸ್ತ್ರಗಳನ್ನು ಧರಿಸಿರುವ ವೀರರೂ ಆನೆಗಳನ್ನು ಹತ್ತಿ ಕುಳಿತು ಹೊರಟರು.

೯. ಈ ಆನೆಗಳ ಪಡೆಯ ಹಿಂದೆ ಬಹು ಎತ್ತರವಾಗಿರುತ್ತಾ ಸಿಂಹದ ಚಿಹ್ನೆವುಳ್ಳ ಧ್ವಜಗಳನ್ನು ಒಳಗೊಂಡು ಚಲಿಸುತ್ತಿರುವ ಬಾವುಟಗಳನ್ನು ತಳೆದು ಆಕಾಶದಲ್ಲಿ ದೇವಮಂದಿರಗಳನ್ನು ಹೋಲುತ್ತಾ ಇರುವಂತಹ ರಥಗಳನ್ನು ಏರಿ ಕುಳಿತು ಕೋಟಿಗಟ್ಟಳೆ ರಾಜರು ಹೊರಟರು.

೧೦. ಆ ರಥಸೇನೆಯ ಹಿಂದೆ ಅಂಗದೇಶದಲ್ಲೂ, ವಂಗದೇಶದಲ್ಲೂ, ಸಿಂಧುದೇಶದಲ್ಲೂ ಹುಟ್ಟಿ ಚಿನ್ನದ ಒಡವೆಗಳಿಂದ ಸಿಂಗರಿಸಲ್ಪಟ್ಟು ವೇಗದಲ್ಲಿ ಮನಸ್ಸಿಗೂ ಮಿಗಿಲೆನಿಸಿರುವ ಸ್ವಭಾವಚಂಚಲವಾದ ಕುದುರೆಗಳನ್ನು ಹತ್ತಿ ಕುಳಿತು ನಾನಾ ವಿಧವಾದ ಆಯುಧಗಳನ್ನು ಧರಿಸಿರುವ ಅನೇಕ ಮಂದಿ ರಾಜರು ಹೊರಟು ಬಂದರು.

೧೧. ರಾಜೇಂದ್ರ ! ಆ ಸೇನೆಯ ಸುತ್ತಲೂ ಶೌರ್ಯದಲ್ಲಿ ವಿದ್ಯಾಧರರಿಗೆ ಸರಿಸಮಾನರೆನಿಸಿದವರೂ, ನಾನಾವಿಧವಾದ ತುಮುಲ ಯುದ್ಧಗಳಲ್ಲಿ ಚೆನ್ನಾಗಿ ಪಳಗಿದವರೂ ಆದ ಅನೇಕಮಂದಿ ವೀರರು ಉಕ್ಕಿನ ಕವಚಗಳನ್ನು ತೊಟ್ಟು ಹೊರಟು ಬಂದರು.

ಜಗುರ್ಯಶಃ ಕೌರವಾಣಾಂ ಸೂತಮಾಗಧಬಂದಿನಃ ।
ಭೇರೀಮೃದಂಗೈಃ ಪಟಹೈರಾನಕೈರ್ಯುದ್ಧನಿಃಸ್ವನೈಃ ॥ ೧೨ ॥

ಮೃಗೇಂದ್ರಧ್ವಜಸಂಯುಕ್ತೈಃ ಶುಕ್ಲವಾಹನಿಯೋಜಿತೈಃ ।
ವ್ಯಜನೈರ್ವಜ್ರದಂಡೈಶ್ಚ ಚಾಮರಾಂಡೋಲಿರಾಜಿತೈಃ ॥ ೧೩ ॥

ಚತುರ್ಯೋಜನಮಾತ್ರೇಣ ಚಂದ್ರಮಂಡಲಚಾರುಣಾ ।
ಛತ್ರೇಣ ಮಂಡಿತೇ ರಾಜಭಿರ್ದತ್ತೇನ ಮನೋಹರೇ ॥ ೧೪ ॥

ದುರ್ಯೋಧನೋ ಬಭೌ ಸೈನ್ಯೇ ಮಹತಿ ಸ್ಯಂದನೇ ಸ್ಥಿತಃ ।
ತಥಾನ್ಯೇ ಧಾರ್ತರಾಷ್ಟ್ರಾಶ್ಚ ಸ್ಯಂದನೇ ಸ್ಯಂದನೇ ಸ್ಥಿತಾಃ ॥ ೧೫ ॥

---

೧೨. ಆರೀತಿ ಸೇನೆಯು ಬರುತ್ತಿರುವಾಗ ಸೂತರೂ, ಮಾಗಧರೂ, ವಂದಿಗಳೂ, ಯುದ್ಧೋತ್ಸಾಹವುಂಟಾಗುವಂತೆ ಧ್ವನಿಗೈಯ್ಯುತ್ತಿರುವ ಭೇರಿ, ಮೃದಂಗ, ಪಟಹ, ಆನಕ ಮುಂತಾದ ವಾದ್ಯಗಳೊಡನೆ ತಮ್ಮ ಸ್ವರವನ್ನು ಸೇರಿಸಿ ಯಶಸ್ಸನ್ನು ಗೀತರೂಪವಲ್ಲಿ ಹಾಡುತ್ತಿದ್ದರು.

೧೩–೧೫. ಹೀಗೆ ಬರುತ್ತಿರುವ ಆ ಸೇನೆಯಲ್ಲಿ ಸಿಂಹದ ಚಿತ್ರವುಳ್ಳ ಧ್ವಜಗಳಿಂದಲೂ, ಚಾಮರಗಳಿಂದಲೂ, ನಾಲ್ಕುಯೋಜನದಷ್ಟು ಅಗಲವಾಗಿ ಚಂದ್ರಮಂಡಲದಂತೆ ಶುಭ್ರವಾಗಿ ಕಂಗೊಳಿಸುತ್ತಿರುವ ಛತ್ರಿಯಿಂದಲೂ, ಬಿಳಿಯ ಕುದುರೆಗಳಿಂದಲೂ, ವಜ್ರಸಮಾನವಾದ ದಂತವುಳ್ಳ ವ್ಯಜನ (ಬೀಸಣಿಗೆ) ಗಳಿಂದಲೂ ಒಪ್ಪುತ್ತಿರುವಂತಹ ತನ್ನ ಕಡೆಯ ರಾಜರಿಂದ ಅರ್ಪಿಸಲ್ಪಟ್ಟ ಮನೋಹರವಾದ ಭಾರಿ ರಥವೊಂದರಲ್ಲಿ ದುರ್ಯೋಧನನು ಮಂಡಿಸಿ ಮೆರೆಯುತ್ತಾ ಬರುತ್ತಿದ್ದನು. ಆ ದುರ್ಯೋಧನನಂತೆಯೇ ಇತರ ಧೃತರಾಷ್ಟ್ರ ಪುತ್ರರೂ ಮುತ್ತಿನ ಜಾಲರಿಗಳಿಂದ ಸಿಂಗರಿಸಲ್ಪಟ್ಟು, ನಾಲ್ಕು ಯೋಜನಗಳಷ್ಟು ಅಗಲವಾಗಿರುವ ಛತ್ರಿಗಳಿಂದ ಅಲಂಕರಿಸಲ್ಪಟ್ಟ ರಥಗಳಲ್ಲಿ ಕುಳಿತು ಬರುತ್ತಿದ್ದರು.

ಚತುರ್ಯೋಜನಮಾತ್ರೈಶ್ಚ ಛತ್ರೈರ್ಮುಕ್ತಾವಿಲಂಬಿಭಿಃ ।
ಸುರಥೇನಾತಿಭೀಷ್ಮೇಣ ಕೃಪೇಣ ಗುರುಣಾ ಸಹ ॥ ೧೬ ॥

ಬಾಹ್ಲೀಕಕರ್ಣಶಲ್ಯೈಶ್ಚ ಸೋಮದತ್ತೇನ ಧೀಮತಾ ।
ಅಶ್ವತ್ಥಾಮ್ನಾ ಚ ಧೌಮ್ಯೇನ ಲಕ್ಷ್ಮಣೇನ ಧನುಷ್ಮತಾ ॥ ೧೭ ॥

ಶಕುನಿನಾ ಚ ವೀರೇಣ ತಥಾ ದುಃಶಾಸನೇನ ಚ ।
ಸಂಜಯೇನ ತಥಾ ಸಾಕ್ಷಾದ್ಭೂರಿಣಾ ಯಜ್ಞಕೇತುನಾ ॥ ೧೮ ॥

ಸುಯೋಧನೋ ನೃಪೋ ರೇಜೇ ಯಥಾ ಶಕ್ರೋ ಮರುದ್ಗಣೈಃ ।
ಇಂದ್ರಪ್ರಸ್ಥಾತ್ಪಾಂಡುಪುತ್ರೈಃ ಪ್ರೇಷಿತಂ ಪ್ರತಿಮಾದ್ವಯಂ ॥ ೧೯ ॥

ತದೈವ ಚಾಗತಂ ರಾಜನ್ಕೌರವಾಣಾಂ ಸಹಾಯಕೃತ್ ।
ಅಕ್ಷೌಹಿಣೀಭಿಃ ಷೋಡಶಭಿಃ ಕುರೂಣಾಂ ಚಲತಾಂ ತದಾ ॥ ೨೦ ॥

ಚಚಾಲ ಭೂರ್ದಿಶೋ ನೇದೂ ರಜೋವ್ಯಾಪ್ತಂ ನಭೋಽಭವತ್ ।
ತಾರಕೇವ ಬಭೌ ಸೂರ್ಯೋ ಗಜಾಶ್ವರಥರೇಣುಭಿಃ ॥ ೨೧ ॥

೧೬–೧೮. ಆರೀತಿ ಬರುತ್ತಿರುವ ದುರ್ಯೋಧನನು ತನ್ನನ್ನು ಓಲೈಸುತ್ತಿರುವ ರಥಾರೂಢರಾದ ಭೀಷ್ಮ, ದ್ರೋಣ, ಕೃಪಾಚಾರ್ಯ, ಬಾಹ್ಲೀಕ, ಕರ್ಣ, ಶಲ್ಯ, ಸೋಮದತ್ತ, ಅಶ್ವತ್ಥಾಮ, ಧೌಮ್ಯ, ಲಕ್ಷ್ಮಣ, ಶಕುನಿ, ದುಃಶಾಸನ, ಸಂಜಯ, ಭೂರಿಶ್ರವಸ್ಸು, ಯಜ್ಞಕೇತು ಮುಂತಾದ ವೀರರಿಂದ ಪರಿವೃತನಾಗಿ, ದೇವತೆಗಳಿಂದ ಓಲೈಸಲ್ಪಡುವ ಇಂದ್ರನಂತೆ ಮೆರೆಯುತ್ತಿದ್ದನು.

೧೯. ಓ ಬಹುಲಾಶ್ವನೃಪಾಲ! ಆ ಸಮಯಕ್ಕೆ ಸರಿಯಾಗಿ ಪಾಂಡುಕುಮಾರರು ಕೌರವರ ಸಹಾಯಕ್ಕೆಂದು ಇಂದ್ರಪ್ರಸ್ಥದಿಂದ ಕಳುಹಿಸಿಕೊಟ್ಟಂತಹ ಎರಡು ಪ್ರತಿಮೆಗಳು ಬಂದು ಸೇರಿದುವು.

೨೦–೨೧. ಹೀಗೆ ಹದಿನಾರು ಅಕ್ಷೌಹಿಣೀ ಸೇನೆಯೊಡನೆ ಆ ಕುರುವೀರರು ಬರುತ್ತಿರುವಾಗ ಭೂಮಿಯು ನಡುಗಿಹೋಯಿತು. ದಿಕ್ಕುಗಳೆಲ್ಲವೂ ಧ್ವನಿಯಿಂದ ತುಂಬಿಹೋಯಿತು. ಅಂತರಿಕ್ಷವು ಧೂಳಿನಿಂದ ಮುಸುಕಿಹೋಯಿತು. ಆನೆ ಕುದುರೆಗಳಿಂದಲೂ, ತೇರುಗಳಿಂದಲೂ ಮೇಲಕ್ಕೆದ್ದಂತಹ ಧೂಳುಗಳಿಂದ ಸೂರ್ಯನು ನಕ್ಷತ್ರದಂತೆ ತೋರಿದನು.

ಅಂಧಕಾರೋಽಭವದ್ಭೂಮೌ ದೇವಾಃ ಸರ್ವೇಽಪಿ ಶಂಕಿತಾಃ ।
ಯತ್ರ ಯತ್ರ ಗಜಾನಾಂ ಚ ಚೋದನಾಭಿಶ್ಚ ಭೂರುಹಾಃ ॥ ೨೨ ॥

ನಿಪೇತುಸ್ತುರಗೈರ್ವೀರೈಃ ಕ್ಷಣಂ ಭೂಖಂಡಮಂಡಲಂ ।
ಸೇನಾ ಕುರೂಣಾಂ ವೃಷ್ಣೀನಾಂ ಯುಯುಧುಶ್ಚ ಪರಸ್ಪರಂ ॥ ೨೩ ॥

ತೀಕ್ಷ್ಣೈಃ ಶಸ್ತ್ರೈರ್ಯಥಾ ಸಪ್ತ ಸಮುದ್ರಾಸ್ತರಲೈರ್ಲಯೇ ।
ಹಯಾ ಹಯೈರಿಭಾಶ್ಚೇಭೈ ರಥಿನೋ ರಥಿಭಿಃ ಸಹ ॥ ೨೪ ॥

ಶ್ಯೇನೈಃ ಶ್ಯೇನಾ ಇವ ಕ್ರವ್ಯೇ ಪತ್ತಯಃ ಪತ್ತಿಭಿರ್ಮೃಧೇ ।
ಮಹಾಮಾತ್ಯೈರ್ಮಹಾಮಾತ್ಯಾಃ ಸೂತಾಃ ಸೂತೈರ್ನೃಪೈರ್ನೃಪಾಃ ॥ ೨೫ ॥

ಯುಯುಧುಃ ಕ್ರೋಧಸಂಯುಕ್ತಾಃ ಸಿಂಹೈಃ ಸಿಂಹಾ ಇವೌಜಸಾ ।
ಖಡ್ಗೈಃ ಕುಂತೈಃ ಶಕ್ತಿಭಿಶ್ಚ ಭಲ್ಲೈಃ ಪಟ್ಟಿಶಮುದ್ಗರೈಃ ॥ ೨೬ ॥

---

೨೨. ಭೂಮಿಯಲ್ಲಿ ಎತ್ತೆತ್ತಲೂ ಕತ್ತಲೆಯು ಮುಸುಕಿತು. ದೇವತೆಗಳೂ ಸಹ ಇಲ್ಲದ ಕಳವಳಕ್ಕೀಡಾದರು. ಎಲ್ಲಿ ಎಂದರೆ ಅಲ್ಲಿ ಆನೆಗಳ ನೂಕು ನುಗ್ಗಲಿನಿಂದ ಮರ ಗಿಡಗಳು ಉರುಳಿಬಿದ್ದುವು.

೨೩. ಕುದುರೆಗಳ ಗೊರಸಿನಿಂದ ಭೂಮಿಯು ಬಿರುಕುಬಿಟ್ಟಿತು. ಓ ರಾಜೇಂದ್ರ! ಈ ರೀತಿ ಬರುತ್ತಿದ್ದ ಕುರುಸೇನೆಯೂ, ಯದುಸೇನೆಯೂ ಕಲೆತು—

೨೪—೨೬. ಚೂಪಾದ ತಮ್ಮ ತಮ್ಮ ಆಯುಧಗಳಿಂದ ಪ್ರಳಯಕಾಲದಲ್ಲಿ ಸಪ್ತ ಸಮುದ್ರಗಳು ಭಾರಿ ಭಾರಿ ಅಲೆಗಳಿಂದ ಒಂದರಮೇಲೊಂದು ನುಗ್ಗುವಂತೆ ಪರಸ್ಪರವಾಗಿ ನುಗ್ಗಿ ಹೋರಾಡಿದರು. ಆಗ ಆನೆಗಳು ಆನೆಗಳೊಡನೆಯೂ, ಕುದುರೆಗಳು ಕುದುರೆಗಳೊಂದಿಗೂ, ರಥಿಕರು ರಥಿಕರ ಜೊತೆಯಲ್ಲಿಯೂ, ಕಾಲಾಳುಗಳು ಕಾಲಾಳುಗಳ ಸಂಗಡವೂ, ಮಾವುತರು ಮಾವುತರೊಂದಿಗೂ, ಸಾರಥಿಗಳು ಸಾರಥಿಗಳೊಡನೆಯೂ, ರಾಜರು ರಾಜರೊಡನೆಯೂ, ಮಿತಿಮೀರಿದ ಕೋಪದಿಂದಲೂ, ರಭಸದಿಂದಲೂ ಮುನ್ನುಗ್ಗುತ್ತಾ, ಮಾಂಸಕ್ಕೆರಗುವ ಗಿಡುಗಗಳಂತೆಯೂ, ಸಿಂಹಗಳಂತೆಯೂ ಪರಸ್ಪರವಾಗಿ ಹೋರಾಡಿದರು.

ಗದಾಭಿರ್ಮುಸಲೈಶ್ಚಕ್ರೈಸ್ತೋಮರೈರ್ಭಿಂಡಿಪಾಲಕೈಃ ।
ಶತಘ್ನೀಭಿರ್ಭುಶುಂಡೀಭಿಃ ಕುಠಾರೈಶ್ಚ ಸ್ಫುರತ್ಪ್ರಭೈಃ ॥ ೨೭ ॥

ಚಿಚ್ಛಿದುರ್ಬಾಣಪಟಲೈಃ ಶಿರಾಂಸಿ ಕ್ರೋಧಮೂರ್ಛಿತಾಃ ।
ಬಾಣಾಂಧಕಾರೇ ಸಂಜಾತೇ ಪ್ರದ್ಯುಮ್ನೋ ಧನ್ವಿನಾಂ ವರಃ ॥ ೨೮ ॥

ದುರ್ಯೋಧನೇನ ಯುಯುಧೇ ಧನುಷ್ಟಂಕಾರಯನ್ಮುಹುಃ ।
ಅನಿರುದ್ಧಶ್ಚ ಭೀಷ್ಮೇಣ ದೀಪ್ತಿಮಾಂಶ್ಚ ಕೃಪೇಣ ವೈ ॥ ೨೯ ॥

ಭಾನುರ್ದ್ರೋಣೇನ ಸಾಂಬಸ್ತು ಬಾಹ್ಲೀಕೇನ ನೃಪೇಶ್ವರಃ ।
ಮಧುಃ ಕರ್ಣೇನ ಚಾಯುಧ್ಯದ್ಬೃಹದ್ಭಾನುಃ ಶಲೇನ ವೈ ॥ ೩೦ ॥

ಚಿತ್ರಭಾನುರ್ಹರೇಃ ಪುತ್ರಃ ಸೋಮದತ್ತೇನ ಧೀಮತಾ ।
ಅಶ್ವತ್ಥಾಮ್ನಾ ವೃಕಶ್ಚೈವಾರುಣೋ ಧೌಮ್ಯೇನ ಮೈಥಿಲ ॥ ೩೧ ॥

೨೭–೨೮. ಆಗ ಆ ವೀರರು ಮಿತಿಮೀರಿದ ಕೋಪದಿಂದ ಖಡ್ಗಗಳನ್ನೂ, ಕುಂತಗಳನ್ನೂ, ಶಕ್ತ್ಯಾಯುಧಗಳನ್ನೂ, ಭಲ್ಲಿ, ಪಟ್ಟಿಶ, ಮುದ್ಗರ, ಗದೆ, ಮುಸಲ (ಒನಕೆ), ಚಕ್ರ, ತೋಮರ, ಬಿಂಡಿಪಾಲ, ಶತಘ್ನಿ, ಭುಸುಂಡಿ ಎಂಬ ಆಯುಧಗಳನ್ನೂ, ಥಳಥಳಿಸುತ್ತಿರುವ ಗಂಡುಗೊಡಲಿಗಳನ್ನೂ, ಬಾಣಪರಂಪರೆಗಳನ್ನೂ ಪ್ರಯೋಗಿಸುತ್ತಾ, ತಮ್ಮ ಎದುರಾಳಿಗಳ ತಲೆಗಳನ್ನು ಕತ್ತರಿಸಿ ಕೆಡಹುತ್ತಿದ್ದರು. ಈ ರೀತಿಯಾಗಿ ಆ ಉಭಯ ಪಕ್ಷದ ಯೋಧರಿಂದ ಪ್ರಯೋಗಿಸಲ್ಪಟ್ಟ ಬಾಣವರ್ಷದಿಂದ ಕತ್ತಲು ಕವಿದಂತಾಗಲು, ಧನುರ್ಧರಾಗ್ರೇಸರನಾದ ಪ್ರದ್ಯುಮ್ನನು ತನ್ನ ಧನುಸ್ಸನ್ನು ಪುನಃ ಪುನಃ ಟಂಕಾರಮಾಡುತ್ತಾ ದುರ್ಯೋಧನನೊಂದಿಗೆ ನಿಂತು ಹೋರಾಡಿದನು.

೨೯–೩೧. ಓ ಮಿಥಿಲಾಧೀಶ! ವೀರನಾದ ಅನಿರುದ್ಧನು ಭೀಷ್ಮಾಚಾರ್ಯನೊಂದಿಗೂ, ದೀಪ್ತಿಮಂತನು ಕೃಪನೊಡನೆಯೂ, ಭಾನುವು ದ್ರೋಣಾಚಾರ್ಯರ ಸಂಗಡಲೂ, ಸಾಂಬನು ಬಾಹ್ಲೀಕನ ಜೊತೆಯಲ್ಲಿಯೂ, ಮಧುವು ಕರ್ಣನೊಡನೆಯೂ, ಬೃಹದ್ಭಾನುವು ಶಲ್ಯನೊಂದಿಗೂ, ಚಿತ್ರಭಾನುವು ಸೋಮದತ್ತನ ಸಂಗಡದಲ್ಲಿಯೂ, ವೃಕನು ಅಶ್ವತ್ಥಾಮನ ಜೊತೆಯಲ್ಲಿಯೂ, ವಾರುಣನು ಧೌಮ್ಯನೊಂ

ಪುಷ್ಕರೋ ಲಕ್ಷ್ಮಣೇನಾಶು ದುರ್ಯೋಧನಸುತೇನ ವೈ ।
ವೇದಬಾಹುಃ ಕೃಷ್ಣಸುತಃ ಶಕುನೇನ ಮಹಾಮೃಧೇ ॥ ೩೨ ॥

ದುಃಶಾಸನೇನ ಸಮರೇ ಶ್ರುತದೇವೋ ಹರೇಃ ಸುತಃ ।
ತಥಾ ಹಿ ಯುಯುಧೇ ಯುದ್ಧೇ ಸಂಜಯೇನ ಸುನಂದನಃ ॥ ೩೩ ॥

ವಿದುರೇಣ ಗದಃ ಸಾಕ್ಷಾತ್ಕೃತವರ್ಮಾ ಚ ಭೂರಿಣಾ ।
ಅಕ್ರೂರೋ ಯುಯುಧೇ ರಾಜನ್ನಾಹವೇ ಯಕ್ಷಕೇತುನಾ ॥ ೩೪ ॥

ಏವಂ ಪರಸ್ಪರಂ ಯುದ್ಧಂ ಬಭೂವ ತುಮುಲಂ ಮಹತ್ ।
ಕಾರ್ಷ್ಣಿರ್ವಿಲೋಡಯಾಮಾಸ ದುರ್ಯೋಧನಬಲಂ ಮಹತ್ ॥ ೩೫ ॥

ಬಾಣಸಂಘೇನ ವಾರಾಹೋ ದಂಷ್ಟ್ರಯಾ ಚ ಯಥಾರ್ಣವಂ ।
ಬಾಣಸಂಭಿನ್ನಕುಂಭಾನಾಂ ಕರಿಣಾಂ ಪ್ರಪತಂತಿ ಖಾತ್ ॥ ೩೬ ॥

ದಿಗೂ ಹೋರಾಡಿದರು. ಮತ್ತು ಪುಷ್ಕರನೂ, ದುರ್ಯೋಧನ ಪುತ್ರನಾದ ಲಕ್ಷ್ಮಣನೂ, ಕೃಷ್ಣಪುತ್ರನಾದ ವೇದಬಾಹುವೂ, ಶಕುನನೂ, ಶ್ರುತದೇವನೂ, ದುಃಶಾಸನನೂ, ಸುನಂದನನೂ, ಸಂಜಯನೂ, ಗದನೂ, ವಿದುರನೂ, ಕೃತವರ್ಮನೂ, ಭೂರಿಶ್ರವಸ್ಸೂ, ಅಕ್ರೂರನೂ, ಯಕ್ಷಕೇತುವೂ ಒಬ್ಬರಿಗೊಬ್ಬರು ಕಲೆತು ಯುದ್ಧವಾಡತೊಡಗಿದರು.

೩೫. ರಾಜೇಂದ್ರ! ಈ ರೀತಿಯಾಗಿ ಯದುವೀರರಿಗೂ, ಕುರುವೀರರಿಗೂ ಪರಸ್ಪರ ಕೈ ಕೈ ಕಲೆತು ಭಾರಿಯಾದ ತುಮುಲ ಯುದ್ಧವು ಜರುಗಿತು. ಆಗ ಕೃಷ್ಣಕುಮಾರನಾದ ಪ್ರದ್ಯುಮ್ನನು ತನ್ನ ಶರಪರಂಪರೆಯಿಂದ ಆ ಅಪಾರವಾದ ಕುರುಸೈನ್ಯವನ್ನು ಆದಿವರಾಹನು ತನ್ನ ಕೋರೆದಾಡೆಗಳಿಂದ ಸಮುದ್ರವನ್ನು ಹೇಗೋ ಹಾಗೆ ಅಲ್ಲಕಲ್ಲೋಲ ಮಾಡಿಬಿಟ್ಟನು.

೩೬–೩೮. ಆ ಪ್ರದ್ಯುಮ್ನನ ಬಾಣದ ಏಟಿನಿಂದ ಶತ್ರುಪಕ್ಷದ ಆನೆಗಳ ಕುಂಭಸ್ಥಳಗಳು ಕತ್ತರಿಸಿ ಹೋಗಿ ಅವುಗಳಿಂದ ಶುಭ್ರವಾದ ಮುತ್ತುಗಳು ರಾತ್ರೆಯ ವೇಳೆ ಆಕಾಶದಿಂದ ಉದುರುವ ನಕ್ಷತ್ರಗಳಂತೆ ಕಂಗೊಳಿಸುತ್ತಾ ನೆಲದಮೇಲೆ ಬೀಳುತ್ತಿ

ಮುಕ್ತಾಫಲಾನಿ ರೇಜುಃ ಕೌ ರಾತ್ರೌ ತಾರಾಗಣಾ ಇವ ।
ಬಾಣೈಃ ಸಂಪಾತಯಾಮಾಸ ರಥಿನಃ ಸಾರಥೀನ್ರಥಾನ್ ॥ ೩೭ ॥

ಮಹಾಮೃಧೇ ಮೈಥಿಲೇಂದ್ರ ವೇಗೈರ್ವಾತೋ ಯಥಾ ತರೂನ್ ।
ದುರ್ಯೋಧನಸ್ತದಾ ಪ್ರಾಪ್ತೋ ಧನುಷ್ಟಂಕಾರಯನ್ಮುಹುಃ ॥ ೩೮ ॥

ಪ್ರದ್ಯುಮ್ನಂ ತಾಡಯಾಮಾಸ ಸಾಯಕೈರ್ದಶಭಿರ್ಮೃಧೇ ।
ತಾನ್ಪ್ರಚಿಚ್ಛೇದ ಭಗವಾನ್ಪ್ರದ್ಯುಮ್ನೋ ಯಾದವೇಶ್ವರಃ ॥ ೩೯ ॥

ದುರ್ಯೋಧನಃ ಪುನಸ್ತಸ್ಯ ಕವಚೇ ಸಾಯಕಾನ್ದಶ ।
ನಿಚಖಾನ ಸ್ವರ್ಣಪುಂಖಾನ್ಭಿತ್ವಾ ವರ್ಮ ತನೌ ಗತಾಃ ॥ ೪೦ ॥

ಸಹಸ್ರೈರ್ಬಾಣಪಟಲೈಃ ಸಹಸ್ರಾಶ್ವಾನ್ಜಘಾನ ಹ ।
ಚಿಚ್ಛೇದ ಬಾಣಶತಕೈಃ ಕೋದಂಡಂ ಸಗುಣಂ ಪರಂ ॥ ೪೧ ॥

ದ್ದುವು. ಮತ್ತು ಆ ವೀರನು ತನ್ನ ಶರಪರಂಪರೆಯಿಂದ ರಥಿಕರನ್ನು ಮಾತ್ರವಲ್ಲದೆ ಅವರು ಕುಳಿತಿದ್ದ ರಥಗಳನ್ನೂ, ಅವಕ್ಕೆ ಕಟ್ಟಿದ್ದ ಕುದುರೆಗಳನ್ನೂ, ಬಿರುಗಾಳಿಯು ಮರಗಳನ್ನು ಬುಡಸಹಿತ ಕಿತ್ತುರುಳಿಸುವಂತೆ ಕತ್ತರಿಸಿ ಕೆಡಹುತ್ತಿದ್ದನು. ಈ ರೀತಿ ಅತಿಶಯವಾದ ಪರಾಕ್ರಮವನ್ನು ತೋರುತ್ತಿರುವ ಪ್ರದ್ಯುಮ್ನನನ್ನು ನೋಡಿ ದುರ್ಯೋಧನನು ತನ್ನ ಧನುಸ್ಸನ್ನು ಜೇ ಎಳೆಯುತ್ತಾ (ಟಂಕಾರ ಮಾಡುತ್ತಾ) ಹತ್ತು ಬಾಣಗಳನ್ನು ತೆಗೆದುಕೊಂಡು ಆ ಪ್ರದ್ಯುಸನ್ನು ಪ್ರಹರಿಸಿದನು.

೩೯–೪೦ ಆ ಬಾಣಗಳನ್ನು ಯಾದವೇಶ್ವರನಾದ ಪ್ರದ್ಯುಮ್ನನು ತಟ್ಟನೆ ಕತ್ತರಿಸಿಬಿಟ್ಟನು. ಅದನ್ನು ಕಂಡು ದುರ್ಯೋಧನನು ಕುಪಿತನಾಗಿ ಮತ್ತೆ ಕೆಲವು ಚಿನ್ನದ ಗರಿಗಳನ್ನು ಕಟ್ಟಿದ್ದ ಬಾಣಗಳನ್ನು ತೆಗೆದುಕೊಂಡು ಆ ಪ್ರದ್ಯುಮ್ನನ ಕವಚಕ್ಕೆ ಸರಿಯಾಗಿ ಗುರಿಯಿಟ್ಟು ಹೊಡೆದನು. ಆ ಏಟಿಗೆ ಆ ಕವಚವು ಕಿತ್ತು ಹೋಗಿ ಆ ಬಾಣಗಳು ಮೈಯೊಳಗೆ ನಾಟಿಕೊಂಡವು.

೪೧. ಅನಂತರ ಮಹಾವೀರನಾದ ಆ ದುರ್ಯೋಧನನು ಸಾವಿರಬಾಣಗಳಿಂದ ಆ ಪ್ರದ್ಯುಮ್ನನ ತೇರಿಗೆ ಕಟ್ಟಿದ್ದ ಸಾವಿರಕುದುರೆಗಳನ್ನೂ ನೂರುಬಾಣಗಳಿಂದ ಆತನ ಕೈಲಿದ್ದ ಧನುಸ್ಸನ್ನೂ, ಅದರ ಹೆದೆಯನ್ನೂ ಕತ್ತರಿಸಿ ಕೆಡಹಿದನು.

ಶಂಬರಾರೇರ್ಮಹಾವೀರೋ ಧೃತರಾಷ್ಟ್ರಸುತೋ ಬಲೀ ।
ಪ್ರದ್ಯುಮ್ನಸ್ತಂ ರಥಂ ತ್ಯಕ್ತ್ವಾಽಥಾನ್ಯಮಾರುಹ್ಯ ಸತ್ವರಂ ॥ ೪೨ ॥

ಕೃಷ್ಣದತ್ತಂ ಧನುರ್ನೀತ್ವಾ ಸಜ್ಜಂ ಕೃತ್ವಾ ವಿಧಾನತಃ ।
ಏಕಂ ಬಾಣಂ ಸಮಾಧಾಯ ಕರ್ಣಾಂತಂ ತಚ್ಚ ಕರ್ಷ ಹ ॥ ೪೩ ॥

ಭುಜದಂಡಸ್ಯ ವೇಗೇನ ತದ್ರಥೇ ನಿಚಕರ್ಷ ಹ ।
ಗೃಹೀತ್ವಾ ತದ್ರಥಂ ಬಾಣೋ ಭ್ರಾಮಯಿತ್ವಾ ಘಟೀದ್ವಯಂ ॥ ೪೪ ॥

ಆಕಾಶಾತ್ಪಾತಯಾಮಾಸ ಕಮಂಡಲುಮಿವಾರ್ಭಕಃ ।
ಪತನೇನ ರಥಃ ಸದ್ಯಶ್ಚೂರ್ಣೀಭೂತೋ ಬಭೂವ ಹ ॥ ೪೫ ॥

ಸಸೂತಾಶ್ಚ ಹಯಾಃ ಸರ್ವೇ ಪಂಚತಾಂ ಪ್ರಾಪುರಗ್ರತಃ ।
ಅನ್ಯಂ ರಥಂ ಸಮಾಸ್ಥಾಯ ಧಾರ್ತರಾಷ್ಟ್ರೋ ಮಹಾಬಲಃ ॥ ೪೬ ॥

೪೨–೪೩. ಆಗ ಪ್ರದ್ಯುಮ್ನನು ಥಟ್ಟನೆ ಆ ರಥವನ್ನು ಬಿಟ್ಟು ಮತ್ತೊಂದು ತೇರನ್ನು ಹತ್ತಿ ಕುಳಿತು ಕೃಷ್ಣನಿಂದ ತನಗೆ ಕೊಡಲ್ಪಟ್ಟಿದ್ದ ಬೇರೊಂದು ಬಿಲ್ಲನ್ನು ತೆಗೆದುಕೊಂಡು ಅದಕ್ಕೆ ಹೆದೆಯೇರಿಸಿ ಬಾಣವೊಂದನ್ನು ಹೂಡಿ ಅದನ್ನು ಆಕರ್ಣಾಂತವಾಗಿ ಸೆಳೆದನು.

೪೪–೪೫. ಆರೀತಿ ಸೆಳೆದು ತನ್ನ ಬಾಹುಬಲವನ್ನೆಲ್ಲಾ ಉಪಯೋಗಿಸಿ ಮಹಾವೇಗದಿಂದ ಆ ಬಾಣವನ್ನು ದುರ್ಯೋಧನನ ತೇರಿಗೆ ಗುರಿಕಟ್ಟಿ ಹೊಡೆದನು. ಆ ಬಾಣವು ಆ ರಥವನ್ನು ಎರಡು ಘಳಿಗೆಗಳಕಾಲ ಆಕಾಶದಲ್ಲಿ ಗರಗರನೆ ತಿರುಗಿಸಿ ಅಲ್ಲಿಂದ ಹುಡುಗನು ಮಣ್ಣಿನ ಕಮಂಡಲವನ್ನು ಕುಕ್ಕುವಂತೆ ನೆಲದ ಮೇಲಕ್ಕೆ ಬೀಸಿ ಕೆಡವಿತು. ಆರೀತಿ ನೆಲಕ್ಕೆ ಬಿದ್ದೊಡನೆಯೇ ಆ ದುರ್ಯೋಧನನ ರಥವು ಪುಡಿಪುಡಿಯಾಗಿ ಹೋಯಿತು.

೪೬–೪೭. ಮತ್ತು ಅದರ ಸಾರಥಿಯೂ, ಕುದುರೆಗಳೂ ಸತ್ತುಹೋದುವು. ಆಗ ಮಹಾಬಲಾಢ್ಯನಾದ ದುರ್ಯೋಧನನು ಬೇರೊಂದು ರಥವನ್ನೇರಿ ಕುಳಿತು

ಪ್ರದ್ಯುಮ್ನಂ ತಾಡಯಾಮಾಸ ದಶಭಿಃ ಸಾಯಕೈರ್ನೃಪ ।
ತೈಸ್ತಾಡಿತೋ ಹರೇಃ ಪುತ್ರೋ ಮಾಲಾಹತ ಇವ ದ್ವಿಪಃ ॥ ೪೭ ॥

ಕೃಷ್ಣದತ್ತೇ ಚ ಕೋದಂಡೇ ತಥೈಕಂ ಬಾಣಮಾದಧೇ ।
ಬಾಣಸ್ತಂ ಸರಥಂ ನೀತ್ವಾ ಯಾವತ್ಪ್ರಾಗಾನ್ಮಹಾಂಬರೇ ॥ ೪೮ ॥

ತಾವದ್ಬಾಣೋ ದ್ವಿತೀಯೋಽಪಿ ತಂ ಗೃಹೀತ್ವಾ ಯಯೌ ತ್ವರಂ ।
ತಾವತ್ತೃತೀಯಃ ಸಂಪ್ರಾಪ್ತೋ ನೀತ್ವಾ ತಂ ಮಂದಿರಾಜಿರೇ ॥ ೪೯ ॥

ಧೃತರಾಷ್ಟ್ರಸಮೀಪೇ ಚ ಸರಥಂ ಸಾಶ್ವಸಾರಥಿಂ ।
ಆಕಾಶಾತ್ಪಾತಯಾಮಾಸ ಪದ್ಮಕೋಶಮಿವಾನಿಲಃ ॥ ೫೦ ॥

ಬಾಣಸ್ತಂ ಪಾತಯಿತ್ವಾ ತು ರಣೇ ಕಾರ್ಷ್ಣಿಂ ಸಮಾಯಯೌ ॥ ೫೧ ॥

ಹತ್ತು ಬಾಣಗಳಿಂದ ಆ ಪ್ರದ್ಯುಮ್ನನನ್ನು ಪ್ರಹರಿಸಿದನು. ಆ ಬಾಣಗಳು ಪ್ರದ್ಯುಮ್ನನಿಗೆ ತಗುಲಿದರೂ ಆನೆಗೆ ಹೂವಿನ ಸರದಿಂದ ಹೊಡೆದಂತೆ ಅದುದರಿಂದ ಸ್ವಲ್ಪವೂ ನೋವನ್ನುಂಟುಮಾಡಲಿಲ್ಲ.

೪೮. ಆಗ ಪ್ರದ್ಯುಮ್ನನು ಕೃಷ್ಣದತ್ತವಾದ ಆ ಧನುಸ್ಸಿನಲ್ಲಿ ಮತ್ತೊಂದು ಬಾಣವನ್ನು ಹೂಡಿ ದುರ್ಯೋಧನನಮೇಲೆ ಪ್ರಯೋಗಿಸಲು ಆ ಬಾಣವು ಆ ದುರ್ಯೋಧನನನ್ನು ಆತನ ರಥದೊಂದಿಗೆ ಆಕಾಶಕ್ಕೆ ಒಯ್ದುಬಿಟ್ಟಿತು.

೪೯–೫೦. ಹಾಗೆ ಒಯ್ಯುವಷ್ಟರೊಳಗಾಗಿಯೇ ಆ ಪ್ರದ್ಯುಮ್ನನ ಎರಡನೆಯ ಬಾಣವು ಆ ಧೃತರಾಷ್ಟ್ರಪುತ್ರನನ್ನು ಸರ್‍ರನೆ ತಾನು ಹೊತ್ತುಕೊಂಡೊಯ್ಯಿತು. ಅಷ್ಟರಲ್ಲಿ ಮೂರನೆಯ ಬಾಣವು ಬಂದು ತಗುಲಿ ದುರ್ಯೋಧನನನ್ನು ಕೊಂಡೊಯ್ದು ಆತನ ಅರಮನೆಯ ಅಂಗಳದಲ್ಲಿ ಧೃತರಾಷ್ಟ್ರನ ಬಳಿಯಲ್ಲಿ ಅವನ ಸಾರಥಿಯೊಂದಿಗೂ ತೇರು ಮತ್ತು ಕುದರೆಯೊಂದಿಗೂ ಆಕಾಶದ ಮೇಲಿನಿಂದ ಗಾಳಿಯು ಕಮಲದ ಮೊಗ್ಗನ್ನು ಹೇಗೋ ಹಾಗೆ ಕೆಳಕ್ಕೆ ಉರುಳಿಸಿಬಿಟ್ಟಿತು.

೫೧–೫೨. ಅನಂತರ ಆ ಬಾಣವು ಮರಳಿ ರಣರಂಗದಲ್ಲಿದ್ದ ಪ್ರದ್ಯುಮ್ನನ ಬಳಿಗೆಯೇ ಬಂದು ಸೇರಿತು. ಇತ್ತಲಾ ದುರ್ಯೋಧನನು ಹಾಗೆ ಮೇಲಿನಿಂದ

ಪತನೇನ ವಿಶೀರ್ಣೋಽಭೂದಂಗಾರ ಇವ ತದ್ರಥಃ ।
ಸುಯೋಧನೋ ಮೂರ್ಚ್ಛಿತೋಽಭೂದುದ್ವಮನ್ರುಧಿರಂ ಮುಖಾತ್ ॥೩೨॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಕೌರವಯುದ್ಧವರ್ಣನಂ ನಾಮ ವಿಂಶೋಽಧ್ಯಾಯಃ

ಕೆಳಕ್ಕೆ ಬಿದ್ದುದರಿಂದ ಬಾಯಿನಿಂದ ರಕ್ತವನ್ನು ಕಕ್ಕುತ್ತಾ ಮೂರ್ಛಿತನಾಗಿ ಬಿದ್ದುಬಿಟ್ಟನು. ಅವನ ತೇರೂ ಸಹಾ ಮೇಲಿನಿಂದ ಬಿದ್ದ ಕೆಂಡದ ಉಂಡೆಯಂತೆ ತುಂಡುತುಂಡಾಗಿ ಒಡೆದು ಚೂರುಚೂರಾಯಿತು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀನಾರದ ಬಹುಲಾಶ್ವ ಸಂವಾದದಲ್ಲಿ ಕೌರವಯುದ್ಧವರ್ಣನವೆಂಬ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಏಕವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ದುರ್ಯೋಧನೇ ಗತೇ ತತ್ರ ಹಾಹಾಕಾರೋ ಮಹಾನಭೂತ್ ।
ತದಾ ದೇವವ್ರತೋ ಭೀಷ್ಮೋ ಗಾಂಗೇಯಃ ಪ್ರಯಯೌ ತ್ವರಂ ॥ ೧ ॥

ಯದೂನಾಂ ಪಶ್ಯತಾಂ ತೇಷಾಂ ಧನುಷ್ಟಂಕಾರಯನ್ಮುಹುಃ ।
ಭಸ್ಮೀಕರ್ತುಂ ಯದುಬಲಂ ವನಂ ವಹ್ನಿರಿವ ಜ್ವಲನ್ ॥ ೨ ॥

ಸರ್ವಧರ್ಮಭೃತಾಂ ಶ್ರೇಷ್ಠೋ ಮಹಾಭಾಗವತಃ ಕವಿಃ ।
ವೀರಯೂಥಾಗ್ರಣೀರ್ಯೇನ ರಾಮೋಽಪಿ ಯುಧಿ ತೋಷಿತಃ ॥ ೩ ॥

ಇಪ್ಪತ್ತೊಂದನೆಯ ಅಧ್ಯಾಯವು.

೧—೨. ರಾಜೇಂದ್ರ! ಕೇಳು. ಇತ್ತಲಾಗಿ ರಣರಂಗದಲ್ಲಿ ದುರ್ಯೋಧನನ ಕಾಣಿಸದಂತಾಗಲು ಭಾರಿ ಗದ್ದಲವುಂಟಾಯಿತು. ಆ ಕೂಡಲೇ ಭೀಷ್ಮನೆಂಬುದಾಗಿ ಪ್ರಖ್ಯಾತನಾದ ದೇವವ್ರತನೆಂಬ ಹುಟ್ಟು ಹೆಸರಿನ ಗಂಗಾಪುತ್ರನು ಸರಸರನೆ ಆ ಯದುವೀರರು ನೋಡುತ್ತಿರುವಂತೆಯೇ ತನ್ನ ಧನುಸ್ಸನ್ನು ಬಾರಿಬಾರಿಗೂ ಟಣಟಣನೆಂದು ಧ್ವನಿಗೈಯುತ್ತಾ, ಅರಣ್ಯವನ್ನು ದಹಿಸಲು ಸಿದ್ಧವಾಗಿರುವ ಧಗಧಗಿಸುತ್ತಿರುವ ಅಗ್ನಿಯಂತೆ ಆ ಯದುಸೇನೆಯನ್ನು ಸುಟ್ಟು ಬೂದಿಮಾಡಿಬಿಡುವೆನೆಂದು ಮುಂದೆ ಬಂದನು.

೩. ಆ ಭೀಷ್ಮನೇನು ಸಾಮಾನ್ಯನೇ! ಸಕಲ ಧರ್ಮಗಳನ್ನು ತಿಳಿದಂತ ಮಹಾತ್ಮರಲ್ಲೆಲ್ಲಾ ಮೇಲೆನಿಸಿದವನು. ವಿಶೇಷವಾಗಿ ಭಗವಂತನಲ್ಲಿ ತನ್ನ ಭಕ್ತಿಯನ್ನು ಇಟ್ಟಿರುವವನು. ಮೇಲಾಗಿ ವೀರರ ಸಮೂಹಕ್ಕೇ ಮುಂದಾಳೆನಿಸಿದ ಆ ಪರಶುರಾಮನನ್ನೂ ಸಹ ತನ್ನ ಪರಾಕ್ರಮದಿಂದ ಯುದ್ಧದಲ್ಲಿ ಸಂತೋಷಪಡಿಸಿದವನು.

ಶಿರಸ್ತ್ರೀ ಮುಕುಟೀ ಗೌರಃ ಸಿತಶ್ಮಶ್ರುಃ ಪಿತಾಮಹಃ ।
ಯಥಾ ಷೋಡಶವರ್ಷೀಯೋ ಯುದ್ಧಾಂತಂ ವಿಚರನ್ಬಲಾತ್ ॥ ೪ ॥

ಬಾಣೈರ್ನಿಪಾತಯಾಮಾಸಾನಿರುದ್ಧಸ್ಯ ಬಲಂ ಮಹತ್ ।
ಕರಿಣಶ್ಛಿನ್ನಶಿರಸೋ ಹಯಾಸ್ತೇ ಭಿನ್ನಕಂಧರಾಃ ॥ ೫ ॥

ಖಡ್ಗಹಸ್ತಾ ಭಿನ್ನಬಾಣೈಃ ಪತ್ತಯೋಽಪಿ ದ್ವಿಧಾಭವನ್ ।
ರಥಾಶ್ಚೂರ್ಣೀಕೃತಾ ಯೇನ ಹತಸೂತಾಶ್ವನಾಯಕಾಃ ॥ ೬ ॥

ಅಧೋಮುಖಾ ಊರ್ಧ್ವಮುಖಾಶ್ಛಿನ್ನಪಾದಾ ನೃಪಾತ್ಮಜಾಃ ।
ಖಡ್ಗಹಸ್ತಧನುರ್ಹಸ್ತಾಃ ಪತಿತಾಶ್ಛಿನ್ನಬಾಹವಃ ॥ ೭ ॥

೪–೫. ಇಂತಹ ಆ ಕುರುಕುಲಪಿತಾಮಹನು ಗೌರವರ್ಣದಿಂದಲೂ, ಬಿಳಿದಾದ ಗಡ್ಡ ಮೀಸೆಗಳಿಂದಲೂ ಶೋಭಿಸುತ್ತಾ, ಶಿರಸ್ತ್ರಾಣವನ್ನೂ, ಕಿರೀಟವನ್ನೂ ಧರಿಸಿ, ಹದಿನಾರುವರ್ಷದ ವಯಸ್ಸಿನ ನವಯುವಕನಂತೆ ಅತಿಶಯವಾದ ಪರಾಕ್ರಮದಿಂದ ಆ ಯುದ್ಧರಂಗದಲ್ಲಿ ಕೊನೆಯವರಿಗೂ ಓಡಾಡುತ್ತಾ ಅಪಾರವಾದ ಅನಿರುದ್ಧನ ಸೇನೆಗಳನ್ನು ತನ್ನ ಬಾಣಗಳಿಂದ ಕತ್ತರಿಸಿ ಕೆಡಹುತ್ತಿದ್ದನು.

೬. ಆಗ ಆನೆಗಳೂ ಕುದುರೆಗಳೂ ತಲೆಗಳು ಕಡಿಯಲ್ಪಟ್ಟು ಕೆಳಗೆ ಉರುಳಿದುವು. ನೆಲದಮೇಲೆ ನಿಂತು ಹೋರಾಡುತ್ತಿದ್ದ ಖಡ್ಗಪಾಣಿಗಳಾದ ಯೋಧರೂ ಸಹ ಆ ಬಾಣಾಹುತಿಯಿಂದ ಎರಡೆರಡು ತುಂಡಾಗಿ ಕತ್ತರಿಸಲ್ಪಟ್ಟರು.

೭. ಮತ್ತು ರಥಗಳನ್ನೇರಿ ಕುಳಿತು ಖಡ್ಗಗಳನ್ನೂ, ಧನುಸ್ಸುಗಳನ್ನೂ ಧರಿಸಿ ಹೋರಾಡುತ್ತಾ ಇದ್ದ ಅನೇಕ ಮಂದಿ ರಾಜಕುಮಾರರು ತಮ್ಮ ಕೈಕಾಲುಗಳೆಲ್ಲವೂ ಕತ್ತರಿಸಲ್ಪಟ್ಟು ಕೆಲವರು ಮುಖಮಡಿಯಾಗಿಯೂ, ಕೆಲವರು ಮೇಲ್ಮುಖವಾಗಿಯೂ ನೆಲದಮೇಲೆ ಉರುಳಿಬಿದ್ದರು. ಅವರ ರಥಗಳು ಹುಡಿಹುಡಿಯಾದುವಲ್ಲದೆ ಅವುಗಳಿಗೆ ಕಟ್ಟಿದ್ದ ಕುದುರೆಗಳೂ, ಅವುಗಳ ಸಾರಥಿಗಳೂ ಸತ್ತು ಉರುಳಿಬಿದ್ದರು.

ಕೇಚಿಚ್ಛಿನ್ನಕವಚಾ ನಿಪೇತುರ್ಭೂಮಿಮಂಡಲೇ ।
ಅಶ್ವೈರ್ವೀರೈ ರಥೈರ್ನಾಗೈಃ ಪತಿತೈಃ ಸ್ವರ್ಣಭೂಷಿತೈಃ ॥ ೮ ॥

ಯುದ್ಧಮಂಡಲಮಾರೇಜೇ ವನಂ ವೃಕ್ಷೈರ್ಹತೈರ್ಯಥಾ ।
ಶಸ್ತ್ರದಂತಾ ಬಾಣಕೇಶಾ ಧ್ವಜವಸ್ತ್ರಾ ಕರಿಸ್ತನಾ ॥ ೯ ॥

ರಥಾಂಗಕುಂಡಲಾ ರಾಜನ್ಮಹಾಮಾರೀವ ಭೂರ್ಬಭೌ ।
ಕ್ಷತಜಸ್ರಾವಸಂಭೂತಾ ರಥಾಶ್ವನರವಾಹಿನೀ ॥ ೧೦ ॥

ಆಪಗಾಭೂನ್ಮಹಾದುರ್ಗಾ ಸರ್ವೈರ್ವೈತರಣೀ ಯಥಾ ।
ಕೂಷ್ಮಾಂಡೋನ್ಮಾದವೇತಾಲಾ ನದಂತೋ ಭೈರವಂ ಸ್ವನಂ ॥ ೧೧ ॥

---

೮. ಕೆಲಮಂದಿ ವೀರರು ತಾವು ತೊಟ್ಟಿದ್ದ ಕವಚಗಳು ಕತ್ತರಿಸಿ ಹೋಗಿ ನೆಲಕ್ಕೆ ಬಿದ್ದುಹೋದರು. ಈ ರೀತಿಯಾಗಿ ಕಡಿದುರುಳಿಬಿದ್ದ ವೀರರಿಂದಲೂ, ರಥಗಳಿಂದಲೂ, ಆನೆ ಕುದುರೆಗಳಿಂದಲೂ ಕಿಕ್ಕಿರಿದುಹೋದ ಆ ರಣಾಂಗಣವು ಬಿರುಗಾಳಿಗೆ ಸಿಕ್ಕಿ ಮುರಿದು ಬಿದ್ದ ಮರಗಳಿಂದ ತುಂಬಿದ ಅರಣ್ಯಪ್ರದೇಶದಂತೆ ಶೋಭಿಸಿತು.

೯. ರಾಜೇಂದ್ರ! ಆ ಯುದ್ಧಭೂಮಿಯು ಕೆಳಗೆ ಬಿದ್ದಿರುವ ಕೋರೆದಾಡೆಗಳಂತಿರುವ ಆಯುಧಗಳಿಂದಲೂ, ಕೇಶರಾಶಿಯಂತಿರುವ ಬಾಣಪರಂಪರೆಯಿಂದಲೂ, ವಸ್ತ್ರದಂತಿರುವ ಧ್ವಜಪಟಗಳಿಂದಲೂ, ಸ್ತನಸದೃಶವಾದ ಆನೆಗಳಿಂದಲೂ, (ಜಘನಸದೃಶವಾದ ?) ರಥಚಕ್ರಗಳಿಂದಲೂ ಭೀಷಣವಾಗಿ ಮಹಾ ಮಾರಿಯಂತೆ ಕಂಗೊಳಿಸಿತು.

೧೦. ಮತ್ತು ಪರಸ್ಪರ ಶಸ್ತ್ರಾಹತಿಯಿಂದ ಮಡಿದುಬಿದ್ದ ವೀರರ ಶರೀರಗಳಿಂದ ಹರಿದುಬರುತ್ತಿರುವ ರಕ್ತಗಳಿಂದಲೇ ಒಂದು ಭಾರಿಯಾದ ನದಿಯೇರ್ಪಟ್ಟು, ಅದರಲ್ಲಿ ಅವರ ದೇಹಗಳೂ, ರಥಗಳೂ, ಆನೆ ಕುದುರೆಗಳೂ ತೇಲಿಹೋಗುತ್ತಿದ್ದುವು. ಆ ರಕ್ತನದಿಯು ವೈತರಣೀ ನದಿಯಂತೆ ಮಾನವರಿಗೆ ದಾಟಲು ಅಸಾಧ್ಯವಾಗಿ ಪರಿಣಮಿಸಿತ್ತು.

೧೧. ಆಗ ಕೂಷ್ಮಾಂಡ, ಉನ್ಮಾದ, ವೇತಾಲ ಎಂಬ ಬಗೆಬಗೆಯ ಪ್ರಭೇದಗಳಿಗೊಳಪಟ್ಟ ಪಿಶಾಚಿಗಳು ಹೆದರಿಕೆಯಾಗುವಂತೆ ಕರ್ಕಶವಾಗಿ ಅರಚಿಕೊಳ್ಳುತ್ತಾ ತಮ್ಮ ರುಂಡಮಾಲೆಗಾಗಿ ಅಲ್ಲಿ ಕತ್ತರಿಸಿ ಬಿದ್ದಿದ್ದ ಮನುಷ್ಯರ ತಲೆಗಳನ್ನು ಎತ್ತಿಕೊಂಡು ಹೋಗುತ್ತಿದ್ದುವು.

ಹರವಾಲಾರ್ಥವಾಗತ್ಯ ಜಗೃಹುರ್ನೃಶಿರಾಂಸಿ ಚ ।
ರಥೇನಾತಿಪತಾಕೇನಾನಿರುದ್ಧೋ ಧನ್ವಿನಾಂ ವರಃ ॥ ೧೨ ॥

ಸ್ವಬಲಂ ಪತಿತಂ ದೃಷ್ಟ್ವಾ ಪ್ರಾಗಾದ್ಭೀಷ್ಮಂ ವೃಧೇ ವಹಾನ್ ।
ಪ್ರಲಯಾಬ್ಧಿ ಮಹಾವರ್ತಭೀಮಸಂಘರ್ಷನಾದಿನೀಂ ॥ ೧೩ ॥

ಧನುರ್ಜ್ಯಾಂ ತಸ್ಯ ಚಿಚ್ಛೇದ ಬಾಣೇನೈಕೇನ ಕಾರ್ಷ್ಣಿಜಃ ।
ತುಂಡಯಾ ತೀಕ್ಷ್ಣಯಾ ರಾಜನ್ಗರುಡಃ ಸರ್ಪಿಣೀಂ ಯಥಾ ॥ ೧೪ ॥

ಭೀಷ್ಮೋಽನ್ಯದ್ಧನುರಾದಾಯ ಸಜ್ಯಂ ಕೃತ್ವಾ ತದಾತ್ಮವಾನ್ ।
ಸರ್ವೇಷಾಂ ಪಶ್ಯತಾಂ ತತ್ರ ಬ್ರಹ್ಮಾಸ್ತ್ರಂ ಸಂದಧೇ ವೃಧೇ ॥ ೧೫ ॥

ತತಃ ಪ್ರಾದುಷ್ಕೃತಂ ತೇಜಃ ಪ್ರಚಂಡಂ ವೀಕ್ಷ್ಯ ಮಾಧವಃ ।
ಸ್ವಬಲಸ್ಯಾಪಿ ರಕ್ಷಾರ್ಥಂ ಬ್ರಹ್ಮಾಸ್ತ್ರಂ ಸಂದಧೇ ಸ್ವಯಂ ॥ ೧೬ ॥

೧೨–೧೪. ಆಗ ಧನುರ್ಧಾರಿಗಳಲ್ಲೆಲ್ಲಾ ಮೇಲಾದವನೆನಿಸಿದ ಅನಿರುದ್ಧನು ತನ್ನ ಸೈನ್ಯವೆಲ್ಲವೂ ಹತವಾದುದನ್ನು ಅರಿತು, ಎತ್ತರವಾದ ಧ್ವಜದಿಂದ ಮೆರೆಯುತ್ತಿರುವ ರಥದಲ್ಲಿ ಕುಳಿತು, ಭೀಷ್ಮನಿಗೆದುರಾಗಿ ಬೇಗನೆ ಬಂದನು. ಹಾಗೆ ಬಂದವನೇ ಪ್ರಳಯಕಾಲದ ಸಮುದ್ರದಲ್ಲೇಳುವ ಭಾರಿ ಭಾರಿ ಸುಳಿಗಳು ಒಂದಕ್ಕೊಂದಕ್ಕೆ ತಗಲಿ ಉಜ್ಜುವಾಗ ಉಂಟಾಗುವ ಧ್ವನಿಯಂತೆ ಭಯಂಕರವಾಗಿ ಧ್ವನಿಗೈಯ್ಯುತ್ತಿರುವ ಆ ಭೀಷ್ಮನ ಧನುಸ್ಸಿನ ಹೆದೆಯನ್ನು ಒಂದೇ ಒಂದು ಬಾಣದಿಂದ ಗರುಡನು ತನ್ನ ಚೂಪಾದ ಕೊಕ್ಕಿನಿಂದ ಹಾವನ್ನು ಹೇಗೋ ಹಾಗೆ ಕ್ಷಣಮಾತ್ರದಲ್ಲಿ ಕತ್ತರಿಸಿಬಿಟ್ಟನು.

೧೫. ಕೂಡಲೇ ಮಹಾ ಧೀರನಾದ ಆ ಭೀಷ್ಮನು ಬೇರೊಂದು ಧನುಸ್ಸನ್ನು ತೆಗೆದುಕೊಂಡು, ಅದಕ್ಕೆ ಹೆದೆಯೇರಿಸಿ ಅವರೆಲ್ಲರೂ ನೋಡುತ್ತಿರುವಂತೆಯೇ ಬ್ರಹ್ಮಾಸ್ತ್ರವನ್ನು ಸಂಧಾನಮಾಡಿದನು.

೧೬. ಆ ಅಸ್ತ್ರದಿಂದ ಸಹಿಸಲು ಅಸಾಧ್ಯವಾದಂತಹ ಅಪಾರವಾದ ತೇಜಸ್ಸು ಹೊರಹೊಮ್ಮುತ್ತಿರುವುದನ್ನು ಕಂಡು ಆ ಅನಿರುದ್ಧನು ತನ್ನ ಬಲವನ್ನು ಪರೀಕ್ಷಿಸಿ ನೋಡೋಣವೆಂದು ತಾನೂ ಧನುಸ್ಸಿನಲ್ಲಿ ಬ್ರಹ್ಮಾಸ್ತ್ರವನ್ನು ಸಂಧಾನಮಾಡಿದನು.

ದ್ವಾದಶಾದಿತ್ಯಸಂಕಾಶೇ ಯುಯುಧಾತೇ ಪರಸ್ಪರಂ ।
ತ್ರೀಂಲ್ಲೋಕಾನ್ದಹತೀ ದ್ವೇಪೇಽನಿರುದ್ಧಸ್ತಂ ಜಹಾರ ಹ ॥ ೧೭ ॥

ಗಾಂಗೇಯಸ್ಯಾಪಿ ಕೋದಂಡಂ ತಡಿದ್ವರ್ಣಂ ಯದೂತ್ತಮಃ ।
ಚಿಚ್ಛೇದ ಸಾಯಕೈಃ ಸೂರ್ಯೋ ನೀಹಾರಮಿವ ರಶ್ಮಿಭಿಃ ॥ ೧೮ ॥

ಭೀಷ್ಮೋ ಗೃಹೀತ್ವಾಥ ಗದಾಂ ಲಕ್ಷಭಾರಮಯೀಂ ದೃಢಾಂ ।
ಪ್ರಾಹಿಣೋದನಿರುದ್ಧಾಯ ಸಿಂಹನಾದಂ ತದಾಕರೋತ್ ॥ ೧೯ ॥

ಗೃಹೀತ್ವಾ ವಾಮಹಸ್ತೇನ ಗರುತ್ಮಾನಿವ ಪನ್ನಗೀಂ ।
ಪ್ರದ್ಯುಮ್ನೋ ಭಗವಾನ್ಸಾಕ್ಷಾತ್ಪ್ರಾಹಿಣೋತ್ಸ್ವಗದಾಂ ಹೃದಿ ॥ ೨೦ ॥

---

೧೭. ಆಗ ಆ ವೀರರಿಬ್ಬರೂ ಬಿಟ್ಟಂತಹ ಅಸ್ತ್ರಗಳೆರಡೂ ದ್ವಾದಶಾದಿತ್ಯರಿಗೆಣೆಯಾಗಿ ಜ್ವಲಿಸುತ್ತಾ, ಮೂರುಲೋಕವನ್ನೂ ಸುಟ್ಟುಬಿಡುವುವೋ ಎನ್ನುವಂತೆ ಪರಸ್ಪರವಾಗಿ ಹೋರಾಡುತ್ತಿದ್ದುವು. ಅದನ್ನು ಕಂಡು ಅನಿರುದ್ಧನು ಕೂಡಲೇ ಅದೆರಡನ್ನೂ ಉಪಸಂಹಾರ ಮಾಡಿದನು.

೧೮. ಅನಂತರ ಆ ಯದುವೀರನು ಸೂರ್ಯನು ತನ್ನ ಕಿರಣಗಳಿಂದ ಮಂಜಿನ ರಾಶಿಯನ್ನು ಭೇದಿಸುವಂತೆ ತನ್ನ ಬಾಣಗಳಿಂದ ಆ ಭೀಷ್ಮನ ಮಿಂಚಿನಂತೆ ಹೊಂಬಣ್ಣದಿಂದ ಬೆಳಗುತ್ತಿದ್ದ ಧನುಸ್ಸನ್ನು ಕತ್ತರಿಸಿಬಿಟ್ಟನು.

೧೯. ಕೂಡಲೇ ಭೀಷ್ಮನು ಲಕ್ಷಭಾರ ತೂಗುವಂತಹ ದೃಢವಾದ ಭಾರಿ ಗದೆಯೊಂದನ್ನು ತೆಗೆದುಕೊಂಡು ಅನಿರುದ್ಧನ ಮೇಲೆ ಬೀಸಿ ಹೊಡೆದು ಗಟ್ಟಿಯಾಗಿ ಸಿಂಹನಾದವನ್ನು ಮಾಡಿದನು.

೨೦. ಆಗ ಅಲ್ಲಿಗೆ ಬಂದ ಪ್ರದ್ಯುಮ್ನನು ಗರುಡನು ಹಾವನ್ನು ಹಿಡಿಯುವಂತೆ ಥಟ್ಟನೆ ಆ ಗದೆಯನ್ನು ತನ್ನೆಡಗೈಯಿಂದ ಹಿಡಿದುಹಾಕಿಬಿಟ್ಟನು. ಮತ್ತು ತನ್ನ ಗದೆಯನ್ನು ತೆಗೆದುಕೊಂಡು ಆ ಭೀಷ್ಮನ ಎದೆಗೆ ಸರಿಯಾಗಿ ಗುರಿಯಿಟ್ಟು ಹೊಡೆದನು.

ಗದಾಪ್ರಹಾರವ್ಯಥಿತೋ ಮೂರ್ಛಿತಃ ಪತಿತೋ ರಥಾತ್ ।
ಬಭೌ ಸೂರ್ಯೋ ಯಥಾಕಾಶಾದ್ಗಾಂಗೇಯೋ ಮೃಧಮಂಡಲೇ ॥ ೨೧ ॥

ಕೃಪಾಚಾರ್ಯೋಽಪಿ ತತ್ರೈವಾನಿರುದ್ಧಾಯ ಮಹಾತ್ಮನೇ ।
ಶಕ್ತಿಂ ಚಿಕ್ಷೇಪ ಸಹಸಾ ರುಷಾ ಪ್ರಸ್ಫುರಿತಾಧರಃ ॥ ೨೨ ॥

ದೀಪ್ತಿಮಾನ್ಕೃಷ್ಣಪುತ್ರಸ್ತು ಪಥಿ ಚಿಚ್ಛೇದ ತಾಂ ನೃಪ ।
ಖಡ್ಗೇನ ಶಿತಧಾರೇಣ ಕುವಾಕ್ಯೇನೇವ ಮಿತ್ರತಾಂ ॥ ೨೩ ॥

ದ್ರೋಣಾಚಾರ್ಯೋ ಮಹಾಬಾಹುರ್ಭಾನೂಪರಿ ರುಷಾನ್ವಿತಃ ।
ಚಿಕ್ಷೇಪ ಪಾರ್ವತಂ ಚಾಸ್ತ್ರಂ ಧನುಷ್ಟಂಕಾರಯನ್ಮುಹುಃ ॥ ೨೪ ॥

---

೨೧. ಆ ಗದಾಪ್ರಹಾರದಿಂದ ವ್ಯಥೆಗೀಡಾದ ಭೀಷ್ಮಾಚಾರ್ಯನು ಮೂರ್ಛೆ ಹೊಂದಿ ಸೂರ್ಯನು ಆಕಾಶದಿಂದ ಹೇಗೋ ಹಾಗೆ ತಾನು ಕುಳಿತಿದ್ದ ತೇರಿನಿಂದ ಕೆಳಗೆ ಬಿದ್ದುಬಿಟ್ಟನು.

೨೨. ಅಷ್ಟರೊಳಗೆ ಅಲ್ಲಿಗೆ ಬಂದ ಕೃಪಾಚಾರ್ಯನು ಮಹಾಕೋಪದಿಂದ ತನ್ನ ತುಟಿಗಳನ್ನು ನಡುಗಿಸುತ್ತಾ ಶಕ್ತ್ಯಾಯುಧವನ್ನು ತೆಗೆದುಕೊಂಡು ಆ ಅನಿರುದ್ಧನಿಗೆ ಗುರಿಯಿಟ್ಟು ವೇಗದಿಂದ ಬೀಸಿದನು.

೨೩. ಅದನ್ನು ಕಂಡು ಕೃಷ್ಣಪುತ್ರನಾದ ದೀಪ್ತಿಮಂತನು ಕ್ರೂರವಾದ ಅಲುಗುಳ್ಳ ತನ್ನ ಖಡ್ಗದಿಂದ ಆಡಬಾರದ ಮಾತನ್ನಾಡಿ ಮೈತ್ರಿಯನ್ನು ಮುರಿಯುವಂತೆ ನಡುದಾರಿಯಲ್ಲಿಯೇ ಕತ್ತರಿಸಿಬಿಟ್ಟನು.

೨೪. ಆಗ ಮಹಾಬಾಹುವಾದ ದ್ರೋಣಾಚಾರ್ಯನು ಯುದ್ಧರಂಗದ ಮತ್ತೊಂದು ಕಡೆ ಭಾನುಕುಮಾರನೊಂದಿಗೆ ಹೋರಾಡುತ್ತಾ ಮಹಾಕೋಪದಿಂದ ತನ್ನ ಧನುಸ್ಸಿನ ಹೆದೆಯನ್ನು ಟಂಕಾರನಾಡುತ್ತಾ ಪರ್ವತಾಸ್ತ್ರವನ್ನು ಹೂಡಿ ಅವನ ಮೇಲೆ ಪ್ರಯೋಗಿಸಿದನು

ಪತಂತಃ ಪರ್ವತಾ ವ್ಯೋಮ್ನಶ್ಚೂರ್ಣಯಂತೋ ದ್ವಿಷದ್ಬಲಂ ।
ತೇಷಾಂ ಪಾತೇನ ರಾಜೇಂದ್ರ ಹಾಹಾಕಾರೋ ಮಹಾನಭೂತ್ ॥ ೨೫ ॥

ತದಾ ಹರೇಃ ಸುತೋ ಭಾನುರ್ವಾಯವ್ಯಾಸ್ತ್ರಂ ಸಮಾದದೇ ।
ತದ್ವಾತೇನಾದ್ರಯಃ ಸರ್ವೇ ಉಡ್ಡೀತಾ ಹ್ಯಭವನ್ರಣಾತ್ ॥ ೨೬ ॥

ಬಾಹ್ಲೀಕಸ್ತು ತದಾ ಕ್ರುದ್ಧೋ ವಹ್ನ್ಯಸ್ತ್ರಂ ಸಂದಧೇ ತತಃ ।
ಭಸ್ಮೀಭೂತಂ ಬಲಂ ಜಾತಂ ವಹ್ನಿನೇವ ಮಹದ್ವನಂ ॥ ೨೭ ॥

ಪಾರ್ಜನ್ಯಮಾದದೇ ತತ್ರ ಸಾಂಬೋ ಜಾಂಬವತೀಸುತಃ ।
ತೇನ ಶಾಂತಿಂ ಗತೋ ವಹ್ನಿರ್ಜ್ಞಾನೇನೇವ ಹ್ಯಹಂಕೃತಿಃ ॥ ೨೮ ॥

೨೫. ರಾಜೇಂದ್ರ ! ಆಗ ಆ ಅಸ್ತ್ರದ ಪ್ರಭಾವದಿಂದ ಪರ್ವತಗಳು ಆಕಾಶದಿಂದ ಕೆಳಗೆ ಬೀಳುತ್ತಾ ಯದುಸೈನ್ಯವನ್ನು ನುಚ್ಚುನೂರು ಮಾಡುತ್ತಿದ್ದುವು. ಆಗ ಭಾರಿಯಾದ ಹಾಹಾಕಾರವೆದ್ದಿತು.

೨೬. ಆಗ ಕೃಷ್ಣಪುತ್ರನಾದ ಭಾನುವು ವಾಯುವ್ಯಾಸ್ತ್ರವನ್ನು ಸಂಧಾನಮಾಡಿ ಪ್ರಯೋಗಿಸಲು ಅದರಿಂದೆದ್ದ ಗಾಳಿಯಿಂದ ಆ ಪರ್ವತಗಳೆಲ್ಲವೂ ರಣರಂಗದಿಂದಾಚೆಗೆ ಹಾರಿಹೋದುವು.

೨೭. ಇನ್ನೊಂದು ಕಡೆ ಸಾಂಬನ ಜೊತೆಯಲ್ಲಿ ಯುದ್ಧಮಾಡುತ್ತಿದ್ದ ಬಾಹ್ಲೀಕನು ಕುಪಿತನಾಗಿ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು. ಅದರ ಪ್ರಭಾವದಿಂದ ಕಾಳ್ಗಿಚ್ಚಿನಿಂದ ಅರಣ್ಯವು ದಹಿಸಿಹೋಗುವಂತೆ ಯದುಸೇನೆಯೆಲ್ಲವೂ ಸುಟ್ಟು ಬೂದಿಯಾಗತೊಡಗಿತು.

೨೮. ಆಗ ಜಾಂಬವತೀಪುತ್ರನಾದ ಸಾಂಬನು ಪರ್ಜನ್ಯಾಸ್ತ್ರವನ್ನು ಅದಕ್ಕೆ ಪ್ರತಿಯಾಗಿ ಪ್ರಯೋಗಿಸಲು ಜ್ಞಾನದಿಂದ ಅಹಂಕಾರವಡಗಿ ಹೋಗುವಂತೆ ಆ ಬೆಂಕಿಯೆಲ್ಲವೂ ಕೂಡಲೇ ಶಮನವನ್ನು ಹೊಂದಿಬಿಟ್ಟಿತು.

ಕರ್ಣಸ್ತತೋ ಮಧುಂ ಹಿತ್ವಾ ಸಾಂಬೋಪರಿ ರುಷಾನ್ವಿತಃ ।
ಜಘಾನ ಬಾಣವಿಂಶತ್ಯಾ ಜಗರ್ಜ ಘನವದ್ಬಲೀ ॥ ೨೯ ॥

ತದ್ಬಾಣೈಃ ಸರಥೈಃ ಸಾಂಬೋ ಬಭ್ರಾಮ ಘಟಿಕಾದ್ವಯಂ ।
ಕ್ರೋಶಂ ಪುನಃ ಪ್ರಪತಿತಃ ಕಿಂಚಿದ್ವ್ಯಾಕುಲಮಾನಸಃ ॥ ೩೦ ॥

ಪುನರ್ಗದಾಂ ಸಮಾದಾಯ ರಥಂ ತ್ಯಕ್ತ್ವಾ ಸಮೇತ್ಯ ಸಃ ।
ತತಾಡ ಗದಯಾ ಕರ್ಣಂ ಸಾಂಬೋ ಜಾಂಬವತೀಸುತಃ ॥ ೩೧ ॥

ಗದಾಪ್ರಹಾರವ್ಯಥಿತಃ ಪತಿತೋ ಧರಣೀತಲೇ ।
ಮೂರ್ಚ್ಛಾಂ ಪ್ರಾಪ ರಣೇ ರಾಜನ್ಕರ್ಣೋ ವೀರೋ ಮಹಾಬಲಃ ॥ ೩೨ ॥

ಸಾಂಬೋಽಪಿ ಸ್ವಧನುರ್ನೀತ್ವಾ ರಥಮಾರುಹ್ಯ ವೇಗತಃ ।
ಶೂಲಂ ಜಘಾನ ವಿಂಶತ್ಯಾ ಸೋಮದತ್ತಂ ಚ ಪಂಚಭಿಃ ॥ ೩೩ ॥

---

೨೯. ಆಗ ಕರ್ಣನು ಕುಪಿತನಾಗಿ ತಾನು ಹೋರಾಡುತ್ತಿದ್ದ ಮಧುವನ್ನು ಬಿಟ್ಟು ಸಾಂಬನ ಮೇಲೇರಿ ಬಂದು ಇಪ್ಪತ್ತು ಬಾಣಗಳಿಂದ ಅವನನ್ನು ಪ್ರಹರಿಸಿ ಒಂದು ಭಾರಿ ಮೇಘದಂತೆ ಘರ್ಜಿಸಿದನು.

೩೦. ಆ ಬಾಣಗಳಿಂದ ಸಾಂಬನು ತಾನು ಕುಳಿತಿದ್ದ ರಥದೊಂದಿಗೆ ಎರಡು ಗಳಿಗೆಗಳ ಕಾಲ ಗರಗರನೆ ಸುತ್ತಾಡಿಸಲ್ಪಟ್ಟು ಒಂದು ಕ್ರೋಶದಷ್ಟು ದೂರಕ್ಕೆ ಎಸೆಯಲ್ಪಟ್ಟಿತು. ಅದರಿಂದ ಅವನು ಸ್ವಲ್ಪಮಟ್ಟಿಗೆ ಕಳವಳಕ್ಕೀಡಾದರೂ,

೩೧. ಕೂಡಲೇ ಆ ತೇರಿನಿಂದ ಕೆಳಕ್ಕೆ ಧುಮುಕಿ ಗದೆಯೊಂದನ್ನು ತೆಗೆದು ಕೊಂಡು ಸರ್ರನೆ ಕರ್ಣನ ಬಳಿಗೆ ಬಂದು ಅವನನ್ನು ಅಪ್ಪಳಿಸಿ ಹೊಡೆದನು.

೩೨. ರಾಜೇಂದ್ರ! ಆ ಪ್ರಹಾರದಿಂದ ವೀರಾಗ್ರಣಿಯೂ, ಮಹಾಬಲ ಶಾಲಿಯೂ ಆದ ಕರ್ಣನು ಬಹಳ ನೊಂದು ಮೂರ್ಛಾಕ್ರಾಂತನಾಗಿ ನೆಲದ ಮೇಲೆ ಬಿದ್ದುಬಿಟ್ಟನು.

೩೩. ಅನಂತರ ಆ ಸಾಂಬನು ಧನುಸ್ಸನ್ನು ತೆಗೆದುಕೊಂಡು ವೇಗನೆ ರಥವೊಂದನ್ನು ಹತ್ತಿ ಕುಳಿತು ಶೂಲನನ್ನು ಇಪ್ಪತ್ತು ಬಾಣಗಳಿಂದಲೂ, ಸೋಮದತ್ತ ನನ್ನು ಐದು ಬಾಣಗಳಿಂದಲೂ,

ದ್ರೌಣಿಂ ಚ ದಶಭಿರ್ಬಾಣೈರ್ಧೌಮ್ಯಂ ಷೋಡಶಭಿಸ್ತಥಾ ।
ಲಕ್ಷ್ಮಣಂ ದಶಭಿಸ್ತತ್ರ ಶಕುನಿಂ ಪಂಚಭಿಸ್ತಥಾ || ೩೪ ||

ದುಃಶಾಸನಂ ಚ ವಿಂಶತ್ಯಾ ವಿಂಶತ್ಯಾ ಸಂಜಯಂ ಪೃಥಕ್ ।
ಭೂರಿಂ ಬಾಣಶತೈ ರಾಜನ್ಯಕ್ಷಕೇತುಂ ಶತೈಃ ಶಿತೈಃ || ೩೫ ||

ಬಾಣೈರ್ಜಘಾನ ಸಮರೇ ಜಗರ್ಜ ಘನವದ್ಬಲೀ ।
ದಶಭಿರ್ದಶಭಿರ್ನೇತ್ರ್ನಾನೇಕೈಕೇನ ಗಜಾನ್ಹಯಾನ್ || ೩೬ ||

ಪಂಚಭಿಃ ಪಂಚಭಿರ್ವೀರಾನ್ಬಾಣೈಃ ಸಾಂಬಸ್ತತಾಡ ಹ ।
ವೀಕ್ಷ್ಯ ಜಾಂಬವತೀಸೂನೋಃ ಸಾಂಬಸ್ಯ ಕರಲಾಘವಂ || ೩೭ ||

ಸ್ವೇ ಪರೇ ಸೈನಿಕಾಃ ಸರ್ವೇ ವಿಸ್ಮಯಂ ಪರಮಂ ಗತಾಃ ।
ತದಾ ಭೀಷ್ಮಃ ಸಮುತ್ಥಾಯ ಗೃಹೀತ್ವಾ ಧನುರುತ್ತಮಂ || ೩೮ ||

---

೩೪. ಅಶ್ವತ್ಥಾಮನನ್ನು ಹತ್ತು ಬಾಣಗಳಿಂದಲೂ, ಧೌಮ್ಯನನ್ನು ಹದಿನಾರು ಬಾಣಗಳಿಂದಲೂ, ಲಕ್ಷ್ಮಣನನ್ನು ಹತ್ತು ಬಾಣಗಳಿಂದಲೂ, ಶಕುನಿಯನ್ನು ಐದು ಬಾಣಗಳಿಂದಲೂ.

೩೫. ದುಃಶಾಸನನನ್ನು ಇಪ್ಪತ್ತು ಬಾಣಗಳಿಂದಲೂ, ಸಂಜಯನನ್ನು ಇಪ್ಪತ್ತು ಬಾಣಗಳಿಂದಲೂ, ಭೂರಿಶ್ರವಸ್ಸನ್ನೂ ಯಕ್ಷಕೇತುವನ್ನೂ ನೂರು ನೂರು ಬಾಣಗಳಿಂದಲೂ, ಬಲವಾಗಿ ಪ್ರಹರಿಸಿ ಮೇಘದಂತೆ ಬಲವಾಗಿ ಸಿಂಹನಾದ ಮಾಡಿದನು. (ಗರ್ಜಿಸಿದನು) ಅನಂತರ ಆ ಸಾಂಬನು.

೩೬–೩೮. ಹತ್ತು ಹತ್ತು ಬಾಣಗಳಿಂದ ನಾಯಕರುಗಳನ್ನೂ, ಒಂದೊಂದು ಬಾಣಗಳಿಂದ ಆನೆಗಳನ್ನೂ, ಕುದುರೆಗಳನ್ನೂ, ಐದೈದು ಬಾಣಗಳಿಂದ ವೀರರಾದ ಯೋಧರನ್ನೂ ಪ್ರಹರಿಸುತ್ತಾ ಬಂದನು. ಈ ರೀತಿಯಾಗಿ ಜಾಂಬವತೀ ಪುತ್ರನಾದ ಆ ಸಾಂಬನ ಕೈಚಳಕವನ್ನು ಕಂಡು ಯದುಸೇನೆಯವರೂ, ಶತ್ರುಸೇನೆಯವರೂ ಎಲ್ಲರೂ ಅತಿಶಯವಾಗಿ ಆಶ್ಚರ್ಯವನ್ನು ಹೊಂದಿದರು.

ಚಿಚ್ಛೇದ ದಶಭಿರ್ಬಾಣೈಃ ಸಾಂಬಕೋದಂಡಮುತ್ತಮಂ ।
ಭೀಷ್ಮೋ ಮಹಾಬಲೋ ವೀರೋ ದ್ರೋಣಾಚಾರ್ಯಶ್ಚ ಸಾಯಕೈಃ ॥೩೯॥

ಕರ್ಣಃ ಸದ್ಯೋ ಯದುಬಲಂ ಜಘ್ನುರ್ಜ್ಞಾನಂ ಯಥಾ ಗುಣಾಃ ।
ದುರ್ಯೋಧನಃ ಪುನರ್ಯೋದ್ಧುಂ ರಥಮಾರುಹ್ಯ ಮಾನದಃ ॥ ೪೦ ॥

ಅಕ್ಷೌಹಿಣೀಭಿರ್ದಶಭಿರ್ನಾಗಯುಕ್ತಾ ಯಯೌ ಮೃಧೇ । ॥ ೪೧ ॥

ದೇವೌ ಪುರಾಣೌ ಪುರುಷೌ ತದಾವಿ-
ರ್ಬಭೂವತುರ್ಮೈಥಿಲ ರಾಮಕೃಷ್ಣೌ ।
ಸುಪರ್ಣತಾಲಧ್ವಜಶಾಲಿಯಾನೌ
ಪ್ರದ್ಯೋತಯಂತೌ ಪರಿತೋ ದಿಶಸ್ತಾ ॥ ೪೨ ॥

---

೩೯. ಆಗ ಮೂರ್ಛಿತನಾಗಿ ಬಿದ್ದಿದ್ದ ಭೀಷ್ಮನು ಮೇಲಕ್ಕೆದ್ದು ತನ್ನ ಉತ್ತಮವಾದ ಧನುಸ್ಸನ್ನು ತೆಗೆದುಕೊಂಡು ಹತ್ತು ಬಾಣಗಳನ್ನು ಬಿಟ್ಟು ಆ ಸಾಂಬನ ಧನುಸ್ಸನ್ನು ಕತ್ತರಿಸಿಬಿಟ್ಟನು.

೪೦-೪೧. ಆಗ ದ್ರೋಣಾಚಾರ್ಯನೂ, ಕರ್ಣನೂ, ಆ ಯದುಬಲವನ್ನು ತಾಮಸಗುಣಗಳು ಜ್ಞಾನವನ್ನು ಹೇಗೋ ಹಾಗೆ ನಾಶಮಾಡುತ್ತಾ ಬಂದರು. ಅಷ್ಟು ಹೊತ್ತಿಗೆ ದುರ್ಯೋಧನನೂ ಸಹ ಮತ್ತೆ ಯುದ್ಧಮಾಡಬೇಕೆಂದು ಹತ್ತು ಅಕ್ಷೌಹಿಣೀ ಸೇನೆಗಳೊಂದಿಗೆ ರಥವೇರಿ ಆ ರಣರಂಗಕ್ಕೆ ಬಂದನು.

೪೨. ರಾಜೇಂದ್ರ! ಆ ಸಮಯಕ್ಕೆ ಸರಿಯಾಗಿ ಪುರಾಣಪುರುಷನಾದ ಬಲದೇವನೂ, ಕೃಷ್ಣನೂ ತಮ್ಮ ತೇಜಸ್ಸಿನಿಂದ ಸುತ್ತಮುತ್ತಲೂ ಇರುವ ಪ್ರದೇಶಗಳನ್ನು ಬೆಳಗಿಸುತ್ತಾ ತಾಲಧ್ವಜದಿಂದಲೂ, ಗರುಡಧ್ವಜದಿಂದಲೂ ಶೋಭಿಸುತ್ತಿರುವ ತಮ್ಮ ತಮ್ಮ ರಥಗಳನ್ನೇರಿ ಅಲ್ಲಿಗೆ ಬಂದರು.

ತದಾ ಜಯಾರಾವಸಮಾಕುಲಾಃ ಸುರಾ
ಗಂಧರ್ವಮುಖ್ಯಾಶ್ಚ ಜಗುರ್ಮನೋಹರಂ ।
ಸುರಾನಕಾದುಂದುಭಯೋ ವಿನೇದುಃ
ಶ್ರೀಲಾಜಪುಷ್ಪೈರ್ವವೃಷುಃ ಸುರಸ್ತ್ರಿಯಃ ॥ ೪೩ ॥

ತದೈವ ನೇಮುರ್ಯದವಃ ಪರೇಶ್ವರೌ
ದುರ್ಯೋಧನಾದ್ಯಾಃ ಕುರವಸ್ತು ಸರ್ವತಃ ।
ನಿಧಾಯ ಶಸ್ತ್ರಾಣಿ ದದುರ್ಬಲಿಂ ಪರಂ
ಸರ್ವೇ ಪ್ರಸನ್ನಾಃ ಕೃತಹಸ್ತಸಂಪುಟಾಃ ॥ ೪೪ ॥

ಪ್ರದ್ಯುಮ್ನಮುಖ್ಯಾನ್ಸ್ವಸುತಾನ್ಮದೋದ್ಧತಾ-
ನ್ನಿರ್ಭರ್ತ್ಸ್ಯ ವಾಗ್ಭಿಃ ಪರಮೇಶ್ವರೋ ಹರಿಃ ।
ಪ್ರಣಮ್ಯ ದೇವವ್ರತಮುಖ್ಯಕೌರವಾ-
ನ್ಸಮೇತ್ಯ ದುರ್ಯೋಧನಮೂಚತುಃ ಪರೌ ॥ ೪೫ ॥

---

೪೩. ಆಗ ಅಲ್ಲಿ ನೆರೆದಿದ್ದ ದೇವತೆಗಳೂ, ಗಂಧರ್ವರೂ ಜಯ ಜಯ ಧ್ವನಿಯನ್ನು ಮಾಡುತ್ತಾ ಮಧುರವಾಗಿ ಗಾನವನ್ನು ಮಾಡಿದರು. ದೇವತೆಗಳ ದುಂದುಭಿಗಳೂ, ಆನಕ ವಾದ್ಯಗಳೂ ಘೋರನೆ ಮೊಳಗಿದುವು. ದೇವತಾಸ್ತ್ರೀಯರು ಮಂಗಳಸೂಚಕವಾಗಿ (ಲಾಜ) ಅರಳು ಸಮೇತವಾದ ಪುಷ್ಪವರ್ಷವನ್ನು ಸುರಿಸಿದರು.

೪೪. ಪರಮಪುರುಷರೆನಿಸಿದ ಆ ಈಶ್ವರರನ್ನು ಕಾಣುತ್ತಲೇ ಪ್ರದ್ಯುಮ್ನಾದಿ ಯದುವೀರರೂ, ದುರ್ಯೋಧನಾದಿ ಕುರುವೀರರೂ ಝಗ್ಗನೆದ್ದು ನಮಸ್ಕರಿಸಿದರು. ಮತ್ತು ಅವರೆಲ್ಲರೂ ತಮ್ಮ ತಮ್ಮಲ್ಲಿದ್ದ ದ್ವೇಷಭಾವನೆಯನ್ನು ತೊರೆದು ಶಾಂತ ಮನಸ್ಸಿನಿಂದ ತಮ್ಮ ಶಸ್ತ್ರಗಳನ್ನು ಕೆಳಗಿಟ್ಟು ಕೈಗಳನ್ನು ಮುಗಿದುಕೊಂಡು ಕಪ್ಪ ಕಾಣಿಕೆಗಳನ್ನು ಒಪ್ಪಿಸಿದರು.

೪೫. ಆಗ ಪರಮಪ್ರಭುವಾದ ಆ ಶ್ರೀಹರಿಯು ಪ್ರದ್ಯುಮ್ನನೇ ಮೊದಲಾದ ವೀರ್ಯಬಲದಿಂದ ಕೊಬ್ಬಿದ್ದ ತನ್ನ ಮಕ್ಕಳನ್ನು ಚೆನ್ನಾಗಿ ಗದರಿಸಿ, ಭೀಷ್ಮಾಚಾರ್ಯರೇ ಮೊದಲಾದ ಕುರುವೀರರನ್ನು ನಮಸ್ಕರಿಸಿ, ದುರ್ಯೋಧನನ ಬಳಿಗೆ ಬಂದನು. ಆಗ ಬಲರಾಮನೂ ಕೃಷ್ಣನೂ ದುರ್ಯೋಧನನನ್ನು ಕುರಿತು-

|| ಶ್ರೀರಾಮಕೃಷ್ಣಾವೂಚತುಃ ||

ರಾಜನ್ಯದೇಭಿಃ ಕಿಲ ಬಾಲಬುದ್ಧಿಭಿ-
ಸ್ತತ್ಕ್ಷಮ್ಯತಾಂ ಮಾ ಭವ ದುರ್ಮನಾಃ ಸ್ವತಃ |
ಯದಾ ತು ಕಿಂಚಿತ್ಪುರುಷಂ ಪ್ರಕೀರ್ತಿತಂ
ಪ್ರಕೀರ್ತಿತಾಂ ನೌ ಭವತಾಂ ನೃಪೇಶ್ವರ || ೪೬ ||

ಮಾಭೂತ್ಕುರೂಣಾಂ ಭುವಿ ಯಾದವಾನಾಂ
ಕದಾಪಿ ಕಿಂಚಿತ್ಕಲಿರೇವ ರಾಜನ್ |
ಸಂಬಂಧಿನೋ ಜ್ಞಾತಯ ಏವ ಸರ್ವೇ
ನಿಚೋಲವಸ್ತ್ರಾಂತರವತ್ತ್ವಯಾರ್ಥಾಃ || ೪೭ ||

|| ಶ್ರೀ ನಾರದ ಉವಾಚ ||

ಪೂಜಿತೌ ಕುರುಭಿಃ ಶಶ್ವದ್ರಾಮಕೃಷ್ಣೌ ಸುರೇಶ್ವರೌ |
ಪ್ರದ್ಯುಮ್ನಾದ್ಯೈಃ ಸಯದುಭೀ ರೇಜತುರ್ಮೈಥಿಲೇಶ್ವರ || ೪೮ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಕೌರವಯುದ್ಧವರ್ಣನಂ ನಾಮೈಕವಿಂಶೋಽಧ್ಯಾಯಃ

---

೪೬. ಓ ಕುರುರಾಜಾ! ಇನ್ನೂ ಹುಡುಗಬುದ್ಧಿ ಬಿಡದೆ ಇರುವ ಈ ಪ್ರದ್ಯುಮ್ನಾದಿಗಳು ಮಾಡಿದ ಅಪಚಾರವನ್ನು ಕ್ಷಮಿಸು. ಆದುದರಿಂದ ನೀನು ಮನಸ್ಸಿಗೆ ಖೇದವನ್ನು ಮಾಡಿಕೊಳ್ಳಬಾರದು. ಅವರೇನಾದರೂ ನಿಮ್ಮ ವಿಷಯದಲ್ಲಿ ಕಠಿಣವಾಗಿ ನುಡಿದಿದ್ದಲ್ಲಿ ಅದು ನಮಗೇ ಅನ್ವಯಿಸುವುದು.

೪೭. ಓ ರಾಜೇಂದ್ರ! ಈ ಯಾದವರಿಗೂ ಮತ್ತು ಕೌರವರಿಗೂ ಯುದ್ಧವನ್ನುವುದು ಎಂದೆಂದಿಗೂ ಜರುಗದಿಯೇ ಇರಲಿ. ಯಾವರೀತಿ ನಿಚೋಲವೂ (ಬಟ್ಟೆ) ವಸ್ತ್ರವೂ ಹೆಸರಿನಲ್ಲಿ ಬೇರೆಯಾದರೂ ಸ್ವರೂಪತಃ ಸಮಾನವಾಗಿ ಒಂದೇ ಎನಿಸಿರುವುದೋ ಅದೇ ರೀತಿ ನಾವೆಲ್ಲರೂ ಸಂಬಂಧಿಗಳಾಗಿ ಸ್ವಜನರೆನಿಸಿರುವೆವು" ಎಂದರು.

೪೮. ಓ ಬಹುಲಾಶ್ವನರೇಂದ್ರ! ಈ ರೀತಿ ಬಲದೇವನೂ, ಶ್ರೀಕೃಷ್ಣನೂ ಅವರನ್ನು ಸಂತೈಸಿದನಂತರ ಆ ಕೌರವರು ಅವರಿಬ್ಬರನ್ನೂ ಮತ್ತು ಪ್ರದ್ಯುಮ್ನಾದಿ ಯಾದವ ವೀರರನ್ನೂ ಬಹುವಿಧವಾಗಿ ಸತ್ಕರಿಸಿದರು.

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀನಾರದಬಹುಲಾಶ್ವ ಸಂವಾದದಲ್ಲಿ ಕೌರವಯುದ್ಧ ವರ್ಣನೆಯೆಂಬ ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ದ್ವಾವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ದುರ್ಯೋಧನಂ ಶಾಂತಯಿತ್ವಾ ಸಾನುಜೈಃ ಕುರುಭಿಃ ಸಹ ।
ಜಗ್ಮತುಃ ಪಾಂಡವಾನ್ದ್ರಷ್ಟುಮಿಂದ್ರಪ್ರಸ್ಥಂ ಯದೂತ್ತಮೌ ॥ ೧ ॥

ಇಂದ್ರಪ್ರಸ್ಥಾತ್ತತೋ ರಾಜಾಜಾತಶತ್ರುರ್ಯುಧಿಷ್ಠಿರಃ ।
ಭ್ರಾತೃಭಿಃ ಸ್ವಜನೈಃ ಸಾರ್ಧಂ ನೇತುಂ ಕೃಷ್ಣಂ ಸಮಾಯಯೌ ॥ ೨ ॥

ಇಪ್ಪತ್ತೆರಡನೆಯ ಅಧ್ಯಾಯವು

೧. ನಾರದಮಹರ್ಷಿಯು ಹೇಳತೊಡಗಿದನು :—ಈ ರೀತಿಯಾಗಿ ಯದು ಶ್ರೇಷ್ಠರಾದ ಆ ಬಲರಾಮ ಕೃಷ್ಣರಿಬ್ಬರೂ ಸೋದರ ಸಮೇತನಾದ ಆ ದುರ್ಯೋಧನ ನನ್ನು ಸಮಾಧಾನಗೊಳಿಸಿ, ಅಲ್ಲಿಂದ ಪಾಂಡವರನ್ನು ನೋಡಿಕೊಂಡು ಬರಲು ಇಂದ್ರಪ್ರಸ್ಥಕ್ಕೆ ತೆರಳಿದರು.

೨. ಅತ್ತಲಾಗಿ ಇಂದ್ರಪ್ರಸ್ಥದಿಂದ ಅಜಾತಶತ್ರುವೆಂದೆನಿಸಿದ ಯುಧಿಷ್ಠಿರನು ಶ್ರೀಕೃಷ್ಣನನ್ನು ಕರೆದುಕೊಂಡು ಹೋಗಲು ತನ್ನ ಸಹೋದರರೊಡನೆಯೂ, ತನಗೆ ಬೇಕಾದ ಆಪ್ತಜನರೊಡನೆಯೂ ಕೂಡಿ ಬರುತ್ತಿದ್ದನು.

ಶಂಖದುಂದುಭಿನಾದೇನ ಬ್ರಹ್ಮಘೋಷೇಣ ವೇಣುಭಿಃ ।
ಪುಷ್ಪವರ್ಷಂ ಪ್ರಕುರ್ವದ್ಭಿರಿಂದ್ರಪ್ರಸ್ಥನಿವಾಸಿಭಿಃ ॥
ರಾಮಕೃಷ್ಣೌ ಪರಿಷ್ವಜ್ಯ ದೋರ್ಭ್ಯಾಂ ರಾಜಾ ಯುಧಿಷ್ಠಿರಃ ॥ ೩ ॥

ಪರಮಾಂ ನಿರ್ವೃತಿಂ ಲೇಭೇ ಯೋಗೀವಾನಂದಸಂಪ್ಲುತಃ ।
ಪ್ರದ್ಯುಮ್ನಾದ್ಯಾ ಹರಿಸುತಾಃ ಪ್ರಣೇಮುಃ ಶ್ರೀಯುಧಿಷ್ಠಿರಂ ॥ ೪ ॥

ಯುಧಿಷ್ಠಿರೋಽನುಜಗ್ರಾಹ ಕರಾಭ್ಯಾಂ ತಾನ್ಕೃತಾಶಿಷಃ ।
ಅರ್ಜುನಂ ಭೀಮಸೇನಂ ಚ ಪರಿರಭ್ಯ ಹರಿಃ ಸ್ವಯಂ ॥ ೫ ॥

ಪಪ್ರಚ್ಛ ಕುಶಲಂ ತೇಷಾಂ ಯಮಾಭ್ಯಾಂ ಚಾಭಿವಂದಿತಃ ।
ಪರಿಪೂರ್ಣತಮೌ ಸಾಕ್ಷಾಚ್ಛ್ರೀಕೃಷ್ಣೌ ಚ ಸ್ವಯಂ ಹರೀ ॥ ೬ ॥

೩–೪. ಆಗ ಆತನ ಜೊತೆಯಲ್ಲಿ ಬರುತ್ತಿದ್ದ ಇಂದ್ರಪ್ರಸ್ಥನಿವಾಸಿಗಳು ಶಂಖಗಳನ್ನು ಊದುತ್ತಲೂ, ಭೇರಿಗಳನ್ನು ಬಡಿಯುತ್ತಲೂ, ಕೊಳಲನ್ನು ನುಡಿಸುತ್ತಲೂ, ವೇದಮಂತ್ರಗಳನ್ನು ಉಚ್ಚರಿಸುತ್ತಲೂ ಹೂವಿನ ಮಳೆಯನ್ನು ಕರೆಯುತ್ತಿದ್ದರು. ಆಗ ಇಂದ್ರಪ್ರಸ್ಥದ ಪ್ರಭುವಾದ ಯುಧಿಷ್ಠಿರನು ಬಲರಾಮನನ್ನೂ, ಶ್ರೀಕೃಷ್ಣನನ್ನೂ ತನ್ನೆರಡು ತೋಳುಗಳನ್ನು ನೀಡಿ ಅಪ್ಪಿಕೊಂಡು ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದ ಯೋಗಿಯಂತೆ ಅತಿಶಯವಾದ ಸಂತೋಷವನ್ನು ಹೊಂದಿದನು. ಅನಂತರ ಆ ಯುಧಿಷ್ಠಿರನನ್ನು ಕಿರಿಯರಾದ ಪ್ರದ್ಯುಮ್ನಾದಿ ಶ್ರೀಕೃಷ್ಣಪುತ್ರರು ನಮಸ್ಕರಿಸಿದರು.

೫. ಆಗ ಯುಧಿಷ್ಠಿರನು ಅವರಿಗೆ ಆಶೀರ್ವಾದಗಳನ್ನು ಮಾಡಿ ತನ್ನೆರಡು ಕೈಗಳಿಂದ ಎತ್ತಿ ಹಿಡಿದು ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದನು. ಇತ್ತಲಾಗಿ ಶ್ರೀಕೃಷ್ಣನು ತಾನಾಗಿ ಭೀಮಸೇನನನ್ನೂ, ಅರ್ಜುನನನ್ನೂ ಪ್ರೀತಿಯಿಂದ ಆಲಿಂಗಿಸಿ ತನಗೆ ಯಮಳರಾದ ನಕುಲಸಹದೇವರಿಂದ ಮಾಡಲ್ಪಟ್ಟ ನಮಸ್ಕಾರಗಳನ್ನು ಕೈಗೊಂಡು ಅವರೆಲ್ಲರ ಕುಶಲವನ್ನು ವಿಚಾರಿಸಿದನು.

೬. ಓ ರಾಜೇಂದ್ರ ! ಬಲರಾಮಕೃಷ್ಣರು ಮತ್ತಾರೂ ಅಲ್ಲ. ಅಸಂಖ್ಯಾತವಾದ ಬ್ರಹ್ಮಾಂಡಗಳಿಗೆಲ್ಲಾ ಅಧಿಪತಿಗಳೆನಿಸಿದವರು. ಸಾಕ್ಷಾತ್ ಶ್ರೀಹರಿಯ ಪರಿಪೂರ್ಣ ಸ್ವರೂಪರಾದವರು. ಇಂಥಾ ಮಹಾಮಹಿಮರು ತಮ್ಮ ಭಕ್ತನಾದ ಯುಧಿಷ್ಠಿರನ ಬಳಿಗೆ ಬಂದು ಆತನಿಂದ ಸಂಪೂಜಿತರಾದರು.

ಅಸಂಖ್ಯಬ್ರಹ್ಮಾಂಡಪತೀ ಹರಿದಾಸೇನ ಪೂಜಿತೌ ।
ಪ್ರಸ್ಥಾಪ್ಯ ಯದುಮುಖ್ಯಾಂಶ್ಚ ಪ್ರದ್ಯುಮ್ನಾದೀನ್ಸಸೈನಿಕಾನ್ ॥ ೭ ॥

ಸಮಗ್ರಾಂ ಜಗತೀಂ ಜೇತುಂ ಚಾಜ್ಞಾಂ ದತ್ವಾ ವಿಧಾನತಃ ।
ಮಿಲಿತ್ವಾ ಸಾನುಜಂ ಧರ್ಮಂ ಸರ್ವೇಶೌ ಭಕ್ತವತ್ಸಲೌ ॥ ೮ ॥

ದ್ವಾರಕಾಂ ಜಗ್ಮತೂ ರಾಜನ್ಗೌರಶ್ಯಾಮೌ ಮನೋಹರೌ ।
ಇತ್ಥಂ ಶ್ರೀಕೃಷ್ಣಚರಿತಂ ಮಯಾ ತೇ ಕಥಿತಂ ನೃಪ ॥ ೯ ॥

ಚತುಷ್ಪದಾರ್ಥದಂ ನೄಣಾಂ ಕಿಂ ಭೂಯಃ ಶ್ರೋತುಮಿಚ್ಛಸಿ ।
॥ ಬಹುಲಾಶ್ವ ಉವಾಚ ॥
ಕುಶಸ್ಥಲೀಂ ಗತೇ ಕೃಷ್ಣೇ ಸಬಲೇ ಪುರುಷೋತ್ತಮೇ ॥ ೧೦ ॥

ತತಶ್ಚಕಾರ ಕಿಂ ಸಾಕ್ಷಾತ್ಪ್ರದ್ಯುಮ್ನೋ ಭಗವಾನ್ಹರಿಃ ।
ಅದ್ಭುತಂ ತಸ್ಯ ಚರಿತಂ ಶ್ರವಣೀಯಂ ಮನೋಹರಂ ॥ ೧೧ ॥

೭–೯. ಅನಂತರ ಭಕ್ತರಲ್ಲಿ ವಾತ್ಸಲ್ಯವುಳ್ಳವರೂ, ಸರ್ವೇಶ್ವರರೂ ಆದ ಆ ರಾಮಕೃಷ್ಣರು ಸಮಸ್ತವಾದ ಭೂಮಂಡಲವನ್ನು ಗೆದ್ದು ಬರುವಂತೆ ಯದುಮುಖ್ಯರಾದ ಪ್ರದ್ಯುಮ್ನಾದಿಗಳಿಗೆ ಅಪ್ಪಣೆಯಿತ್ತು, ಮತ್ತೊಮ್ಮೆ ಅನುಜಸಮೇತನಾದ ಧರ್ಮರಾಜನನ್ನು ಸಂಧಿಸಿ ಅವನನ್ನು ಬೀಳ್ಕೊಂಡು ಅಲ್ಲಿಂದ ಗೌರ ಮತ್ತು ಶ್ಯಾಮಲವರ್ಣದಿಂದ ಒಪ್ಪುವ ಅಣ್ಣತಮ್ಮಂದಿರು ದ್ವಾರಕೆಗೆ ಪ್ರಯಾಣ ಬೆಳಸಿದರು. ರಾಜೇಂದ್ರ ! ಇಂತು ಮಾನವರಿಗೆ ಚತುರ್ವಿಧವಾದ ಪುರುಷಾರ್ಥಗಳನ್ನೂ ಗಳಿಸಿಕೊಡುವಂತಹ ಪಾವನವಾದ ಶ್ರೀಕೃಷ್ಣನ ಚರಿತ್ರವನ್ನು ನಿನಗೆ ತಿಳಿಸಿದೆನು. ಮತ್ತೆ ಇನ್ನೇನು ಕೇಳಬೇಕೆಂದಿರುವೆ ? ಎಂದು ನಾರದಮಹರ್ಷಿಯು ನುಡಿಯಲು,

೧೦–೧೧. ಆ ಬಹುಲಾಶ್ವರಾಜೇಂದ್ರನು ಆತನನ್ನು ಕುರಿತು ಓ ಮಹರ್ಷೀ ! ಶ್ರೀಕೃಷ್ಣನು ಬಲರಾಮನೊಂದಿಗೆ ದ್ವಾರಕೆಗೆ ತೆರಳಿದಮೇಲೆ ಸಾಕ್ಷಾತ್ ಶ್ರೀಹರಿಯ ಸ್ವರೂಪನಾದ ಆ ಪ್ರದ್ಯುಮ್ನನು ಏನುಮಾಡಿದನು ? ಆತನ ಚರಿತ್ರವು ಅತ್ಯಾಶ್ಚರ್ಯಕರವಾದುದು. ಮತ್ತು ಅದು ಮುಕ್ತರಾದಂಥವರಿಗೂ ಸಹ ಕೇಳಬೇಕೆಂಬ ಆಸೆಯುಂಟಾಗುವಷ್ಟುಮಟ್ಟಿಗೆ ಮನೋಹರವಾಗಿರುವುದು. ಹೀಗಿರುವಲ್ಲಿ ಆ ಚರಿತ್ರವನ್ನು ಕೇಳಿ ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಳ್ಳ ಭಕ್ತರಾದವರಿಗೆ ಇನ್ನೆಷ್ಟು ರಮಣೀಯವಾಗಿರುವುದೆಂಬುದನ್ನು ನಾನು ಮತ್ತೆ ಹೇಳಬೇಕೆ ?

ಮುಕ್ತಾನಾಮಪಿ ಭಕ್ತಾನಾಂ ಜಿಜ್ಞಾಸೂನಾಂ ಪುನಃ ಕಿಮು ।
ಅರ್ಥಾರ್ಥಿನಾಮರ್ಥದಂ ಸದಾರ್ತಾನಾಮಾರ್ತಿನಾಶನಂ ॥ ೧೨ ॥

ಚತುರ್ವಿಧಾನಾಂ ಜೀವಾನಾಂ ಸರ್ವೇಷಾಂ ಪಾಪನಾಶನಂ ।
ಕಥಂ ದಿಗ್ವಿಜಯಂ ಕೃತ್ವಾ ದಿಗ್ಜಯಾರ್ಥೀ ಹರೇಃ ಸುತಃ ॥ ೧೩ ॥

ಆಜಗಾಮ ಪುನಃ ಸೈನ್ಯೈರೇತನ್ಮೇ ವದ ತತ್ತ್ವತಃ ।
ದೇವರ್ಷೇ ತ್ವಂ ಬ್ರಹ್ಮಸುತೋ ಭಗವಾನ್ಸರ್ವದರ್ಶನಃ ।
ಶ್ರೀಕೃಷ್ಣಸ್ಯ ಮನಃಪೂರ್ವಂ ತಸ್ಮೈ ತೇ ಹರಯೇ ನಮಃ ॥ ೧೪ ॥

॥ ಶ್ರೀ ನಾರದ ಉವಾಚ ॥

ಸಾಧು ಪೃಷ್ಟಂ ತ್ವಯಾ ರಾಜನ್ಧನ್ಯಸ್ತ್ವಂ ತತ್ಪ್ರಭಾವವಿತ್ ।
ಶ್ರೀಕೃಷ್ಣಚರಿತಂ ಶ್ರೋತುಂ ಪಾತ್ರಂ ತ್ವಮಸಿ ಭೂತಲೇ ॥ ೧೫ ॥

---

೧೨. ಆ ಚರಿತ್ರವು ಅರ್ಥಾಪೇಕ್ಷಿಗಳಿಗೆ ಆಯಾ ಅರ್ಥವು ಸಿದ್ಧಿಸುವಂತೆ ಮಾಡುವುದು. ಮತ್ತು ದುಃಖಿತರಾದವರಿಗೆ ಅವರ ದುಃಖಗಳನ್ನು ಪರಿಹರಿಸುವುದು. ನಾಲ್ಕುಬಗೆಯಾದ ಜೀವರಿಗೆಲ್ಲರಿಗೂ ಅವರವರ ಪಾಪಗಳನ್ನು ನಾಶಮಾಡುವುದು.

೧೩-೧೪. ದಿಗ್ವಿಜಯ ಸಲುವಾಗಿ ಹೊರಟಿದ್ದ ಆ ಕೃಷ್ಣಕುಮಾರನು ಹೇಗೆ ತನ್ನ ಉದ್ದೇಶವನ್ನು ಸಾಧಿಸಿ ಸೈನ್ಯಗಳೊಂದಿಗೆ ಹಿಂದಿರುಗಿದನು? ಓ ದೇವರ್ಷಿ! ಇವನ್ನು ನನಗೆ ಯಥಾರ್ಥವಾಗಿ ತಿಳಿಸಬೇಕು. ಹೇ ಭಗವನ್! ನೀನು ಸಾಕ್ಷಾತ್ ಬ್ರಹ್ಮನ ಮಗನು. ನೀನು ಎಲ್ಲವನ್ನೂ ಚೆನ್ನಾಗಿ ಬಲ್ಲವನು. ಶ್ರೀಕೃಷ್ಣನ ಮನಸ್ಸೇ ನೀನೆನಿಸಿಸಿರುವೆ? ಓ ನಾರದಾ! ಶ್ರೀಹರಿ ಸ್ವರೂಪನಾದ ನಿನಗೆ ನಮಸ್ಕಾರವು" ಎಂದನು.

೧೫. ಈ ರೀತಿಯಾಗಿ ಆ ಮಿಥಿಲಾನರೇಶನು ಪ್ರಾರ್ಥಿಸಿದುದನ್ನು ಕೇಳಿ ನಾರದಮಹರ್ಷಿಯು ಇಂತು ಹೇಳತೊಡಗಿದನು :—ಓ ರಾಜೇಂದ್ರ! ನೀನು ಯುಕ್ತಿಯುಕ್ತವಾದುದನ್ನೇ ಪ್ರಶ್ನಿಸಿರುವೆ. ಶ್ರೀಹರಿಯ ಪ್ರಭಾವನ್ನರಿತಿರುವ ನೀನೇ ಧನ್ಯನು. ಶ್ರೀಕೃಷ್ಣನ ಚರಿತ್ರವನ್ನು ಶ್ರವಣಮಾಡಲು ಈ ಭೂಮಂಡಲದಲ್ಲಿ ನೀನೊಬ್ಬನೇ ಅರ್ಹನಾಗಿರುವೆ.

ಕೃಷ್ಣೇ ಯಾತೇಽಜಾತಶತ್ರೂ ರಕ್ಷಾರ್ಥಂ ಸ್ನೇಹತೋ ನೃಪ ।
ಶತ್ರುಭ್ಯಃ ಶಂಕಿತಃ ಕಾರ್ಷ್ಣಿಂ ಪ್ರಾಯುಂಕ್ತಾಶು ಕಿರೀಟಿನಂ ॥ ೧೬ ॥

ಅಥ ಕಾರ್ಷ್ಣಿರ್ಯದುಶ್ರೇಷ್ಠಃ ಫಾಲ್ಗುನೇನ ಸಮಂ ನೃಪ ।
ವಿಕರ್ಷನ್ಮಹತೀಂ ಸೇನಾಂ ತ್ರಿಗರ್ತಾನ್ಪ್ರಯಯೌ ತ್ವರಂ ॥ ೧೭ ॥

ತ್ರಿಗರ್ತಾಧೀಶ್ವರೋ ಧನ್ವೀ ಸುಶರ್ಮಾ ತೇನ ಶಂಕಿತಃ ।
ಉಪಾಯನಂ ದದೌ ತಸ್ಮೈ ಪ್ರದ್ಯುಮ್ನಾಯ ಮಹಾತ್ಮನೇ ॥ ೧೮ ॥

ವಿರಾಟೇನ ತಥಾ ರಾಜ್ಞಾ ಪೂಜಿತೋ ಯಾದವೇಶ್ವರಃ ।
ಸರಸ್ವತೀಂ ನದೀಂ ಸ್ನಾತ್ವಾ ಕುರುಕ್ಷೇತ್ರಂ ದದರ್ಶ ಹ ॥ ೧೯ ॥

---

೧೬. ಓ ನೃಪಶ್ರೇಷ್ಠ ! ಆಲಿಸು. ಕೃಷ್ಣನು ಹೊರಟುಹೋದನಂತರ ಅಜಾತಶತ್ರುವೆನಿಸಿದ ಯುಧಿಷ್ಠಿರನು ತನಗೆ ಆ ಯದುಗಳ ಮೇಲಿದ್ದ ಸ್ನೇಹದಿಂದಲೂ, ಮುಂದೆ ಬರಬಹುದಾದ ಶತ್ರುಗಳ ವಿಷಯವಾದ ಶಂಕೆಯಿಂದಲೂ ತನ್ನ ತಮ್ಮನಾದ ಅರ್ಜುನನನ್ನು ಆ ಪ್ರದ್ಯುಮ್ನನ ಜೊತೆಯಲ್ಲಿ ಹೋಗುವಂತೆ ಕಳುಹಿಸಿಕೊಟ್ಟನು.

೧೭. ಅನಂತರ ಕೃಷ್ಣಪುತ್ರನಾದ ಆ ಪ್ರದ್ಯುಮ್ನನು ಅರ್ಜುನನೊಡನೆ ತನ್ನ ಅಪಾರವಾದ ಸೇನೆಯನ್ನು ನಡೆಸಿಕೊಂಡು ಬೇಗಬೇಗನೆ ತ್ರಿಗರ್ತದೇಶದ ಕಡೆಗೆ ಹೊರಟನು.

೧೮. ಆ ತ್ರಿಗರ್ತದೇಶದ ಅರಸನಾದ ಸುಶರ್ಮನೆಂಬುವನು ಒಳ್ಳೆಯ ಬಿಲ್ಗಾರನಾಗಿದ್ದರೂ ಪ್ರದ್ಯುಮ್ನನೊಡನೆ ಸೆಣಸಲು ಹೆದರಿ ಅತನಿಗೆ ಕಪ್ಪಕಾಣಿಕೆ ಗಳನ್ನಿತ್ತಿಸಿದನು.

೧೯. ಅನಂತರ ಆ ಯಾದವೇಶ್ವರನು ಸೇನೆಯೊಡನೆ ಹೊರಟುಬರುತ್ತಾ ವಿರಾಟರಾಜನಿಂದ ಸತ್ಕೃತನಾಗಿ ಅಲ್ಲಿಂದ ಮುಂದೆ ಸರಸ್ವತೀ ನದಿಯಲ್ಲಿ ಸ್ನಾನಮಾಡಿ, ಅಲ್ಲಿಂದಲೂ ಹೊರಟು ಕುರುಕ್ಷೇತ್ರವನ್ನು ಸೇರಿ ಅದನ್ನು ಸಂದರ್ಶಿಸಿದನು.

ಪೃಥೂದಕಂ ಬಿಂದುಸರಸ್ತ್ರಿತಂ ಕೂಪಂ ಸುದರ್ಶನಂ ।
ಸ್ನಾತ್ವಾ ಸರಸ್ವತೀಂ ಪ್ರಾಗಾದ್ದತ್ವಾ ದಾನಾನ್ಯನೇಕಶಃ ॥ ೨೦ ॥

ಸಾರಸ್ವತಾಧಿಪೋ ರಾಜಾ ಕುಶಾಂಬೋ ನ ದದೌ ಬಲಿಂ ।
ಕೌಶಾಂಬೀಂ ನಗರೀಮೇತ್ಯ ದುರ್ಯೋಧನವಶಾನುಗಾಃ ॥ ೨೧ ॥

ಚಾರುದೇಷ್ಣಃ ಸುದೇಷ್ಣಶ್ಚ ಚಾರುದೇಹಶ್ಚ ವೀರ್ಯವಾನ್ ।
ಸುಚಾರುಶ್ಚಾರುಗುಪ್ತಶ್ಚ ಭದ್ರಚಾರುಸ್ತಥಾಪರಃ ॥ ೨೨ ॥

ಚಾರುಚಂದ್ರೋ ವಿಚಾರಶ್ಚ ಚಾರುಶ್ಚ ದಶಮಸ್ತಥಾ ।
ರುಕ್ಮಿಣೀನಂದನಾ ಹ್ಯೇತೇ ಪ್ರದ್ಯುಮ್ನೇನ ಪ್ರಣೋದಿತಾಃ ॥ ೨೩ ॥

ಸಿಂಧುದೇಶಹಯಾರೂಢಾಃ ಸರ್ವೇಷಾಂ ಪಶ್ಯತಾಂ ಗತಾಃ ।
ಕೌಶಾಂಬೀಂ ನಗರೀಮೇತ್ಯ ರುರುಧುಃ ಸರ್ವತಸ್ತದಾ ॥ ೨೪ ॥

---

೨೦. ಅನಂತರ ಮಾರ್ಗಮಧ್ಯದಲ್ಲಿ ಸಿಕ್ಕಿದ ಪೃಥೂದಕ, ಬಿಂದುಸರಸ್ಸು, ತ್ರಿತನೆಂಬ ಕೂಪ, ಸುದರ್ಶನನೆಂಬ ತೀರ್ಥಗಳಲ್ಲಿ ಸ್ನಾನಮಾಡಿ ಅನೇಕ ವಿಧವಾದ ದಾನಗಳನ್ನು ಮಾಡಿ ಅಲ್ಲಿಂದ ಸಾರಸ್ವತವೆಂಬ ದೇಶಕ್ಕೆ ಅಭಿಮುಖನಾಗಿ ತೆರಳಿದನು.

೨೧. ಆ ಸಾರಸ್ವತ ದೇಶಾಧಿಪತಿಯಾದ ಕುಶಾಂಬನೆಂಬ ಅರಸು ರಾಜಧಾನಿಯಾದ ಕೌಶಾಂಬಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಅವನು ದುರ್ಯೋಧನ ಪಕ್ಷಪಾತಿಯಾದುದರಿಂದ ಪ್ರದ್ಯುಮ್ನನಿಗೆ ಕಪ್ಪವನ್ನು ಒಪ್ಪಿಸಲಿಲ್ಲ.

೨೨–೨೪. ಆಗ ಪ್ರದ್ಯುಮ್ನನ ಅಪ್ಪಣೆಯಂತೆ ರುಕ್ಮಿಣೀದೇವಿಯ ಮಕ್ಕಳಾದ ಚಾರುದೇಷ್ಣ, ಸುದೇಷ್ಣ, ಚಾರುದೇಹ, ಸುಚಾರು, ಚಾರುಗುಪ್ತ, ಭದ್ರಚಾರು, ಚಾರುಚಂದ್ರ, ವಿಚಾರು, ಚಾರು ಎಂಬ ವೀರರು ಸಿಂಧುದೇಶದಲ್ಲಿ ಹುಟ್ಟಿದ ಉತ್ತಮಾಶ್ವಗಳನ್ನೇರಿ ಅವರೆಲ್ಲರೂ ನೋಡುತ್ತಿರುವಂತೆ ಹೊರಟು ಕೌಶಾಂಬಿಯ ಸುತ್ತಲೂ ಮುತ್ತಿಗೆ ಹಾಕಿದರು.

ಬಾಣೈಃ ಪ್ರಾಸಾದಶಿಖರಾ ಧ್ವಜಕುಂಭಾದಿತೋಲಿಕಾಃ ।
ಚೂರ್ಣೀಭೂತಾ ನಿಪೇತುಃ ಕೌ ಲಂಕಾಟ್ಟಾಲಾ ಯಥಾ ವೃಗೈಃ ॥ ೨೫ ॥

ಬಾಣಾಂಧಕಾರೇ ಚ ಕೃತೇ ರುಕ್ಮಿಣೀನಂದನೈರ್ಯದಾ ।
ತದೋಪಾಯನಪಾಣಿಃ ಸನ್ಕುಶಾಂಬೋ ನಿರ್ಗತಃ ಪುರಾತ್ ॥ ೨೬ ॥

ಕೃತಾಂಜಲಿಃ ಶಂಬರಾರಿಂ ದತ್ವಾ ನತ್ವಾ ಬಲಿಂ ಬಹುಂ ।
ಜುಗೋಪ ನಗರೀಂ ರಾಜಾ ಭಯಾರ್ತೋ ಭಯವಿಹ್ವಲಃ ॥ ೨೭ ॥

ತದೈವ ಸೌವೀರಪತಿಃ ಸುದೇವ
ಆಭೀರನಾಥೋಽಪಿ ವಿಚಿತ್ರನಾಮಾ ।
ಚಿತ್ರಾಂಗದಃ ಸಿಂಧುಪತಿರ್ಮಹೌಜಾಃ
ಕಾಶ್ಮೀರಪೋ ಜಾಂಗಲಪಃ ಸುಮೇರುಃ ॥ ೨೮ ॥

---

೨೫. ಆಗ ಅವರ ಬಾಣಪ್ರಹಾರಗಳಿಂದ ಆ ಕೌಶಾಂಬಿಯಲ್ಲಿದ್ದ ಉಪ್ಪರಿಗೆಗಳ ಮೇಲುಭಾಗಗಳೂ, ಧ್ವಜಗಳೂ, ಕಲಶಗಳೂ ಮೊದಲಾದುವೆಲ್ಲವೂ ಹುಡಿಹುಡಿಯಾಗಿ ಹೋಗಿ ಹಿಂದೆ ವಾನರವೀರರಿಂದ ಕೆಡವಲ್ಪಟ್ಟ ಲಂಕಾನಗರದ ಅಟ್ಟಾಲಕೆ (ಉಪ್ಪರಿಗೆ) ಗಳಂತೆ ನೆಲದ ಮೇಲೆ ಬಿದ್ದು ಬಿಟ್ಟುವು.

೨೬. ಅನಂತರ ಆ ರುಕ್ಮಿಣೀಪುತ್ರರು ತಮ್ಮ ಬಾಣಗಳಿಂದ ಆಕಾಶವನ್ನೆಲ್ಲಾ ಮುಚ್ಚಿಬಿಟ್ಟುದರಿಂದ ಎಲ್ಲೆಲ್ಲಿಯೂ ಕತ್ತಲೆಯು ಕವಿಯಿತು. ಅದನ್ನು ನೋಡಿ ಆ ಕುಶಾಂಬನು ಹೆದರಿ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಊರಿಂದ ಹೊರಟು,

೨೭. ಆ ಪ್ರದ್ಯುಮ್ನನ ಬಳಿಗೆ ಬಂದು ಆತನಿಗೆ ಬದ್ಧಾಂಜಲಿಯಾಗಿ ನಮಸ್ಕರಿಸಿ ಬೇಕಾದಷ್ಟು ಕಾಣಿಕೆಗಳನ್ನೊಪ್ಪಿಸಿ ತನ್ನ ನಗರವನ್ನು ಪ್ರವೇಶಿಸಿದನು.

೨೮–೨೯. ಆ ಸಮಯದಲ್ಲಿಯೇ ಸೌವೀರದೇಶಾಧಿಪತಿಯಾದ ಸುದೇವನೂ, ಆಭೀರದೇಶದ ಅರಸನಾದ ವಿಚಿತ್ರನಾಮನೂ, ಸಿಂಧುದೇಶದ ರಾಜನಾದ ಚಿತ್ರಾಂಗದನೂ, ಕಾಶ್ಮೀರದೇಶದ ಪ್ರಭುವಾದ ಮಹೌಜಸ್ಸೂ, ಜಾಂಗಲದೇಶದ ಪಾಲಕನಾದ

ಲಾಕ್ಷೇಶ್ವರೋ ಧರ್ಮಪತಿರ್ಬಿಡೌಜಾ
ಗಾಂಧಾರಮುಖ್ಯೋಽಪಿ ಸುಯೋಧನಸ್ಯ ।
ವಶೇ ಸ್ಥಿತಾಸ್ತೇಽಪಿ ಭಯಾತ್ಕಿಲೈತೇ
ದತ್ವಾ ಬಲಿಂ ನೇಮುರತೀವ ಕಾರ್ಷ್ಣಿಂ ॥ ೨೯ ॥

ಯಯೌ ಕಾರ್ಷ್ಣಿರ್ಮಹಾಬಾಹುಃ ಸ್ವಸೈನ್ಯಪರಿವಾರಿತಃ ।
ಅರ್ಬುದಾನ್ಮ್ಲೇಚ್ಛದೇಶಾಂಶ್ಚ ಜೇತುಂ ಕಲ್ಕಿರಿವೋದ್ಭಟಃ ॥ ೩೦ ॥

ಕಾಲಸ್ಯಾಪಿ ಸುತಶ್ಚಂಡೋ ಯವನೇಂದ್ರೋ ಮಹಾಬಲಃ ।
ಕಾರ್ಷ್ಣಿಂ ಸಮಾಗತಂ ಶ್ರುತ್ವಾ ಸಂಮುಖಾತ್ಕೋಪಪೂರಿತಃ ॥ ೩೧ ॥

ಪಿತೃಹಂತುಃ ಸುತಂ ಹತ್ವಾ ಯಾಸ್ಯಾಮ್ಯಪಚಿತಂ ಪಿತುಃ ।
ಇತ್ಥಂ ವಿಚಾರ್ಯ ಮನಸಾ ಮ್ಲೇಚ್ಛಾನಾಂ ದಶಕೋಟಿಭಿಃ ॥ ೩೨ ॥

ಸುಮೇರುವೂ, ಲಕ್ಷದೇಶಾಧಿಪತಿಯಾದ ಧರ್ಮಪತಿಯೂ, ಗಾಂಧಾರದೇಶದ ಅರಸನಾದ ಬಿಡೌಜಸ್ಸೂ ತಾವು ದುರ್ಯೋಧನನ ವಶವರ್ತಿಗಳಾಗಿ ಅವನ ಅನುಯಾಯಿಗಳಾಗಿದ್ದರೂ ಆ ಪ್ರದ್ಯುಮ್ನನಿಗೆ ಹೆದರಿದವರಾಗಿ ಆತನಿಗೆ ವಿಶೇಷವಾಗಿ ಕಪ್ಪಕಾಣಿಕೆಗಳನ್ನೊಪ್ಪಿಸಿ ನಮಸ್ಕಾರ ಮಾಡಿದರು.

೩೦. ಅನಂತರ ಮಹಾ ಬಾಹುವಾದ ಆ ಪ್ರದ್ಯುಮ್ನನು ಅಸಮಾನವಾದ ಪರಾಕ್ರಮದಿಂದೊಪ್ಪುತ್ತಾ ತನ್ನ ಸೈನ್ಯದಿಂದ ಪರಿವೃತನಾಗಿ ಅರ್ಬುದದೇಶವನ್ನೂ, ಮ್ಲೇಚ್ಛದೇಶಗಳನ್ನೂ ಜಯಿಸಲು ಕಲ್ಕಿಯಂತೆ ಹೊರಟನು.

೩೧. ಆ ಯವನದೇಶಕ್ಕೆ ಅಧಿಪತಿಯಾದ ಚಂಡನೆಂಬುವನು ಕೃಷ್ಣನಿಂದ ಸಂಹೃತನಾದ ಕಾಲಯವನನ ಮಗನು. ಆ ಮಹಾ ಬಲಾಢ್ಯನು ಪ್ರದ್ಯುಮ್ನನು ತನ್ನ ಮೇಲೆ ದಂಡೆತ್ತಿ ಬಂದುದನ್ನು ಕೇಳಿ ಮಹಾ ಕೋಪವನ್ನು ತಾಳಿ—

೩೨–೩೩. ತನ್ನ ಮನಸ್ಸಿನಲ್ಲಿ "ನನ್ನ ತಂದೆಯನ್ನು ಕೊಂದ ಕೃಷ್ಣನ ಮಗನಲ್ಲವೇ ಇವನು ? ಇವನನ್ನು ಕೊಂದು ನಮ್ಮ ತಂದೆಗೆ ಪೂಜೆಯನ್ನು ಸಲ್ಲಿಸುವೆನು" ಎಂದು ಆಲೋಚಿಸಿ, ಹತ್ತು ಕೋಟಿ ಮ್ಲೇಚ್ಛಸೈನ್ಯದೊಡನೆ ಸನ್ನೀತನಾಗಿ ಸರ್ವದಾ

ಮದಚ್ಯುತಂ ಪ್ರೋನ್ನದಂತಂ ಗಜಮಾರುಹ್ಯ ರಕ್ತದೃಕ್ ।
ನಿರ್ಯಯೌ ಸಂಮುಖೇ ಯೋದ್ಧುಂ ಪ್ರದ್ಯುಮ್ನಸ್ಯ ಮಹಾತ್ಮನಃ ॥ ೩೩ ॥

ಆಗತಾಂ ಮಹತೀಂ ಸೇನಾಂ ಶಿತಬಾಣಪ್ರವರ್ಷಿಣೀಂ ।
ಚಂಡಪ್ರಣೋದಿತಾಂ ದೃಷ್ಟ್ವಾ ಪ್ರದ್ಯುಮ್ನೋ ವಾಕ್ಯಮಬ್ರವೀತ್ ॥ ೩೪ ॥

॥ ಪ್ರದ್ಯುಮ್ನ ಉವಾಚ ॥

ಸೇನಾಂ ಹತ್ವಾಪಿ ಯಶ್ಚಾಂಡಂ ಶಿರಸ್ತ್ರಸಹಿತಂ ಶಿರಃ ।
ಆನೇಷ್ಯತೇ ತಂ ಸ್ವಬಲೇ ಕರಿಷ್ಯಾಮಿ ಧ್ವಜಾಪತಿಂ ॥ ೩೫ ॥

॥ ಶ್ರೀ ನಾರದ ಉವಾಚ ॥

ಏವಂ ಕಾರ್ಷ್ಣೌ ವದತ್ಯಾರಾತ್ಫಾಲ್ಗುನೋ ವಾನರಧ್ವಜಃ ।
ಏಕೋ ವಿವೇಶ ಗಾಂಡೀವೀ ಧನುಷ್ಟಂಕಾರಯನ್ಮುಹುಃ ॥ ೩೬ ॥

ಮದದಿಂದ ಕೂಡಿ ಮದಧಾರೆಯನ್ನು ನಿರಂತರವೂ ಸ್ರವಿಸುತ್ತಿರುವ ಮತ್ತು ಆಗಾಗ್ಗೆ ಗಟ್ಟಿಯಾಗಿ ಘೀಳಿಡುತ್ತಿರುವ ಭಾರಿಯಾದ ಆನೆಯೊಂದನ್ನು ಹತ್ತಿ ಕುಳಿತು ಕೆಂಪಾದ ಕಣ್ಣುಳ್ಳವನಾಗಿ ಯುದ್ಧಕ್ಕೆ ಹೊರಟನು.

೩೪. ಈ ರೀತಿ ಚಂಡನ ಅಪ್ಪಣೆಯಂತೆ ಬಂದು ತನ್ನ ಸೈನ್ಯದ ಮೇಲೆ ಕ್ರೂರವಾದ ಅಲುಗುಗಳುಳ್ಳ ಬಾಣಗಳನ್ನು ಕರೆಯುತ್ತಿರುವ ಆ ಮ್ಲೇಚ್ಛ ಮಹಾ ಸೇನೆಯನ್ನು ಕಂಡು ಪ್ರದ್ಯುಮ್ನನು,

೩೫. "ಯಾರು ಈ ಸೇನೆಯನ್ನು ಕೊಂದು ಚಂಡನ ಶಿರಸ್ತ್ರಾಣ ಸಹಿತವಾದಂತಹ ಶಿರಸ್ಸನ್ನು ತಂದು ಕೊಡುವನೋ ಆ ವೀರನನ್ನು ಈ ಯದುಸೇನೆಯ ಸೇನಾಪತಿಯನ್ನಾಗಿ ಮಾಡುವೆನು" ಎಂದು ನುಡಿದನು.

೩೬. ಓ ರಾಜೇಂದ್ರ! ಈ ರೀತಿಯಾಗಿ ಪ್ರದ್ಯುಮ್ನನು ನುಡಿಯುವಷ್ಟರಲ್ಲಿಯೇ ಹನುಮದ್ಧ್ವಜನಾದ ಅರ್ಜುನನು ತನ್ನ ಧನುಸ್ಸಾದ ಗಾಂಡೀವವನ್ನು ಪುನಃ ಪುನಃ ಟಂಕಾರಮಾಡುತ್ತಾ ತಾನೊಬ್ಬನೇ ಆ ಚಂಡನ ಸೇನೆಯನ್ನು ಹೊಕ್ಕನು.

ವೀರಾನ್ರಥಾನ್ಗಜಾನಶ್ವಾನ್ಸಂಮುಖಸ್ಥಾನ್ ದ್ವಿಧಾಕರೋತ್ ।
ಗಾಂಡೀವಮುಕ್ತೈರ್ವಿಶಿಖೈರ್ಗಾಂಡೀವೀ ರಣದುರ್ಮದಃ ॥ ೩೭ ॥

ಕೇಚಿಚ್ಛಿನ್ನಭುಜಾಃ ಪೇತುಃ ಶಕ್ತಿಖಡ್ಗಷ್ಟಿಪಾಣಯಃ ।
ಭಿನ್ನಪಾದಾ ಭಿನ್ನನಖಾಃ ಕೇಚಿದ್ವೀರಾ ಸಕಂಚುಕಾಃ ॥ ೩೮ ॥

ದುದ್ರುವುಃ ಕರಿಣೋ ಯುದ್ಧೇ ಭಿನ್ನಕಕ್ಷಾಶ್ಚ ಸಕ್ಷತಾಃ ।
ಗತಘಂಟಾಃ ಶ್ಲಥನ್ನೀಡಾಃ ಪಾತಯಂತಃ ಕರೈರ್ಗಜಾನ್ ॥ ೩೯ ॥

ಜಿಷ್ಣುಬಾಣೈರ್ದ್ವಿಧಾಭೂತೈರ್ಗಜೈರಶ್ವೈ ರಣಾಂಗಣಂ ।
ಬಭೌ ಕ್ಷೇತ್ರಂ ಶಂಕುಲಯಾ ಕೂಷ್ಮಾಂಡಶಕಲೈರಿವ ॥ ೪೦ ॥

---

೩೭. ಯುದ್ಧವೆಂದರೆ ಮಹಾ ಸಂತೋಷದಿಂದ ಮುಂದೆ ನುಗ್ಗುವ ಹುಮ್ಮಸ್ಸುಳ್ಳ ಆ ಕಲಿಪಾರ್ಥನು ತನ್ನ ಗಾಂಡೀವ ಧನುಸ್ಸಿನಿಂದ ಬಿಡಲ್ಪಟ್ಟಂತಹ ಬಾಣಗಳಿಂದ ತನ್ನೆದುರಿಗೆ ಬಂದ ವೀರರನ್ನೂ, ರಥಗಳನ್ನೂ, ಆನೆ ಕುದುರೆಗಳನ್ನೂ, ಎರಡೆರಡು ಪಾಲಾಗಿ ತುಂಡರಿಸುತ್ತಾ ಬಂದನು.

೩೮. ಆಗ ಶತ್ರುಸೇನೆಯಲ್ಲಿದ್ದ ಕೆಲಮಂದಿ ವೀರರು ತಾವು ಹಿಡಿದಿದ್ದ ಶಕ್ತಿ, ಖಡ್ಗ, ಯಷ್ಟಿ ಮುಂತಾದ ಆಯುಧಗಳೊಡನೆಯೇ ಕೈಗಳು ಕತ್ತರಿಸಲ್ಪಟ್ಟವರಾಗಿ ಕೆಳಗೆ ಬಿದ್ದರು. ಕೆಲವು ಮಂದಿ ವೀರರು ತಮ್ಮ ಕಾಲುಗಳೂ, ಉಗುರುಗಳೂ ಕತ್ತರಿಸಲ್ಪಟ್ಟವರಾಗಿಯೂ, ಮತ್ತೆ ಕೆಲವು ಮಂದಿ ಯೋಧರು ತೊಟ್ಟಿದ್ದ ಉಕ್ಕಿನ ಕವಚಗಳು ಛೇದಿಸಲ್ಪಟ್ಟವರಾಗಿಯೂ ನೆಲದ ಮೇಲೆ ಉರುಳಿದರು.

೩೯. ಮತ್ತು ಆನೆಗಳು ತಮಗೆ ಬಿಗಿದಿದ್ದ ಹಗ್ಗಗಳು ಕತ್ತರಿಸಲ್ಪಟ್ಟುದರಿಂದ ಗಂಟೆಗಳು ಜಗುಳಿಬಿದ್ದು ಹೋಗುವುದನ್ನೂ, ಅಂಬಾರಿಗಳು ತಾವಿದ್ದ ಸ್ಥಾನದಿಂದ ಜಾರಿಹೋಗುತ್ತಿರುವುದನ್ನೂ ಗಮನಿಸದೆ, ಗಾಯಗಳ ನೋವಿನಿಂದ ತಲ್ಲಣಿಸುತ್ತಾ, ತಮಗೆ ಅಡ್ಡಲಾದ ಆನೆಗಳನ್ನು ಸೊಂಡಿಲುಗಳಿಂದ ಉರುಳಿಸುತ್ತಾ ಓಡತೊಡಗಿದುವು.

೪೦. ಈ ರೀತಿಯಾಗಿ ಅರ್ಜುನನ ಬಾಣಗಳ ಏಟಿನಿಂದ ಎರಡು ಭಾಗವಾಗಿ ಸೀಳಲ್ಪಟ್ಟಂತಹ ಆನೆಗಳಿಂದಲೂ, ಕುದುರೆಗಳಿಂದಲೂ ಆ ರಣಾಂಗಣವು ತುಂಬಿ ಹೋಗಿ ಈಳಿಗೆ ಮಣೆಯಿಂದ ಹೆಚ್ಚಲ್ಪಟ್ಟ ಕುಂಬಳಕಾಯಿಯ ಹೋಳುಗಳಿಂದ ತುಂಬಿ ಹೋದ ನೆಲದಂತೆ ಕಂಗೊಳಿಸಿತು.

ತದೈವ ದುದ್ರುವುರ್ಮ್ಲೇಚ್ಛಾಸ್ತ್ಯಕ್ತ್ವಾ ಸ್ವಂ ಸ್ವಂ ರಣಾಂಗಣಂ ।
ನಭೋಽರ್ಕರಶ್ಮಿಸಂಭಿನ್ನಾ ನೀಹಾರಪಟಲಾ ಇವ ॥ ೪೧ ॥

ಗಜಾರೂಢೋ ಮ್ಲೇಚ್ಛಪತಿಃ ಶಕ್ತಿಂ ಚಿಕ್ಷೇಪ ಜಿಷ್ಣವೇ ।
ಭ್ರಾಮಯಿತ್ವಾ ಮೈಥಿಲೇಂದ್ರ ಸಿಂಹನಾದಮಥಾಕರೋತ್ ॥ ೪೨ ॥

ವಿದ್ಯುಲ್ಲತಾಮಿವಾಯಾಂತೀಂ ಬಾಣೈಃ ಕೃಷ್ಣಸಖೋ ಬಲೀ ।
ಗಾಂಡೀವಮುಕ್ತೈ ರಾಜೇಂದ್ರ ಲೀಲಯಾ ಶತಧಾಚ್ಛಿನತ್ ॥ ೪೩ ॥

ಯಾವಚ್ಚಂಡೋ ಮಹಾಮ್ಲೇಚ್ಛೋ ಧನುರ್ಜಗ್ರಾಹ ರೋಷತಃ ।
ತಾವಚ್ಚಿಚ್ಛೇದ ಗಾಂಡೀವೀ ಬಾಣೇನೈಕೇನ ಲೀಲಯಾ ॥ ೪೪ ॥

೪೧. ಆಗ ಶತ್ರುಸೇನೆಯಲ್ಲಿದ್ದ ಆ ಮ್ಲೇಚ್ಛರೆಲ್ಲರೂ ಅರ್ಜುನನ ಬಾಣ ಪ್ರಹಾರವನ್ನು ತಡೆಯಲಾರದೆ ಸೂರ್ಯ ರಶ್ಮಿಗಳಿಂದ ಭೇದಿಸಲ್ಪಟ್ಟ ಮಂಜಿನ ಮೊತ್ತಗಳಂತೆ ತಾವು ತಾವು ಹೋರಾಡುತ್ತಿದ್ದ ಯುದ್ಧರಂಗವನ್ನು ಬಿಟ್ಟು ಕಾಲಿಗೆ ಬುದ್ಧಿ ಹೇಳಿದರು.

೪೨. ಓ ಮೈಥಿಲೇಂದ್ರ! ಈ ರೀತಿ ತನ್ನ ಸೇನೆಯು ವಿಪತ್ತಿಗೀಡಾಗಿರುವುದನ್ನು ಕಂಡು ಗಜಾರೂಢನಾಗಿ ಬರುತ್ತಿದ್ದ ಆ ಮ್ಲೇಚ್ಛರಾಜನು ಶಕ್ತಿಯೊಂದನ್ನು ಕೈಗೆ ತೆಗೆದುಕೊಂಡು ಗರಗರನೆ ತಿರುಗಿಸಿ ಅರ್ಜುನನಿಗೆ ಗುರಿಯಿಟ್ಟು ಹೊಡೆದು ಒಂದು ಬಾರಿ ಸಿಂಹನಾದ ಮಾಡಿದನು.

೪೩. ಈ ರೀತಿ ಕೋಲ್ಮಿಂಚಿನಂತೆ ತನ್ನೆಡೆಗೆ ಬರುತ್ತಿದ್ದ ಆ ಶಕ್ತಿಯನ್ನು ಮಹಾ ಪರಾಕ್ರಮಿಯೂ, ಕೃಷ್ಣನ ಸ್ನೇಹಿತನೂ ಆದ ಅರ್ಜುನನು ನಡುದಾರಿಯಲ್ಲಿಯೇ ಬಾಣಗಳಿಂದ ಲೀಲಾಮಾತ್ರದಲ್ಲಿ ನೂರು ಚೂರಾಗುವಂತೆ ಕತ್ತರಿಸಿಬಿಟ್ಟನು.

೪೪. ಅದನ್ನು ಕಂಡು ಮಹಾ ಕೋಪವನ್ನು ತಾಳಿ ಆ ಮ್ಲೇಚ್ಛರಾಜನಾದ ಚಂಡನು ಧನುಸ್ಸೊಂದನ್ನು ಕೈಗೆ ತೆಗೆದುಕೊಳ್ಳುವಷ್ಟರಲ್ಲಿಯೇ ಗಾಂಡೀವಿಯು ಲೀಲಾಮಾತ್ರದಿಂದ ಆ ಧನುಸ್ಸನ್ನು ಒಂದೇ ಒಂದು ಬಾಣಪ್ರಹಾರದಿಂದ ಕತ್ತರಿಸಿ ಬಿಟ್ಟನು.

ದ್ವಿತೀಯಂ ಧನುರಾದಾಯ ಸ ಚಂಡಶ್ಚಂಡವಿಕ್ರಮಃ ।
ಪ್ರಲಯಾಬ್ಧಿಮಹಾವರ್ತಭೀಮಸಂಘರ್ಷನಾದಿನೀಂ ॥ ೪೫ ॥

ಚಿಚ್ಛೇದ ಸಿಂಜನೀಂ ಜಿಷ್ಣೋರ್ಗರುತ್ಮಾನಿವ ಪನ್ನಗೀಂ ।
ಬೀಭತ್ಸುಃ ಸ್ವಮಸಿಂ ನೀತ್ವಾ ಸ್ಫುರಂತಂ ಚರ್ಮಣಾ ಸಹ ॥ ೪೬ ॥

ಜಘಾನ ತದ್ಗಜಂ ಕುಂಭೇ ಶೈಲಮಿಂದ್ರೋ ಯಥಾ ಪವಿಃ ।
ಅಗ್ನಿದತ್ತೇನ ಖಡ್ಗೇನ ಭಿನ್ನಕುಂಭೋ ಗಜೋ ಸವನ್ ॥ ೪೭ ॥

ಜಾನುಭ್ಯಾಂ ಧರಣೀಂ ಸ್ಪೃಷ್ಟ್ವಾ ಕಶ್ಮಲಂ ಪರಮಂ ಯಯೌ ।
ಚಂಡಃ ಖಡ್ಗಂ ಗೃಹೀತ್ವಾಽಥ ಪ್ರಾಹತ್ಯ ಪಾಂಡುನಂದನಂ ॥ ೪೮ ॥

---

೪೫. ಕೂಡಲೇ ಅತ್ಯುಗ್ರವಾದ ಪರಾಕ್ರಮವುಳ್ಳ ಆ ಚಂಡನು ಬೇರೊಂದು ಧನುಸ್ಸನ್ನು ತೆಗೆದುಕೊಂಡು ಪ್ರಳಯಕಾಲದ ಸಮುದ್ರದ ಸುಳಿಗಳು ಒಂದಕ್ಕೊಂದು ತಗುಲಿ ಉಜ್ಜುವಾಗ ಸಂಭವಿಸುವ ನಾದದಂತೆ ಧ್ವನಿಯಂಗೈಯ್ಯುತ್ತಿರುವ ಆ ಅರ್ಜುನನ ಗಾಂಡೀವದ ಹೆದೆಯನ್ನು ಗರುಡನು ಹಾವನ್ನು ಹೇಗೋ ಹಾಗೆ ಕತ್ತರಿಸಿ ತುಂಡುಮಾಡಿದನು.

೪೬–೪೭. ಆಗ ಅರ್ಜುನನು ಅತಿಶಯವಾದ ತೀಕ್ಷ್ಣತೆಯಿಂದ ಥಳಥಳಿಸುತ್ತಿರುವ ಕತ್ತಿಯನ್ನೂ, ಗುರಾಣಿಯನ್ನೂ ಕೈಗೆ ತೆಗೆದುಕೊಂಡು, ಇಂದ್ರನು ವಜ್ರಾಯುಧದಿಂದ ಪರ್ವತವನ್ನು ಪ್ರಹರಿಸುವಂತೆ ಆ ಮ್ಲೇಚ್ಛರಾಜನು ಕುಳಿತಿದ್ದ ಮದ್ದಾನೆಯ ಕುಂಭಸ್ಥಳದ ಮೇಲೆ ಪ್ರಹರಿಸಿದನು. ಅಗ್ನಿಯಿಂದ ದತ್ತವಾದ ಅರ್ಜುನನ ಆ ಖಡ್ಗದ ಪ್ರಹಾರದಿಂದ ಆ ಆನೆಯ ಕುಂಭಸ್ಥಳವು ಕತ್ತರಿಸಿಹೋಯಿತು.

೪೮. ಆಗ ಆ ಆನೆಯು ಗಟ್ಟಿಯಾಗಿ ಕಿರಿಚಿಕೊಳ್ಳುತ್ತಾ ಮಂಡಿಗಳು ಕುಸಿದು ನೆಲದ ಮೇಲೆ ಕುಕ್ಕರಿಸಿ ಬಿದ್ದುದಲ್ಲದೆ ಮಲಮೂತ್ರಗಳನ್ನೂ ವಿಸರ್ಜಿಸಿಬಿಟ್ಟಿತು. ಅನಂತರ ಚಂಡನು ಕತ್ತಿಯನ್ನು ತೆಗೆದುಕೊಂಡು ಅರ್ಜುನನ ಮೇಲೆ ಪ್ರಹರಿಸಿದನು.

ತತ್ಖಡ್ಗಂ ಚರ್ಮಣೋನ್ನೀಯ ಪ್ರಾಹಿಣೋತ್ತಂ ಕುರೂದ್ವಹಃ ।
ಸಶಿರಸ್ತ್ರಂ ಶಿರಸ್ತಸ್ಯ ದೇಹಾದ್ಭಿನ್ನಂ ಬಭೂವ ಹ ॥ ೪೯ ॥

ಸಜ್ಯಂ ಕೃತ್ವಾ ಧನುರ್ಜಿಷ್ಣುರ್ನಿಧಾಯ ವಿಶಿಖೇ ಚ ತತ್ ।
ಆಕೃಷ್ಯ ಪಾತಯಾಮಾಸ ಪ್ರದ್ಯುಮ್ನಸ್ಯ ಬಲೇ ಮಹತ್ ॥ ೫೦ ॥

ತದಾ ದುಂದುಭಿನಾದೋಽಭೂಜ್ಜಯಾರಾವಸಮಾಕುಲಃ ।
ಅರ್ಜುನಸ್ಯೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೫೧ ॥

ತದೈವ ಕಾರ್ಷ್ಣಿಃ ಸಬಲಸ್ಯ ಜಿಷ್ಣುಂ
ಚಕಾರ ನಾಥಂ ವಿಜಯಧ್ವಜಸ್ಯ ।
ಸಂವೀಜ್ಯಮಾನಂ ಸಿತಚಾಮರಾದ್ಯೈಃ
ಕಪಿಧ್ವಜಂ ಯಾದವವೃಂದಮುಖ್ಯೈಃ ॥ ೫೨ ॥

---

೪೯. ಆಗ ಅರ್ಜುನನು ಗುರಾಣಿಯಿಂದ ಆ ಖಡ್ಗಪ್ರಹಾರವನ್ನು ತಪ್ಪಿಸಿಕೊಂಡು ಕೂಡಲೇ ತನ್ನ ಖಡ್ಗದಿಂದ ಆ ಚಂಡನ ಶಿರಸ್ತ್ರಾಣಸಹಿತವಾದ ಶಿರಸ್ಸನ್ನು ಒಂದೇ ಒಂದು ಪ್ರಹಾರಕ್ಕೆ ಛೇದಿಸಿಬಿಟ್ಟನು. ಕೂಡಲೇ ಆ ಚಂಡನ ರುಂಡವು ಮುಂಡದಿಂದ ಬೇರೆಯಾಗಿಬಿಟ್ಟಿತು.

೫೦. ಅನಂತರ ಅರ್ಜುನನು ತನ್ನ ಧನುಸ್ಸಿನಲ್ಲಿ ಬಾಣವನ್ನು ಹೂಡಿ, ಅದನ್ನು ಕಿವಿಯುವರೆಗೂ ಸೆಳೆದು, ಆ ತಲೆಗೆ ಗುರಿಯಿಟ್ಟು ಪ್ರಹರಿಸಲು, ಆ ಬಾಣವು ಆ ತಲೆಯನ್ನು ತೆಗೆದುಕೊಂಡು ಹೋಗಿ ಪ್ರದ್ಯುಮ್ನನ ಸೇನೆಯ ನಡುವೆ ಕೆಡವಿಬಿಟ್ಟಿತು.

೫೧. ಆಗ ಜಯ ಜಯ ಎಂಬ ಧ್ವನಿಯೊಡನೆ ದುಂದುಭಿಗಳು ಮೊಳಗಿದುವು. ದೇವತೆಗಳು ಅರ್ಜುನನ ಮೇಲೆ ಪುಷ್ಪವರ್ಷವನ್ನು ಕರೆದರು.

೫೨. ಆ ಕೂಡಲೆ ಕೃಷ್ಣಪುತ್ರನಾದ ಪ್ರದ್ಯುಮ್ನನು ತನ್ನ ಮಾತಿನಂತೆ ವೀರಾಗ್ರಣಿಯಾದ ಅರ್ಜುನನನ್ನು ವಿಜಯಸೂಚಕವಾದ ಧ್ವಜಪಟಗಳಿಂದ ಸಬಿಡವಾಗಿರುವ ತನ್ನ ಸೈನ್ಯಕ್ಕೆ ಅಧಿಪತಿಯನ್ನಾಗಿ ಮಾಡಿದನು. ಆಗ ಆ ಅರ್ಜುನನನ್ನು ಪ್ರಧಾನರಾದ ಯಾದವ ವೀರರು ಬಿಳಿದಾದ ಚಾಮರಗಳಿಂದ ಬೀಸಿ ಸೇವಿಸಿದರು.

ವೇಗವಾನರ್ಬುದಾಧೀಶಃ ಪ್ರದ್ಯುಮ್ನಂ ಶರಣಂ ಗತಃ ।
ಉಪಾಯನಂ ದದೌ ಭೀರುರ್ನಮಸ್ಕೃತ್ಯ ಕೃತಾಂಜಲಿಃ ॥ ೫೩ ॥

ಮೌರಂಗೇಶೋ ಮಂದಹಾಸೋ ಹಯಾನಾಂ ದಶಲಕ್ಷಕಂ ।
ದತ್ವಾ ಭೀರುರ್ನಮಶ್ಚಕ್ರೇ ಪ್ರದ್ಯುಮ್ನಾಯ ಮಹಾತ್ಮನೇ ॥ ೫೪ ॥

ಇತ್ಥಂ ಖಂಡಂ ಭಾರತಾಖ್ಯಂ ಜಿತ್ವಾ ಕಾರ್ಷ್ಣಿರ್ಯದೂತ್ತಮಃ ।
ಹಿಮಾದ್ರಿಂ ದಕ್ಷಿಣೀಕೃತ್ಯ ಪ್ರಾಗುದೀಚೀಂ ದಿಶಂ ಯಯೌ ॥ ೫೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ದಿಗ್ವಿಜಯೋ ನಾಮ ದ್ವಾವಿಂಶೋಽಧ್ಯಾಯಃ

---

೫೩. ಆಗ ಅರ್ಬುದದೇಶದ ಅಧಿಪತಿಯಾದ ವೇಗವಂತನು ಪ್ರದ್ಯುಮ್ನನ ಪರಾಕ್ರಮಕ್ಕೆ ಹೆದರಿ, ಆತನನ್ನು ಮರೆಹೊಕ್ಕು, ಬದ್ಧಾಂಜಲಿಯಾಗಿ ನಮಸ್ಕರಿಸಿ ಕಪ್ಪವನ್ನು ಒಪ್ಪಿಸಿದನು.

೫೪. ಅದರಂತೆ ಮೌರಂಗದೇಶಾಧಿಪತಿಯಾದ ಮಂದಹಾಸನೆಂಬ ದೊರೆಯೂ ಸಹ ಪ್ರದ್ಯುಮ್ನನಿಗೆ ಹೆದರಿ ಹತ್ತು ಲಕ್ಷ ಕುದುರೆಗಳನ್ನು ಕಾಣಿಕೆಯಾಗಿ ಒಪ್ಪಿಸಿ ಆತನಿಗೆ ನಮಸ್ಕರಿಸಿದನು.

೫೫. ಓ ರಾಜೇಂದ್ರ ! ಈ ರೀತಿಯಾಗಿ ಯದುಶ್ರೇಷ್ಠನಾದ ಆ ಪ್ರದ್ಯುಮ್ನನು ಭರತಖಂಡವೆಲ್ಲವನ್ನೂ ಗೆದ್ದು, ಅನಂತರ ಹಿಮವತ್ಪರ್ವತವನ್ನು ದಕ್ಷಿಣದಿಕ್ಕಿಗೆ ಬಿಟ್ಟುಕೊಂಡು ಈಶಾನ್ಯದಿಕ್ಕಿಗೆ ಅಭಿಮುಖವಾಗಿ ಪ್ರಯಾಣ ಮಾಡಿದನು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವ ಸಂವಾದದಲ್ಲಿ ದಿಗ್ವಿಜಯವೆಂಬ
ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ತ್ರಯೋವಿಂಶೋಽಧ್ಯಾಯಃ

॥ ನಾರದ ಉವಾಚ ॥

ನದಾ ನದ್ಯಃ ಸಮುದ್ರಾಶ್ಚ ರಥವೀಥೀಂ ದದುರ್ನೃಪ ।
ಧರ್ಷಿತಾಸ್ತೇಜಸಾ ತಸ್ಮೈ ಸಸೈನ್ಯಾಯ ಮಹಾತ್ಮನೇ ॥ ೧ ॥

ಕೈಲಾಸಗಿರಿಪಾರ್ಶ್ವೇ ಚ ವರವೀರಶ್ಚ ಮಾನುಷಃ ।
ಬಾಣಸ್ಯ ಶೋಣಿತಪುರಂ ಪ್ರಯಯೌ ಯಾದವೇಶ್ವರಃ ॥ ೨ ॥

ಇಪ್ಪತ್ತಮೂರನೆಯ ಅಧ್ಯಾಯವು

೧. ನಾರದಮಹರ್ಷಿಯು ಹೇಳತೊಡಗಿದನು :—ರಾಜೇಂದ್ರ ! ಆಲಿಸು. ಆ ಪ್ರದ್ಯುಮ್ನನು ಪ್ರಯಾಣಮಾಡುತ್ತಿರುವಾಗ ಆತನ ತೇಜಸ್ಸಿಗೆ ಹೆದರಿಕೊಂಡು ನದೀನದಗಳೂ, ಸಾಗರಗಳೂ ಸಹ ಆ ಸೈನ್ಯಸಮೇತನಾದ ಪ್ರದ್ಯುಮ್ನನಿಗೆ ರಥಾದಿಗಳು ಸಂಚರಿಸಲು ಅನುಕೂಲವಾಗುವಂತೆ ರಾಜಮಾರ್ಗವನ್ನು ಮಾಡಿಕೊಟ್ಟವು.

೨. ಮಾನುಷಜನ್ಮದಲ್ಲಿ ಜನಿಸಿದ್ದರೂ ಅಪರಿಮಿತವಾದ ವೀರ್ಯಬಲದಿಂದ ಶೋಭಿಸುತ್ತಿದ್ದ ಆ ಪ್ರದ್ಯುಮ್ನನು ಕೈಲಾಸಪರ್ವತದ ಪಾರ್ಶ್ವದಲ್ಲಿದ್ದ ಬಾಣಾಸುರನ ರಾಜಧಾನಿಯಾದ ಶೋಣಿತಪುರಕ್ಕೆ ಅಭಿಮುಖನಾಗಿ ಹೊರಟನು.

ಬಾಣಾಸುರೋಽತಿಸಂಕ್ರುದ್ಧೋ ಯದೂನ್ವೀಕ್ಷ್ಯಾಗತಾನ್ಪುನಃ ।
ಅಕ್ಷೌಹಿಣೀಭಿರ್ದ್ವಾದಶಭಿರ್ಯುದ್ಧಂ ಕರ್ತುಂ ಮನೋ ದಧೇ ॥ ೩ ॥

ತದೈವ ಸಾಕ್ಷಾತ್ಪುರುಷಃ ಪುರಾಣೋ
ಮಹೇಶ್ವರೋ ನಂದಿವೃಷಸ್ಥಿತೋಽಸೌ ।
ಹಿಮಾದ್ರಿಪುತ್ರೀಸಹಿತಸ್ತ್ರಿಶೂಲೀ
ಸಮೇತ್ಯ ಬಾಣಂ ನೃಪಮಾಹ ದೇವಃ ॥ ೪ ॥

॥ ಶಿವ ಉವಾಚ ॥

ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ಸ್ವಯಂ ।
ಅಸಂಖ್ಯಬ್ರಹ್ಮಾಂಡಪತಿರ್ಗೋಲೋಕೇಶಃ ಪರಾತ್ಪರಃ ॥ ೫ ॥

ತ್ರಯೋ ವಯಂ ತತ್ಕಲಾ ಹಿ ಬ್ರಹ್ಮವಿಷ್ಣುಶಿವಾದಯಃ ।
ಮೂರ್ಧ್ನ್ಯಾಜ್ಞಾಂ ಯಸ್ಯ ಬಿಭ್ರತಿ ತ್ವಾದೃಶಾನಾಂ ಚ ಕಾ ಕಥಾ ॥ ೬ ॥

---

೩. ಆಗ ಬಾಣಾಸುರನು ತನ್ನ ರಾಜಧಾನಿಯ ಮೇಲೆ ಯದುಗಳು ದಂಡೆತ್ತಿ ಬಂದುದನ್ನು ಕಂಡು ಮಿತಿಮೀರಿದ ಕೋಪವನ್ನು ತಾಳಿ ತನ್ನ ಹನ್ನೆರಡು ಅಕ್ಷೌಹಿಣೀ ಸೇನೆಗಳೊಡನೆ ಯುದ್ಧ ಮಾಡಲು ನಿಶ್ಚಯಿಸಿದನು.

೪. ಆ ಸಮಯದಲ್ಲಿ ಸಾಕ್ಷಾತ್ ಪರಮಪುರುಷನೂ, ವೃಷಭರೂಪವನ್ನು ಧರಿಸಿರುವ ನಂದಿಯೇ ವಾಹನವಾಗಿ ಉಳ್ಳವನೂ, ತ್ರಿಶೂಲಧಾರಿಯೂ ಆದ ಶಂಕರನು ತನ್ನ ಅರ್ಧಾಂಗಿಯಾದ ಶಿವೆಯೊಡನೆ ಆ ಬಾಣಾಸುರನ ಬಳಿಗೆ ಬಂದು ಈ ರೀತಿ ನುಡಿದನು.

೫. ದಾನವೇಂದ್ರ! ಈ ಶ್ರೀಕೃಷ್ಣನು ಪರಿಪೂರ್ಣತಮನೆನಿಸಿದ ಸಾಕ್ಷಾತ್ ಭಗವಂತನೆಂದೇ ತಿಳಿ. ಈತನೇ ಅಸಂಖ್ಯಾತವಾದ ಬ್ರಹ್ಮಾಂಡಗಳಿಗೆ ಒಡೆಯನೂ ಗೋಲೋಕದ ಅಧಿಪತಿಯೂ ಆಗಿರುವನು.

೬. ಕಾರಣಪುರುಷರೆನಿಸಿದ ಬ್ರಹ್ಮ, ವಿಷ್ಣು ಶಿವರೆಂಬ ತ್ರಿಮೂರ್ತಿಗಳಾದ ನಾವು ಪರಕ್ಕಿಂತಲೂ, ಪರನೆನಿಸಿದ ಆತನ ಅಂಶಮಾತ್ರವೇ ಆಗಿರುವೆವು. ಇಂಥಾ ನಾನೇ ಆತನ ಆಜ್ಞೆಯನ್ನು ಶಿರಸಾವಹಿಸಿ ನಡೆಯುತ್ತಿರುವಾಗ ನಿನ್ನಂತಹವರ ಗತಿಯೇನು ?

ತಸ್ಯ ಪೌತ್ರಸ್ತ್ವಯಾ ಬದ್ಧೋಽನಿರುದ್ಧೋ ಯೇನ ತೇಜಸಾ ।
ಛಿನ್ನಾ ಭುಜಾ ನ ಜಾನಾಸಿ ಸಂಗ್ರಾಮೇ ತಂ ಹರಿಃ ಸ್ವಯಂ ॥ ೭ ॥

ತಸ್ಮಾತ್ತೇಷಾಂ ದಾನವಾನಾಂ ಪೂಜನೀಯಾ ಹರೇಃ ಸುತಾಃ ।
ಅನಿರುದ್ಧಃ ಪೂಜನೀಯೋ ಜಾಮಾತಾ ತೇ ನ ಸಂಶಯಃ ॥ ೮ ॥

ನ ದದಾಮಿ ತ್ವನುಜ್ಞಾಂ ತೇ ಯುದ್ಧಾಯಾಸುರಪುಂಗವ ।
ನ ಚೇದ್ಯುದ್ಧಂ ಕುರು ಬಲಾದ್ವೃಥಾ ದೃಷ್ಟಂ ಮನಸ್ತವ ॥ ೯ ॥

॥ ನಾರದ ಉವಾಚ ॥

ಶಿವಪ್ರಬೋಧಿತೋ ಬಾಣೋಽನಿರುದ್ಧಂ ಧನ್ವಿನಾಂ ವರಂ ।
ಸಮಾಹೂಯ ಚ ಸಂಪೂಜ್ಯ ಪಾರಿಬರ್ಹಂ ದದೌ ಪುನಃ ॥ ೧೦ ॥

---

೭. ಆ ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನನ್ನೇ ನೀನು ಸೆರೆ ಹಾಕಿದ್ದ ಆ ಸಂದರ್ಭದಲ್ಲಿ ಜರುಗಿದ ಯುದ್ಧದಲ್ಲಿಯೇ ಆ ಶ್ರೀಕೃಷ್ಣನು ತಾನೇ ಎದುರಾಗಿ ನಿಂತು ನಿನ್ನ ತೋಳುಗಳನ್ನು ಕತ್ತರಿಸಿದುದು. ಅದು ನಿನಗೆ ತಿಳಿದಿಲ್ಲವೇನು ?

೮. ಆದುದರಿಂದ ಆ ಯದುಸೈನ್ಯದಲ್ಲಿರುವ ಶ್ರೀಕೃಷ್ಣನ ಪುತ್ರರೆಲ್ಲರೂ ನಿನಗೆ ಪೂಜಾರ್ಹರಾಗಿರುವರು. ವಿಶೇಷವಾಗಿ ನಿನ್ನ ಅಳಿಯನಾದ ಅನಿರುದ್ಧನು ನಿನ್ನಿಂದ ಪೂಜಿಸಲ್ಪಡಬೇಕು. ಈ ಅಂಶದಲ್ಲಿ ಸ್ವಲ್ಪವೂ ಸಂದೇಹವನ್ನೆಣಿಸಬೇಡ.

೯. ಓ ಅಸುರಶ್ರೇಷ್ಠ ! ನಾನು ನಿನಗೆ ಎಂದಿಗೂ ಯುದ್ಧಕ್ಕೆ ಒಪ್ಪಿಗೆಯನ್ನು ಕೊಡಲಾರೆನು. ಹಾಗಿಲ್ಲದಿದ್ದರೆ, ನಿನ್ನ ಮನಸ್ಸಿಗೆ ತೋರಿದಂತೆ ವ್ಯರ್ಥವಾಗಿ ಯುದ್ಧಮಾಡು ಎಂದನು.

೧೦. ರಾಜೇಂದ್ರ ! ಈ ರೀತಿಯಾಗಿ ಶಿವನು ತನಗೆ ಎಚ್ಚರಿಕೆಯನ್ನು ಇತ್ತುದರಿಂದ ಆ ಬಾಣನು ತನ್ನ ಅಳಿಯನಾದ ಧನುರ್ಧರಾಗ್ರೇಸರನಾದ ಅನಿರುದ್ಧನನ್ನು ಕರೆದು ಆತನನ್ನು ಸತ್ಕರಿಸಿ ಉಡುಗೆರೆಗಳನ್ನು ಇತ್ತನು

ಸಸೈನ್ಯಂ ಸಾದರೇಣಾಪಿ ಪ್ರದ್ಯುಮ್ನಂ ಪೂಜ್ಯ ಬಂಧುವತ್ ।
ಗಜಾಯುತಂ ಚಾಶ್ವಕೋಟಿಂ ರಥಾನಾಂ ಪಂಚಲಕ್ಷಕಂ ॥ ೧೧ ॥

ದದೌ ಬಾಣೋ ಮಹಾಬಾಹುಃ ಪ್ರದ್ಯುಮ್ನಾಯ ಮಹಾತ್ಮನೇ ।
ಅಥ ಕಾರ್ಷ್ಣಿರ್ಮಹಾರಾಜಾ ಸ್ವಸೈನ್ಯೈರ್ಯದುಭಿಃ ಸಹ ॥ ೧೨ ॥

ಅಲಕಾಂ ಪ್ರಯಯೌ ಧನ್ವೀ ಪುರೀಂ ಗುಹ್ಯಕಮಂಡಿತಾಂ ।
ಶ್ರೀನಂದಾಲಕನಂದಾಭ್ಯಾಂ ಗಂಗಾಭ್ಯಾಂ ಪರಿಖೀಕೃತಾ ॥ ೧೩ ॥

ರತ್ನಸೋಪಾನಯುಕ್ತಾಭ್ಯಾಂ ಯಜ್ವಭಿಃ ಪರಿಶೋಭಿತಾಂ ।
ವಿದ್ಯಾಧರೀಭಿಃ ಪರಿತಃ ಕಿನ್ನರೀಭಿರ್ಮನೋಹರಾಂ ॥ ೧೪ ॥

ದಿವ್ಯಾಭಿರ್ನಾಗಕನ್ಯಾಭಿಃ ಪುರೀಂ ಭೋಗವತೀಮಿವ ।
ಧನದೋ ನ ದದೌ ತಸ್ಮೈ ಪ್ರದ್ಯುಮ್ನಾಯ ಬಲಿಂ ನೃಪಃ ॥ ೧೫ ॥

---

೧೧. ಬಳಿಕ ಸೈನ್ಯಸಮೇತನಾದ ಆ ಪ್ರದ್ಯುಮ್ನನನ್ನೂ ಸಹ ಬಹಳ ಆದರದಿಂದ ನಿಜವಾದ ಬಂಧುವಿನಂತೆ ಸತ್ಕರಿಸಿ ಹತ್ತು ಸಾವಿರ ಆನೆಗಳನ್ನೂ, ಒಂದು ಕೋಟಿ ಕುದುರೆಗಳನ್ನೂ ಐದು ಲಕ್ಷ ತೇರುಗಳನ್ನೂ ಆತನಿಗೆ ಕಾಣಿಕೆಯಾಗಿ ಇತ್ತನು.

೧೨. ಈ ರೀತಿಯಾಗಿ ಮಹಾಬಾಹುವಾದ ಆ ಬಾಣನಿಂದ ಸತ್ಕಾರವನ್ನು ಕೈಗೊಂಡನಂತರ ಆ ಪ್ರದ್ಯುಮ್ನನು ತನ್ನ ಯದುಸೈನ್ಯದೊಡನೆ

೧೩. ಗುಹ್ಯಕರೆಂಬ ದೇವತಾ ವಿಶೇಷಕ್ಕೆ ಸೇರಿದ ಪ್ರಜೆಗಳಿಂದ ನಿಬಿಡವಾದುದಾಗಿಯೂ, ಶ್ರೀನಂದಾ, ಅಲಕನಂದಾ, ಎಂಬ ಗಂಗಾನದಿಯ ಶಾಖೆಗಳೇ ಕಂದಕವಾಗಿ ಉಳ್ಳುದಾಗಿಯೂ ಇರುವ ಅಲಕಾನಗರಿಯನ್ನು ಕುರಿತು ತೆರಳಿದನು.

೧೪–೧೫. ಆ ಅಲಕಾನಗರಿಯು ರತ್ನಮಯವಾದ ಸೋಪಾನಪಂಕ್ತಿಗಳಿಂದಲೂ, ಯಜ್ಞವ್ಯಾಪೃತರಾದ ಯಾಗಶೀಲರಿಂದಲೂ, ವಿದ್ಯಾಧರಿಯರಿಂದಲೂ, ಕಿನ್ನರಿಯರಿಂದಲೂ, ಎಲ್ಲೆಲ್ಲಿಯೂ ನಿಬಿಡವಾಗಿರುತ್ತಾ ದಿವ್ಯವಾದ ಸೌಂದರ್ಯದಿಂದ ಮೆರೆಯುತ್ತಿರುವ ನಾಗಕನ್ನಿಕೆಯರಿಂದ ಪರಿವೃತವಾದ ಭೋಗವತಿಯಂತೆ ಶೋಭಿಸುತ್ತಿತ್ತು. ಆ ಅಲಕಾವತಿಯ ಅಧಿಪತಿಯಾದ ಕುಬೇರನು ಶ್ರೀಹರಿಯ ಪ್ರಭಾವವನ್ನು ಬಲ್ಲವನಾಗಿದ್ದರೂ ಪ್ರದ್ಯುಮ್ನನಿಗೆ ಕಾಣಿಕೆಯನ್ನು ಒಪ್ಪಿಸಲಿಲ್ಲ.

ಹರೇಃ ಪ್ರಭಾವವಿದಪಿ ವಿಷ್ಣೋರ್ಮಾಯಾಬಲಂ ತ್ವಹೋ ।
ಲೋಕಪಾಲೋಽಸ್ಮ್ಯಹಂ ನಿತ್ಯಮಿತ್ಯಜ್ಞಾನವಿಮೋಹಿತಃ ॥ ೧೬ ॥

ನೋದಿತೋ ಬಲಿಭಿರ್ಯಕ್ಷೈರ್ಯುದ್ಧಂ ಕರ್ತುಂ ಮನೋ ದಧೇ ।
ನಿರ್ಧನೋ ಹಿ ಧನಂ ಪ್ರಾಪ್ಯ ತೃಣವನ್ಮನ್ಯತೇ ಜಗತ್ ॥ ೧೭ ॥

ನವಾನಾಂ ತು ನಿಧೀನಾಂ ಕೌ ಪತೀನಾಂ ಕಿಮು ವರ್ಣನಂ ।
ತದೈವ ಹೇಮಮುಕುಟೋ ದೂತೋ ಧನದನೋದಿತಃ ॥ ೧೮ ॥

ಕಾರ್ಷ್ಣಿಮೇತ್ಯ ಸಭಾಮಧ್ಯೇ ನತ್ವೇದಂ ಪ್ರಾಹ ಮಾನದಃ ।

॥ ಹೇಮಮುಕುಟ ಉವಾಚ ॥

ಧನೇಶ್ವರೋ ರಾಜರಾಜೋ ಲೋಕಪಾಲೋಽಲಕೇಶ್ವರಃ ।
ತೇನ ಯತ್ಕಥಿತಂ ರಾಜನ್ ಶೃಣು ತ್ವಂ ತದ್ಯದೂತ್ತಮ ॥ ೧೯ ॥

---

೧೬. ರಾಜೇಂದ್ರ! ಆ ಶ್ರೀಹರಿಯ ಮಾಯೆಯ ಬಲವನ್ನು ಏನೆಂದು ಹೇಳಲಿ? ಆ ಕುಬೇರನು ತಾನೇ ಲೋಕಪಾಲಕನೆಂಬುದಾಗಿ ಅಜ್ಞಾನದಿಂದ ಮೈಮರೆತಿದ್ದನು.

೧೭. ಅದಕ್ಕೆ ಸರಿಯಾಗಿ ಆತನ ಅನುಯಾಯಿಗಳಾಗಿದ್ದ ಬಲದಿಂದ ದೃಪ್ತರಾದ ಯಕ್ಷರೂ ಸಹ ಯುದ್ಧಕ್ಕೆ ಪ್ರೇರೇಪಿಸಿದುದರಿಂದ ಅವನು ಯುದ್ಧ ಮಾಡುವುದಾಗಿಯೇ ನಿಶ್ಚಯಿಸಿದನು. ಆಕಸ್ಮಿಕವಾಗಿ ದ್ರವ್ಯವು ಲಭಿಸಿದರೆ ಜನ್ಮದರಿದ್ರನೂ ಜಗತ್ತನ್ನು ತೃಣಪ್ರಾಯವಾಗಿ ಕಡೆಗಣಿಸುವಾಗ

೧೮. ನವನಿಧಿಗಳಿಗೇ ಅಧಿಪತಿಗಳಾಗಿರುವವರ ವಿಷಯವಾಗಿ ಇನ್ನೇನು ಹೇಳಬೇಕಾಗಿರುವುದು ? ಇರಲಿ. ಆಗ ಕುಬೇರನು ಹೇಮಮುಕುಟನೆಂಬ ದೂತನನ್ನು ಪ್ರದ್ಯುಮ್ನನ ಬಳಿಗೆ ಕಳುಹಿಸಿದನು.

೧೯. ಆ ದೂತನು ಸಭೆಯಲ್ಲಿ ಕುಳಿತಿದ್ದ ಪ್ರದ್ಯುಮ್ನನನ್ನು ನಮಸ್ಕರಿಸಿ ಈ ರೀತಿ ಹೇಳಿದನು :— ಓ ಯದುರಾಜೇಂದ್ರ! ಧನಾಧಿಪತಿಯೂ, ಲೋಕಪಾಲನೂ, ರಾಜರಾಜನೆನಿಸಿದವನೂ, ಅಲಕಾನಗರಾಧೀಶನೂ ಆದ ಕುಬೇರನು ನಿನಗೆ ಹೇಳಿ ಕಳುಹಿಸಿರುವ ಮಾತನ್ನು ಕೇಳು.

ದೇವರಾಜೋ ಯಥಾ ಶಕ್ರಃ ಸ್ಮೃತೋ ದಿವಿ ಯಥಾ ಪ್ರಭುಃ ।
ತಥೈಕೋ ರಾಜರಾಜೋಽಹಂ ಕಥಿತೋ ಭೂತಲೇ ಮಹಾನ್ ॥ ೨೦ ॥

ಮನುಷ್ಯಧರ್ಮಾ ರಾಜೇಂದ್ರೈಃ ಪೂಜಿತೋಽಹಂ ಸದಾ ಭುವಿ ।
ಉಗ್ರಸೇನೇನ ದಾತವ್ಯಂ ಮಹ್ಯಂ ಸೋಪಾಯನಂ ಪರಂ ॥ ೨೧ ॥

ಪರಾಕ್ ತಸ್ಮೈ ನ ದಾಸ್ಯಾಮಿ ಯದುರಾಜಾಯ ಭೂಭೃತೇ ।
ನ ಮನ್ಯಸೇ ಚೇತ್ಸಂಗ್ರಾಮಂ ಕರಿಷ್ಯಾಮಿ ನ ಸಂಶಯಃ ॥ ೨೨ ॥

॥ ಶ್ರೀ ನಾರದ ಉವಾಚ ॥

ಏವಂ ದೂತವಚಃ ಶ್ರುತ್ವಾ ಪ್ರದ್ಯುಮ್ನೋ ಭಗವಾನ್ಹರಿಃ ।
ಚಕಾರ ಕೋಪಂ ರಕ್ತಾಕ್ಷೋ ರುಷಾ ಪ್ರಸ್ಫುರಿತಾಧರಃ ॥ ೨೩ ॥

---

೨೦. ದೇವರಾಜನಾದ ಇಂದ್ರನು ಯಾವ ರೀತಿ ಸ್ವರ್ಗಕ್ಕೆ ಪ್ರಭುವೆನಿಸಿರುವನೋ ಅದರಂತೆಯೇ ಈ ಭೂಲೋಕದಲ್ಲಿ ನಾನೊಬ್ಬನೇ ರಾಜರಾಜನೆನಿಸಿರುವನು.

೨೧. ನಾನು ಯಾವಾಗಲೂ ಜಗತ್ತಿನಲ್ಲಿರುವ ಎಲ್ಲಾ ರಾಜರಿಂದಲೂ ಪೂಜೆಯನ್ನು ಕೈಗೊಳ್ಳುತ್ತಿರುವೆನು. ಹೀಗಿರುವುದರಿಂದ ಈ ಉಗ್ರಸೇನನೇ ನನಗೆ ಉಪಾಯನ (ಕಪ್ಪಕಾಣಿಕೆ) ವನ್ನು ಒಪ್ಪಿಸಬೇಕು.

೨೨. ಆದುದರಿಂದ ಈ ಯಾದವರಾಜನಾದ ಉಗ್ರಸೇನನಿಗೆ ನಾನು ಎಂದಿಗೂ 'ಪರಾಕ್' ಎಂದು ಮುಂತಾಗಿ ಗೌರವಸೂಚಕವಾದ ವಚನಗಳನ್ನು ಆಡಲಾರೆನು. ಇದಕ್ಕೆ ನೀನೊಪ್ಪದಿದ್ದರೆ ನಿನ್ನ ಮೇಲೆ ಯುದ್ಧಮಾಡುವುದಂತೂ ಖಂಡಿತವೆಂಬುದಾಗಿ ತಿಳಿ.

೨೩. ಎಂಬುದಾಗಿ ಆ ದೂತನು ನುಡಿದುದನ್ನು ಕೇಳಿ ಆ ಪ್ರದ್ಯುಮ್ನನಿಗೆ ಮಹತ್ತಾದ ಕೋಪವುಂಟಾಯಿತು. ಆಗ ಆತನ ಕಣ್ಣುಗಳು ಕೆಂಪಗಾದುವು. ತುಟಿಗಳು ನಡುಗತೊಡಗಿದುವು.

॥ ಪ್ರದ್ಯುಮ್ನ ಉವಾಚ ॥

ವೃಷ್ಣೀಂದ್ರಂ ರಾಜರಾಜೇಂದ್ರಂ ರಾಜರಾಜೋ ನ ವೇತ್ತಿ ತಂ ।
ಶಕ್ರಾದೀನಾಂ ತು ಯಃ ಸಾಕ್ಷಾನ್ಮುಕುಟೈರ್ಘೃಷ್ಟಪಾದುಕಃ ॥ ೨೪ ॥

ಸುಧರ್ಮಾಂ ಪಾರಿಜಾತಂ ಚ ತಸ್ಮಾ ಇಂದ್ರೋ ದದೌ ಭಯಾತ್ ।
ಶ್ಯಾಮವರ್ಣಾನ್ಹಯಾನ್ಪಾಶೀ ತಸ್ಮೈ ದತ್ವಾ ನನಾಮ ಹ ॥ ೨೫ ॥

ಅನೇನ ರಾಜರಾಜೇನ ಭೀರುಣಾ ನಿಧಯೋ ನವ ।
ಪ್ರಾಪ್ತಾಸ್ತಂ ಹಿ ನ ಜಾನಾತಿ ರಾಜರಾಜೋ ಮಹಾಬಲಂ ॥ ೨೬ ॥

ವರ್ತತೇ ತತ್ಸಭಾಮಧ್ಯೇ ಪರಿಪೂರ್ಣತಮೋ ಹರಿಃ ।
ಅಸಂಖ್ಯಬ್ರಹ್ಮಾಂಡಪತಿಃ ಶ್ರೀಕೃಷ್ಣೋ ಭಗವಾನ್ಸ್ವಯಂ ॥ ೨೭ ॥

---

೨೪. ಆಗ ಪ್ರದ್ಯುಮ್ನನು ಈ ರೀತಿ ನುಡಿದನು:—ಯಾವ ರಾಜರಾಜೇಂದ್ರನು ಇಂದ್ರಾದಿಗಳಿಂದಲೂ ನಮಸ್ಕರಿಸಲ್ಪಡುತ್ತಾ, ಅವರ ಕಿರೀಟಗಳಿಂದ ಘರ್ಷಿಸಲ್ಪಟ್ಟ ಪಾದಗಳುಳ್ಳವನಾಗಿರುವನೋ ಅಂತಹ ಯಾದವೇಂದ್ರನನ್ನು ಈ ರಾಜರಾಜನು ಅರಿತಿಲ್ಲವಂತೆ.

೨೫. ಆ ಯಾದವೇಶ್ವರನಿಗೆ ಹೆದರಿ ಇಂದ್ರನು ಸುಧರ್ಮ ಎಂಬ ದೇವಸಭೆಯನ್ನೂ ಪಾರಿಜಾತ ವೃಕ್ಷವನ್ನೂ ಒಪ್ಪಿಸಿರುವನು. ವರುಣನು ಶ್ಯಾಮಲವಾದ ಕಾಂತಿಯಿಂದ ಮೆರೆಯುವ ಕುದುರೆಗಳನ್ನಿತ್ತು ನಮಸ್ಕಾರ ಮಾಡಿರುವನು.

೨೬. ಈ ಭೀರುವಾದ ರಾಜರಾಜನು ನವನಿಧಿಗಳನ್ನು ಪಡೆದ ಮಾತ್ರಕ್ಕೇ ಆ ಮಹಾಬಲಶಾಲಿಯಾದ ಉಗ್ರಸೇನ ರಾಜೇಂದ್ರನನ್ನು ಕಂಡರಿಯನಂತೆ!

೨೭. ಆ ಉಗ್ರಸೇನನ ಸಭೆಯಲ್ಲಿ ಅಸಂಖ್ಯಾತವಾದ ಬ್ರಹ್ಮಾಂಡಗಳಿಗೆಲ್ಲಾ ಅಧಿಪತಿಯೂ, ಪರಿಪೂರ್ಣಸ್ವರೂಪನೂ ಆದ ಭಗವಾನ್ ಶ್ರೀಕೃಷ್ಣನೇ ಸಾಕ್ಷಾತ್ತಾಗಿ ವಿರಾಜಿಸುತ್ತಿರುವನು.

ಯಸ್ಯೈಕಮೂರ್ಧ್ನಿ ತಿಲಕಂ ದೃಶ್ಯತೇ ಮಂಡಲಂ ಭುವಃ ।
ಉಗ್ರಸೇನಸಭಾಮಧ್ಯೇ ಸೋಽಪಿ ನಿತ್ಯಂ ವಿರಾಜತೇ ॥ ೨೮ ॥

ಉಗ್ರಸೇನಪ್ರೇಷಿತೋಽಹಂ ಕುಬೇರಾಯ ಮಹಾತ್ಮನೇ ।
ನಾರಾಚಾನಾಂ ಬಲಿಂ ದಾತುಂ ತತ್ಕರಿಷ್ಯಾಮಿ ಸಾಂಪ್ರತಂ ॥ ೨೯ ॥

॥ ಶ್ರೀ ನಾರದ ಉವಾಚ ॥

ಏವಮುಕ್ತ್ವಾ ಗೃಹೀತ್ವಾ ಸ್ವಂ ಕೋದಂಡಂ ಚಂಡವಿಕ್ರಮಃ ।
ಚಕಾರ ಭುಜದಂಡಾಭ್ಯಾಂ ಟಂಕಾರಂ ನಾದಯನ್ಗುಣಂ ॥ ೩೦ ॥

ಪ್ರತ್ಯಂಚಾಸ್ಫೋಟನೇನೈವ ಮಂಡಿತೋಽಭೂತ್ತಡಿತ್ಸ್ವನಃ ।
ನನಾದ ತೇನ ಬ್ರಹ್ಮಾಂಡಂ ಸಪ್ತಲೋಕೈರ್ಬಿಲೈಃ ಸಹ ॥ ೩೧ ॥

---

೨೮. ಸಾವಿರ ತಲೆಗಳಿಂದ ಒಪ್ಪುವ ಯಾವ ಮಹಾನುಭಾವನ ಒಂದು ತಲೆಯ ಮೇಲೆ ಈ ಸಮಗ್ರವಾದ ಭೂಮಂಡಲವೂ ಪೂರ್ಣವಾಗಿ ವ್ಯಾಪಿಸಲು ಸಾಧ್ಯವಿಲ್ಲದೆ ತಿಲಕದಂತೆ ತೋರುವುದೋ ಅಂತಹ ಶೇಷನ ಅವತಾರವೆನಿಸಿದ ಬಲರಾಮನೂ ಉಗ್ರಸೇನನ ಸಭೆಯಲ್ಲಿ ರಾಜಿಸುತ್ತಿರುವನು.

೨೯. ಇರಲಿ. ಆ ಉಗ್ರಸೇನನಿಂದ ಕಳುಹಿಸಲ್ಪಟ್ಟಿರುವ ನಾನು ಮಹಾತ್ಮನಾದ ಕುಬೇರನಿಗೆ ಈಗ ನನ್ನ ಬಾಣಗಳನ್ನೇ ಕಾಣಿಕೆಯಾಗಿ ಒಪ್ಪಿಸುವೆನು.

೩೦. ಓ ಬಹುಲಾಶ್ವನರೇಂದ್ರ! ಈ ರೀತಿಯಾಗಿ ನುಡಿದು ಆ ಪ್ರದ್ಯುಮ್ನನು ತನ್ನ ಧನುಸ್ಸನ್ನು ತೆಗೆದುಕೊಂಡು ಅದರ ಹೆದೆಯನ್ನು ಮಿಡಿಯುತ್ತಾ ಟಂಕಾರವನ್ನು ಮಾಡಿದನು.

೩೧. ಹೀಗೆ ಆತನು ತನ್ನ ಧನುಸ್ಸಿನ ಹೆದೆಯನ್ನು ಆಸ್ಫಾಲನ ಮಾಡುತ್ತಲೇ ಸಿಡಿಲಿನಂತಹ ಧ್ವನಿಯುಂಟಾಯಿತು. ಆ ಧ್ವನಿಯಿಂದ ಅತಲವೇ ಮೊದಲಾದ ಕೆಳಗಿನ ಏಳು ಲೋಕಗಳಿಂದಲೂ ಭೂಲೋಕವೇ ಮೊದಲಾದ ಮೇಲಿನ ಏಳು ಲೋಕಗಳಿಂದಲೂ ಕೂಡಿದ ಬ್ರಹ್ಮಾಂಡವೆಲ್ಲವೂ ಪ್ರತಿಧ್ವನಿತವಾಯಿತು.

ವಿಚೇಲುರ್ದಿಗ್ಗಜಾಸ್ತಾರಾ ರಾಜನ್ಭೂಖಂಡಮಂಡಲಂ ।
ನಿಷಂಗಾಚ್ಛರಮಾಕೃಷ್ಯ ಪ್ರದ್ಯುಮ್ನೋ ಧನ್ವಿನಾಂ ವರಃ ॥ ೩೨ ॥

ಪ್ರತಿಶಾರ್ಙ್ಗೇ ಸ್ವಧನುಷಿ ಬಾಣಮೇಕಂ ಸಮಾದಧೇ ।
ದ್ವಾದಶಾದಿತ್ಯಸಂಕಾಶಂ ದ್ಯೋತಯನ್ಮಂಡಲಂ ದಿಶಾಂ ॥ ೩೩ ॥

ಚಿಚ್ಛೇದ ಗುಹ್ಯಕೇಶಸ್ಯ ಬಾಣಂ ಛತ್ರಂ ಚ ಚಾಮರೇ ।
ತದಾ ಕ್ರುದ್ಧೋ ರಾಜರಾಜೋ ದೃಷ್ಟ್ವಾ ಚಿತ್ರಮಿದಂ ಮಹತ್ ॥ ೩೪ ॥

ಆರುಹ್ಯ ಪುಷ್ಪಕಂ ಸೈನ್ಯೈರ್ಯುದ್ಧಕಾಮೋ ವಿನಿರ್ಯಯೌ ।
ಘಂಟಾನಾದೇನ ಯಕ್ಷೇಣ ಮಂತ್ರಿಣಾ ಪಾರ್ಶ್ವಮೌಲಿನಾ ॥ ೩೫ ॥

---

೩೨. ಮತ್ತು ದಿಗ್ಗಜಗಳೂ, ನಕ್ಷತ್ರಗಳೂ ತಮ್ಮ ತಮ್ಮ ಸ್ಥಾನಗಳಿಂದ ಚಲಿಸಿದುವು. ಭೂಮಿಯೂ ಸಹ ತನ್ನ ಸ್ಥಾನದಿಂದ ಕದಲಿತು. ಆಗ ಧನುರ್ಧಾರಿಗಳೆಲ್ಲ ಅಗ್ರೇಸರನಾದ ಪ್ರದ್ಯುಮ್ನನು ಬತ್ತಳಿಕೆಯಿಂದ ಬಾಣವೊಂದನ್ನು ಹಿಡಿದೆಳೆದನು.

೩೩. ಹಾಗೆ ಎಳೆದನಂತರ ತನ್ನ ಪ್ರತಿಶಾರ್ಙ್ಗವೆಂಬ ಧನುಸ್ಸಿನಲ್ಲಿ ತೇಜಸ್ಸಿನಿಂದ ದ್ವಾದಶಾದಿತ್ಯರನ್ನು ಹೋಲುತ್ತಾ, ಸುತ್ತುಮುತ್ತಲಿರುವ ದಿಕ್ಕುಗಳೆಲ್ಲವನ್ನೂ ಬೆಳಗುತ್ತಿರುವ ಆ ಬಾಣವನ್ನು ಸಂಧಾನಮಾಡಿದನು.

೩೪. ಬಳಿಕ ಅದನ್ನು ಪ್ರಯೋಗಿಸಿ (ಅಲಕಾವತಿಯಲ್ಲಿಯೇ ಇದ್ದ) ಗುಹ್ಯಕಾಧಿಪತಿಯಾದ ಕುಬೇರನ ಬಾಣವನ್ನೂ, ಛತ್ರ ಚಾಮರಾದಿ ರಾಜಚಿಹ್ನೆಗಳನ್ನೂ ಕತ್ತರಿಸಿಬಿಟ್ಟನು. ಪ್ರದ್ಯುಮ್ನನ ಈ ಅದ್ಭುತವಾದ ಸಾಹಸವನ್ನು ಕಂಡು ಕುಪಿತನಾದ ಆ ರಾಜರಾಜನು—

೩೫. ಮಹಾ ಕೋಪವನ್ನು ತಾಳಿ ಯುದ್ಧಮಾಡಬೇಕೆಂಬ ನಿರ್ಧಾರದಿಂದ ಪುಷ್ಪಕ ವಿಮಾನವನ್ನು ಹತ್ತಿ ಘಂಟಾನಾದ ಮತ್ತು ಪಾರ್ಶ್ವಮೌಳಿಯೆಂಬ ಮಂತ್ರಿಗಳಾದ ಯಕ್ಷವೀರರೊಡನೆ ಅಲಕಾನಗರಿಯಿಂದ ಹೊರಟನು.

ನಲಕೂಬರಮಣಿಗ್ರೀವೌ ಶುಶುಭಾತೇ ಧ್ವಜಾಗ್ರತಃ ।
ತುರಂಗವದನಾಃ ಕೇಚಿನ್ಮೃಗೇಂದ್ರವದನಾಃ ಪರೇ ॥ ೩೬ ॥

ಶಿಶುಮಾರಮುಖಾಃ ಕೇಚಿತ್ಕೇಚಿನ್ನಕ್ರಮುಖಾ ಇವ ।
ಅರ್ಧಪಿಂಗಾ ಅರ್ಧಕೃಷ್ಣಾ ಊರ್ಧ್ವಕೇಶಾ ಮದೋತ್ಕಟಾಃ ॥ ೩೭ ॥

ವಕ್ರದಂತಾ ಲಲಜ್ಜಿಹ್ವಾ ಬೃಹದ್ದಂಷ್ಟ್ರಾ ಮಹಾಬಲಾಃ ।
ಕರಾಲಾಸ್ಯಾಃ ಸಕವಚಾಃ ಖಡ್ಗಚರ್ಮಧರಾಃ ಪರಾಃ ॥ ೩೮ ॥

ಶಕ್ತಿಹಸ್ತಾ ಯಷ್ಟಿಹಸ್ತಾ ಭುಶುಂಡಿಪರಿಘಾಯುಧಾಃ ।
ಧನುರ್ಬಾಣಧರಾ ಯುಕ್ತಾಃ ಕೇಚಿತ್ಪರಶುಪಾಣಯಃ ॥ ೩೯ ॥

---

೩೬. ರಾಜೇಂದ್ರ ! ಆ ಕುಬೇರನ ಸೇನೆಯ ಮುಖಭಾಗದಲ್ಲಿ ಧ್ವಜಸ್ತಂಭದ ಮುಂದೆ ನಲಕೂಬರ, ಮಣಿಗ್ರೀವರು ಶೋಭಿಸುತ್ತಾ ಇದ್ದರು. ಆ ಸೇನೆಯ ಯೋಧರಲ್ಲಿ ಕೆಲವರಿಗೆ ಕುದುರೆಯಂತೆ ಮುಖಗಳು. ಕೆಲವರಿಗೆ ಸಿಂಹದಂತೆ ಮುಖಗಳು.

೩೭. ಕೆಲಮಂದಿ ವೀರರಿಗೆ ಶಿಶುಮಾರ (ಮೊಸಳೆ ಜಾತಿಗೆ ಸೇರಿದ ಹುಲಮೀನು)ದ ಮುಖ. ಕೆಲವರಿಗೆ ಮೊಸಳೆಯ ಮುಖ, ಮತ್ತು ಮದೋದ್ಧತರಾದ ಆ ವೀರರಲ್ಲಿ ಕೆಲವರು ಅರೆಭಾಗ ಹೊಂಬಣ್ಣವಾಗಿಯೂ, ಅರೆಭಾಗ ಕಪ್ಪಾಗಿಯೂ ಇದ್ದು ಊರ್ಧ್ವಮುಖವಾದ ಕೇಶಗಳಿಂದ ಭೀಕರವಾಗಿ ತೋರುತ್ತಿದ್ದರು.

೩೮. ಕೆಲವು ವೀರರಿಗೆ ಡೊಂಕಾದ ಹಲ್ಲುಗಳು. ಕೆಲವು ವೀರರಿಗೆ ಜೋಲು ಬಿದ್ದು ಹೊರಳಾಡುತ್ತಿರುವಂತಹ ನಾಲಿಗೆಗಳು, ಕೆಲಮಂದಿ ವೀರರಿಗೆ ಭಾರಿಯಾದ ಕೋರೆದಾಡೆಗಳು. ಕೆಲವರಿಗೆ ಭಯಂಕರವಾದ ಮುಖಗಳು. ಮತ್ತು ಆ ಮಹಾ ಬಲಾಢ್ಯರಾದ ವೀರರಲ್ಲಿ ಉಕ್ಕಿನ ಕವಚವನ್ನು ತೊಟ್ಟು ಕೈಯಲ್ಲಿ ಕತ್ತಿಯನ್ನೂ, ಗುರಾಣಿಯನ್ನೂ ಹಿಡಿದಿದ್ದವರು ಕೆಲವರು.

೩೯. ಶಕ್ತಿಯನ್ನೂ, ಯಷ್ಟಿ ಎಂಬ ಆಯುಧವನ್ನೂ, ಭುಸುಂಡಿ, ಪರಿಘಗಳನ್ನೂ, ಧನುರ್ಬಾಣಗಳನ್ನೂ ಗಂಡುಗೊಡಲಿಗಳನ್ನೂ ಒಂದೊಂದನ್ನೇ ಹಿಡಿದು ಬಂದಿದ್ದವರು ಕೆಲವರು.

ಯಕ್ಷಾಣಾಂ ಹಸ್ತಿವಾಹಾನಾಂ ರಥಿನಾಮಶ್ವಿನಾಂ ತಥಾ |
ವಿರೇಜುರ್ನಿರ್ಗತಾನಾಂ ಚ ಮಂಡಲಾನಿ ಸಹಸ್ರಶಃ || ೪೦ ||

ಶಂಖದುಂದುಭಿನಾದೈಶ್ಚ ಸೂತಮಾಗಧಬಂದಿಭಿಃ |
ರೇಜಿರೇ ಶ್ರೀದವೀರಾಃ ಕೌ ಮೇಘಾ ಇವ ತಡಿತ್ಸ್ವನೈಃ || ೪೧ ||

ಏವಂ ಯಕ್ಷೇಷು ಮತ್ತೇಷು ಕೋಟಿಶೋ ನಿರ್ಗತೇಷು ಚ |
ದಿವ್ಯಾನ್ಮಹಾಯೋಗಮಯಾತ್ಸಿದ್ಧಕ್ಷೇತ್ರಾದ್ವಿದೇಹರಾಟ್ || ೪೨ ||

ಆಯಯೌ ತತ್ಸಹಾಯಾರ್ಥಂ ಪ್ರಮಥಾನಾಂ ಬಲಂ ಮಹತ್ |
ಭೂತಾಶ್ಚ ಪ್ರಮಥಾಃ ಕೇಚಿತ್ಕರಾಲಾಸ್ಯಾ ಮದೋತ್ಕಟಾಃ || ೪೩ ||

---

೪೦. ಈ ರೀತಿ ನಾನಾ ವಿಧಗಳಾದ ಆಯುಧಗಳನ್ನು ಧರಿಸಿ ಸಾವಿರಾರು ಗುಂಪು ಗುಂಪುಗಳಾಗಿ ಆನೆಗಳ ಮೇಲೂ, ಕುದುರೆಗಳ ಮೇಲೂ, ರಥಗಳ ಮೇಲೂ ಕುಳಿತು ಹೊರಟುಬರುತ್ತಿರುವಂತಹ ಆ ಯಕ್ಷರ ಸೇನೆಗಳು ವಿಶೇಷವಾಗಿ ಶೋಭಿಸುತ್ತಿದ್ದುವು.

೪೧. ಆ ರೀತಿ ಹೊರಟ ಕುಬೇರನ ಸೇನೆಯಲ್ಲಿದ್ದ ವೀರಯೋಧರು ತಮ್ಮ ಕಡೆಯ ಸೂತರೂ, ಮಾಗಧರೂ, ವಂದಿಗಳೂ ಹಾಡುತ್ತಿರುವ ಯಶೋಗೀತೆಗಳಿಂದಲೂ, ಮೊಳಗುತ್ತಿರುವ ಶಂಖ, ಭೇರೀ ನಿನಾದಗಳಿಂದಲೂ ಕೂಡಿದವರಾಗಿ ಸಿಡಿಲ ಧ್ವನಿಯಿಂದೊಡಗೂಡಿದ ಕಾರ್ಗಾಲದ ಮೋಡಗಳಂತೆ ಕಂಗೊಳಿಸುತ್ತಿದ್ದರು.

೪೨. ಈ ರೀತಿ ಮದೋನ್ಮತ್ತರಾಗಿ ಕೋಟಿಗಟ್ಟಲೆ ಯುದ್ಧರಂಗಕ್ಕೆ ತೆರಳುತ್ತಿರುವ ಯಕ್ಷರ ಸಹಾಯಕ್ಕಾಗಿ ಮಹತ್ತಾದ ಯೋಗದ ಸ್ವರೂಪವೆನಿಸಿದ ದಿವ್ಯವಾದ ಸಿದ್ಧಕ್ಷೇತ್ರದಿಂದ ವಿದೇಹರಾಜನು (ವಿದೇಹ ಎಂದರೆ, ಶರೀರವಿಲ್ಲದ ಭೂತಗಳಿಗೆ ಅಧಿಪತಿಯಾದವನು) ಹೊರಟುಬಂದನು.

೪೩. ಆ ವಿದೇಹರಾಜನ ಸಹಾಯಕ್ಕೆ ಪ್ರಮಥಗಣಗಳ ದೊಡ್ಡ ಸೈನ್ಯವೂ ಬಂದಿತು. ಆ ಸೈನ್ಯದಲ್ಲಿದ್ದ ಕೆಲವು ಭೂತಗಳಿಗೂ, ಪ್ರಮಥರಿಗೂ ಮುಖಗಳು ಬಹು ಭಯಂಕರವಾಗಿದ್ದುವು.

ಡಾಕಿನ್ಯೋ ಯಾತುಧಾನಾಶ್ಚ ವೇತಾಲಾಃ ಸವಿನಾಯಕಾಃ ।
ಕೂಷ್ಮಾಂಡೋನ್ಮಾದಸಂಯುಕ್ತಾಃ ಪ್ರೇತಾ ಮಾತೃಗಣಾಃ ಪರೇ ॥ ೪೪ ॥

ನಿಶಾಚರಪಿಶಾಚಾಶ್ಚ ಬ್ರಹ್ಮರಾಕ್ಷಸಭೈರವಾಃ ।
ನದಂತೋ ಭೈರವಂ ನಾದಂ ಭಿಂದಿ ಭಿಂದೀತಿ ವಾದಿನಃ ॥ ೪೫ ॥

ಇತ್ಥಂ ತು ಭೂತಾವಲಯಃ ಕೋಟಿಶಶ್ಚ ಯಯುಸ್ತದಾ ।
ರೋದಸ್ಯಾಚ್ಛಾದಿತೇ ಭೂತಾಂ ಮೇಘೈಃ ಸಾಂವರ್ತಕೈರಿವ ॥ ೪೬ ॥

ಮಯೂರಸ್ಥಃ ಕಾರ್ತಿಕೇಯೋ ಮೂಷಕಸ್ಥೋ ಗಣೇಶ್ವರಃ ।
ಪ್ರಮಥೈರ್ಗೀಯಮಾನೌ ತೌ ಢಕ್ಕಾವಾದಿತ್ರನಿಃಸ್ವನೈಃ ॥ ೪೭ ॥

---

೪೪. ಇಂಥ ಭೂತಗಳು ಮತ್ತು ಪ್ರಮಥರಲ್ಲದೆ ಆ ಸೇನೆಯಲ್ಲಿ ಡಾಕಿನಿಗಳೂ, ರಾಕ್ಷಸರೂ, ವಿನಾಯಕಾಧಿಪತಿಗಳೂ, ಕೂಶ್ಮಾಂಡರೂ, ಉನ್ಮಾದರೂ, ಪ್ರೇತಗಳೂ, ಮಾತೃಕಾಗಣಗಳೂ,

೪೫–೪೬. ನಿಶಾಚರರೂ, ಪಿಶಾಚರೂ, ಬ್ರಹ್ಮರಾಕ್ಷಸರೂ, ಭೈರವರೂ ಮುಂತಾದ ಇತರ ಭೂತಗಣಗಳು ಭಯಂಕರವಾಗಿ ಕಿರಿಚಿಕೊಳ್ಳುತ್ತಾ ಕಡಿ, ಬಡಿ, ಎಂಬುದಾಗಿ ಕೂಗಿಕೊಳ್ಳುತ್ತಾ ಕೋಟಿಗಟ್ಟಲೆ ಹೊರಟು ಬಂದರು. ಆಗ ಈ ಭೂತ ಪರಂಪರೆಗಳಿಂದ ಭೂಮ್ಯಂತರಿಕ್ಷಗಳು ಪ್ರಳಯಕಾಲದಲ್ಲಿ ಸಂವರ್ತಕಾದಿ ಮೇಘಗಳಿಂದ ಮುಚ್ಚಲ್ಪಡುವಂತೆ ತುಂಬಿ ಮುಚ್ಚಲ್ಪಟ್ಟುವು.

೪೭. ಈ ಪ್ರಮಥಸೇನೆಯ ಮುಂಭಾಗದಲ್ಲಿ ಷಣ್ಮುಖನು ನವಿಲಿನ ಮೇಲೆಯೂ. ಗಣಪತಿಯು ಇಲಿಯ ಮೇಲೆಯೂ ಕುಳಿತು ಬರುತ್ತಿದ್ದರು. ಆಗ ಇವರ ಅನುಚರರಾದ ಪ್ರಮಥರು ವೀಣೆ, ವೇಣು, ಮೃದಂಗ, ಕಾಂಸ್ಯತಾಲಗಳೆಂಬ ನಾಲ್ಕು ಬಗೆಯ ವಾದ್ಯಗಳೊಡನೆಯೂ, ಯಶೋದುಂದುಭಿಗಳೊಡನೆಯೂ ಈ ಷಣ್ಮುಖ, ಗಜಾನನರ ಪ್ರಶಂಶಾಪರವಾದ ಯಶೋಗೀತೆಗಳನ್ನು ಹಾಡುತ್ತಾ ಬರುತ್ತಿದ್ದರು.

ಸರ್ವೇಷಾಮಗ್ರತಃ ಪ್ರಾಪ್ತೌ ವೀರಭದ್ರೇಣ ಸಂಯುತೌ ।
ಇತ್ಥಂ ಪುಣ್ಯಜನಾನಾಂ ತು ಗಣಾನಾಂ ಯದುಭಿಃ ಸಹ ॥ ೪೮ ॥

ಬಭೂವ ತುಮುಲಂ ಯುದ್ಧಮದ್ಭುತಂ ರೋಮಹರ್ಷಣಂ ।
ರಥಿನೋ ರಥಿಭಿಸ್ತತ್ರ ಪತ್ತಿಭಿಃ ಸಹ ಪತ್ತಯಃ ॥ ೪೯ ॥

ಹಯಾ ಹಯೈರಿಭಾಶ್ಚೇಭೈರ್ಯುಯುಧುಸ್ತೇ ಪರಸ್ಪರಂ ।
ರಥೇಭಾಶ್ವಪದಾತೀನಾಂ ಚರಣೈರುತ್ಥಿತಂ ರಜಃ ॥ ೫೦ ॥

ಛಾದಯಾಮಾಸ ರಾಜೇಂದ್ರ ಸಸೂರ್ಯಂ ವ್ಯೋಮಮಂಡಲಂ ॥ ೫೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಯಕ್ಷದೇಶಪ್ರಯಾಣಂ ನಾಮ ತ್ರಯೋವಿಂಶೋಽಧ್ಯಾಯಃ

೪೮–೪೯ ಆಗ ಇವರಿಗೆ ಬೆಂಬಲವಾಗಿ ಪ್ರಮಥ ಸೇನಾಧಿಪತಿಯಾದ ವೀರಭದ್ರನೂ ಜೊತೆಯಲ್ಲಿ ಬರುತ್ತಿದ್ದನು. ಈ ರೀತಿಯಾಗಿ ಹೊರಟು ಬರುತ್ತಿರುವ ಆ ಕುಬೇರನ ಕಡೆಯ ಪುಣ್ಯಜನರಿಗೂ (ಯಕ್ಷ) ಮತ್ತು ಪ್ರಮಥ ವೀರರಿಗೂ, ಯಾದವ ವೀರರೊಡನೆ ಕೈಕೈ ಕಲೆತು ಅತ್ಯದ್ಭುತವೂ, ರೋಮಾಂಚಕರವೂ ಆದಂತಹ ಭಾರಿ ಯುದ್ಧವು ಜರುಗಿತು. ಆಗ ರಥಾರೂಢರು ರಥಾರೋಹಿಗಳೊಡನೆಯೂ, ಕಾಲಾಳುಗಳು ಕಾಲಾಳುಗಳೊಡನೆಯೂ,

೫೦. ಕುದುರೆಗಳು ಕುದುರೆಗಳೊಂದಿಗೂ. ಆನೆಗಳು ಆನೆಗಳೊಡನೆಯೂ ಕಲೆತು ಪರಸ್ಪರ ಹೋರಾಡಿದರು.

೫೧. ಆಗ ಆ ಆನೆ, ಕುದುರೆ, ಕಾಲಾಳು, ರಥಗಳೆಂಬ ಚತುರಂಗಬಲದ ತುಳಿತದಿಂದ ಧೂಳು ಮೇಲಕ್ಕೆದ್ದು ಸೂರ್ಯನನ್ನೂ ಆಕಾಶವನ್ನೂ ಮುಚ್ಚಿ ಕಾಣಿಸದಂತೆ ಮರೆಮಾಡಿಬಿಟ್ಟಿತು.

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಯಕ್ಷದೇಶಪ್ರಯಾಣವೆಂಬ ಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಚತುರ್ವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಶಸ್ತ್ರಾಂಧಕಾರೇ ಸಂಜಾತೇ ಮಣಿಗ್ರೀವೋ ಮಹಾಬಲಃ ।
ಬಿಭೇದಾರಿಬಲಂ ಬಾಣೈಃ ಕುವಾಕ್ಯೈರ್ಮಿತ್ರತಾಮಿವ ॥ ೧ ॥

ಮಣಿಗ್ರೀವಸ್ಯ ಬಾಣೌಘೈರ್ಗಜಾಶ್ವರಥಪತ್ತಯಃ ।
ನಿಪೇತುಃ ಸಕ್ಷತಾ ಭೂಮೌ ವೃಕ್ಷಾ ವಾತಹತಾ ಇವ ॥ ೨ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು

೧. ರಾಜೇಂದ್ರ! ಕೇಳು. ಈ ರೀತಿಯಾಗಿ ಶಸ್ತ್ರಗಳಿಂದ ಅಂಧಕಾರವು ಚೆನ್ನಾಗಿ ವ್ಯಾಪಿಸಲು ಮಹಾ ಬಲಿಷ್ಠನಾದ ಮಣಿಗ್ರೀವನೆಂಬ ಕುಬೇರನ ಸೇನಾಪತಿಯು ಕುತ್ಸಿತವಾದ ವಾಕ್ಯಗಳಿಂದ ಮೈತ್ರಿಯನ್ನು ಮುರಿಯುವಂತೆ ತನ್ನ ಬಾಣಗಳಿಂದ ಶತ್ರುಸೇನೆಯನ್ನು ತುಂಡರಿಸುತ್ತಾ ಬಂದನು.

೨. ಆಗ ಆತನ ಬಾಣಪ್ರಹಾರಗಳಿಂದ ಯದುಸೈನ್ಯದಲ್ಲಿದ್ದ ಆನೆ, ಕುದುರೆ, ಕಾಲಾಳು, ತೇರುಗಳೆಂಬ ನಾಲ್ಕು ಬಗೆಯ ಸೇನಾಂಗಗಳೂ ಬಿರುಗಾಳಿಗೆ ಸಿಕ್ಕಿದ ಮರಗಳಂತೆ ಕತ್ತರಿಸಿ ಬಿದ್ದುಹೋದುವು.

ಚಂದ್ರಭಾನುರ್ಹರೇಃ ಪುತ್ರಃ ಐತ್ಯಭಾಮಾತ್ಮಜೋ ಬಲೀ |
ಮಣಿಗ್ರೀವಸ್ಯ ಕೋದಂಡಂ ಪಂಚಬಾಣೈಸ್ತದಾಚ್ಛಿನತ್ || ೩ ||

ದಶಭಿಸ್ತದ್ರಥಂ ಛಿತ್ವಾ ಜಗರ್ಜ ಘನವದ್ಬಲೀ |
ಮಣಿಗ್ರೀವೋಽಪಿ ಚಿಕ್ಷೇಪ ಶಕ್ತಿಂ ಸ್ವಾಂ ಚಂದ್ರಭಾನವೇ || ೪ ||

ಭಾಸಯಂತೀಂ ದಿಶಃ ಶಶ್ವನ್ಮಹೋಲ್ಕಾಮಿವ ಮೈಥಿಲ |
ಅಗ್ರಹೀಚ್ಚಂದ್ರಭಾನುಸ್ತಾಂ ವಾಮಹಸ್ತೇನ ಲೀಲಯಾ || ೫ ||

ತಯಾ ಜಘಾನ ಸಮರೇ ಮಣಿಗ್ರೀವಂ ಮಹಾಬಲಂ |
ಪುನರ್ಜಗರ್ಜ ಸಮರೇ ಚಂದ್ರಭಾನುರ್ಮಹಾಬಲಃ || ೬ ||

---

೩. ಆಗ ಶ್ರೀಕೃಷ್ಣನಿಗೆ ಪ್ರಿಯಪತ್ನಿಯಾದ ಸತ್ಯಭಾಮೆಯಲ್ಲಿ ಜನಿಸಿದ ಚಂದ್ರಭಾನುವೆಂಬ ಯುದುವೀರನು ಐದು ಬಾಣಗಳಿಂದ ಆ ಮಣಿಗ್ರೀವನ ಬಿಲ್ಲನ್ನು ತುಂಡರಿಸಿಬಿಟ್ಟನು.

೪. ಅನಂತರ ಹತ್ತು ಬಾಣಗಳಿಂದ ಆತನು ಕುಳಿತಿದ್ದ ರಥವನ್ನು ಚೂರು ಚೂರು ಮಾಡಿ ಒಂದು ಬಾರಿ ಮೇಘದಂತೆ ಗಟ್ಟಿಯಾಗಿ ಸಿಂಹನಾದ ಮಾಡಿದನು. ಅದನ್ನು ಕಂಡು ಕುಪಿತನಾದ ಮಣಿಗ್ರೀವನು ಚಂದ್ರಭಾನುವಿಗೆ ಗುರಿಯಿಟ್ಟು, ತನ್ನ ಶಕ್ತಿಯನ್ನು ಬೀಸಿ ಹೊಡೆದನು.

೫. ಓ ಮೈಥಿಲೇಂದ್ರ ! ಆ ಶಕ್ತಿಯು ಭಾರಿ ಉಲ್ಕೆಯಂತೆ (ಕೊಳ್ಳಿ) ದಿಕ್ಕುಗಳೆಲ್ಲವನ್ನೂ ತನ್ನ ತೇಜಸ್ಸಿನಿಂದ ಬೆಳಗಿಸುತ್ತಾ ತನ್ನ ಕಡೆಗೇ ಬರುತ್ತಿರುವುದನ್ನು ಕಂಡು ವೀರನಾದ ಆ ಚಂದ್ರಭಾನುವು ತನ್ನ ಎಡಗೈಯಿಂದಲೇ ಲೀಲಾಜಾಲವಾಗಿ ಹಿಡಿದುಬಿಟ್ಟನು.

೬. ಹಾಗೆ ಹಿಡಿದೊಡನೆಯೇ ಮಹಾ ಬಲಶಾಲಿಯಾದ ಆ ಚಂದ್ರಭಾನುವು ಅದೇ ಶಕ್ತಿಯನ್ನೇ ಆ ಮಣಿಗ್ರೀವನ ಮೇಲೆ ಪ್ರಹರಿಸಿ ಗಟ್ಟಿಯಾಗಿ ಸಿಂಹನಾದ ಮಾಡಿದನು.

ತತ್ಪ್ರಹಾರೇಣ ಪತಿತೇ ಮಣಿಗ್ರೀವೇ ಪ್ರಮೂರ್ಛಿತೇ ।
ಚಂದ್ರಭಾನುಂ ಬಾಣಜಾಲೈರ್ನಲಕೂಬರನೋದಿತಾಃ ॥ ೭ ॥

ಛಾದಯಾಮಾಸುರಸುರಾ ವರ್ಷಾದಿತ್ಯಂ ಯಥಾಂಬುದಾಃ ।
ದೀಪ್ತಿಮಾನ್ಕೃಷ್ಣಪುತ್ರಸ್ತು ಖಡ್ಗಮುದ್ಯಮ್ಯ ವೇಗವಾನ್ ॥ ೮ ॥

ವಿವೇಶ ಯಕ್ಷಸೇನಾಸು ನೀಹಾರೇಷು ಯಥಾ ರವಿಃ ।
ತಸ್ಯ ಖಡ್ಗಪ್ರಹಾರೇಣ ಕೇಚಿದ್ಯಕ್ಷಾ ದ್ವಿಧಾಭವನ್ ॥ ೯ ॥

ಕೇಚಿದ್ವೈ ಛಿನ್ನಶಿರಸಶ್ಛಿನ್ನಪಾದಾಂಸಬಾಹವಃ ।
ಭಿನ್ನಹಸ್ತಾಶ್ಛಿನ್ನಕರ್ಣಾಶ್ಛಿನ್ನೋಷ್ಠಾಃ ಪೇತುರಾಹವೇ ॥ ೧೦ ॥

---

೭. ಆ ಪ್ರಹಾರದಿಂದ ಮಣಿಗ್ರೀವನು ಮೂರ್ಛಿತನಾಗಿ ನೆಲದ ಮೇಲೆ ಬಿದ್ದುಬಿಟ್ಟನು. ಅವನ್ನು ಕಂಡು ನಲಕೂಬರನು ತನ್ನ ಕಡೆಯ ಅಸುರರನ್ನು ಪ್ರೇರಿಸಲು,

೮. ಅವರೆಲ್ಲರೂ ಒಟ್ಟಾಗಿ ಆ ಚಂದ್ರಭಾನುವನ್ನು ವರ್ಷಾಕಾಲದ ಮೇಘಗಳು ಸೂರ್ಯನನ್ನು ಮುಚ್ಚುವಂತೆ ತಮ್ಮ ಬಾಣವರ್ಷದಿಂದ ಆಚ್ಛಾದಿಸಿಬಿಟ್ಟರು. ಆಗ ದೀಪ್ತಿಮಂತನೆಂಬ ಕೃಷ್ಣಪುತ್ರನು ತನ್ನ ಕತ್ತಿಯನ್ನು ಹಿಡಿದು ಮಹಾ ವೇಗದಿಂದ ಆ ಯಕ್ಷಸೇನೆಯ ನಡುವೆ ಮಂಜಿನ ರಾಶಿಯಲ್ಲಿ ಒಳಹೊಗುವ ಸೂರ್ಯನಂತೆ ಭೇದಿಸಿಕೊಂಡು ನುಗ್ಗಿದನು.

೯–೧೦. ಆಗ ಆತನ ಕತ್ತಿಯ ಏಟಿಗೆ ಸಿಲುಕಿ ಕೆಲವು ಮಂದಿ ಯಕ್ಷರು ಎರಡು ತುಂಡಾಗಿ ಕತ್ತರಿಸಲ್ಪಟ್ಟರು. ಕೆಲವರ ತಲೆಗಳು ತುಂಡರಿಸಲ್ಪಟ್ಟವು. ಕೆಲವರ ಭುಜಗಳೂ, ತೋಳುಗಳೂ ಕತ್ತರಿಸಿ ಹೋದುವು. ಮತ್ತೆ ಕೆಲವರ ಕೈಗಳೂ, ಕಿವಿಗಳೂ, ತುಟಿಗಳೂ ಕಡಿಯಲ್ಪಟ್ಟು ನೆಲದ ಮೇಲೆ ಉರುಳಿಬಿದ್ದುವು.

ತೇಷಾಂ ಶಿರೋಭಿರ್ಬೀಭತ್ಸೈಃ ಸಕಿರೀಟೈಃ ಸಕುಂಡಲೈಃ ।
ಸಶಿರಸ್ತ್ರೈಃ ಸ್ರವದ್ರಕ್ತೈರ್ಮಹಾಮಾರೀವ ಭೂರ್ಬಭೌ ॥ ೧೧ ॥

ಶೇಷಾ ವಿದುದ್ರುವುರ್ಯಕ್ಷಾಃ ಸಕ್ಷತಾ ಭಯವಿಹ್ವಲಾಃ ।
ಹಾಹಾಕಾರಸ್ತದಾ ಜಾತೋ ಯಕ್ಷಸೇನಾಸು ಮೈಥಿಲ ॥ ೧೨ ॥

ಧನುಷ್ಟಂಕಾರಯನ್ಪ್ರಾಪ್ತೋ ದಂಶಿತೋ ನಲಕೂಬರಃ
ರಥೇನಾತಿಪತಾಕೇನ ಮಾ ಭೈಷ್ಟೇತ್ಯಭಯಂ ದದೌ ॥ ೧೩ ॥

ಪಂಚಭಿಃ ಕೃತವರ್ಮಾಣಮರ್ಜುನಂ ದಶಭಿಃ ಶರೈಃ ।
ದೀಪ್ತಿಮಂತಂ ಚ ವಿಂಶತ್ಯಾ ತತಾಡ ನಲಕೂಬರಃ ॥ ೧೪ ॥

---

೧೧. ಈ ರೀತಿ ಕತ್ತರಿಸಿ ಬಿದ್ದ ಆ ಯಕ್ಷವೀರರ ಕಿರೀಟ ಕುಂಡಲಗಳಿಂದಲೂ, ಶಿರಸ್ತ್ರಾಣಗಳಿಂದಲೂ ರಮಣೀಯವಾಗಿ ಕಂಗೊಳಿಸುತ್ತಾ ಛಿಲ್ಲನೆ ಚಿಮ್ಮುತ್ತಿರುವ ರಕ್ತದಿಂದ ನೋಡುವುದಕ್ಕೆ ಅಸಹ್ಯಕರವಾಗಿದ್ದ ತಲೆಗಳಿಂದ ನಿಬಿಡವಾದ ಆ ರಣಭೂಮಿಯು ನೋಡುವವರಿಗೆ ಮಹಾ ಮಾರಿಯಂತೆ ಭಯಂಕರವಾಗಿ ತೋರುತ್ತಿತ್ತು.

೧೨. ಉಳಿದ ಯಕ್ಷರೆಲ್ಲರೂ ಮೈಯೆಲ್ಲಾ ಗಾಯಗಳಿಗೆ ತುತ್ತಾಗಿ ಹೆದರಿಕೆಯಿಂದ ತತ್ತರಿಸುತ್ತಾ ದಿಕ್ಕು ದಿಕ್ಕಿಗೆ ಓಡಿಹೋದರು. ಆಗ ಆ ಯಕ್ಷಸೇನೆಯಲ್ಲಿ ಎತ್ತೆತ್ತಲೂ ಹಾಹಾಕಾರವು ತುಂಬಿಹೋಯಿತು.

೧೩. ಈ ರೀತಿ ತನ್ನ ಕಡೆಯ ಯಕ್ಷರು ಪರಾಭವಕ್ಕೊಳಗಾದುದನ್ನು ಕಂಡು ನಲಕೂಬರನು ಉಕ್ಕಿನ ಕವಚವನ್ನು ತೊಟ್ಟು ತನ್ನ ಧನುಸ್ಸನ್ನು ಟಂಕಾರಮಾಡುತ್ತಾ ಉನ್ನತವಾದ ಧ್ವಜದಂಡದಿಂದ ಮೆರೆಯುತ್ತಿದ್ದ ರಥದಲ್ಲಿ ಕುಳಿತು ಹೆದರಬೇಡಿರೆಂದು ಅಭಯವನ್ನೀಯುತ್ತಾ ಅಲ್ಲಿಗೆ ಬಂದನು.

೧೪. ಬಂದವನೇ ಆ ನಲಕೂಬರನು ಐದು ಬಾಣಗಳಿಂದ ಆ ಕೃತವರ್ಮನನ್ನೂ, ಹತ್ತು ಬಾಣಗಳಿಂದ ಅರ್ಜುನನನ್ನೂ, ಇಪ್ಪತ್ತು ಬಾಣಗಳಿಂದ ದೀಪ್ತಿಮಂತನನ್ನೂ ಪ್ರಹರಿಸಿದನು.

ಕೃತವರ್ಮಾ ಮಹಾಬಾಹುರ್ಜಘಾನ ನಲಕೂಬರಂ ।
ಪಂಚಭಿರ್ವಿಶಿಖೈ ರಾಜನ್ನಾದಯನ್ಮಂಡಲಂ ದಿಶಾಂ ॥ ೧೫ ॥

ತೇ ಬಾಣಾಃ ಕವಚಂ ಭಿತ್ವಾ ತನುಂ ಭಿತ್ವಾ ಧರಾತಲಂ ।
ವಿವಿಶುಃ ಪಶ್ಯತಾಂ ತೇಷಾಂ ವಲ್ಮಿಕೇ ಫಣಿನೋ ಯಥಾ ॥ ೧೬ ॥

ವೀಕ್ಷ್ಯ ತದ್ಬಾಣಭಿನ್ನಾಂಗಂ ಮೂರ್ಛಿತಂ ನಲಕೂಬರಂ ।
ಅಪ್ರೋವಾಹ ರಣಾತ್ಸೂತೋ ಹೇಮಮಾಲೀತಿ ನಾಮಭಾಕ್ ॥ ೧೭ ॥

ಘಂಟಾನಾದಃ ಪಾರ್ಶ್ವಮೌಲಿಃ ಕುಬೇರಸ್ಯ ಚ ಮಂತ್ರಿಣೌ ।
ಜಘ್ನತುರ್ಬಾಣಪಟಲೈರ್ಯದೂನಾಮುದ್ಭಟಂ ಬಲಂ ॥ ೧೮ ॥

---

೧೫. ಆಗ ಮಹಾವೀರನಾದ ಕೃತವರ್ಮನು ಐದು ಬಾಣಗಳನ್ನು ತೆಗೆದುಕೊಂಡು ದಿಕ್ಕುಗಳೆಲ್ಲವೂ ಮಾರ್ಮೊಳಗುವಂತೆ ಸಿಂಹನಾದ ಮಾಡುತ್ತಾ ಆ ನಲಕೂಬರನನ್ನು ಪ್ರಹರಿಸಿದನು.

೧೬. ಓ ರಾಜೇಂದ್ರ! ಆ ಕೃತವರ್ಮನ ಬಾಣಗಳು ಹುತ್ತವನ್ನು ಹೊಗುವ ಹಾವುಗಳಂತೆ ಆ ನಲಕೂಬರನ ಕವಚವನ್ನೂ, ಶರೀರವನ್ನೂ ಭೇದಿಸಿಕೊಂಡು ನೆಲವನ್ನೂ ಭೇಧಿಸಿ ಅಲ್ಲಿಯೇ ನಾಟಿಕೊಂಡು ಬಿಟ್ಟಿತು.

೧೭. ಈ ರೀತಿ ಕೃತವರ್ಮನ ಬಾಣಪ್ರಹಾರದಿಂದ ಮೈ ಕೈಯೆಲ್ಲವೂ ಕಿತ್ತು ಹೋಗಿ ನಲಕೂಬರನು ಮೂರ್ಛಾಪರವಶನಾದುದನ್ನು ಕಂಡು ಹೇಮಮಾಲಿಯೆಂಬ ಹೆಸರಿನ ಅವನ ಸಾರಥಿಯು ಆತನ ರಥವನ್ನು ಯುದ್ಧರಂಗದಿಂದ ಬೇಗನೆ ಒತ್ತಟ್ಟಿಗೆ ಕೊಂಡೊಯ್ದು ಬಿಟ್ಟನು.

೧೮. ಆಗ ಕುಬೇರನ ಮಂತ್ರಿಗಳಾದ ಘಂಟಾನಾದ ಮತ್ತು ಪಾರ್ಶ್ವ ಮೌಳಿಗಳೆಂಬ ಯಕ್ಷವೀರರು ತಮ್ಮ ಬಾಣಗಳ ಸಮೂಹದಿಂದ ಯಾದವರ ಸೇನೆಯನ್ನು ಕೊಲ್ಲತೊಡಗಿದರು:

ಸ್ವರ್ಣಪುಂಖೈಸ್ತೀಕ್ಷ್ಣಮುಖೈರ್ಗೃಧ್ರಪಕ್ಷೈರ್ಮನೋಜವೈಃ ।
ದ್ಯೋತಯದ್ಭಿರ್ದಿಶಃ ಸರ್ವಾ ಮಾರ್ತಂಡಕಿರಣೈರಿವ ॥ ೧೯ ॥

ತತೋಽರ್ಜುನೋ ಮಹಾವೀರಃ ಪ್ರತಿಬಾಣಾನ್ಸಮಾದಧೇ ।
ಬಾಣಸಂಘರ್ಷಜಾ ಯುದ್ಧೇ ವಿಸ್ಫುಲಿಂಗಾಃ ಸಹಸ್ರಶಃ ॥ ೨೦ ॥

ವಿರೇಜುರ್ನೃಪ ಖದ್ಯೋತಚಂಚಲಾಲಾತಚಕ್ರವತ್ ।
ಸರ್ವಂ ತದ್ಬಾಣಪಟಲಂ ಕ್ಷಣಮಾತ್ರೇಣ ಚಾಚ್ಛಿನತ್ ॥ ೨೧ ॥

ಗಾಂಡೀವಮುಕ್ತವಿಶಿಖೈರ್ಗಾಂಡೀವೀ ರಣದುರ್ಮದಃ ।
ಯೋಜನದ್ವಯಮಾತ್ರೇಣ ತದ್ರಥೌ ಸಧ್ವಜೌ ಬಲಾತ್ ॥ ೨೨ ॥

---

೧೯. ಆ ವೀರರು ಪ್ರಯೋಗಿಸಿದ ಬಾಣಗಳು ಚಿನ್ನದ ಗರಿಗಳಿಂದಲೂ ಮತ್ತು ಹದ್ದಿನ ಗರಿಗಳಿಂದಲೂ ಪುಚ್ಛಭಾಗದಲ್ಲಿ ಕತ್ತರಿಸಲ್ಪಟ್ಟು ಕ್ರೂರವಾದ ಅಲುಗಿನಿಂದ ಥಳಥಳಿಸುತ್ತಾ ಸೂರ್ಯನ ಕಿರಣಗಳಂತೆ ದಿಕ್ಕುಗಳೆಲ್ಲವನ್ನೂ ಬೆಳಗುತ್ತಾ ಮನೋವೇಗದಿಂದ ಬಂದೆರಗುತ್ತಿದ್ದವು.

೨೦. ಆಗ ಮಹಾ ವೀರ್ಯಶಾಲಿಯಾದ ಅರ್ಜುನನು ಆ ಬಾಣಗಳಿಗೆ ಪ್ರತಿಯಾಗಿ ತನ್ನ ಬಾಣಗಳನ್ನು ಪ್ರಯೋಗಿಸತೊಡಗಿದನು. ರಾಜೇಂದ್ರ ! ಆ ಅರ್ಜುನನ ಬಾಣಗಳು ಎದುರಾಳಿಯ ಬಾಣಗಳಿಗೆ ತಗುಲಿದಾಗ ಸಾವಿರಾರು ಕಿಡಿಗಳು ಉಂಟಾಗಿ ಆ ರಣಾಂಗಣದಲ್ಲಿ ಉದುರಿ ಬೀಳುತ್ತಾ ಮಿಣುಕು ಹುಳುಗಳಂತೆಯೂ, ತಿರುಗುತ್ತಿರುವ ಅಲಾತಚಕ್ರ (ಕೊಳ್ಳಿ)ದಂತೆಯೂ ಕಂಗೊಳಿಸುತ್ತಿದ್ದುವು.

೨೧. ಈ ರೀತಿಯಾಗಿ ಆ ಅರ್ಜುನನು ಕ್ಷಣಮಾತ್ರದಲ್ಲಿ ಆ ಯಕ್ಷವೀರರ ಬಾಣಸಮೂಹವನ್ನೆಲ್ಲಾ ಕತ್ತರಿಸಿ ಕೆಡಹಿದನು.

೨೨. ಅನಂತರ ರಣದುರ್ಮದನಾದ ಆ ಅರ್ಜುನನು ತನ್ನ ಗಾಂಡೀವದಲ್ಲಿ ಹೂಡಿ ಬಿಡಲ್ಪಟ್ಟಂತಹ ಬಾಣಪರಂಪರೆಗಳಿಂದ ಆ ಯಕ್ಷವೀರರ ಧ್ವಜದಂಡಗಳಿಂದ ಶೋಭಿಸುತ್ತಿದ್ದ ರಥಗಳೆರಡನ್ನೂ ಎರಡು ಯೋಜನಗಳಷ್ಟು ದೂರಕ್ಕೆಸೆದುಬಿಟ್ಟನು.

ಅರ್ಜುನೋ ಬಾಣಪಟಲೈಶ್ಚಕಾರ ಶರಪಂಜರೇ ।
ಹತಾವಿಮಾವಿತಿ ಜ್ಞಾತ್ವಾ ಸರ್ವೇ ಪುಣ್ಯಜನಾಸ್ತ್ವರಂ ॥ ೨೩ ॥

ದುದ್ರುವುಃ ಸ್ವಂ ರಣಂ ತ್ಯಕ್ತ್ವಾ ಪರಂ ಹಾಹೇತಿ ವಾದಿನಃ ।
ತದಾ ತು ಭೂತಾವಲಯಃ ಕೋಟಿಶಶ್ಚಾಯಯುರ್ಮೃಧೇ ॥ ೨೪ ॥

ಡಾಕಿನ್ಯಃ ಕೋಟಿಶೋ ರಾಜಂಶ್ಚಿಕ್ಷಿಪುರ್ವಾರಣಾನ್ಮೃಧೇ ।
ಭಕ್ಷಯಂತ್ಯೋ ನರಾನಶ್ವಾಂಶ್ಚರ್ವಯಂತ್ಯೋ ರಥಾನ್ಪೃಥಕ್ ॥ ೨೫ ॥

ನರೇ ನರೇ ಪೃಥಗ್ಭೂತಾ ಧಾವಂತೋ ದಶಭಿರ್ದಶ ।
ಪ್ರಮಥಾಃ ಪಾತಯಾಮಾಸುಃ ಖಟ್ವಾಂಗೇನ ಜನಾನ್ಮುಹುಃ ॥ ೨೬ ॥

---

೨೩. ಅನಂತರ ತನ್ನ ಕೈಚಳಕದಿಂದ ಶರಪಂಜರವನ್ನೇ ನಿರ್ಮಿಸಿಬಿಟ್ಟನು. ಅದನ್ನು ಕಂಡು ಯಕ್ಷ ಸೈನ್ಯದಲ್ಲಿದ್ದ ಯೋಧರೆಲ್ಲರೂ ತಮ್ಮ ಮಂತ್ರಿಗಳಿಬ್ಬರೂ ಹತರಾಗಿಬಿಟ್ಟರೆಂಬುದಾಗಿ ಭಾವಿಸಿ ಗಟ್ಟಿಯಾಗಿ ಹಾಹಾಕಾರ ಮಾಡುತ್ತಾ ತಾವಿದ್ದ ಯುದ್ಧರಂಗದಿಂದ ಪಲಾಯನ ಮಾಡಿದರು.

೨೪–೨೫. ಆಗ ಕೋಟಿಗಟ್ಟಲೆ ಭೂತಗಳ ಗುಂಪುಗಳೂ, ಕೋಟಿಗಟ್ಟಲೆ ಡಾಕಿನಿಗಳೂ ಆ ಯುದ್ಧರಂಗವನ್ನು ಪ್ರವೇಶಿಸಿ ಯದುಸೇನೆಯ ಆನೆಗಳನ್ನೂ, ಕುದುರೆಗಳನ್ನೂ, ಮನುಷ್ಯರನ್ನೂ ತಿನ್ನತೊಡಗಿದವಲ್ಲದೆ ಅತಿ ಅತಿಯಾಗಿ ತಿಂದು ಮಿಕ್ಕ ಅವುಗಳನ್ನೂ, ತೇರುಗಳನ್ನೂ ಸಿಕ್ಕಿದ ಕಡೆ ಎಸೆದಾಡುತ್ತಾ ತಿರುಗತೊಡಗಿದುವು.

೨೬. ಆ ಭೂತಗಳು ಒಬ್ಬೊಬ್ಬ ವೀರನ ಬಳಿಗೂ ಹತ್ತು ಹತ್ತು ಸಂಖ್ಯೆಯಂತೆ ಗುಂಪು ಗುಂಪಾಗಿ ಬಂದು ಮುತ್ತಿಕೊಳ್ಳುತ್ತಿದ್ದುವು. ಈ ಭೂತಗಳಂತೆ ಪ್ರಮಥ ಗಣಗಳೂ ಸಹ ತಮ್ಮ ಖಟ್ವಾಂಗವೆಂಬ ಆಯುಧದಿಂದ ಸಿಕ್ಕಿದ ಜನರನ್ನು ಬಡಿದು ಕೊಲ್ಲುತ್ತಾ ತಿರುಗಹತ್ತಿದುವು.

ಯಾತುಧಾನಾಶ್ಚ ಚರ್ವಯಂತಃ ಶಿರಾಂಸಿ ರಣಮಂಡಲೇ ।
ವೇತಾಲಾಶ್ಚ ಕಪಾಲೇನ ಪಿಬಂತೋ ರುಧಿರಂ ಬಹು ॥ ೨೭ ॥

ವಿನಾಯಕಾಶ್ಚ ನೃತ್ಯಂತಃ ಪ್ರೇತಾ ಗಾಯಂತ ಏವ ಹಿ ।
ಕೂಶ್ಮಾಂಡಾಶ್ಚ ತಥೋನ್ಮಾದಾಃ ಶಿರಾಂಸಿ ಜಗೃಹುರ್ಮೃಧೇ ॥ ೨೮ ॥

ಶಿವಸ್ಯ ಮುಂಡಮಾಲಾರ್ಥಂ ವೀರಾಣಾಂ ಸ್ವರ್ಗಗಾಮಿನಾಂ ।
ತಥಾ ಮಾತೃಗಣಾ ಬ್ರಹ್ಮರಾಕ್ಷಸಾ ಭೈರವಾ ಮೃಧೇ ॥ ೨೯ ॥

ಶಿರಾಂಸಿ ಕಂದುಕಾನೀವ ಕ್ಷೇಪಯಂತೋ ಮುಹುರ್ಮುಹುಃ ।
ಹಸಂತಃ ಪ್ರಹಸಂತಶ್ಚ ಸಾಟ್ಟಹಾಸಂ ಸಮಾಕುಲಾಃ ॥ ೩೦ ॥

---

೨೭. ರಾಕ್ಷಸರು ರಣರಂಗದಲ್ಲಿ ಕಡಿದು ಬಿದ್ದ ತಲೆಗಳನ್ನು ತಿಂದು ಚಪ್ಪರಿಸುತ್ತಾ ಸಂಚರಿಸಿದರು. ಭೇತಾಳಗಳು ತಲೆಯ ಚಿಪ್ಪುಗಳಲ್ಲಿ ನೆತ್ತರನ್ನು ತುಂಬಿ ತುಂಬಿ ಸ್ವೇಚ್ಛೆಯಾಗಿ ಕುಡಿಯತೊಡಗಿದುವು.

೨೮. ವಿಘ್ನಾಧಿಪತಿಗಳು ಆನಂದದಿಂದ ನರ್ತನ ಮಾಡತೊಡಗಿದುವು. ಪ್ರೇತಗಳು ಹಾಡುವುದಕ್ಕೆ ಮೊದಲಿಟ್ಟುವು. ಉಳಿದ ಕೂಷ್ಮಾಂಡಗಳೂ, ಉನ್ಮಾದಗಳೂ. ಆ ರಣರಂಗದಲ್ಲಿ ಮಡಿದು ವೀರಸ್ವರ್ಗವನ್ನು ಹೊಂದಿದ ಆ ವೀರರ ಕತ್ತರಿಸಿ ಬಿದ್ದ ತಲೆಗಳನ್ನು ಶಿವನ ರುಂಡಮಾಲೆಗೆಂದು ತೆಗೆದುಕೊಂಡು ಹೋಗುತ್ತಿದ್ದುವು.

೨೯–೩೦. ಹಾಗೆಯೇ ಮಾತೃಗಣಗಳೂ, ಬ್ರಹ್ಮರಾಕ್ಷಸರೂ, ಭೈರವರೂ, ತಮ್ಮ ಶತ್ರುಗಳ ತಲೆಗಳನ್ನು ಚೆಂಡಿನಂತೆ ಒಬ್ಬರಿಗೊಬ್ಬರು ಎಸೆದಾಡುತ್ತಾ ಕೆಲವರು ಮೆಲ್ಲನೆ ನಗುತ್ತಲೂ, ಕೆಲವರು ಒಟ್ಟೊಟ್ಟಿಗೆ ಗಟ್ಟಿಯಾಗಿ ನಗುತ್ತಲೂ, ಮತ್ತೆ ಕೆಲವರು ಇನ್ನೂ ಗಟ್ಟಿಯಾಗಿ ಅಟ್ಟಹಾಸ ಮಾಡುತ್ತಲೂ ಸುತ್ತತೊಡಗಿದರು.

ಪಿಶಾಚಾ ವಿಕಲಾಸ್ಯಾಶ್ಚ ಕೂರ್ದಂತಃ ಕೇಪಿ ಕುತ್ಸಿತಂ ।
ಪಿಶಾಚ್ಯಃ ಕ್ಷತಜಂ ತೂಷ್ಣಂ ಪಾಯುಯಂತ್ಯಃ ಶಿಶೂನ್ಮೃಧೇ ॥ ೩೧ ॥

ಮಾ ರೋದೀರಿತಿ ವಾದಿನ್ಯೋ ನೇತ್ರಾಣ್ಯಪಿ ದದಾಮ ಉತ್ ।
ಇತ್ಥಂ ಗಣಬಲಂ ದೃಷ್ಟ್ವಾ ಬಲದೇವಾನುಜೋ ಬಲೀ ॥ ೩೨ ॥

ಗದೋ ಗದಾಂ ಸಮಾದಾಯ ಜಗರ್ಜ ಘನವದ್ಬಲೀ ।
ಲಕ್ಷಭಾರಭೃತಾ ಮೌರ್ವ್ಯಾ ಗದಯಾ ತದ್ಬಲಂ ಮಹತ್ ॥ ೩೩ ॥

ಪೋಥಯಾಮಾಸ ಹಿ ಗದೋ ವಜ್ರೇಣೇಂದ್ರೋ ಯಥಾ ಗಿರೀನ್ ।
ಕೂಷ್ಮಾಂಡೋನ್ಮಾದವೇತಾಲಾಃ ಪಿಶಾಚಾ ಬ್ರಹ್ಮರಾಕ್ಷಸಾಃ ॥ ೩೪ ॥

---

೩೧. ಅವನಂತೆ ಹರುಕು ಹರುಕಾದ ಮುಖದಿಂದ ಭಯಂಕರವಾಗಿ ತೋರುವ ಪಿಶಾಚಗಳು ಅಲ್ಲಲ್ಲಿ ಹೊಲಸು ಹೊಲಸಾದ ರೀತಿಯಲ್ಲಿ ಕ್ರೀಡಿಸತೊಡಗಿದುವು. ಮತ್ತು ಪಿಶಾಚ ಸ್ತ್ರೀಯರು ಅಳಬೇಡ! ಅಳಬೇಡ! ಎಂದು ತಮ್ಮ ಮಕ್ಕಳನ್ನು ಸಂತೈಸುತ್ತಾ ಅವುಗಳಿಗೆ ಬಿಸಿ ಬಿಸಿಯಾಗಿ ಬಸಿಯುತ್ತಿರುವ ನೆತ್ತರನ್ನು ಕುಡಿಸ ತೊಡಗಿದರು.

೩೨-೩೩. ಈ ರೀತಿ ಭಯಂಕರವಾಗಿ ಬರುತ್ತಿರುವ ಗಣಗಳ ಸೇನೆಯನ್ನು ಕಂಡು ಬಲದೇವನ ತಮ್ಮನಾದ ಗದನೆಂಬ ವೀರನು ಲಕ್ಷಭಾರ ತೂಕವಿರುವ ತನ್ನ ಗದೆಯನ್ನು ಕೈಗೆತ್ತಿಕೊಂಡು ಒಂದು ಬಾರಿ ಮೇಘದಂತೆ ಸಿಂಹನಾದ ಮಾಡಿ ಇಂದ್ರನು ವಜ್ರಾಯುಧನಿಂದ ಪರ್ವತಗಳನ್ನು ಕುಟ್ಟಿ ಕೆಡಹುವಂತೆ ಆ ಗಣಗಳ ಸೈನ್ಯವನ್ನು ಸದೆಬಡಿಯುತ್ತಾ ಬಂದನು.

೩೪. ಆ ಗದನ ಪ್ರಹಾರದಿಂದ ಕೂಷ್ಮಾಂಡ, ಉನ್ಮಾದ, ವೇತಾಲ, ಪಿಶಾಚ, ಬ್ರಹ್ಮರಾಕ್ಷಸರೆಂಬ ಆ ಗಣಗಳ ಸೈನ್ಯಗಳು ತಲೆಗಳು ಬಿಚ್ಚಿಹೋಗಿ ಮೂರ್ಛೆಯನ್ನು ಹೊಂದಿ ನೆಲದ ಮೇಲೆ ಬಿದ್ದುರುಳಿದುವು

ನಿಪೇತುರ್ಮೂರ್ಚ್ಛಿತಾ ಭೂಮೌ ತದ್ಗದಾಭಿನ್ನಮಸ್ತಕಾಃ ।
ಡಾಕಿನೀ ಭಿನ್ನದಂತಾಶ್ಚ ಪ್ರಮಥಾ ಭಿನ್ನಕಂಧರಾಃ ॥ ೧೫ ॥

ಯಾತುಧಾನಾಂಶ್ಛಿನ್ನಮುಖಾಂಶ್ಚಕಾರ ಸಮರೇ ಗದಃ ।
ಗದಯಾ ಮರ್ದಿತಾಃ ಪ್ರೇತಾ ದುದ್ರುವುಸ್ತೇ ದಿಶೋ ದಶ ॥ ೧೬ ॥

ವಾರಾಹದಂಷ್ಟ್ರಯಾ ಭಗ್ನಾ ಲಯೇ ದೈತ್ಯಾ ಯಥಾ ನೃಪ ।
ಪಲಾಯಿತೇ ಭೂತಗಣೇ ವೀರಭದ್ರಃ ಸಮಾಗತಃ ॥ ೧೭ ॥

ಗದಂ ತತಾಡ ಗದಯಾ ಬಲದೇವಾನುಜಂ ಬಲೀ ।
ಗದೋಪರಿ ಗದಾಂ ನೀತ್ವಾ ಗದಃ ಸ್ವಾಂ ಪ್ರಾಹಿಣೋದ್ಗದಾಂ ॥ ೧೮ ॥

---

೧೫. ಆ ಗದಾಪ್ರಹಾರದಿಂದ ಡಾಕಿನಿಯರ ಹಲ್ಲುಗಳು ಮುರಿದು ಹೋದುವು. ಪ್ರಮಥರ ತಲೆಗಳು ಕಡಿದುಹೋದುವು.

೧೬. ರಾಕ್ಷಸರ ಮೋರೆಗಳೆಲ್ಲವೂ ಸೀಳಲ್ಪಟ್ಟುವು. ಪ್ರೇತಗಳ ಅಂಗಾಂಗಗಳೆಲ್ಲವೂ ಅಜ್ಜುಗುಜ್ಜಾಗಿ ಅವು ರಣರಂಗವನ್ನು ಬಿಟ್ಟು ದಿಕ್ಕು ದಿಕ್ಕಿಗೂ ಓಡಿಹೋಗುವಂತಾಯಿತು.

೧೭. ಈ ರೀತಿಯಾಗಿ ಹಿಂದೆ ಪ್ರಳಯಕಾಲದಲ್ಲಿ ಆದಿವರಾಹದ ಕೋರೆದಾಡೆಗಳಿಂದ ದೈತ್ಯರೆಲ್ಲರೂ ಭಗ್ನರಾದಂತೆ ತನ್ನ ಕಡೆಯವರೆಲ್ಲರೂ ಭಗ್ನರಾಗಿ ಓಡಿಹೋಗುತ್ತಿರುವುದನ್ನು ಕಂಡು ವೀರಭದ್ರನು ಅಲ್ಲಿಗೆ ಬಂದನು.

೧೮. ಹಾಗೆ ಬಂದೊಡನೆಯೇ ಆ ಬಲಿಷ್ಠನು ಬಲದೇವನ ತಮ್ಮನಾದ ಆ ಗದನ ಮೇಲೆ ತನ್ನ ಗದೆಯನ್ನು ತೆಗೆದುಕೊಂಡು ಬಲವಾಗಿ ಪ್ರಹರಿಸಿದನು. ಆ ಗದನೂ ಸಹ ತನ್ನ ಮೇಲೆ ಬರುತ್ತಿರುವ ಆ ಗದೆಯ ಮೇಲೆ ಗುರಿಯಿಟ್ಟು ತಾನೂ ತನ್ನ ಗದೆಯನ್ನು ಬೀಸಿದನು.

ತಯೋರ್ಯುದ್ಧಮಭೂದ್ಘೋರಂ ಗದಾಭ್ಯಾಂ ಮೈಥಿಲೇಶ್ವರ ।
ವಿಸ್ಫುಲಿಂಗಾನ್ ಕ್ಷರಂತ್ಯೌ ದ್ವೇ ಗದೇ ಚೂರ್ಣೀಬಭೂವತುಃ ॥ ೩೯ ॥

ಮಲ್ಲಯುದ್ಧಂ ತಯೋರಾಸೀನ್ನ್ಯೋದಯಂತಂ ಪರಸ್ಪರಂ ।
ಭುಜೈಶ್ಚ ಜಾನುಭಿಃ ಪಾದೈಃ ಪಾತಯಂತೋ ಗಿರೀನ್ಬಹೂನ್ ॥ ೪೦ ॥

ಕರವೀರಂ ಸಮುತ್ಪಾಟ್ಯ ವೀರಭದ್ರೋ ಗಿರಿಂ ಬಲಾತ್ ।
ಅಟ್ಟಹಾಸಂ ತದಾ ಕುರ್ವನ್ಗದೋಪರಿ ಸಮಾಕ್ಷಿಪತ್ ॥ ೪೧ ॥

ಗದೋ ಗಿರಿಂ ಸಂಗೃಹೀತ್ವಾ ತಸ್ಯೋಪರಿ ಸಮಾಕ್ಷಿಪತ್ ।
ಗೃಹೀತ್ವಾಥ ಗದಂ ವೀರಂ ವೀರಭದ್ರೋ ಬಲಾದ್ಬಲೀ ॥ ೪೨ ॥

---

೩೯. ಓ ಮೈಥಿಲೇಶ್ವರ! ಆ ಗದೆಗಳೆರಡೂ ಪರಸ್ಪರವಾಗಿ ಬಹು ಘೋರವಾಗಿ ಕಾದಾಡುತ್ತಾ ಕೊನೆ ಕೊನೆಗೆ ಕಿಡಿಗಳನ್ನು ಕಾರುತ್ತಾ ನೆಲದ ಮೇಲೆ ಬಿದ್ದು ಹುಡಿ ಹುಡಿಯಾಗಿಬಿಟ್ಟುವು.

೪೦. ಅನಂತರ ಆ ಗದನಿಗೂ, ವೀರಭದ್ರನಿಗೂ ಬರಿಯ ಕೈಕೈ ಯುದ್ಧವು ಮೊದಲಾಯಿತು. ಆಗ ಅವರು ಒಬ್ಬರನ್ನೊಬ್ಬರು ತಳ್ಳುತ್ತಾ ಬಾಹುಗಳಿಂದಲೂ, ಮಂಡಿಗಳಿಂದಲೂ, ಕಾಲುಗಳಿಂದಲೂ ಹೋರಾಡುತ್ತಾ ಕೊನೆಕೊನೆಗೆ ಒಂದರ ಮೇಲೊಂದರಂತೆ ಅಸಂಖ್ಯಾಕವಾಗಿ ಬೆಟ್ಟಗಳನ್ನು ಎಸೆದಾಡಿ ಹೊಡೆಯತೊಡಗಿದರು.

೪೧. ಆಗ ಮಹಾಬಲನಾದ ವೀರಭದ್ರನು ಕರವೀರವೆಂಬ ಬೆಟ್ಟವನ್ನು ಕಿತ್ತು ಗಟ್ಟಿಯಾಗಿ ಅಟ್ಟಹಾಸವನ್ನು ಮಾಡುತ್ತಾ ತನ್ನ ಬಲವನ್ನೆಲ್ಲಾ ಬಿಟ್ಟು ಆ ಗದನ ಮೇಲೆ ಬೀಸಿ ಹೊಡೆದನು.

೪೨. ಕೂಡಲೇ ಕುಶಲಿಯಾದ ಆ ಗದನು ಆ ಬೆಟ್ಟವನ್ನು ಆತು ಹಿಡಿದು ಅದನ್ನೇ ವೀರಭದ್ರನ ಮೇಲೆ ಪ್ರಯೋಗಿಸಿದನು. ಅನಂತರ ವೀರಭದ್ರನು ಆ ಗದನನ್ನೇ ಬಲವಾಗಿ ಹಿಡಿದುಕೊಂಡು ತನ್ನ ಶಕ್ತಿಯೆಲ್ಲವನ್ನೂ ಬಿಟ್ಟು ಆಕಾಶದಲ್ಲಿ ಒಂದುಲಕ್ಷ ಯೋಜನಗಳಷ್ಟು ದೂರಕ್ಕೆ ಸರಕ್ಕನೆ ಎಸೆದುಬಿಟ್ಟನು.

ಚಿಕ್ಷೇಪ ಚೌಜಸಾ ರಾಜನ್ನಾಕಾಶೇ ಲಕ್ಷಯೋಜನಂ ।
ಗದೋಽಪಿ ಪತಿತೋ ಭೂಮೌ ಕಿಂಚಿದ್ವ್ಯಾಕುಲಮಾನಸಃ ॥ ೪೩ ॥

ಗೃಹೀತ್ವಾ ವೀರಭದ್ರಾಖ್ಯಂ ಭ್ರಾಮಯಿತ್ವಾ ಮಹಾಬಲಃ ।
ಓಜಸಾ ಪ್ರಾಕ್ಷಿಪಚ್ಛೀಘ್ರಮಾಕಾಶೇ ಲಕ್ಷಯೋಜನಂ ॥ ೪೪ ॥

ವೀರಭದ್ರಸ್ತು ಪತಿತಃ ಕೈಲಾಸಶಿಖರೋಪರಿ ।
ಗದಾಪ್ರಹಾರವ್ಯಥಿತೋ ಮೂರ್ಛಿತೋ ಘಟಿಕಾದ್ವಯಂ ॥ ೪೫ ॥

ಕಾರ್ತಿಕೇಯಸ್ತದಾ ಪ್ರಾಪ್ತಃ ಶಕ್ತಿಮುದ್ಯಮ್ಯ ವೇಗವಾನ್ ।
ಅನಿರುದ್ಧಾಯ ಸಾಂಬಾಯ ಶಕ್ತಿಂ ಚಿಕ್ಷೇಪ ಸತ್ವರಂ ॥ ೪೬ ॥

ಅನಿರುದ್ಧರಥಂ ಭಿತ್ವಾ ಸಾಂಬಂ ಸಾಂಬರಥಂ ಪುನಃ ।
ಗಜಾನ್ರಥಾನ್ಸಹಸ್ರಂ ಚ ವೀರಲಕ್ಷಮ್ಮೃಧಾಂಗಣೇ ॥ ೪೭ ॥

೪೩–೪೪. ಈ ರೀತಿ ವೀರಭದ್ರನಿಂದ ಎಸೆಯಲ್ಪಟ್ಟ ಆ ಗದನು ನೆಲದ ಮೇಲೆ ಬಿದ್ದು ಸ್ವಲ್ಪಮಟ್ಟಿಗೆ ಕಳವಳಕ್ಕೀಡಾದರೂ ಅದನ್ನು ಗಮನಿಸದೆ ತಾನೂ ಆ ವೀರಭದ್ರನನ್ನು ಗಟ್ಟಿಯಾಗಿ ಹಿಡಿದು, ಗರಗರನೆ ತಿರುಗಿಸಿ, ಮಹಾವೇಗದಿಂದ ಆಕಾಶದಲ್ಲಿ ಒಂದುಲಕ್ಷ ಯೋಜನಗಳಷ್ಟು ದೂರಕ್ಕೆ ಎಸೆದುಬಿಟ್ಟನು.

೪೫. ಆಗ ವೀರಭದ್ರನು ಕೈಲಾಸಪರ್ವತದ ಮೇಲೆ ಬಿದ್ದುದರಿಂದಲೂ, ತನಗೆ ಉಂಟಾಗಿದ್ದ ಗದಾಪ್ರಹಾರಗಳಿಂದಲೂ ವಿಶೇಷವಾಗಿ ನೊಂದು, ಎರಡು ಗಳಿಗೆಗಳ ಕಾಲ ಮೂರ್ಛಿತನಾಗಿ ಬಿದ್ದುಬಿಟ್ಟನು.

೪೬. ಆಗ ಮಹಾ ವೀರನಾದ ಷಣ್ಮುಖನು ತನ್ನ ಶಕ್ತ್ಯಾಯುಧವನ್ನು ಹಿಡಿದುಕೊಂಡು ವೇಗವೇಗನೆ ಅಲ್ಲಿಗೆ ಬಂದು ತನಗೆದುರಾದ ಅನಿರುದ್ಧನ ಮೇಲೂ, ಸಾಂಬನ ಮೇಲೂ ಅದನ್ನು ಬೀಸಿ ಹೊಡೆದನು.

೪೭–೪೮. ಕೂಡಲೇ ಆ ಶಕ್ತಿಯು ಅನಿರುದ್ಧನ ರಥವನ್ನು ಛೇದಿಸಿದುದಲ್ಲದೆ, ಸಾಂಬನನ್ನೂ, ಅವನ ರಥವನ್ನೂ ಛೇದಿಸಿಕೊಂಡು, ಸಾವಿರಾರು ಆನೆಗಳನ್ನೂ, ರಥಗಳನ್ನೂ, ಒಂದುಲಕ್ಷದಷ್ಟು ವೀರರನ್ನೂ ತುಂಡರಿಸಿ ಮುಂಚಿನಂತೆ ಹತ್ತು ದಿಕ್ಕು

ಭಿತ್ವಾ ನದಂತೀ ಸ್ಫೂರ್ಜಂತೀ ಚಪಲೇವ ದಿಶೋ ದಶ ।
ವಿವೇಶ ಭೂಮೌ ಫೂತ್ಕಾರಂ ಕುರ್ವತೀ ಪನ್ನಗೀವ ಸಾ ॥ ೪೮ ॥

ತದಾ ಕ್ರುದ್ಧೋ ಮಹಾಬಾಹುಃ ಸಾಂಬೋ ಜಾಂಬವತೀಸುತಃ ।
ಕೃತ್ವಾಥ ಸಿಂಜಿನೀಘೋಷಂ ನಿಷಂಗಾನ್ಬಾಣಮಾದದೇ ॥ ೪೯ ॥

ಏಕೋಽಪಿ ಸದ್ಬಹಿಸ್ತೂಣಾದ್ದಶರೂಪೀ ಬಭೂವ ಹ ।
ಚಾಪೇ ಶತಂ ಕರ್ಷಣೇ ಚ ಸಹಸ್ರಂ ರೂಪಮಾದಧೇ ॥ ೫೦ ॥

ಮೋಕ್ಷಣೇ ಲಕ್ಷರೂಪಾಣಿ ಕೋಟಿರೂಪಾಣಿ ಕೋಟಿಷು ।
ಅನೇಕರೂಪೀ ವಿಶಿಖಃ ಶಿಖಿನಂ ಶಿಖಿವಾಹನಂ ॥ ೫೧ ॥

ಗಳನ್ನೂ ಬೆಳಗುತ್ತಾ, ಭಾರಿಯಾದ ಸದ್ದಿನಿಂದ ಮುಂದುವರಿಯುತ್ತಾ, ಕೊನೆಗೆ ಬುಸುಗುಟ್ಟುವ ಹಾವಿನಂತೆ ಭೂಮಿಯನ್ನು ಕೊರೆದುಕೊಂಡು ಅದರ ಒಳಗೆ ಪ್ರವೇಶಿಸಿತು.

೪೯. ಆಗ ಜಾಂಬವತೀ ಪುತ್ರನೂ ಮಹಾಬಾಹುವೂ ಆದ ಆ ಸಾಂಬನು ಮಹಾ ಕೋಪವನ್ನು ತಾಳಿ, ತನ್ನ ಧನುಸ್ಸಿನ ಹೆದೆಯನ್ನು ಧ್ವನಿಮಾಡುತ್ತಾ ಬತ್ತಳಿಕೆಯಿಂದ ಬಾಣವನ್ನು ಎಳೆದುಕೊಂಡನು. ಓ ರಾಜೇಂದ್ರ! ಆ ಅದ್ಭುತವನ್ನೇನು ಹೇಳಲಿ! ಅವನು ಬತ್ತಳಿಕೆಯಿಂದ ತೆಗೆದುಕೊಂಡುದು ಒಂದು ಬಾಣವಾದರೂ ಅದು ಬತ್ತಳಿಕೆಯ ಹೊರಗೆ ಬರುತ್ತಲೇ ಹತ್ತಾಯಿತು. ಬಿಲ್ಲಿನಲ್ಲಿ ಹೂಡಿದಾಗ ನೂರಾಯಿತು. ಹೆದೆಯಲ್ಲಿ ಸಂಧಾನಮಾಡಿ ಸೆಳೆದಾಗ ಸಾವಿರವಾಯಿತು.

೫೦. ಅದನ್ನು ಬಿಟ್ಟಾಗ ಒಂದುಲಕ್ಷ ರೂಪವನ್ನು ತಾಳಿತು. ಈರೀತಿ ಲಕ್ಷ ರೂಪವನ್ನು ತಾಳಿದ ಆ ಬಾಣವು ಕೋಟಿರೂಪಗಳನ್ನೂ, ಅನಂತರ ಲೆಕ್ಕವೇ ಇಲ್ಲದಷ್ಟು ರೂಪಗಳನ್ನೂ ತಾಳಿ, ಆ ಷಣ್ಮುಖನನ್ನೂ, ಅವನ ವಾಹನವಾದ ನವಿಲನ್ನೂ

೫೧. ಭೇದಿಸಿದುದಲ್ಲದೆ, ಕೋಟಿಕೋಟಿಗಟ್ಟಲೆಯಾಗಿ ಅವನ ಕಡೆಯ ವೀರರನ್ನೂ ತುಂಡರಿಸಿಬಿಟ್ಟಿತು. ಈರೀತಿ ಸಾಂಬನ ಬಾಣಪ್ರಹಾರದಿಂದ ಷಣ್ಮುಖನು ಸ್ವಲ್ಪಮಟ್ಟಿಗೆ ಕಳವಳಕ್ಕೆ ಈಡಾದುದನ್ನು ಕಂಡು ಪ್ರಮಥಗಣಾಧೀಶನಾದ ವಿನಾಯಕನು ತನ್ನ ವಾಹನವಾದ ಮೂಷಕವನ್ನೇರಿ ಅಲ್ಲಿಗೆ ಬಂದನು.

ಭಿತ್ವಾ ಬಿಭೇದ ವೀರಾಣಾಂ ಕೋಟಿಶಃ ಕೋಟಿಶೋ ರಣೇ ।
ಕಾರ್ತಿಕೇಯೋ ಚ ಭಿನ್ನಾಂಗೇ ಕಿಂಚಿದ್ವ್ಯಾಕುಲಮಾನಸೇ ॥
ಗಣೇಶ್ವರಸ್ತದಾ ಪ್ರಾಪ್ತೋ ಮೂಷಕಸ್ಥೋ ಗಜಾನನಃ ॥ ೫೨ ॥

ಗೋಮೂತ್ರಪತ್ರಮೃಗನಾಭಿವಿಚಿತ್ರಕುಂಭಂ
ಶ್ರೀಕುಂಕುಮಾಕಲಿತಸುಂದರವಕ್ರತುಂಡಂ ।
ಸಿಂಧೂರಪೂರಿತಕಪೋಲಮನೋಹರಾಭಂ
ಕರ್ಪೂರಧೂಲಿಧವಲೀಕೃತಕರ್ಣವರ್ಣಂ ॥ ೫೩ ॥

ವ್ಯಾಲೋಲಕರ್ಣಹತಮತ್ತಮಧುವ್ರತೈಸ್ತೈಃ
ಶ್ರೀಗಂಡಜಾತಮದಿರಾಮದವಿಹ್ವಲಾಂಗೈಃ ।
ಸಂಗೀತತಾಲಕುಸುಮಾಕರಗೀತರಾಗೈಃ
ಸಂಸೇವಿತಂ ಗಣಪತಿಂ ಕೃತಭಾಲಚಂದ್ರ ॥ ೫೪ ॥

ಬಾಲಾರ್ಕವರ್ಣಮಮಲಾಂಗದಹೇಮಹಾರ–
ಗ್ರೈವೇಯಮೌಲಿಕಿರಣೈಃ ಪರಿತಃ ಸ್ಫುರಂತಂ ।

---

೫೨. ರಾಜೇಂದ್ರ! ಆ ಗಣಪತಿಯು ಗೋಮೂತ್ರಿಕಾದಿ ರೀತಿಯಲ್ಲಿ ರಚಿಸಲ್ಪಟ್ಟ ಕಸ್ತೂರಿಯ ಪತ್ರಲೇಖದಿಂದಲೂ, ರಮಣೀಯವಾಗಿರುವ ಕುಂಭಸ್ಥಳದಿಂದಲೂ, ಕುಂಕುಮಕೇಸರದಿಂದ ಅಂದವಾಗಿ ತೊಡೆಯಲ್ಪಟ್ಟು ಮುದ್ದಾಗಿ ತೋರುತ್ತಿರುವ ಡೊಂಕಾದ ಸೊಂಡಲಿನಿಂದಲೂ, ಸಿಂದೂರ (ಚಂದ್ರ) ಅಲಂಕರಿಸಲ್ಪಟ್ಟು ಕೆಂಪಾದ ಪ್ರಭೆಯನ್ನು ಮನೋಹರವಾಗಿ ಬೀರುತ್ತಿರುವ ಕಪೋಲಪ್ರದೇಶದಿಂದಲೂ, ಕರ್ಪೂರದ ಹುಡಿಯಿಂದ ಮತ್ತಷ್ಟು ಬಿಳುಪಾದ ಕಾಂತಿಯನ್ನು ತಳೆದಿರುವ ಕರ್ಣಪ್ರದೇಶದಿಂದಲೂ ವಿಶೇಷವಾಗಿ ಶೋಭಿಸುತ್ತಿದ್ದನು.

೫೩. ಆ ಗಣಪತಿಯ ಗಂಡಸ್ಥಲಗಳಿಂದ ನಿರಂತರವೂ ಸ್ರವಿಸುತ್ತಿರುವ ಮದಧಾರೆಯನ್ನು ಪಾನಮಾಡಿ, ಅದರ ಮದದಿಂದ ಅಂಗಾಂಗಗಳೆಲ್ಲವೂ ವಶತಪ್ಪಿಹೋಗಿ ಚಂಚಲವಾದ ಆ ಗಣಪತಿಯ ಕಿವಿಗಳ ಏಟಿಗೆ ಗುರಿಯಾದ ಭ್ರಮರಗಳು ಮಧುರವಾಗಿ ಧ್ವನಿಮಾಡುತ್ತಾ ಫಾಲಚಂದ್ರಧಾರಿಯಾದ ಆತನನ್ನು ಸೇವಿಸುತ್ತಿದ್ದುವು.

೫೪–೫೫. ಮತ್ತು ಆ ಗಣಪತಿಯು ಕಾಂತಿಯಲ್ಲಿ ಎಳೆಯ ಸೂರ್ಯನನ್ನು ಹೋಲುತ್ತಾ ಶುಭ್ರವಾದ ತೋಳುಬಳೆಗಳಿಂದಲೂ, ಚಿನ್ನದ ಸರಗಳಿಂದಲೂ, ಕತ್ತಿನಲ್ಲಿ ಧರಿಸಿರುವ ಆಭರಣಗಳಿಂದಲೂ, ಕಿರೀಟದಿಂದಲೂ, ಹೊರಹೊಮ್ಮುತ್ತಿರುವ ಕಾಂತಿಯಿಂದ ಮೈಯಲ್ಲೆಲ್ಲಾ ಮತ್ತಷ್ಟು ಹೆಚ್ಚಾಗಿ ಹೊಳಪನ್ನು ತಾಳಿ ಮೆರೆಯುತ್ತಾ,

ಆಖುಸ್ಥಮೇಕದಶನಂ ಗಜಭವ್ಯಮೂರ್ತಿಃ
ಪಾಶಾಂಕುಶಾಂಬುಜಕುಠಾರಚಯಂ ದಧಾನಂ ॥ ೫೫ ॥

ಪ್ರಾಂಶುಂ ಚತುರ್ಭುಜಮತೀವ ಮೃಧೇ ಪ್ರವೃತ್ತಂ
ಕಾಂಶ್ಚಿತ್ಪ್ರಗೃಹ್ಯ ಚ ಕರೇಣ ಧೃತಾಂಕುಶೇನ ।
ಸಂಮರ್ದಯಂತಮುರುಧಾರಪರಶ್ವಥೇನ
ಶ್ರೀಭಾರ್ಗವೀಂದ್ರಮಿವ ಶಸ್ತ್ರಭೃತಃ ಸಮಸ್ತಾನ್ ॥ ೫೬ ॥

ವೀರೇಭವಾಜಿರಥಸಂಘಬಲಿಂ ನಿಪಾತ್ಯ
ಸಾಂಬಂ ಪ್ರಗೃಹ್ಯ ಸರಥಂ ಪ್ರಧನಾತ್ಕ್ಷಿಪಂತಂ ।
ತಂ ವೀಕ್ಷ್ಯ ವಿಸ್ಮಿತಮನಾಃ ಸಗಣೋಽಥ ಕಾರ್ಷ್ಣಿಃ
ಪುತ್ರಂ ಸುಬುದ್ಧಿಮನಿರುದ್ಧಮುವಾಚ ಸಮ್ಯಕ್ ॥ ೫೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಯಕ್ಷಯುದ್ಧವರ್ಣನಂ ನಾಮ ಚತುರ್ವಿಂಶೋಽಧ್ಯಾಯಃ

ಒಂಟಿಯಾದ ಕೊಂಬಿನಿಂದಲೂ, ಆನೆಯನ್ನು ಹೋಲುವ ಭವ್ಯವಾದ ಶರೀರದಿಂದಲೂ ಒಪ್ಪುತ್ತಾ, ಕೈಯಲ್ಲಿ ಪಾಶವನ್ನೂ, ಅಂಕುಶವನ್ನೂ, ಪದ್ಮವನ್ನೂ, ಕುಠಾರವನ್ನೂ ಧರಿಸಿ, ವಾಹನವಾದ ಮೂಷಕನ ಮೇಲೆ ಕುಂಡಿಸಿ ವಿರಾಜಿಸುತ್ತಿದ್ದನು.

೫೬. ಈ ರೀತಿಯಾಗಿ ನಾಲ್ಕು ತೋಳುಗಳಿಂದಲೂ, ಉನ್ನತವಾದ ದೇಹ ದಿಂದಲೂ ಕಂಗೊಳಿಸುತ್ತಿದ್ದ ಆ ಗಜಾನನನು ಆ ರಣರಂಗದಲ್ಲಿ ಕೆಲಕೆಲವರನ್ನು ಹಿಡಿದುಕೊಂಡು ತನ್ನ ಕೈಲಿದ್ದ ಅಂಕುಶದಿಂದಲೂ, ಅತಿ ತೀಕ್ಷ್ಣವಾದ ಅಲುಗುಳ್ಳ ಪರಶ್ವಥದಿಂದಲೂ, ನುಚ್ಚುನೂರು ಮಾಡುತ್ತಾ, ಪರಶುರಾಮನಂತೆ ಶಸ್ತ್ರಧಾರಿಗಳೆಲ್ಲ ರನ್ನೂ ತುಂಡರಿಸುತ್ತಾ ಬಂದನು.

೫೭. ಮತ್ತು ಆ ಯದುಸೇನೆಯಲ್ಲಿದ್ದ ಯೋಧರನ್ನೂ, ಆನೆ ಕುದುರೆಗಳನ್ನೂ, ತೇರುಗಳನ್ನೂ ತಂಡತಂಡವಾಗಿ ತುಂಡರಿಸಿ ಕೆಡಹಿದುದಲ್ಲದೆ, ಸಾಂಬನನ್ನು ಅವನ ರಥದೊಡನೆ ಒಕ್ಕಡೆಗೆ ಎಸೆದುಬಿಟ್ಟನು. ಹೀಗೆ ಮುನ್ನುಗ್ಗಿ ಬರುತ್ತಿರುವ ಆ ಗಣಪತಿ ಯನ್ನು ಕಂಡು ಪ್ರದ್ಯುಮ್ನನು ಬಹು ಆಶ್ಚರ್ಯವನ್ನು ತಾಳಿ, ತನ್ನ ಮಗನಾದ ಅನಿರುದ್ಧನನ್ನು ಕುರಿತು ಈ ರೀತಿ ನುಡಿದನು:—

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀನಾರದಬಹುಲಾಶ್ವ
ಸಂವಾದದಲ್ಲಿ ಯಕ್ಷಯುದ್ಧವರ್ಣನೆಯೆಂಬ
ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಪಂಚವಿಂಶೋಽಧ್ಯಾಯಃ

॥ ಪ್ರದ್ಯುಮ್ನ ಉವಾಚ ॥

ಶ್ರೀಕೃಷ್ಣಸ್ಯ ಕಲಾ ಸಾಕ್ಷಾದ್ಗಣೇಶೋಽಯಂ ಮಹಾಬಲಃ ।
ಜೇತುಂ ನ ಶಕ್ಯೋ ದಿವಿಜೈರ್ಮನುಷ್ಯೈಸ್ತು ಕುತೋ ಭುವಿ ॥ ೧ ॥

ವರ್ತತೇ ಯತ್ರ ನಿಕಟೇ ತತ್ರ ನಾಸ್ತಿ ಪರಾಜಯಃ ।
ಶ್ರೀಕೃಷ್ಣೇನ ವರೋ ದತ್ತೋ ಪುರಾಸ್ಮೈ ಶಂಕರಾಲಯೇ ॥ ೨ ॥

ಯದ್ಯಯಂ ವರ್ತತೇ ಚಾತ್ರ ತದಾ ನ ಸ್ಯಾಜ್ಜಯಶ್ಚ ನಃ ।
ಶತ್ರುಪಕ್ಷಗತೋಽಯಂ ವೈ ಶ್ರೀಕೃಷ್ಣಸ್ಯ ವರೋರ್ಜಿತಃ ॥ ೩ ॥

ಇಪ್ಪತ್ತೈದನೆಯ ಅಧ್ಯಾಯವು

೧. ರಾಜೇಂದ್ರ! ಆಲಿಸು. ಆ ಪ್ರದ್ಯುಮ್ನನು ಅನಿರುದ್ಧನನ್ನು ಕುರಿತು ಅನಿರುದ್ಧ! ಈ ಗಣೇಶನು ಸಾಕ್ಷಾತ್ ಶ್ರೀಕೃಷ್ಣನ ಅಂಶವು. ಈತನನ್ನು ಗೆಲ್ಲಲು ದೇವತೆಗಳಿಗೂ ಸಾಧ್ಯವಿಲ್ಲವು. ಹೀಗಿರುವಾಗ ಮನುಷ್ಯರು ಇವನನ್ನು ಗೆಲ್ಲುವು ದೆಂಪರೇನು?

೨. ಅಮೂ ಅಲ್ಲದೆ ಹಿಂದೆ ಶಿವನ ನಿವಾಸವಾದ ಕೈಲಾಸದಲ್ಲಿ ಶ್ರೀಕೃಷ್ಣನೇ ಈತನಿಗೆ ನೀನಿರುವ ಕಡೆ ಎಂದೆಂದಿಗೂ ಸೋಲು ಉಂಟಾಗದಿರಲಿ" ಎಂಬುದಾಗಿ ವರವನ್ನು ಇತ್ತಿರುವನು.

೩. ಆದುದರಿಂದ ಈ ವೀರನು ಇಲ್ಲಿಯೇ ಇರುವ ಪಕ್ಷಕ್ಕೆ ನಮಗೆ ಖಂಡಿತ ವಾಗಿಯೂ ಗೆಲವು ಉಂಟಾಗಲಾರದು. ಶ್ರೀಕೃಷ್ಣನ ವರದಿಂದ ವಿಶೇಷವಾಗಿ ಬಲಶಾಲಿಯೆನಿಸಿದ ಈತನು ಈಗ ನಮ್ಮ ಶತ್ರುಪಕ್ಷದಲ್ಲಿ ಸೇರಿಬಿಟ್ಟಿರುವನು.

ತಸ್ಮಾತ್ತ್ವಂ ಚಂಡಮಾರ್ಜಾರೋ ಭೂತ್ವಾ ಸಂಯುದ್ಧತೋ ಬಲಾತ್ ।
ವಿದ್ರಾವಯ ಮಹಾಯುದ್ಧೇ ಫೂತ್ಕಾರೈಶ್ಚ ದಿಶೋ ದಶ ॥ ೪ ॥

ಯಾವದ್ಬಲಂ ವಿಜೇಷ್ಯಾಮಿ ತಾವದ್ವಿದ್ರಾವಯ ತ್ವರಂ ।
॥ ಶ್ರೀ ನಾರದ ಉವಾಚ ॥
ಅಥಾನಿರುದ್ಧೋ ಭಗವಾಂಶ್ಚಂಡಮಾರ್ಜಾರರೂಪಧೃಕ್ ॥ ೫ ॥

ಅಲಕ್ಷಿತೋ ಗಣೇಶೇನ ನ ಜ್ಞಾತೋ ವಿಷ್ಣುಮಾಯಯಾ ।
ಫೂತ್ಕಾರಮುತ್ಕಟಂ ಕುರ್ವನ್ನಸ್ಯ ಪಾತಾಖುಸಂಮುಖೇ ॥ ೬ ॥

ವಿದಾರಯನ್ಮುಖಂ ರಾಜನ್ಸತತಂ ನಖರೈಃ ಪರೈಃ ।
ವಿಶೇಷೇಣ ಸಹ್ಯೈವಾಖುರ್ದೃಷ್ಟ್ವಾಶು ಭಯವಿಹ್ವಲಃ ॥ ೭ ॥

---

೪. ಆದುದರಿಂದ ನೀನು ಈಗ ಭಯಂಕರವಾದ ಬೆಕ್ಕಿನ ಆಕಾರವನ್ನು ತಾಳಿ ಯುದ್ಧರಂಗದಲ್ಲಿ ಜೋರಾಗಿ ಫೂತ್ಕಾರಗಳನ್ನು ಮಾಡುತ್ತಾ ನಿನ್ನ ಶಕ್ತಿಯೆಲ್ಲವನ್ನೂ ಉಪಯೋಗಿಸಿ ಈತನನ್ನು ಇಲ್ಲಿಂದ ದಿಕ್ಕು ದಿಕ್ಕಿಗೂ ಓಡಿಹೋಗುವಂತೆ ಮಾಡು.

೫–೬. ನಾನು ಉಳಿದ ಯಕ್ಷಸೇನೆಯೆಲ್ಲವನ್ನೂ ಗೆಲ್ಲುವುದರೊಳಗಾಗಿ ನೀನೀತನನ್ನು ಓಡಿಸಿಬಿಡಬೇಕು" ಎಂದನು. ರಾಜೇಂದ್ರ! ಈ ರೀತಿ ಪ್ರದ್ಯುಮ್ನನು ನುಡಿದುದನ್ನು ಕೇಳಿ ಆ ಅನಿರುದ್ಧನು ಭಯಂಕರವಾದ ಬೆಕ್ಕಿನ ರೂಪವನ್ನು ತಾಳಿದನು. ಶ್ರೀಕೃಷ್ಣನ ಮಾಯಾಪ್ರಭಾವದಿಂದ ಆ ಗಣಪತಿಗೆ ಈ ಬೆಕ್ಕು ಕಣ್ಣಿಗೆ ಬೀಳಲಿಲ್ಲ. ಬಳಿಕ ಆ ಬೆಕ್ಕು ಬಹು ಜೋರಾಗಿ ಫೂತ್ಕಾರವನ್ನು ಮಾಡುತ್ತಾ ಆತನ ವಾಹನವಾದ ಇಲಿಯ ಮುಂದೆ ಬಂದು,

೭. ಅದರ ಮುಖವನ್ನು ತನ್ನ ಕ್ರೂರವಾದ ಉಗುರುಗಳಿಂದ ಪರಚುತ್ತಾ ಮೇಲೆ ಬೀಳತೊಡಗಿತು ಇಲಿಗೆ ಸಹಜವಾಗಿಯೇ ಬೆಕ್ಕನ್ನು ಕಂಡರೆ ಭಯ! ಈಗ ಎಂತೂ ಈ ಕೃತ್ರಿಮ ಮಾರ್ಜಾಲವನ್ನು ಕಂಡು ಗಣಪತಿಯ ವಾಹನವಾದ ಇಲಿಯು ವಿಶೇಷವಾಗಿ ಭಯದಿಂದ ತಲ್ಲಣಿಸುತ್ತಾ,

ದುದ್ರಾವ ತ್ವರಿತಂ ರಾಜನ್ಕಂಪಿತೋ ರಣಮಂಡಲಾತ್ ।
ತಮನ್ವಗಚ್ಛನ್ಕುಪಿತೋ ಮಾರ್ಜಾರಃ ಸ್ಥೂಲರೂಪಧೃಕ್ ॥ ೮ ॥

ಮೂಷಕಂ ಸ್ವಮುಪೋವಾಹ ಗಣೇಶೋಽಪಿ ಮುಹುರ್ಮುಹುಃ ।
ನಾಯಯೌ ಸ್ವಂ ರಣಂ ಚಾಖುಶ್ಚಂಡಮಾರ್ಜಾರಪೀಡಿತಃ ॥ ೯ ॥

ಸಪ್ತದ್ವೀಪಾನ್ಸಪ್ತಸಿಂಧೂನ್ದಿಶಾಸು ವಿದಿಶಾಸು ಚ ।
ಧಾವನ್ಸ್ವೈ ಸಪ್ತಲೋಕೇಷು ನ ಲೇಭೇ ಶರ್ಮ ಮೈಥಿಲ ॥ ೧೦ ॥

ಯತ್ರ ಯತ್ರ ಗತಶ್ಚಾಖುರ್ಗಣೇಶೇನ ಸಮನ್ವಿತಃ ।
ತತ್ರ ತತ್ರ ಗತೋ ರಾಜನ್ಮಾರ್ಜಾರಶ್ಚಂಡವಿಕ್ರಮಃ ॥ ೧೧ ॥

---

೮. ಮೈಕೈಗಳು ನಡುಗಹತ್ತಿ ಮಹಾ ವೇಗದಿಂದ ಆ ಯುದ್ಧರಂಗದ ಆಚೆಗೆ ಓಡಿಹೋಯಿತು. ಅದನ್ನು ಕಂಡು ಆ ಮಾಯಾ ಮಾರ್ಜಾಲವು ಮತ್ತಷ್ಟು ದಪ್ಪವಾದ ಆಕಾರವನ್ನು ತಾಳಿ ಕೋಪದಿಂದ ಆ ಮೂಷಿಕವನ್ನು ಅಟ್ಟಿಸಿಕೊಂಡು ಹೋಯಿತು.

೯. ಈ ರೀತಿ ಓಡಿಹೋಗುತ್ತಿರುವ ಆ ಮೂಷಕವನ್ನು ತಡೆದು ನಿಲ್ಲಿಸಲು ಗಣಪತಿಯು ಎಷ್ಟು ಪ್ರಯತ್ನಿಸಿದರೂ ಫಲಿಸದೇ ಹೋಯಿತು. ಆ ಮೂಷಿಕವು ಭೀಕರವಾದ ಆ ಮಾರ್ಜಾಲದ ಪೀಡೆಗೆ ಒಳಗಾಗಿದ್ದುದರಿಂದ ಮತ್ತೆ ಯುದ್ಧರಂಗವನ್ನು ಪ್ರವೇಶಿಸಲಿಲ್ಲ.

೧೦. ಈ ರೀತಿಯಾಗಿ ಆ ಗಣಪತಿಯ ಮೂಷಿಕವು ಪೂರ್ವವೇ ಮೊದಲಾದ ದಿಕ್ಕುಗಳಲ್ಲಿಯೂ, ಆಗ್ನೇಯವೇ ಮೊದಲಾದ ದಿಕ್ಕುಗಳಲ್ಲಿಯೂ, ಓಡುತ್ತಾ ಏಳು ದ್ವೀಪಗಳನ್ನೂ, ಏಳು ಸಮುದ್ರಗಳನ್ನೂ, ಏಳು ಲೋಕಗಳನ್ನೂ ಸುತ್ತಿಬಿಟ್ಟಿತು. ಆದರೇನು ? ಅದು ಬೇರೆ ನೆಮ್ಮದಿಯನ್ನು ಹೊಂದಲಿಲ್ಲ.

೧೧. ಓ ರಾಜೇಂದ್ರ! ಆ ಅದ್ಭುತವಾದ ಪರಾಕ್ರಮವುಳ್ಳ ಮಾಯಾ ಮಾರ್ಜಾಲವು ಗಣಪತಿಯನ್ನು ಹೊತ್ತು ಆ ಮೂಷಿಕವು ಎಲ್ಲೆಲ್ಲಿಗೆ ಹೋದರೂ ಅಲ್ಲಿಲ್ಲಾ ಅಟ್ಟಿಸಿಕೊಂಡೇ ಹಿಂದೆ ಹಿಂದೆ ಬರುತ್ತಿತ್ತು.

ಏವಂ ಸಮೂಷಕೇ ಯಾತೇ ಗಣೇಶೇ ವಿದಿಶೋತ್ತರಂ ।
ವಿಸ್ಮಿತೇಷು ಸಪಕ್ಷೇಷು ಗಣೇಷು ಪ್ರಮಥೇಷು ಚ ॥ ೧೨ ॥

ಪುಷ್ಪಕಸ್ಥಃ ಕುಬೇರೋಽಸೌ ಮಾಯಾಂ ಚಕ್ರೇಽಥ ಗೌಹ್ಯಕೀಂ ।
ಗೃಹೀತ್ವಾ ಸ್ವಧನುರ್ದಿವ್ಯಂ ನಮಸ್ಕೃತ್ಯ ಮಹೇಶ್ವರಂ ॥ ೧೩ ॥

ಸಮಂತ್ರಂ ಕವಚಂ ಧೃತ್ವಾ ಬಾಣಸಂಘಂ ಸಮಾದಧೇ ।
ತದೈವ ಛಾದಿತಂ ವ್ಯೋಮ ಮೇಘೈಃ ಸಾಂವರ್ತಕೈರಿವ ॥ ೧೪ ॥

ತಡಿತ್ಸ್ವನೈರ್ಮಹಾಭೀಮೈಸ್ತಮೋಽಭೂತ್ತ್ಸನಯಿತ್ನುಭಿಃ ।
ಬಿಂದವೋ ಹಸ್ತಿಸದೃಶಾ ನಿಪೇತುಃ ಸೋಪಲಾ ಮೃಧೇ ॥ ೧೫ ॥

---

೧೨. ಈ ರೀತಿಯಾಗಿ ಗಣಪತಿಯು ತನ್ನ ವಾಹನದೊಂದಿಗೆ ದಿಕ್ಕೆಟ್ಟು ಓಡಿಹೋದುದನ್ನು ಕಂಡು ಅವನ ಕಡೆಯ ಗಣಗಳೂ ಪ್ರಥಮರೂ ವಿಶೇಷವಾಗಿ ಆಶ್ಚರ್ಯವನ್ನು ಹೊಂದಿದರು.

೧೩. ಇದನ್ನು ಕಂಡು ಪುಷ್ಪಕ ವಿಮಾನದಲ್ಲಿ ಕುಳಿತಿದ್ದ ಕುಬೇರನು ತನ್ನ ಗುಹ್ಯಕ ಮಾಯೆಯನ್ನು ಬೀರತೊಡಗಿದನು. ಅವನು ತನ್ನ ಕೈಗೆ ಧನುಸ್ಸನ್ನು ತೆಗೆದುಕೊಂಡು ಶಿವನನ್ನು ನಮಸ್ಕರಿಸಿ,

೧೪. ಮಂತ್ರಪೂರ್ವಕವಾಗಿ ಕವಚವನ್ನು ತೊಟ್ಟು ಬಾಣಗಳನ್ನು ಹೂಡಿ ಬಿಡತೊಡಗಿದನು. ಆ ಕೂಡಲೇ ಆಕಾಶವೆಲ್ಲವೂ ಪ್ರಳಯ ಕಾಲದಲ್ಲಿ ಮುತ್ತಿ ಬರುವ ಮೇಘಗಳಂತೆ ಭಯಂಕರವಾಗಿರುವ ಮೋಡಗಳಿಂದ ಕವಿಯಲ್ಪಟ್ಟಿತು.

೧೫. ಆ ಮೋಡಗಳು ಮಿಂಚುಗಳಿಂದಲೂ, ಸಿಡಿಲು ಮತ್ತು ಗುಡುಗು ಗಳಿಂದಲೂ ವಿಶೇಷವಾಗಿ ಹೆದರಿಕೆಯನ್ನು ಹುಟ್ಟಿಸುತ್ತಾ ಸುತ್ತಲೂ ಕತ್ತಲನ್ನು ಕವಿಸಿ ಬಿಟ್ಟುವು. ಆ ಮೋಡಗಳಿಂದ ಆನೆಯಷ್ಟು ಗಾತ್ರದ ದಪ್ಪ ದಪ್ಪ ಹನಿಗಳೂ, ಆನೆ ಕಲ್ಲುಗಳೂ ಬೀಳತೊಡಗಿದುವು.

ಧಾರಾಭಿರತಿಘೋರಾಭಿರ್ವವೃಷುರ್ವಾರಿದಾಸ್ತತಃ ।
ಕ್ಷಣೇನ ಸಿಂಧವಃ ಸರ್ವೇ ಪ್ಲಾವಯಂತೋ ಧರಾತಲಂ ॥ ೧೬ ॥

ಪರ್ವತೈರ್ಜೀವಸಹಿತೈರ್ದೃಶ್ಯಂತೇ ರಣಮಂಡಲೇ ।
ಪ್ರಾಕೃತಾಃ ಪ್ರಲಯಂ ಮತ್ವಾ ಯಾದವಾ ಭಯವಿಹ್ವಲಾಃ ॥ ೧೭ ॥

ತ್ಯಕ್ತ್ವಾ ಶಸ್ತ್ರಾಣಿ ತೇ ಘೋಚುಃ ಶ್ರೀಕೃಷ್ಣೇತಿ ಮುಹುರ್ಮುಹುಃ ।
ಜ್ಞಾತ್ವಾ ತಾಂ ಗೌಹ್ಯಕೀಂ ಮಾಯಾಂ ಪ್ರದ್ಯುಮ್ನೋ ಭಗವಾನ್ಹರಿಃ ॥ ೧೮ ॥

ಸತ್ವಾತ್ಮಿಕಾಂ ಚ ಸ್ವಾಂ ವಿದ್ಯಾಂ ಸರ್ವಮಾಯೋಪಮರ್ದಿನೀಂ ।
ಜಪ್ತ್ವಾ ಕೃತ್ವಾ ಕಾಮಬೀಜಂ ಬಾಣಮಧ್ಯೇ ನಿಧಾಯ ತತ್ ॥ ೧೯ ॥

---

೧೬. ಅನಂತರ ಆ ಮೇಘಗಳು ಅತಿ ಭಯಂಕರವಾದ ರೀತಿಯಲ್ಲಿ ಧಾರಾಕಾರವಾಗಿ ಮಳೆಯನ್ನು ಸುರಿಸಿದುವು. ಆ ಮಳೆಯಿಂದ ಕ್ಷಣಮಾತ್ರದಲ್ಲಿಯೇ ಆ ಯುದ್ಧರಂಗದಲ್ಲಿ ಭೂಮಂಡಲವನ್ನೆಲ್ಲಾ ಕೊಚ್ಚಿಕೊಂಡು ಹೋಗುವಂತಹ ಭಾರಿ ಭಾರಿಯಾದ ನದಿಗಳು ಹರಿಯತೊಡಗಿದುವು.

೧೭. ಈ ರೀತಿಯಾಗಿ ಆ ರಣರಂಗದಲ್ಲಿ ಹೊಳೆಗಳು ಪರ್ವತಗಳಿಂದ ಹರಿದುಬರುವ ಜೀವನದಿಗಳಂತೆ ಹರಿಯತೊಡಗಿದುದನ್ನು ಕಂಡು ಪ್ರಾಕೃತರಾದ (ಅತಿಸಾಮಾನ್ಯರಾದ) ಯಾದವರು ಇದೇ ಪ್ರಳಯವೆಂದು ಭಾವಿಸಿ ಭಯದಿಂದ ತತ್ತಳಿಸುತ್ತಾ,

೧೮. ತಮ್ಮ ಕೈಲಿರುವ ಶಸ್ತ್ರಾಸ್ತ್ರಗಳೆಲ್ಲವನ್ನೂ ಬಿಸುಟು ಬಾರಿಬಾರಿಗೂ ಕೃಷ್ಣಾ! ಕೃಷ್ಣಾ! ಎಂಬುದಾಗಿ ಹಂಬಲಿಸತೊಡಗಿದರು. ಆಗ ಸಾಕ್ಷಾತ್ ಶ್ರೀಕೃಷ್ಣನ ಸ್ವರೂಪವೆನಿಸಿದ ಆ ಪ್ರದ್ಯುಮ್ನನು ಇದೆಲ್ಲವೂ ಕುಬೇರನ ಗುಹ್ಯಕ ಮಾಯೆಯೆಂದರಿತು,

೧೯. ಸಕಲ ಮಾಯೆಗಳನ್ನು ಮೆಟ್ಟಿ ಮುರಿಯುವಂತಹ ಸತ್ವಾತ್ಮಕವಾದ ತನ್ನ ಮಾಯೆಯನ್ನು ಜಪಿಸುತ್ತಾ ಬಾಣವೊಂದನ್ನು ತೆಗೆದುಕೊಂಡು ಅದರ ಮಧ್ಯದಲ್ಲಿ ಕಾಮಬೀಜವನ್ನೂ,

ಮುಖೇ ಚ ಪ್ರಣವಂ ಧೃತ್ವಾ ಮುಖೇ ಶ್ರೀ ಬೀಜಮೇವ ಚ ।
ಆಕೃಷ್ಯ ಕರ್ಣಪರ್ಯಂತಂ ಕೃಷ್ಣಂ ಸ್ಮೃತ್ವಾ ಚತುರ್ಭುಜಂ ॥ ೨೦ ॥

ಚಿಕ್ಷೇಪ ವಿಶಿಖಂ ಚಾಪಾದ್ದೋರ್ದಂಡಾಭ್ಯಾಂ ತಡಿತ್ಸ್ವನಾತ್ ।
ಕೋದಂಡಮುಕ್ತೋ ವಿಶಿಖೋ ದ್ಯೋತಯನ್ಮಂಡಲಂ ದಿಶಾಂ ॥ ೨೧ ॥

ಜಘಾನ ಗೌಹ್ಯಕೀಂ ಮಾಯಾಮಂಧಕಾರಂ ಯಥಾ ರವಿಃ ।
ಭಯಭೀತೋ ರಾಜರಾಜೋ ಪುಷ್ಪಕಸ್ಥೋ ರಣಾಂಗಣಾತ್ ॥ ೨೨ ॥

ಪಲಾಯಮಾನೋ ಯಕ್ಷೈಶ್ಚ ಕಂಪಿತಃ ಸ್ವಪುರೀಂ ಯಯೌ ।
ಪ್ರದ್ಯುಮ್ನಸ್ಯೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೨೩ ॥

ಜಹಸುರ್ಯಾದವಾಃ ಸರ್ವೇ ಜಯಾರಾವಸಮಾಕುಲಾಃ ।
ತದಾತಿಹರ್ಷಿತೋ ರಾಜನ್ರಾಜರಾಜಃ ಕೃತಾಂಜಲಿಃ ॥ ೨೪ ॥

---

೨೦. ಮುಖಭಾಗದಲ್ಲಿ ಪ್ರಣವವನ್ನೂ, ಮತ್ತು ಶ್ರೀಬೀಜವನ್ನೂ ನಿಲ್ಲಿಸಿ ಚತುರ್ಬಾಹು ಸಮೇತನಾದ ಶ್ರೀಹರಿಯನ್ನು ಸ್ಮರಿಸುತ್ತಾ ಆ ಬಾಣವನ್ನು ಕಿವಿಯ ವರೆಗೂ ಸೆಳೆದು,

೨೧. ತನ್ನ ಬಾಹುಗಳ ಶಕ್ತಿಯೆಲ್ಲವನ್ನೂ ಬಿಟ್ಟು, ಸಿಡಿಲಿನಂತಹ ಧ್ವನಿ ಯುಂಟಾಗುವಂತೆ ಜೋರಾಗಿ ಪ್ರಯೋಗಿಸಿದನು. ಈ ರೀತಿಯಾಗಿ ಪ್ರದ್ಯುಮ್ನನ ಧನುಸ್ಸಿನಿಂದ ಬಿಡಲ್ಪಟ್ಟ ಆ ಬಾಣವು ದಿಕ್ಕುಗಳೆಲ್ಲವನ್ನೂ ಬೆಳಗುತ್ತಾ, ಸೂರ್ಯನು ಕತ್ತಲನ್ನು ನಾಶಮಾಡುವಂತೆ ಆ ಗುಹ್ಯಕ ಮಾಯೆಯನ್ನು ನಾಶಪಡಿಸಿಬಿಟ್ಟಿತು.

೨೨–೨೩. ಆ ಪುಷ್ಪಕದಲ್ಲಿ ಕುಳಿತಿದ್ದ ಆ ರಾಜರಾಜನು (ಕುಬೇರ) ವಿಶೇಷ ವಾಗಿ ಭಯವನ್ನು ಹೊಂದಿ, ಭಯದಿಂದ ನಡುಗುತ್ತಿರುವ ಯಕ್ಷರೊಂದಿಗೆ ಆ ಯುದ್ಧ ರಂಗದಿಂದ ತನ್ನ ಊರಿಗೆ ಓಡಿಹೋದನು. ಆಗ ದೇವತೆಗಳು ಪ್ರದ್ಯುಮ್ನನ ಮೇಲೆ ಹೂವಿನ ಮಳೆಯನ್ನು ಸುರಿಸಿದರು.

೨೪. ಯಾದವರೆಲ್ಲರೂ ಸಂತೋಷದಿಂದ ವಿಜಯಧ್ವನಿಯನ್ನು ಮಾಡುತ್ತಾ ಆ ಕುಬೇರನನ್ನು ಅಪಹಾಸ್ಯಮಾಡಿ ನಕ್ಕರು. ರಾಜೇಂದ್ರ! ಅನಂತರ ಆ ರಾಜ ರಾಜನು ಕೈಗಳನ್ನು ಮುಗಿದುಕೊಂಡು ಮಹಾಸಂತೋಷದಿಂದ

ಬಲಿಂ ನೀತ್ವಾ ಯಯೌ ಶೀಘ್ರಂ ಪ್ರದ್ಯುಮ್ನಸ್ಯಾಪಿ ಸಂಮುಖೇ ।
ಗಜೇಂದ್ರಾಣಾಂ ದ್ವಿಲಕ್ಷಂ ಚ ದ್ವಿಶುಂಡಾದಂಡಶಾಲಿನಾಂ ॥ ೨೫ ॥

ದದ್ಭಿಶ್ಚತುರ್ಭಿರ್ಯುಕ್ತಾನಾಮದ್ರೀನ್ಸ್ಪರ್ಧಯತಾಂ ಮದೈಃ ।
ದಶಲಕ್ಷಂ ರಥಾನಾಂ ಚ ಮುಕ್ತಾತೋರಣಶಾಲಿನಾಂ ॥ ೨೬ ॥

ಶತಾಶ್ವಯೋಜಿತಾನಾಂ ಚ ರೌಕ್ಮಾಣಾಂ ಸೂರ್ಯವರ್ಚಸಾಂ ।
ದಶಾರ್ಬುದಂ ತಥಾ ರಾಜನ್ಹಯಾನಾಂ ಚಂದ್ರವರ್ಚಸಾಂ ॥ ೨೭ ॥

ಶಿಬಿಕಾನಾಂ ಚತುರ್ಲಕ್ಷಂ ಮಾಣಿಕ್ಯೈರಗ್ರವರ್ಚಸಾಂ ।
ಪಂಜರಸ್ಥಾಯಿನಾಂ ರಾಜನ್ ಶಾರ್ದೂಲಾನಾಂ ದ್ವಿಲಕ್ಷಕಂ ॥ ೨೮ ॥

ಚಿತ್ರಕಾಣಾಂ ಮೃಗಾಣಾಂ ಚ ಗವಯಾನಾಂ ತಥೈವ ಚ ।
ಮೃಗಯಾಸಾರಮೇಯಾನಾಂ ಕೋಟಿಕೋಟಿರ್ವಿದೇಹರಾಟ್ ॥ ೨೯ ॥

---

೨೫. ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಆ ಪ್ರದ್ಯುಮ್ನನ ಬಳಿಗೆ ಹೊರಟನು. ಆ ಉಪಾಯನ ವಸ್ತುಗಳಲ್ಲಿ ಎರಡುಲಕ್ಷ ಮದ್ದಾನೆಗಳು ಇದ್ದವು. ಅವು ಎರಡೆರಡು ಸೊಂಡಿಲುಗಳಿಂದಲೂ,

೨೬. ನಾಲ್ಕು ನಾಲ್ಕು ದಂತಗಳಿಂದಲೂ ಮೆರೆಯುತ್ತಾ, ತಮ್ಮ ಮದಾತಿಶಯ ದಿಂದ ಪರ್ವತಗಳನ್ನೂ ಸಹ ಲೆಕ್ಕಿಸದೆ ಸೆಣಸುವಂತಿದ್ದವು. ಇಂತಹ ಆನೆಗಳಲ್ಲದೆ ಮುತ್ತಿನ ಜಾಲರಿಗಳಿಂದ ಅಲಂಕರಿಸಲ್ಪಟ್ಟು

೨೭. ನೂರು ನೂರು ಕುದುರೆಗಳನ್ನು ಕಟ್ಟಿರುವಂತಹ ಕಾಂತಿಯಲ್ಲಿ ಸೂರ್ಯನಿ ಗೆಣೆಯೆನಿಸಿದ ಸುವರ್ಣನಿರ್ಮಿತವಾದ ಹತ್ತುಲಕ್ಷ ರಥಗಳೂ, ಚಂದ್ರನಂತೆ ಹೊಳೆಯುತ್ತಿರುವ ಹತ್ತು ಅರ್ಬುದ ಕುದುರೆಗಳೂ,

೨೮. ಕೆಂಪುಗಳನ್ನು ತೊಟ್ಟಿರುವುದರಿಂದ ವಿಶೇಷವಾಗಿ ಥಳಥಳಿಸುತ್ತಿರುವ ನಾಲ್ಕುಲಕ್ಷ ಮೇನೆಗಳೂ, ಪಂಜರಗಳಲ್ಲಿ ಸೆರೆ ಹಿಡಿಯಲ್ಪಟ್ಟ ಎರಡುಲಕ್ಷ ಹುಲಿಗಳೂ, ಕೋಟಿ ಕೋಟಿ ಸಂಖ್ಯೆಯುಳ್ಳ

೨೯. ಚಿರತೆಗಳೂ, ಜಿಂಕೆಗಳೂ, ಗವಯವೆಂಬ ಗೋಜಾತಿಗೆ ಸೇರಿದ ಪ್ರಾಣಿಗಳೂ, ಬೇಟೆಯ ನಾಯಿಗಳೂ,

ಶುಕಾನಾಂ ಸಾರಿಕಾಣಾಂ ಚ ಕಲಕಂಠಪ್ರವಾದಿನಾಂ |
ಹಂಸಾನಾಂ ಸ್ವರ್ಣವರ್ಣಾನಾಮನ್ಯೇಷಾಂ ಚಿತ್ರಪಕ್ಷಿಣಾಂ || ೩೦ ||

ಪಂಜರಸ್ಥಾಯಿನಾಂ ರಾಜನ್ ಲಕ್ಷಂ ಲಕ್ಷಂ ನೃಪೇಶ್ವರಂ |
ವಿಮಾನಂ ವಿಷ್ಣುದತ್ತಾಖ್ಯಂ ಮುಕ್ತಾದಾಮವಿಲಂಬಿತಂ || ೩೧ ||

ಅಷ್ಟಯೋಜನಮುಚ್ಚಾಂಗಂ ನವಯೋಜನವಿಸ್ತೃತಂ |
ಲಕ್ಷಕುಂಭಧ್ವಜೋಪೇತಂ ನಿರ್ಮಿತಂ ವಿಶ್ವಕರ್ಮಣಾ || ೩೨ ||

ಕಾಮಗಂ ಸ್ವರ್ಣಶಿಖರಂ ಸಹಸ್ರಾದಿತ್ಯ ಸುಪ್ರಭಂ |
ಸಹಸ್ರಂ ಕುಲವೃಕ್ಷಾಣಾಂ ಕಾಮಧೇನುಶತಂ ತಥಾ || ೩೩ ||

ಚಿಂತಾಮಣೀನಾಂ ಚ ಶತಂ ಶತಂ ದಿವ್ಯಾಶ್ಮನಾಂ ತಥಾ |
ಯತ್ಸ್ಪರ್ಶೇಶಾಪಿ ಲೋಹಸ್ತು ಹೇಮತ್ವಂ ಯಾತಿ ಮೈಥಿಲ || ೩೪ ||

---

೩೦. ಮತ್ತು ಪಂಜರಗಳಲ್ಲಿ ಕೂಡಿಹಾಕಲ್ಪಟ್ಟು ಮಧುರವಾದ ಧ್ವನಿಯಿಂದ ಮಾತನಾಡುವ ಲಕ್ಷ ಲಕ್ಷ ಸಂಖ್ಯೆಯ ಗಿಳಿಗಳೂ, ಹೆಣ್ಣುಗಿಳಿಗಳೂ, ಹೊಂಬಣ್ಣದ ಹಂಸಗಳೂ, ಇವಲ್ಲದೆ ಇನ್ನೂ ಇತರ ವಿಚಿತ್ರವಾದ ಪಕ್ಷಿಗಳೂ ಉಪಾಯನ ವಸ್ತುಗಳಾಗಿ ಸೇರಿದ್ದುವು.

೩೧-೩೩. ಇವುಗಳಲ್ಲದೆ ಎಂಟು ಯೋಜನದಷ್ಟು ಎತ್ತರವಾಗಿಯೂ, ಒಂಭತ್ತು ಯೋಜನದಷ್ಟು ಅಗಲವಾಗಿಯೂ ಇದ್ದು, ಲಕ್ಷ ಕಲಶಗಳಿಂದಲೂ, ಲಕ್ಷ ಧ್ವಜದಂಡಗಳಿಂದಲೂ, ತೂಗುಬಿಟ್ಟಿರುವ ಮುತ್ತಿನ ಸರಗಳಿಂದಲೂ ಮನೋಹರವಾಗಿ ಕಂಗೊಳಿಸುತ್ತಾ, ಎತ್ತರವಾದ ಸುವರ್ಣಶಿಖರವನ್ನು ತಳೆದು ತೇಜಸ್ಸಿನಲ್ಲಿ ಸಹಸ್ರಸೂರ್ಯರಿಗೆ ಸರಿಸಮವೆನಿಸಿ ಇಷ್ಟಬಂದ ಕಡೆಗೆ ಸಂಚರಿಸಬಲ್ಲ ಶಕ್ತಿಯುಳ್ಳ, ವಿಶ್ವಕರ್ಮನಿರ್ಮಿತವಾದ ವಿಷ್ಣುದತ್ತವೆಂಬ ವಿಮಾನವೂ, ಸಾವಿರ ಕುಲವೃಕ್ಷಗಳೂ, ನೂರು ಕಾಮಧೇನುಗಳೂ,

೩೪. ಚಿಂತಾಮಣಿ ಎಂಬ ನೆನಸಿದ ವಸ್ತುಗಳನ್ನು ಒದಗಿಸಿಕೊಡುವಂತಹ ಸಾಮರ್ಥ್ಯವುಳ್ಳ ನೂರು ರತ್ನಗಳೂ, ತನ್ನ ಸ್ಪರ್ಶಮಾತ್ರದಿಂದಲೇ ಕಬ್ಬಿಣವನ್ನೂ ಚಿನ್ನವನ್ನಾಗಿ ಮಾಡಬಲ್ಲ ದಿವ್ಯವಾದ ಸ್ಪರ್ಶವೆಂಬ ನೂರು ಮಣಿಗಳೂ ಉಪಾಯನ ವಸ್ತುಗಳಾಗಿದ್ದುವು.

ಛತ್ರಾಣಾಂ ಚಾಮರಾಣಾಂ ಚ ಹೇಮಸಿಂಹಾಸನಂ ಶತಂ ।
ತಥಾ ಹಿ ದಿವ್ಯಪದ್ಮಾನಾಂ ಮಾಲಾಂ ಕಿಂಜಲ್ಕಿನೀಂ ಶುಭಾಂ ॥ ೩೫ ॥

ಶತಂ ದ್ರೋಣಂ ಪ್ರೀಯೂಷಸ್ಯ ಫಲಾನಿ ವಿವಿಧಾನಿ ಚ ।
ಖಚಿದ್ರತ್ನಸುವರ್ಣಾನಾಂ ಭೂಷಣಾನಾಂ ತು ವಾಸಸಾಂ ॥ ೩೬ ॥

ದಿವ್ಯಾನಾಂ ಕಂಬಲಾನಾಂ ಚ ಕೋಟಿಶಃ ಪಾತ್ರಸಂಚಯಂ ।
ಅಮೋಘಾನಾಂ ಚ ಶಸ್ತ್ರಾಣಾಂ ಕೋಟಿಸೌವರ್ಣಶಾಲಿನಾಂ ॥ ೩೭ ॥

ಗಜೈರ್ನರೈರ್ಭಾರವಾಹೈಃ ಪ್ರೇರಿತಾ ನಿಧಯೋ ನವ ।
ದತ್ವಾ ಬಲಿಂ ರಾಜರಾಜಃ ಪ್ರದ್ಯುಮ್ನಾಯ ಮಹಾತ್ಮನೇ ॥ ೩೮ ॥

---

೩೫. ಈ ಮೇಲ್ಕಂಡ ವಸ್ತುಗಳನ್ನಲ್ಲದೆ ಆ ಕುಬೇರನು ನೂರು ನೂರು ಛತ್ರಗಳನ್ನೂ, ಚಾಮರಗಳನ್ನೂ, ಸುವರ್ಣನಿರ್ಮಿತವಾದ ಸಿಂಹಾಸನಗಳನ್ನೂ, ದಿವ್ಯವಾದ ಪದ್ಮಗಳಿಂದ ರಾರಾಜಿಸುತ್ತಿರುವ ಶುಭಪ್ರದವಾದ ಕಿಂಜಲ್ಕಿನಿಯೆಂಬ ಮಾಲೆಯನ್ನೂ,

೩೬. ಅಮೃತಪೂರಿತವಾದಂತಹ ಒಂದುನೂರು ದ್ರೋಣಿ (ಕೊಪ್ಪರಿಗೆ ಅಥವಾ ಬುದ್ದಲಿ)ಗಳನ್ನೂ, ಬಗೆಬಗೆಯ ಹಣ್ಣುಹಂಪಲುಗಳನ್ನೂ, ದೇವತಾಯೋಗ್ಯವಾದಂತಹ ನವರತ್ನಖಚಿತಗಳಾದ ನಗನಟ್ಟುಗಳನ್ನೂ, ಜಿಲಿಬಿಲಿಗಳನ್ನೂ ಬಟ್ಟೆಗಳನ್ನೂ ಸೊಗಸಾದ ಶಾಲುಗಳನ್ನೂ,

೩೭. ಕೋಟಿಗಟ್ಟಲೆ ಪಾತ್ರೆ ಪದಾರ್ಥಗಳನ್ನೂ, ಎಂದಿಗೂ ವ್ಯರ್ಥವಾಗದಂತಹ ಚಿನ್ನದಿಂದ ನಿರ್ಮಿಸಲ್ಪಟ್ಟ ಕೋಟಿಸಂಖ್ಯಾಕವಾದ ಆಯುಧಗಳನ್ನೂ, ಆನೆಗಳಿಂದಲೂ, ಕೂಲಿಯಾಳುಗಳಿಂದಲೂ ಕೊಂಡೊಯ್ದು ತರಲ್ಪಟ್ಟ ನವನಿಧಿಗಳನ್ನೂ ಆ ಮಹಾತ್ಮನಾದ ಪ್ರದ್ಯುಮ್ನನಿಗೆ ಕಾಣಿಕೆಯಾಗಿ ಒಪ್ಪಿಸಿದನು.

೩೮. ಅನಂತರ ಆತನನ್ನು ಪ್ರದಕ್ಷಿಣಪೂರ್ವಕವಾಗಿ ನಮಸ್ಕಾರ ಮಾಡಿ, ಹರ್ಷಾತಿಶಯದಿಂದ ಈ ರೀತಿ ನುಡಿದನು. "ಹೇ ಭಗವನ್! ಪುರುಷಪದವಾಚ್ಯನೂ, ಮಾಹಾತ್ಮ್ಯಶಾಲಿಯೂ ಆದ ನಿನಗೆ ನಮಸ್ಕಾರವು."

ದಕ್ಷಿಣೀಕೃತ್ಯ ತಂ ನತ್ವಾ ಪ್ರಾಹೇದಂ ಹರ್ಷಪೂರಿತಃ ।

॥ ಕುಬೇರ ಉವಾಚ ॥

ನಮಸ್ತುಭ್ಯಃ ಭಗವತೇ ಪುರುಷಾಯ ಮಹಾತ್ಮನೇ ॥ ೩೯ ॥

ಅನಾದಯೇ ಸರ್ವವಿದೇ ನಿರ್ಗುಣಾಯ ಮಹಾತ್ಮನೇ ।
ಪ್ರಧಾನಪುರುಷೇಶಾಯ ಪ್ರತ್ಯಗ್ಧಾಮ್ನೇ ನಮೋ ನಮಃ ॥ ೪೦ ॥

ಸ್ವಯಂಜ್ಯೋತಿಃ ಸ್ವರೂಪಾಯ ಶ್ಯಾಮಲಾಂಗಾಯ ತೇ ನಮಃ ।
ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ ॥ ೪೧ ॥

ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ ।
ಮದನಾಯ ಚ ಮಾರಾಯ ಕಂದರ್ಪಾಯ ನಮೋ ನಮಃ ॥ ೪೨ ॥

ದರ್ಪಕಾಯ ಚ ಕಾಮಾಯ ಪಂಚಬಾಣಾಯ ತೇ ನಮಃ ।
ಅನಂಗಾಯ ನಮಸ್ತುಭ್ಯಂ ನಮಸ್ತೇ ಶಂಬರಾರಯೇ ॥ ೪೩ ॥

---

೩೯. ನೀನು ಆದಿಶೂನ್ಯನು. ಸಕಲವನ್ನೂ ಬಲ್ಲವನು. ಗುಣಗಳಿಂದ ವರ್ಜಿತನಾದವನು. ಪ್ರಕೃತಿಗೂ, ಪುರುಷನಿಗೂ ಈಶ್ವರನೆನಿಸಿದವನು. ಇಂಥ ಪ್ರತ್ಯಗಾಧಿಪನಾದ ನಿನಗೆ ಪುನಃ ಪುನಃ ನಮಸ್ಕಾರವು.

೪೦–೪೧. ಸ್ವಯಂಪ್ರಕಾಶವಾದ ಸ್ವರೂಪವುಳ್ಳವನೂ, ಶ್ಯಾಮಲವಾದ ಕಾಂತಿಯನ್ನು ಬೀರುವ ಶರೀರನಿಂದ ರಾರಾಜಿಸುತ್ತಿರುವವನೂ ಆದ ನಿನಗೆ ನಮಸ್ಕಾರವು. ಓ ವಾಸುದೇವ! ನಿನಗೆ ನಮಸ್ಕಾರವು. ಓ ಸಂಕರ್ಷಣಸ್ವರೂಪ! ನಿನ್ನನ್ನು ನಮಸ್ಕರಿಸುವೆನು.

೪೨–೪೩. ಓ ಪ್ರದ್ಯುಮ್ನಾ, ಓ ಅನಿರುದ್ಧಾ, ಓ ಸಾತ್ತ್ವತಾಧೀಶಾ, ನಿನ್ನನ್ನು ನಮಸ್ಕರಿಸುವೆನು. ಮದನನೆಂತಲೂ, ಮಾರನೆಂತಲೂ, ಕಂದರ್ಪನೆಂತಲೂ, ದರ್ಪಕನೆಂತಲೂ, ಕಾಮನೆಂತಲೂ ಕರೆಯಲ್ಪಡುವ ಓ ಪಂಚಬಾಣ! ನಿನ್ನನ್ನು ನಮಸ್ಕರಿಸುವೆನು. ಓ ಶರೀರ ರಹಿತ! ನಿನಗೆ ನಮಸ್ಕಾರವು. ಓ ಶಂಬರವೈರಿ! ನಿನಗೆ ನಮಸ್ಕಾರವು.

ಹೇ ಮನ್ಮಥ ನಮಸ್ತುಭ್ಯಂ ನಮಸ್ತೇ ಮೀನಕೇತನ ।
ಮನೋಭವಾಯ ದೇವಾಯ ನಮಸ್ತೇ ಕುಸುಮೇಷವೇ ॥ ೪೪ ॥

ಅನನ್ಯಜ ನಮಸ್ತುಭ್ಯಂ ರತಿಭರ್ತ್ರೇ ನಮೋ ನಮಃ ।
ನಮಸ್ತೇ ಪುಷ್ಪಧನುಷೇ ಮಕರಧ್ವಜ ತೇ ನಮಃ ॥ ೪೫ ॥

ಸ್ಮರಾಯ ಪ್ರಭವೇ ನಿತ್ಯಂ ಜಗದ್ವಿಜಯಕಾರಿಣೇ ।
ನಮೋ ರುಕ್ಮವತೀ ಭರ್ತ್ರೇ ಸುಂದರೀಪತಯೇ ನಮಃ ॥ ೪೬ ॥

ಇದಂ ಕರಿಷ್ಯಾಮಿ ಕರೋಮಿ ಭೂಮ-
ನ್ಮಮೇದಮಸ್ತೀತಿ ತವೇದಮಬ್ರುವನ್ ।
ಅಹಂ ಸುಖೀ ದುಃಖಯುತಃ ಸುಹೃಜ್ಜನೋ
ಲೋಕೋಽಹ್ಯಹಂಕಾರವಿಮೋಹಿತೋಽಖಿಲಃ ॥ ೪೭ ॥

---

೪೪. ಓ ಮನ್ಮಥ! ನಿನಗೆ ನಮಸ್ಕಾರವು. ಹೇ ಮೀನಧ್ವಜ! ನಿನಗೆ ನಮಸ್ಕಾರವು. ಹೇ ಮಾನಸಸಂಜಾತ! ನಿನಗೆ ನಮಸ್ಕಾರವು. ಓ ಪುಷ್ಪಬಾಣ! ನಿನಗೆ ನಮಸ್ಕಾರವು.

೪೫. ಹೇ ಅನನ್ಯಜ! (ಸ್ವಯಂ ಸಂಭವ) ನಿನ್ನನ್ನು ನಮಿಸುವೆನು ಓ ರತಿಕಾಂತ! ನಿನ್ನನ್ನು ಮತ್ತೆ ಮತ್ತೆ ವಂದಿಸುವೆನು. ಹೇ ಪುಷ್ಪಕೋದಂಡ! ನಿನ್ನ ಕಾಲ್ಗಳಿಗೆರಗುವೆನು. ಓ ಮಕರಧ್ವಜ! ನಿನ್ನನ್ನು ನಮಸ್ಕರಿಸುವೆನು.

೪೬. ಹೇ ಪ್ರಭು! ಸದಾ ಕಾಲದಲ್ಲಿಯೂ ಜಗತ್ತನ್ನು ಜಯಿಸುತ್ತಿರುವ ಸ್ಮರರೂಪನಾದ ನಿನಗೆ ನಮಸ್ಕಾರವು. ರುಕ್ಮವತೀ ಭರ್ತೃವೂ, ಸುಂದರೀಪತಿಯೂ ಆದ ನಿನಗೆ ನಮಸ್ಕಾರವು.

೪೭. ಓ ಮಹಾಮಹಿಮ! ಈ ಪ್ರಪಂಚದಲ್ಲಿರುವ ಪ್ರತಿಯೊಬ್ಬನೂ ನಾನು ಮಾಡುವೆನು. ಇದೋ ನಾನು ಮಾಡುತ್ತಿರುವೆನು. ಇದು ನನ್ನದು. ಇದು ನಿನ್ನದು ನಾನು ಸುಖವಾಗಿರುವೆನು. ನಾನು ದುಃಖದಿಂದ ಪರಿತಪಿಸುತ್ತಿರುವೆನು. ಅವನು ನನಗೆ ಬೇಕಾದವನು. ಇವನು ನನಗೆ ಬೇಡದವನು ಎಂದು ಮುಂತಾಗಿ ಹೇಳುತ್ತಾ ನಾನಾವಿಧವಾದ ಅಹಂಕಾರಕ್ಕೆ ಸಿಲುಕಿಕೊಂಡು ಭ್ರಾಂತಿಗೀಡಾಗಿರುವನು.

ಪ್ರಧಾನಕಾಲಾಶಯದೇಹಜೈರ್ಗುಣೈಃ
ಕುರ್ವನ್ವಿಕರ್ಮಾಣಿ ಜನೋ ನಿಬಧ್ಯತೇ ।
ಕಾಚೇರ್ಭಕಂ ಸೈಕತ ಏವ ಜೀವನಂ
ಗುಣೇ ಚ ಸರ್ಪಂ ಪ್ರತನೋತಿ ಸೋಽಕ್ಷಿಭಿಃ ॥ ೪೮ ॥

ಕೃತಂ ಮಯಾ ಹೇಲನಮದ್ಯ ಮೌಢ್ಯತ–
ಸ್ತ್ವನ್ಮಾಯಯಾ ಮೋಹಿತ ಚೇತಸಾ ಪ್ರಭೋ ।
ನ ಮನ್ಯಸೇ ಬಾಲಕೃತಂ ಪಿತೇವ ಹಿ
ಮಾಭೂತ್ಪುನರ್ಮೇ ಮತಿರೀದೃಶೀ ಮನಾಕ್ ॥ ೪೯ ॥

ತದಾ ಭವೇತ್ತ್ವಚ್ಚರಣಾರವಿಂದಯೋ–
ರ್ಭಕ್ತಿಂ ವರಾಯಾಂ ಚ ವಿದುರ್ಗರೀಯಸೀಂ ।
ಜ್ಞಾನಂ ಚ ವೈರಾಗ್ಯಯುತಂ ಶಿವಾಸ್ಪದಂ
ದೇಹಿ ಪ್ರಶಸ್ತಂ ನಿಜಸಾಧುಸಂಗಮಂ ॥ ೫೦ ॥

---

೪೮. ಮತ್ತು ಆ ಜೀವನು ತನ್ನ ಪ್ರಕೃತಿಯಿಂದಲೂ, ಕಾಲಪ್ರಾಬಲ್ಯದಿಂದಲೂ ಮನಸ್ಸು ಮತ್ತು ದೇಹದ ಸ್ಥಿತಿಗಳಿಂದಲೂ ಸಲ್ಲದ ಕುತ್ಸಿತವಾದ ಕರ್ಮಗಳನ್ನು ಮಾಡುತ್ತಾ ಮತ್ತಷ್ಟು ಬಲವಾಗಿ ಸಂಸಾರ ಪಾಶದಿಂದ ಬಿಗಿಯಲ್ಪಡುವನು. ಅಂಡವನು ಗಾಜಿನಲ್ಲಿ (ಪ್ರತಿಬಿಂಬದಲ್ಲಿ) ಮಗುವನ್ನೂ, ಮರಳಿನಲ್ಲಿ ನೀರನ್ನೂ, ಹಗ್ಗದಲ್ಲಿ ಹಾವನ್ನೂ ಕಣ್ಣಾರೆ ಕಾಣುವನು.

೪೯. ಓ ಪ್ರದ್ಯುಮ್ನ! ನಾನು ಮೂಢತನದಿಂದ ನಿನ್ನೊಡನೆ ಹೋರಾಡಿದೆನು. ಓ ಪ್ರಭೂ! ನಿನ್ನ ಮಾಯೆಯಿಂದ ನನ್ನ ಮನಸ್ಸು ಇಲ್ಲದ ಅಜ್ಞಾನಕ್ಕೆ ಒಳಗಾಯಿತು. ಹೇ ದೇವ! "ತಂದೆಯು ತನ್ನ ಮಗನ ಅಪರಾಧವನ್ನು ಮನ್ನಿಸುವಂತೆ" ಈ ತಪ್ಪನ್ನು ಕ್ಷಮಿಸು. ನನಗೆ ಇಂತಹ ಬುದ್ಧಿಯು ಇನ್ನು ಎಂದೆಂದಿಗೂ ಎಳೆಯಷ್ಟು ಕೂಡ ಉಂಟಾಗದಿರಲಿ.

೫೦. ಹೇ ದೇವ! ಯಾವುದನ್ನು ಶ್ರೇಷ್ಠರಾದವರು ಅತ್ಯುತ್ತಮವಾದುದೆಂದು ಪರಿಗಣಿಸಿರುವರೋ ಅಂಥ ಅರವಿಂದ ಸದೃಶವಾದ ನಿನ್ನ ಚರಣಗಳಲ್ಲಿನ ಭಕ್ತಿಯೂ, ವೈರಾಗ್ಯದಿಂದೊಡಗೂಡಿದ ತತ್ತ್ವಜ್ಞಾನವೂ, ಮಂಗಳಮಯವೂ, ಅತಿ ಶ್ರೇಷ್ಠವೂ ಆದ ನಿನ್ನ ಭಕ್ತರ ಸಮಾಗಮವೂ ನನಗೆ ಎಂದೆಂದಿಗೂ ದೊರೆಯುವಂತಾಗಲಿ.

|| ಶ್ರೀ ನಾರದ ಉವಾಚ ||

ಪ್ರದ್ಯುಮ್ನಸ್ಯ ಶುಭಂ ಸ್ತೋತ್ರಂ ಪ್ರಾತರುತ್ಥಾಯ ಯಃ ಪಠೇತ್ |
ಸಂಕಟೇ ತಸ್ಯ ಸತತಂ ಸಹಾಯಃ ಸ್ಯಾದ್ಧರಿಃ ಸ್ವಯಂ || ೫೧ ||

ಇತ್ಯುಕ್ತವಂತಂ ಯಕ್ಷೇಶಂ ಪ್ರದ್ಯುಮ್ನೋ ಭಗವಾನ್ಹರಿಃ |
ತಥಾಸ್ತೂಕ್ತ್ವಾ ದದೌ ರಾಜನ್ಪದ್ಮರಾಗಶಿರೋಮಣಿಂ || ೫೨ ||

ಮಾ ಭೈಷ್ಟೇತ್ಯಭಯಂ ದತ್ವಾ ಲೀಲಾಛತ್ರಂ ಸಚಾಮರಂ |
ಸಿಂಹಾಸನಂ ಮಣಿಮಯಂ ಪ್ರಾದಾಚ್ಛ್ರೀಯಾದವೇಶ್ವರಃ || ೫೩ ||

ಕಾರ್ಷ್ಣಿಂ ಪ್ರದಕ್ಷಿಣೀಕೃತ್ಯ ರಾಜರಾಜೋ ಧನೇಶ್ವರಃ |
ಜಿತಂ ಶ್ರುತ್ವಾ ರಾಜರಾಜಂ ಪ್ರದ್ಯುಮ್ನೇನ ಮಹಾತ್ಮನಾ || ೫೪ ||

---

೫೧. ಓ ಬಹುಲಾಶ್ವರಾಜೇಂದ್ರ! ಶುಭಕರವಾದ ಈ ಪ್ರದ್ಯುಮ್ನ ಸ್ತೋತ್ರವನ್ನು ಯಾವನು ಬೆಳಿಗ್ಗೆ ಎದ್ದು ಪಠಿಸುವನೋ ಅಂಥವನಿಗೆ ಕಷ್ಟ ಬಂದಾಗ ಸಾಕ್ಷಾತ್ ಶ್ರೀಹರಿಯೇ ನೇರವಾಗಿ ಅವನನ್ನು ಸಲಹುವನು.

೫೨. ಈ ರೀತಿಯಾಗಿ ತನ್ನನ್ನು ಸ್ತೋತ್ರಮಾಡಿದ ಆ ಯಕ್ಷಾಧಿಪತಿಯನ್ನು ಕುರಿತು ಭಗವಂತನಾದ ಪ್ರದ್ಯುಮ್ನನು 'ಹಾಗೆಯೇ ಆಗಲೆಂದು' ಅನುಗ್ರಹಿಸಿ ಪದ್ಮರಾಗ (ಕೆಂಪು) ದಿಂದ ನಿರ್ಮಿಸಲ್ಪಟ್ಟ ಚೂಡಾಮಣಿಯನ್ನು ಅವನಿಗೆ ಇತ್ತನು.

೫೩. ಮತ್ತು ಹೆದರಬೇಡಿರೆಂದು ಅವನ ಕಡೆಯವರಿಗೆ ಅಭಯವನ್ನಿತ್ತು, ರತ್ನಖಚಿತವಾದ ಸಿಂಹಾಸನವನ್ನೂ, ಛತ್ರಚಾಮರಗಳನ್ನೂ ಆ ಯಾದವೇಂದ್ರನು ಆ ಯಕ್ಷರಾಜನಿಗೆ ಕೊಟ್ಟನು.

೫೪. ಅನಂತರ ನಿಧಿಪತಿಯಾದ ಆ ಕುಬೇರನು ಪ್ರದ್ಯುಮ್ನನನ್ನು ಪ್ರದಕ್ಷಿಣೆ ಮಾಡಿ ತನ್ನ ನಗರಕ್ಕೆ ತೆರಳಿದನು. ಓ ರಾಜೇಂದ್ರ! ಈ ರೀತಿಯಾದ ಮಹಾತ್ಮನಾದ ಪ್ರದ್ಯುಮ್ನನಿಂದ ರಾಜರಾಜನೆನಿಸಿದ ಕುಬೇರನೂ ಸೋಲಿಸಲ್ಪಟ್ಟನೆಂಬ ಸಂಗತಿಯನ್ನು ಕೇಳಿ.

ನ ಕೇಽಪಿ ಯುಯುಧುಸ್ತೇನ ರಾಜಾನಶ್ಚ ಬಲಿಂ ದದುಃ ।
ಅಥ ಕಾರ್ಷ್ಣಿರ್ಮಹಾಬಾಹುರ್ನಾದಯನ್ದುಂದುಭೀನ್ಸ್ವರ್ಹಾ || ೫೫ ||

ಸಮಸ್ತವಾಹಿನೀಯುಕ್ತಃ ಪ್ರಾಗ್ಜ್ಯೋತಿಷಪುರಂ ಯಯೌ ।
ಭೌಮಾಸುರಸುತೋ ನೀಲೋ ಧರ್ಷಿತಸ್ತಸ್ಯ ತೇಜಸಾ || ೫೬ ||

ಸದ್ಯಸ್ತಸ್ಮೈ ಬಲಿಂ ಪ್ರಾದಾತ್ಪ್ರದ್ಯುಮ್ನಾಯ ಮಹಾತ್ಮನೇ ।
ಪ್ರಾಗ್ಜ್ಯೋತಿಷಪುರದ್ವಾರಿ ದ್ವಿವಿದೋ ನಾಮ ವಾನರಃ || ೫೭ ||

ಪುರಾ ಪ್ರದ್ಯುಮ್ನಬಾಣೇನ ತಾಡಿತೋ ಯೋ ಮಹಾಬಲಃ ।
ಸಮುತ್ಥಾಯ ರುಷಾವಿಷ್ಟೋ ದಶಸ್ತೈರ್ನಖರೈಃ ಖರೈಃ || ೫೮ ||

---

೫೫. ಯಾವ ರಾಜರೂ ಸಹ ಆತನೊಡನೆ ಯುದ್ಧಮಾಡಲು ಧೈರ್ಯವಿಲ್ಲದೆ ಅವನಿಗೆ ಕಪ್ಪ ಕಾಣಿಕೆಗಳನ್ನು ತಾವಾಗಿ ಒಪ್ಪಿಸತೊಡಗಿದರು. ಅನಂತರ ಮಹಾಬಾಹುವಾದ ಆ ಕೃಷ್ಣಪುತ್ರನು ಅನೇಕವಾದ ವಿಜಯದುಂದುಭಿಗಳನ್ನು ಧ್ವನಿಗೈಸುತ್ತಾ ಅಲ್ಲಿಂದ ಹೊರಟು,

೫೬. ತನ್ನ ಎಲ್ಲ ಸೈನ್ಯಗಳೊಂದಿಗೂ ಸೇರಿ ಪ್ರಾಗ್ಜ್ಯೋತಿಷ ನಗರಕ್ಕೆ ತೆರಳಿದನು. ಆ ನಗರದಲ್ಲಿ ರಾಜನಾಗಿದ್ದ ನೀಲನೆಂಬ ಬಾಣಾಸುರಪುತ್ರನು ಆ ಪ್ರದ್ಯುಮ್ನನ ಪರಾಕ್ರಮಕ್ಕೆ ಹೆದರಿ,

೫೭. ಕೂಡಲೇ ಆತನಿಗೆ ಕಪ್ಪವನ್ನು ಒಪ್ಪಿಸಿದನು. ಆ ಪ್ರಾಗ್ಜ್ಯೋತಿಷಪುರದ ಹೊರಬಾಗಿಲಿನಲ್ಲಿ ದ್ವಿವಿದನೆಂಬ ವಾನರನಿದ್ದನು.

೫೮. ಆ ಮಹಾ ಬಲಶಾಲಿಯು ಹಿಂದೆ ಪ್ರದ್ಯುಮ್ನನ ಬಾಣಗಳಿಂದ ಏಟು ತಿಂದಿದ್ದನು. ಆದುದರಿಂದ ಅವನು ಅತಿಯಾಗಿ ಕೋಪವನ್ನು ತಾಳಿ ತನ್ನ ತೀಕ್ಷ್ಣವಾದ ಉಗುರುಗಳಿಂದಲೂ, ಹಲ್ಲುಗಳಿಂದಲೂ,

ವಿದಾರ್ಯರ್ೞ ವೀರಾನಶ್ವಾಂಶ್ಚ ಭ್ರೂಭಂಗೈಃ ಪ್ರಜಗರ್ಜ ಹ।
ಲಾಂಗೂಲೇನ ರಥಾಸ್ಬಧ್ವಾ ಪ್ರಾಕ್ಷಿಪಲ್ಲವಣಾಂಭಸಿ ॥ ೫೯ ॥

ಗೃಹೀತ್ವಾ ಸಗಜಾನ್ದೋರ್ಭ್ಯಾಂ ವಿಚಿಕ್ಷೇಪಾಂಬರೇ ಬಲಾತ್ ।
ಶತ್ರುಂ ಜ್ಞಾತ್ವಾ ಕಪಿಂ ಕಾರ್ಷ್ಣಿಃ ಪ್ರತಿಶಾರ್ಙ್ಗೇ ಶರಂ ದಧೇ ॥ ೬೦ ॥

ನೀತ್ವಾ ಶರಸ್ತಂ ಸಹಸಾ ಭ್ರಾಮಯಿತ್ವಾಂಬರೇ ಬಲಾತ್ ।
ಪೂರ್ವವತ್ಪಾತಯಾಮಾಸ ಕಿಷ್ಕಿಂಧಾಯಾಂ ಮಹಾಕಪಿಂ ॥ ೬೧ ॥

ಪುನರಾಗತವಾನ್ಬಾಣಃ ಪ್ರದ್ಯುಮ್ನಸ್ಯೇಷುಧೌ ಸ್ಫುರ್ರ ॥ ೬೨ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ಯಕ್ಷದೇಶವಿಜಯೋ ನಾಮ
ಪಂಚವಿಂಶೋಽಧ್ಯಾಯಃ

---

೫೯. ಆ ಯದುವೀರರನ್ನೂ, ಅವರ ಕಡೆಯ ಕುದುರೆಗಳನ್ನೂ ಸೀಳಿ, ತನ್ನ ಹುಬ್ಬುಗಳನ್ನು ಗಂಟುಹಾಕಿಕೊಂಡು ಗಟ್ಟಿಯಾಗಿ ಒಂದುಬಾರಿ ಅಬ್ಬರಿಸಿದನು. ಮತ್ತು ತನ್ನ ಬಾಲದಲ್ಲಿ ಸುತ್ತಿಕೊಂಡು ರಥಗಳನ್ನು ಲವಣಸಮುದ್ರದಲ್ಲಿ ಕೆಡವಿ ಬಿಟ್ಟನು.

೬೦. ಅನಂತರ ಆ ದ್ವಿವಿದನು ತನ್ನೆರಡು ಕೈಗಳಿಂದಲೂ ಆನೆಗಳನ್ನು ಹಿಡಿದು ಹಿಡಿದು ತನ್ನ ಶಕ್ತಿಯೆಲ್ಲವನ್ನೂ ಬಿಟ್ಟು ಆಕಾಶದಲ್ಲಿ ಎಸೆಯುತ್ತಾ ಬಂದನು. ಇದನ್ನು ಕಂಡು ಪ್ರದ್ಯುಮ್ನನು ಇವನು ತನ್ನ ಶತ್ರುವಾದ ಕಪಿಯೆಂದು ಅರಿತು, ತನ್ನ ಪ್ರತಿ ಶಾರ್ಙ್ಗವೆಂಬ ಧನುಸ್ಸಿನಲ್ಲಿ ಬಾಣವನ್ನು ಹೂಡಿ ಅವನ ಮೇಲೆ ಪ್ರಯೋಗಿಸಿದನು.

೬೧. ಕೂಡಲೇ ಆ ಬಾಣವು ಆ ವಾನರನನ್ನು ಸರಕ್ಕನೆ ಎತ್ತಿಕೊಂಡೊಯ್ದು, ಆಕಾಶದಲ್ಲಿ ಗರಗರನೆ ತಿರುಗಿಸಿ, ಹಿಂದಿನಂತೆ ಅವನನ್ನು ಕಿಷ್ಕಿಂಧೆಯಲ್ಲಿ ಕೆಡವಿ ಬಿಟ್ಟಿತು.

೬೨. ಹಾಗೆ ಕೆಡವಿದನಂತರ ಆ ಬಾಣವು ಮತ್ತೆ ಪ್ರದ್ಯುಮ್ನನ ಬತ್ತಳಿಕೆ ಯಲ್ಲೇ ಬಂದು ನೆಲಸಿತು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವ ಸಂವಾದದಲ್ಲಿ ಯಕ್ಷದೇಶ ವಿಜಯವೆಂಬ
ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಷಡ್ವಿಂಶೋಽಧ್ಯಾಯಃ

॥ ನಾರದ ಉವಾಚ ॥

ಅಥ ಕಾರ್ಷ್ಣಿಃ ಪರಾನ್ದೇಶಾನ್ದಿವ್ಯದ್ರುಮಲತಾಕುಲಾನ್ ।
ಸಹಸ್ರಪತ್ರವದ್ಭಿಶ್ಚ ಸರೋಭಿಃ ಶೋಭಿತಾನ್ಯಯೌ ॥ ೧ ॥

ಅಕ್ಷೌಹಿಣೀಶತಯುತಃ ಪ್ರದ್ಯುಮ್ನಶ್ಚಂಡವಿಕ್ರಮಃ ।
ಯಕ್ಷೈರ್ದಿಷ್ಟೇನ ಮಾರ್ಗೇಣ ಖಂಡಂ ಕಿಂಪುರುಷಂ ಯಯೌ ॥ ೨ ॥

ರಂಗವಲ್ಲೀಪುರಂ ಯತ್ರ ಹೇಮಕೂಟಗಿರೇರಧಃ ।
ತಸ್ಯ ಕಿಂಪುರುಷಾ ಊಚುಃ ಶಂಬರಾರೇಶ್ಚ ಶೃಣ್ವತಃ ॥ ೩ ॥

ಇಪ್ಪತ್ತಾರನೆಯ ಅಧ್ಯಾಯವು

೧. ನಾರದನು ಹೇಳತೊಡಗಿದನು :— ಅನಂತರ ಆ ಪ್ರದ್ಯುಮ್ನನು ದಿವ್ಯವಾದ ತರುಲತೆಗಳಿಂದ ನಿಬಿಡವಾಗಿ ಕಮಲಗಳಿಂದ ಕಂಗೊಳಿಸುತ್ತಿರುವ ಸರೋವರಗಳಿಂದ ರಮಣೀಯವಾಗಿರುವ ಮುಂದಿನ ದೇಶಗಳನ್ನು ಕುರಿತು ತೆರಳಿದನು.

೨. ಅತ್ಯುಗ್ರ ಪರಾಕ್ರಮವುಳ್ಳ ಆ ಪ್ರದ್ಯುಮ್ನನು ತನ್ನ ನೂರು ಅಕ್ಷೌಹಿಣೀ ಸೇನೆಯೊಂದಿಗೆ ಯಕ್ಷರು ತೋರಿಸಿದ ಮಾರ್ಗದಿಂದ ಮುಂದುವರಿಯುತ್ತಾ, ಕಿಂಪುರುಷ ಖಂಡವನ್ನು ಸೇರಿದನು.

೩. ಆ ಖಂಡದಲ್ಲಿ ಹೇಮಕೂಟಪರ್ವತದ ತಪ್ಪಲಿನಲ್ಲಿ ರಂಗವಲ್ಲಿಯೆಂಬ ನಗರವಿರುವುದು. ಅಲ್ಲಿ ವಾಸವಾಗಿದ್ದ ಕಿಂಪುರುಷರು ಪ್ರದ್ಯುಮ್ನನಿಗೆ ಕೇಳಿಸುವಂತೆ ಈ ರೀತಿ ಹೇಳಿದರು.

|| ಕಿಂಪುರುಷಾ ಊಚುಃ ||

ಅಹೋಽತಿಧನ್ಯಾ ಮಧುರಾಪುರೀವರಾ
　ಬಭೂವ ಯಸ್ಯಾಂ ಪರಮೇಶ್ವರೋ ಹರಿಃ ।
ಅಹೋಽತಿಧನ್ಯಂ ಸತತಂ ಯದೋಃ ಕುಲಂ
　ಜಾತೋ ಹಿ ಯಸ್ಮಿನ್ನಖಿಲಾಂಡಪಾಲಕಃ　　|| ೪ ||

ಧನ್ಯಂ ಚ ತಚ್ಛೂರಸುತಸ್ಯ ಮಂದಿರಂ
　ಗೋಲೋಕನಾಥೇನ ಮನೋಹರಂ ಕೃತಂ।
ಧನಂ ಪರಂ ಮಾಧುರಮಂಡಲಂ ಸುರೈಃ
　ಸುದುರ್ಲಭಂ ಯತ್ರ ಚಚಾರ ಮಾಧವಃ　　|| ೫ ||

ಮಹಾವನಂ ಧನ್ಯತಮಂ ಮನೋಹರಂ
　ಪಿತುರ್ಗೃಹಾದ್ಯತ್ರ ಗತೋ ಹರಿಃ ಶಿಶುಃ ।
ಚಚಾರ ಕೃಷ್ಣಃ ಶಿಶುನಾ ಬಲೇನ ಹಿ
　ಯಶೋದಯಾ ದುಗ್ಧಮುಖಃ ಸುಲಾಲಿತಃ　　|| ೬ ||

---

೪. ಭಲೆ! ಆ ಮಧುರಾನಗರವೇ ಬಹು ಧನ್ಯವಾದುದು. ಅತಿ ಶ್ರೇಷ್ಠವಾದುದು. ಆ ನಗರಿಯಲ್ಲಿಯೇ ಪರಮ ಪ್ರಭುವಾದ ಶ್ರೀಹರಿಯು ಅವತರಿಸಿರುವುದು. ಆ ಮಧುರಾನಗರಿಯಂತೆಯೇ ಆ ಯದುವಂಶವೂ ಸಹ ಅತಿ ಧನ್ಯವಾದುದು. ಏಕೆಂದರೆ, ಆ ವಂಶದಲ್ಲಿಯೇ ಅಖಿಲಾಂಡಗಳಿಗೂ ಪ್ರಭುವೆನಿಸಿದ ಆ ಪರಮ ಪುರುಷನು ಹುಟ್ಟಿರುವನು.

೫. ಆ ಗೋಲೋಕನಾಯಕನಾದ ಶ್ರೀಕೃಷ್ಣನ ನಿತ್ಯನಿವಾಸದಿಂದ ಮನೋಹರವಾಗಿ ಮಾಡಲ್ಪಟ್ಟ ಆ ಶೂರಸೇನ (ವಸುದೇವ) ನ ಮಂದಿರವೇ ಬಹು ಧನ್ಯವಾದುದು. ಯಾವ ಪ್ರದೇಶವನ್ನು ಶ್ರೀಕೃಷ್ಣನು ತನ್ನ ಚರಣವಿನ್ಯಾಸದಿಂದ ಪಾವನವನ್ನಾಗಿ ಮಾಡುತ್ತಾ ಓಡಾಡಿದನೋ, ಅಂತಹ ದೇವತೆಗಳಿಗೂ ದುರ್ಲಭವೆನಿಸಿದ ಮಧುರಾಮಂಡಲವೇ ಬಹಳ ಪ್ರಶಸ್ತವಾದುದು.

೬. ಆ ಮನೋಹರವಾದ ಮಹಾವನವೇ ಬಹಳ ಧನ್ಯವಾದುದು, ಏಕೆಂದರೆ, ಆ ಶ್ರೀಕೃಷ್ಣನು ಹಾಲು ಕುಡಿಯುವ ಎಳೆಯ ಮಗುವಾಗಿರುವಾಗಲೇ ತನ್ನ ತಂದೆಯ ಮನೆಯನ್ನು ಬಿಟ್ಟು ಅಲ್ಲಿಗೆ ಬಂದು ಯಶೋದೆಯ ವಾತ್ಸಲ್ಯಪೂರ್ಣವಾದ ಲಾಲನೆಯಿಂದ ಸುಪ್ರೀತನಾಗಿ ಬಾಲ್ಯಾವಸ್ಥೆಯಲ್ಲಿದ್ದ ಬಲರಾಮನೊಂದಿಗೆ ಅಲ್ಲೆಲ್ಲಾ ಓಡಾಡಿದನು.

ವೃಂದಾವನಂ ಪುಣ್ಯತಮಂ ಪರಾತ್ಪರ-
ಶ್ರೀಕೃಷ್ಣಪಾದಾಂಬುಜರೇಣುರಾಜಿತಂ ।
ಗಾಃ ಪಾಲಯನ್ಯತ್ರ ಚಚಾರ ಬಾಲೋ
ಗೋಪಾಲಬಾಲೈಃ ಸಬಲಃ ಸ್ವಯಂ ಹರಿಃ ॥ ೭ ॥

ಯೋ ದಾನಲೀಲಾಂ ಕಿಲ ಮಾನಲೀಲಾಂ
ಶ್ರೀರಾಸಲೀಲಾಂ ವ್ರಜಸುಂದರೀಭಿಃ ।
ವೃಂದಾವನೇ ಯತ್ರ ಚಚಾರ ಕೃಷ್ಣೋ
ಯಸ್ಯಾಪಿ ಗಾಯಂತಿ ಯಶಸ್ತ್ರಿಲೋಕಾಃ ॥ ೮ ॥

ಅಹೋಽತಿಧನ್ಯಾ ವೃಷಭಾನುನಂದಿನೀ
ಲೀಲಾವತೀ ಸಾ ನಿಜಲೋಕಶಾಲಿನೀ ।
ಚಚಾರ ಕೃಷ್ಣೇನ ಕಲಿಂದನಂದಿನೀ-
ತಟೇ ಮಿಲಿಂದಧ್ವನಿಸಂಕುಲೇ ವನೇ ॥ ೯ ॥

---

೭. ಆ ವೃಂದಾವನವೇ ಮಹಾಪಾವನವೆಂಬುದಾಗಿ ಭಾವಿಸುವೆವು. ಏಕೆಂದರೆ, ಅದು ಪರಾತ್ಪರನಾದ ಶ್ರೀಕೃಷ್ಣನ ಪಾದಧೂಳಿಯಿಂದ ರಮಣೀಯವಾಗಿರುವುದು. ಆ ವೃಂದಾವನದಲ್ಲಿ ಗೊಲ್ಲರ ಹುಡುಗರೊಡನೆ ಹಸುಗಳನ್ನು ಕಾಯುತ್ತಾ ಶ್ರೀಕೃಷ್ಣನು ತಾನಾಗಿ ಸಂಚರಿಸಿದನು.

೮. ಆ ಶ್ರೀಹರಿಯು ವ್ರಜಾಂಗನೆಯರೊಡನೆ ದಾನಲೀಲೆಯನ್ನೂ, ಮಾನ ಲೀಲೆಯನ್ನೂ, ರಾಸಲೀಲೆಯನ್ನೂ ತೋರ್ಪಡಿಸುತ್ತಾ ವೃಂದಾವನದಲ್ಲಿ ಎಲ್ಲೆಲ್ಲಿ ಸಂಚರಿಸಿದನೋ ಆ ಪ್ರದೇಶಗಳನ್ನೂ ಮತ್ತು ಆ ಶ್ರೀಹರಿಯನ್ನೂ ಮೂರು ಲೋಕ ಗಳೂ ಕೊಂಡಾಡುತ್ತಾ ಗಾನಮಾಡುತ್ತಿರುವುವು.

೯. ನಿಜಲೋಕವಾದ ಗೋಲೋಕದಲ್ಲಿ ಸರ್ವದಾ ವಿಹರಿಸುತ್ತಿರುವ ಲೀಲಾ ಮಯಿಯಾದ ಶ್ರೀರಾಧೆಯೇ ವೃಷಭಾನುವಿನ ಪುತ್ರಿಯಾಗಿ ಅವತರಿಸಿ ಶ್ರೀಕೃಷ್ಣ ನೊಡನೆ ಯಮುನಾನದಿಯ ಕರೆಯಲ್ಲಿ ಭ್ರಮರಗಳ ಝುಂಕಾರದಿಂದ ರಮಣೀಯ ವಾಗಿರುವ ವೃಂದಾವನದಲ್ಲಿ ಸಂಚರಿಸಿದಳು. ಆಕೆಯೇ ಬಹಳ ಧನ್ಯಳೆಂದು ಭಾವಿಸುವೆವು.

ಅಹೋಽತಿಧನ್ಯಾಸ್ತಿ ಕಲಿಂದನಂದಿನೀ
ಶ್ರೀಕೃಷ್ಣವಾಮಾಂಸಸಮುದ್ಭವಾ ಯಾ ।
ತಟೇ ಮಿಲಿಂದಧ್ವನಿಸಂಕುಲೇ ವಟೇ
ತತ್ಸ್ಪರ್ಶನಾದ್ಯಾತಿ ನರಃ ಕೃತಾರ್ಥತಾಂ ॥ ೧೦ ॥

ಸಮುದ್ಭವೋ ಯೋ ಹರಿವಕ್ಷಸೋ ಗಿರಿ-
ರ್ಗೋವರ್ಧನೋ ನಾಮ ಗಿರೀಂದ್ರರಾಜರಾಟ್ ।
ವಿರಾಜತೇ ಸವ್ರಜಮಂಡಲೇ ಪರೋ
ಯದ್ದರ್ಶನಾಜ್ಜನ್ಮ ಪುನರ್ನ ವಿದ್ಯತೇ ॥ ೧೧ ॥

ಅಹೋಽತಿಧನ್ಯಾ ಯದುಮಂಡಲೀಭಿ-
ರ್ವಿರಾಜತೇ ಭೂಮಿತಲೇ ಮನೋಹರಾ ।
ವೈಕುಂಠಲೀಲಾಧಿಕೃತಾ ಕುಶಸ್ಥಲೀ
ಯಥಾ ತಡಿದ್ಭಿರ್ಜಲದಾವಲಿರ್ದಿವಿ ॥ ೧೨ ॥

---

೧೦. ಮತ್ತು ಶ್ರೀಕೃಷ್ಣನ ಎಡಭುಜದಿಂದ ಜನಿಸಿದ ಕಾಳಿಂದಿ (ಯಮುನೆಯೇ) ಬಹುಮಟ್ಟಿಗೆ ಪ್ರಶಂಸಾಪಾತ್ರವಾಗಿರುವುದು ಅದರ ಕರೆಯಲ್ಲಿ ಭ್ರಮರಗಳ ಧ್ವನಿಯಿಂದ ನಿಬಿಡೀಕೃತವಾಗಿರುವ ವಟವೃಕ್ಷವೂ ಸಹ ಪ್ರಶಸ್ತವಾದುದು. ಅದರ ಸ್ಪರ್ಶನ ಮಾತ್ರದಿಂದಲೇ ಮಾನವನು ಕೃತಕೃತ್ಯತೆಯನ್ನು ಪಡೆಯುವನು.

೧೧. ಶ್ರೀಕೃಷ್ಣನ ವಕ್ಷಃಪ್ರದೇಶದಲ್ಲಿ ಜನಿಸಿದಂತಹ ಗೋವರ್ಧನವೆಂಬ ಪರ್ವತಶ್ರೇಷ್ಠವು ಆ ವ್ರಜಮಂಡಲದಲ್ಲಿ ವಿರಾಜಿಸುತ್ತಿರುವುದು. ಅದರ ಸಂದರ್ಶನ ಮಾತ್ರದಿಂದಲೇ ಮನುಷ್ಯನು ಮರಳಿ ಜನ್ಮವನ್ನು ಪಡೆಯಲಾರನು.

೧೨. ಆಹಾ! ಯಾವುದು ಶ್ರೀಕೃಷ್ಣನ ನಿವಾಸವಾದುದರಿಂದ ವೈಕುಂಠಕ್ಕೆ ಸರಿಸಮಾನವಾಗಿ ಮೆರೆಯುತ್ತಾ ತನ್ನಲ್ಲಿ ವಾಸಮಾಡುತ್ತಿರುವ ಯದುವೀರರ ಮಂಡಲಿಗಳಿಂದ ನಿಬಿಡೀಕೃತವಾಗಿ ಮಿಂಚುಗಳಿಂದ ವ್ಯಾಪ್ತವಾದ ಆಕಾಶದಲ್ಲಿನ ಮೇಘಮಾಲಿಯಂತೆ ಶೋಭಿಸುತ್ತಾ ಇರುವುದೋ ಅಂಥ ದ್ವಾರಾವತಿಯೇ ಈ ಭೂಮಂಡಲದಲ್ಲೆಲ್ಲಾ ಬಹು ಧನ್ಯವಾದುದೆಂದು ಎಣಿಸುವೆವು.

ಯತ್ರೈವ ಸಾಕ್ಷಾತ್ಪುರುಷಃ ಪರೇಶ್ವರೋ
ಧೃತ್ವಾ ಚತುರ್ವ್ಯೂಹಮಲಂ ವಿರಾಜತೇ ।
ಯಸ್ತೂಗ್ರಸೇನಾಯ ದದೌ ನೃಪೇಶತಾಂ
ಕೃಷ್ಣಾಯ ತಸ್ಮೈ ಹರಯೇ ನಮೋ ನಮಃ ॥ ೧೩ ॥

ಪ್ರಣೋದಿತಸ್ತೇನ ನೃಪೇಣ ಧೀಮತಾ
ಜಗದ್ವಿಜೇತುಂ ಮಕರಧ್ವಜೋ ಮಹಾನ್ ।
ಕೃತ್ವಾಥ ತದ್ದರ್ಶನಮದ್ಯ ದುರ್ಲಭಂ
ವಯಂ ಕೃತಾರ್ಥಾ ಹಿ ಭವೇಮ ಸರ್ವತಃ ॥ ೧೪ ॥

॥ ನಾರದ ಉವಾಚ ॥

ಇತ್ಥಂ ಹರಿರ್ನೃಪ ಯಶೋ ವಿಶದೈಶ್ಚರಿತ್ರೈ-
ರುದ್ಯತ್ತ್ರಿಲೋಕಮಮಲಂ ವಿಶದೀಚಕಾರ ।

---

೧೩. ಆ ದ್ವಾರಾವತಿಯಲ್ಲಿಯೇ ಸಾಕ್ಷಾತ್ ಪರಮಪುರುಷನು ಚತುರ್ವ್ಯೂಹಗಳೆಂಬ ಮೂರ್ತಿ (ಶರೀರ) ಗಳನ್ನು ಧರಿಸಿ (ವಾಸುದೇವ ರೂಪವಾದ ಶ್ರೀಕೃಷ್ಣನೆಂಬ ಪರಸ್ವರೂಪವನ್ನೂ, ಪ್ರದ್ಯುಮ್ನ ಅನಿರುದ್ಧ ಸಂಕರ್ಷಣ (ಬಲಭದ್ರ)ರ ರೂಪವನ್ನು ತಾಳಿ) ಸಂತೋಷದಿಂದ ನೆಲಸಿರುವನು. ಆ ಪರಮಪುರುಷನೇ ಉಗ್ರಸೇನನಿಗೆ ಚಕ್ರವರ್ತಿ ಪದವಿಯನ್ನು ಗಳಿಸಿ ಕೊಟ್ಟಿರುವನು. ಆ ಶ್ರೀಹರಿಸ್ವರೂಪನಾದ ಕೃಷ್ಣನಿಗೆ ಪುನಃ ಪುನಃ ನಮಸ್ಕಾರವು.

೧೪. ಪ್ರಾಜ್ಞನಾದ ಆ ಉಗ್ರಸೇನ ನೃಪನಿಂದ ಜಗತ್ತನ್ನೇ ಜಯಿಸಿ ಬರುವಂತೆ ಆ ಮಹಾನುಭಾವನಾದ ಪ್ರದ್ಯುಮ್ನನು ಪ್ರೇರಿತನಾಗಿ ಇಲ್ಲಿಗೆ ಬಂದಿರುವನು. ದುರ್ಲಭವಾದುದಂತಹ ಆತನ ಸಂದರ್ಶನವನ್ನು ಮಾಡಿ ನಾವೆಲ್ಲರೂ ಇಂದು ಕೃತಕೃತ್ಯರಾಗೋಣ !

೧೫. ಓ ಬಹುಲಾಶ್ವರಾಜೇಂದ್ರ! ಈ ರೀತಿಯಾಗಿ ಶ್ರೀಕೃಷ್ಣನು ಪಾವನವಾದ ತನ್ನ ಯಶಸ್ಸಿನಿಂದ ನಿರ್ಮಲವೆನಿಸಿದ ತನ್ನ ಚರಿತ್ರಗಳಿಂದ ಅಭಿವೃದ್ಧಿಯನ್ನು ಹೊಂದುತ್ತಾ ಪೂರ್ಣಚಂದ್ರನ ಕಿರಣಗಳಿಂದೊಡಗೂಡಿ, ಥಳಥಳಿಸುತ್ತಿರುವ ತರಂಗ

ಪೂರ್ಣೇಂದುರಶ್ಮಿಮಿಲಿತೈಸ್ತರಲೈಃ ಸ್ಫುರದ್ಭಿಃ
ಪ್ರೋದ್ಯದ್ಭಿರುದ್ಗಜ ಇವಾಮಲಸಿಂಧುದುಗ್ಧಂ ॥ ೧೫ ॥

ಇತ್ಥಂ ಯಶಃ ಸ್ವಮಮಲಂ ನೃಪ ಶಂಬರಾರಿಃ
ಶ್ರುತ್ವಾತಿಹರ್ಷಿತತನುಃ ಪ್ರದದೌ ಧನಾನಿ ।
ಕೇಯೂರಹಾರನವರತ್ನಮನೋಹರಾಣಿ
ತೇಭ್ಯಃ ಕಿರೀಟಮಣಿಕುಂಡಲಕಂಕಣಾನಿ ॥ ೧೬ ॥

ರಂಗವಲ್ಲೀಪುರಾಧೀಶಃ ಸುಬಾಹುಶ್ಚಂದ್ರವಂಶಜಃ ।
ನತ್ವಾ ಬಲಿಂ ದದೌ ಸೋಽಪಿ ಪ್ರದ್ಯುಮ್ನಾಯ ಮಹಾತ್ಮನೇ ॥ ೧೭ ॥

ತಸ್ಮೈ ಪ್ರಸನ್ನೋ ಭಗವಾನ್ಪ್ರದ್ಯುಮ್ನೋ ಮೀನಕೇತನಃ ।
ದತ್ವಾ ಚೂಡಾಮಣಿಂ ದಿವ್ಯಂ ಪಪ್ರಚ್ಛೇದಂ ಮಹಾಮನಾಃ ॥ ೧೮ ॥

ಗಳೊಡನೆ ಜಲಮಧ್ಯದಿಂದ ಎದ್ದು ಬರುತ್ತಿರುವ ಐರಾವತವು ಕ್ಷೀರಸಮುದ್ರವನ್ನು ಬೆಳಗಿಸುವಂತೆ ಮೂರು ಲೋಕಗಳನ್ನೂ ಪಾವನವನ್ನಾಗಿಯೂ ನಿರ್ಮಲವನ್ನಾಗಿಯೂ ಮಾಡುತ್ತಿರುವನು

೧೬. ಓ ರಾಜಾ! ಈ ರೀತಿಯಾಗಿ ಪಾವನವಾದ ತಮ್ಮ ಯಶಸ್ಸನ್ನೇ ರಂಗವಲ್ಲೀಪುರನಿವಾಸಿಗಳಾದ ಕಿಂಪುರುಷರು ಗಾನಮಾಡುತ್ತಿರುವುದನ್ನು ಕೇಳಿ ಮಿತಿಮೀರಿದ ಸಂತೋಷವನ್ನು ತಾಳಿದ ಆ ಪ್ರದ್ಯುಮ್ನನು ಅವರಿಗೆ ತೋಳು ಬಳೆಗಳನ್ನೂ, ಸರಗಳನ್ನೂ, ನವರತ್ನಖಚಿತವಾದ ಕಿರೀಟ ಕುಂಡಲಗಳನ್ನೂ, ಕಡಗಗಳನ್ನೂ ಕೊಟ್ಟನು.

೧೭. ಆಗ ರಂಗವಲ್ಲೀಪುರದ ಅಧಿಪತಿಯಾದ ಸುಬಾಹುವೆಂಬ ಚಂದ್ರವಂಶದ ರಾಜನು ಆ ಮಹಾತ್ಮನಾದ ಪ್ರದ್ಯುಮ್ನನಿಗೆ ನಮಸ್ಕಾರಮಾಡಿ ತಾನೇ ಕಪ್ಪವನ್ನೊಪ್ಪಿಸಿದನು.

೧೮. ಆ ಕಪ್ಪವನ್ನು ತೆಗೆದುಕೊಂಡು ಸುಪ್ರೀತನಾದ ಪ್ರದ್ಯುಮ್ನನು ಸುಬಾಹುವಿಗೆ ದಿವ್ಯವಾದ ಚೂಡಾಮಣಿಯನ್ನು ಬಹುಮಾನವಾಗಿತ್ತು ಆತನನ್ನೀರೀತಿಯಾಗಿ ಪ್ರಶ್ನಿಸಿದನು.

॥ ನಾರದ ಉವಾಚ ॥

ರಂಗವಲ್ಲೀಪುರಸ್ಯಾಪಿ ನಾಮ ಕೇನ ಪ್ರಕಾಶಿತಂ ।
ಏತದ್ಬ್ರೂಹಿ ಸುಬಾಹೋ ಮೇ ಶ್ರುತಂ ಪೂರ್ವಂ ತ್ವಯಾ ಕಿಲ ॥ ೧೯ ॥

॥ ಸುಬಾಹುರುವಾಚ ॥

ದೇವಾಸುರೈಃ ಪುರಾ ರಾಜನ್ಮಥಿತಃ ಕ್ಷೀರಸಾಗರಃ ।
ವಿನಿರ್ಗತಾನಿ ಮಥನಾದ್ರತ್ನಾನಿ ಚ ಚತುರ್ದಶ ॥ ೨೦ ॥

ನಿರ್ಮಿತಂ ಕಲಶಂ ತಸ್ಮಾತ್ಸುಧಾಪೂರ್ಣಂ ಮನೋಹರಂ ।
ತಂ ದದರ್ಶ ಹರಿಃ ಸಾಕ್ಷಾನ್ನೇತ್ರಾಭ್ಯಾಂ ಪುಷ್ಕರೇಕ್ಷಣಃ ॥ ೨೧ ॥

ತನ್ನೇತ್ರಹರ್ಷಬಿಂದುಶ್ಚ ಕಲಶೇ ನಿಪಪಾತ ಹ ।
ತಸ್ಮಾದ್ವೃಕ್ಷಃ ಸಮುದ್ಭೂತಸ್ತುಲಸೀತಿ ಪ್ರಕಥ್ಯತೇ ॥ ೨೨ ॥

---

೧೯. "ಎಲೈ ಸುಬಾಹುವೇ! ಈ ನಗರಕ್ಕೆ ರಂಗವಲ್ಲೀಪುರವೆಂಬ ಹೆಸರು ಯಾರಿಂದ ಉಂಟಾಯಿತು? ಅದನ್ನು ನೀನು ನನಗೆ ತಿಳಿಸಬೇಕು! ಏಕೆಂದರೆ, ನೀನು ಇದನ್ನು ಮೊದಲೇ ಕೇಳಿ ತಿಳಿದಿರಬಹುದು"

೨೦. ಎಂದು ಪ್ರದ್ಯುಮ್ನನು ಪ್ರಶ್ನಿಸಲು ಆ ಸುಬಾಹುವು ಈ ರೀತಿ ನುಡಿದನು. ಹಿಂದೆ ದೇವತೆಗಳೂ, ದೈತ್ಯರೂ, ಕ್ಷೀರಸಾಗರವನ್ನು ಮಥಿಸಿದರು. ಆ ಸಮಯದಲ್ಲಿ ಕಡೆಯುವಿಕೆಯ ಫಲವಾಗಿ ಹದಿನಾಲ್ಕು ಬಗೆಯ ರತ್ನಗಳು ಆವಿರ್ಭವಿಸಿದುವು.

೨೧. ಆ ರತ್ನಗಳಿಂದ ಅಮೃತಕಲಶವು ನಿರ್ಮಿಸಲ್ಪಟ್ಟಿತು. ಅದನ್ನು ಪುಂಡರೀಕಾಕ್ಷನೆನಿಸಿದ ಸಾಕ್ಷಾತ್ ಶ್ರೀಹರಿಯು ಸಂತೋಷದಿಂದ ನೋಡಿದನು.

೨೨. ಹಾಗೆ ನೋಡುವಾಗ ಆನಂದಾತಿಶಯದಿಂದ ಒಂದು ತೊಟ್ಟು ಕಣ್ಣೀರು ಆ ಅಮೃತಕಲಶದಲ್ಲಿ ಬಿದ್ದಿತು. ಕೂಡಲೇ ಅದರಿಂದ ಒಂದು ವೃಕ್ಷವು ಉದ್ಭವಿಸಿತು. ಅದನ್ನು ತುಲಸೀ ಎಂಬುದಾಗಿ ಕರೆಯುವರು.

ರಂಗವಲ್ಲೀತಿ ತನ್ನಾಮ ಚಕಾರ ಮಧುಸೂದನಃ ।
ಅತ್ರ ಕಿಂಪುರುಷೇ ಖಂಡೇ ಹೇಮಕೂಟಗಿರೇರಧಃ ॥ ೧೩ ॥

ತಸ್ಯಾಶ್ಚ ರಂಗವಲ್ಯಾಃ ಕೌ ಸ್ಥಾಪನಾಂ ಸ ಚಕಾರ ಹ ।
ರಂಗವಲ್ಲೀಮಹಾವೃಕ್ಷಃ ಸದಾಽತ್ರೈವ ವಿರಾಜತೇ ॥ ೧೪ ॥

ತನ್ನಾಮ್ನಾ ಪ್ರಸಿದ್ಧಮಭೂದ್ರಂಗವಲ್ಲೀಪುರಂ ತ್ವಿದಂ ।
ಅತ್ರ ನಿತ್ಯಂ ಹಿ ಹನುಮಾನಾರ್ಷ್ಟಿಷೇಣೇನ ರಾಗಿಣಾ ॥ ೧೫ ॥

ದರ್ಶನಾರ್ಥಂ ಸಮಾಯಾತಿ ಮಹಾತ್ಮಾ ರಾಮಪೂಜಕಃ ।
॥ ಶ್ರೀ ನಾರದ ಉವಾಚ ॥
ಇತಿ ಶ್ರುತ್ವಾ ಶಂಬರಾರೀ ರಂಗವಲ್ಲೀಂ ಮನೋಹರಾಂ । ॥ ೧೬ ॥

ದೃಷ್ಟ್ವಾ ಪ್ರದಕ್ಷಿಣೀಕೃತ್ಯ ದೇಶಾನನ್ಯಾನ್ಜಗಾಮ ಹ ।
ಹೇಮಕೂಟತಟೀಭೂತಂ ವನಂ ಪ್ರಾಪ್ತಂ ಭಯಂಕರಂ ॥ ೧೭ ॥

೧೩–೧೪. ಆಗ ಆ ವೃಕ್ಷಕ್ಕೆ ಆ ಮಧುಸೂಧನನು ರಂಗವಲ್ಲೀ ಎಂಬುದಾಗಿ ಹೆಸರಿಟ್ಟನು. ಬಳಿಕ ಆತನು ಈ ಕಿಂಪುರುಷ ಖಂಡದಲ್ಲಿ ಇರುವ ಹೇಮಕೂಟ ಪರ್ವತದ ಕೆಳಗಡೆ ತಪ್ಪಲು)ಯಲ್ಲಿ ಆ ರಂಗವಲ್ಲೀವೃಕ್ಷವನ್ನು ನೆಲದಲ್ಲಿ ನೆಟ್ಟನು. ಅಂದಿನಿಂದಲೂ ಈ ರಂಗವಲ್ಲೀವೃಕ್ಷವು ಇಲ್ಲಿಯೇ ಯಾವಾಗಲೂ ನೆಲಸಿರುವುದು.

೧೫–೧೬. ಆ ರಂಗವಲ್ಲೀವೃಕ್ಷದ ಹೆಸರಿನಿಂದಲೇ ಈ ನಗರಕ್ಕೂ ರಂಗವಲ್ಲೀ ಪುರವೆಂಬುದಾಗಿ ಪ್ರಸಿದ್ಧಿಯುಂಟಾಯಿತು. ಇಲ್ಲಿಗೆ ಪ್ರತಿನಿತ್ಯವೂ ಶ್ರೀರಾಮಚಂದ್ರನ ಪರಮಭಕ್ತನೂ, ಮಹಾತ್ಮನೂ ಆದ ಆಂಜನೇಯನು ಆರ್ಷ್ಟಿಷೇಣನೆಂಬ ಮತ್ತೊಬ್ಬ ಭಕ್ತೋತ್ತಮನೊಡನೆ ಆ ರಂಗವಲ್ಲೀವೃಕ್ಷದ ಸಂದರ್ಶನಕ್ಕಾಗಿ ಬರುವನು. ಓ ಬಹುಲಾಶ್ವರಾಜೇಂದ್ರ ! ಈ ರೀತಿ ಸುಬಾಹುವು ಹೇಳಿದ ಪೂರ್ವ ವೃತ್ತಾಂತವನ್ನು ಕೇಳಿ ಆ ಪ್ರದ್ಯುಮ್ನನು ರಮಣೀಯವಾದ ಆ ರಂಗವಲ್ಲೀವೃಕ್ಷವನ್ನು ಸಂದರ್ಶಿಸಿ

೧೭–೧೮. ಅದನ್ನು ಪ್ರದಕ್ಷಿಣೆಮಾಡಿ ಅಲ್ಲಿಂದ ಇತರ ದೇಶಗಳಿಗೆ ಪ್ರಯಾಣ ಬೆಳಸಿದನು. ಹಾಗೆ ಬರುವಾಗ ಹೇಮಕೂಟಪರ್ವತದ ತಪ್ಪಲು ಪ್ರದೇಶದಕ್ಕೆ

ಝಿಲ್ಲೀಝುಂಕಾರಸಂಯುಕ್ತಂ ಸಿಂಹಚಿತ್ರಕನಾದಿತಂ ।
ವನ್ಯೈಃ ಕರೀಂದ್ರೈಃ ಸಂಯುಕ್ತಂ ಶಿವೋಲೂಕರುತಾವೃತಂ ॥ ೨೮ ॥

ಕೀಚಕಾಶ್ವತ್ಥಮಂದಾರವಟಭೂರ್ಜಸಮಾಕುಲಂ ।
ಕೃಷ್ಣಾಹರಿತಕೀವಲ್ಲೀಬದಿರೈಃ ಸಘನಂ ವನಂ ॥ ೨೯ ॥

ತಸ್ಮಾದ್ವಿನಿರ್ಗತಃ ಸರ್ಪೋ ದಶಯೋಜನಲಂಬಿತಃ ।
ಅಗ್ರಸದ್ಗಜವೃಂದಾನಿ ಫೂತ್ಕಾರಂ ಕಾರಯನ್ಮುಹುಃ ॥ ೩೦ ॥

ಹಾಹಾಕಾರೇ ತದಾ ಜಾತೇ ಸೇನಾಯಾಂ ಮೈಥಿಲೇಶ್ವರ ।
ಪ್ರಚಂಡಗರಲೈರ್ವಾತೈರ್ಭಸ್ಮೀಭೂತೇ ದಿಶಾಂತರೇ ॥ ೩೧ ॥

ಸೇರಿದಂತೆ ಭಯಂಕರವಾದ ಕಾಡೊಂದು ಸಿಕ್ಕಿತು. ಅಲ್ಲಿ ಯಾವಾಗಲೂ ಜೀರುಂಡೆಗಳು ಝುಯ್ಯೆಂದು ಸದ್ದುಮಾಡುತ್ತಾ ಇರುವುವು. ಸಿಂಹಗಳೂ, ಚಿರತೆಗಳೂ ಘರ್ಜಿಸುತ್ತಿರುವುವು. ಕಾಡಾನೆಗಳು ತಿರುಗಾಡುತ್ತಿರುವುವು. ನರಿಗಳೂ, ಗೂಬೆಗಳೂ ಕಿರಿಚಿಕೊಳ್ಳುತ್ತಿರುವುವು.

೨೯. ಅಲ್ಲದೆ ಆ ಕಾಡಿನಲ್ಲಿ ಬಿದಿರುಮೆಳೆಗಳೂ, ಅಶ್ವತ್ಥ, ಮಂದಾರ, ಆಲ, ಭೂರ್ಜ, ಕರಿಯಮರ, ಅಳಲೆ, ಯಲಚಿ ಮುಂತಾದ ವೃಕ್ಷಗಳೂ, ಬಗೆಬಗೆಯ ಬಳ್ಳಿಗಳೂ ಒತ್ತೊತ್ತಾಗಿ ಬೆಳೆದುಬಿಟ್ಟಿರುವುದರಿಂದ ಅದು ಪ್ರವೇಶಿಸಲು ಅಸಾಧ್ಯವಾಗಿರುವುದು.

೩೦. ಇಂತಹ ಆ ಕಾಡಿನಿಂದ ಹತ್ತು ಯೋಜನಗಳಷ್ಟು ಉದ್ದವಿರುವಂತಹ ಭಾರಿ ಸರ್ಪವೊಂದು ಮೇಲೆ ಮೇಲೆ ಫೂತ್ಕಾರಗಳನ್ನು ಮಾಡುತ್ತಾ ನುಗ್ಗಿಬಂದು ಯದುಸೇನೆಯಲ್ಲಿದ್ದ ಆನೆಗಳ ತಂಡಗಳನ್ನೇ ನುಂಗಿಬಿಟ್ಟಿತು.

೩೧. ಓ ಮಿಥಿಲಾಧಿಪ ! ಆಗ ಸೇನೆಯಲ್ಲಿ ಭಾರಿಯಾದ ಹಾಹಾಕಾರವುಂಟಾಯಿತು. ಆ ಸರ್ಪದ ಕ್ರೂರವಾದ ವಿಷದಿಂದಲೂ, ಅದರ ಮೇಲೆ ಬೀಸಿ ಬರುವ ಗಾಳಿಗಳಿಂದಲೂ ಆ ಬಳಿಯಿರುವ ಪ್ರದೇಶಗಳೆನವೂ ಭಸ್ಮೀಭೂತವಾಗಿಬಿಟ್ಟುವು.

ಭಾನುಃ ಸುಭಾನುಃ ಸ್ವರ್ಭಾನುಃ ಪ್ರಭಾನುರ್ಭಾನುಮಾಂಸ್ತಥಾ ।
ಚಂದ್ರಭಾನುರ್ಬೃಹದ್ಭಾನುರತಿಭಾನುಸ್ತಥಾಷ್ಟಮಃ ॥ ೩೨ ॥

ಶ್ರೀಭಾನುಃ ಪ್ರತಿಭಾನುಶ್ಚ ಸತ್ಯಭಾಮಾತ್ಮಜಾ ದಶ ।
ಏತೇ ಜಗ್ಮುಃ ಶರೈಸ್ತೀಕ್ಷ್ಣೈಃ ಸರ್ಪಂ ರೌದ್ರಂ ಮದೋತ್ಕಟಂ ॥ ೩೩ ॥

ಬಾಣೈಃ ಸಂಭಿನ್ನಸರ್ವಾಂಗಃ ಪತಿತೋ ಧರಣೀತಲೇ ।
ಸರ್ಪರೂಪಂ ವಿಹಾಯಾಶು ಗಂಧರ್ವೋಽಭೂತ್ಸ್ಫುರದ್ದ್ಯುತಿಃ ॥ ೩೪ ॥

ನತ್ವಾ ಶ್ರೀಕೃಷ್ಣಪುತ್ರಾಂಸ್ತಾನ್ದ್ಯೋತಯನ್ಮಂಡಲಂ ದಿಶಾಂ ।
ಪುಷ್ಪೈರ್ವರ್ಷತ್ಸು ದೇವೇಷು ವಿಮಾನೇನ ದಿವಂ ಯಯೌ ॥ ೩೫ ॥

॥ ಬಹುಲಾಶ್ವ ಉವಾಚ ॥

ಗಂಧರ್ವೋಽಯಂ ಕಃ ಪೂರ್ವಂ ಕೇನ ಪಾಪೇನ ಸರ್ಪತಾಂ ।
ಪ್ರಾಪ್ತಃ ಕಥಂ ವದ ಮುನೇ ತ್ವಂ ಪರಾವರವಿತ್ತಮಃ ॥ ೩೬ ॥

೩೨–೩೩. ಆಗ ಸತ್ಯಭಾಮೆಯ ಮಕ್ಕಳಾದ ಭಾನು, ಸುಭಾನು, ಪ್ರಭಾನು, ಭಾನುಮಂತ, ಚಂದ್ರಭಾನು, ಬೃಹದ್ಭಾನು, ಅತಿಭಾನು, ಶ್ರೀಭಾನು, ಪ್ರತಿಭಾನು ಎಂಬ ಹತ್ತು ಮಂದಿ ಕುಮಾರರು ಅತಿ ತೀಕ್ಷ್ಣವಾದ ಬಾಣಗಳೊಳನೆ ಆ ಭಯಂಕರವಾದ ಸರ್ಪವನ್ನು ಕೊಲ್ಲಲು ಹೊರಟರು.

೩೪. ಅವರ ಬಾಣಗಳಿಂದ ಆ ಸರ್ಪದ ಅಂಗಾಂಗಗಳೆಲ್ಲವೂ ಛಿದ್ರಛಿದ್ರವಾಗಿ ಅದು ನೆಲದ ಮೇಲೆ ಬಿದ್ದುಹೋಯಿತು. ಕೂಡಲೆ ಆ ಸರ್ಪವು ತನ್ನ ಆಕಾರವನ್ನು ತೊರೆದು ತೇಜಸ್ಸಿನಿಂದ ಬೆಳಗುತ್ತಿರುವ ಗಂಧರ್ವನ ಆಕಾರವನ್ನು ತಾಳಿಬಿಟ್ಟಿತು.

೩೫. ಅನಂತರ ಆ ಗಂಧರ್ವನು ಶ್ರೀಕೃಷ್ಣಪುತ್ರರನ್ನು ನಮಸ್ಕರಿಸಿ ತನ್ನ ತೇಜಸ್ಸಿನಿಂದ ಸುತ್ತುಮುತ್ತಲಿನ ಪ್ರದೇಶಗಳೆಲ್ಲವನ್ನೂ ಬೆಳಗುತ್ತಾ ದೇವತೆಗಳು ಪುಷ್ಪವೃಷ್ಟಿಯನ್ನು ಕರೆಯುತ್ತಿರಲು ವಿಮಾನವನ್ನೇರಿ ಸ್ವರ್ಗಲೋಕಕ್ಕೆ ಹೊರಟು ಹೋದನು. ಎನ್ನಲು,

೩೬. ಆಗ ಮಿಥಿಲಾಧಿಪತಿಯಾದ ಬಹುಲಾಶ್ವನು ನಾರದಮಹರ್ಷಿಯನ್ನು ಕುರಿತು, ಓ ಮುನೀಂದ್ರ! ಈ ಗಂಧರ್ವನು ಯಾರು? ಇವನು ತಾನು ಹಿಂದೆ ಮಾಡಿದ ಯಾವ ಪಾಪದಿಂದ ಸರ್ಪರೂಪವನ್ನು ತಾಳಿದನು? ಹಿಂದಾದುದನ್ನೂ, ಚೆನ್ನಾಗಿ ಅರಿತಿರುವ ನೀನು ದಯವಿಟ್ಟು ಈ ಅಂಶವನ್ನು ನನಗೆ ತಿಳಿಸಬೇಕು ಎಂದು ಪ್ರಶ್ನಿಸಲು ನಾರದನು ಇಂತೆಂದನು.

॥ ಶ್ರೀ ನಾರದ ಉವಾಚ ॥

ಆರ್ಷ್ಟಿಷೇಣಸ್ಯ ಯೋ ಭ್ರಾತಾ ಸುಮತಿರ್ನಾಮ ಸುಂದರಃ ।
ರಾಮಾಯಣಂ ಹನುಮತಾ ಪಠಿತುಂ ಸ ಸಮಾಗತಃ ॥ ೩೭ ॥

ಹೇಮಕೂಟೇ ಹನುಮತಃ ಕುರ್ವತೋ ರಾಮಸೇವನಂ ।
ಪ್ರಾತಃಕಾಲಾತ್ಸಮಾರಭ್ಯ ಘಟಿಕಾಶ್ಚ ಚತುರ್ದಶ ॥ ೩೮ ॥

ಸಲಕ್ಷ್ಮಣಂ ರಾಮಚಂದ್ರಂ ಧ್ಯಾಯತೋ ಜಾನಕೀಪತಿಂ ।
ಫೂತ್ಕಾರೈಃ ಸರ್ಪವತ್ತಸ್ಯ ಧ್ಯಾನಭಂಗಂ ಚಕಾರ ಹ ॥ ೩೯ ॥

ತದಾ ಕ್ರುದ್ಧೋ ಮಹಾವೀರೋ ಹನೂಮಾನ್ವಾನರೇಶ್ವರಃ ।
ಶಾಪಂ ದದೌ ಸುಮತಯೇ ತ್ವಂ ಸರ್ಪೋ ಭವ ದುರ್ಮತೇ ॥ ೪೦ ॥

ತದೈವ ತಸ್ಯ ಚರಣೌ ನತ್ವಾ ಪ್ರಾಹ ಕೃತಾಂಜಲಿಃ ।
ಹೇ ದೇವ ಪಾಹಿ ಪಾಹೀತಿ ದೀನಂ ಮಾಂ ಶರಣಂ ಗತಂ ॥ ೪೧ ॥

---

೩೭. ಆರ್ಷ್ಟಿಷೇಣನಿಗೆ ಸುಮತಿಯೆಂಬ ರೂಪವಂತನಾದ ತಮ್ಮನೊಬ್ಬ ನಿದ್ದನು. ಅವನು ಆಂಜನೇಯನೊಡನೆ ರಾಮಾಯಣವನ್ನು ಪಠಿಸಲು ಒಂದು ಸಲ ಬಂದನು.

೩೮. ಆ ಆಂಜನೇಯನು ಹೇಮಕೂಟದಲ್ಲಿ ಬೆಳಗಿನಿಂದ ಹಿಡಿದು ಹದಿನಾಲ್ಕು ಗಳಿಗೆಗಳು ಆಗುವವರಿಗೂ ಶ್ರೀರಾಮಚಂದ್ರನನ್ನು ಆರಾಧಿಸುತ್ತಿದ್ದನು.

೩೯. ಹೀಗೆ ಆತನು ಸೀತಾಲಕ್ಷ್ಮಣಸಮೇತನಾದ ಶ್ರೀರಾಮಚಂದ್ರನನ್ನು ಏಕಾಗ್ರತೆಯಿಂದ ಧ್ಯಾನಮಾಡುತ್ತಿದ್ದಾಗ ಆ ಸುಮತಿಯೆಂಬುವನು ಹಾವಿನಂತೆ ಬುಸುಗುಟ್ಟುತ್ತಾ ಆತನ ಧ್ಯಾನಭಂಗವನ್ನು ಮಾಡಿದನು.

೪೦. ಆಗ ಕೋಪಾಕ್ರಾಂತನಾದ ಆಂಜನೇಯನು ಆ ದುಷ್ಟಬುದ್ಧಿಯನ್ನು ನೀನು ಹಾವೇ ಆಗೆಂದು ಶಪಿಸಿದನು.

೪೧. ಆ ಕೂಡಲೇ ಸುಮತಿಯು ಆತನ ಕಾಲಿಗೆ ಬಿದ್ದು ಕೈಗಳನ್ನು ಜೋಡಿಸಿ ಕೊಂಡು, ನಿನ್ನನ್ನು ಮರೆಹೊಕ್ಕಿರುವ ದೀನನಾದ ನನ್ನನ್ನು ಕಾಪಾಡು ಕಾಪಾಡು ಎಂದು ಪುನಃ ಪುನಃ ಪ್ರಾರ್ಥಿಸಿದನು.

ಅಥ ಪ್ರಸನ್ನೋ ಭಗವಾನ್ಸುಮತಿಂ ಪ್ರಾಹ ಧರ್ಮವಿತ್ ।
ದ್ವಾಪರಾಂತೇ ಶರೈಸ್ತೀಕ್ಷ್ಣೈರ್ಹರಿಪುತ್ರಧನುಶ್ಚ್ಯುತೈಃ ॥
ಭಿನ್ನದೇಹಃ ಸ್ವಾಂ ಪ್ರಕೃತಿಂ ಯಾಸ್ಯಸಿ ತ್ವಂ ನ ಸಂಶಯಃ ॥ ೪೨ ॥

ಗಂಧರ್ವಃ ಸುಮತಿರ್ನಾಮ ವಿಮುಕ್ತೋಽಭೂದ್ವಿದೇಹರಾಟ್ ।
ಸತಾಂ ಶಾಪೋಽಪಿ ವರವದ್ವರೋ ಮೋಕ್ಷಾರ್ಥದಃ ಕಿಮು ॥ ೪೩ ॥

ಅಥ ಕಾರ್ಷ್ಣಿರ್ಮಹಾಬಾಹುಶ್ಚೈತ್ರದೇಶಾನ್ಮನೋಹರಾನ್ ।
ವಸಂತಮಾಧವೀವೃಂದೈಃ ಶೋಭಿತಾನ್ಸ ಜಗಾಮ ಹ ॥ ೪೪ ॥

ಸಹಸ್ರದಲಪದ್ಮಾನಾಂ ಷಟ್ಪದಧ್ವನಿಶಾಲಿನಾಂ ।
ಪತಂತಿ ರೇಣವೋ ಯತ್ರ ಸರಃಸ್ವಾಬೀರಚೂರ್ಣವತ್ ॥ ೪೫ ॥

---

೪೨. ಆಗ ಧರ್ಮಜ್ಞನಾದ ಆಂಜನೇಯನು ಪ್ರಸನ್ನನಾಗಿ ಆ ಸುಮತಿಯನ್ನು ಕುರಿತು ದ್ವಾಪರಯುಗದ ಅಂತ್ಯಭಾಗದಲ್ಲಿ ಶ್ರೀಕೃಷ್ಣಪುತ್ರರ ಬಾಣಪ್ರಹಾರಗಳಿಂದ ನಿನ್ನ ಶರೀರವು ಛೇದಿಸಲ್ಪಟ್ಟಾಗ ನೀನು ನಿನ್ನ ಸ್ವಾಭಾವಿಕವಾದ ಶರೀರವನ್ನು ತಾಳುವೆ, ಇದು ಖಂಡಿತ ಎಂಬುದಾಗಿ ವಿಶಾಪವನ್ನು ಇತ್ತು ಅನುಗ್ರಹಿಸಿದನು.

೪೩. ಓ ವಿದೇಹರಾಜ! ಈ ರೀತಿಯಾಗಿ ಆ ಸುಮತಿಯೆಂಬ ಗಂಧರ್ವನು ತನ್ನ ಶಾಪದಿಂದ ಬಿಡುಗಡೆ ಹೊಂದಿದನು. ಸಜ್ಜನರ ಶಾಪವೂ ಸಹ ವರವಿತ್ತಂತೆ ಆಗುವುದು. ಹೀಗಿರುವಾಗ ಅವರು ವರವನ್ನೇ ಇತ್ತರೆ ಅದರಿಂದ ಮೋಕ್ಷವುಂಟಾಗುವುದೆಂಬುದರಲ್ಲಿ ಆಶ್ಚರ್ಯವೇನಿರುವುದು ?

೪೪. ಅನಂತರ ಮಹಾಬಾಹುವಾದ ಆ ಕೃಷ್ಣಪುತ್ರನು ವಸಂತರ ಸಮೂಹದಿಂದಲೂ, ಮಾಧವಿಯರ ಗುಂಪುಗಳಿಂದಲೂ ಕಂಗೊಳಿಸುತ್ತಿರುವ ಮನೋಹರವಾದ ಚೈತ್ರವೆಂಬ ದೇಶಗಳಿಗೆ ಅಭಿಮುಖನಾಗಿ ಹೊರಟನು.

೪೫. ಆ ಚೈತ್ರದೇಶದಲ್ಲಿರುವ ಸರೋವರಗಳಲ್ಲಿ ಸರ್ವದಾ ಭ್ರಮರಗಳ ಝೇಂಕಾರಗಳಿಂದ ಕೂಡಿದ ಸಾವಿರ ದಳಗಳಿರುವ ಕಮಲಗಳಿಂದ ಪುಷ್ಪಧೂಳಿಯು ಕೆಳಗೆ ಉದುರುತ್ತಾ ಮನೋಹರವಾಗಿರುವುದು.

ಏಲಾಲವಂಗತಿಲಕಾಃ ಕ್ಷುಣ್ಣಾಃ ಸೈನ್ಯಾಂಘ್ರಿಭಿಃ ಪಥಿ ।
ತೇನ ಭೃಂಗಾವಲೀ ರೇಜೇ ಕರಿಕರ್ಣಪ್ರತಾಡಿತಾ ॥ ೪೬ ॥

ಯತ್ರ ವೈ ಪುರುಷಾ ರಾಜನ್ನಾಗಾಯುತಸಮಾ ಬಲೇ ।
ವಲೀಪಲಿತದೌರ್ಗಂಧ್ಯಸ್ವೇದಕ್ಲಮವಿವರ್ಜಿತಾಃ ॥ ೪೭ ॥

ತ್ರೇತಾಯುಗಸಮಃ ಕಾಲೋ ವರ್ತತೇ ಯತ್ರ ನಿತ್ಯಶಃ ।
ಆಯುಶ್ಚಾಯುತವರ್ಷಾಣಾಂ ದಿವ್ಯೌಷಧಿನದೀಗುಣೈಃ ॥ ೪೮ ॥

ಪೀಯೂಷತುಲ್ಯಂ ತೋಯಂ ಚ ಹೇಮಭೂಮಿರ್ವಿರಾಜತೇ ।
ಮುಕ್ತಾವಿದ್ರುಮವೈಡೂರ್ಯರತ್ನೋತ್ಪತ್ತಿಶ್ಚ ಯತ್ರ ವೈ ॥ ೪೯ ॥

---

೪೬. ಇಂಥ ಆ ಚೈತ್ರದೇಶದಲ್ಲಿ ಬರುತ್ತಿರುವಾಗ ಪ್ರದ್ಯುಮ್ನನ ಸೈನ್ಯದ ತುಳಿತದಿಂದ ದಾರಿಯಲ್ಲಿರುವ ಏಲಕ್ಕಿಯ ಬಳ್ಳಿಗಳೂ, ಲವಂಗಲತೆಗಳೂ ಪುಡಿ ಪುಡಿ ಮಾಡಲ್ಪಟ್ಟುದರಿಂದ ಅವುಗಳಿಗೆ ಮುಸುರಿದ್ದ ದುಂಬಿಗಳು ಮೇಲಕ್ಕೆದ್ದು, ಸೇನಾ ಗಜಗಳ ಕಿವಿಯ ಏಟಿಗೆ ಸಿಲುಕಿ ಪುನಃ ಚದುರಿ ಓಡುತ್ತಾ ಶೋಭಿಸಿದುವು.

೪೭. ಓ ರಾಜೇಂದ್ರ! ಆ ದೇಶದಲ್ಲಿ ಹುಟ್ಟಿದ ಜನರು ಬಲದಲ್ಲಿ ಹತ್ತುಸಾವಿರ ಆನೆಗಳಿಗೆ ಸರಿಸಮನಾಗಿರುವರು. ಅವರಾರಿಗೂ ಶರೀರದಲ್ಲಿ ಮುಪ್ಪಿನಿಂದ ಸಂಭವಿಸುವ ಮುಡಿಕೆಗಳಾಗಲಿ, ನರೆಯಾಗಲಿ, ದುರ್ವಾಸನೆಯಾಗಲಿ, ಬೆವರಾಗಲಿ, ಬಳಲಿಕೆಯಾಗಲಿ ಎಂದೆಂದಿಗೂ ಉಂಟಾಗುತ್ತಿರಲಿಲ್ಲ.

೪೮. ಆ ಪ್ರದೇಶದಲ್ಲಿ ಸರ್ವದಾ ತ್ರೇತಾಯುಗಕ್ಕೆ ಸರಿಸಮನಾದ ಓಷಧಿಗಳ ಪ್ರಭಾವದಿಂದಲೂ, ಹರಿಯುವ ನದಿಗಳ ಗುಣದಿಂದಲೂ ಅಲ್ಲಿನ ಜನರು ಹತ್ತುಸಾವಿರ ವರ್ಷಗಳಕಾಲ ಜೀವಿಸುವರು.

೪೯. ಅಲ್ಲಿ ದೊರೆಯುವ ನೀರು ಅಮೃತದಂತೆ ಮಧುರವಾಗಿರುವುದು. ನೆಲವೆಲ್ಲವೂ ಚಿನ್ನದಿಂದಲೇ ನಿರ್ಮಿತವಾಗಿರುವುದು. ಅಲ್ಲದೆ ಮುತ್ತುಗಳೂ, ಹವಳಗಳೂ, ವೈಡೂರ್ಯಗಳೂ, ರತ್ನಗಳೂ ಹೇರಳವಾಗಿ ದೊರೆಯುವುವು.

ಸುಂದರ್ಯಃ ಪ್ರಮದಾ ರಾಮಾ ನಿತ್ಯಯೌವನಭೂಷಿತಾಃ ।
ಸ್ಫುರಂತ್ಯುಪವನೇಷ್ವಾರಾತ್ಸೌದಾಮಿನ್ಯೋ ಘನೇಷ್ವಿವ ॥ ೫೦ ॥

ಯತ್ರೈವ ನಗರೀ ರಮ್ಯಾ ವಸಂತತಿಲಕಾ ಶುಭಾ ।
ಶೃಂಗಾರತಿಲಕೋ ನಾಮ ರಾಜಾ ಯತ್ರ ಮಹಾಬಲಃ ॥ ೫೧ ॥

ಜೈತ್ರಾನ್ವೀರಾನ್ಸಮಾಹೂಯ ಗಜಮಾರುಹ್ಯ ದಂಶಿನಃ ।
ಯೋದ್ಧುಂ ವಿನಿರ್ಯಯೌ ಯಚ್ಚ ಪ್ರದ್ಯುಮ್ನಸ್ಯಾಪಿ ಸಂಮುಖೇ ॥ ೫೨ ॥

ಸಾಂಬಃ ಸುಮಿತ್ರಃ ಪುರುಜಿಚ್ಛತಜಿಚ್ಚ ಸಹಸ್ರಜಿತ್ ।
ವಿಜಯಶ್ಚಿತ್ರಕೇತುಶ್ಚ ವಸುಮಾನ್ದ್ರವಿಡಃ ಕ್ರತುಃ ॥ ೫೩ ॥

---

೫೦. ಅಲ್ಲಿನ ಸ್ತ್ರೀಯರು ಮಹಾ ರೂಪವತಿಯರಾಗಿಯೂ, ನಿತ್ಯವೂ ತುಂಬು ಜವ್ವನದಿಂದ ಮೆರೆಯುತ್ತಾ, ಮೋಡಗಳಲ್ಲಿ ಸುಳಿಯುವ ಮಿಂಚುಗಳಂತೆ ಉಪವನಗಳಲ್ಲಿ ವಿಹರಿಸುತ್ತಾ ಕಂಗೊಳಿಸುವರು.

೫೧. ಆ ದೇಶಕ್ಕೆ ವಸಂತತಿಲಕವೆಂಬ ಶುಭಕರವೂ, ರಮಣೀಯವೂ ಆದ ನಗರವು ರಾಜಧಾನಿಯಾಗಿರುವುದು. ಅಲ್ಲಿ ಮಹಾ ಬಲಿಷ್ಠನಾದ ಶೃಂಗಾರತಿಲಕನೆಂಬ ರಾಜನಿರುವನು.

೫೨. ಆ ರಾಜನು ಇದುವರೆಗೂ ಅನೇಕ ಯುದ್ಧಗಳಲ್ಲಿ ಗೆದ್ದಿರುವಂತಹ ಶೂರರಾದ ಭಟರನ್ನು, ಉಕ್ಕಿನ ಕವಚವನ್ನು ತೊಟ್ಟು ಯುದ್ಧಸನ್ನದ್ಧರಾಗಿ ಬರುವಂತೆ ಆಜ್ಞಾಪಿಸಿ, ತಾನು ಮದ್ದಾನೆಯೊಂದನ್ನು ಏರಿ ಕುಳಿತು ಪ್ರದ್ಯುಮ್ನನಿಗೆದುರಾಗಿ ಬಂದನು.

೫೩–೫೪. ಆಗ ಜಾಂಬವತಿಯ ಪುತ್ರನಾದ ಸಾಂಬ, ಸುಮಿತ್ರ, ಪುರಜಿತ್, ಶತಜಿತ್, ಸಹಸ್ರಜಿತ್, ವಿಜಯ, ಚಿತ್ರಕೇತು, ವಸುಮಂತ, ದ್ರವಿಡ, ಕ್ರತು ಎಂಬ

ಜಾಂಬವತ್ಯಾಃ ಸುತಾ ಹ್ಯೇತೇ ಚಕ್ರುರ್ನಾರಾಚದುರ್ದಿನಂ ।
ಪಲಾಯಿತೇಷು ಚೈತೇಷು ಬಾಣೈರ್ಭಿನ್ನೇಷು ಮೈಥಿಲ ॥ ೫೪ ॥

ಬಾಣಾಂಧಕಾರೇ ಸಂಜಾತೇ ಮಹಾನ್ಕೋಲಾಹಲೋ ಹ್ಯಭೂತ್ ।
ತದಾ ಶೃಂಗಾರತಿಲಕೋ ಗಜಾರೂಢೋ ಮಹಾಬಲಃ ॥ ೫೫ ॥

ಏಕಾಕೀ ವಿಚರನ್ಯುದ್ಧೇ ವನೇ ವೈಶ್ವಾನರೋ ಯಥಾ ।
ತದಾ ಗದಃ ಸಮಾಗತ್ಯ ತದ್ಗಜಂ ಸುಮದೋತ್ಕಟಂ ॥ ೫೬ ॥

ಶುಂಡಾದಂಡೇ ಸಂಗೃಹೀತ್ವಾ ಪಾತಯಾಮಾಸ ಭೂತಲೇ ।
ದೂರೇ ಪ್ರಪತಿತಃ ಶೀಘ್ರಂ ಶೃಂಗಾರತಿಲಕೋ ನೃಪಃ ॥ ೫೭ ॥

ವೀರರು ಧಾರಾಕಾರವಾಗಿ ಮಳೆಯಂತೆ ಬಾಣಗಳನ್ನು ಸುರಿಸುತ್ತಾ ಬಂದರು. ಓ ಮಿಥಿಲೇಶ್ವರ! ಈ ಬಾಣವರ್ಷದಿಂದ ಚೈತ್ರದೇಶದ ವೀರರೆಲ್ಲರೂ ಮೈ ಕೈಗಳೆಲ್ಲಾ ಕತ್ತರಿಸಲ್ಪಟ್ಟು ಓಡತೊಡಗಿದರು.

೫೫. ಈ ರೀತಿಯಾಗಿ ಜಾಂಬವತೀ ಪುತ್ರರ ಬಾಣವರ್ಷದಿಂದ ಯುದ್ಧ ರಂಗದಲ್ಲೆಲ್ಲಾ ಕತ್ತಲು ಕವಿದಂತಾಗಲು, ಶತ್ರುಸೇನೆಯಲ್ಲಿ ಬಹಳ ಗದ್ದಲವಾಗ ತೊಡಗಿತು. ಆಗ ಮಹಾಬಲಾಢ್ಯನಾದ ಆ ಶೃಂಗಾರತಿಲಕರಾಜನು ಆನೆಯ ಮೇಲೆ ಕುಳಿತು,

೫೬. ತಾನೊಬ್ಬನೇ ರಣರಂಗದಲ್ಲಿ ನುಗ್ಗಿ ಕಾಡಿನಲ್ಲಿ ಉರಿಯುತ್ತಾ ಹಬ್ಬುವ ಕಾಳ್ಕಿಚ್ಚಿನಂತೆ ಸಂಚರಿಸುತ್ತಾ ಹೋರಾಡತೊಡಗಿದನು. ಆಗ ಗದನೆಂಬ ವೀರನು ಅವನಿಗೆದುರಾಗಿ ಬಂದು ಅವನು ಕುಳಿತಿದ್ದ ಮದ್ದಾನೆಯನ್ನು

೫೭. ಸೊಂಡಿಲನಲ್ಲಿ ಹಿಡಿದುಕೊಂಡು ನೆಲದ ಮೇಲೆ ಅಪ್ಪಳಿಸಿದನು. ಆಗ ಅದರ ಮೇಲೆ ಕುಳಿತಿದ್ದ ಶೃಂಗಾರತಿಲಕನು ದೂರದಲ್ಲಿ ಹೋಗಿ ಬಿದ್ದನು.

ಸದ್ಯೋ ಭಯಾತುರೋ ಭೂತ್ವಾ ಯುದ್ಧೇ ಬದ್ಧಾಂಜಲಿಃ ಸ್ವತಃ ।
ತುರಂಗಾಣಾಮರ್ಬುದಂ ಚ ರಥಾನಾಂ ಲಕ್ಷಮೇವ ಚ ॥ ೫೮ ॥

ಗಜಾನಾಮಯುತಂ ರಾಜಾ ಪ್ರದ್ಯುಮ್ನಾಯ ಬಲಿಂ ದದೌ ।
ಇತ್ಥಂ ಕಿಂಪುರುಷಂ ಖಂಡಂ ಜಿತ್ವಾ ಕಾರ್ಷ್ಣಿರ್ಮಹಾಬಲಃ ॥ ೫೯ ॥

ನೈಷಾದದರ್ಶಿತೈರ್ಮಾರ್ಗೈರ್ಹರಿವರ್ಷಂ ತತೋ ಯಯೌ ॥ ೬೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ಕಿಂಪುರುಷಖಂಡವಿಜಯೋ ನಾಮ
ಷಡ್ವಿಂಶೋಽಧ್ಯಾಯಃ

---

೫೮. ಆಗ ಅವನಿಗೆ ಮಿತಿಮೀರಿ ಭಯವುಂಟಾಯಿತು. ಕೂಡಲೇ ಆ ರಾಜನು ಕೈಗಳನ್ನು ಮುಗಿದುಕೊಂಡು ತಾನಾಗಿ ಬಂದು, ಒಂದು ಅರ್ಬುದ ಕುದುರೆಗಳನ್ನೂ, ಒಂದುಲಕ್ಷ ರಥಗಳನ್ನೂ, ಹತ್ತು ಸಾವಿರ ಆನೆಗಳನ್ನೂ ಆ ಪ್ರದ್ಯುಮ್ನನಿಗೆ ಕಾಣಿಕೆಯಾಗಿ ಒಪ್ಪಿಸಿದನು.

೫೯–೬೦. ಆಗ ಈ ರೀತಿಯಾಗಿ ಮಹಾಬಲಶಾಲಿಯಾದ ಪ್ರದ್ಯುಮ್ನನು ಕಿಂಪುರುಷಖಂಡವನ್ನೆಲ್ಲಾ ಗೆದ್ದು, ಬೇಡರಿಂದ ತೋರಿಸಲ್ಪಟ್ಟ ಮಾರ್ಗವಾಗಿ ಹರಿವರ್ಷಕ್ಕೆ ಅಭಿಮುಖವಾಗಿ ತೆರಳಿದನು.

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವ ಸಂವಾದದಲ್ಲಿ ಕಿಂಪುರುಷಖಂಡ ವಿಜಯವೆಂಬ
ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಸಪ್ತವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಹರಿವರ್ಷಂ ನಾಮ ಖಂಡಂ ಸರ್ವಸಂಪತ್ತಿಸಂಯುತಂ ।
ತಸ್ಯ ಸೀಮಾಗಿರಿಃ ಸಾಕ್ಷಾನ್ನಿಷಧೋ ನಾಮ ಮೈಥಿಲ ॥ ೧ ॥

ವೀರಕೋದಂಡಟಂಕಾರಘೋಷೈರ್ವ್ಯಾಪ್ತಾವನಾಂತರಾತ್ ।
ಉಡ್ಡಿತಾಸ್ತು ಮಹಾಗೃಧ್ರಾಃ ಕ್ರೋಶಮಾತ್ರವಪುರ್ಧರಾಃ ॥ ೨ ॥

ಇಪ್ಪತ್ತೇಳನೆಯ ಅಧ್ಯಾಯವು

೧. ಓ ಮೈಥಿಲೇಂದ್ರ! ಆ ಹರಿವರ್ಷವೆಂಬ ಖಂಡವು ಸಕಲ ಸಂಪತ್ತುಗಳಿಂದಲೂ ಸಮೃದ್ಧವಾಗಿರುವುದು. ಆ ಖಂಡಕ್ಕೆ ನಿಷಧವೆಂಬುದು ಸೀಮಾ (ಎಲ್ಲೆಕಟ್ಟಿನ) ಪರ್ವತವಾಗಿರುವುದು.

೨. ಆ ಹರಿವರ್ಷದಲ್ಲಿ ಯದುವೀರರು ಪ್ರವೇಶಿಸುತ್ತಲೇ ಅವರ ಬಿಲ್ಲಿನ ಹೆದೆಯ ಟಂಕಾರಗಳಿಂದ ಕಾಡಿನ ಪ್ರದೇಶಗಳೆಲ್ಲವೂ ತುಂಬಿಹೋಗಿ ಅಲ್ಲಿದ್ದ ಯೋಜನ ಪ್ರಮಾಣವಾದ ಶರೀರಗಳುಳ್ಳ ಭಾರಿ ಭಾರಿ ಹದ್ದುಗಳು ಮೇಲಕ್ಕೆ ಹಾರಿಹೋಗತೊಡಗಿದುವು.

ತೀಕ್ಷ್ಣತುಂಡಾಃ ಸಗರುತಃ ಸರ್ವೇ ದೀರ್ಘಾಯುಷೋ ನೃಪ ।
ಅಗ್ರಸನ್ಸೈನಿಕಾನ್ನಾಗಾನ್ಸ್ಥಯಾಂಸ್ತೇಽಪಿ ಬುಭುಕ್ಷಿತಾಃ ॥ ೩ ॥

ಆಕಾಶೇ ಪಕ್ಷಿಭಿರ್ವ್ಯಾಪ್ತೇ ಜಾತೇ ಪಕ್ಷಪ್ರಭಂಜನೇ ।
ಸೇನಾಯಾಮಂಧಕಾರೇಣ ಹಾಹಾಕಾರೋ ಮಹಾನಭೂತ್ ॥ ೪ ॥

ತದಾ ಕಾರ್ಷ್ಣಿರ್ಮಹಾಬಾಹುಸ್ತಾರ್ಕ್ಷ್ಯಮಸ್ತ್ರಂ ಸಮಾದದೇ ।
ತದ್ಬಾಣಾನ್ನಿರ್ಗತಃ ಸಾಕ್ಷಾದ್ವೈನತೇಯಃ ಪ್ರಭಂಜನಃ ॥ ೫ ॥

ಸೇನಾಯಾಮಂಧಕಾರೇಣ ವ್ಯಾಪ್ತಾಯಾಂ ಪತಗೇಶ್ವರಃ ।
ಕಾಂಶ್ಚಿತ್ತುಂಡಪ್ರಹಾರೇಣ ಕಾಂಶ್ಚಿತ್ಪಕ್ಷೈಃ ಸ್ಫುರತ್ಪ್ರಭೈಃ ॥ ೬ ॥

---

೩. ಆ ಹದ್ದುಗಳು ಅತಿಚೂಪಾದ ಕೊಕ್ಕಿನಿಂದಲೂ, ಭಾರಿ ಭಾರಿ ರೆಕ್ಕೆಗಳಿಂದಲೂ ಕೂಡಿದ್ದುವಲ್ಲದೆ, ಬಹಳಕಾಲ ಜೀವಿಸುವಂತಹವಾಗಿದ್ದುವು. ಇಂಥ ಆ ಹದ್ದುಗಳು ಹಸಿದಿದ್ದುದರಿಂದ ಯದುಸೈನ್ಯದಲ್ಲಿದ್ದ ಯೋಧರನ್ನೂ, ಆನೆ ಕುದುರೆಗಳನ್ನೂ ನುಂಗುತ್ತಾ ಬಂದುವು.

೪. ಆಗ ಆಕಾಶವೆಲ್ಲಾ ಹದ್ದುಗಳಿಂದ ತುಂಬಿಹೋಯಿತು. ಅವುಗಳ ರೆಕ್ಕೆಗಳಿಂದ ಎತ್ತೆತ್ತಲೂ ಜೋರಾಗಿ ಗಾಳಿಯು ಬೀಸತೊಡಗಿತು. ಹೀಗಾಗಿ ಸುತ್ತಲೂ ಕತ್ತಲೆ ಕವಿಯಿತು. ಆಗ ಸೇನೆಯಲ್ಲಿ ಭಾರಿಯಾದ ಹಾಹಾಕಾರವುಂಟಾಯಿತು.

೫. ಆಗ ಮಹಾಬಾಹುವಾದ ಪ್ರದ್ಯುಮ್ನನು ತನ್ನ ಧನುಸ್ಸಿನಲ್ಲಿ ಗರುಡಾಸ್ತ್ರವನ್ನು ಸಂಧಾನಮಾಡಿದನು. ಆ ಅಸ್ತ್ರದಿಂದ ಎಂತಹ ಎದುರಾಳಿಯನ್ನೂ ಭಂಜಿಸಿಬಿಡಬಲ್ಲ ಸಾಮರ್ಥ್ಯವುಳ್ಳ ಸಾಕ್ಷಾತ್ ಗರುಡನೇ ಹೊರಟುಬಂದನು.

೬. ಆ ಗರುಡನು ಕತ್ತಲಿನಿಂದ ಕವಿಯಲ್ಪಟ್ಟ ಆ ಪಕ್ಷಿಸೇನೆಯಲ್ಲಿ ಕೆಲವನ್ನು ತನ್ನ ಕೊಕ್ಕಿನ ಆಘಾತದಿಂದಲೂ. ಕೆಲವನ್ನು ಹೊಳೆಯುತ್ತಿರುವಂತಹ ರೆಕ್ಕೆಗಳ ಪೆಟ್ಟಿನಿಂದಲೂ.

ಗೃಧ್ರಾನ್ಕುಲಿಂಗಾನ್ಗರುಡೋ ಪಾತಯಾಮಾಸ ಭೂತಲೇ ।
ಭಗ್ನದರ್ಪಾಶ್ಛಿನ್ನಪಕ್ಷಾ ಭಕ್ಷಿತಾಃ ಪಕ್ಷಿಣಶ್ಚ ತೇ ॥ ೭ ॥

ಭಯಾತುರಾ ದುದ್ರುವುಸ್ತೇ ತಾರ್ಕ್ಷ್ಯೇಣಾಪಿ ದಿಶೋ ದಶ ।
ತತಃ ಕಾರ್ಷ್ಣಿರ್ಮಹಾಬಾಹುರ್ದಶಾರ್ಣಾನ್ವಿಷಯಾನ್ಯಯೌ ॥ ೮ ॥

ದಶಾರ್ಣದೇಶಾಧಿಪತಿಃ ಶುಭಾಂಗಃ ಸೂರ್ಯವಂಶಜಃ ।
ನಾಗಾಯುತಸಮೋ ಯುದ್ಧೇ ನಿಷ್ಕೌಶಾಂಬಿಪುರೀಪತಿಃ ॥ ೯ ॥

ವೇದವ್ಯಾಸಮುಖಾಚ್ಛ್ರುತ್ವಾ ಪ್ರದ್ಯುಮ್ನಂ ಚಂಡಪೌರುಷಂ ।
ದಶಾರ್ಣಾಂ ತಾಂ ನದೀಂ ದೀರ್ಘಾಂ ಸಮುತ್ತೀರ್ಯ ಸಮಾಯಯೌ ॥೧೦॥

---

೭. ಗೃಧ್ರ ಮತ್ತು ಕುಲಿಂಗಗಳೆಂಬ ಜಾತಿಗೆ ಸೇರಿದ ಆ ಪಕ್ಷಿಗಳನ್ನು ನೆಲದ ಮೇಲೆ ಕೆಡಹುತ್ತಾ ಬಂದನು. ಆಗ ಆ ಪಕ್ಷಿಗಳ ದರ್ಪವೆಲ್ಲವೂ ನುಚ್ಚುನೂರಾಯಿತು. ರೆಕ್ಕೆಗಳೆಲ್ಲವೂ ಕತ್ತರಿಸಿಹೋದುವು. ಕೆಲವು ಪಕ್ಷಿಗಳು ಆತನ ಬಾಯಿಗೆ ತುತ್ತಾಗಿ ಹೋದುವು.

೮. ಉಳಿದ ಗೃಧ್ರಗಳೆಲ್ಲವೂ ಭಯದಿಂದ ತತ್ತರಿಸುತ್ತಾ ಆ ರಣರಂಗದಿಂದ ಚೆದುರಿ ದಿಕ್ಕುದಿಕ್ಕಿಗೆ ಓಡಿಹೋದುವು. ಬಳಿಕ ಆ ಪ್ರದ್ಯುಮ್ನನು ದಶಾರ್ಣದೇಶಗಳಿಗೆ ಅಭಿಮುಖನಾಗಿ ತೆರಳಿದನು.

೯. ಆ ದೇಶದ ಅಧಿಪತಿಯು ಶುಭಾಂಗನೆಂಬುವನು. ಆ ಅರಸು ಸೂರ್ಯವಂಶಕ್ಕೆ ಸೇರಿದವನು. ನಿಷ್ಕೌಶಾಂಬಿಯೆಂಬ ಆ ದೇಶದ ರಾಜಧಾನಿಯಲ್ಲಿ ವಾಸಿಸುತ್ತಿದ್ದ ಆತನು ಹತ್ತು ಸಾವಿರ ಆನೆಗಳ ಬಲವನ್ನು ಹೊಂದಿದ್ದನು.

೧೦. ಆತನಿಗೆ ವೇದವ್ಯಾಸ ಮಹಾಮುನಿಯಿಂದ ಅತ್ಯುಗ್ರ ಪರಾಕ್ರಮಿಯಾದ ಪ್ರದ್ಯುಮ್ನನು ಬರುತ್ತಿರುವನೆಂಬ ಸಂಗತಿಯು ತಿಳಿಯಲು, ಆತನು ದಶಾರ್ಣವೆಂಬ ನದಿಯನ್ನು ದಾಟಿ ತಾನೇ ಹೊರಟುಬಂದನು.

ಕೃತಾಂಜಲಿಃ ಶುಭಾಂಗೋಽಸೌ ಕಿರೀಟೇನ ನತಾನನಃ ।
ದದೌ ಬಲಿಂ ಸುರತ್ನಾನಾಂ ಪ್ರದ್ಯುಮ್ನಾಯ ಮಹಾತ್ಮನೇ ॥ ೧೧ ॥

ಪ್ರದ್ಯುಮ್ನೋ ಭಗವಾನ್ಸಾಕ್ಷಾತ್ಸರ್ವಗಃ ಸರ್ವದರ್ಶನಃ ।
ಪಪ್ರಚ್ಛೇದಂ ಶುಭಾಂಗಂ ತಂ ಲೋಕಸಂಗ್ರಹಕಾಮ್ಯಯಾ ॥ ೧೨ ॥

॥ ಪ್ರದ್ಯುಮ್ನ ಉವಾಚ ॥

ದಶಾರ್ಣೋಽಯಂ ಕಥಂ ದೇಶಃ ಕೇನ ನಾಮ್ನಾ ಬಭೂವ ಹ ।
ಏತನ್ಮೇ ಬ್ರೂಹಿ ಹೇ ರಾಜನ್ನಿಷ್ಯಾಕಶಾಂಬಿಪುರೀಪತೇ ॥ ೧೩ ॥

॥ ಶುಭಾಂಗ ಉವಾಚ ॥

ಹಿರಣ್ಯಕಶಿಪುಂ ಹತ್ವಾ ನೃಸಿಂಹೋ ಭಗವಾನ್ಪುರಾ ।
ಪ್ರಹ್ಲಾದೇನ ತ್ವಿಹಾಗತ್ಯ ಹರಿವರ್ಷಂ ಸ್ಥಿತೋಽಭವತ್ ॥ ೧೪ ॥

---

೧೧. ಆ ಶುಭಾಂಗನು ಕೈಮುಗಿದುಕೊಂಡು ತಲೆಬಾಗಿ ನಮಸ್ಕರಿಸಿ. ಅತ್ಯುತ್ಕೃಷ್ಟವಾದಂತಹ ರತ್ನಗಳನ್ನು ಆ ಪ್ರದ್ಯುಮ್ನನಿಗೆ ಕಾಣಿಕೆಯಾಗಿ ಇತ್ತನು.

೧೨. ಆ ಪ್ರದ್ಯುಮ್ನನು ಸರ್ವವ್ಯಾಪಿಯೂ ಸರ್ವಜ್ಞನೂ ಆದ ಭಗವಂತನೇ ತಾನು ಆಗಿದ್ದರೂ ಲೋಕದ ಆಚಾರವನ್ನು ಅನುಸರಿಸುತ್ತಾ ಆ ಶುಭಾಂಗನನ್ನು ಈ ರೀತಿ ಪ್ರಶ್ನಿಸಿದನು.

೧೩. "ಎಲೈ ನಿಷ್ಯಾಕಶಾಂಬೀ ಪುರಾಧಿಪತಿಯಾದ ಶುಭಾಂಗನೇ! ಈ ದೇಶಕ್ಕೆ ದಶಾರ್ಣವೆಂಬ ಹೆಸರು ಯಾವ ಕಾರಣದಿಂದ ಉಂಟಾಯಿತು? ಎಂಬುದನ್ನು ತಿಳಿಸು."

೧೪. ಎಂದು ಪ್ರದ್ಯುಮ್ನನು ಪ್ರಶ್ನಿಸಲು ಆ ಶುಭಾಂಗನು ಇಂತು ಹೇಳಿದನು. ಹಿಂದೆ ಭಗವಂತನಾದ ನರಸಿಂಹನು ಹಿರಣ್ಯಕಶಿಪುವನ್ನು ಕೊಂದು ಪ್ರಹ್ಲಾದನೊಡನೆ ಹರಿವರ್ಷಕ್ಕೆ ಬಂದು ಇಲ್ಲಿ ನೆಲಸಿದನು.

ಪ್ರಹ್ಲಾದಂ ಭಗವಾನ್ಪ್ರಾಹ ನೃಸಿಂಹೋ ಭಕ್ತವತ್ಸಲಃ ।

॥ ನೃಸಿಂಹ ಉವಾಚ ॥

ಶಾಂತಸ್ಯ ತವ ಭಕ್ತಸ್ಯ ಮಯಾ ಪುತ್ರ ಪಿತಾ ಹತಃ ।
ತಸ್ಮಾನ್ನ ಘಾತಯಿಷ್ಯಾಮಿ ವಂಶಂ ತೇ ಹಿ ಮಹಾಮತೇ ॥ ೧೫ ॥

॥ ಶುಭಾಂಗ ಉವಾಚ ॥

ಇತಿ ಪ್ರವದತೋಽಕ್ಷಿಭ್ಯಾಮಾನಂದಜಲಬಿಂದವಃ ।
ಪತಿತಾಃ ಕೌ ಚ ತೈ ರಾಜನ್ಸರೋಽಭೂನ್ಮಂಗಲಾಯನಂ ॥ ೧೬ ॥

ತದಾ ಪ್ರಾಪ್ತವರೋ ರಾಜನ್ಪ್ರಹ್ಲಾದೋ ಹರ್ಷವಿಹ್ವಲಃ ।
ನೃಸಿಂಹಂ ಪ್ರಾಹ ಧರ್ಮಾತ್ಮಾ ನತ್ವಾ ಭೂತ್ವಾ ಕೃತಾಂಜಲಿಃ ॥ ೧೭ ॥

॥ ಪ್ರಹ್ಲಾದ ಉವಾಚ ॥

ಮಾತುಃ ಪಿತುರ್ಮಯಾ ಸೇವಾ ನ ಕೃತಾ ಸಾತ್ವತಾಂ ಪತೇ ।
ಋಣಾತ್ತಯೋಃ ಕಥಂ ಮುಚ್ಯೇ ವದೈತತ್ಪರಮೇಶ್ವರ ॥ ೧೮ ॥

---

೧೫. ಆ ಭಕ್ತವತ್ಸಲನಾದ ನರಸಿಂಹಸ್ವಾಮಿಯು ಶಾಂತನೂ, ಪರಮ ಭಕ್ತನೂ ಆದ ಆ ಪ್ರಹ್ಲಾದನನ್ನು ಕುರಿತು ವತ್ಸಾ! ನಿನ್ನ ತಂದೆಯನ್ನು ನಾನು ಕೊಂದೆನು. ಆದುದರಿಂದ ನಿನ್ನ ಸಂತತಿಯನ್ನು ಕೊಲ್ಲಲಾರೆನು ಎಂದು ಹೇಳಿದನು.

೧೬. ಓ ಪ್ರದ್ಯುಮ್ನಕುಮಾರ! ಈ ರೀತಿ ನರಸಿಂಹಸ್ವಾಮಿಯು ನುಡಿಯುತ್ತಿರುವಾಗ ಆತನ ಕಣ್ಣುಗಳಿಂದ ಆನಂದಸೂಚಕವಾದ ಕೆಲವು ಜಲಬಿಂದುಗಳು ನೆಲದ ಮೇಲೆ ಉದುರುತ್ತಿದ್ದುವು. ಹೇ! ಪ್ರಭು! ಆ ಬಿಂದುಗಳೇ ಮಂಗಳಕರವಾದ ಸರೋವರವಾಗಿ ಪರಿಣಮಿಸಿದುವು.

೧೭. ಈ ರೀತಿ ಆ ನರಸಿಂಹಸ್ವಾಮಿಯು ತನಗೆ ವರವಿತ್ತುದರಿಂದ ಆ ಪ್ರಹ್ಲಾದನು ಆನಂದಪರವಶನಾದನು. ಆಗ ಆ ಧರ್ಮಾತ್ಮನು ಆ ಸ್ವಾಮಿಯನ್ನು ನಮಸ್ಕರಿಸಿ ಕೈಗಳನ್ನು ಮುಗಿದುಕೊಂಡು

೧೮. ಓ ಸಾತ್ವತಾಧೀಶ, ನಾನು ಮಾತಾಪಿತೃಗಳ ಸೇವೆಯನ್ನು ಮಾಡಲಿಲ್ಲ. ಅವರ ಋಣದಿಂದ ನಾನು ಹೇಗೆ ಬಿಡುಗಡೆ ಹೊಂದಲಿ? ಹೇ ಪರಮೇಶ! ಇದನ್ನು ತಿಳಿಸು ಎಂದು ಪ್ರಾರ್ಥಿಸಲು,

॥ ನೃಸಿಂಹ ಉವಾಚ ॥

ಮನ್ನೇತ್ರಜಲಸಂಭೂತೇ ತೀರ್ಥೇ ವೈ ಮಂಗಲಾಯನೇ ।
ಸ್ನಾನಂ ಕುರು ಮಹಾಭಾಗ ಮುಚ್ಯಸೇ ದಶಭಿರ್ಋಣೈಃ ॥ ೧೯ ॥

ಮಾತುಃ ಪಿತುಶ್ಚ ಭಾರ್ಯಾಯಾಃ ಸುತಾನಾಂ ಗುರುದೇವಯೋಃ ।
ವಿಪ್ರಾಣಾಂ ಚ ಪ್ರಪನ್ನಾನಾಮೃಷೀಣಾಂ ಪಿತೃಣಾಮೃಣಂ ॥ ೨೦ ॥

ಯಃ ಸ್ನಾಸ್ಯತಿ ಮಹಾತೀರ್ಥೇ ಸರ್ವಹೇಲನತತ್ಪರಃ ।
ಋಣೈಶ್ಚ ದಶಭಿಃ ಸೋಽಪಿ ಮುಚ್ಯತೇ ನಾತ್ರ ಸಂಶಯಃ ॥ ೨೧ ॥

॥ ಶುಭಾಂಗ ಉವಾಚ ॥

ದಶಾರ್ಣಮೋಚನೇ ತೀರ್ಥೇ ಸ್ನಾತ್ವಾ ಕಾಯಾಧವೋ ನೃಣೇ ।
ಭೂದ್ವಾದ್ಯಾಪಿ ಸಮಾಯಾತಿ ಸ್ನಾತುಂ ತನ್ನಿಷಧಾದ್ಗಿರೇಃ ॥ ೨೨ ॥

---

೧೯. ಆ ನರಸಿಂಹನು ಪ್ರಹ್ಲಾದನನ್ನು ಕುರಿತು ಎಲೆ ಭಾಗ್ಯಶಾಲಿಯೇ, ನನ್ನ ಕಣ್ಣೀರಿನಿಂದ ಸಂಭವಿಸಿದ ಈ ಮಂಗಲಕರವಾದ ತೀರ್ಥದಲ್ಲಿ ಸ್ನಾನಮಾಡು. ಅದರಿಂದ ಹತ್ತು ಬಗೆಯ ಋಣಗಳಿಂದಲೂ ಬಿಡುಗಡೆ ಹೊಂದುವೆ.

೨೦. ಮಾತೃಋಣ, ಪಿತೃಋಣ, ಭಾರ್ಯಾಋಣ, ಪುತ್ರಋಣ, ಗುರುಋಣ, ದೇವಋಣ, ವಿಪ್ರಋಣ, ಪ್ರಪನ್ನ (ತನ್ನನ್ನು ಮರೆಹೊಕ್ಕವರ) ಋಣ, ಋಷಿಋಣ, ಇತರ ಪಿತೃಗಳ ಋಣ ಎಂಬಿವೇ ಆ ಹತ್ತು ಬಗೆಯ ಋಣಗಳು.

೨೧. ಯಾವನು ಈ ಮಹಾತೀರ್ಥದಲ್ಲಿ ಸ್ನಾನಮಾಡುವನೋ ಅಂತಹವನು ತೀರ್ಥಕ್ಷೇತ್ರಗಳನ್ನು ಜರೆಯುವುದರಲ್ಲಿ ಎಷ್ಟೇ ನಿರತನಾಗಿದ್ದರೂ ಆತನು ಹತ್ತು ಬಗೆಯ ಋಣಗಳಿಂದಲೂ ಬಿಡುಗಡೆಯನ್ನು ಹೊಂದುವನು. ಈ ವಿಷಯದಲ್ಲಿ ಸ್ವಲ್ಪವೂ ಸಂಶಯವಿಲ್ಲ ಎಂದನು.

೨೨. ಓ ಪ್ರದ್ಯುಮ್ನ! ಬಳಿಕ ಕಯಾದು ಪುತ್ರನಾದ ಆ ಪ್ರಹ್ಲಾದನು ಹತ್ತು ಬಗೆಯ ಋಣಗಳನ್ನು ಕಳೆಯುವಂತಹ ಆ ತೀರ್ಥದಲ್ಲಿ ಸ್ನಾನಮಾಡಿ ಋಣಮುಕ್ತನಾದುದಲ್ಲದೆ, ಇಂದಿಗೂ ಕೂಡ ನಿಷಧಪರ್ವತದಿಂದ ಇಲ್ಲಿಗೆ ಬರುತ್ತಿರುವನು.

ದಶಾರ್ಣಮೋಚನೇ ತೀರ್ಥೇ ದಶಾರ್ಣೋ ದೇಶ ಉಚ್ಯತೇ ।
ತತ್ಸ್ರೋತಃ ಸುಸಮುದ್ಭೂತಾ ದಶಾರ್ಣೇಯಂ ನದೀ ಸ್ಮೃತಾ ॥ ೨೩ ॥

॥ ಶ್ರೀ ನಾರದ ಉವಾಚ ॥

ತಚ್ಛ್ರುತ್ವಾ ಭಗವಾನ್ಕಾರ್ಷ್ಣಿಃ ಸರ್ವೈಃ ಪರಿಚರೈಃ ಸಹ ।
ದಶಾರ್ಣಮೋಚನೇ ತೀರ್ಥೇ ದಾನಂ ಸ್ನಾನಂ ಚಕಾರ ಹ ॥ ೨೪ ॥

ದಶಾರ್ಣಮೋಚನಸ್ಯಾಪಿ ಕಥಾಂ ಯಃ ಶೃಣುಯಾನ್ನೃಪ ।
ಋಣೈಶ್ಚ ದಶಭಿಃ ಸೋಽಪಿ ಮುಚ್ಯತೇ ಮುಕ್ತಿಭಾಗ್ಭವೇತ್ ॥ ೨೫ ॥

ಇತಿ ಶ್ರೀಮದ್ಗಾರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ದಶಾರ್ಣದೇಶವಿಜಯೋ ನಾಮ
ಸಪ್ತವಿಂಶೋಽಧ್ಯಾಯಃ

---

೨೩. ಈ ದಶಾರ್ಣಮೋಚಕವಾದ ತೀರ್ಥವಿರುವುದರಿಂದಲೇ ಈ ದೇಶಕ್ಕೆ ದಶಾರ್ಣವೆಂಬ ಹೆಸರುಂಟಾಯಿತು. ಆ ಸರೋವರದಿಂದ ಹರಿದು ಬರುತ್ತಿರುವ ಈ ನದಿಗೂ ದಶಾರ್ಣ ಎಂಬ ಹೆಸರೇ ಪ್ರಸಿದ್ಧವಾಯಿತು.

೨೪. ಈ ರೀತಿಯಾಗಿ ಆ ಶುಭಾಂಗನು ನುಡಿದುದನ್ನು ಕೇಳಿ ಭಗವಂತನಾದ ಆ ಪ್ರದ್ಯುಮ್ನನು ತನ್ನೆಲ್ಲಾ ಪರಿಜನಗಳೊಂದಿಗೂ ಆ ದಶಾರ್ಣಮೋಚನ ತೀರ್ಥದಲ್ಲಿ ಸ್ನಾನಮಾಡಿ ಬೇಕಾದ ದಾನಗಳನ್ನಿತ್ತನು.

೨೫. ಓ ರಾಜೇಂದ್ರ! ಈ ದಶಾರ್ಣಮೋಚನ ತೀರ್ಥದ ಕಥೆಯನ್ನೂ ಸಹ ಯಾವನು ಶ್ರವಣಮಾಡುವನೋ ಅಂಥ ಮನುಜನೂ ಕೂಡ ದಶವಿಧ ಋಣಗಳಿಂದ ಬಿಡುಗಡೆ ಹೊಂದಲ್ಪಟ್ಟು ಮೋಕ್ಷಭಾಗಿಯಾಗುವನು ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವ ಸಂವಾದದಲ್ಲಿ ದಶಾರ್ಣದೇಶವಿಜಯವೆಂಬ
ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಅಷ್ಟಾವಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಕಾರ್ಷ್ಣಿರ್ಮಹಾಬಾಹುಃ ಸುಮೇರೋರುತ್ತರಾನ್ಕುರೂನ್ ।
ಯಯೌ ಶೃಂಗವತಃ ಪಾರ್ಶ್ವೇ ವಿಚಿತ್ರಾನ್ಋದ್ಧಿಸಂವೃತಾನ್ ॥ ೧ ॥

ಭದ್ರಾಂ ಗಂಗಾಂ ತತಃ ಸ್ನಾತ್ವಾ ವಾರಾಹೀಂ ನಗರೀಂ ಯಯೌ ।
ಕುರುಖಂಡಾಧಿಪಸ್ತಸ್ಯಾಂ ಚಕ್ರವರ್ತೀ ಗುಣಾಕರಃ ॥ ೨ ॥

ಇಪ್ಪತ್ತೆಂಟನೆಯ ಅಧ್ಯಾಯವು

೧. ನಾರದನು ಹೇಳತೊಡಗಿದನು :—ಅನಂತರ ಮಹಾಬಾಹುವಾದ ಆ ಕೃಷ್ಣಕುಮಾರನು ಮೇರುವಿಗೆ ಉತ್ತರ ಪಾರ್ಶ್ವದಲ್ಲಿ ಶೃಂಗವಂತವೆಂಬ ಪರ್ವತದ ಪಕ್ಕದಲ್ಲಿ ಸಕಲವಿಧವಾದ ಸಂಪತ್ತಿನಿಂದಲೂ ಕೂಡಿ ಅತ್ಯಾಶ್ಚರ್ಯಕರವೆನಿಸಿರುವಂಥ ಕುರುದೇಶಗಳಿಗೆ ಪ್ರಯಾಣಮಾಡಿದನು.

೨. ಹಾಗೆ ಬರುತ್ತಿರುವಾಗ ದಾರಿಯಲ್ಲಿ ಗಂಗಾನದಿಯ ಪ್ರಭೇದವೆನಿಸಿದ ಭದ್ರಾ ಎಂಬ ನದಿಯಲ್ಲಿ ಸ್ನಾನಮಾಡಿ ಅಲ್ಲಿಂದ ಹೊರಟು ವಾರಾಹಿಯೆಂಬ ನಗರಿಗೆ ಬಂದನು. ಅಲ್ಲಿ ಕುರುಖಂಡಕ್ಕೆ ಅಧಿಪತಿಯಾದ ಗುಣಾಕರನೆಂಬ ಚಕ್ರವರ್ತಿಯು ವಾಸವಾಗಿದ್ದನು.

ಮಹಾಸಂಭೃತಸಂಭಾರೋ ದೇವರ್ಷಿಗಣಸಂವೃತಃ ।
ಅಶ್ವಮೇಧಂ ಸಮಾರೇಭೇ ದಶಮಂ ಸ ಗುಣಾಕರಃ ॥ ೩ ॥

ತೇನೋತ್ಸೃಷ್ಟಂ ಹಯಂ ಶ್ವೇತಂ ಶ್ಯಾಮಕರ್ಣಂ ಮನೋಹರಂ ।
ತಸ್ಯ ಪುತ್ರೋ ವೀರಧನ್ವಾ ರಕ್ಷಿತುಂ ನಿರ್ಗತೋಽಭವತ್ ॥ ೪ ॥

ಅಕ್ಷೌಹಿಣೀಭಿರ್ದಶಭಿರ್ಮಂಡಿತಶ್ಚಂಡವಿಕ್ರಮಃ ।
ವಿಚಚಾರ ಮಹಾವೀರೋ ವೀಕ್ಷ್ಯಮಾಣಸ್ತುರಂಗಮಂ ॥ ೫ ॥

ವೀರಶ್ಚಂದ್ರಶ್ಚ ಸೇನಶ್ಚ ಚಿತ್ರಗುರ್ವೇಗವಾನ್ನೃಪಃ ।
ಆಮಃ ಶಂಕುರ್ವಸುಃ ಶ್ರೀಮಾನ್ಕುಂತೀನಾಗ್ನಜಿತೇಃ ಸುತಾಃ ॥ ೬ ॥

ಸರ್ವತಸ್ತಂ ಹಯಂ ಶುಭ್ರಂ ಗೃಹೀತ್ವಾ ಹರ್ಷಪೂರಿತಾಃ ।
ಕಸ್ಯೋತ್ಸೃಷ್ಟಂ ವದಂತಸ್ತೇ ಕಾರ್ಷ್ಣಿಸೈನ್ಯಂ ಸಮಾಯಯುಃ ॥ ೭ ॥

---

೩. ಆ ಚಕ್ರವರ್ತಿಯು ಬೇಕಾದಷ್ಟು ಯಜ್ಞಸಂಭಾರಗಳನ್ನು ಸಜ್ಜುಗೊಳಿಸಿಕೊಂಡು ದೇವತಾಸಮೂಹದೊಡನೆಯೂ, ಋಷಿಸಮುದಾಯದೊಡನೆಯೂ ಕೂಡಿ ಹತ್ತನೆಯ ಬಾರಿ ಅಶ್ವಮೇಧಯಾಗವನ್ನು ಆರಂಭಿಸಿದ್ದನು.

೪. ಆತನು ಕಪ್ಪಾದ ಕಿವಿಗಳಿಂದ ಮನೋಹರವಾಗಿರುವ ಬಿಳಿಯ ಕುದುರೆಯೊಂದನ್ನು ಯಜ್ಞಾಶ್ವವೆಂದು ವಿಸರ್ಜಿಸಿ ಅದರ ಸಂರಕ್ಷಣೆಗಾಗಿ ತನ್ನ ಪುತ್ರನಾದ ವೀರಧನ್ವನೆಂಬ ವೀರನನ್ನು ಕಳುಹಿಸಿದ್ದನು.

೫. ಅತಿತೀಕ್ಷ್ಣವಾದ ಪರಾಕ್ರಮವುಳ್ಳ ಆ ವೀರಧನ್ವಕುಮಾರನು ಹತ್ತು ಅಕ್ಷೌಹಿಣೀಸೇನೆಗಳೊಡನೆ ಆ ಕುದುರೆಯನ್ನು ನೋಡಿಕೊಳ್ಳುತ್ತಾ ಅದಕ್ಕೆ ಬೆಂಗಾವಲಾಗಿ ಅನೇಕ ಕಡೆ ಸಂಚರಿಸಿಬರುತ್ತಿದ್ದನು.

೬–೭. ಆ ಸಮಯದಲ್ಲಿ ಶ್ರೀಕೃಷ್ಣನಿಗೆ ನಾಗ್ನಜಿತಿಯೆಂಬ ಪಟ್ಟಮಹಿಷಿಯಲ್ಲಿ ಜನಿಸಿದ ವೀರ, ಚಂದ್ರ, ಸೇನ, ಚಿತ್ರಗು, ವೇಗವಾತ, ಆಮ, ಶಂಕು, ವಸು, ಶ್ರೀಮಂತ, ಕುಂತೀ ಎಂಬ ಹತ್ತು ಮಂದಿ ಕುಮಾರರು ಬಿಳಿಯ ಬಣ್ಣದಿಂದ ಒಪ್ಪುತ್ತಾ ಬರುತ್ತಿರುವ ಆ ಕುದುರೆಯನ್ನು ಕಂಡು ಮಹಾಸಂತೋಷವನ್ನು ತಾಳಿ ಸುತ್ತಲಿಂದ ಬಂದು ಅದನ್ನು ಹಿಡಿದುದಲ್ಲದೆ ಈ ಕುದುರೆಯನ್ನು ಯಾರು ಬಿಟ್ಟಿರಬಹುದು? ಎಂಬುದಾಗಿ ಮಾತಾಡಿಕೊಳ್ಳುತ್ತಾ ಪ್ರದ್ಯುಮ್ನನ ಸೇನೆಯಿದ್ದಲ್ಲಿಗೆ ಬಂದರು.

ಪ್ರದ್ಯುಮ್ನಸ್ತದ್ಭಾಲಪತ್ರಂ ಪಠಿತ್ವಾ ವಿಸ್ಮಿತೋಽಭವತ್ ।
ಸರ್ವೇ ವಿಸಿಸ್ಮುರ್ಯದವೋ ಗೃಹೀತಪರಮಾಯುಧಾಃ ॥ ೮ ॥

ತದೈವ ಸೇನಾ ಸಂಪ್ರಾಪ್ತಾ ವಿಚಿನ್ವಂತೀ ಹಯಂ ನೃಪ ।
ದೃಷ್ಟ್ವಾ ರಜೋ ಯದುಬಲಾದ್ದೂರೇ ತಸ್ಥೌ ಸುವಿಸ್ಮಿತಾಃ ॥ ೯ ॥

ಗುಣಾಕರೇ ರಾಜನಿ ಚಂಡವಿಕ್ರಮೇ
ನ ದಸ್ಯವಃ ಸ್ಯುಃ ಕುರುಖಂಡಮಂಡಲೇ ।
ಗವಾಂ ನ ಕಾಲೋ ನ ಹಿ ಚಕ್ರವಾತಕಃ
ಕುತೋ ರಜಃ ಪ್ರಾಪ್ತಮಹೋರ್ಕಮಂಡಲಂ ॥ ೧೦ ॥

ಏವಂ ವದಂತೀ ಪರವಾಹಿನೀ ಸ್ವತಃ
ಕೋದಂಡಘೋಷಂ ದರದಸ್ವನಂ ಪರಂ ।
ಕರೀಂದ್ರಚೀತ್ಕಾರತುರಂಗಹೇಷಣಂ
ವಾದಿತ್ರಮಿಶ್ರಂ ಸಮುಪಾಶೃಣೋತ್ತತಃ ॥ ೧೧ ॥

---

೮. ಆ ಕುದುರೆಯ ಹಣೆಯಲ್ಲಿ ಕಟ್ಟಿದ್ದ ಪತ್ರಿಕೆಯನ್ನು ಓದಿನೋಡಿ ಪ್ರದ್ಯುಮ್ನನು ಆಶ್ಚರ್ಯಾನ್ವಿತನಾದನು. ಅವನಂತೆಯೇ ಅತ್ಯುತ್ತಮವಾದ ಅಸ್ತ್ರಗಳನ್ನು ಧರಿಸಿದ್ದ ಯದುವೀರರೂ ಸಹ ಬೆರಗಾದರು.

೯. ಓ ರಾಜೇಂದ್ರ! ಅಷ್ಟರಲ್ಲಿ ಆ ಯಜ್ಞಾಶ್ವವನ್ನು ಹುಡುಕುತ್ತಾ ವೀರಧನ್ವನ ಸೇನೆಯು ಅಲ್ಲಿಗೆ ಬಂದಿತು. ಅಲ್ಲಿ ಭಾರಿಯಾದ ಧೂಳು ಮುಸುಕಿರುವುದನ್ನು ಕಂಡು ಆ ಸೇನೆಯು ಅಚ್ಚರಿಗೊಂಡು ಯದುಸೇನೆಯಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿಯೇ ನಿಂತಿತು.

೧೦. ಆಗ ಆ ಸೇನೆಯು ಅತ್ಯುಗ್ರ ಪರಾಕ್ರಮಿಯಾದ ನಮ್ಮ ಪ್ರಭು ಗುಣಾಕರನು ಆಳುತ್ತಿರುವಾಗ ಈ ಕುರುಖಂಡದಲ್ಲಿ ಎಲ್ಲಿಯೂ ಕಳ್ಳಕಾಕರ ಸುಳಿವೇ ಇಲ್ಲ. ಈಗ ಪಶುಗಳು ಬರುವ (ಮೇವಿಗೆ ಹೋಗಿ ಹಿಂದಿರುಗುವ) ಸಮಯವೂ ಅಲ್ಲ. ಸುಂಟರಗಾಳಿಯೂ ಎದ್ದಿರುವುದಿಲ್ಲ. ಹೀಗಿದ್ದರೂ ಸೂರ್ಯಮಂಡಲವನ್ನು ವ್ಯಾಪಿಸುವಂತೆ ಎದ್ದಿರುವ ಈ ಭಾರಿಯಾದ ಧೂಳು ಎಲ್ಲಿಯದು ?

೧೧. ಎಂಬುದಾಗಿ ತನ್ನಲ್ಲಿಯೇ ಹೇಳಿಕೊಳ್ಳುತ್ತಾ ಇದ್ದಿತು. ಆಗ ಧನುಸ್ಸುಗಳ ಟಂಕಾರವೂ, ಆನೆಗಳ ಘೀಳಿಡುವಿಕೆಯೂ, ಕುದುರೆಗಳ ಕೆನೆತವೂ, ಭೇರಿ ಮೊದಲಾದ ವಾದ್ಯಗಳ ಧ್ವನಿಯೂ ಕೇಳಿಬಂದಿತು.

ತದೋದ್ಧವಃ ಕೃಷ್ಣಸುತಪ್ರಣೋದಿತೋ
ಬಲಂ ಸಮೇತ್ಯಾಶು ಸವೀರಧನ್ವಿನಃ ।
ಪ್ರಣಮ್ಯ ತಂ ಪ್ರಾಹ ರಥಸ್ಥಿಂ ನೃಪಂ
ಗುಣಾಕರಸ್ಯೌರಸಮರ್ಕತೇಜಸಂ ॥ ೧೨ ॥

ಉಗ್ರಸೇನಃ ಕ್ಷಿತೀಶೇಂದ್ರೋ ದ್ವಾರಕೇಶೋ ಯದೂತ್ತಮಃ ।
ಜಂಬೂದ್ವೀಪನೃಪಾನ್ಜಿತ್ವಾ ರಾಜಸೂಯಂ ಕರಿಷ್ಯತಿ ॥ ೧೩ ॥

ತೇನ ಪ್ರಣೋದಿತೋ ವೀರಃ ಪ್ರದ್ಯುಮ್ನೋ ಧನ್ವಿನಾಂ ವರಃ ।
ಜಿತ್ವಾ ತಂ ಭಾರತಂ ಖಂಡಂ ತಥಾ ಕಿಂಪುರುಷಂ ನೃಪಃ ॥ ೧೪ ॥

ಹರಿವರ್ಷಂ ತತೋ ಜಿತ್ವಾ ಕುರುಖಂಡಂ ಸಮಾಗತಃ ।
ಪ್ರದಾಸ್ಯತಿ ಬಲಿಂ ಸೋಽಪಿ ಪ್ರದ್ಯುಮ್ನಾಯ ಮಹಾತ್ಮನೇ ॥ ೧೫ ॥

---

೧೨. ಆ ಸಮಯದಲ್ಲಿ ಕೃಷ್ಣಪುತ್ರನಾದ ಪ್ರದ್ಯುಮ್ನನು ತನ್ನ ಮಂತ್ರಿಯಾದ ಉದ್ಧವನನ್ನು ವೀರಧನ್ವನ ಬಳಿಗೆ ಕಳುಹಿಸಲು ಪ್ರಭುವಿನ ಆಜ್ಞೆಯಂತೆ ಆತನು ಶತ್ರುಸೇನೆಯನ್ನು ಹೊಕ್ಕು ಸೂರ್ಯನಿಗೆ ಸಮಾನವಾದ ತೇಜಸ್ಸಿನಿಂದ ಮೆರೆಯುತ್ತಾ ರಥದಲ್ಲಿ ಕುಳಿತಿದ್ದ ಗುಣಾಕರ ಚಕ್ರವರ್ತಿಯ ಔರಸಪುತ್ರನಾದ ಆ ವೀರಧನ್ವನನ್ನು ಕಂಡು ಆತನನ್ನು ನಮಸ್ಕರಿಸಿ,

೧೩. "ಯಾದವ ರಾಜನಾದ ಉಗ್ರಸೇನನೆಂಬ ಯದುಶ್ರೇಷ್ಠನು ರಾಜರಿಗೆಲ್ಲಾ ಅಧಿಪತಿಯೆನಿಸಿರುವನು. ಆತನು ಜಂಬೂದ್ವೀಪದಲ್ಲಿರುವ ರಾಜರನ್ನೆಲ್ಲಾ ಗೆದ್ದು ರಾಜಸೂಯವೆಂಬ ಯಾಗವನ್ನು ಮಾಡಬೇಕೆಂದಿರುವನು.

೧೪. ಅದಕ್ಕೋಸ್ಕರ ಆತನಿಂದ ಪ್ರೇರಿತನಾದ ಧನುರ್ಧರಾಗ್ರೇಸರನಾದ ಪ್ರದ್ಯುಮ್ನಕುಮಾರನು ಭರತ ಖಂಡವನ್ನೆಲ್ಲಾ ಜಯಿಸಿದುದಲ್ಲದೆ ಕಿಂಪುರುಷ ಖಂಡವನ್ನೂ ಗೆದ್ದು ಅನಂತರ,

೧೫. ಹರಿವರ್ಷವನ್ನು ಕೈವಶವನ್ನಾಗಿ ಮಾಡಿಕೊಂಡು ಈ ಕುರುಖಂಡಕ್ಕೆ ಬಂದಿರುವನು. ಈ ಕುರುಖಂಡದ ಅಧೀಶನೂ ಸಹ ಮಹಾತ್ಮನಾದ ಪ್ರದ್ಯುಮ್ನನಿಗೆ ಕಪ್ಪವನ್ನೊಪ್ಪಿಸಬೇಕಾಗುವುದು.

ಅಕ್ಷೌಹಿಣೀದಶಯುತೋ ಧನದೇನಾಪಿ ಪೂಜಿತಃ ।
ಉಪಾಯನಂ ತ್ವಯಾ ದೇಯಂ ಪ್ರದ್ಯುಮ್ನಾಯ ಮಹಾತ್ಮನೇ ॥ ೧೬ ॥

ತೇನ ನೀತಂ ಯಜ್ಞಪಶುಮಾಹರ್ತುಂ ಕಃ ಕ್ಷಮಃ ಕ್ಷಿತೌ ।
ಶ್ರೀಕೃಷ್ಣಚಂದ್ರೋ ಭಗವಾನ್ಸಹಾಯಸ್ತಸ್ಯ ವಿದ್ಯತೇ ॥ ೧೭ ॥

ಶುಭಂ ಸ್ಯಾದ್ದಾನಮಾನಾಭ್ಯಾಂ ನಚೇದ್ಯುದ್ಧಂ ಭವಿಷ್ಯತಿ ।

॥ ವೀರಧನ್ವೋವಾಚ ॥

ಗುಣಾಕರೋ ನೃಪೇಶೋ ಯಃ ಶಕ್ರೇಣಾಪಿ ಪ್ರಪೂಜಿತಃ ॥ ೧೮ ॥

ನ ದಾಸ್ಯತಿ ಬಲಿಂ ಸೋಽಪಿ ಪ್ರದ್ಯುಮ್ನಾಯ ಮಹಾತ್ಮನೇ ।
ಶೃಂಗವತ್ಪರ್ವತೇ ರಮ್ಯೇ ವಾರಾಹೋ ವಿದ್ಯತೇ ಹರಿಃ ॥ ೧೯ ॥

---

೧೬. ಹತ್ತು ಅಕ್ಷೋಹಿಣೀ ಸೇನೆಯಿಂದ ಪರಿವೃತನಾದ ಆ ಕೃಷ್ಣಕುಮಾರನಿಗೆ ಕುಬೇರನೂ ಕೂಡ ಸತ್ಕಾರವನ್ನು ಮಾಡಿರುವನು. ಆದುದರಿಂದ ನೀನೂ ಸಹ ಆತನಿಗೆ ಕಪ್ಪವನ್ನು ಒಪ್ಪಿಸಿಬಿಡು.

೧೭. ಆತನಿಂದ ಕೊಂಡೊಯ್ಯಲ್ಪಟ್ಟ ಯಜ್ಞಪಶುವನ್ನು ಈ ಭೂಮಿಯಲ್ಲಿ ಯಾವನು ತಾನೇ ಮತ್ತೆ ಹಿಂದಕ್ಕೆ ಕರೆತರಬಲ್ಲನು? ಆತನಿಗೆ ಭಗವಂತನಾದ ಶ್ರೀಕೃಷ್ಣನೇ ಸಹಾಯಕನಾಗಿರುವನು.

೧೮. ಆತನಿಗೆ ಕಪ್ಪವನ್ನೊಪ್ಪಿಸುವುದರಿಂದಲೂ, ಸತ್ಕಾರಮಾಡುವುದರಿಂದಲೂ ನಿನಗೆ ಒಳ್ಳೆಯದಾಗುವುದು. ಇವೆರಡಕ್ಕೂ ಒಪ್ಪದಿದ್ದರೆ ಯುದ್ಧವು ಸಂಭವಿಸುವುದಂತೂ ಖಂಡಿತ" ಎಂಬುದಾಗಿ ನುಡಿದನು. ಆಗ ವೀರಧನ್ವನು ಆ ಉದ್ಧವನನ್ನು ಕುರಿತು, ಈ ಗುಣಾಕರನೆಂಬ ಅರಸೂ ಸಾಮಾನ್ಯನಲ್ಲ. ಈತನನ್ನು ಇಂದ್ರನೂ ಸಹ ಸತ್ಕರಿಸಿರುವನು.

೧೯. ಆದುದರಿಂದ ಆ ಗುಣಾಕರನೂ ಸಹ ಪ್ರದ್ಯುಮ್ನನಿಗೆ ಕಾಣಿಕೆಯನ್ನು ಕೊಡಲಾರನು. ನಮ್ಮ ಖಂಡಕ್ಕೆ ಸೇರಿದ ರಮಣೀಯವಾದ ಶೃಂಗವಂತನೆಂಬ ಪರ್ವತದಲ್ಲಿ ವರಾಹಮೂರ್ತಿಯಾದ ಶ್ರೀಹರಿಯು ನೆಲಸಿರುವನು.

ಯಸ್ಯ ಸೇವಾಂ ಸದಾ ಭೂಮಿಃ ಕರೋತಿ ಪರಮಾದರಾತ್ ।
ತಸ್ಯ ಕ್ಷೇತ್ರೇ ತಪಸ್ತೇಪೇ ಧ್ಯಾತ್ವಾ ದೇವಂ ಗುಣಾಕರಃ ॥ ೨೦ ॥

ವರ್ಷಾಣಾಮಯುತೇ ಪೂರ್ಣೇ ಹರಿರ್ವಾರಾಹರೂಪಧೃಕ್ ।
ಸಂತುಷ್ಟೋ ನೃಪತಿಂ ಭಕ್ತಂ ವರಂ ಬ್ರೂಹೀ ತ್ಯುವಾಚ ಹ ॥ ೨೧ ॥

ರಾಜೋವಾಚ ಹರಿಂ ನತ್ವಾ ರೋಮಾಂಚಪ್ರೇಮವಿಹ್ವಲಃ ।
ಭಗವಂಸ್ತ್ವಾಮೃತೇ ದೇವೋ ಸುರೋಽನ್ಯೋಽಪಿ ನರೋಽಥವಾ ॥ ೨೨ ॥

ಮಾಂ ಜೇತಾ ನ ಭವೇದ್ಭೂಮಾವೀಪ್ಸಿತೋಽಯಂ ವರೋ ಮಯಾ ।
ತಥಾಸ್ತು ಚೋಕ್ತ್ವಾ ಭಗವಾಂಸ್ತತ್ರೈವಾಂತರಧೀಯತ ॥ ೨೩ ॥

---

೨೦. ಆತನ ಸೇವೆಯನ್ನು ಈ ಭೂಮಿಯು ಅತಿಶಯವಾದ ಪ್ರೀತಿಯಿಂದ ಎಂದಿಗೂ ಬಿಡದೆ ಸರ್ವದಾ ಮಾಡುತ್ತಿರುವಳು. ಆ ವರಾಹಮೂರ್ತಿಯು ಈಗ ನೆಲಸಿರುವ ಕ್ಷೇತ್ರದಲ್ಲಿ ಗುಣಾಕರನು ಶ್ರೀಹರಿಯನ್ನು ಕುರಿತು ಭಾರಿಯಾದ ತಪಸ್ಸನ್ನು ಮಾಡಿದನು.

೨೧. ಆತನು ತಪಸ್ಸಿಗೆ ಮೊದಲು ಮಾಡಿ ಹತ್ತುಸಾವಿರಗಳು ಸಂದು ಹೋದುವು. ಆಗ ಶ್ರೀಹರಿಯು ಆತನ ತಪಸ್ಸಿನಿಂದ ಸಂತುಷ್ಟನಾಗಿ ವರಾಹರೂಪ ದಿಂದ ಆತನಿಗೆ ಪ್ರತ್ಯಕ್ಷನಾಗಿ ಬೇಕಾದ ವರವನ್ನು ಬೇಡುವಂತೆ ಹೇಳಿದನು.

೨೨. ಆಗ ಆ ದೊರೆಯು ಪರಮಾತ್ಮನಲ್ಲಿ ತನಗೆ ಉಂಟಾದ ಭಕ್ತ್ಯತಿಶಯ ದಿಂದ ಮೈಯೆಲ್ಲಾ ರೋಮಾಂಚನವನ್ನು ತಾಳಿ ಆತನನ್ನು ನಮಸ್ಕರಿಸಿ "ಹೇ ಭಗವನ್! ನಿನ್ನೊಬ್ಬನನ್ನು ಬಿಟ್ಟು ದೇವತೆಯೇ ಆಗಲಿ, ದೈತ್ಯನೇ ಆಗಲಿ, ಮನುಷ್ಯನೇ ಆಗಲಿ,

೨೩. ಯಾವನೂ ಕೂಡ ಈ ಭೂಮಿಯಲ್ಲಿ ನನ್ನನ್ನು ಗೆಲ್ಲುವಂತಾಗಬಾರದು. ಇದೀಗ ನನಗೆ ಬೇಕಾದ ವರವು" ಎಂದು ಪ್ರಾರ್ಥಿಸಿದನು. ಆಗ ಹಾಗೆಯೇ ಆಗಲೆಂದು ನುಡಿದು ಆ ಭಗವಂತನು ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ತಸ್ಮಾತ್ತಸ್ಯ ಯಶಃ ಶೀಘ್ರಂ ಕರ್ತವ್ಯಂ ಮೋಚನಂ ಸ್ವತಃ ।
ನ ಚೇದ್ಭವದ್ಭಿಶ್ಚ ಕಲಿಂ ಕರಿಷ್ಯಾಮಿ ನ ಸಂಶಯಃ ॥ ೨೪ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ ಉದ್ಧವಸ್ತಸ್ಮಾತ್ಸ್ವಂ ಸೇನಾಮೇತ್ಯ ಭೂಪತೇ ।
ಶಶಂಸ ಸರ್ವಂ ಯದ್ಭೂತಂ ಯದೂನಾಂ ಸದಸಿ ತ್ವರಂ ॥ ೨೫ ॥

ಶ್ರುತಕರ್ಮಾ ವೃಷೋ ವೀರಃ ಸುಬಾಹುರ್ಭದ್ರ ಏಕಲಃ ।
ಶಾಂತಿರ್ದರ್ಶಃ ಪೂರ್ಣಮಾಸಃ ಸೋಮಕೋ ವರ ಏವ ಚ ॥ ೨೬ ॥

ಕಾಲಿಂದೀನಂದನಾ ಹ್ಯೇತೇ ಪ್ರದ್ಯುಮ್ನಸ್ಯ ಪ್ರಪಶ್ಯತಃ ।
ಅಕ್ಷೌಹಿಣೀಭಿರ್ದಶಭಿರ್ವೃತಾ ಯೋದ್ಧುಂ ಸಮಾಗತಾಃ ॥ ೨೭ ॥

---

೨೪. ಆದುದರಿಂದ ಆ ಗುಣಾಕರನ ಯಶಸ್ಸು ಸ್ವಲ್ಪವೂ ಹಾಸಿ ಹೋಗದಂತೆ ನಾನು ಮಾಡಬೇಕಾಗಿರುವುದು. ಆದ್ದರಿಂದ ಕಟ್ಟಿಹಾಕಿರುವ ಕುದುರೆಯನ್ನು ನೀವಾಗಿ ಬಿಟ್ಟುಬಿಡಿ. ಇಲ್ಲದಿದ್ದರೆ ನಿಮ್ಮೊಡನೆ ಖಂಡಿತವಾಗಿಯೂ ಯುದ್ಧಮಾಡುವೆನು ಎಂಬುದಾಗಿ ನುಡಿದನು

೨೫. ಓ ರಾಜೇಂದ್ರ ! ಈ ರೀತಿ ಆ ವೀರಧನ್ವನು ನುಡಿದುದನ್ನು ಕೇಳಿ, ಉದ್ಧವನು ಅಲ್ಲಿಂದ ತನ್ನ ಸೇನೆಗೆ ಹಿಂದಿರುಗಿ ಅಲ್ಲಿ ನಡೆದ ಸಂಗತಿಯೆಲ್ಲವನ್ನೂ ಯಾದವಸಭೆಯಲ್ಲಿ ವಿವರಿಸಿದನು.

೨೬. ಆಗ ಶ್ರುತಕರ್ಮ, ವೃಷಿ, ಸುಬಾಹು, ಭದ್ರ, ಏಕಲ, ಶಾಂತಿ, ದರ್ಶ, ಪೂರ್ಣಮಾಸ, ಸೋಮಕ, ವರ ಎಂಬ ಶ್ರೀಕೃಷ್ಣನ ಪಟ್ಟಮಹಿಷಿಯಾದ ಕಾಲಿಂದಿಯಲ್ಲಿ ಜನಿಸಿದ ಕುಮಾರರು,

೨೭. ಆ ಪ್ರದ್ಯುಮ್ನನು ನೋಡುತ್ತಿರುವಂತೆಯೇ ಹತ್ತು ಅಕ್ಷೋಹಿಣೀ ಸೇನೆಯೊಡನೆ ಯುದ್ಧಮಾಡಲು ಹೊರಟರು.

ಉತ್ತರೈಃ ಕುರುಭಿಃ ಸಾರ್ಧಂ ಯಾದೂನಾಂ ಚಂಡವಿಕ್ರಮೈಃ ।
ಬಭೂವ ತುಮುಲಂ ಯುದ್ಧಮಬ್ಧೀನಾಮಬ್ಧಿಭಿರ್ಯಥಾ ॥ ೨೮ ॥

ಸ್ಫುರದ್ಭಿರ್ನಿಶಿತೈಃ ಶಸ್ತ್ರೈ ರೇಜಿರೇ ವೀರಪುಂಗವಾಃ ।
ಕ್ಷಣಮಾತ್ರೇಣ ರುಧಿರಪ್ರಭವಾ ರೌದ್ರರೂಪಿಣೀ ॥ ೨೯ ॥

ನದೀ ಬಭೂವ ರಾಜೇಂದ್ರ ಶತಯೋಜನವಿಸ್ತೃತಾ ।
ವಿದುದ್ರುವುಸ್ತದಾ ಶೇಷಾ ಉತ್ತರಾಃ ಕುರವೋ ಜನಾಃ ॥ ೩೦ ॥

ಶರತ್ಕಾಲೇ ಯಥಾ ಪ್ರಾಪ್ತೇ ಮೇಘಸಂಘಾ ಇತಸ್ತತಃ ।
ಪೂರ್ಣಮಾಸೋ ಮಹಾವೀರಃ ಕಾಲಿಂದೀನಂದನೋ ಬಲೀ ॥ ೩೧ ॥

ಚೂರ್ಣಯಾಮಾಸ ಬಾಣೌಘೈಃ ಸ್ಯಂದನಂ ವೀರಧನ್ವನಃ ।
ವೀರಧನ್ವಾಪಿ ವಿರಥೋ ಧನುಷ್ಟಂಕಾರಯನ್ಮುಹುಃ ॥ ೩೨ ॥

---

೨೮. ಆಗ ಉತ್ತರಕುರುದೇಶದ ವೀರರಿಗೂ, ಯಾದವರಿಗೂ ಕೈ ಕೈ ಕಲೆತು ಸಾಗರಗಳಿಗೂ ಸಾಗರಗಳಿಗೂ ಜರುಗುವಂತೆ ಭಾರಿ ಯುದ್ಧವು ಜರುಗಿತು.

೨೯. ಆ ಸಮಯದಲ್ಲಿ ಅತಿ ತೀಕ್ಷ್ಣವಾಗಿ ಥಳಥಳಿಸುತ್ತಿರುವ ಆಯುಧಗಳನ್ನು ಹಿಡಿದು ಹೋರಾಡುತ್ತಿದ್ದ ಆ ವೀರರು ಬಹುವಾಗಿ ಶೋಭಿಸಿದರು. ರಾಜೇಂದ್ರ! ಆಗ ಕ್ಷಣಮಾತ್ರದಲ್ಲಿಯೇ ಶಸ್ತ್ರಾಹತರಾದ ವೀರರ ಶರೀರದಿಂದ ಚಿಮ್ಮುತ್ತಿರುವ ರಕ್ತಗಳಿಂದ ಬಹು ಭಯಂಕರವಾದ,

೩೦–೩೧. ನೂರುಯೋಜನಗಳಷ್ಟು ಅಗಲವಾಗಿರುವ ಭಾರಿ ನದಿಯೊಂದ ಹುಟ್ಟಿ ಹರಿಯತೊಡಗಿತು. ಆಗ ಹತಶೇಷರಾದ ಉತ್ತರದೇಶದ ಯೋಧರು ಶರತ್ಕಾಲವು ಬಂದೊಡನೆಯೇ ಇತ್ತ ಅತ್ತ ಚೆದುರಿ ಕಣ್ಮರೆಯಾಗುವ ಮೇಘಗಳೋಪಾದಿಯಲ್ಲಿ ರಣರಂಗದಿಂದ ದಿಕ್ಕೆಟ್ಟು ಪಲಾಯನಮಾಡಿದರು. ಆ ಸಮಯದಲ್ಲಿ ಕಾಲಿಂದಿಯ ಪುತ್ರನಾದ ಪೂರ್ಣಮಾಸನೆಂಬ ವೀರನು

೩೨. ಆ ವೀರಧನ್ವನು ಕುಳಿತಿದ್ದ ರಥವನ್ನು ತನ್ನ ಬಾಣಪರಂಪರೆಗಳಿಂದ ಪುಡಿ ಪುಡಿ ಮಾಡಿಬಿಟ್ಟನು. ಈ ರೀತಿ ತನ್ನ ರಥವು ಹಾಳಾದುದನ್ನು ಕಂಡು ವೀರಧನ್ವನು ತನ್ನ ಧನುಸ್ಸನ್ನು ಟಂಕಾರಮಾಡುತ್ತಾ

ಜಘಾನ ಬಾಣವಿಂಶತ್ಯಾ ಪೂರ್ಣಮಾಸಂ ಮಹಾಬಲಂ ।
ಪೂರ್ಣಮಾಸಃ ಸ್ವಬಾಣೇನ ಮಧ್ಯತಸ್ತಾನ್ದ್ವಿಧಾಕರೋತ್ ॥ ೩೩ ॥

ವೀರಧನ್ವಾಥ ಚಿಚ್ಛೇದ ಧನುರ್ಜ್ಯಾಂ ತಸ್ಯ ನಾದಿನೀಂ ।
ಬಾಣೇನೈಕೇನ ರಾಜೇಂದ್ರ ಕುವಾಕ್ಯೈನೇವ ಮಿತ್ರತಾಂ ॥ ೩೪ ॥

ಲಕ್ಷಭಾರಮಯೀಂ ಗುರ್ವೀಂ ಗದಾಮಾದಾಯ ಸತ್ವರಂ ।
ಜಘಾನ ವೀರಧನ್ವಾನಂ ಪೂರ್ಣಮಾಸೋ ಮಹಾಬಲಃ ॥ ೩೫ ॥

ಗದಾಪ್ರಹಾರವ್ಯಥಿತೋ ವೀರಧನ್ವಾ ಮದೋತ್ಕಟಃ ।
ಪರಿಘೇಣ ಜಘಾನಾಶು ಪೂರ್ಣಮಾಸಂ ಹರೇಃ ಸುತಂ ॥ ೩೬ ॥

ಪೂರ್ಣಮಾಸಃ ಸಮುತ್ಥಾಯ ಪವನಂ ನಾಮ ಪರ್ವತಂ ।
ಸಮುತ್ಪಾಟ್ಯ ಸ್ಥಿತೋ ಭೂತ್ವಾ ಹಸ್ತಾಭ್ಯಾಂ ಶ್ರೀಹರೇಃ ಸುತಃ ॥ ೩೭ ॥

---

೩೩. ಇಪ್ಪತ್ತು ಬಾಣಗಳಿಂದ ಆ ಮಹಾಬಲಶಾಲಿಯಾದ ಪೂರ್ಣಮಾಸನ ಮೇಲೆ ಪ್ರಯೋಗಿಸಿದನು. ಕೂಡಲೇ ಆ ಪೂರ್ಣಮಾಸನು ನಡುದಾರಿಯಲ್ಲಿ ಬರುತ್ತಿದ್ದಂತೆಯೇ ಆ ಬಾಣವನ್ನು ತನ್ನ ಒಂದೇ ಬಾಣದಿಂದ ಕತ್ತರಿಸಿಬಿಟ್ಟನು.

೩೪. ಓ ರಾಜೇಂದ್ರ ! ಅನಂತರ ವೀರಧನ್ವಕುಮಾರನು ಪೂರ್ಣಮಾಸನ ಝುಂಕಾರಮಾಡುತ್ತಿರುವ ಬಿಲ್ಲಿನ ಹೆದೆಯನ್ನು ಕೆಟ್ಟಮಾತಿನಿಂದ ಮೈತ್ರಿಯನ್ನು ಮುರಿದುಬಿಡುವಂತೆ ತನ್ನ ಒಂದೇ ಒಂದು ಬಾಣದಿಂದ ಕತ್ತರಿಸಿಬಿಟ್ಟನು.

೩೫. ಆಗ ಆ ಪೂರ್ಣಮಾಸನು ಲಕ್ಷಭಾರ ತೂಗುವಂತಹ ತನ್ನ ಭಾರಿ ಗದೆಯನ್ನು ಕೈಗೆ ತೆಗೆದುಕೊಂಡು ವೇಗದಿಂದ ತನ್ನೆದುರಾಳಿಯನ್ನು ಪ್ರಹರಿಸಿದನು.

೩೬. ಆ ಪ್ರಹಾರದಿಂದ ವೀರಧನ್ವನು ತಾನು ಬಲದಿಂದ ಕೊಬ್ಬಿದವನಾಗಿದ್ದರೂ ಸ್ವಲ್ಪಕಾಲ ವ್ಯಥೆಗೀಡಾದನು. ಕೂಡಲೇ ಪರಿಘವೊಂದನ್ನು ತೆಗೆದುಕೊಂಡು ಆ ಪೂರ್ಣಮಾಸನನ್ನು ಪ್ರಹರಿಸಿದನು.

೩೭–೩೮. ಕೂಡಲೇ ಪೂರ್ಣಮಾಸನು ಮೇಲಕ್ಕೆದ್ದು ನಿಂತು ಪವನವೆಂಬ ಪರ್ವತವನ್ನು ತನ್ನೆರಡು ಕೈಗಳಿಂದಲೂ ಕಿತ್ತು ಗರಗರನೆ ತಿರುಗಿಸಿ ಆ ವೀರಧನ್ವನ

ಭ್ರಾಮಯಿತ್ವಾಥ ಚಿಕ್ಷೇಪ ವಾರಾಹ್ಯಾಂ ಪುರಿ ವೇಗತಃ ॥ ೩೮ ॥

ವೀರಧನ್ವಾ ಪ್ರಪತಿತೋ ಗುಣಾಕರಕ್ರತುಸ್ಥಲೇ ।
ಮೂರ್ಚ್ಛಿತೋ ಭಗ್ನವೇಗೋಽಭೂದುದ್ವಮನ್ರುಧಿರಂ ಮುಖಾತ್ ॥ ೩೯ ॥

ಹಾಹಾಕಾರೋ ಮಹಾನಾಸೀದ್ವಾರಾಹ್ಯಾಂ ಪುರಿ ವೇಗತಃ ।
ದೇವದುಂದುಭಯೋ ನೇದುರ್ನರದುಂದುಭಯಸ್ತದಾ ॥ ೪೦ ॥

ಪೂರ್ಣಮಾಸೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ।
ಯಜ್ಞಾದುತ್ಥಾಯ ನೃಪತಿಃ ಪುತ್ರಂ ದೃಷ್ಟ್ವಾ ಚ ಮೂರ್ಚ್ಛಿತಂ ॥ ೪೧ ॥

ಗೃಹೀತ್ವಾ ದಿವ್ಯಕೋದಂಡಂ ಯುದ್ಧಂ ಕರ್ತುಂ ಮನೋ ದಧೇ ।
ಹೋತಾ ಧರ್ಮವಿದಾಂ ಶ್ರೇಷ್ಠೋ ಮುನೀಂದ್ರಃ ಸರ್ವವಿತ್ಕವಿಃ ॥
ಗಂತುಮಭ್ಯುತ್ಥಿತಂ ವೀಕ್ಷ್ಯ ವಾಮದೇವಸ್ತಮಬ್ರವೀತ್ ॥ ೪೨ ॥

ಮೇಲೆ ಪ್ರಯೋಗಿಸಲು ಆ ಪರ್ವತವು ವೀರಧನ್ವನನ್ನು ತಳ್ಳಿಕೊಂಡು ಹೋಗಿ ವಾರಾಹಿನಗರದಲ್ಲಿ ಗುಣಾಕರನು ಯಾಗಮಾಡುತ್ತಿದ್ದ ಪ್ರದೇಶದಲ್ಲಿ ಕೆಡವಿಬಿಟ್ಟಿತು.

೩೯. ಆ ಪ್ರಹಾರದಿಂದ ವೀರಧನ್ವನು ತನ್ನ ಬಲವೆಲ್ಲವೂ ಉಡುಗಿ ಬಾಯಿಂದ ರಕ್ತವನ್ನು ಕಕ್ಕುತ್ತಾ ಮೂರ್ಛೆಹೊಂದಿ ಬಿದ್ದುಬಿಟ್ಟನು.

೪೦. ಆಗ ವಾರಾಹಿಪುರಿಯಲ್ಲಿ ಎಲ್ಲೆಲ್ಲೂ ದೊಡ್ಡ ಹಾಹಾಕಾರವುಂಟಾಯಿತು. ಆ ಸಮಯದಲ್ಲಿ ವಿಜಯಸೂಚಕವಾಗಿ ದೇವದುಂದುಭಿಗಳೂ, ಯಾದವರ ಕಡೆಯ ನಗಾರಿಗಳೂ ಧ್ವನಿಮಾಡಿದುವು.

೪೧. ಆ ಪೂರ್ಣಮಾಸನ ಮೇಲೆ ದೇವತೆಗಳು ಹೂವಿನ ಮಳೆಯನ್ನು ಸುರಿಸಿದರು. ಇತ್ತಲಾಗಿ ಯಾಗಶಾಲೆಯಲ್ಲಿದ್ದ ಗುಣಾಕರರಾಜನು ತನ್ನ ಮಗನು ಮೂರ್ಛಿತನಾಗಿ ಬಿದ್ದುದನ್ನು ಕಂಡು

೪೨. ಕುಪಿತನಾಗಿ ದಿವ್ಯವಾದ ತನ್ನ ಧನುಸ್ಸನ್ನು ತೆಗೆದುಕೊಂಡು ಯುದ್ಧ ಮಾಡಲು ನಿರ್ಧರಿಸಿ ಹೊರಡಲನುವಾದನು. ಆಗ ಆತನ ಹೋತೃವೂ (ಪುರೋಹಿತ) ಧರ್ಮಜ್ಞರಲ್ಲೆಲ್ಲಾ ಮೇಲಾದವನೂ, ಸಕಲ ವಿಷಯಗಳನ್ನೂ ಅರಿತವನೂ ಆದ ವಾಮದೇವನೆಂಬ ಮಹರ್ಷಿಯು ಯುದ್ಧಸನ್ನದ್ಧನಾಗಿ ಹೊರಟು ನಿಂತ ಆತನನ್ನು ಕುರಿತು ಈ ರೀತಿ ನುಡಿದನು.

॥ ವಾಮದೇವ ಉವಾಚ ॥

ರಾಜಂಸ್ತ್ವಂ ಹಿ ನ ಜಾನಾಸಿ ಪರಿಪೂರ್ಣತಮಂ ಹರಿಂ ।
ಸುರಾಣಾಂ ಮಹದರ್ಥಾಯ ಜಾತಂ ಯದುಕುಲೇ ಸ್ವಯಂ ॥
ಭುವೋ ಭಾರಾವತಾರಾಯ ಭಕ್ತಾನಾಂ ರಕ್ಷಣಾಯ ಚ ॥ ೪೩ ॥

ಭೂತ್ವಾ ಯದುಕುಲೇ ಸಾಕ್ಷಾದ್ದ್ವಾರಕಾಯಾಂ ವಿರಾಜತೇ ।
ತೇನ ಕೃಷ್ಣೇನ ಪುತ್ರೋಽಯಂ ಪ್ರದ್ಯುಮ್ನೋ ಯಾದವೇಶ್ವರಃ ॥
ಉಗ್ರಸೇನಮಖಾರ್ಥಾಯ ಜಗಜ್ಜೇತುಂ ಪ್ರಣೋದಿತಃ ॥ ೪೪ ॥

॥ ಗುಣಾಕರ ಉವಾಚ ॥

ಪರಿಪೂರ್ಣತಮಸ್ಯಾಪಿ ಶ್ರೀಕೃಷ್ಣಸ್ಯ ಮಹಾತ್ಮನಃ ।
ಲಕ್ಷಣಂ ವದ ಮೇ ಬ್ರಹ್ಮಂಸ್ತ್ವಂ ಪರಾವರವಿತ್ತಮಃ ॥ ೪೫ ॥

---

೪೩. ಓ ಗುಣಾಕರರಾಜ! ದೇವತೆಗಳ ಕಾರ್ಯದ ಸಲುವಾಗಿ ಸಾಕ್ಷಾತ್ ಪರಿಪೂರ್ಣತಮನಾದ ಶ್ರೀಹರಿಯೇ ಯದುಕುಲದಲ್ಲಿ ಅವತರಿಸಿರುವನೆಂಬುದನ್ನು ನೀನು ಅರಿಯದಿರುವೆ.

೪೪. ಆತನು ಭೂಮಿಯ ಭಾರವನ್ನು ಪರಿಹರಿಸುವುದಕ್ಕಾಗಿಯೂ, ಭಕ್ತರನ್ನು ಸಂರಕ್ಷಿಸುವ ಸಲುವಾಗಿಯೂ ಯದುಕುಲದಲ್ಲಿ ಅವತರಿಸಿ ದ್ವಾರಕೆಯಲ್ಲಿ ನೆಲಸಿ ಮೆರೆಯುತ್ತಿರುವನು. ಆ ಶ್ರೀಕೃಷ್ಣನೇ ತನ್ನ ಮಗನೂ, ಯಾದವೇಶ್ವರನೂ ಆದ ಪ್ರದ್ಯುಮ್ನನನ್ನು ಉಗ್ರಸೇನನ ಯಜ್ಞಕಾರ್ಯದ ಸಲುವಾಗಿ ಜಗತ್ತನ್ನು ಜಯಿಸಿ ಬರುವಂತೆ ಆಜ್ಞಾಪಿಸಿ ಕಳುಹಿಸಿರುವನು. ಎಂದು ವಾಮದೇವನು ನುಡಿಯುತ್ತಿರಲು ನಡುವೆ ಆ ಗುಣಾಕರರಾಜನು ಆತನನ್ನು ಕುರಿತು,

೪೫. ಓ ಬ್ರಹ್ಮರ್ಷಿ! ನೀನು ಸಾಮಾನ್ಯವಾದ ವಿಚಾರಗಳಿಂದ ಹಿಡಿದು ಅತಿ ಗಹನವಾದ ವಿಚಾರಗಳವರೆಗೂ ಸಕಲ ಅಂಶಗಳನ್ನೂ ಅರಿತಿರುವ ಮಹಾತ್ಮರೆಲ್ಲಾ ಅತಿ ಶ್ರೇಷ್ಠನೆನಿಸಿರುವೆಯಾದುದರಿಂದ ಪರಿಪೂರ್ಣತಮನೆನಿಸಿರುವ ಆ ಮಹಾನುಭಾವನಾದ ಶ್ರೀಕೃಷ್ಣನ ಸ್ವರೂಪವನ್ನು ತಿಳಿಸಬೇಕು ಎಂದು ಪ್ರಾರ್ಥಿಸಿದನು.

॥ ವಾಸುದೇವ ಉವಾಚ ॥

ಯಸ್ಮಿನ್ಸರ್ವಾಣಿ ತೇಜಾಂಸಿ ವಿಲೀಯಂತೇ ಸ್ವತೇಜಸಿ।
ತಂ ವದಂತಿ ಪರಂ ಸಾಕ್ಷಾತ್ಪರಿಪೂರ್ಣತಮಂ ಹರಿಂ ॥ ೪೬ ॥

ಅಂಶಾಂಶೋಂಶಸ್ತಥಾವೇಶಃ ಕಲಾಪೂರ್ಣಃ ಪ್ರಕಥ್ಯತೇ।
ವ್ಯಾಸಾದ್ಯೈಶ್ಚ ಸ್ಮೃತಃ ಷಷ್ಠಃ ಪರಿಪೂರ್ಣತಮಃ ಸ್ವಯಂ ॥ ೪೭ ॥

ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ನಾನ್ಯ ಏವ ಹಿ।
ಏಕಕಾರ್ಯಾರ್ಥಮಾಗತ್ಯ ಕೋಟಿಕಾರ್ಯಂ ಚಕಾರ ಹ ॥ ೪೮ ॥

॥ ಶ್ರೀ ನಾರದ ಉವಾಚ ॥

ಶ್ರುತ್ವಾ ಕೃಷ್ಣಸ್ಯ ಮಾಹಾತ್ಮ್ಯಂ ಬಲಿಂ ನೀತ್ವಾ ಗುಣಾಕರಃ।
ವೈರಂ ವಿಸೃಜ್ಯ ಪ್ರದ್ಯುಮ್ನದರ್ಶನಾರ್ಥಂ ಸಮಾಯಯೌ ॥ ೪೯ ॥

---

೪೬. ಆಗ ಆ ವಾಸುದೇವನು ಈರೀತಿ ತತ್ತ್ವಾಂಶವನ್ನು ವಿವರಿಸತೊಡಗಿದನು. ಯಾವನ ನಿಜ ತೇಜಸ್ಸಿನಲ್ಲಿ ಸಕಲ ತೇಜಸ್ಸುಗಳೂ ಅಡಗಿ ಹೋಗುವುವೋ ಅಂತಹ ಪರಮಪುರುಷನೇ ಸಾಕ್ಷಾತ್ಪರಿಪೂರ್ಣತಮನಾದ ಶ್ರೀಹರಿ ಎಂಬುದಾಗಿ ಪ್ರಾಜ್ಞರು ಹೇಳುವರು.

೪೭. ವ್ಯಾಸಮಹರ್ಷಿಯೇ ಮೊದಲಾದಂಥ ತತ್ತ್ವಜ್ಞಾನಿಗಳು ಅವತಾರಗಳನ್ನು ಕ್ರಮವಾಗಿ ಒಂದಕ್ಕಿಂತಲೂ, ಒಂದು ಉತ್ತಮವೆನಿಸಿದಂತಹ ಅಂಶಾಂಶ, ಅಂಶ, ಆವೇಶ, ಕಲಾ, ಪೂರ್ಣ, ಪರಿಪೂರ್ಣತಮ ಎಂಬ ಆರು ರೀತಿಯಲ್ಲಿ ವಿಭಾಗಿಸಿರುವರು.

೪೮. ಇವರಲ್ಲೆಲ್ಲಾ ಅತ್ಯುತ್ತಮವೆನಿಸಿದ ಪರಿಪೂರ್ಣನೆಂಬ ಶ್ರೀಹರಿಯ ಅವತಾರವು ಸಾಕ್ಷಾತ್ ಶ್ರೀಕೃಷ್ಣನಲ್ಲದೇ ಮತ್ತಾರೂ ಅಲ್ಲ. ಆತನು ಒಂದು ಕಾರ್ಯದ ಸಲುವಾಗಿ ಅವತರಿಸಿದ್ದರೂ ಕೋಟಿಗಟ್ಟಲೆ ಕಾರ್ಯಗಳನ್ನು ನೆರವೇರಿಸಿರುವನು ಎಂದನು.

೪೯. ಬಹುಲಾಶ್ವರಾಜೇಂದ್ರ! ಈ ರೀತಿಯಾಗಿ ಆ ವಾಸುದೇವನು ನುಡಿಯುತ್ತಲೇ ಆ ಗುಣಾಕರರಾಜನು ಕೃಷ್ಣನ ಮಹಿಮೆಯನ್ನರಿತವನಾಗಿ ಹಗೆತನವನ್ನು ಮರೆತು ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಪ್ರದ್ಯುಮ್ನನನ್ನು ಸಂದರ್ಶಿಸಲು ಬಂದನು.

ಕಾರ್ಷ್ಣಿಂ ಪ್ರದಕ್ಷಿಣೀಕೃತ್ಯ ನತ್ವಾ ದತ್ವಾ ಬಲಿಂ ತತಃ ।
ಅಶ್ರುಪೂರ್ಣಮುಖೋ ಭೂತ್ವಾ ಪ್ರಾಹ ಗದ್ಗದಯಾ ಗಿರಾ ॥ ೫೦ ॥

॥ ಗುಣಾಕರ ಉವಾಚ ॥

ಅದ್ಯ ಮೇ ಸಫಲಂ ಜನ್ಮ ಕುಲಂ ಮೇಽದ್ಯ ದಿನೇ ಶುಭಂ ।
ಅದ್ಯ ಕ್ರತುಕ್ರಿಯಾಃ ಸರ್ವಾಃ ಸಫಲಾಸ್ತವ ದರ್ಶನಾತ್ ॥ ೫೧ ॥

ತ್ವದಂಘ್ರಿಭಕ್ತಿಃ ಪರಮಾರ್ಥಲಕ್ಷಣಾ
ಸದಾ ಭವೇತ್ಸಜ್ಜನಸಂಗಮಾತ್ಪರಾ ।
ತ್ವಮೇವ ಸಾಕ್ಷಾನ್ನಿಜಭಕ್ತವತ್ಸಲಃ
ಪರೇಶ ಭೂಮನ್ಪರಿಪಾಹಿ ಪಾಹಿ ॥ ೫೨ ॥

॥ ಪ್ರದ್ಯುಮ್ನ ಉವಾಚ ॥

ಜ್ಞಾನವೈರಾಗ್ಯಸಂಯುಕ್ತಾ ಭಕ್ತಿಸ್ತೇ ಪ್ರೇಮಲಕ್ಷಣಾ ।
ಮದ್ಭಕ್ತಸಂಗಮೋ ಭೂಯಾಚ್ಛ್ರೀಃ ಸ್ಯಾದ್ಭಾಗವತಾಂ ತ್ವಿಹ ॥ ೫೩ ॥

---

೫೦. ಅನಂತರ ಆ ಕೃಷ್ಣಕುಮಾರನನ್ನು ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸಿ ಕಾಣಿಕೆಯನ್ನೊಪ್ಪಿಸಿ ಆನಂದಾಶ್ರುಗಳಿಂದ ತುಂಬಿದ ಮುಖವುಳ್ಳವನಾಗಿ ಗದ್ಗದಸ್ವರದಿಂದ ಇಂತು ನುಡಿದನು.

೫೧. ಇಂದು ನಾನು ಹುಟ್ಟಿದುದು ಸಾರ್ಥಕವಾಯಿತು. ಈ ದಿನ ನನ್ನ ವಂಶವು ಮಂಗಳಮಯವೆನಿಸಿತು. ಇಂದು ನಿನ್ನ ಸಂದರ್ಶನದಿಂದ ನಾನು ಮಾಡಿದ ಯಜ್ಞಕಾರ್ಯಗಳೆಲ್ಲಾ ಸಾಫಲ್ಯವನ್ನು ಹೊಂದಿದುವು.

೫೨. ಓ ಮಹಾಮಹಿಮ! ಪರಮಪುರುಷಾರ್ಥವೆನಿಸಿದ ನಿನ್ನ ಚರಣ ಭಕ್ತಿಯೊಂದೇ ನಮಗೆ ಶಾಶ್ವತವಾಗಿರಲಿ. ಆ ನಿನ್ನ ಚರಣಗಳಲ್ಲಿನ ಭಕ್ತಿಯೊಂದೇ ಸಾಧುಸಮಾಗಮಕ್ಕಿಂತಲೂ ಉತ್ತಮವೆನಿಸಿರುವುದು. ಹೇ ಪರೇಶ್ವರಾ! ನೀನೇ ಸಾಕ್ಷಾತ್ ಭಕ್ತವತ್ಸಲನು. ಓ ದೇವ! ನಮ್ಮನ್ನು ಕೈಬಿಡದೆ ಕಾಪಾಡು.

೫೩. ಹೀಗೆಂದು ಆ ಗುಣಾಕರನು ಸ್ತುತಿಸಲು ಆ ಪ್ರದ್ಯುಮ್ನನು ಆತನನ್ನು ಕುರಿತು, ಓ ರಾಜೇಂದ್ರ! ನಿನಗೆ ಜ್ಞಾನ ಮತ್ತು ವೈರಾಗ್ಯಗಳೊಡನೆ ಪ್ರೇಮ ವಿಶೇಷ ರೂಪವಾದ ನನ್ನ ಭಕ್ತಿಯು ಉಂಟಾಗಲಿ, ನನ್ನ ಭಕ್ತರ ಸಹವಾಸವೂ ಲಭಿಸುತ್ತಿರಲಿ. ಭಗವದ್ಭಕ್ತನ ಶ್ರೀಯು (ಸಂಪತ್ತು) ನಿನಲ್ಲಿ ನೆಲಸಲಿ ಎಂದು ಅನುಗ್ರಹಿಸಿದನು.

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಭಗವಾನ್ಕಾರ್ಷ್ಣಿಃ ಪ್ರಸನ್ನೋ ಭಕ್ತವತ್ಸಲಃ ।
ದದೌ ತಸ್ಮೈ ನೃಪತಯೇ ಹಯಮೇಧತುರಂಗಮಮ್ ॥ ೫೪ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಉತ್ತರಕುರುಖಂಡವಿಜಯೋ ನಾಮಾಷ್ಟಾವಿಂಶೋಽಧ್ಯಾಯಃ

---

೫೪. ಓ ಬಹುಲಾಶ್ವರಾಜ ! ಈ ರೀತಿಯಾಗಿ ನುಡಿದು ಭಕ್ತವತ್ಸಲನಾದ ಆ ಪ್ರದ್ಯುಮ್ನನು ಪ್ರಸನ್ನಮನಸ್ಕನಾಗಿ ಆ ಗುಣಾಕರರಾಜನಿಗೆ ಯಜ್ಞಾಶ್ವವನ್ನು ಕೊಟ್ಟುಬಿಟ್ಟನು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವ ಸಂವಾದದಲ್ಲಿ ಉತ್ತರಖಂಡ ವಿಜಯವೆಂಬ
ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಏಕೋನತ್ರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಪ್ರದ್ಯುಮ್ನೋಽಥ ಮಹಾಬಾಹುರ್ಜಿತ್ವಾರಾದುತ್ತರಾನ್ಕುರೂನ್ ।
ಹಿರಣ್ಮಯಂ ನಾಮ ಖಂಡಂ ಜೇತುಂ ಕಾರ್ಷ್ಣಿರ್ಜಗಾಮ ಹ ॥ ೧ ॥

ಯತ್ರ ಸೀಮಾಗಿರಿರ್ದೀರ್ಘಃ ಸ್ರೋತೋ ನಾಮ ಸ್ಫುರದ್ದ್ಯುತಿಃ ।
ತತ್ರ ಕೂರ್ಮೋ ಹರಿಃ ಸಾಕ್ಷಾದರ್ಯಮಾ ಯಸ್ಯ ದೇಶಕಃ ॥ ೨ ॥

ಪುಷ್ಪಮಾಲಾನದೀತೀರೇ ನಾಮ್ನಾ ಚಿತ್ರವನಂ ಮಹತ್ ।
ಸಪುಷ್ಪಫಲಭಾರಾಢ್ಯಂ ಕಂದಮೂಲನಿಧಿಃ ಸ್ಮೃತಃ ॥ ೩ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು

೧. ರಾಜೇಂದ್ರ! ಈ ರೀತಿಯಾಗಿ ಆ ಮಹಾಬಾಹುವಾದ ಪ್ರದ್ಯುಮ್ನನು ಉತ್ತರಕುರುದೇಶಗಳೆಲ್ಲವನ್ನೂ ಗೆದ್ದು ಅನಂತರ ಹಿರಣ್ಮಯವೆಂಬ ಖಂಡವನ್ನು ಜಯಿಸಲು ಪ್ರಯಾಣ ಬೆಳಸಿದನು.

೨. ಆ ಖಂಡದಲ್ಲಿ ಹೊಳೆಹೊಳೆಯುವ ಕಾಂತಿಯಿಂದ ಕೂಡಿದ ದೀರ್ಘ ಸ್ರೋತನೆಂಬ ಸೀಮಾಪರ್ವತವು ಇರುವುದು. ಶ್ರೀಹರಿಯು ಕೂರ್ಮರೂಪದಿಂದ ನೆಲಸಿರುವನು. ಅರ್ಯಮನೆಂಬ ಪಿತೃಪತಿಯು ಆಚಾರ್ಯನೆನಿಸಿರುವನು.

೩. ಅಲ್ಲಿ ಪುಷ್ಪಮಾಲಾ ಎಂಬ ನದಿಯ ತೀರದಲ್ಲಿ ಚಿತ್ರವನವೆಂಬ ಭಾರಿಯಾದ ವನವಿರುವುದು. ಆ ವನವು ಪುಷ್ಪಗಳಿಂದಲೂ, ಫಲಗಳಿಂದಲೂ ನಿಬಿಡವಾಗಿರುವುದು. ಮತ್ತು ಅಲ್ಲಿ ಗೆಡ್ಡೆಗೆಣಸುಗಳು ಹೇರಳವಾಗಿ ದೊರೆಯುವುವು.

ವಾನರಾಃ ಸಂತಿ ತತ್ರಾಪಿ ವಂಶಜಾ ನಲನೀಲಯೋಃ ।
ನ್ಯಸ್ತಾಃ ಶ್ರೀರಾಮಚಂದ್ರೇಣ ತ್ರೇತಾಯಾಂ ಮೈಥಿಲೇಶ್ವರ ॥ ೪ ॥

ಸೈನ್ಯಘೋಷಂ ಚ ತಂ ಶ್ರುತ್ವಾ ಯುದ್ಧಕಾಮಾ ವಿನಿರ್ಗತಾಃ ।
ಪ್ರದ್ಯುಮ್ನಸೈನ್ಯೇ ಚೋತ್ಪೇತುರ್ಭ್ರೂಭಂಗೈಃ ಕ್ರೋಧಮೂರ್ಚ್ಛಿತಾಃ ॥೫॥

ನಖೈರ್ದಂತೈಶ್ಚ ಲಾಂಗೂಲೈರ್ಗಜಾನಶ್ವಾನ್ನರಾನ್ನೃಪ ।
ಲಾಂಗೂಲೈಶ್ಚ ರಥಾನ್ಬಧ್ವಾ ಚಿಕ್ಷಿಪುಶ್ಚಾಂಬರೇ ಬಲಾತ್ ॥ ೬ ॥

ವಿಜಯಧ್ವಜನಾಥಸ್ಯ ವಿಜಯಶ್ಚಾರ್ಜುನಸ್ಯ ಚ ।
ರಥಂ ಬಧ್ವಾಥ ಲಾಂಗೂಲೇ ಕೇಚಿದುತ್ಪೇತುರಂಬರೇ ॥ ೭ ॥

---

೪. ಆ ಚಿತ್ರವನದಲ್ಲಿ ನಲವತ್ತು ನೀಲರೆಂಬ ಪ್ರಸಿದ್ಧರಾದ ವಾನರರ ವಂಶದಲ್ಲಿ ಜನಿಸಿದಂತಹ ವಾನರರು ವಾಸವಾಗಿರುವರು. ಅವರು ತ್ರೇತಾಯುಗದಲ್ಲಿ ಶ್ರೀರಾಮಚಂದ್ರನಿಂದ ಈ ವನದಲ್ಲಿ ನೆಲಸುವಂತೆ ಆಜ್ಞಪ್ತರಾಗಿದ್ದರು.

೫. ಆ ವಾನರರು ಪ್ರದ್ಯುಮ್ನನ ಸೇನೆಯ ಕೋಲಾಹಲವನ್ನು ಕೇಳಿ ವಿಶೇಷವಾದ ಕೋಪವನ್ನು ತಾಳಿ ಹುಬ್ಬುಗಂಟು ಹಾಕಿಕೊಂಡು ಯುದ್ಧಾಪೇಕ್ಷೆಯಿಂದ ಹೊರಟು ಆ ಪ್ರದ್ಯುಮ್ನನ ಸೇನೆಯಮೇಲೆ ಬಿದ್ದರು.

೬. ರಾಜೇಂದ್ರ ! ಆ ಕಪಿಗಳು ತಮ್ಮ ನಖಗಳಿಂದಲೂ, ದಂತಗಳಿಂದಲೂ ಲಾಂಗೂಲ (ಬಾಲ) ಗಳಿಂದಲೂ ಆ ಸೇನೆಯಲ್ಲಿದ್ದ ಆ ಕುದುರೆಗಳನ್ನೂ, ಯೋಧರನ್ನೂ ಹಿಂಸಿಸುತ್ತಾ ಬಂದುವಲ್ಲದೆ ರಥಗಳನ್ನು ತಮ್ಮ ಬಾಲಗಳಿಂದ ಸುತ್ತುಗಟ್ಟಿ ಆಕಾಶದಲ್ಲಿ ವೇಗದಿಂದ ಎಸೆದವು.

೭. ಆಗ ಕೆಲವು ವಾನರರು ವಿಜಯಧ್ವಜವೆಂಬ ಸೇನೆಯ ಅಧಿಪತಿಯಾದ ಅರ್ಜುನನ ರಥವನ್ನು ತಮ್ಮ ಬಾಲದಲ್ಲಿ ಸುತ್ತಿಕೊಂಡು ಆಕಾಶಕ್ಕೆ ಹಾರಿಬಿಟ್ಟುವು.

ಕಪಿಧ್ವಜಧ್ವಜೇ ಸಾಕ್ಷಾತ್ಕಪೀಂದ್ರೋ ಭಗವಾನ್ಪ್ರಭುಃ ।
ಕ್ರೋಧಾಢ್ಯಃ ಫಾಲ್ಗುನಸಖಃ ಸಮಗ್ರಂ ಸರ್ವತೋ ದಿಶಂ ॥ ೮ ॥

ಲಾಂಗೂಲೇನ ಚ ತಾನ್ಬಧ್ವಾ ಪಾತಯಾಮಾಸ ಭೂತಲೇ ।
ತದಾ ಪ್ರಹರ್ಷಿತಾಃ ಸರ್ವೇ ಜ್ಞಾತ್ವಾ ಶ್ರೀರಾಮಕಿಂಕರಾಃ ॥ ೯ ॥

ನೇಮುಸ್ತಂ ಸರ್ವತೋ ರಾಜನ್ಕೃತಾಂಜಲಿಪುಟಾಃ ಶನೈಃ ।
ಕೇಚಿದಾಲಿಂಗನಂ ಚಕ್ರುಃ ಕೇಚಿದುತ್ಪೇತುರೋಜಸಾ ॥ ೧೦ ॥

ಕೇಚಿಚ್ಚುಚುಂಬುರ್ಲಾಂಗೂಲಂ ಕೇಚಿತ್ಪಾದಂ ಚ ವಾನರಾಃ ।
ತಾನಾಲಿಂಗ್ಯ ಮಹಾವೀರಃ ಸ್ಪೃಷ್ಟ್ವಾ ಸತ್ಪಾಣಿನಃ ಪುನಃ ॥ ೧೧ ॥

---

೮. ಅದನ್ನು ಕಂಡು ಆ ಕಪಿಧ್ವಜನ ಧ್ವಜಪಟದಲ್ಲಿ ಸನ್ನಿಹಿತನಾಗಿದ್ದ ಕಪಿವೀರನಾದ ಆಂಜನೇಯನು ತನಗೆ ಅರ್ಜುನನ ಮೇಲೆ ಇರುವ ಪ್ರೀತಿಯಿಂದ ವಿಶೇಷವಾದ ಕೋಪವನ್ನು ತಾಳಿ ಆ ಕಪಿಗಳೆಲ್ಲರನ್ನೂ

೯. ತನ್ನ ಬಾಲದಿಂದ ಸುತ್ತಿ ಬಿಗಿದು ಸುತ್ತಲೂ ತಿರುಗಿಸಿ ನೆಲದಮೇಲೆ ಕೆಡವಿಬಿಟ್ಟನು. ಆಗ ಶ್ರೀರಾಮನ ಸೇವಕರಾದ ಆ ಕಪಿಗಳೆಲ್ಲರೂ ಈತನು ಆಂಜನೇಯನೆಂಬುದಾಗಿ ಅರಿತು ಮಹಾಸಂತೋಷವನ್ನು ತಾಳಿ

೧೦. ಆ ಹನುಮಂತನನ್ನು ಬದ್ಧಾಂಜಲಿಗಳಾಗಿ ನಮಸ್ಕರಿಸಿದರು. ಕೆಲವು ಮಂದಿ ವಾನರರು ಸಂತೋಷದಿಂದ ಆತನನ್ನು ಆಲಂಗಿಸಿದರು. ಕೆಲವರು ಜೋರಾಗಿ ಮೇಲಕ್ಕೆ ನೆಗೆದರು.

೧೧. ಕೆಲಮಂದಿ ವಾನರರು ಆತನ ಬಾಲವನ್ನೂ, ಇನ್ನು ಕೆಲವು ವಾನರರು ಆತನ ಪಾದಗಳನ್ನೂ ಮುತ್ತಿಟ್ಟರು. ಆಗ ಆ ಮಹಾವೀರನಾದ ಹನುಮಂತನು ಅವರೆಲ್ಲರನ್ನೂ ಆಲಿಂಗಿಸಿದುದಲ್ಲದೆ ಕೈಯಿಂದ ಸವರಿ

ದತ್ವಾಶಿಷಂ ತತ್ಕುಶಲಂ ಪಪ್ರಚ್ಛಾಥಾಂಜನೀಸುತಃ ।
ನತ್ವಾ ತಂ ವಾನರಾಃ ಸರ್ವೇ ಜಗ್ಮುಶ್ಚಿತ್ರವನಂ ನೃಪ ॥ ೧೨ ॥

ಹನುಮಾನರ್ಜುನಸ್ಯಾಪಿ ಧ್ವಜೇ ಹ್ಯಂತರಧೀಯತ ।
ಮಕರಾಖ್ಯಾತ್ತತೋ ದೇಶಾತ್ಪ್ರದ್ಯುಮ್ನೋ ಮೀನಕೇತನಃ ॥ ೧೩ ॥

ಯಯೌ ವೃಷ್ಣಿವರ್ಯೈಃ ಸಾರ್ಧಂ ದುಂದುಭೀನ್ನಾದಯನ್ಮುಹುಃ ।
ಮಕರಸ್ಯ ಗಿರೇಃ ಪಾರ್ಶ್ವೇ ದುಂದುಭಿಧ್ವನಿಭಿಸ್ತತಃ ॥ ೧೪ ॥

ಮಧುಭಕ್ಷ್ಯಾ ಮಧುಕರಾಃ ಕೋಟಿಶಃ ಪ್ರೋತ್ಥಿತಾಃ ಕಿಲ ।
ತೈರ್ದಂಶಿತಂ ಬಲಂ ಸರ್ವಂ ಹಸ್ತಿಚೀತ್ಕಾರಸಂಯುತಂ ॥ ೧೫ ॥

---

೧೨. ಆಶೀರ್ವಾದವನ್ನು ಮಾಡಿದನಂತರ ಕುಶಲಪ್ರಶ್ನವನ್ನು ಮಾಡಿದನು. ಅನಂತರ ಆ ವಾನರರೆಲ್ಲರೂ ಆಂಜನೇಯನಿಗೆ ನಮಸ್ಕರಿಸಿ ಚಿತ್ರವನಕ್ಕೆ ಹೊರಟು ಹೋದರು.

೧೩. ಬಳಿಕ ಆ ಹನುಮಂತನೂ ಸಹ ಅರ್ಜುನನ ಧ್ವಜಪಟದಲ್ಲಿ ಅಂತರ್ಧಾನವನ್ನು ಹೊಂದಿದನು. ಅನಂತರ ಮೀನಧ್ವಜನಾದ ಆ ಪ್ರದ್ಯುಮ್ನನು ಮಕರವೆಂಬ ಹೆಸರುಳ್ಳ ಆ ದೇಶದಿಂದ

೧೪. ಸೇನೆಯ ನಗಾರಿಗಳನ್ನು ಹೊಡೆಸುತ್ತಾ ವೃಷ್ಣಿಗಳೊಡನೆ ಹೊರಟು ಮಕರವೆಂಬ ಪರ್ವತದ ಪಾರ್ಶ್ವದಲ್ಲಿ ಬರುತ್ತಿದ್ದನು. ಆ ಸೇನೆಯ ನಗಾರಿಗಳ ಸದ್ದುಗಳಿಂದ ಆ ಪರ್ವತದಲ್ಲಿ

೧೫. ಜೇನನ್ನೇ ಆಹಾರವಾಗಿ ಉಳ್ಳ ಜೇನುನೊಣಗಳು ಕೋಟಿಗಟ್ಟಲೆ ಮೇಲಕ್ಕೆದ್ದುಬಿಟ್ಟುವು. ಆಗ ಆ ಸೇನೆಯಲ್ಲಿದ್ದ ಚತುರಂಗಬಲವೆಲ್ಲವೂ ಜೇನು ನೊಣಗಳಿಂದ ಕಡಿಯಲ್ಪಟ್ಟಿತು. ಆ ನೋವನ್ನು ತಾಳಲಾರದೆ ಆನೆಗಳು ಚೀತ್ಕಾರ ಮಾಡತೊಡಗಿದುವು.

ತದಾ ಕಾರ್ಷ್ಣಿರ್ಮಹಾಬಾಹುಃ ಪವನಾಸ್ತ್ರಂ ಸಮಾದಧೇ।
ತದ್ವಾತತಾಡಿತಾ ರಾಜನ್ಗತಾಸ್ತೇಽಪಿ ದಿಶೋ ದಶ ॥ ೧೬ ॥

ತತ್ರ ದೇಶೇ ಜನಾ ರಾಜನ್ಸರ್ವೇ ವೈ ಮಕರಾ ಜನಾಃ ।
ತತಸ್ತು ಡಿಂಡಿಭೋ ದೇಶಸ್ತತ್ರ ಹಸ್ತಿಮುಖಾ ಜನಾಃ ॥ ೧೭ ॥

ಏವಂ ದೇಶಾಂಸ್ತತಃ ಪಶ್ಯಂಸ್ತ್ರಿಶೃಂಗವಿಷಯಾನ್ಗತಃ ।
ಕಾರ್ಷ್ಣಿರ್ದದರ್ಶ ತತ್ರಾಪಿ ಮನುಷ್ಯಾಃ ಶೃಂಗಧಾರಿಣಃ ॥ ೧೮ ॥

ತ್ರಿಶೃಂಗಸ್ಯ ಗಿರೇಃ ಪಾರ್ಶ್ವೇ ನಗರೀಂ ಸ್ವರ್ಣಚರ್ಚಿಕಾಂ ।
ಹೇಮಸೌಧಮಯೀಂ ದಿವ್ಯಾಂ ರತ್ನಪ್ರಾಕಾರಮಂಡಿತಾಂ ॥ ೧೯ ॥

---

೧೬. ಆಗ ಪ್ರದ್ಯುಮ್ನನು ವಾಯವ್ಯಾಸ್ತ್ರವನ್ನು ಪ್ರಯೋಗಿಸಲು ಆದರಿಂದ ಸಂಭವಿಸಿದ ಗಾಳಿಯಿಂದ ಆ ಜೇನುನೊಣಗಳೆಲ್ಲವೂ ದಿಕ್ಕುದಿಕ್ಕಿಗೆ ಚೆದುರಿ ಓಡಿ ಹೋದುವು.

೧೭. ರಾಜೇಂದ್ರ ! ಆ ಮಕರವೆಂಬ ದೇಶದಲ್ಲಿರುವ ಜನರೆಲ್ಲರೂ ಮೊಸಳೆಯ ಆಕಾರದವರು. ಅಲ್ಲಿಂದ ಮುಂದಕ್ಕೆ ಡಿಂಡಿಭವೆಂಬ ದೇಶವಿರುವುದು. ಅಲ್ಲಿರುವ ಜನರೆಲ್ಲರೂ ಆನೆಯಂತೆ ಮುಖವುಳ್ಳವರು.

೧೮. ಈ ತೆರನಾದ ದೇಶಗಳನ್ನು ನೋಡುತ್ತಾ ಆ ಪ್ರದ್ಯುಮ್ನನು ತ್ರಿಶೃಂಗವೆಂಬ ದೇಶಕ್ಕೆ ಬಂದನು. ಅಲ್ಲಿಯ ಜನರಿಗೆಲ್ಲಾ ತಲೆಯ ಮೇಲೆ ಕೊಂಬುಗಳಿದ್ದವು.

೧೯. ಆ ದೇಶದಲ್ಲಿ ತ್ರಿಶೃಂಗವೆಂಬ ಪರ್ವತವಿರುವುದು. ಅದರ ಪಕ್ಕದಲ್ಲಿ ಸ್ವರ್ಣಚರ್ಚಿಕಾ ಎಂಬ ನಗರವಿರುವುದು. ಅಲ್ಲಿರುವ ಮನೆಗಳೆಲ್ಲಾ ಸ್ವರ್ಣನಿರ್ಮಿತವಾದುವುಗಳು. ಕೋಟೆಯ ಗೋಡೆಗಳೆಲ್ಲಾ ರತ್ನಗಳಿಂದ ರಚಿತವಾದುವುಗಳು.

ಹಿರಣ್ಯವರ್ಣೈಃ ಪುರುಷೈಃ ಸ್ತ್ರೀಜನೈಶ್ಚ ತಡಿದ್ಯುಭಿಃ ।
ನಾಗೈಶ್ಚ ನಾಗಕನ್ಯಾಭಿಃ ಪುರೀಂ ಭೋಗವತೀಮಿವ ॥ ೨೦ ॥

ಚಂದ್ರಕಾಂತಾನದೀತೀರೇ ಶೋಭಿತಾಂ ಮಂಗಲಾಲಯಾಂ ।
ಕಾರ್ಷ್ಣಿಃ ಸಮಾಯಯೌ ರಾಜನ್ಯಥಾ ಶಕ್ರೋಽಮರಾವತೀಂ ॥ ೨೧ ॥

ತತ್ರ ರಾಜಾ ಮಹಾವೀರೋ ನಾಮ್ನಾ ದೇವಸಖೋ ಬಲೀ ।
ಸ ಮನ್ಮುಖಾದ್ಬಲಂ ಶ್ರುತ್ವಾ ಬಲಿಂ ನೀತ್ವಾ ಹಿರಣ್ಮಯಂ ॥ ೨೨ ॥

ಪ್ರದ್ಯುಮ್ನಂ ಪೂಜಯಾಮಾಸ ಭಕ್ತ್ಯಾ ಪರಮಯಾ ಯುತಃ ।
ತಂ ಪಪ್ರಚ್ಛ ಮಹಾಬಾಹುಃ ಪ್ರದ್ಯುಮ್ನೋ ಭಗವಾನ್ಹರಿಃ ॥ ೨೩ ॥

---

೨೦. ಅಲ್ಲಿರತಕ್ಕ ಪುರುಷರೆಲ್ಲರೂ ಹೊಂಬಣ್ಣದಿಂದ ಥಳಥಳಿಸುತ್ತಿದ್ದರು. ಸ್ತ್ರೀಯರು ಮಿಂಚಿನ ಬಣ್ಣದಿಂದ ಮೆರೆಯುತ್ತಿದ್ದರು. ಇಂತಹ ಸ್ತ್ರೀಪುರುಷರಿಂದ ನಿಬಿಡವಾದ ಆ ನಗರಿಯು ನಾಗರಿಂದಲೂ, ನಾಗಕನ್ಯೆಯರಿಂದಲೂ ಪರಿವೃತವಾದ ಭೋಗವತಿಯಂತೆ ಕಂಗೊಳಿಸುತ್ತಿತ್ತು.

೨೧. ಆ ನಗರಿಯು ಚಂದ್ರಕಾಂತಾ ಎಂಬ ನದಿಯ ತೀರದಲ್ಲಿ ಮಂಗಳದ ನೆಲವೀಡೆನಿಸಿ ರಾರಾಜಿಸುತ್ತಿತ್ತು. ಇಂತಹ ಆ ನಗರಿಯನ್ನು ಇಂದ್ರನು ಅಮರಾವತಿಯನ್ನು ಪ್ರವೇಶಿಸುವಂತೆ ಪ್ರದ್ಯುಮ್ನನು ಪ್ರವೇಶಿಸಿದನು.

೨೨. ಅಲ್ಲಿ ಮಹಾವೀರನಾದ ದೇವಸಖನೆಂಬ ರಾಜನು ಆಳುತ್ತಿದ್ದನು. ಆತನು ನನ್ನ (ನಾರದನ) ಮುಖದಿಂದ ಪ್ರದ್ಯುಮ್ನನು ಸೇನಾಸಮೇತನಾಗಿ ಬಂದಿರುವುದನ್ನರಿತು ಸುವರ್ಣದಿಂದ ನಿರ್ಮಿತವಾದ ವಸ್ತುಗಳನ್ನೇ ಕಾಣಿಕೆಯಾಗಿ ತೆಗೆದುಕೊಂಡು ಬಂದು

೨೩. ಆ ಪ್ರದ್ಯುಮ್ನನನ್ನು ಪರಮಭಕ್ತಿಯಿಂದ ಪೂಜಿಸಿದನು. ಆ ದೇವಸಖನೆಂಬ ರಾಜನನ್ನೂ ಸಾಕ್ಷಾತ್ ಶ್ರೀಹರಿಯ ಸ್ವರೂಪನಾದ ಪ್ರದ್ಯುಮ್ನನು ಈ ರೀತಿ ಪ್ರಶ್ನೆಮಾಡಿದನು.

ಚಂದ್ರವತ್ತೇ ಕಥಂ ಶೋಭಾ ಸರ್ವೇಷಾಂ ಚ ವದಾಶು ಮೇ ।

॥ ದೇವಸಖ ಉವಾಚ ॥

ಅರ್ಯಮ್ಣಾ ಪಿತೃಪತಿನಾ ಕೂರ್ಮರೂಪಸ್ಯ ಮಾಪತೇಃ ॥ ೨೪ ॥

ಅಂಘ್ರೀ ಪ್ರಕ್ಷಾಲಿತೌ ತೇನ ವಾರಿಣಾಭೂನ್ಮಹಾನದೀ ।
ಶ್ವೇತಪರ್ವತಶೃಂಗಾಚ್ಚಾವತರಂತೀ ಯದೂತ್ತಮ ॥ ೨೫ ॥

ಪ್ರಷೋಧ್ರಾಖ್ಯೋ ಮನುಸುತೋ ಗೋಪಾಲೋ ಗುರುಣಾ ಕೃತಃ ।
ಜಘಾನ ಕಪಿಲಾಂ ರಾತ್ರಾವಸಿತಾಂ ಸಿಂಹಶಂಕಯಾ ॥ ೨೬ ॥

ವಸಿಷ್ಠೇನ ತದಾ ಶಪ್ತಃ ಶೂದ್ರತ್ವಂ ಸಮುಪಾಗತಃ ।
ಕುಷ್ಠೇನ ಪೀಡಿತತನುಃ ಪರ್ಯಟಂಸ್ತೀರ್ಥಮಾಚರತ್ ॥ ೨೭ ॥

---

೨೪. ನಿನಗೂ ಮತ್ತು ಇಲ್ಲಿರುವ ಜನರೆಲ್ಲರಿಗೂ ಚಂದ್ರನಂತಹ ಕಾಂತಿಯುಂಟಾದುದು ಹೇಗೆ? ಇದನ್ನು ನನಗೆ ತಿಳಿಸಬೇಕೆನ್ನಲು, ದೇವಸಖನು ಇಂತು ನುಡಿದನು :—ಅರ್ಯಮನೆಂಬ ಪಿತೃಪತಿಯು ಇಲ್ಲಿ ಕೂರ್ಮರೂಪದಿಂದ ನೆಲಸಿರುವ ಶ್ರೀಹರಿಯ ಪಾದಗಳನ್ನು ಪ್ರಕ್ಷಾಳನಮಾಡಿದನು.

೨೫. ಆಗ ಆ ನೀರಿನಿಂದ ಭಾರಿಯಾದ ನದಿಯೊಂದು ಉಂಟಾಯಿತು. ಆ ನದಿಯು ಶ್ವೇತವೆಂಬ ಪರ್ವತದ ಶಿಖರಪ್ರದೇಶದಿಂದ ಕೆಳಮುಖವಾಗಿ ಹರಿಯುತ್ತಿರುವುದು.

೨೬. ಓ ರಾಜೇಂದ್ರ! ಮನುವಿಗೆ ಪ್ರಷೋಧ್ರನೆಂಬ ಪುತ್ರನಿದ್ದನು. ಆತನನ್ನು ಹಸುಗಳನ್ನು ಕಾಯ್ದುಕೊಂಡಿರುವಂತೆ ಗುರುವಾದ ವಸಿಷ್ಠನು ನೇಮಿಸಿದ್ದನು. ಆತನು ಒಂದು ದಿನ ರಾತ್ರಿ ಸಿಂಹವೆಂಬ ಭ್ರಾಂತಿಯಿಂದ ಕಪ್ಪು ಬಣ್ಣದ ಕಪಿಲೆ (ಹಸು) ಯೊಂದನ್ನು ಕೊಂದುಬಿಟ್ಟನು.

೨೭. ಆಗ ಅವನನ್ನು ವಸಿಷ್ಠನು ಶಪಿಸಿದುದರಿಂದ ಆ ಪ್ರಷೋಧ್ರನು ಶೂದ್ರನಾಗಿ ಹುಟ್ಟಿದನು. ಅವನ ಮೈಯಲ್ಲೆಲ್ಲಾ ಕುಷ್ಠರೋಗವು ಹಬ್ಬಿ ಪೀಡಿಸತೊಡಗಿತು. ಆಗ ಅವನು ತೀರ್ಥಯಾತ್ರೆಯನ್ನು ಮಾಡುವ ಸಲುವಾಗಿ ಸಂಚರಿಸುತ್ತಾ

ಅಸ್ಯಾಂ ನದ್ಯಾಂ ಯದಾ ಸ್ನಾತೋ ಗಲತ್ಕುಷ್ಠಾನ್ಮನೋಃ ಸುತಃ ।
ಮುಕ್ತೋಽಭೂಚ್ಚಂದ್ರವತ್ತಸ್ಯ ದೇಹಶೋಭಾ ಬಭೂವ ಹ ॥ ೨೮ ॥

ಚಂದ್ರಕಾಂತಾನದೀ ಚೇಯಂ ಪ್ರಸಿದ್ಧಾಭೂದ್ಧಿರಣ್ಮಯೇ ।
ತಸ್ಯಾಂ ಮುಕ್ತೋ ಯತಃ ಸ್ನಾತ್ವಾ ಗಲತ್ಕುಷ್ಠಾನ್ಮನೋಃ ಸುತಃ ॥ ೨೯ ॥

ತತಃ ಸ್ನಾನಂ ಚ ಕರ್ತಾರೋ ವಯಂ ಸರ್ವೇ ನೃಪೋತ್ತಮ ।
ರೂಪೇಣ ಚಂದ್ರತುಲ್ಯಾಃ ಕೌ ಭವಾಮೋಽತ್ರ ನ ಸಂಶಯಃ ॥ ೩೦ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ಮಹಾಬಾಹುಃ ಪ್ರದ್ಯುಮ್ನೋ ಯಾದವೈಃ ಸಹ ।
ಚಂದ್ರಕಾಂತಾಂ ನದೀಂ ಸ್ನಾತ್ವಾ ದದೌ ದಾನಾನ್ಯನೇಕಶಃ ॥ ೩೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಹಿರಣ್ಯಖಂಡವಿಜಯೋ ನಾಮೈಕೋನತ್ರಿಂಶೋಽಧ್ಯಾಯಃ

---

೨೮. ಇತ್ತಲಾಗಿ ಬಂದು ಈ ನದಿಯಲ್ಲಿ ಸ್ನಾನಮಾಡಿದಾಗ ಆ ಮನುಪುತ್ರನ ಕುಷ್ಠರೋಗವೆಲ್ಲವೂ ಹೋಗಿಬಿಟ್ಟಿತು. ಕೂಡಲೇ ಕುಷ್ಠನಿರ್ಮುಕ್ತನಾದ ಆ ಪ್ರಮೇವಸನ ಶರೀರವು ಚಂದ್ರದಂತೆ ಕಾಂತಿಯಿಂದ ಹೊಳೆಯತೊಡಗಿತು.

೨೯. ಕುಷ್ಠರೋಗದಿಂದ ಪೀಡಿತನಾಗಿದ್ದ ಆ ಮನುಪುತ್ರನು ಸ್ನಾನಮಾಡಿದ ಮಾತ್ರದಿಂದಲೇ ತನ್ನ ರೋಗದಿಂದ ಬಿಡಲ್ಪಟ್ಟನಾದುದರಿಂದ ಈ ನದಿಯು ಅಂದಿನಿಂದಲೇ ಚಂದ್ರಕಾಂತಾ ಎಂಬುದಾಗಿ ಹಿರಣ್ಮಯಖಂಡದಲ್ಲಿ ಪ್ರಸಿದ್ಧಿಯನ್ನು ಪಡೆಯಿತು.

೩೦. ಓ ನೃಪಶ್ರೇಷ್ಠ ! ಆ ನದಿಯಲ್ಲಿ ನಾವೆಲ್ಲರೂ ಸ್ನಾನಮಾಡಿರುವುದರಿಂದ ಈ ಭೂಮಿಯಲ್ಲಿ ನಾವೆಲ್ಲರೂ ಚಂದ್ರನಂತೆ ಕಾಯದಿಂದ ಮೆರೆಯುತ್ತಿರುವೆವು ಎಂದನು.

೩೧. ಓ ಬಹುಲಾಶ್ವನರೇಂದ್ರ ! ಈ ರೀತಿಯಾಗಿ ಆ ದೇವಸಖನು ನುಡಿದುದನ್ನು ಕೇಳಿ ಆ ಪ್ರದ್ಯುಮ್ನನು ಎಲ್ಲಾ ಯಾದವರೊಡನೆಯೂ ಆ ಚಂದ್ರಕಾಂತಾ ನದಿಯಲ್ಲಿ ಸ್ನಾನಮಾಡಿ ಬೇಕಾದಷ್ಟು ದಾನಗಳನಿತ್ತನು.

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಹಿರಣ್ಯಖಂಡ ವಿಜಯವೆಂಬ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ತ್ರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಏವಂ ಹಿರಣ್ಮಯಂ ಖಂಡಂ ಜಿತ್ವಾ ಕಾರ್ಷ್ಣಿರ್ಮಹಾಬಲಃ ।
ಜಗಾಮ ರಮ್ಯಕಂ ಖಂಡಂ ದೇವಲೋಕಮಿವ ಸ್ಫುರತ್ ॥ ೧ ॥

ತಸ್ಯ ಸೀಮಾಗಿರಿಃ ಸಾಕ್ಷಾನ್ನೀಲೋ ನಾಮ ನಗಾಧಿರಾಟ್ ।
ತತ್ರೋತ್ತರೇ ಕಾಲದೇಶೇ ನಗರೀ ಭೀಮನಾದಿನೀ ॥ ೨ ॥

ಕಾಲನೇಮಿಸುತಸ್ತತ್ರ ಕಲಂಕೋ ನಾಮ ರಾಕ್ಷಸಃ ।
ತ್ರೇತಾಯುಗೇ ರಾಮಚಂದ್ರಾದ್ಭೀತೋ ಯುದ್ಧಾತ್ಪಲಾಯಿತಃ ॥ ೩ ॥

ಮೂವತ್ತನೆಯ ಅಧ್ಯಾಯವು

೧. ಅನಂತರ ನಾರದನು ಹೀಗೆ ಹೇಳತೊಡಗಿದನು :—ಈ ರೀತಿಯಾಗಿ ಮಹಾಬಲಾಢ್ಯನಾದ ಆ ಪ್ರದ್ಯುಮ್ನನು ಹಿರಣ್ಮಯಖಂಡವನ್ನು ಗೆದ್ದ ಬಳಿಕ ದೇವಲೋಕದಂತೆ ಮೆರೆಯುತ್ತಿದ್ದ ರಮ್ಯಕಖಂಡವನ್ನು ಕುರಿತು ತೆರಳಿದನು.

೨. ಆ ಖಂಡಕ್ಕೆ ನೀಲವೆಂಬ ಪರ್ವತಶ್ರೇಷ್ಠವು ಸೀಮಾಪರ್ವತವೆನಿಸಿರುವುದು. ಅದಕ್ಕೆ ಉತ್ತರಪಾರ್ಶ್ವದಲ್ಲಿ ಭೀಮನಾದಿನಿಯೆಂಬ ನಗರಿಯಿರುವುದು.

೩-೪. ಹಿಂದೆ ತ್ರೇತಾಯುಗದಲ್ಲಿ ಕಾಲನೇಮಿಯೆಂಬ ರಾಕ್ಷಸನ ಮಗನಾದ ಕಲಂಕನೆಂಬುವನು ಶ್ರೀರಾಮಚಂದ್ರನಿಗೆ ಹೆದರಿ ಯುದ್ಧಮಾಡಲಾರದೆ ಲಂಕಾನಗರಿಯಿಂದ ಪಲಾಯನನಾಡಿ ಇಲ್ಲಿಗೆ ಬಂದು ಸೇರಿ ತನ್ನಂತೆಯೇ ಓಡಿಬಂದ ಇತರ

ಲಂಕಾಪುರ್ಯಾ ಇಹಾಗತ್ಯ ವಾಸಕೃದ್ರಾಕ್ಷಸೈಃ ಸಹ ।
ರಕ್ಷಸಾಮಯುತೇನಾಸೌ ಯುದ್ಧಾಯ ಕೃತನಿಶ್ಚಯಃ ॥ ೪ ॥

ಖರಾರೂಢಃ ಕೃಷ್ಣವರ್ಣೋ ಯದೂನಾಂ ಬಲಮಾಯಯೌ ।
ಯದೂನಾಂ ರಾಕ್ಷಸಾನಾಂ ಚ ಘೋರಂ ಯುದ್ಧಂ ಬಭೂವ ಹ ॥ ೫ ॥

ಪ್ರಘೋಷೋ ಗಾತ್ರವಾನ್ಸಿಂಹೋ ಬಲಃ ಪ್ರಬಲ ಊರ್ಧ್ವಗಃ ।
ಸಹ ಓಜೋ ಮಹಾಶಕ್ತಿರಪರಾಜಿತ ಏವ ಚ ॥ ೬ ॥

ಲಕ್ಷ್ಮಣಾನಂದನಾ ಹ್ಯೇತೇ ಶ್ರೀಕೃಷ್ಣಸ್ಯ ಸುತಾಃ ಶುಭಾಃ ।
ಸರ್ವೇಷಾಮಗ್ರತಃ ಪ್ರಾಪ್ತಾ ಬಾಣೈಸ್ತೀಕ್ಷ್ಣೈಃ ಸ್ಫುರತ್ಪ್ರಭೈಃ ॥ ೭ ॥

ರಾಕ್ಷಸಾನಾಂ ಬಲಂ ಜಘ್ನುರ್ವಾಯುರ್ವೇಗೈರ್ಯಥಾ ಘನಂ ।
ಬಾಣೌಘೈಶ್ಛಿನ್ನಭಿನ್ನಾಂಗಾ ರಾಕ್ಷಸಾ ರಣದುರ್ಮದಾಃ ॥ ೮ ॥

ರಾಕ್ಷಸರೊಡನೆ ಇಲ್ಲಿ ವಾಸಮಾಡುತ್ತಾ ಇದ್ದುಬಿಟ್ಟನು. ಆ ರಾಕ್ಷಸನು ಪ್ರದ್ಯುಮ್ನನು ಬರುತ್ತಿರುವುದನ್ನರಿತು ಹತ್ತು ಸಾವಿರ ರಾಕ್ಷಸರೊಡನೆ ಹೊರಟು ಯುದ್ಧಮಾಡಲು ನಿರ್ಧರಿಸಿದನು.

೫. ಅನಂತರ ಕಪ್ಪಾದ ಬಣ್ಣದಿಂದ ಕೂಡಿದ ಆ ರಾಕ್ಷಸನು ಕತ್ತೆಯನ್ನು ಏರಿ ಕುಳಿತು ಯಾದವಸೇನೆಗೆ ಅಭಿಮುಖವಾಗಿ ಬಂದನು. ಅನಂತರ ಆ ಯದುಸೇನೆಗೂ, ಈ ರಾಕ್ಷಸಸೇನೆಗೂ ಭಾರಿಯಾದ ಯುದ್ಧವು ಜರುಗಿತು.

೬–೮. ಆಗ ಲಕ್ಷ್ಮಣಾ ಎಂಬ ಶ್ರೀಕೃಷ್ಣಪತ್ನಿಯ ಪುತ್ರರಾದ ಪ್ರಘೋಷ, ಗಾತ್ರವಂತ, ಸಿಂಹ, ಬಲ, ಪ್ರಬಲ, ಊರ್ಧ್ವಗ, ಸಹ, ಓಜಸ್ಸು, ಮಹಾಶಕ್ತಿ, ಅಪರಾಜಿತ ಎಂಬ ಕುಮಾರರು ಅತಿ ಚೂಪಾದ ಥಳಿಥಳಿಸುತ್ತಿರುವ ಅಲುಗುಗಳುಳ್ಳ ಬಾಣಗಳೊಡನೆ ಎಲ್ಲರಿಗೂ ಮುಂದಾಗಿ ಬಂದು ನಿಂತು ಗಾಳಿಯು ತನ್ನ ವೇಗದಿಂದ ಮೋಡಗಳನ್ನು ಹೊಡೆದೋಡಿಸುವಂತೆ ಆ ರಾಕ್ಷಸಸೇನೆಯನ್ನು ಕೊಲ್ಲುತ್ತಾ ಬಂದರು. ಆಗ ಕಲಂಕನ ಸೇನೆಯಲ್ಲಿದ್ದ ಯುದ್ಧದಲ್ಲಿ ಯಾರಿಗೂ ಸಗ್ಗದಿದ್ದಂತಹ ರಾಕ್ಷಸವೀರರು ಕೃಷ್ಣಪುತ್ರರ ಬಾಣಪ್ರಹಾರಗಳಿಂದ ಛಿನ್ನಭಿನ್ನವಾದ ಅಂಗಾಂಗಗಳುಳ್ಳವರಾದರು.

ತ್ರಿಶೂಲಾನಾಂ ಮುದ್ಗರಾಣಾಂ ವರ್ಷಂ ಚಕ್ರುರ್ಮದೋತ್ಕಟಾಃ ।
ಕಲಂಕಸ್ತು ತದಾ ಪ್ರಾಪ್ತಶ್ಚರ್ವಯನ್ವಾರಣಾನ್ರಥಾನ್ ॥ ೯ ॥

ಹಯಾನ್ನರಾನ್ಸಶಸ್ತ್ರಾಸ್ತ್ರಾನ್ಮುಖೇ ಚಿಕ್ಷೇಪ ಸತ್ವರಂ ।
ಗಜಾನ್ಪಾದೇಷು ಚೋನ್ನೀಯ ಸನೀಡಾನ್ರತ್ನಕಂಬಲಾನ್ ॥ ೧೦ ॥

ಘಂಟಾನಾದಸಮಾಯುಕ್ತಾನ್ಪ್ರಾಕ್ಷಿಪಚ್ಚಾಂಬರೇ ಬಲಾತ್ ।
ಪ್ರಘೋಷಃ ಶ್ರೀಹರೇಃ ಪುತ್ರಃ ಕಪೀಂದ್ರಾಸ್ತ್ರಂ ಸಮಾದಧೇ ॥ ೧೧ ॥

ತದ್ಬಾಣನಿರ್ಗತಃ ಸಾಕ್ಷಾದ್ವಾಯುಪುತ್ರೋ ಮಹಾಬಲಃ ।
ವಾತಸ್ತೂಲಮಿವಾಕಾಶೇ ಚಿಕ್ಷೇಪ ಶತಯೋಜನಂ ॥ ೧೨ ॥

---

೯. ಆದರೇನು? ಶೌರ್ಯಬಲದಿಂದ ಮಿತಿಮೀರಿ ಮೆರೆಯುತ್ತಿದ್ದ ಆ ರಾಕ್ಷಸರು ತ್ರಿಶೂಲಗಳನ್ನೂ, ಮುದ್ಗರಗಳನ್ನೂ ವರ್ಷಿಸುವುದಕ್ಕೆ ಆರಂಭಿಸಿದರು. ಅಷ್ಟು ಹೊತ್ತಿಗೆ ಕಲಂಕನೆಂಬ ರಾಕ್ಷಸನು ಅಲ್ಲಿಗೆ ಬಂದು ಕೈಗೆ ಸಿಕ್ಕಿದ ಆನೆ ಕುದುರೆಗಳನ್ನೂ,

೧೦–೧೧. ತೇರುಗಳನ್ನೂ, ಶಸ್ತ್ರಾಸ್ತ್ರಧಾರಿಗಳಾದ ಯೋಧರನ್ನೂ ಬೇಗಬೇಗನೆ ಬಾಯಲ್ಲಿ ತುರುಕಿಕೊಂಡು ನುಂಗುತ್ತಾ ಬಂದನು. ಅಂಬಾರಿಯೊಡನೆಯೂ, ರತ್ನಗಂಬಳಿಗಳೊಡನೆಯೂ, ತೂಗುಬಿಟ್ಟ ಗಂಟೆಗಳೊಡನೆಯೂ ಕೂಡಿ ಮೆರೆಯುತ್ತಿರುವ ಯದುಸೇನೆಯ ಮದ್ದಾನೆಗಳನ್ನು ತನ್ನ ಕಾಲ್ಗಳಿಂದ ಚಿಮ್ಮಿ ವೇಗದಿಂದ ಆಕಾಶಕ್ಕೆಸೆದುಬಿಟ್ಟನು. ಆಗ ಕೃಷ್ಣಪುತ್ರನಾದ ಪ್ರಘೋಷನು ಕಪೀಂದ್ರಾಸ್ತ್ರವನ್ನು ಪ್ರಯೋಗಿಸಿದನು.

೧೨. ಆ ಅಸ್ತ್ರದಿಂದ ಮಹಾಬಲಶಾಲಿಯಾದ ಸಾಕ್ಷಾತ್ ಆಂಜನೇಯನೇ ಆವಿರ್ಭವಿಸಿ ಗಾಳಿಯು ಹತ್ತಿಯನ್ನು ತೂರಿಬಿಡುವಂತೆ ಆ ಕಲಂಕನನ್ನು ಆಕಾಶದಲ್ಲಿ ನೂರು ಯೋಜನಗಳಷ್ಟು ದೂರಕ್ಕೆ ಎಸೆದುಬಿಟ್ಟನು.

ಹನುಮಂತಂ ತದಾ ಜ್ಞಾತ್ವಾ ಕಲಂಕೋ ರಾಕ್ಷಸೇಶ್ವರಃ ।
ಲಕ್ಷಭಾರಮಯೀಂ ಗುರ್ವೀಂ ಗದಾಂ ಚಿಕ್ಷೇಪ ನಾದಯನ್ ॥ ೧೩ ॥

ಉತ್ಪಪಾತ ಕಪಿರ್ವೇಗಾದ್ಗದಾ ಭೂಮೌ ಪಪಾತ ಹ ।
ಉತ್ಪತನ್ವಾನರಾಧೀಶೋ ಭ್ರೂಭಂಗಂ ಕಾರಯನ್ಮುಹುಃ ॥ ೧೪ ॥

ಮುಷ್ಟಿನಾ ಘಾತಯಿತ್ವಾ ತಂ ಕಿರೀಟಂ ತಸ್ಯ ಚಾದದೇ ।
ಕಲಂಕೋಽಪಿ ತದಾ ತಸ್ಮೈ ತ್ರಿಶೂಲಂ ಸ್ವಂ ಸಮಾದದೇ ॥ ೧೫ ॥

ಉತ್ಪತನ್ಸ ಕಪಿರ್ವೇಗಾತ್ಪೃಷ್ಠದೇಶಂ ಪಪಾತ ಹ ।
ಹನುಮಾಂಸ್ತಂ ತದಾ ದೋರ್ಭ್ಯಾಂ ಪಾತಯಿತ್ವಾ ಮಹೀತಲೇ ॥ ೧೬ ॥

---

೧೩. ಆಗ ಆ ಕಲಂಕನು ಇವನು ಹನುಮಂತನೆಂಬುದಾಗಿ ತಿಳಿದು ಒಂದು ಲಕ್ಷ ಭಾರ ತೂಕವುಳ್ಳ ಭಾರಿಯಾದ ಗದೆಯೊಂದನ್ನು ತೆಗೆದುಕೊಂಡು ಸಿಂಹನಾದ ಮಾಡುತ್ತಾ ಅವನ ಮೇಲೆ ಬೀಸಿ ಹೊಡೆದನು.

೧೪. ಅದನ್ನು ಕಂಡ ಕೂಡಲೇ ಆ ಮಹಾಕಪಿಯು ಸರಕ್ಕನೆ ಆಕಾಶಕ್ಕೆ ನೆಗೆದುಬಿಟ್ಟನು. ಆ ಗದೆಯು ಅವನಿಗೆ ತಗಲದೆಯೇ ನೆಲದ ಮೇಲೆ ಬಿದ್ದು ವ್ಯರ್ಥವಾಗಿ ಹೋಯಿತು. ಅನಂತರ ಆಂಜನೇಯನು ತಾನು ಆಕಾಶದಲ್ಲಿ ನೆಗೆದಿದ್ದಂತೆಯೇ ಕೋಪದಿಂದ ಪುನಃ ಪುನಃ ಹುಬ್ಬುಗಳನ್ನು ಗಂಟುಹಾಕಿಕೊಳ್ಳುತ್ತಾ ತನ್ನ ಕೈಯನ್ನು ಮುಷ್ಟಿಕಟ್ಟಿ,

೧೫. ಆ ರಾಕ್ಷಸನನ್ನು ಅಪ್ಪಳಿಸಿ ಹೊಡೆದು ಅವನ ಕಿರೀಟವನ್ನು ಹಾರಿಸಿಬಿಟ್ಟನು. ಆಗ ಆ ಕಲಂಕನು ಹನುಮಂತನ ಮೇಲೆ ಪ್ರಯೋಗಿಸುವುದಕ್ಕಾಗಿ ತನ್ನ ತ್ರಿಶೂಲವನ್ನು ಕೈಗೆ ತೆಗೆದುಕೊಂಡನು.

೧೬. ಆ ಸುಳಿವನ್ನರಿತ ಹನುಮಂತನು ತಟ್ಟನೆ ಮೇಲಕ್ಕೆ ನೆಗೆದು ಆ ರಾಕ್ಷಸನ ಬೆನ್ನು ಹಿಂದೆ ನೆಗೆದನು. ಕೂಡಲೇ ಅವನನ್ನು ತನ್ನೆರಡು ತೋಳುಗಳಿಂದಲೂ ಗಟ್ಟಿಯಾಗಿ ಅಪ್ಪಿ ಹಿಡಿದು ನೆಲದ ಮೇಲೆ ಬೀಳಿಸಿದನು.

ವೈಢೂರ್ಯಪರ್ವತಂ ನೀತ್ವಾ ತಸ್ಯೋಽಪರಿ ಸಮಾಕ್ಷಿಪತ್ ।
ಗಿರಿಪಾತೇನ ಚೂರ್ಣಾಂಗೋ ಮರ್ದಿತಃ ಪಂಚತಾಂ ಯಯೌ　　॥ ೧೭ ॥

ತದಾ ಜಯಜಯಾರಾವಃ ಶಂಖಧ್ವನಿಯುತೋಽಭವತ್ ।
ಹನುಮಾನ್ಭಗವಾನ್ಸಾಕ್ಷಾತ್ತತ್ರೈವಾಂತರಧೀಯತ　　॥ ೧೮ ॥

ಪ್ರದ್ಯುಮ್ನಸ್ಯೋಽಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ।
ಅಥ ಕಾರ್ಷ್ಣಿರ್ಮಹಾಬಾಹುಃ ಸ್ವಸೈನ್ಯಪರಿವಾರಿತಃ　　॥ ೧೯ ॥

ಮನೋಹರಾಂ ಸ್ವರ್ಣಮಯೀಂ ಮಾನವೀಂ ನಗರೀಂ ಯಯೌ ।
ನೈಃಶ್ರೇಯಸವನಂ ತತ್ರ ಕಲ್ಪವೃಕ್ಷಲತಾವೃತಂ　　॥ ೨೦ ॥

---

೧೭. ಅನಂತರ ವೈಡೂರ್ಯಪರ್ವತವನ್ನು ಕಿತ್ತು ಅವನ ಮೇಲೆ ಹಾಕಿಬಿಟ್ಟನು. ಆ ವೈಡೂರ್ಯಪರ್ವತವು ಬಿದ್ದ ಏಟಿನಿಂದ ಮೈ ಕೈಯೆಲ್ಲವೂ ನುಚ್ಚುನೂರಾಗಿ ಆ ಕಲಂಕ ರಾಕ್ಷಸನು ಪ್ರಾಣಗಳನ್ನು ಬಿಟ್ಟನು.

೧೮. ಆಗ ವಿಜಯಸೂಚಕವಾದ ಜಯಜಯ ಧ್ವನಿಗಳುಂಟಾದುವು. ಶಂಖಗಳು ಊದಲ್ಪಟ್ಟುವು. ಕೂಡಲೇ ಸಾಕ್ಷಾತ್ ಭಗವಂತನ ಸ್ವರೂಪವೆನಿಸಿದ ಆ ಆಂಜನೇಯನು ಎಂದಿನಂತೆ ಆ ಧ್ವಜಪಟವಲ್ಲಿಯೇ ಅಂತರ್ಹಿತನಾದನು.

೧೯. ಆಗ ದೇವತೆಗಳು ಪ್ರದ್ಯುಮ್ನನ ಮೇಲೆ ಹೂವಿನ ಮಳೆಗರೆದರು. ರಾಜೇಂದ್ರ! ಬಳಿಕ ಮಹಾಬಾಹುವಾದ ಆ ಪ್ರದ್ಯುಮ್ನನು ತನ್ನ ಸೈನ್ಯದೊಡನೆ,

೨೦. ಸಕಲ ವಸ್ತುಗಳೂ ಸುವರ್ಣದಿಂದ ರಚಿಸಲ್ಪಟ್ಟು ಸಕಲರ ಮನಸ್ಸನ್ನೂ ಅಪಹರಿಸುವಂತಿದ್ದ ರಮಣೀಯವಾದ ಮಾನವೀ ಎಂಬ ದೇಶಕ್ಕೆ ಬಂದನು. ಅದರ ಬಳಿ ನೈಶ್ರೇಯಸವೆಂಬ ಪುರೋದ್ಯಾನವಿದ್ದಿತು. ಅಲ್ಲಿ ಕಲ್ಪವೃಕ್ಷಗಳೂ, ಕಲ್ಪಲತಗಳೂ (ಕೇಳಿದ್ದನ್ನು ಕೊಡುವಂತಹ) ಹೇರಳವಾಗಿದ್ದುವು.

ಹರಿಚಂದನಮಂದಾರಪಾರಿಜಾತೋಪಶೋಭಿತಂ ।
ಸಂತಾನಾಮೋದಸಂಮಿಶ್ರವಾಯುಭಿಃ ಸುರಭೀಕೃತಂ ॥ ೨೧ ॥

ಕೇತಕೀಚಂಪಕಲತಾಕುಟಜೈಃ ಪರಿಸೇವಿತಂ ।
ಮಾಧವೀನಾಂ ಲತಾಜಾಲೈಃ ಪುಷ್ಪಿತೈಃ ಸಫಲೈರ್ವೃತಂ ॥ ೨೨ ॥

ನದದ್ವಿಹಂಗಾಲಿಕುಲೈರ್ವೈಕುಂಠಮಿವ ಸುಂದರಂ ।
ಯೋಜನಾನಾಂ ಪಂಚಶತಂ ಲಂಬಿತಂ ಚಾರುಧಿಂ ಗಿರಿಂ ॥ ೨೩ ॥

ಅಧೋಽಧಃ ಶೋಭಿತಂ ರಾಜನ್ ಶತಯೋಜನವಿಸ್ತೃತಂ ।
ಪುಂಸ್ಕೋಕಿಲೈಃ ಕೋಕಿಲೈಶ್ಚ ಮಯೂರೈಃ ಸಾರಸೈಃ ಶುಕೈಃ ॥ ೨೪ ॥

---

೨೧. ಇವುಗಳಲ್ಲದೆ ಹರಿಚಂದನ, ಮಂದಾರ, ಪಾರಿಜಾತ ಎಂಬ ವೃಕ್ಷಗಳು ಆ ಉದ್ಯಾನವ ಸೊಬಗನ್ನು ಹೆಚ್ಚಿಸುತ್ತಿದ್ದುವು. ಆ ಉದ್ಯಾನದಲ್ಲಿ ಸಂತಾನವೃಕ್ಷದ ಪರಿಮಳವನ್ನು ಹೊತ್ತು ಮೆಲ್ಲನೆ ಬೀಸಿ ಬರುವ ತಂಗಾಳಿಯು ಎಲ್ಲೆಲ್ಲಿಯೂ ಸುವಾಸನೆಯನ್ನು ತರುತ್ತಿತ್ತು.

೨೨. ಮತ್ತು ಆ ಕ್ರೀಡಾವನದಲ್ಲಿ ಕೇದಿಗೆ, ಸಂಪಿಗೆ, ಮೊಲ್ಲೆ ಮೊದಲಾದ ಹೂವಿನ ಬಳ್ಳಿಗಳೂ, ಮಾಧವೀ ಎಂಬ ಲತೆಗಳೂ ಬೆಳೆದು ತಮ್ಮ ಹೂಗಳಿಂದಲೂ, ಹಣ್ಣುಗಳಿಂದಲೂ ಅದರ ಸೊಬಗನ್ನು ಹೆಚ್ಚಿಸುತ್ತಿದ್ದುವು.

೨೩–೨೪. ಮತ್ತು ಆ ಉದ್ಯಾನದಲ್ಲಿ ಇಂಪಾಗಿ ಧ್ವನಿಮಾಡುತ್ತಿರುವ ಪಕ್ಷಿಗಳೂ, ಝೇಂಕರಿಸುವ ದುಂಬಿಗಳೂ ಎಲ್ಲೆಲ್ಲೂ ಕಾಣಬರುತ್ತಿದ್ದುವು. ಈ ರೀತಿ ರಮಣೀಯವಾಗಿದ್ದ ಆ ನೈಶ್ರೇಯಸವೆಂಬ ಉಪವನವು ಸೌಂದರ್ಯದಲ್ಲಿ ವೈಕುಂಠಕ್ಕೆ ಸರಿಸಮವೆನಿಸಿತ್ತು. ರಾಜೇಂದ್ರ! ಆ ಉದ್ಯಾನವು ಐನೂರು ಯೋಜನಗಳಷ್ಟು ಉದ್ದವಾಗಿ ಚಾರುಧಿಯೆಂಬ ಪರ್ವತದವರೆಗೂ ಹಬ್ಬಿದ್ದುದಲ್ಲದೆ, ನೂರು ಯೋಜನಗಳಷ್ಟು ಅಗಲವಾಗಿಯೂ ಕೆಳಕೆಳಗೆ ಬರುತ್ತಾ ವಿಶೇಷವಾದ ಶೋಭೆಯಿಂದ ಕಂಗೊಳಿಸುವುದಾಗಿಯೂ ಇದ್ದಿತು. ಅಲ್ಲಿ ಕೋಗಿಲೆ, ನವಿಲು, ಗಿಳಿ ಮುಂತಾದ ಆಕಾಶಚಾರಿಗಳಾದ ಪಕ್ಷಿಗಳೂ,

ಚಕ್ರವಾಕೈಶ್ಚ ಕೋರೈಶ್ಚ ಹಂಸೈರ್ದಾತ್ಯೂಹಕೂಜಿತಂ ।
ಸರ್ವರ್ತುಪುಷ್ಪಶೋಭಾಢ್ಯಮಾಕ್ಷಿಪನ್ನಂದನಂ ವನಂ　　॥ ೨೫ ॥

ಮೃಗಶಾವಾ ರಮಂತೇ ವೈ ಶಾರ್ದೂಲೈಃ ಸಹ ಮೈಥಿಲ ।
ನಕುಲಾಃ ಫಣಿಭಿಃ ಸಾರ್ಧಂ ಯತ್ರ ವೈರವಿವರ್ಜಿತಾಃ　　॥ ೨೬ ॥

ಅಯುತಂ ಸರಸಾಂ ಯತ್ರ ಭ್ರಮರಧ್ವನಿಸಂಯುತಂ ।
ಸಹಸ್ರಪತ್ರೈಃ ಕಮಲೈಃ ಶತಪತ್ರೈಃ ಸ್ಫುರತ್ಪ್ರಭೈಃ　　॥ ೨೭ ॥

ಇತಸ್ತತೋ ವರ್ತಮಾನಮಾನಂದಮಿವ ಮೂರ್ತಿಮತ್ ।
ತದ್ವನಂ ಸುಂದರಂ ದೃಷ್ಟ್ವಾ ನಿರ್ಗತಾನ್ನಗರೀಜನಾನ್　　॥ ೨೮ ॥

---

೨೫. ಸಾರಸ, ಚಕ್ರವಾಕ, ಚಕೋರ, ಹಂಸ, ದಾತ್ಯೂಹ, ಮುಂತಾದ ಜಲಚರಗಳಾದ ಪಕ್ಷಿಗಳೂ ತಮ್ಮ ಮಧುರವಾದ ಧ್ವನಿಯಿಂದ ಕೂಗುತ್ತಾ ಕಂಗೊಳಿಸುತ್ತಿದ್ದುವು. ಆ ಉದ್ಯಾನದಲ್ಲಿ ಆಯಾ ಋತುಗಳಲ್ಲಿ ಮಾತ್ರವೇ ಬಿಡುವಂತಹ ಹೂಗಳು ಎಲ್ಲವೂ ಸದಾಕಾಲದಲ್ಲಿಯೂ ಸನ್ನಿಹಿತವಾಗಿರುತ್ತಿದ್ದುದರಿಂದ ಆ ಉಪವನವು ದೇವೇಂದ್ರನ ನಂದನವನವನ್ನೂ ಹೀಯಾಳಿಸುತ್ತಿತ್ತು.

೨೬. ಓ ಮಿಥಿಲಾಧಿಪ! ಆ ಉದ್ಯಾನದಲ್ಲಿ ಜಿಂಕೆಯ ಮರಿಗಳು ಹುಲಿಗಳೊಡನೆ ವಿಹರಿಸುತ್ತಿದ್ದುವು. ಮುಂಗಸಿಗಳೂ ಸಹ ತಮ್ಮ ಸಹಜವಾದ ವೈರವನ್ನು ಬಿಟ್ಟು ಹಾವುಗಳೊಂದಿಗೆ ಕ್ರೀಡಿಸುತ್ತಿದ್ದವು.

೨೭. ಮತ್ತು ಅಲ್ಲಿ ಅತಿಶಯವಾದ ಕಾಂತಿಯಿಂದ ಮೆರೆಯುತ್ತಿರುವ ನೂರು ಎಸಳುಗಳುಳ್ಳ ತಾವರೆ ಹೂಗಳಿಂದಲೂ, ಸಾವಿರ ದಳಗಳುಳ್ಳ ಕಮಲಗಳಿಂದಲೂ ಸಿಬಿಡೀಕೃತವಾಗಿ ಸರ್ವದಾ ಭ್ರಮರಗಳ ಝೇಂಕಾರದಿಂದ ತುಂಬಿಹೋಗುತ್ತಿದ್ದ ಹತ್ತು ಸಹಸ್ರ ಸರೋವರಗಳು ಇದ್ದುವು.

೨೮. ಈ ರೀತಿಯಾಗಿ ಆನಂದವೇ ಸಾಕ್ಷಾತ್ತಾಗಿ ದೇಹವನ್ನು ಧರಿಸಿ ಬಂದಂತೆ ರಮಣೀಯವಾಗಿ ಕಂಗೊಳಿಸುತ್ತಾ ಊರಿನ ಅಕ್ಕಪಕ್ಕದಲ್ಲಿ ಹಬ್ಬಿದ್ದ ಆ ನೈಶ್ರೇಯಸೋದ್ಯಾನವನ್ನೆಲ್ಲಾ ನೋಡಿದನಂತರ ಆ ನಗರದಿಂದ ಹೊರಗಡೆ ಬರುತ್ತಿರುವ ಜನರನ್ನು ಕಂಡು,

ಪಪ್ರಚ್ಛ ವಾಂಛಿತಂ ಸಾಕ್ಷಾತ್ಪ್ರದ್ಯುಮ್ನಃ ಸರ್ವವಿತ್ಕವಿಃ ।

॥ ಪ್ರದ್ಯುಮ್ನ ಉವಾಚ ॥

ಕಸ್ಯೇಯಂ ನಗರೀ ರಮ್ಯಾ ಕಸ್ಯೇದಂ ವನಮದ್ಭುತಂ ॥
ವದತಾಶು ಸವಿಸ್ತಾರಂ ಹೇ ಲೋಕಾಃ ಪುಣ್ಯಶಾಸನಾಃ ॥ ೨೯ ॥

॥ ಜನಾ ಊಚುಃ ॥

ವೈವಸ್ವತೋ ಮನುರ್ನಾಮ ಯೋ ಹ್ಯೇವಂ ವರ್ತತೇ ನೃಪ ।
ಮಾನವೇ ಚ ಗಿರೌ ರಮ್ಯೇ ಮತ್ಸ್ಯಂ ನಾರಾಯಣಂ ಹರಿಂ ॥ ೩೦ ॥

ವರ್ತಮಾನಂ ಸದಾ ನತ್ವಾ ಕರೋತಿ ವಿಪುಲಂ ತಪಃ ।
ತಸ್ಯೇಯಂ ನಗರೀ ರಮ್ಯಾ ತಸ್ಯ ನೈಃಶ್ರೇಯಸಂ ವನಂ ॥ ೩೧ ॥

---

೨೯. ಸರ್ವಜ್ಞನಾಗಿದ್ದರೂ ಸಹ ತಾನು ಏನೂ ಅರಿಯದವನಂತೆ ಆ ಪ್ರದ್ಯುಮ್ನನು ಅವರನ್ನು ಇಂತು ಪ್ರಶ್ನಿಸಿದನು. "ಎಲೈ ಪುಣ್ಯಶೀಲರಾದ ಪಟ್ಟಣಿಗರೇ, ಈ ಊರು ಯಾವುದು ? ಅದರಂತೆಯೇ ಪರಮಾಶ್ಚರ್ಯಕರವಾದ ಈ ಪುರೋದ್ಯಾನವೂ ಯಾರಿಗೆ ಸೇರಿದುದು ? ಇದೆಲ್ಲವನ್ನೂ ಬೇಗನೆ ವಿವರವಾಗಿ ನನಗೆ ತಿಳಿಸಬೇಕು."

೩೦–೩೧. ಈ ರೀತಿಯಾಗಿ ಪ್ರದ್ಯುಮ್ನನು ಪ್ರಶ್ನಿಸಿದುದನ್ನು ಕೇಳಿ ಆ ಜನರು ಇಂತೆಂದರು :—ವೈವಸ್ವತನೆಂಬ ಮನುವು ಇರುವನಷ್ಟೆ ? ಆತನು ಇಲ್ಲಿಯೇ ರಮಣೀಯವಾಗಿರುವಂತಹ ಮಾನವವೆಂಬ ಪರ್ವತದಲ್ಲಿ ಮತ್ಸ್ಯರೂಪದಿಂದ ನೆಲಸಿರುವ ಸಾಕ್ಷಾತ್ ಶ್ರೀಮನ್ನಾರಾಯಣನನ್ನು ಸದಾಕಾಲದಲ್ಲಿಯೂ ನಮಸ್ಕರಿಸುತ್ತಾ ಅತಿಶಯವಾದ ತಪಸ್ಸನ್ನಾಚರಿಸುತ್ತಿರುವನು. ಮನೋಹರವಾಗಿರತಕ್ಕ ಮಾನವೀ ಎಂಬ ಈ ನಗರಿಯೂ, ನೈಶ್ರೇಯಸವೆಂಬ ಈ ಉಪವನವೂ ಆ ವೈವಸ್ವತ ಮನುವಿಗೇ ಸೇರಿದುವು.

ವೈಕುಂಠಾಚ್ಚ ಸಮಾನೀತಾ ಭೂಮಿಶ್ಚಾಯಂ ಗಿರಿಸ್ತಥಾ ।
ಯೂಯಂ ಸರ್ವೇಽಪಿ ರಾಜಾನಸ್ತಸ್ಯ ವಂಶಭವಾಃ ಕ್ಷಿತೌ ॥
ಸೂರ್ಯವಂಶಾಂತರೇ ರಾಜಂಶ್ಚಂದ್ರವಂಶಾಂತರೇ ಹಿ ಭೋಃ ॥ ೩೨ ॥

॥ ಶ್ರೀ ನಾರದ ಉವಾಚ ॥

ಕ್ಷತ್ರಿಯಾಣಾಂ ಚ ಸರ್ವೇಷಾಂ ವೃದ್ಧಂ ತಂ ಪ್ರಪಿತಾಮಹಂ ।
ಶ್ರಾದ್ಧದೇವಂ ಮನುಂ ಜ್ಞಾತ್ವಾ ವಿಸ್ಮಿತೋಽಭೂದ್ಧರೇಃ ಸುತಃ ॥ ೩೩ ॥

ಶ್ರುತ್ವಾ ವಚಸ್ತದಾ ಸದ್ಯೋ ಭ್ರಾತೃಭಿರ್ಯದುಭಿರ್ವೃತಃ ।
ಮಾನವಾದ್ರಿಂ ಸಮಾರುಹ್ಯ ಶ್ರಾದ್ಧದೇವಂ ದದರ್ಶ ಹ ॥ ೩೪ ॥

ಶತಸೂರ್ಯಪ್ರಭಂ ಕಾಂತ್ಯಾ ದ್ಯೋತಯಂತಂ ದಿಶೋ ದಶ ।
ಮಹಾಯೋಗಮಯಂ ಸಾಕ್ಷಾದ್ರಾಜೇಂದ್ರಂ ಶಾಂತರೂಪಿಣಂ ॥ ೩೫ ॥

---

೩೨. ಈ ಭೂಮಿಯೂ ಮತ್ತು ಮಾನವವೆಂಬ ಪರ್ವತಶ್ರೇಷ್ಠವೂ ಆ ಮನುವಿನಿಂದ ವೈಕುಂಠದಿಂದಲೇ ತರಲ್ಪಟ್ಟಿರುವುದು. ಸೂರ್ಯವಂಶಕ್ಕಾಗಲೀ, ಚಂದ್ರವಂಶಕ್ಕಾಗಲೀ ಸೇರಿದಂತಹ ಭೂಮಂಡಲದಲ್ಲಿರತಕ್ಕ ನೀವೆಲ್ಲ ರಾಜರುಗಳೂ ಆ ಮನುವಿನ ವಂಶದಲ್ಲಿ ಹುಟ್ಟಿದವರೇನೇ.

೩೩. ಓ ಬಹುಲಾಶ್ವರಾಜೇಂದ್ರ! ಹೀಗೆಂದು ಆ ಪುರನಿವಾಸಿಗಳು ಹೇಳಿದುದನ್ನು ಕೇಳಿ ಆ ಶ್ರೀಕೃಷ್ಣಪುತ್ರನು ಕ್ಷತ್ರಿಯರಿಗೆಲ್ಲಾ ವೃದ್ಧಪ್ರಪಿತಾಮಹನೆನಿಸಿದ ವೈವಸ್ವತಮನುವೇ ಈತನೆಂಬುದಾಗಿ ಅರಿತು ಬಹಳ ಆಶ್ಚರ್ಯವನ್ನು ತಾಳಿದನು.

೩೪. ಕೂಡಲೇ ಆತನು ತನ್ನ ಸಹೋದರರೊಡನೆಯೂ, ಇತರ ಯದುವೀರರೊಡನೆಯೂ ಹೊರಟು ಮಾನವವೆಂಬ ಪರ್ವತವನ್ನು ಹತ್ತಿ ಅಲ್ಲಿದ್ದ ವೈವಸ್ವತಮನುವನ್ನು ಸಂದರ್ಶಿಸಿದನು.

೩೫. ಆ ಮನುವು ತೇಜಸ್ಸಿನಿಂದ ನೂರು ಮಂದಿ ಸೂರ್ಯರಿಗೆ ಸಮಾನನಾಗಿ ಮೆರೆಯುತ್ತಾ ಹತ್ತು ದಿಕ್ಕುಗಳನ್ನೂ ಬೆಳಗುತ್ತಿದ್ದನು. ಆ ರಾಜೇಂದ್ರನು ಮಹಾಯೋಗಸ್ವರೂಪನಾಗಿ ತೋರುತ್ತಾ ಸೌಮ್ಯವಾದ ರೂಪಿನಿಂದ ಕಂಗೊಳಿಸುತ್ತಿದ್ದನು.

ವೇದವ್ಯಾಸಶುಕಾದ್ಯೈಶ್ಚ ವಸಿಷ್ಠಧಿಷಣಾದಿಭಿಃ ।
ಪರಸ್ಪರಂ ಮಹಾರಾಜ ಶೃಣ್ವಂತಂ ಶ್ರೀಹರೇರ್ಯಶಃ ॥ ೩೬ ॥

ನನಾಮ ಕಾರ್ಷ್ಣಿರ್ಯದುಭಿಃ ಸಹೈವ ತಂ
ಕೃತಾಂಜಲಿಸ್ತತ್ರ ಸಮಾಸ್ಥಿತೋಽಭವತ್ ।
ಮನುಃ ಸಮುತ್ಥಾಯ ಹರೇಃ ಪ್ರಭಾವವಿ-
ದ್ದತ್ವಾಸನಂ ಗದ್ಗದಯಾ ಗಿರಾಬ್ರವೀತ್ ॥ ೩೭ ॥

॥ ಮನುರುವಾಚ ॥

ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ ॥ ೩೮ ॥

---

೩೬. ಆತನ ಸುತ್ತಲೂ ವೇದವ್ಯಾಸ, ಶುಕ, ವಸಿಷ್ಠ, ಬೃಹಸ್ಪತಿ, ಮೊದಲಾದ ತತ್ತ್ವಜ್ಞಾನಿಗಳು ಶ್ರೀಹರಿಯ ದಿವ್ಯಗುಣಗಳನ್ನು ಪರಸ್ಪರವಾಗಿ ಗಾನಮಾಡುತ್ತಿದ್ದರು. ಅದನ್ನು ಆತನು ಆದರದಿಂದ ಶ್ರವಣಮಾಡುತ್ತಿದ್ದನು.

೩೭. ಇಂತಹ ಆ ಮನುವನ್ನು ಕಂಡೊಡನೆಯೇ ಕೃಷ್ಣಪುತ್ರನಾದ ಪ್ರದ್ಯುಮ್ನನು ತನ್ನ ಕಡೆಯ ಯದುವೀರರೊಡನೆ ನಮಸ್ಕರಿಸಿ ಬದ್ಧಾಂಜಲಿಯಾಗಿ ಕುಳಿತುಕೊಂಡನು. ಆ ಮನುವು ಶ್ರೀಹರಿಯ ಮಹಿಮೆಯನ್ನು ಚೆನ್ನಾಗಿ ಅರಿತವನಾದುದರಿಂದ ಝುಗ್ಗನೆ ಎದ್ದು ಆತನಿಗೆ ಆಸನವಿತ್ತು ಗದ್ಗದವಾದ ವಾಣಿಯಿಂದ ಈ ರೀತಿ ನುಡಿದನು.

೩೮. ಓ ವಾಸುದೇವ! ನಿನಗೆ ನಮಸ್ಕಾರವು! ಸಂಕರ್ಷಣರೂಪನಾದ ನಿನಗೆ ನಮಸ್ಕಾರವು! ಪ್ರದ್ಯುಮ್ನನೂ, ಅನಿರುದ್ಧನೂ. ಸಾತ್ತ್ವತಾಧೀಶನೂ ಆದ ನಿನಗೆ ನಮಸ್ಕಾರವು!

ಅನಾದಿರಾತ್ಮಾ ಪುರುಷಸ್ತ್ವಮೇವ
ತ್ವಂ ನಿರ್ಗುಣೋಽಸಿ ಪ್ರಕೃತೇಃ ಪರಸ್ತ್ವಂ ।
ಸದಾ ವಶೀಕೃತ್ಯ ಬಲಾತ್ಪ್ರಧಾನಂ
ಗುಣೈಃ ಸೃಜಸ್ಯತ್ಸಿ ಚ ಪಾಸಿ ವಿಶ್ವಂ ॥ ೩೯ ॥

ತತೋ ವಿವೇಕಂ ಸವಿಹಾಯ ಸರ್ವತೋ
ಮತ್ವಾಖಿಲಂ ಚಾತ್ರ ಮನೋಮಯಂ ಜಗತ್ ।
ಮಾಯಾಪರಂ ನಿರ್ಗುಣಮಾದಿಪೂರುಷಂ
ಸರ್ವಜ್ಞಮಾದ್ಯಂ ಪುರುಷಂ ಸನಾತನಂ ॥ ೪೦ ॥

ಜಾಗರ್ತಿ ಯೋಽಸ್ಮಿನ್ ಶಯನಂ ಗತೇ ಸತಿ
ನಾಯಂ ಜನೋ ವೇದ ಸತಃ ಪರಂ ತಂ ।
ಪಶ್ಯಂತಮಾದ್ಯಂ ಪುರುಷಂ ಹಿ ಯಂ ಜನೋ
ನ ಪಶ್ಯತಿ ಸ್ವಚ್ಛಮಲಂ ಚ ತಂ ಭಜೇ ॥ ೪೧ ॥

---

೩೯. ಓ ದೇವಾ! ನಿನಗೆ ಆದಿಯಿಲ್ಲವು. ನೀನೇ ಆತ್ಮನೂ, ಪುರುಷಪದವಾಚ್ಯನೂ ಆಗಿರುವೆ. ನೀನು ಸದಾಕಾಲದಲ್ಲಿಯೂ ಪ್ರಕೃತಿಯನ್ನು ನಿನ್ನ ಅಧೀನವನ್ನಾಗಿ ಮಾಡಿಕೊಂಡು ಸತ್ತ್ವಾದಿ ಗುಣತ್ರಯಗಳ ಸಹಕಾರದಿಂದ ಈ ಪ್ರಪಂಚಕ್ಕೆ ಸೃಷ್ಟಿಕರ್ತನೂ, ಪಾಲನ ಕರ್ತೃವೂ, ವಿನಾಶಕರ್ತೃವೂ ಆಗಿರುವೆ.

೪೦. ಆದುದರಿಂದ ಎಲ್ಲ ತೆರನಾದ ಅಜ್ಞಾನವನ್ನೂ ತೊರೆದು ಈ ಸಕಲವಿಧವಾದ ಪ್ರಪಂಚವೆಲ್ಲವೂ ಮನಸಾಕಲ್ಪಿತವಾದುದೆಂದೂ ಭಾವಿಸಿ ಮಾಯಾತೀತನೂ, ಗುಣರಹಿತನೂ, ಆದಿಪುರುಷನೂ, ಸರ್ವಜ್ಞನೂ. ಪುರುಷಪದವಾಚ್ಯನೂ, ಶಾಶ್ವತನೂ ಆದ ನಿನ್ನನ್ನು ಭಜಿಸುವೆನು.

೪೧. ಯಾವಾತನು ಈ ಪ್ರಪಂಚವೆಲ್ಲವೂ ನಿದ್ರಿಸುವಾಗ ತಾನು ಜಾಗರೂಕನಾಗಿ ಇರುವನೋ ಯಾವಾತನನ್ನು ಯಾವ ಪುರುಷನೂ ಸಹ ಸರಿಯಾಗಿ ಅರಿಯುವೆಯೇ ಇರುವನೋ ಮತ್ತು ಯಾವಾತನು ಸಕಲರಲ್ಲಿಯೂ ಸಾಕ್ಷಿಯಾಗಿ ನೆಲಸಿ ಸದಾ ಕಾಲದಲ್ಲಿಯೂ ಎಲ್ಲರನ್ನೂ ಕಾಣುತ್ತಾ ಇರುವನೋ, ಯಾವಾತನನ್ನು ಮಾತ್ರ ಜನರು ಯಾರೂ ಕಂಡರಿಯರೋ ಅಂತಹ ನಿರ್ಮಲಸ್ವರೂಪನಾದ ಆ ಪುರುಷಶ್ರೇಷ್ಠನನ್ನು ಭಜಿಸುವೆನು.

ಯಥಾ ನಭೋಽಗ್ನಿಃ ಪವನೋ ನ ಸಜ್ಜತೇ
ಘಟೇನ ಕಾಷ್ಠೇನ ರಜೋಭಿರಾವೃತೈಃ ।
ತಥಾ ಭವಾನ್ಸರ್ವಗುಣೈಶ್ಚ ನಿರ್ಮಲೋ
ವರ್ಣೈರ್ಯಥಾ ಸ್ಯಾತ್ಸ್ಫಟಿಕೋ ಮಹೋಜ್ಜ್ವಲಃ ॥ ೪೨ ॥

ವ್ಯಂಗ್ಯೇನ ವಾ ಲಕ್ಷಣಯಾ ಚ ವಾಕ್ಪಥೈ-
ರರ್ಥಂ ಪದಂ ಸ್ಫೋಟಪರಾಯಣೈಃ ಪರಂ ।
ನ ಜ್ಞಾಯತೇ ಯದ್ಧ್ವನಿನೋತ್ತಮೇನ ಸ-
ದ್ವಾಚ್ಯೇನ ತದ್ಬ್ರಹ್ಮ ಕುತಸ್ತು ಲೌಕಿಕೈಃ ॥ ೪೩ ॥

ವದಂತಿ ಕೇಚಿದ್ಭುವಿ ಕರ್ಮಕರ್ತೃ ಯು-
ತ್ಕಾಲಂ ಚ ಕೇಚಿತ್ಪರಯೋಗಮೇವ ತತ್ ।

---

೪೨. ಯಾವ ರೀತಿ ಆಕಾಶವು ಘಟದಿಂದಲೂ, ಅಗ್ನಿಯು ಕಾಷ್ಠರಾಶಿಯಿಂದಲೂ, ವಾಯುವು ಧೂಳೀಪಟಲದಿಂದಲೂ ಆವರಿಸಲ್ಪಟ್ಟರೂ ಎಂದಿಗೂ ಸಂಪೂರ್ಣವಾಗಿ ಆವರಿಸಲ್ಪಡಲಾರದೋ ಅದೇ ರೀತಿ ಸ್ವಭಾವಶುದ್ಧನೆನಿಸಿರುವ ನೀನು ಸಕಲ ವಿಧವಾದ ಗುಣಗಳಿಂದಲೂ ಆಶ್ರಯಿಸಲ್ಪಟ್ಟವನಂತೆ ತೋರುವೆ. ಸಹಜವಾಗಿ ಶುಭ್ರವಾಗಿರುವಂತಹ ಸ್ಫಟಿಕವು ತನ್ನ ಬಳಿ ಇರುವ ವಸ್ತುಗಳ ವರ್ಣಗಳನ್ನು ಪ್ರತಿಬಿಂಬಿಸುತ್ತಾ ನಾನಾ ವರ್ಣಗಳನ್ನು ತಳೆದಂತೆ ಕಾಣಿಸಿದರೂ ವಸ್ತುತಃ ಯಾವ ರೀತಿ ಶುದ್ಧವರ್ಣವಾಗಿಯೇ ಇರುತ್ತದೆಯೋ ಅದರಂತೆ ನೀನು ಸುಗುಣನಾಗಿ ತೋರಿದರೂ ವಸ್ತುತಃ ನಿರ್ಗುಣನಾಗಿಯೇ ಇರುವೆ.

೪೩. ಓ ದೇವಾ! ನಿನ್ನನ್ನು ವ್ಯಂಗ್ಯವಾಗಲಿ, ಲಕ್ಷಣವಾಗಲಿ, ಇತರ ಅರ್ಥಪ್ರಕಾಶಕವಾದ ರೀತಿಯಾಗಲಿ, ಸ್ಫೋಟಬ್ರಹ್ಮನನ್ನು ಸಾಧಿಸುವಂತಹ ಮಾರ್ಗಾಂತರವಾಗಲಿ, ಉತ್ತಮವಾದ ಧ್ವನಿಪ್ರಸ್ಥಾನವಾಗಲಿ, ಅರ್ಥವಾಗಲಿ, ಪದವಾಗಲಿ, ವಾಚ್ಯಾಂತರವಾಗಲಿ, ತಿಳಿಸಲಾರವು. ಹೀಗಿರುವಾಗ ಬ್ರಹ್ಮಸ್ವರೂಪನಾದ ನಿನ್ನನ್ನು ಲೌಕಿಕವಾದ ಯಾವ ವಾಕ್ಯಗಳು ತಾನೇ ತಿಳಿಸಬಲ್ಲುವು ?

ಕೇಚಿದ್ವಿಚಾರಂ ಪ್ರವದಂತಿ ಯಚ್ಚ ತ-
ದ್ಬ್ರಹ್ಮೇತಿ ವೇದಾಂತವಿದೋ ವದಂತಿ ॥ ೪೪ ॥

ಯಂ ನ ಸ್ಪೃಶಂತೀಹ ಗುಣಾ ನ ಕಾಲಜಾ
ಜ್ಞಾನೇಂದ್ರಿಯಂ ಚಿತ್ತಮನೋ ನ ಬುದ್ಧಯಃ ।
ಮಹನ್ನವೇದೋ ವದತೀತಿ ತತ್ಪರಂ
ವಿಶಂತಿ ಸರ್ವೇಽನಲವಿಸ್ಫುಲಿಂಗವತ್ ॥ ೪೫ ॥

ಹಿರಣ್ಯಗರ್ಭಂ ಪರಮಾತ್ಮತತ್ತ್ವಂ
ಯದ್ವಾಸುದೇವಂ ಪ್ರವದಂತಿ ಸಂತಃ ।
ಏವಂ ವಿಧಂ ತ್ವಾಂ ಪುರುಷೋತ್ತಮೋತ್ತಮಂ
ಮತ್ವಾ ಸದಾಹಂ ವಿಚರಾಮ್ಯಸಂಗಃ ॥ ೪೬ ॥

---

೪೪. ಈ ಲೋಕದಲ್ಲಿ ನಿನ್ನನ್ನು ಕೆಲವರು ಕರ್ಮವೆಂದೂ, ಕೆಲವರು ಕರ್ತೃವೆಂದೂ, ಕೆಲವರು ಕಾಲವೆಂದೂ, ಕೆಲವರು ಉತ್ತಮವಾದ ಯೋಗವೆಂದೂ, ಕೆಲವರು ವಿಚಾರವೆಂದೂ ತಿಳಿಯುವರು. ಇಂತಹ ನಿನ್ನನ್ನು ವೇದಾಂತವನ್ನು ಬಲ್ಲ ಜ್ಞಾನಿಗಳು ಬ್ರಹ್ಮವೆಂಬುದಾಗಿ ಕರೆಯುವರು.

೪೫. ಯಾವಾತನನ್ನು ಕಾಲವಶದಿಂದ ಸಂಭವಿಸುವ ಗುಣಗಳಾಗಲಿ, ಚಕ್ಷುಶ್ರೋತ್ರಾದಿ ಜ್ಞಾನೇಂದ್ರಿಯಗಳಾಗಲಿ, ಚಿತ್ತವಾಗಲಿ, ಮನಸ್ಸಾಗಲಿ, ಬುದ್ಧಿಯಾಗಲಿ, ಮಹತ್ತಾಗಲಿ, ಸ್ಪರ್ಶಿಸಲಾರವೋ ಅಂತಹ ಪರವಸ್ತುವನ್ನು ಬೆಂಕಿಯ ಕಿಡಿಗಳೆಲ್ಲವೂ ಅದರಿಂದಲೇ ಹೊರಟು ಕೊನೆಗೆ ಅಲ್ಲಿಯೇ ಹೊಕ್ಕು ಲೀನವಾಗುವಂತೆ ಸಕಲ ವಸ್ತುಗಳೂ ಸಮಾಶ್ರಯಿಸಿ ಕೊನೆಗೆ ಅಲ್ಲಿಯೇ ಐಕ್ಯವಾಗುವುವು. ಹೀಗೆಂಬುದಾಗಿ ವೇದಗಳು ತಿಳಿಯಪಡಿಸುವುವು.

೪೬. ಯಾವಾತನನ್ನು ಪ್ರಾಜ್ಞರಾದವರು ಹಿರಣ್ಯಗರ್ಭನೆಂದೂ, ಶ್ರೇಷ್ಠವಾದ ಆತ್ಮತತ್ವವೆಂದೂ, ವಾಸುದೇವನೆಂದೂ, ಕರೆಯುವರೋ ಅಂತಹ ಪುರುಷೋತ್ತಮೋತ್ತಮನೇ ನೀನೆಂಬುದಾಗಿ ಭಾವಿಸಿ ನಾನು ನಿಸ್ಸಂಗನಾಗಿ ವಿಚಾರಮಾಡುತ್ತಿರುವೆನು" ಎಂದನು.

॥ ಶ್ರೀ ನಾರದ ಉವಾಚ ॥

ಮನೋರ್ವಾಕ್ಯಂ ತದಾ ಶ್ರುತ್ವಾ ಪ್ರದ್ಯುಮ್ನೋ ಭಗವಾನ್ಹರಿಃ ।
ಮಂದಸ್ಮಿತೋ ಮನುಂ ಪ್ರಾಹ ಗೀರ್ಭಿಃ ಸಂಮೋಹಯನ್ನಿವ ॥ ೪೭ ॥

॥ ಪ್ರದ್ಯುಮ್ನ ಉವಾಚ ॥

ತ್ವನ್ನೋ ಗುರುಃ ಕ್ಷತ್ರಿಯಾಣಾಮಾದಿರಾಜಃ ಪಿತಾಮಹಃ ।
ಮತ್ಪೂಜನೀಯೋ ವೃದ್ಧೋಽಸಿ ಶ್ಲಾಘ್ಯೋ ಧರ್ಮಧುರಂಧರಃ ॥ ೪೮ ॥

ವಃ ಪ್ರಜಾಶ್ಚ ವಯಂ ರಾಜನ್ರಕ್ಷ್ಯಾಃ ಪಾಲ್ಯಾಶ್ಚ ಸರ್ವತಃ ।
ಭವತಾ ತಪ್ಯತೇ ದಿವ್ಯಂ ತಪಸ್ತೇನ ಜಗತ್ಸುಖಂ ॥ ೪೯ ॥

---

೪೭. ಓ ಬಹುಲಾಶ್ವರಾಜ! ಈ ರೀತಿಯಾಗಿ ಆ ವೈವಸ್ವತಮನುವು ನುಡಿದ ಮಾತನ್ನು ಕೇಳಿ ಸಾಕ್ಷಾತ್ ಶ್ರೀಹರಿಯ ಸ್ವರೂಪನೆನಿಸಿದ ಆ ಪ್ರದ್ಯುಮ್ನನು ನಸುನಗುತ್ತಾ ತನ್ನ ಮಾತುಗಳಿಂದ ಆತನ್ನು ಮೈಮರೆಯುವಂತೆ ಮಧುರವಾಗಿ ಮಾತನಾಡಿದನು.

೪೮. ಕ್ಷತ್ರಿಯರಿಗೆಲ್ಲಾ ಆದಿರಾಜನೂ, ಪಿತಾಮಹನೂ ಆದ ನೀನು ನಮಗೆಲ್ಲರಿಗೂ ಹಿರಿಯನು, ನೀನು ನನಗೆ ಪೂಜಾರ್ಹನಾಗಿರುವೆ. ವಯಸ್ಸಿನಿಂದಲೂ ವೃದ್ಧನಾಗಿರುವೆ. ಧರ್ಮದ ಸ್ವರೂಪವನ್ನು ಚೆನ್ನಾಗಿ ಅರಿತು ಅದನ್ನು ನಿರ್ವಹಿಸುತ್ತಿರುವ ನೀನೇ ಪ್ರಶಂಸಾರ್ಹನು.

೪೯. ಓ ರಾಜೇಂದ್ರ! ನಾವೆಲ್ಲರೂ ನಿನ್ನ ಸಂತಾನರು. ಸರ್ವಾಂಶವಲ್ಲಿಯೂ ನಾವು ನಿನ್ನ ಪಾಲನೆಗೂ ಸಂರಕ್ಷಣೆಗೂ ಒಳಪಟ್ಟಿರುವೆವು. ನೀನು ಇಂದಿಗೂ ಸಹ ದಿವ್ಯವಾದ ತಪಸ್ಸನ್ನು ಆಚರಿಸುತ್ತಿರುವೆ. ಆದ್ದರಿಂದ ಜಗತ್ತಿಗೇ ಸುಖವು ಲಭಿಸಿರುವುದು.

ಸ್ಪೃಗ್ಯಸ್ತ್ವತ್ಸದೃಶಃ ಸಾಧುಃ ಪರಮಾತ್ಮಾ ಹರಿಃ ಸ್ವಯಂ ।
ನೃಣಾಮಂತಸ್ತಮೋಹಾರೀ ಸಾಧುರೇವ ನ ಭಾಸ್ಕರಃ　　　　॥ ೫೦ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಭಗವಾನ್ಸಾಕ್ಷಿರ್ನರನುಜ್ಞಾಪ್ಯ ಪ್ರಣಮ್ಯ ತಂ ।
ಪರಿಕ್ರಮ್ಯ ಮುನಿಂ ರಾಜನ್ಸ್ವಯಂ ಭೂಮೌ ಜಗಾಮ ಹ　　　　॥ ೫೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದ ಬಹುಲಾಶ್ವ ಸಂವಾದೇ ಮಾನವದೇಶವಿಜಯೋ ನಾಮ ತ್ರಿಂಶೋಽಧ್ಯಾಯಃ

---

೫೦. ನಿನ್ನಂತಹ ಸಾಧುವು ನಮ್ಮಿಂದ ಅರಿಸಲ್ಪಡಬೇಕೇ ವಿನಾ ತಾನಾಗಿಯೇ ಎಂದಿಗೂ ಸುಲಭವಾಗಿ ದೊರೆಯಲಾರನು. ನೀನು ಪರಮಾತ್ಮನಾದ ಸಾಕ್ಷಾತ್ ಶ್ರೀಹರಿಯೇ ಎಂದು ಭಾವಿಸುವನು. ಮಾನವರ ಹೃದಯದಲ್ಲಿ ಅಡಗಿರುವಂತಹ ಅಜ್ಞಾನವೆಂಬ ಕಗ್ಗತ್ತಲೆಯನ್ನು ಹೋಗಲಾಡಿಸಲು ಸಾಧುವೊಬ್ಬನೇ ಸಮರ್ಥನಲ್ಲದೆ ಸೂರ್ಯನು ಎಂದಿಗೂ ಅಲ್ಲ" ಎಂದನು.

೫೧. "ಓ ಮಿಥಿಲಾ ನರಾಧೀಶ! ಈ ರೀತಿ ನುಡಿದ ಸಂತರ ಪ್ರದ್ಯುಮ್ನನು ಪ್ರದಕ್ಷಿಣಪೂರ್ವಕವಾಗಿ ಆತನಿಗೆ ನಮಸ್ಕರಿಸಿ ಆತನ ಒಪ್ಪಿಗೆಯನ್ನು ಪಡೆದು ಅಲ್ಲಿಂದ ಸ್ವಯಂಭೂ ದೇಶಕ್ಕೆ ತೆರಳಿದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್‌ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಮೂವತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಏಕತ್ರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಇತ್ಥಂ ತು ರಮ್ಯಕಂ ಖಂಡಂ ಜಿತ್ವಾ ಕಾರ್ಷ್ಣಿರ್ಮಹಾಬಲಃ ।
ಸುಮೇರೋಃ ಪೂರ್ವದಿಗ್ಭಾಗೇ ಕೇತುಮಾಲಂ ಜಗಾಮ ಹ ॥ ೧ ॥

ತಸ್ಯ ಸೀಮಾಗಿರಿಃ ಸಾಕ್ಷಾನ್ಮಾಲ್ಯವಾನ್ನಾಮ ಮೈಥಿಲ ।
ಚತುರ್ನಾಮ್ನಾ ಯತ್ರ ಗಂಗಾ ಮಹಾಪಾತಕನಾಶಿನೀ ॥ ೨ ॥

ಗಿರೇರ್ಮಾಲ್ಯವತಃ ಪಾರ್ಶ್ವೇ ಪುರೀ ಮನ್ಮಥಶಾಲಿನೀ ।
ರತ್ನಪ್ರಾಕಾರಸೌಧೈಶ್ಚ ದೇವಧಾನೀವ ಶೋಭಿತಾ ॥ ೩ ॥

ಮೂವತ್ತೊಂದನೆಯ ಅಧ್ಯಾಯವು

೧. ರಾಜೇಂದ್ರ! ಆಲಿಸು. ಈ ರೀತಿಯಾಗಿ ರಮ್ಯಕಖಂಡವನ್ನು ಗೆದ್ದ ನಂತರ ಪ್ರದ್ಯುಮ್ನನು ಮೇರುಪರ್ವತದ ಪೂರ್ವಭಾಗದಲ್ಲಿರುವ ಕೇತುಮಾಲವೆಂಬ ಖಂಡಕ್ಕೆ ಬಂದನು.

೨. ಆ ಖಂಡದಲ್ಲಿ ಮಾಲ್ಯವಂತನೆಂಬ ಸೀಮಾಪರ್ವತವಿರುವುದು. ಮತ್ತು ಮಹಾಪಾತಕಗಳೆಲ್ಲವನ್ನೂ ಪರಿಹರಿಸುವಂತಹ ಗಂಗಾನದಿಯಲ್ಲಿ ನಾಲ್ಕು ಹೆಸರುಗಳಿಂದ ಪ್ರವಹಿಸುವುದು.

೩. ಆ ಮಾಲ್ಯಪರ್ವತದ ಪಾರ್ಶ್ವದಲ್ಲಿ ಮನ್ಮಥಶಾಲಿನಿಯೆಂಬ ಪುರವಿರುವುದು. ಆ ನಗರಿಯು ರತ್ನಮಯವಾದ ಪ್ರಾಕಾರ(ಕೋಟೆ)ಗಳಿಂದಲೂ ಉಪ್ಪರಿಗೆಗಳಿಂದಲೂ ಕಂಗೊಳಿಸುತ್ತಾ ದೇವತೆಗಳ ನಿವಾಸವಾದ ಅಮರಾವತಿಯಂತೆ ಶೋಭಿಸುತ್ತಿರುವುದು.

ಯತ್ರ ವೈ ಪುರುಷಾ ರಾಜನ್ಕಾಮದೇವಸಮಪ್ರಭಾಃ ।
ಶಾರದೇಂದೀವರಶ್ಯಾಮಾಃ ಪದ್ಮಪತ್ರನಿಭೇಕ್ಷಣಾಃ ॥ ೪ ॥

ಪೀತಾಂಬರಧರಾ ನಾರ್ಯಃ ಪುಷ್ಪಹಾರಮನೋಹರಾಃ ।
ಕ್ರೀಡಂತಿ ಕಂದುಕೈರ್ಯತ್ರ ಕಾಮಿನ್ಯೋ ನವಯೌವನಾಃ ॥ ೫ ॥

ಯದ್ದೇಹಾನೋದಪವನೋ ಮತ್ತಾಲಿಕುಲನಾದಿತಃ ।
ಗಂಧೀಕರೋತಿ ಭೂಭಾಗಂ ಸಮಂತಾಚ್ಛತಯೋಜನಂ ॥ ೬ ॥

ತತ್ಪುರೀವಾಸಿನೋ ಲೋಕಾ ನಿರ್ಗತಾಸ್ತೇ ಬಹುಶ್ರುತಾಃ ।
ಜಗುರ್ಯಶಃ ಶ್ರೀಮುರಾರೇಃ ಪ್ರದ್ಯುಮ್ನಸ್ಯಾಪಿ ಶೃಣ್ವತಃ ॥ ೭ ॥

---

೪. ರಾಜೇಂದ್ರಾ! ಅಲ್ಲಿಯ ಪುರುಷರು ಶರತ್ಕಾಲದ ಕನ್ನೈದಿಲೆಯ ಹೂವಿನಂತೆ ಶ್ಯಾಮಲವಾದ ಕಾಂತಿಯಿಂದ ಶೋಭಿಸುತ್ತಿರುವ ಶರೀರಗಳಿಂದಲೂ, ತಾವರೆ ಎಸಳುಗಳನ್ನು ಹೋಲುವಂತಹ ಕಣ್ಣುಗಳಿಂದಲೂ ಕಂಗೊಳಿಸುತ್ತಾ ಮನ್ಮಥನಿಗೆ ಸರಿಸಮಾನವಾದ ಸೌಂದರ್ಯದಿಂದ ಮೆರೆಯುತ್ತಿರುವರು.

೫. ಅಲ್ಲಿರುವ ನಾರಿಯರು ಸದಾಕಾಲದಲ್ಲಿಯೂ ನವಯೌವನದಿಂದ ಮೆರೆಯುತ್ತಾ, ಹೊಂಬಣ್ಣದ ಉಡುಪುಗಳನ್ನು ಧರಿಸಿ ಹೂವಿನ ಹಾರಗಳಿಂದ ಅಲಂಕೃತರಾಗಿ ಚೆಂಡಾಟವನ್ನಾಡುತ್ತಾ ವಿಹರಿಸುತ್ತಿರುವರು.

೬. ಆ ಸ್ತ್ರೀಯರ ಪರಿಮಳ ಭರಿತವಾದ ಶರೀರದ ಮೇಲೆ ಬೀಸಿಬರುವ ಗಾಳಿಯು ತನ್ನಲ್ಲಿರುವ ಸುವಾಸನೆಗೆ ಮನಸೋತು ಝೇಂಕರಿಸುತ್ತಾ ಮುತ್ತಿ ಮುತ್ತಿ ಬರುತ್ತಾ ಇರುವ ದುಂಬಿಗಳಿಂದ ಹಿಂಬಾಲಿಸಲ್ಪಡುತ್ತ ಸುತ್ತಲೂ ನೂರು ಯೋಜನಗಳಷ್ಟು ಪ್ರದೇಶವನ್ನು ಘಮಘಮಿಸುವಂತೆ ಮಾಡುತ್ತಿರುವುದು.

೭. ರಾಜೇಂದ್ರಾ! ಆ ಮನ್ಮಥಶಾಲಿನೀ ಪುರನಿವಾಸಿಗಳಾದ ಜನರೆಲ್ಲರೂ ಮಹಾಪ್ರಾಜ್ಞರಾಗಿದ್ದರು. ಆ ಜನರು ತಮ್ಮೂರಿನಿಂದ ಹೊರಗಡೆಗೆ ಬರುತ್ತಾ ಪ್ರದ್ಯುಮ್ನನಿಗೆ ಕೇಳಿಸುವಂತೆ ಶ್ರೀಹರಿಯ ದಿವ್ಯಚರಿತ್ರವನ್ನು ಗಾನಮಾಡುತ್ತಿದ್ದರು.

॥ ಕೇತುಮಾಲವಾಸಿನ ಊಚುಃ ॥

ಆಸೀತ್ತು ಶೇಷಶಯನೋ ಜಗದಾರ್ತಿಹಾರೀ
ಸಾಕ್ಷಾತ್ಪ್ರಧಾನಪುರುಷೇಶ್ವರ ಆದಿದೇವಃ ।
ಯಃ ಪ್ರಾರ್ಥಿತಃ ಸುರವರೈರ್ಭುವನಾವನಾಯ
ತಸ್ಮೈ ನಮೋ ಭಗವತೇ ಪುರುಷೋತ್ತಮಾಯ ॥ ೮ ॥

ಜಾತೋ ಗತಃ ಪಿತೃಗೃಹಾತ್ಪಿತರೌ ವಿಮೋಕ್ಷ್ಯ
ನಂದಾಲಯಂ ಶಿಶುತನುಃ ಸ ತು ನಂದಪತ್ನ್ಯಾ ।
ಸಂಲಾಲಿತಃ ಸಘೃಣಯಾ ಬಹುಮಂಗಲಶ್ರೀಃ
ಪ್ರಾಣಪ್ರಹಾರಮಕರೋತ್ಕಿಲ ಪೂತನಾಯಾಃ ॥ ೯ ॥

---

೮. ಅವರು ಹಾಡುತ್ತಿದ್ದ ಗೀತವ ವಿಷಯಭೂತವಾದ ವಸ್ತುವಿದು :—

"ಸಾಕ್ಷಾತ್ ಪ್ರಕೃತಿಗಿಂತಲೂ, ಪುರುಷನಿಗಿಂತಲೂ ಮೇಲೆನಿಸಿ ಅವರಿಗೆ ಅಧೀಶನಾಗಿರುತ್ತಾ ದೇವತೆಗಳಲ್ಲೆಲ್ಲಾ ಮೊಟ್ಟಮೊದಲನೆಯವನೆನಿಸಿದ, ಜಗತ್ತಿನ ದುಃಖವನ್ನು ಪರಿಹರಿಸುವುದೇ ತನ್ನ ಮುಖ್ಯ ಕರ್ತವ್ಯವೆಂಬುದಾಗಿ ಭಾವಿಸಿರುವ ಆ ಶೇಷಕಲ್ಪಶಾಯಿಯು ಸಂಕಟಕ್ಕೊಳಗಾಗಿರುವ ಈ ಜಗತ್ತನ್ನು ಪರಿಪಾಲಿಸುವುದಕ್ಕಾಗಿ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟನು. ಇಂತಹ ಪುರುಷೋತ್ತಮನೆನಿಸಿದ ಆ ಭಗವಂತನಿಗೆ ನಮಸ್ಕಾರವನ್ನು ಮಾಡುವೆನು.

೯. ಆ ಭಗವಂತನು ದೇವತೆಗಳ ಪ್ರಾರ್ಥನೆಯಂತೆ ವಸುದೇವ ದೇವಕಿಯರಿಗೆ ಮಗನಾಗಿ ಹುಟ್ಟಿ ಅವರ ಸೆರೆಯನ್ನು ಬಿಡಿಸಿ ತಾನು ಶಿಶುರೂಪದಿಂದ ಅಲ್ಲಿಂದ ಹೊರಟು ನಂದನ ಮನೆಯನ್ನು ಸೇರಿ, ದಯಾಮಯಿಯಾದ ನಂದಪತ್ನಿ ಯಶೋದೆಯ ವಾತ್ಸಲ್ಯಪೂರ್ಣವಾದ ಲಾಲನೆಗಳಿಂದ ಸುಪ್ರೀತನಾದನು. ಬಳಿಕ ಆ ಮಂಗಳಮಯನು ಪೂತನಿಯ ಪ್ರಾಣಗಳನ್ನು ಅಪಹರಿಸಿದನು.

ಬಾಲೋ ಬಭಂಜ ಶಕಟಂ ಶಯಾನಂ ಪ್ರಕುರ್ವ-
ನ್ದೈತ್ಯಂ ನಿಪಾತ್ಯ ಮಹದದ್ಭುತಕಂ ಚ ಪೃಷ್ಠೇ ।
ಮಾತ್ರೇ ಪ್ರದರ್ಶ್ಯ ನಿಜರೂಪಮಲಂಕೃತೋಽಭೂ-
ದ್ಗರ್ಗೇಣ ಸಂಕಥಿತಸುಂದರಭಾಗ್ಯಲಕ್ಷ್ಮೀಃ ॥ ೧೦ ॥

ಸಂಲಾಲಿತೋ ವ್ರಜಜನೈರ್ನವನೀತಚೌರಃ
ಶ್ಯಾಮೋ ಮನೋಹರವಪುರ್ನ್ಯಮಲಃ ಸಬಾಲಃ ।
ಭಿತ್ವಾ ಜಘಾಸ ದಧಿಪಾತ್ರಮತೀವ ದಧ್ನೋ
ವೃಕ್ಷೌ ಬಭಂಜ ಜನನೀಲಘುದಾಮಬದ್ಧಃ ॥ ೧೧ ॥

---

೧೦. ಅದಾದನಂತರ ಆ ಎಳೆಯ ಹುಡುಗನು ಒಂದು ದಿನ ಮಲಗಿದ್ದಾಗ ತನ್ನ ಮೇಲೆ ನುಗ್ಗಲು ಬಂದ ಶಕಟನನ್ನು ತನ್ನ ಪಾದಗಳಿಂದ ಪ್ರಹರಿಸಿದನು. ಆ ಪ್ರಹಾರದಿಂದ ಕೃತ್ರಿಮವಾದ ಶಕಟರೂಪದಿಂದ ಬಂದಿದ್ದ ಅತಿ ಘೋರಾಕಾರದ ರಾಕ್ಷಸನೋರ್ವನು ನೆಲದ ಮೇಲೆ ಬಿದ್ದು ತನ್ನ ಪ್ರಾಣಗಳನ್ನು ನೀಗಿದನು. ಅನಂತರ ಗರ್ಗಾಚಾರ್ಯನಿಂದ ವಿವರಿಸಲ್ಪಟ್ಟಂತಹ ಅಪಾರವೂ ಅತಿ ರಮಣೀಯವೂ ಆದ ಮಹಿಮಾತಿಶಯವುಳ್ಳ ಆ ಬಾಲಕನು ಪ್ರಸಂಗವಶದಿಂದ ತನ್ನ ಬಾಯನ್ನು ತೆರೆದು ತಾಯಿಯಾದ ಯಶೋದೆಗೆ ತನ್ನ ನಿಜರೂಪವನ್ನು ತೋರಿಸಿದನು.

೧೧. ಬಳಿಕ ಆ ಬಾಲಕನು ಶ್ಯಾಮಲವಾದ ಕಾಂತಿಯಿಂದಲೂ ಸೌಕುಮಾರ್ಯದಿಂದಲೂ ಮನೋಹರವಾಗಿರುವ ತನ್ನ ಶಿಶುಶರೀರದಿಂದ ಮೆರೆಯುತ್ತಾ ಗೋಕುಲದಲ್ಲಿ ಗೊಲ್ಲರ ಮನೆಗಳಿಗೆ ನುಗ್ಗಿ ಬೆಣ್ಣೆಯನ್ನು ಕದ್ದು ತಿನ್ನುತ್ತಾ ಆ ಗೋಪಗೋಪಿಯರಿಂದ ಮುದ್ದಿಸಲ್ಪಡುತ್ತಿದ್ದನು. ಅಷ್ಟು ಮಾತ್ರವಲ್ಲದೆ ಆ ತುಂಟ ಹುಡುಗನು ಮೊಸರಿನ ಗಡಿಗೆಗಳನ್ನೊಡೆದು ತನಗಿಷ್ಟಬಂದಂತೆ ಬೇಕಾದಷ್ಟು ಭಕ್ಷ್ಯವನ್ನು ಭುಂಜಿಸಿದನು. ಈ ತುಂಟತನವನ್ನು ತಾಳಲಾರದೆ ತಾಯಿಯಾದ ಯಶೋದೆಯು ಅವನನ್ನು ದಾರದಿಂದ ಬಿಗಿದು ಒರಳಿಗೆ ಕಟ್ಟಿಹಾಕಲು ಆ ಒರಳುಕಲ್ಲನ್ನೇ ಎಳೆದುಕೊಂಡು ಬರುತ್ತಾ ಭಾರಿಯಾದ ಮರಗಳೆರಡರ ನಡುವೆ ನುಗ್ಗಿ ಅವನ್ನು ಬುಡಸಹಿತವಾಗಿ ಉರುಳಿಸಿ ಬಿಟ್ಟನು.

ವೃಂದಾವನೇ ಸವಿಚರನ್ಸಹ ವತ್ಸಗೋಪೈ-
ರ್ವತ್ಸಾಸುರಂ ಚ ವಿನಿಪಾತ್ಯ ಕಪಿತ್ಥವೃಕ್ಷೈಃ ।
ಸದ್ಯೋ ವಿಗೃಹ್ಯ ಖರತುಂಡಪುಟೇ ಚ ದೋರ್ಭ್ಯಾಂ
ದೈತ್ಯಂ ದದಾರ ಸ ಬಕಂ ತೃಣವತ್ತಟಿನ್ಯಾಂ ॥ ೧೨ ॥

ಸಂಧಾರಯಂಶ್ಚ ಶಿಶುಭಿರ್ಬಹುವತ್ಸಸಂಘಾ-
ನ್ವೇಣುಂ ಕ್ವಣನ್ಮದನಮೋಹನವೇಷಭೂದ್ಯಃ ।
ಗೋಪಾನಘಾಸುರಮುಖೇ ಪ್ರಹಿತಾನ್ಸ್ವಗೋಪ
ಗೋಗೋಪವತ್ಸಪವಪುಃ ಸ ಚಕಾರ ಸದ್ಯಃ ॥ ೧೩ ॥

---

೧೨. ಅನಂತರ ಸ್ವಲ್ಪ ವಯಸ್ಸಾದ ಆ ಬಾಲಕನು ಗೊಲ್ಲರ ಹುಡುಗರೊಡನೆಯೂ, ಕರುಗಳ ಮಂದೆಗಳೊಡನೆಯೂ ವೃಂದಾವನದಲ್ಲಿ ಸಂಚರಿಸುತ್ತಾ ಇರುವಾಗ ಕರುವಂತೆ ವೇಷತಾಳಿ ತನ್ನನ್ನು ಕೊಲ್ಲಬಂದಿದ್ದ ವತ್ಸಾಸುರನನ್ನು ಬಳಿಯಲ್ಲಿದ್ದ ಬೇಲದ ಮರಗಳಿಂದಲೇ ಕೊಂದನು. ಇದಾದ ಮೇಲೆ ಒಂದು ದಿವಸ ಯಮುನಾನದಿಯ ತೀರದಲ್ಲಿ ವಿಹರಿಸುತ್ತಾ ಇದ್ದಾಗ ಬಕದ ವೇಷದಿಂದ ಬಂದಿದ್ದ ಘೋರದೈತ್ಯನೊಬ್ಬನನ್ನು ಕ್ಷಣಮಾತ್ರದಲ್ಲಿ ಅವನ ಎರಡು ಕೊಕ್ಕುಗಳನ್ನೂ ಹಿಡಿದು ಹುಲ್ಲಿನ ಕಡ್ಡಿಯಂತೆ ಸೀಳಿಬಿಟ್ಟನು.

೧೩. ಇನ್ನೊಂದು ದಿನ ಕೊಳಲನ್ನು ಕೈಲಿ ಹಿಡಿದು ಇಂಪಾಗಿ ಊದುತ್ತಾ ಗೋಪಬಾಲಕರೊಡನೆಯೂ, ಕರುಗಳ ಮಂದೆಗಳೊಡನೆಯೂ ವಿಹರಿಸುತ್ತಾ ತನ್ನ ಸೌಂದರ್ಯದಿಂದ ಮನ್ಮಥನಂತೆ ಸಕಲರನ್ನೂ ಮೋಹಗೊಳಿಸುತ್ತಿದ್ದನು. ಹೀಗಿರುವಾಗ ಅಘಾಸುರನೆಂಬುವನು ಆ ಗೊಲ್ಲರ ಹುಡುಗನನ್ನು ಬಾಯಿ ತೆರೆದು ನುಂಗುತ್ತಾ ಬರಲು ಆ ಶ್ರೀಕೃಷ್ಣನು ತಾನೂ ಅವನ ಬಾಯಲ್ಲಿ ಪ್ರವೇಶಿಸಿ ಆ ಅಸುರನನ್ನು ಸಂಹರಿಸಿದನು. ಇದೇ ರೀತಿಯಾಗಿ ತನ್ನ ಸ್ವರೂಪವನ್ನು ಸರಿಯಾಗಿ ಅರಿಯದೆ ಬ್ರಹ್ಮನು ಗೊಲ್ಲರ ಹುಡುಗರನ್ನೂ, ಗೋಧನವನ್ನೂ, ಕರುಗಳನ್ನೂ ಅಪಹರಿಸಿದಾಗ ಆ ಕೃಷ್ಣನು ತಾನೇ ಅವರೆಲ್ಲರ ರೂಪವನ್ನೂ ಧರಿಸಿದ್ದನು.

ಕ್ಷೇತ್ರಜ್ಞ ಆತ್ಮಪುರುಷೋ ಭಗವಾನನಂತಃ
ಪೂರ್ಣಃ ಪ್ರಧಾನಪುರುಷೇಶ್ವರ ಆದಿದೇವಃ ।
ಧೃತ್ವಾ ವಪುಃ ಸವಿಹರನ್ವ್ರಜಬಾಲಕೇಷು
ಸಂಮೋಹಯನ್ನಿಧಿಮುಜೋ ವಿಚಚಾರ ಕೃಷ್ಣಃ ॥ ೧೪ ॥

ಚಿಕ್ಷೇಪ ಧೇನುಕಮುಸೌ ಬಲಿನಂ ಬಲೇನ
ತಾಲೇ ಪ್ರಗೃಹ್ಯ ಸಹಸಾ ಫಣಿಂ ಕಾಲಿಯಾಖ್ಯಂ ।
ಬಭ್ರಾಮ ವಹ್ನಿಮಪಿಬದ್ಧನುಜಂ ಪ್ರಲಂಬಂ
ಸದ್ಯೋ ಜಘಾನ ಸಬಲೋ ದೃಢಮುಷ್ಟಿನಾ ಚ ॥ ೧೫ ॥

ಸಂಚಾರಯನ್ವ್ರಜವಧೂರ್ಮಧುರಂ ಕ್ವಣನ್ಯೋ
ವೇಣುಂ ವನೇ ವ್ರಜವಧೂನಿಜಗೀತಕೀರ್ತಿಃ ।
ದಿವ್ಯಾಂಬರಾಣಿ ಸ ಜಹಾರ ವರಾಂಗನಾನಾಂ
ವಿಪ್ರಾಂಗನಾಭಿರಭಿತಃ ಕೃತಭಕ್ತಭೋಜಃ ॥ ೧೬ ॥

---

೧೪. ಈ ರೀತಿಯಾಗಿ ಕ್ಷೇತ್ರಜ್ಞನೂ, ಪ್ರಕೃತಿಗೂ, ಪುರುಷನಿಗೂ ಅಧಿಪತಿಯೆನಿಸಿದವನೂ, ಸಂಪೂರ್ಣಸ್ವರೂಪನೂ ಪೇನತೆಗೀಗೆ ಮೊತ್ತಮೊದಲನೆಯವನೂ ಆದ ಆ ಸಾಕ್ಷಾತ್ ಭಗವಂತನು ಸಾಮಾನ್ಯ ಮನುಷ್ಯಬಾಲಕನಂತೆ ಶರೀರವನ್ನು ಧರಿಸಿ ಗೋಪಾಲಬಾಲಕರೊಡನೆ ವಿಹರಿಸುತ್ತಾ ಬ್ರಹ್ಮನಿಗೂ ಮೋಹವನ್ನು ಕವಿಸಿಬಿಟ್ಟನು.

೧೫. ಆ ಕೃಷ್ಣನು ಇನ್ನೊಮ್ಮೆ ತಾಲವನದಲ್ಲಿ ರಾಸಭರೂಪದಿಂದ ನೆಲಸಿದ್ದ ಬಲಿಷ್ಠನಾದ ಧೇನುಕನೆಂಬ ರಾಕ್ಷಸನನ್ನು ಬಲರಾಮನ ಕೈಯಿಂದ ಕೊಲ್ಲಿಸಿದನು. ಯಮುನಾನದಿಯ ಮಡುವಿನಲ್ಲಿ ಧುಮುಕಿ ಕಾಳಿಯನೆಂಬ ದುಷ್ಟ ಸರ್ಪವನ್ನು ದಮನ ಮಾಡಿದನು. ವೃಂದಾವನದಲ್ಲಿ ಸುತ್ತಾಡುತ್ತಾ ಭಾರಿಯಾದ ಕಾಳ್ಗಿಚ್ಚನ್ನು ನುಂಗಿಬಿಟ್ಟನು. ಮತ್ತೊಂದು ಸಲ ತಮ್ಮೊಡನೆ ಗೋಪವೇಷದಿಂದ ಆಡಲು ಬಂದ ಪ್ರಲಂಬನೆಂಬ ರಾಕ್ಷಸನನ್ನು ಬಲರಾಮನ ದೃಢವಾದ ಮುಷ್ಟಿಪ್ರಹಾರದಿಂದ ಹತನಾಗುವಂತೆ ಮಾಡಿದನು.

೧೬. ಮತ್ತು ತನ್ನ ಕೊಳಲನ್ನು ಇಂಪಾಗಿ ನುಡಿಸುತ್ತಾ ಗೋಪಾಂಗನೆಯರೆಲ್ಲಾ ಕಾಡಿನಲ್ಲಿ ಸಂಚರಿಸುವಂತೆ ಮಾಡಿದನು. ಅವರೆಲ್ಲರಿಂದಲೂ ತನ್ನ ಅಪಾರವಾದ ಅಪ್ಲ್ರಕಾರ್ಯಗಳು ಇಂಪಾಗಿ ಗಾನಮಾಡಲ್ಪಡುತ್ತಿರಲು ವಿಶೇಷವಾಗಿ ಮೆರೆದನು. ಆ ಗೋಪಸ್ತ್ರೀಯರ ಮಹಾರ್ಘವಾದ ವಸ್ತ್ರಗಳನ್ನು ಅಪಹರಿಸಿದನು. ಬ್ರಾಹ್ಮಣಸ್ತ್ರೀಯರು ಪ್ರೀತಿಯಿಂದ ಬಡಿಸಿದ ಭಕ್ಷ್ಯಭೋಜ್ಯಾದಿಗಳನ್ನು ಭೋಜನಮಾಡಿದನು.

ದೇವೇಷು ವರ್ಷತಿ ಪಶೂನ್ಕೃಪಯಾ ರಿರಿಕ್ಷು-
ರ್ಗೋವರ್ಧನಂ ಪ್ರಕೃತಬಾಲ ಇವೋಚ್ಛಿಲೀಂಧ್ರಂ ।
ಬಿಭ್ರದ್ಗಿರಿಂ ಸ ಗಜರಾಡಿವ ಕಂಜಮೇಕ-
ಹಸ್ತೇ ಶಚೀಪತಿವಚೋಭಿರತಃ ಸ್ತುತೋಽಭೂತ್ ॥ ೧೭ ॥

ನಂದಂ ಜುಗೋಪ ವರುಣಾತ್ಸ್ವಜನಾಯ ಲೋಕಂ
ದಿವ್ಯಂ ಪರಂ ಚ ತಮಸೋ ದಿವಿ ದರ್ಶಯಿತ್ವಾ ।
ಶ್ರೀರಾಸಮಂಡಲಗತೋ ವ್ರಜಸುಂದರೀಣಾಂ
ರೇಮೇ ಪುಲಿಂದತಟಿನೀಪ್ರಲಿನೇಽಂಗನಾಭಿಃ ॥ ೧೮ ॥

---

೧೭. ಮತ್ತು ಕೃಷ್ಣನು ತನ್ನ ಉತ್ಸವವನ್ನು ಗೋಪಾಲಕರು ನಿಲ್ಲಿಸಿಬಿಟ್ಟರೆಂಬ ಕೋಪದಿಂದ ಇಂದ್ರನು ಏಳು ದಿನಗಳು ಎಡಬಿಡದೆ ಮಳೆ ಸುರಿಸಿದಾಗ ಮರುಕದಿಂದ ಕೊಚ್ಚಿಹೋಗುತ್ತಿದ್ದ ಗೋಧನವನ್ನೂ ಗೋಪಗೋಪಿಯರನ್ನೂ ರಕ್ಷಿಸಲು ಸಾಮಾನ್ಯ ಬಾಲಕನು ನಾಯಿಕೊಡೆಯನ್ನು ಮೇಲಕ್ಕೆತ್ತಿ ಹಿಡಿಯುವಂತೆಯೂ, ಮದ್ದಾನೆಯು ಸೊಂಡಲಿನಿಂದ ಕಮಲವನ್ನು ತಳೆಯುವಂತೆಯೂ ಲೀಲಾಜಾಲವಾಗಿ ಭಾರಿಯಾದ ಗೋವರ್ಧನಪರ್ವತವನ್ನು ತನ್ನೊಂದು ಕೈಯಿಂದಲೇ ಎತ್ತಿ ಹಿಡಿದುಬಿಟ್ಟನು. ಅನಂತರ ಲಜ್ಜಿತನಾದ ಇಂದ್ರನಿಂದ ಪ್ರಿಯವಾಕ್ಯಗಳಿಂದ ಸ್ತೋತ್ರಮಾಡಲ್ಪಟ್ಟನು.

೧೮. ಮತ್ತು ವರುಣನಿಂದ ಅಪಹರಿಸಲ್ಪಟ್ಟಿದ್ದ ನಂದನನ್ನು ಬಿಡಿಸಿ ಗೋಕುಲಕ್ಕೆ ಕರೆತಂದು ಸಲಹಿದನು. ಅನಂತರ ತನ್ನ ಮಹಿಮಾತಿಶಯವನ್ನು ಕಂಡು ಮುಗ್ಧರಾಗಿದ್ದ ಗೋಪಾಲಕರಿಗೆ ಯಮುನಾನದಿಯಲ್ಲಿ ಸ್ನಾನಮಾಡಿ ಬರುವಂತೆ ಹೇಳಿ, ಅವರಿಗೆ ತಮೋಮಂಡಲವನ್ನು ದಾಟಿ ಸ್ವಯಂಪ್ರಕಾಶಮಯವಾಗಿರುವಂತಹ ತನ್ನ ನಿಜಲೋಕವನ್ನು ಅಂತರಿಕ್ಷದಲ್ಲಿ ತೋರ್ಪಡಿಸಿದನು. ಯಮುನಾನದಿಯ ಸೈಕತ ಪ್ರದೇಶದಲ್ಲಿ ಗೋಪಾಂಗನೆಯರೊಡನೆ ರಾಸಮಂಡಲವನ್ನು ಸೇರಿ ವಿಹರಿಸಿದನು.

ಮಾನಂ ಹರನ್ಮದನಯೌವನಮಾನಿನೀನಾ-
ಮಂತರ್ದಧೇ ವ್ರಜವಧೂನಿಜಗೀತಕೀರ್ತಿಃ ।
ಸ್ರಗ್ವೀ ಮನೋಹರವಪುರ್ವಿರಹಾತುರಾಣಾಂ
ಸಾಕ್ಷಾದ್ಧರಿರ್ಮದನಮೋಹನ ಆವಿರಾಸೀತ್ ॥ ೧೯ ॥

ವೃಂದಾವನೇ ಶಬರರಾಜವರಾಂಗನಾಭಿ-
ರ್ವಿಷ್ಣುರ್ವಿಭೂತಿಭಿರಿವೋದ್ಯುಭಿರಾದಿದೇವಃ ।
ರೇಮೇ ಸ್ತುತಃ ಸುರವರೈಃ ಸ ಚ ರಾಸರಂಗೇ
ಕೇಯೂರಕುಂಡಲಕಿರೀಟವಿಟಂಕವೇಷಃ ॥ ೨೦ ॥

---

೧೯. ಆ ಗೋಪಾಂಗನೆಯರು ಮದನ ವಿಕಾರದಿಂದಲೂ ಯೌವನ ಮದದಿಂದಲೂ ಬೀಗುತ್ತಾ ತಾವೇ ಕೃಷ್ಣನಿಗೆ ಅಚ್ಚುಮೆಚ್ಚಾದ ಸುಂದರಿಯರೆಂದು ಗರ್ವಿತರಾಗಿದ್ದುದನ್ನರಿತು ಆ ಗರ್ವವನ್ನು ಮೊಟಕುಮಾಡಲು ಆ ಕೃಷ್ಣನು ಇದ್ದಕ್ಕಿದ್ದಂತೆಯೇ ಕಣ್ಮರೆಯಾಗಿಬಿಟ್ಟನು. ಅನಂತರ ಅವರೆಲ್ಲರೂ ತನ್ನ ಪ್ರತಿಯೊಂದು ಸಾಹಸಕಾರ್ಯವನ್ನೂ ಸ್ಮರಿಸಿಕೊಳ್ಳುತ್ತಾ ಅದನ್ನೇ ಹಾಡಿನ ರೂಪದಿಂದ ಗಾನಮಾಡುತ್ತಾ ಕಾಡಿನಲ್ಲೆಲ್ಲಾ ತನ್ನನ್ನು ಹುಡುಕಿಕೊಂಡು ಅಲೆಯುತ್ತಿರುವುದನ್ನರಿತು ಆ ವಿರಹಿಣಿಯರ ವಿರಹ ದುಃಖವನ್ನು ಪರಿಹರಿಸುವುದಕ್ಕಾಗಿ ದಿವ್ಯವಾದ ಪುಷ್ಪಹಾರವನ್ನು ಧರಿಸಿ ಮನೋಹರವಾದ ಶರೀರದಿಂದ ಮನ್ಮಥನಂತೆ ಎಲ್ಲರ ಮನಸ್ಸನ್ನೂ ಮೋಹಗೊಳಿಸುತ್ತಾ ಆ ಸುಂದರನು ಗೋಪಾಂಗನೆಯರ ನಡುವೆ ಆವಿರ್ಭವಿಸಿದನು.

೨೦. ಅನಂತರ ವೃಂದಾವನದಲ್ಲಿ ವಿಷ್ಣುವು ತನ್ನ ವಿಭೂತಿಗಳೊಡನೆಯೂ, ಸೂರ್ಯನು ತನ್ನ ಕಾಂತಿಗಳೊಡನೆಯೂ ಮೆರೆಯುವಂತೆ ಗೋಪಾಂಗನೆಯರೊಡನೆ ಸೇರಿ ಕಂಗೊಳಿಸುತ್ತಾ ರಾಸಮಂಡಲವನ್ನು ರಚಿಸಿ ತೋಳುಬಳೆಗಳಿಂದಲೂ, ಕಿರೀಟ ಕುಂಡಲಗಳಿಂದಲೂ ಅಲಂಕೃತನಾಗಿ ತನ್ನ ವೈಭವವನ್ನು ದೇವತೆಗಳೆಲ್ಲರೂ ಕೊಂಡಾಡುತ್ತಿರಲು ಆನಂದದಿಂದ ವಿಹರಿಸಿದನು.

ನಂದಂ ವಿಮೋಕ್ಷ್ಯ ಫಣಿನೇ ಪ್ರದದೌ ಚ ಮೋಕ್ಷಂ
ದಿವ್ಯಂ ಮಣಿಂ ಸ ಚ ಜಹಾರ ಹ ಶಂಖಚೂಡಾತ್ ।
ಗೋಪಸ್ತುತೋ ವೃಷಭರೂಪಧರಂ ಹ್ಯರಿಷ್ಟಂ
ಭೂಮೌ ನಿಪಾತ್ಯ ನಿಜಘಾನ ಕರೇಣ ಶೃಂಗೇ ॥ ೨೧ ॥

ಕಂಸಃ ಪರಂ ಭಯಮವಾಪ ಚ ತೇನ ಕೇಶೀ
ಸಂಪ್ರೇಷಿತಃ ಸಘನಮೇಘವಪುಃ ಪ್ರಚಂಡಃ ।
ಉತ್ಸೃಜ್ಯ ತಂ ಚ ತರಸಾ ಪುನರಾಪತಂತಂ
ಶ್ರೀಬಾಹುನಾ ಮುಖಗತೇನ ಜಘಾನ ಕೃಷ್ಣಃ ॥ ೨೨ ॥

---

೨೧. ಸರ್ಪದ ಬಾಯಿಗೆ ಸಿಕ್ಕಿ ಬಿದ್ದಿದ್ದ ನಂದನನ್ನು ಬಿಡಿಸುವ ನೆವದಿಂದ ಶಾಪವಶದಿಂದ ಸರ್ಪವಾಗಿದ್ದ ಸುದರ್ಶನನೆಂಬ ಗಂಧರ್ವನನ್ನು ಆ ದುಷ್ಟಜನ್ಮದಿಂದ ವಿಮೋಚನವಮಾಡಿದನು. ಅದರಂತೆ ಕುಬೇರನ ಅನುಚರನಾದ ಶಂಖಚೂಡನೆಂಬುವನು ಗೋಪಿಯರನ್ನು ಅಪಹರಿಸಿಕೊಂಡು ಹೋದಾಗ ಅವನನ್ನು ಅಟ್ಟಿಸಿಕೊಂಡು ಹೋಗಿ ಕೊಂದು ಅವನ ತಲೆಯಲ್ಲಿದ್ದ ದಿವ್ಯವಾದ ಮಣಿಯನ್ನು ಅಪಹರಿಸಿ ತಂದನು. ಹೀಗೆಯೇ ಇನ್ನೊಮ್ಮೆ ವೃಷಭಾಕೃತಿಯಿಂದ ತನ್ನೆಡೆಗೆ ನುಗ್ಗಿ ಬಂದ ಅರಿಷ್ಟನೆಂಬ ರಾಕ್ಷಸನನ್ನು ಕೊಂಬಿಗೆ ಕೈಹಾಕಿ ಜಗ್ಗಿಸಿ ನೆಲದ ಮೇಲೆ ನೂಕಿ ಕೆಡಹಿ ಕೊಂದುಬಿಟ್ಟನು. ಇಂತಹ ಅದ್ಭುತ ಕಾರ್ಯಗಳಿಂದ ವಿಸ್ಮಿತರಾದ ಗೋಪಾಲಕರಿಂದ ಸ್ತೋತ್ರವನ್ನು ಮಾಡಲ್ಪಟ್ಟನು.

೨೨. ಕೃಷ್ಣನ ಈ ಸಾಹಸಕಾರ್ಯಗಳೆಲ್ಲವನ್ನೂ ಕೇಳಿ ಭಯಭೀತನಾದ ಕಂಸನು ಕೃಷ್ಣನನ್ನು ಕೊಲ್ಲುವಂತೆ ಕೇಶಿಯೆಂಬ ರಾಕ್ಷಸನನ್ನು ಕಳುಹಿಸಿದನು. ಆ ಕೇಶಿಯು ಕಾರ್ಮೋಡದಂತೆ ಕಪ್ಪಾದ ಮೈಯಿಂದ ನೋಡಿದವರಿಗೆ ಹೆದರಿಕೆಯನ್ನುಂಟುಮಾಡುತ್ತಾ ಕುದುರೆಯ ರೂಪದಿಂದ ಕೃಷ್ಣನ ಮೇಲೆ ಬೀಳಬರಲು ಆ ಕೃಷ್ಣನು ಅವನ ಬಾಯೊಳಕ್ಕೆ ತನ್ನ ತೋಳನ್ನು ತುರುಕಿ ಅವನನ್ನು ಕೊಂದುಬಿಟ್ಟನು.

ಯೋ ನಾರದೇನ ಬಹುವರ್ಣಿತಭಾಗ್ಯಲಕ್ಷ್ಮೀ-
ರ್ವ್ಯೋಮಾಸುರೋ ವ್ಯಸುರಕಾರಿ ಪರೇಣ ಯೇನ ।
ಅಕ್ರೂರವರ್ಣಿತಮಹೋದಯ ಆದಿದೇವೋ
ಗೋಪೀಜನಾತಿವಿರಹಾತುರಚಿತ್ತಚೌರಃ ॥ ೨೩ ॥

ಶ್ವಾಫಲ್ಕಯೇ ಹಿತಕರಾಯ ನಿಜಂ ಸ್ವರೂಪ-
ಮಂತರ್ದಧೇ ಜಲಚಯೇ ಸ ಚ ದರ್ಶಯಿತ್ವಾ ।
ಸ ಪ್ರಾಪ ತತ್ರ ಮಧುರೋಪವನಂ ಪರೇಶೋ
ಗೋಪಾಲಕೈಶ್ಚ ಸಬಲೋ ಮಧುರಾಂ ದದರ್ಶ ॥ ೨೪ ॥

---

೨೩. ಆ ಕೇಶಿಯನ್ನು ಸಂಹರಿಸಿದನಂತರ ನಾರದನು ಬಂದು ಶ್ರೀಕೃಷ್ಣನನ್ನು ಬಹು ವಿಧವಾಗಿ ಕೊಂಡಾಡಿದನು. ಇದಾದನಂತರ ಆ ಕೃಷ್ಣನು ಕೃತ್ರಿಮ ಗೋಪವೇಷದಿಂದ ತನ್ನೊಡನೆ ಆಟವಾಡುತ್ತಾ ಗೋಪಾಲಕರನ್ನು ಕಾಗಿಸುತ್ತಿದ್ದ ಮಯಪುತ್ರನಾದ ವ್ಯೋಮಾಸುರನನ್ನು ಸಂಹರಿಸಿದನು. ಅನಂತರ ಕಂಸಪ್ರೇರಿತನಾದ ಅಕ್ರೂರನು ಗೋಕುಲಕ್ಕೆ ಬರುತ್ತಾ ದಾರಿಯಲ್ಲಿ ಶ್ರೀಕೃಷ್ಣನ ಮಹಿಮೆಯನ್ನು ಮನಸ್ಸಿನಲ್ಲಿ ಪರಿಭಾವಿಸುತ್ತಾ ಬಂದನು. ಆ ರೀತಿ ಆತನಿಂದ ಭಾವಿಸಲ್ಪಟ್ಟ ಆ ಆದಿಪುರುಷನು ಮಧುರೆಗೆ ಹೊರಡಲುದ್ಯುಕ್ತನಾಗಿ ತನ್ನನ್ನು ಅಗಲಲಾರದೆ ದುಃಖದಿಂದ ಪರಿತಪಿಸುತ್ತಿರುವ ಗೋಪಿಯರ ಮನಸ್ಸನ್ನು ಅಪಹರಿಸಿಬಿಟ್ಟನು.

೨೪. ಅನಂತರ ಮಧುರೆಯ ಮಾರ್ಗದಲ್ಲಿ ಶ್ವಫಲ್ಕಪುತ್ರನೂ ತನ್ನ ಪ್ರಿಯ ಸ್ನೇಹಿತನೂ ಆದ ಅಕ್ರೂರನು ಯಮುನಾನದಿಯಲ್ಲಿಳಿದು ಸ್ನಾನಮಾಡಲು ಮುಳುಗಿದಾಗ ಅವನಿಗೆ ತನ್ನ ನಿಜರೂಪವನ್ನು ತೋರಿಸಿ ನೀರಿನಿಂದೀಚೆಗೆ ಬಂದಾಗ ಆ ದಿವ್ಯ ಸ್ವರೂಪವನ್ನು ಮರೆಮಾಡಿ ವಸುದೇವ ಪುತ್ರನಂತೆಯೇ ತೋರಿಸಿದನು. ಅನಂತರ ಮಧುರಾಪಟ್ಟಣದ ಪುರೋದ್ಯಾನವನ್ನು ಸೇರಿದ ಬಳಿಕ ಬಲರಾಮನೊಡನೆಯೂ, ಗೋಪಾಲಕರೊಡನೆಯೂ ಮಧುರಾನಗರವನ್ನು ಸಂದರ್ಶಿಸಿದನು.

ಸ್ವೈರಂ ಚರನ್ಮಧುಪುರೇ ರಜಕಂ ನಿಕೃತ್ಯ
ಕೃಷ್ಣಃ ಪ್ರದಾಯ ಚ ವರಾನಥ ವಾಯಕಾಯ ।
ಮಾಲಾಕೃತಂ ಸಮನುಕಂಪ್ಯ ಚಕಾರ ಕುಬ್ಜಾ –
ಮೃಜ್ವೀಂ ಧನುಶ್ಚ ಸಹಸಾ ನಮಯನ್ಬಭಂಜ ॥ ೨೫ ॥

ದ್ವಾರಿ ದ್ವಿಪಂ ಚ ವಿನಿಹತ್ಯ ನರೇಂದ್ರಮಲ್ಲೌ
ಹತ್ವಾ ಪ್ರಗೃಹ್ಯ ವಿನಿಪಾತ್ಯ ಸ ರಂಗಭೂಮೌ ।
ಕಂಸಂ ಹರಿಸ್ತು ಪಿತರಾವಥ ಮೋಚಯಿತ್ವಾ
ಬಂಧಾನ್ನೃಪಂ ಪುರಿ ಚಕಾರ ಮಹೋಗ್ರಸೇನಂ ॥ ೨೬ ॥

---

೨೫. ಆ ನಗರದಲ್ಲಿ ರಾಜಮಾರ್ಗದಲ್ಲಿ ಬರುತ್ತಿದ್ದಾಗ ದುಷ್ಟನಾದ ಕಂಸನ ಅಗಸನನ್ನು ನಿಗ್ರಹಿಸಿದನು. ನೇಯ್ಗೆಯವನೊಬ್ಬನಿಗೆ ಬೇಕಾದ ವರಗಳನ್ನಿತ್ತನು. ತನಗೆ ಬೇಕಾದ ಹೂಗಳನ್ನಿತ್ತ ಹೂವಾಡಿಗನನ್ನು ಅನುಗ್ರಹಿಸಿದನು. ಗಂಧವನ್ನಿತ್ತ ಕುಬ್ಜೆಯ ಸೊಟ್ಟನ್ನು ತಿದ್ದಿ ಅವಳನ್ನು ನೆಟ್ಟಗೆ ಮಾಡಿದನು. ಕಂಸನ ಧನುಶ್ಶಾಲೆಯನ್ನು ಪ್ರವೇಶಿಸಿ ಅಲ್ಲಿಟ್ಟಿದ್ದ ಧನುಸ್ಸನ್ನು ಹೆದೆಯೇರಿಸಲು ಬಗ್ಗಿಸುತ್ತಾ ಮುರಿದು ಬಿಟ್ಟನು.

೨೬. ಅನಂತರ ಯುದ್ಧವು ನಡೆಯುವ ರಂಗಸ್ಥಳಕ್ಕೆ ಹೋಗುತ್ತಾ ಬಾಗಿಲಿನಲ್ಲಿ ತನ್ನನ್ನು ಕೊಲ್ಲಲು ಬಂದ ಕುವಲಯಾಪೀಡವೆಂಬ ಮದ್ದಾನೆಯನ್ನು ಕೊಂದು ತನ್ನೊಡನೆ ಕಾಳಗಮಾಡಲು ಬಂದ ಚಾಣೂರಮುಷ್ಟಿಕರನ್ನು ನೆಲದ ಮೇಲೆ ಕೆಡಹಿ ಮತ್ತೇಳದಂತೆ ಮಾಡಿದನು. ಬಳಿಕ ಅಲ್ಲಿಯೇ ಉನ್ನತವಾದ ಪೀಠದಲ್ಲಿ ಕುಳಿತಿದ್ದ ದುರಾತ್ಮನಾದ ಕಂಸನನ್ನು ಕುಳಿತಿದ್ದ ಪೀಠದಿಂದ ಕೆಳಗೆಳೆದು ಹಾಕಿ ಅವನನ್ನು ಸಂಹರಿಸಿದನು. ಅನಂತರ ತನ್ನ ತಂದೆತಾಯಿಗಳಾದ ವಸುದೇವ ದೇವಕಿಯರನ್ನು ಸೆರೆಯಿಂದ ಬಿಡಿಸಿ ತಾತನಾದ ಉಗ್ರಸೇನನನ್ನು ರಾಜನನ್ನಾಗಿ ಮಾಡಿದನು.

ನಂದಂ ಪ್ರಸಾದ್ಯ ಬಹುದಾನಕರೋ ಯದೂಸ್ತಾ-
ನಾಹೂಯ ತರ್ಪ್ಯ ಸುಧನೈಶ್ಚ ನಿವೇದಯಿತ್ವಾ ।
ವಿದ್ಯಾಮಧೀತ್ಯ ಸ ದದೌ ಪ್ರಮೃತಂ ಹ್ಯಪತ್ಯಂ
ಕೃತ್ವಾ ವಧಂ ದನುಜಪಂಚಜನಸ್ಯ ಕೃಷ್ಣಃ ॥ ೨೭ ॥
ಗೋಪೀಜನಾನ್ಸಮನುಗೃಹ್ಯ ಸ ಚೋದ್ಧವೇನಾ-
ಕ್ರೂರೇಣ ಹಾಸ್ತಿನಪುರೇ ತ್ವಥ ಪಾಂಡುಪುತ್ರಾನ್ ।
ಕೃಷ್ಣೋ ವಿಜಿತ್ಯ ಬಲಿನಂ ಚ ಜರಾಸುತಂ ಚ
ಭಸ್ಮೀಚಕಾರ ಮುಚುಕುಂದದೃಶಾತ್ಮಕಾಲಂ ॥ ೨೮ ॥
ನಿರ್ಮಾಯ ಚಾದ್ಭುತಪುರಂ ಸ್ಥಿತಯೇಽತ್ರ ಕೃಷ್ಣೋ
ನಿನ್ಯೇ ಚ ಕುಂಡಿನಪುರಾತ್ಕಿಲ ಭೀಷ್ಮಕನ್ಯಾಂ ।
ಪುತ್ರೇಣ ಶಂಬರಮರಿಂ ನಿಜಘಾನ ಚಾದಾ-
ದ್ರಾಜ್ಞೇ ಮಣಿಂ ಯುಧಿ ವಿಜಿತ್ಯ ಸ ಋಕ್ಷರಾಜಂ ॥ ೨೯ ॥

---

೨೭. ಅನಂತರ ಆ ಕೃಷ್ಣನು ನಂದನನ್ನು ನಾನಾವಿಧವಾದ ವಸ್ತ್ರಾಭರಣಗಳನ್ನಿತ್ತು ಸಮಾಧಾನಪಡಿಸಿ ಗೋಕುಲಕ್ಕೆ ಕಳುಹಿಸಿದನು. ಬಳಿಕ ಸಾಂದೀಪನೆಂಬ ಗುರುವಿನ ಬಳಿಯಲ್ಲಿ ಶಾಸ್ತ್ರಗಳನ್ನು ಅಭ್ಯಾಸಿಸಿ ಆ ಗುರುವಿನ ಪುತ್ರನನ್ನು ಪ್ರಭಾತ ಕ್ಷೇತ್ರದಲ್ಲಿ ಅಪಹರಿಸಿದ್ದ ಪಂಚಜನನೆಂಬ ರಾಕ್ಷಸನನ್ನು ಕೊಂದು ಮೃತನಾಗಿದ್ದ ಆ ಗುರುಪುತ್ರನನ್ನು ಬದುಕಿಸಿ ಜೀವಸಹಿತವಾಗಿ ಗುರುದಕ್ಷಿಣೆಯಂತೆ ಸಲ್ಲಿಸಿದನು.

೨೮. ಅನಂತರ ಆ ಕೃಷ್ಣನು ನಂದಗೋಕುಲದಲ್ಲಿ ವಿರಹಕಾತುರರಾಗಿರುವ ಗೋಪಿಕಾಸ್ತ್ರೀಯರನ್ನು ಸಂತೈಸಲು ಉದ್ಧವನನ್ನು ಹಸ್ತಿನಾವತಿಯಲ್ಲಿರುವ ಪಾಂಡವರನ್ನು ನೋಡಿಕೊಂಡು ಬರುವಂತೆ ಆ ಅಕ್ರೂರನನ್ನು ಕಳುಹಿಸಿದನು. ತನ್ನ ಮೇಲೆ ದಂಡೆತ್ತಿಬಂದ ಜರಾಸಂಧನನ್ನು ಸೋಲಿಸಿದನು. ತನ್ನನ್ನು ಅಟ್ಟಿಸಿಕೊಂಡು ಬಂದೆನೆಂದು ಹಿಗ್ಗುತ್ತಿದ್ದ ಕಾಲಯವನನನ್ನು ಮುಚುಕುಂದನ ದೃಷ್ಟಿಪಾತದಿಂದ ಕೊಲ್ಲಿಸಿದನು.

೨೯. ಅನಂತರ ಯಾದವರ ನಿವಾಸಕ್ಕೆಂದು ಸಮುದ್ರದಲ್ಲಿ ಅದ್ಭುತವಾದ ನಗರವನ್ನು ನಿರ್ಮಿಸಿದನು. ಕುಂಡಿನನಗರದಿಂದ ಭೀಷ್ಮಕರಾಜಪುತ್ರಿಯಾದ ರುಕ್ಮಿಣಿಯನ್ನು ಅಪಹರಿಸಿ ಮದುವೆಯಾದನು. ತನ್ನ ಪುತ್ರನಾದ ಪ್ರದ್ಯುಮ್ನನ ಕೈಯಿಂದ ಶತ್ರುವಾದ ಶಂಬರಾಸುರನನ್ನು ಕೊಲ್ಲಿಸಿದನು. ಬಾಹುಯುದ್ಧದಲ್ಲಿ ಋಕ್ಷರಾಜನಾದ ಜಾಂಬವಂತನನ್ನು ಗೆದ್ದು ಸ್ಯಮಂತಕಮಣಿಯನ್ನು ರಾಜನಾದ ಉಗ್ರಸೇನನಿಗೆ ಅರ್ಪಿಸಿದನು.

ಭಾಮಾಪತಿಃ ಸ ಚ ಶಿರಃ ಶತಧನ್ವನಸ್ತು
ಹೃತ್ವಾ ಹ್ಯುವಾಹ ಸವಿತುಶ್ಚ ಸುತಾಂ ಪರೇಶಃ ।
ಆವಂತ್ಯರಾಜತನುಜಾಂ ಸ ಜಹಾರ ಕೃಷ್ಣಃ
ಸತ್ಯಾಂ ಸ್ವಯಂವರಗೃಹೇ ವೃಷಭಾನ್ದಮಿತ್ವಾ ॥ ೩೦ ॥

ಕೈಕೇಯರಾಜತನುಜಾಂ ಸ ಜಹಾರ ಭದ್ರಾಂ
ಶ್ರೀಲಕ್ಷ್ಮಣಾಮುಖಿಲಭದ್ರಪತೇಃ ಸುತಾಂ ಚ ।
ಭೌಮಂ ವಿಜಿತ್ಯ ಸಬಲಂ ಯುಧಿ ಶಸ್ತ್ರಸಂಘೈ-
ರ್ನಿನ್ಯೇ ಚ ಷೋಡಶಸಹಸ್ರವರಾಂಗನಾಶ್ಚ ॥ ೩೧ ॥

ಭಾಮೇಕ್ಷಯಾ ಸುರತರುಂ ಚ ಸಭಾಂ ಸುಧರ್ಮಾಂ
ಶಕ್ರಂ ವಿಜಿತ್ಯ ಸ ಜಹಾರ ಕಲತ್ರಮಿತ್ರಃ ।
ಯೋ ರುಕ್ಮಿಣಂ ಚ ನಿಜಘಾನ ಬಲೇನ ಗೋಷ್ಠ್ಯಾಂ
ಬಾಣಸ್ಯ ಬಾಹುನಿಚಯಂ ಶತಧಾಚ್ಛಿನತ್ಸಃ ॥ ೩೨ ॥

---

೩೦. ಅನಂತರ ಸತ್ಯಭಾಮೆಯನ್ನು ಮದುವೆಯಾದ ಶ್ರೀಕೃಷ್ಣನು ಶತಧನ್ವನೆಂಬ ರಾಜನನ್ನು ಕೊಂದು ಸೂರ್ಯಪುತ್ರಿಯಾದ ಕಾಳಿಂದಿಯನ್ನು ಮದುವೆಯಾದನು. ಅವಂತಿರಾಜನ ಮಗಳಾದ ಸತ್ಯೆಯೆಂಬುವಳನ್ನು ಸ್ವಯಂವರ ಮಂಟಪದಲ್ಲಿ ಪಣವಾಗಿಟ್ಟಿದ್ದ ದುಷ್ಟ ವೃಷಭಗಳನ್ನು ನಿಗ್ರಹಿಸಿ ಜಯಿಸಿಕೊಂಡು ಬಂದನು.

೩೧. ಕೇಕಯರಾಜನ ಮಗಳಾದ ಭದ್ರೆಯನ್ನೂ, ಅಬಲಭದ್ರನ ಪುತ್ರಿಯಾದ ಲಕ್ಷ್ಮಣೆಯೆಂಬುವಳನ್ನು ಅಪಹರಿಸಿ ಮದುವೆಯಾದನು. ಸೈನ್ಯಸಮೇತನಾದ ನರಕಾಸುರನನ್ನು ಗೆದ್ದು ಅವನ ಬಳಿಯಿದ್ದ ಹದಿನಾರುಸಾವಿರ ಸ್ತ್ರೀಯರನ್ನು ಬಿಡಿಸಿ ತಂದು ಅವರೆಲ್ಲರನ್ನೂ ಮದುವೆಯಾದನು.

೩೨. ಸತ್ಯಭಾಮೆಯ ಅಪೇಕ್ಷೆಯಂತೆ ಅವಳೊಡನೆ ದೇವಲೋಕಕ್ಕೆ ಹೋಗಿ ಇಂದ್ರನನ್ನು ಗೆದ್ದು ಪಾರಿಜಾತವೃಕ್ಷವನ್ನೂ ಸುಧರ್ಮಾ ಎಂಬ ದೇವಸಭೆಯನ್ನೂ ದ್ವಾರಕೆಗೆ ತಂದನು. ಬಲರಾಮನಿಂದ ಹತ್ತು ಜನರು ಸೇರಿದ್ದಾಗ ಅಕ್ಷಕ್ರೀಡಾ ವ್ಯಾಜ್ಯದಿಂದ ದುಷ್ಟನಾದ ರುಕ್ಮಿಯನ್ನು ಕೊಲ್ಲಿಸಿದನು. ಬಾಣನ ಸಾವಿರ ತೋಳುಗಳನ್ನು ನೂರಾರು ತುಂಡುಗಳಾಗಿ ಕತ್ತರಿಸಿದನು.

ತೇನೋಗ್ರಸೇನಕ್ರತವೇಽಥ ಜಗದ್ವಿಜೇತುಂ
ಸಂಪ್ರೇಷಿತೋ ನಿಜಸುತಃ ಕಿಲ ಶಂಬರಾರಿಃ ।
ಯೋಽತ್ರಾಗತೋ ಭುವಿ ವಿಜಿತ್ಯ ನೃಪಾನ್ಸಮಸ್ತಾ‌ನ್
ಶ್ರೀಕೇತುಮಾಲಪತಯೇ ಚ ನಮೋಽಸ್ತು ತಸ್ಮೈ ॥ ೩೩ ॥

॥ ಶ್ರೀ ನಾರದ ಉವಾಚ ॥

ಪ್ರಸನ್ನಃ ಶ್ರೀಹರಿಃ ಕಾರ್ಷ್ಣಿಃ ಕುಂಡಲೇ ಕಟಕಾನಿ ಚ ।
ಹೀರಾನ್ಮಣೀನ್ಗಜಾನಶ್ವಾನ್ದದೌ ತೇಭ್ಯೋ ಮಹಾಮನಾಃ ॥ ೩೪ ॥

ಪುರೇ ಮನ್ಮಥಶಾಲಿನ್ಯಾ ವ್ಯತಿಸಂವತ್ಸರೋ ಮಹಾನ್ ।
ಪ್ರದ್ಯುಮ್ನಾಯ ಬಲಿಂ ಪ್ರಾದಾನ್ನಮಸ್ಕೃತ್ಯ ಪ್ರಜಾಪತಿಃ ॥ ೩೫ ॥

ಅಥ ಕಾರ್ಷ್ಣಿರ್ಮಹಾಬಾಹುರ್ದಿವ್ಯಂ ಕಾಮವನಂ ಯಯೌ ।
ಜನೈರಗಮ್ಯಂ ಗಮ್ಯಂ ಚ ಪ್ರಜಾಪತಿದುಹಿತೃಭಿಃ ॥ ೩೬ ॥

---

೩೩. ಆ ಶ್ರೀಕೃಷ್ಣನಿಂದಲೇ ಉಗ್ರಸೇನನ ಯಜ್ಞದ ಸಲುವಾಗಿ ತನ್ನ ಮಗನಾದ ಪ್ರದ್ಯುಮ್ನನು ಕಳುಹಿಸಲ್ಪಟ್ಟಿರುವನು. ಆತನು ಭೂಮಂಡಲದಲ್ಲಿರುವ ಸಮಸ್ತ ರಾಜರನ್ನೂ ಜಯಿಸಿ ಇಲ್ಲಿಗೆ ಬಂದಿರುವನು. ಪರಮಪುರುಷನಾದ ಆ ಶ್ರೀಕೃಷ್ಣನಿಗೂ ಕೇತುಮಾಲಖಂಡದ ಅಧಿಪತಿಯಾದ ಪ್ರದ್ಯುಮ್ನನಿಗೂ ನಮಸ್ಕಾರವು.

೩೪. ಓ ಬಹುಲಾಶ್ವರಾಜೇಂದ್ರ! ಈ ರೀತಿಯಾಗಿ ಆ ಪುರನಿವಾಸಿಗಳು ನುಡಿಯುತ್ತಿರುವುದನ್ನು ಕೇಳಿ ಆ ಕೃಷ್ಣಪುತ್ರನು ಕುಂಡಲಗಳನ್ನೂ, ಕಡಗಗಳನ್ನೂ, ಆನೆ ಕುದುರೆಗಳನ್ನೂ ಆ ಪುರನಿವಾಸಿಗಳಿಗೆ ಉದಾರವಾಗಿ ಕೊಟ್ಟನು. ಅನಂತರ,

೩೫. ಆ ಮನ್ಮಥಶಾಲಿನಿಯೆಂಬ ನಗರದಲ್ಲಿದ್ದ ವ್ಯತಿಸಂವತ್ಸರನೆಂಬ ಪ್ರಜಾಪತಿಯು ಆ ಊರಿನಿಂದ ಹೊರಟು ಪ್ರದ್ಯುಮ್ನನಿದ್ದಲ್ಲಿಗೆ ಬಂದು ನಮಸ್ಕರಿಸಿ ಅತನಿಗೆ ಕಾಣಿಕೆಯನ್ನೊಪ್ಪಿಸಿದನು.

೩೬. ಬಳಿಕ ಮಹಾಬಾಹುವಾದ ಆ ಪ್ರದ್ಯುಮ್ನನು ಮತ್ತಾರಿಗೂ ಪ್ರವೇಶಿಸಲು ಸಾಧ್ಯವಿಲ್ಲದೆ, ಆ ವ್ಯತಿಸಂವತ್ಸರನೆಂಬ ಪ್ರಜಾಪತಿಯ ಕುಮಾರಿಯರಿಗೆ ಮಾತ್ರವೇ ಪ್ರವೇಶವು ದೊರೆಯುತ್ತಿದ್ದ ದಿವ್ಯವಾದ ಕಾಮವನವೆಂಬ ಉಪವನಕ್ಕೆ ತೆರಳಿದನು.

ಸುಂದರಂ ಮನ್ಮಥಾಕ್ರೀಡಂ ವೃತಂ ಕಾಮಾಸ್ತ್ರತೇಜಸಾ ।
ನಾರೀಣಾಂ ಯತ್ರ ಪತತಿ ವ್ಯಸುರ್ಗರ್ಭೋ ನ ವತ್ಸರಂ ॥ ೩೭ ॥

ತದಾ ಪರಾತ್ಕಾಮವನಾದ್ವಿನಿರ್ಗತಃ
ಶ್ರೀಪುಷ್ಪಧನ್ವಾ ನೃಪ ಪಂಚಸಾಯಕಃ ।
ಪೀತಾಂಬರಃ ಶ್ಯಾಮತನುರ್ಮನೋಹರ-
ಸ್ತತಾನ ಕೋದಂಡಗುಣಧ್ವನಿಃ ಸ್ಮರಃ ॥ ೩೮ ॥

ಯದ್ಬಾಣತೋ ಯಾದವಪುಂಗವಾಃ ಸ್ವತಃ
ಸಸೈನಿಕಾಃ ಸಾಶ್ವಗಜಾಃ ಪದಾತಿಭಿಃ ।
ನಿಪೇತುರಾರಾತ್ಕಿಲ ಕಾಮವಿಹ್ವಲಾ-
ಸ್ತದ್ಬಾಣವೇಗಸ್ಯ ನ ವರ್ಣನಂ ಭವೇತ್ ॥ ೩೯ ॥

---

೩೭. ರಾಜೇಂದ್ರ! ರಮಣೀಯವಾದ ಆ ಮದನೋದ್ಯಾನವು ಸುತ್ತಲೂ ಮನ್ಮಥನ ಅಸ್ತ್ರತೇಜಸ್ಸಿನಿಂದ ಆವರಿಸಲ್ಪಟ್ಟಿರುವುದು. ಆ ಉದ್ಯಾನವನ್ನು ಪ್ರವೇಶಿಸುತ್ತಲೇ, ಗರ್ಭವತಿಯರಾದ ಸ್ತ್ರೀಯರ ಗರ್ಭಗಳು ನಿರ್ಜೀವವಾಗಿ ಕೆಳಗೆ ಬಿದ್ದು ಹೋಗುವುವು.

೩೮. ಓ ಮಿಥಿಲಾಧಿಪಾ! ಆಗ ಆ ಕಾಮವನದಿಂದ ಹೊಂಬಣ್ಣದ ಪಟ್ಟೆ ಮಡಿಯಿಂದಲೂ ಶ್ಯಾಮಲವಾದ ಶರೀರಕಾಂತಿಯಿಂದಲೂ ಶೋಭಿಸುತ್ತಿದ್ದ ಮನ್ಮಥನು ಪುಷ್ಪಮಯವಾದ ಧನುಸ್ಸಿನಿಂದಲೂ ಪಂಚಬಾಣಗಳಿಂದಲೂ ಒಡಗೂಡಿ ಹೊರಗಡ ಬಂದು ತನ್ನ ಧನುಸ್ಸನ್ನು ಟಂಕಾರಮಾಡಿದನು.

೩೯. ಆತನ ಬಾಣದಿಂದ ಯದುವೀರರೆಲ್ಲರೂ ತಮ್ಮ ಸೈನಿಕರೊಡನೆಯೂ, ಆನೆ ಕುದುರೆಗಳೊಡನೆಯೂ, ಮದನವಿಕಾರಕ್ಕೊಳಗಾಗಿ ತೂರಾಡುತ್ತಾ ದೂರದಲ್ಲಿ ಬಿದ್ದುಹೋದರು. ಆ ಬಾಣದ ವೇಗವನ್ನು ಬಣ್ಣಿಸಲು ಯಾರಿಗೆ ತಾನೇ ಸಾಧ್ಯವಾದೀತು ?

ಅಥಾಶು ಕಾರ್ಷ್ಣಿರ್ಜಗದೀಶ್ವರೇಶ್ವರಃ
ಪ್ರಲೀನತಾಂ ಪ್ರಾಪ ಜಲೇ ಜಲಂ ಯಥಾ ।
ಸದ್ಯೋ ವಿಸಿಸ್ಮ್ಯುರ್ಯದವಃ ಸಸೈನಿಕಾ
ವಿಜ್ಞಾಯ ಪೂರ್ಣಂ ನೃಪ ರುಕ್ಮಿಣೀಸುತಂ ॥ ೪೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಮನ್ಮಥದೇಶವಿಜಯೋ ನಾಮೈಕತ್ರಿಂಶೋಽಧ್ಯಾಯಃ

---

೪೦. ರಾಜೇಂದ್ರ ! ಆ ಕೂಡಲೇ ಜಗತ್ಪ್ರಭುವಾದ ಆ ಕೃಷ್ಣಪುತ್ರನು ನೀರಿನಲ್ಲಿ ನೀರು ಸೇರಿಹೋಗುವಂತೆ ಆ ಕಾಮದೇವನಲ್ಲಿಯೇ ಐಕ್ಯವಾಗಿಬಿಟ್ಟನು. ಆಗ ಸೇನಾ ಸಮೇತರಾದ ಯದುವೀರರೆಲ್ಲರೂ ರುಕ್ಮಿಣಿಯ ಪುತ್ರನಾದ ಆ ಪ್ರದ್ಯುಮ್ನನು ಪೂರ್ಣ ಸ್ವರೂಪನೆಂದು ಅರಿತು ವಿಶೇಷವಾಗಿ ಆಶ್ಚರ್ಯವನ್ನು ತಾಳಿದರು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀನಾರದ
ಬಹುಲಾಶ್ವ ಸಂವಾದದಲ್ಲಿ ಮನ್ಮಥದೇಶವಿಜಯವೆಂಬ
ಮೂವತ್ತೊಂದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ದ್ವಾತ್ರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಕಾರ್ಷ್ಣಿರ್ಮಹಾಬಾಹುಃ ಕೇತುಮಾಲಂ ವಿಜಿತ್ಯ ಸಃ ।
ಭದ್ರಾಶ್ವಂ ಪ್ರಯಯೌ ಧನ್ವೀ ಖಂಡಂ ಯೋಗಸಮೃದ್ಧಿಮತ್ ॥ ೧ ॥

ಯಸ್ಯ ಸೀಮಾಗಿರಿಃ ಸಾಕ್ಷಾದ್ರಾಜತೇ ಗಂಧಮಾದನಃ ।
ಸೀತಾನಾಮ್ನಾ ಯತ್ರ ಗಂಗಾ ವಹಂತೀ ಪಾಪನಾಶಿನೀ ॥ ೨ ॥

ಮೂವತ್ತೆರಡನೆಯ ಅಧ್ಯಾಯವು

೧. ರಾಜೇಂದ್ರ ! ಕೇಳು. ಅನಂತರ ಆ ಮಹಾಬಾಹುವಾದ ಪ್ರದ್ಯುಮ್ನನು ತಾನು ಜಯಿಸಿದ ಕೇತುಮಾಲಖಂಡದಿಂದ ಹೊರಟು ಯೌಗಿಕವಾದ ಮಹಿಮೆಯಿಂದ ಪ್ರಾಪ್ತವಾಗುವಂತಹ ಅಧಿಕೈಶ್ವರ್ಯದಿಂದ ಮೆರೆಯುತ್ತಿರುವ ಭದ್ರಾಶ್ವಖಂಡವನ್ನು ಕುರಿತು ಪ್ರಯಾಣಮಾಡಿದನು.

೨. ಆ ಖಂಡಕ್ಕೆ ಎಲ್ಲೆಕಟ್ಟಾಗಿ ಗಂಧಮಾಧನವೆಂಬ ಒಂದು ಪರ್ವತವಿರುವುದು. ಅಲ್ಲಿ ಸೀತೆಯೆಂಬ ಹೆಸರಿನಿಂದ ಸಕಲರ ಪಾಪಗಳನ್ನೂ ಪರಿಹರಿಸುತ್ತಾ ಗಂಗಾನದಿಯು ಪ್ರವಹಿಸುತ್ತಿರುವುದು.

ವೇದಕ್ಷೇತ್ರೇ ಮಹಾತೀರ್ಥೇ ಸರ್ವಪಾಪಪ್ರಮೋಚನೇ ।
ಹಯಗ್ರೀವೋ ಮಹಾಬಾಹುರ್ಯತ್ರ ಸಂನಿಹಿತೋ ಹರಿಃ ॥ ೩ ॥

ಭದ್ರಶ್ರವಾ ಧರ್ಮಸುತಸ್ತಸ್ಯ ಸೇವಾಂ ಕರೋತಿ ಹಿ ।
ಗಂಗಾತೀರಸ್ಯ ಪುಲಿನೇ ಪ್ರದ್ಯುಮ್ನಸ್ಯ ಮಹಾತ್ಮನಃ ॥
ಬಭೂವುಃ ಶಿಬಿರವ್ಯೂಹಾ ಹೇಮಾಂಬರಮನೋಹರಾಃ ॥ ೪ ॥

ಭದ್ರಶ್ರವಾ ಧರ್ಮಸುತೋ ಮಹಾತ್ಮಾ
ಭದ್ರಾಶ್ವದೇಶಾಧಿಪತಿರ್ಮಹೌಜಾಃ ।
ಪ್ರದಕ್ಷಿಣೀಕೃತ್ಯ ನನಾಮ ಭಕ್ತ್ಯಾ
ದತ್ವಾ ಬಲಿಂ ಕೃಷ್ಣಸುತಾಯ ಚಾಹ ॥ ೫ ॥

---

೩. ಆ ಖಂಡದಲ್ಲಿ ಸಮಸ್ತವಾದ ಪಾಪಗಳನ್ನೂ ಪರಿಹರಿಸುವಂತಹ ಮಹಾತೀರ್ಥವೆನಿಸಿದ ವೇದಕ್ಷೇತ್ರದಲ್ಲಿ ಭಗವಂತನಾದ ಶ್ರೀಹರಿಯು ಹಯಗ್ರೀವ ರೂಪದಿಂದ ನೆಲಸಿರುವನು.

೪. ಆ ಹಯಗ್ರೀವ ಮೂರ್ತಿಯನ್ನು ಭದ್ರಪುತ್ರನಾದ ಭದ್ರಶ್ರವಸ್ಸೆಂಬುವನು ಸರ್ವದಾ ಸೇವಿಸುತ್ತಿರುವನು. ಇಂತಹ ಆ ಭದ್ರಾಶ್ವಖಂಡಕ್ಕೆ ಬಂದ ಪ್ರದ್ಯುಮ್ನನು ಆ ಗಂಗಾನದಿಯ ಮರಳಿನ ರಾಶಿಯಿಂದ ಮನೋಹರವಾಗಿರುವ ಕರೆಯಲ್ಲಿ ತನ್ನ ಸೇನೆಯನ್ನು ಬೀಡುಬಿಟ್ಟನು. ಆ ಸೇನಾಶಿಬಿರವು ಹೊಂಬಣ್ಣದ ಬಟ್ಟೆಗಳಿಂದ ರಚಿತವಾದ ಗೂಡಾರಗಳಿಂದ ಶೋಭಿಸುತ್ತಿತ್ತು.

೫. ಮಹಾತೇಜಸ್ವಿಯೂ, ಭದ್ರಾಶ್ವಖಂಡದ ಅಧಿಪತಿಯೂ ಧರ್ಮಪುತ್ರನೂ ಆದ ಆ ಭದ್ರಶ್ರವಸ್ಸೆಂಬ ಮಹಾನುಭಾವನು ಕೃಷ್ಣಪುತ್ರನಾದ ಪ್ರದ್ಯುಮ್ನನನ್ನು ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸಿ ಭಕ್ತಿಯಿಂದ ಕಪ್ಪಕಾಣಿಕೆಗಳನ್ನಿತ್ತನಂತರ ಆತನನ್ನಿಂತೆಂದನು.

॥ ಭದ್ರಶ್ರವಾ ಉವಾಚ ॥

ತ್ವಂ ಸಾಕ್ಷಾದ್ಭಗವಾನ್ಪೂರ್ಣಃ ಪರಿಪೂರ್ಣತಮಃ ಸ್ವಯಂ ।
ಸಾಧೂನಾಂ ರಕ್ಷಣಾರ್ಥಾಯ ಜಗಜ್ಜೇತುಂ ವಿನಿರ್ಗತಃ ॥ ೬ ॥

ಭಗವಂಶ್ಶಂಬರೋ ನಾಮ ದೈತ್ಯಃ ಪೂರ್ವಂ ಜಿತಸ್ತ್ವಯಾ ।
ತಸ್ಯ ಭ್ರಾತಾ ಮಹಾದುಷ್ಟಃ ಕನೀಯಾನುತ್ಕಚಃ ಸ್ಮೃತಃ ॥ ೭ ॥

ಗೋಕುಲೇ ಕೃಷ್ಣಚಂದ್ರೇಣ ಮಾರಿತಃ ಶಕಟೆಸ್ಥಿತಃ ।
ತಸ್ಯ ಭ್ರಾತಾ ಮಹಾದುಷ್ಟೋ ಜ್ಯೇಷ್ಠೋಽಸ್ತಿ ಶಕುನಿರ್ಬಲೀ ॥ ೮ ॥

ಜೇತುಂ ಯೋಗ್ಯಸ್ತ್ವಯಾ ದೇವ ನಾನ್ಯೈರಪಿ ಕದಾಚನ ।

॥ ಪ್ರದ್ಯುಮ್ನ ಉವಾಚ ॥

ಕಸ್ಯ ವಂಶೇ ಸಮುದ್ಭೂತಃ ಶಕುನಿರ್ನಾಮ ದೈತ್ಯರಾಟ್ ॥ ೯ ॥

---

೬. ನೀನು ಸಾಕ್ಷಾತ್ ಭಗವಂತನ ಪೂರ್ಣಾವತಾರವು. ಪರಿಪೂರ್ಣತಮನಾದ ಆ ಶ್ರೀಹರಿಯೂ ನೀನೇ ಆಗಿರುವೆ. ಸತ್ಪುರುಷರನ್ನು ಸಲಹುವ ಸಲುವಾಗಿಯೇ ಈ ರೀತಿಯಾಗಿ ಜಗತ್ತನ್ನು ಜಯಿಸಲೂ ಬಂದಿರುವೆ.

೭. ಹೇ ಭಗವನ್! ಹಿಂದೆ ನೀನು ಶಂಬರನೆಂಬ ದೈತ್ಯನನ್ನು ಜಯಿಸಿ ಬಂದಿದ್ದೆಯಲ್ಲವೆ? ಆತನ ಕೊನೆಯ ತಮ್ಮನೇ ಉತ್ಕಚನೆಂಬುವನು.

೮. ಆ ಮಹಾದುಷ್ಟನು ಶಕಟರೂಪದಿಂದ ಕೃಷ್ಣನನ್ನು ಕೊಲ್ಲಲು ಗೋಕುಲಕ್ಕೆ ಬಂದು ಆತನಿಂದ ಹತನಾಗಿ ಪ್ರಾಣವನ್ನು ಬಿಟ್ಟನು. ಆ ಶಂಬರನ ದೊಡ್ಡ ಅಣ್ಣನಾದ ಮಹಾಬಲಶಾಲಿಯಾದ ಶಕುನಿಯೆಂಬ ದೈತ್ಯನೂ ಬಹು ದುಷ್ಟನಾದವನೇ,

೯. "ಆತನನ್ನು ಜಯಿಸಲು ನೀನೊಬ್ಬನೇ ಅರ್ಹನು. ಮತ್ತಾರಿಗೂ ಆವನನ್ನು ಜಯಿಸಲು ಎಂದೆಂದಿಗೂ ಸಾಧ್ಯವಿಲ್ಲವು" ಎಂದನು. ರಾಜೇಂದ್ರ! ಹೀಗೆ ಆತನು ನುಡಿದುದನ್ನು ಕೇಳಿ ಪ್ರದ್ಯುಮ್ನನು "ಈ ದೈತ್ಯನಾದ ಶಕುನಿಯು ಯಾವ ವಂಶದಲ್ಲಿ ಹುಟ್ಟಿದವನು?

ಕಸ್ಮಿನ್ಪುರೇ ಸ್ಥಿತಿಸ್ತಸ್ಯ ಬಲಂ ಕಿಂ ವದ ಧರ್ಮಜ ।

॥ ಭದ್ರಶ್ರವಾ ಉವಾಚ ॥

ಕಶ್ಯಪಸ್ಯ ಮುನೇರ್ದಿತ್ಯಾಮಾದಿದೈತ್ಯೌ ಬಭೂವತುಃ　　॥ ೧೦ ॥

ಹಿರಣ್ಯಕಶಿಪುರ್ಜ್ಯೇಷ್ಠೋ ಹಿರಣ್ಯಾಕ್ಷೋಽನುಜಸ್ತಥಾ ।
ಹಿರಣ್ಯಾಕ್ಷಸ್ಯ ತಸ್ಯಾಪಿ ಬಭೂವುರ್ನವಪುತ್ರಕಾಃ　　॥ ೧೧ ॥

ಶಕುನಿಃ ಶಂಬರೋ ಹೃಷ್ಟೋ ಭೂತಸಂತಾಪನೋ ವೃಕಃ ।
ಕಾಲನಾಭೋ ಮಹಾನಾಭೋ ಹರಿಶ್ಮಶ್ರುಸ್ತಥೋತ್ಕಚಃ　　॥ ೧೨ ॥

ದೇವಕೂಟಾದ್ದಕ್ಷಿಣಾ ಹಿ ಜಠರಸ್ಯ ಗಿರೇರಧಃ ।
ಪುರೀ ಚಂದ್ರಾವತೀ ನಾಮ ದೈತ್ಯಾನಾಂ ದುರ್ಗಮಂಡಿತಾ　　॥ ೧೩ ॥

---

೧೦. ಇವನು ವಾಸವಾಗಿರುವುದು ಎಲ್ಲಿ? ಅವನ ಬಲವೆಂತಹುದು? ಇದೆಲ್ಲವನ್ನೂ ನೀನು ತಿಳಿಸಬೇಕು" ಎಂದು ಪ್ರಶ್ನಿಸಲು ಆ ಧರ್ಮಪುತ್ರನಾದ ಭದ್ರಶ್ರವಸ್ಸು ಈ ರೀತಿ ಹೇಳತೊಡಗಿದನು:—ಕಶ್ಯಪಮಹಾಮುನಿಗೆ ದಿತಿಯಲ್ಲಿ ಮೊತ್ತಮೊದಲನೆಯದಾಗಿ ದೈತ್ಯರಿಬ್ಬರು ಹುಟ್ಟಿದರು.

೧೧. ಅವರಿಬ್ಬರಲ್ಲಿ ಹಿರಣ್ಯಕಶಿಪುವು ದೊಡ್ಡವನು. ಹಿರಣ್ಯಾಕ್ಷನು ಚಿಕ್ಕವನು. ಕಿರಿಯವನಾದ ಹಿರಣ್ಯಾಕ್ಷನಿಗೆ ಒಂಬತ್ತು ಮಂದಿ ಮಕ್ಕಳಾದರು.

೧೨-೧೩. ಶಕುನಿ, ಶಂಬರ, ಹೃಷ್ಟ, ಭೂತಸಂತಾಪನ, ವೃಕ, ಕಾಲನಾಭ, ಮಹಾನಾಭ, ಹರಿಶ್ಮಶ್ರು, ಉತ್ಕಚ ಎಂಬ ಆ ಹಿರಣ್ಯಾಕ್ಷಪುತ್ರರು ದೇವಕೂಟವೆಂಬ ಪರ್ವತಕ್ಕೆ ತೆಂಕಲಾಗಿ ಜಠರವೆಂಬ ಪರ್ವತದ ಅಡಿಯಲ್ಲಿ ಕೋಟೆಕೊತ್ತಲಗಳಿಂದ ಸುರಕ್ಷಿತವಾಗಿದ್ದ ಚಂದ್ರಾವತಿಯೆಂಬ ನಗರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ವಾಸವಾಗಿರುವರು.

ಶಕುನಿಸ್ತತ್ರ ವಸತಿ ಭ್ರಾತೃಭಿಃ ಷಡ್ಭಿರಾವೃತಃ ।
ಯದಾ ಯದಾ ಹಿ ಮುನಿಭಿರ್ಯಜ್ಞಾರಂಭೋ ಭವೇದಿಹ ॥ ೧೪ ॥

ತದಾ ತದಾ ಹಿ ತೇನಾಪಿ ಭಂಗೋಽಕಾರಿ ಯದೂತ್ತಮ ।
ಯಸ್ಮಾಚ್ಚ ಸಂತಿ ಶಕ್ರಾದ್ಯಾ ಉದ್ವಿಗ್ನಾಃ ಸಾತ್ವತಾಂ ಪತೇ ॥ ೧೫ ॥

ಜೇತುಂ ಯೋಗ್ಯಸ್ತ್ವಯಾ ದೇವ ದೇವಧುಗ್ದೈತ್ಯಪುಂಗವಃ ।
ತ್ವಯಾ ಜಿತಂ ಜಗತ್ಸರ್ವಂ ಭಕ್ತಾನಾಂ ಶಾಂತಿಕಾರಣಾತ್ ॥ ೧೬ ॥

ಪ್ರದ್ಯುಮ್ನಾಯ ನಮಸ್ತುಭ್ಯಂ ಚತುರ್ವ್ಯೂಹಾಯ ತೇ ನಮಃ ।
ಗೋವಿಪ್ರಸುರಸಾಧೂನಾಂ ಛಂದಸಾಂ ಪತಯೇ ನಮಃ ॥ ೧೭ ॥

---

೧೪. ಆ ರಾಜಧಾನಿಯಲ್ಲಿ ಹಿರಿಯನಾದ ಶಕುನಿಯು ತನ್ನ ಆರು ಮಂದಿ ತಮ್ಮಂದಿರೊಡನೆ ವಾಸವಾಗಿದ್ದುಕೊಂಡು ಮಹರ್ಷಿಗಳು ಯಜ್ಞಗಳನ್ನು ಮಾಡಲು ಆರಂಭಿಸಿದಾಗಲೆಲ್ಲಾ,

೧೫. ಆ ಯಜ್ಞಗಳನ್ನು ಕೆಡಿಸುತ್ತಿರುವನು. ಈ ರೀತಿ ಆ ಶಕುನಿಯು ಮಾಡುವಂತಹ ಯಜ್ಞವಿಘಾತಕರವಾದ ವರ್ತನೆಗಳಿಂದ ಇಂದ್ರಾದಿ ದೇವತೆಗಳೆಲ್ಲರೂ ಕಳವಳಕ್ಕೀಡಾಗಿರುವರು.

೧೬. ಓ ದೇವಾ! ದೇವವೈರಿಯಾದ ಆ ದೈತ್ಯಾಧಮನನ್ನು ನೀನೇ ಜಯಿಸಬೇಕು. ಏಕೆಂದರೆ ನಿನ್ನ ಭಕ್ತರಿಗೆಲ್ಲಾ ನೆಮ್ಮದಿಯುಂಟಾಗಲೆಂದೇ ನೀನು ಜಗತ್ತನ್ನೆಲ್ಲಾ ಜಯಿಸುತ್ತಾ ಬಂದಿರುವೆ.

೧೭. ಓ ಪ್ರದ್ಯುಮ್ನಾ! ನಿನಗೆ ನಮಸ್ಕಾರವು! ಚತುರ್ವ್ಯೂಹಾಕೃತಿಯನ್ನು ತಾಳಿದ ನಿನಗೆ ನಮಸ್ಕಾರವು! ಗೋಬ್ರಾಹ್ಮಣರಿಗೂ, ಸಾಧುಸಜ್ಜನರಿಗೂ, ವೇದಗಳಿಗೂ ಪ್ರಭುವಾದ ನಿನಗೆ ನಮಸ್ಕಾರವು.ಎಂದನು

॥ ಶ್ರೀ ನಾರದ ಉವಾಚ ॥

ಏವಂ ಸಂಪ್ರಾರ್ಥಿತಃ ಸಾಕ್ಷಾತ್ಪ್ರದ್ಯುಮ್ನೋ ಭಗವಾನ್ಹರಿಃ ।
ದೇವಾಯ ಭದ್ರಶ್ರವಸೇ ಮಾ ಭೈಷ್ಟೇತ್ಯಭಯಂ ದದೌ ॥ ೧೮ ॥

ಅಥ ಕಾರ್ಷ್ಣಿರ್ಮಹಾಬಾಹುಃ ಸ್ವಸೈನ್ಯಪರಿವಾರಿತಃ ।
ಪುರೀಂ ಚಂದ್ರಾವತೀಂ ಗಂತುಂ ಪ್ರಸ್ಥಾನಮಕರೋತ್ತದಾ ॥ ೧೯ ॥

ಮನುಷ್ಯಾಚ್ಛಕುನಿಃ ಶ್ರುತ್ವಾ ಪ್ರಾಗಚ್ಛಂತಂ ಯದೂತ್ತಮಂ ।
ದೈತ್ಯಾನಾಂ ಸದಸಿ ಪ್ರಾಹ ಶೂಲಮುದ್ಯಮ್ಯ ದೈತ್ಯರಾಟ್ ॥ ೨೦ ॥

॥ ಶಕುನಿರುವಾಚ ॥

ದಿಷ್ಟ್ಯಾ ದಿಷ್ಟ್ಯಾ ಹಿ ಶತ್ರುರ್ಮೇ ಪ್ರದ್ಯುಮ್ನೋಽತ್ರ ಸಮಾಗತಃ ।
ಜೇತುಂ ಯೋಗ್ಯೋ ಮಯಾ ದೈತ್ಯಾ ಭ್ರಾತುರ್ಮಯ್ಯಸ್ತಿ ಪ್ರಾಗೃಣಂ॥೨೧॥

---

೧೮. ಓ ಬಹುಲಾಶ್ವರಾಜೇಂದ್ರ! ಹೀಗೆಂಬುದಾಗಿ ಆ ಭದ್ರಶ್ರವಸ್ಸಿನಿಂದ ಪ್ರಾರ್ಥಿಸಲ್ಪಟ್ಟ ಭಗವಂತನಾದ ಪ್ರದ್ಯುಮ್ನನು ಆತನಿಗೆ ಹೆದರಬೇಡವೆಂಬುದಾಗಿ ಅಭಯವನ್ನಿತ್ತನು.

೧೯. ಕೂಡಲೇ ಆ ಮಹಾಬಾಹುವು ತನ್ನ ಸೈನ್ಯದೊಡನೆ ಚಂದ್ರಾವತೀನಗರಕ್ಕೆ ಅಭಿಮುಖನಾಗಿ ಪ್ರಯಾಣಮಾಡಿದನು.

೨೦. ರಾಜೇಂದ್ರ! ಈ ಸಮಯದಲ್ಲಿ ದೈತ್ಯಾಧಿಪತಿಯಾದ ಆ ಶಕುನಿಯು ನನ್ನಿಂದ (ನಾರದ) ಆ ಪ್ರದ್ಯುಮ್ನನು ದಂಡೆತ್ತಿ ಬರುತ್ತಿರುವ ಸುದ್ದಿಯನ್ನು ತಿಳಿದು ತುಂಬಿದ ದೈತ್ಯಸಭೆಯಲ್ಲಿ ತನ್ನ ಶೂಲವನ್ನು ಝಳಪಿಸುತ್ತಾ,

೨೧. "ಭಾಗ್ಯವಶದಿಂದ ನನ್ನ ಶತ್ರುವಾದ ಪ್ರದ್ಯುಮ್ನನೇ ಇಲ್ಲಿಗೆ ಬಂದಿರುವನು. ಅವನನ್ನು ಜಯಿಸಬೇಕಾದುದು ಅತ್ಯಗತ್ಯವಾದುದು. ಎಲೈ ದೈತ್ಯರಿರಾ! ನನ್ನ ತಮ್ಮನ ಸಾಲವಿನ್ನೂ ಉಳಿದಿರುವುದು.

ಭ್ರಾತಾ ಮೇ ಶಂಬರೋ ನಾಮ ಯೇನ ಪೂರ್ವಂ ಚ ಮಾರಿತಃ ।
ತಸ್ಮಾತ್ತ್ವಂ ಘಾತಯಿಷ್ಯಾಮಿ ಪ್ರದ್ಯುಮ್ನಂ ಯದುಭಿಃ ಸಹ ॥ ೨೨ ॥

ತಸ್ಮಾದ್ಯಾತ ಬಲಂ ತಸ್ಯ ವಿಧ್ವಸ್ತಂ ಕುರುತಾಸುರಾಃ ।
ಪಶ್ಚಾತ್ಪುರಂದರಾಧೀಶಂ ಘಾತಯಿಷ್ಯಾಮಿ ನಿರ್ಜರಾನ್ ॥ ೨೩ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ವಚಸ್ತಸ್ಯ ದೈತ್ಯೋ ಹೃಷ್ಟೋ ಮಹಾಬಲಃ ।
ಆಯಯೌ ಸಂಮುಖೇ ಯೋದ್ಧುಂ ದೈತ್ಯಕೋಟಿಸಮಾವೃತಃ ॥ ೨೪ ॥

ಪ್ರದ್ಯುಮ್ನೋ ಭಗವಾನ್ಸಾಕ್ಷಾಲ್ಲೀಲಾಮಾನುಷವಿಗ್ರಹಃ ।
ಮಹತ್ಯಾಃ ಸರ್ವಸೇನಾಯಾ ಗೃಧ್ರವ್ಯೂಹಂ ಚಕಾರ ಹ ॥ ೨೫ ॥

---

೨೨. ಶಂಬರಾಸುರನೆಂದು ಪ್ರಖ್ಯಾತನಾಗಿದ್ದ ಆ ನನ್ನ ತಮ್ಮನನ್ನು ಹಿಂದೆ ಈ ದುಷ್ಟನು ಕೊಂದಿರುವನು. ಆದುದರಿಂದ ನಾನು ಈಗ ಈತನನ್ನು ಅವನ ಸೇನೆಯೊಡನೆ ಕೊಲ್ಲಬೇಕೆಂದಿರುವೆನು.

೨೩. ಆದುದರಿಂದ ಎಲೈ ಅಸುರರಿರಾ! ನೀವೆಲ್ಲರೂ ಹೊರಟು ಆತನ ಸೇನೆಯನ್ನು ಕೊಂದು ಬನ್ನಿರಿ. ಬಳಿಕ ನಾನು ದೇವತೆಗಳನ್ನೂ ಅವರಿಗೆ ಅಧಿಪತಿಯಾದ ಇಂದ್ರನನ್ನೂ ಕೊಂದುಬರುವೆನು" ಎಂದು ನುಡಿದನು.

೨೪. ರಾಜೇಂದ್ರ! ಈ ರೀತಿಯಾಗಿ ಆ ದೈತ್ಯೇಂದ್ರನಾದ ಶಕುನಿಯು ನುಡಿಯುತ್ತಲೇ ಹೃಷ್ಟನೆಂಬ ಮಹಾಬಲಶಾಲಿಯಾದ ದೈತ್ಯನು ಒಂದು ಕೋಟಿ ದೈತ್ಯಸೈನ್ಯದೊಡನೆ ಹೊರಟು ಯುದ್ಧಮಾಡಲು ಆ ಪ್ರದ್ಯುಮ್ನಸೇನೆಗೆ ಅಭಿಮುಖವಾಗಿ ಬಂದನು.

೨೫. ಆಗ ಮನುಷ್ಯನಂತೆ ಲೀಲೆಯನ್ನು ನಟಿಸುತ್ತಿರುವ ಸಾಕ್ಷಾದ್ಭಗವತ್ಸ್ವರೂಪನಾದ ಆ ಪ್ರದ್ಯುಮ್ನನು ತನ್ನ ಆ ಭಾರಿ ಸೇನೆಯನ್ನು ಗೃಧ್ರದಂತೆ ವ್ಯೂಹವನ್ನು ರಚಿಸಿ ನಿಲ್ಲಿಸಿದನು.

ಗೃಧ್ರಚಂಚೌ ವರ್ತಮಾನೋಽನಿರುದ್ಧೋ ಧನ್ವಿನಾಂ ವರಃ ।
ಗ್ರೀವಾಯಾಮರ್ಜುನಃ ಪೃಷ್ಠೇ ಸಾಂಬೋ ಜಾಂಬವತೀಸುತಃ ॥ ೨೬ ॥

ಪಾದಯೋರುಭಯೋ ರಾಜನ್ನಾಸ್ಥಿತೌ ದೀಪ್ತಿಮದ್ಗದೌ ।
ಕಾರ್ಷ್ಣಿಃ ಸಾಕ್ಷಾತ್ತದುದರೇ ಪುಚ್ಛೇ ಭಾನುರ್ಹರೇಃ ಸುತಃ ॥ ೨೭ ॥

ಬಭೂವ ತುಮುಲಂ ಯುದ್ಧಂ ಸೀತಾಗಂಗಾತಟೇ ನೃಪ ।
ದೈತ್ಯಾನಾಂ ಯದುಭಿಃ ಸಾರ್ಧಂ ಭಧ್ವೀನಾಮಂಘ್ರಿಭಿರ್ಯಥಾ ॥ ೨೮ ॥

ಬಾಣೈಸ್ತ್ರಿಶೂಲೈರ್ಮುಸಲೈರ್ಮುದ್ಗರೈಸ್ತೋಮರಯಷ್ಟಿಭಿಃ ।
ವವರ್ಷುರ್ದಾನವಾಃ ಸರ್ವೇ ಧಾರಾಭಿರಿವ ವಾರಿದಾಃ ॥ ೨೯ ॥

---

೨೬. ಗೃಧ್ರಾಕೃತಿಯಲ್ಲಿ ನಿಂತಿದ್ದ ಆ ಸೇನೆಯ ಕೊಕ್ಕಿನ ಭಾಗದಲ್ಲಿ ಧನುರ್ಧರಾಗ್ರೇಸರನಾದ ಅನಿರುದ್ಧನು ನಿಂತನು. ಕುತ್ತಿಗೆಯ ಪ್ರದೇಶದಲ್ಲಿ ಅರ್ಜುನನು ನೆಲಸಿದ್ದನು. ಬೆನ್ನಿನ ಭಾಗದಲ್ಲಿ ಜಾಂಬವತೀಪುತ್ರನಾದ ಸಾಂಬನು ನೆಲಸಿದನು.

೨೭. ಪಾದಗಳೆರಡರ ಸ್ಥಾನಗಳಲ್ಲಿ ದೀಪ್ತಿಮಂತನೂ ಗದನೂ ನೆಲಸಿದರು. ಉದರ ಭಾಗದಲ್ಲಿ ಸ್ವಯಂ ಪ್ರದ್ಯುಮ್ನನೇ ನಿಂತನು. ಪುಚ್ಛಪ್ರದೇಶದಲ್ಲಿ ಶ್ರೀಕೃಷ್ಣಪುತ್ರನಾದ ಭಾನುವು ನಿಂತುಕೊಂಡನು.

೨೮. ಅನಂತರ ಸೀತಾ ಎಂಬ ಹೆಸರಿನಿಂದ ಹರಿಯುತ್ತಿರುವ ಆ ಗಂಗಾನದಿಯ ದಡದಲ್ಲಿ ಆ ದೈತ್ಯರಿಗೂ, ಯದುವೀರರಿಗೂ ಪರಸ್ಪರ ಕೈಕೈ ಕಲೆತು ಭಧ್ವಿಗಳಿಗೂ ಅಂಘ್ರಿಗಳಿಗೂ ನಡೆದಂತೆ ಭಾರಿಯಾದ ತುಮುಲ ಯುದ್ಧವು ಜರುಗಿತು.

೨೯. ಆಗ ದಾನವರು ಬಾಣ, ತ್ರಿಶೂಲ, ಒನಕೆ, ಮುದ್ಗರ, ತೋಮರ, ಯಷ್ಟಿ ಮುಂತಾದ ಆಯುಧಗಳನ್ನು ಆ ಯದುಸೈನ್ಯದ ಮೇಲೆ ಮೋಡಗಳು ಮಳೆಯನ್ನು ಸುರಿಸುವಂತೆ ಮೇಲೆ ಮೇಲೆ ವರ್ಷಿಸುತ್ತಾ ಬಂದರು.

ರುರೋಧ ಸೂರ್ಯಂ ಚಾಕಾಶಂ ಸೈನ್ಯಪಾದರಜೋ ಭೃಶಂ ।
ರಾಜನ್ಸಬಾಣಂ ಚ ಯಥಾ ವಾರಿದಾಃ ಪ್ರಾವೃಡುದ್ಭವಾಃ ॥ ೩೦ ॥

ವೃಕೋ ಹರ್ಷೋಽನಿಲೋ ಗೃಧ್ರೋ ವರ್ಧನೋ ನಾದ ಏವ ಚ ।
ಮಹಾಶಃ ಪವನೋ ವಹ್ನಿಃ ಕ್ಷುದಿಶ್ಚ ದಶಮಃ ಸ್ಮೃತಃ ॥ ೩೧ ॥

ಮಿತ್ರವಿಂದಾತ್ಮಜಾ ಹ್ಯೇತೇ ಯುಯುಧುರ್ದಾನವೈಃ ಸಹ ।
ಬಾಣಾಂಧಕಾರೇ ಸಂಜಾತೇ ವೃಕೋ ನಾಮ ಹರೇಃ ಸುತಃ ॥ ೩೨ ॥

ಸರ್ವೇಷಾಮಗ್ರತಃ ಪ್ರಾಪ್ತೋ ಧನುಷ್ಟಂಕಾರಯನ್ಮುಹುಃ ।
ದೈತ್ಯಾನ್ಬಿಭೇದ ಬಾಣೌಘೈಃ ಕುವಾಕ್ಯೈರ್ಮಿತ್ರತಾಮಿವ ॥ ೩೩ ॥

ಗಜಾನ್ರಥಾನ್ಹಯಾನ್ವೀರಾನ್ಪಾತಯಾಮಾಸ ಭೂತಲೇ ।
ನಿಪೇತುಶ್ಛಿನ್ನಕವಚಾಶ್ಛಿನ್ನಚಾಪಾ ರಣಾಂಗಣೇ ॥ ೩೪ ॥

---

೩೦. ರಾಜೇಂದ್ರ ! ಆ ಸೈನ್ಯಗಳ ತುಳಿತದಿಂದ ಧೂಳು ಮೇಲಕ್ಕೆದ್ದು ವರ್ಷಾಕಾಲದ ಮೇಘಗಳ ಸಮೂಹದಂತೆ ಆಕಾಶವನ್ನು ಕವಿದು ಸೂರ್ಯನನ್ನೂ ಮುಚ್ಚಿಬಿಟ್ಟಿತು.

೩೧–೩೨. ಆಗ ಮಿತ್ರವಿಂದೆಯೆಂಬ ಪಟ್ಟಮಹಿಷಿಯಲ್ಲಿ ಶ್ರೀಕೃಷ್ಣನಿಗೆ ಜನಿಸಿದ ವೃಕ, ಹರ್ಷ, ಅನಿಲ, ಗೃಧ್ರ, ವರ್ಧನ, ನಾದ, ಮಹಾಶ, ಪವನ, ವಹ್ನಿ, ಕ್ಷುಧಿ ಎಂಬ ಹತ್ತು ಮಂದಿ ಕುಮಾರರು ದೈತ್ಯರೊಡನೆ ಹೋರಾಡತೊಡಗಿದರು. ಆ ಯುದ್ಧದಲ್ಲಿ ಎಲ್ಲೆಲ್ಲೂ ಬಾಣಗಳಿಂದ ಕಗ್ಗತ್ತಲೆಯು ಕವಿದಂತಾಗಲು ವೃಕನೆಂಬ ಆ ಶ್ರೀಕೃಷ್ಣಪುತ್ರನು,

೩೩. ತನ್ನ ಬಿಲ್ಲಿನ ಹೆದೆಯನ್ನು ಝಣಝಣನೆಂದು ಮಿಡಿಯುತ್ತಾ ಎಲ್ಲರಿಗೂ ಮುಂದೆ ಬಂದು ನಿಂತು ತಾನೊಬ್ಬನೇ ಹೋರಾಡುತ್ತಾ ಕೆಟ್ಟಮಾತುಗಳಿಂದ ಮೈತ್ರಿಯನ್ನು ಮುರಿಯುವಂತೆ ಆ ದೈತ್ಯಸೇನೆಯನ್ನು ಕತ್ತರಿಸುತ್ತಾ ಬಂದನು.

೩೪. ಆತನ ಬಾಣದ ಏಟಿನಿಂದ ಆನೆಗಳೂ, ಕುದುರೆಗಳೂ ಕಾಲಾಳುಗಳೂ, ತೇರುಗಳೂ ನೆಲಕ್ಕೆ ಉರುಳಿದುವು. ಕೆಲವು ದೈತ್ಯವೀರರು ತೊಟ್ಟಿದ್ದ ಉಕ್ಕಿನ ಕವಚಗಳೂ ಹಿಡಿದಿದ್ದ ಬಿಲ್ಲುಗಳೂ ಕತ್ತರಿಸಿಹೋಗಿ ತಾವೂ ನೆಲದ ಮೇಲೆ ಉರುಳಿದರು.

ವೃಕಬಾಣೈರ್ಭಿನ್ನಪಾದಾ ವೃಕ್ಷಾ ವಾತಹತಾ ಇವ ।
ಅಧೋಮುಖಾ ಊರ್ಧ್ವಮುಖಾ ಬಾಣೌಘೈಶ್ಛಿನ್ನಬಾಹವಃ　　॥ ೩೫ ॥

ರೇಜೂ ರಣಾಂಗಣೇ ರಾಜನ್ಭಾಂಢವ್ಯೂಹಾ ಇವಾಹತಾಃ ।
ದ್ವಿಧಾಭೂತಾ ಗಜಾ ಬಾಣೈಃ ಪತಿತಾ ರಣಮಂಡಲೇ　　॥ ೩೬ ॥

ವಿರೇಜುಶ್ಛುರಿಕಾವಿದ್ಧಾಃ ಕೂಶ್ಮಾಂಡಶಕಲಾ ಇವ ।
ತದೈವ ಹೃಷ್ಟಃ ಸಂಪ್ರಾಪ್ತಃ ಸಿಂಹಾರೂಢೋ ಮಹಾಬಲಃ　　॥ ೩೭ ॥

ಬಿಭೇದ ಕವಚಂ ತಸ್ಯ ಸಿಂಜಿನೀಂ ದಶಭಿಃ ಶರೈಃ ।
ಚತುರ್ಭಿಶ್ಚತುರೋ ವಾಹಾನ್ದ್ವಾಭ್ಯಾಂ ಸೂತಂ ಧ್ವಜಂ ತಥಾ　　॥ ೩೮ ॥

---

೩೫. ಕೆಲವು ಮಂದಿ ಯೋಧರು ಆತನ ಬಾಣಗಳಿಂದ ಕಾಲುಗಳು ಕತ್ತರಿಸಲ್ಪಟ್ಟು ಬಿರುಗಾಳಿಗೆ ಸಿಕ್ಕಿದ ಭಾರಿ ಮರಗಳಂತೆ ಕೆಳಕ್ಕೆ ಕೆಡಹಲ್ಪಟ್ಟರು. ಕೆಳಮುಖನಾಗಿ ಕೆಲಮಂದಿ ಬಿದ್ದರು. ಕೆಲವು ಮಂದಿ ಮೇಲ್ಮುಖನಾಗಿ ಉರುಳಿದರು. ಕೆಲವು ಮಂದಿಗೆ ಕೈಗಳೇ ಕತ್ತರಿಸಿಹೋದುವು.

೩೬–೩೭. ಓ ರಾಜೇಂದ್ರ! ಈ ರೀತಿಯಾಗಿ ಆ ವೃಕನ ಬಾಣಗಳ ಏಟಿನಿಂದ ಆ ಯುದ್ಧರಂಗದಲ್ಲಿ ಎಲ್ಲೆಲ್ಲೂ ದೈತ್ಯವೀರರು ಮುರಿದುಹೋದ ಮಡಕೆಗಳಂತೆ ಛಿನ್ನಭಿನ್ನರಾಗಿ ಬಿದ್ದಿದ್ದರು. ಮತ್ತು ಎರಡೆರಡು ತುಂಡಾಗಿ ಕತ್ತರಿಸಲ್ಪಟ್ಟ ಮದ್ದಾನೆಗಳು ಚಾಕುವಿನಿಂದ ಹೆಚ್ಚಲ್ಪಟ್ಟ ಕುಂಬಳಕಾಯಿ ಹೋಳುಗಳಂತೆ ಶೋಭಿಸಿದುವು. ಆ ಸಮಯಕ್ಕೆ ಸರಿಯಾಗಿ ಹೃಷ್ಟನೆಂಬ ದೈತ್ಯನು ಸಿಂಹದ ಮೇಲೆ ಕುಳಿತು ಅಲ್ಲಿಗೆ ಬಂದನು.

೩೮. ಬಂದವನೇ ಹತ್ತು ಬಾಣಗಳಿಂದ ಆ ವೃಕನ ಕವಚವನ್ನೂ ನಾಲ್ಕು ಬಾಣಗಳಿಂದ ಬಿಲ್ಲಿನ ಹೆದೆಯನ್ನೂ ಕತ್ತರಿಸಿದುದಲ್ಲದೆ ನಾಲ್ಕು ಕುದುರೆಗಳನ್ನು ಎರಡು ಬಾಣಗಳಿಂದಲೂ ಸಾರಥಿಯನ್ನೂ, ಧ್ವಜದಂಡವನ್ನೂ ಮೂರು ಬಾಣಗಳಿಂದಲೂ ಕತ್ತರಿಸಿಬಿಟ್ಟನು.

ತ್ರಿಭೀ ರಥಂ ಚ ಬಾಣಾನಾಂ ವಿಂಶತ್ಯಾ ದನುಜಾಧಿಪಃ ।
ಛಿನ್ನಧನ್ವಾ ವೃಕೋ ಭೂತ್ವಾ ಹತಾಶ್ವೋ ಹತಸಾರಥಿಃ ॥ ೩೯ ॥

ಅನ್ಯಂ ರಥಂ ಸಮಾರೂಢೋ ಧನುರ್ಜಗ್ರಾಹ ರೋಷತಃ ।
ತಾವತ್ತಸ್ಯ ಧನುರ್ಹೃಷ್ಟಶ್ಚಿಚ್ಛೇದ ಸಮರೇಽಸುರಃ ॥ ೪೦ ॥

ತದಾ ಗದಾಂ ಸಮಾದಾಯ ವೃಕೋ ಯಾದವಪುಂಗವಃ ।
ತತಾಡ ಮೂರ್ಧ್ನಿ ಪಂಚಾಸ್ಯಂ ದೈತ್ಯಂ ಪೃಷ್ಠಸ್ಥಿತಂ ಪುನಃ ॥ ೪೧ ॥

ಮೃಗೇಂದ್ರಃ ಕ್ರೋಧಸಂಪೂರ್ಣಃ ಸಮುತ್ಪತ್ಯ ರಣಾಂಗಣೇ ।
ಅನೇಕಾನ್ಪಾತಯಾಮಾಸ ನಖೈರ್ದಂತೈಃ ಕರೈರಪಿ ॥ ೪೨ ॥

ಹುಂಕಾರಭೀಷಣಂ ಕೃತ್ವಾ ಲಲಜ್ಜಿಹ್ವಃ ಸ್ಫುರತ್ಸಟಃ ।
ವೃಕಂ ಸಂತಾಪಯಾಮಾಸ ರಂಭಾದಂಡಂ ಗಜೋ ಯಥಾ ॥ ೪೩ ॥

---

೩೯. ಬಳಿಕ ಇಪ್ಪತ್ತು ಬಾಣಗಳಿಂದ ಅವನ ರಥವನ್ನೂ ಕತ್ತರಿಸಿಬಿಟ್ಟನು. ಹೀಗೆ ತನ್ನ ಧನುಸ್ಸೂ, ರಥವೂ, ಸಾರಥಿಯೂ, ಕುದುರೆಗಳೂ, ಹಾಳಾಗಲು ಆ ವೃಕನು,

೪೦. ಬೇರೊಂದು ರಥವನ್ನು ಹತ್ತಿ ಕುಳಿತು ಮಿತಿಮೀರಿದ ಕೋಪದಿಂದ ಮತ್ತೊಂದು ಬಿಲ್ಲನ್ನು ತೆಗೆದುಕೊಂಡನು. ಅಷ್ಟರಲ್ಲೇ ಆ ಹೃಷ್ಟನು ತನ್ನ ಬಾಣಗಳಿಂದ ಆ ಧನುಸ್ಸನ್ನೂ ಕತ್ತರಿಸಿಬಿಟ್ಟನು.

೪೧. ಕೂಡಲೇ ಯದುಶ್ರೇಷ್ಠದಾದ ಆ ವೃಕನು ಗದೆಯೊಂದನ್ನು ತೆಗೆದುಕೊಂಡು ಸಿಂಹದ ಮೇಲೆ ಕುಳಿತಿದ್ದ ಆ ಹೃಷ್ಟನನ್ನು ಅಪ್ಪಳಿಸಿದನು.

೪೨. ಆಗ ಆ ಸಿಂಹವು ಮಹಾರೋಷದಿಂದ ಮೇಲಕ್ಕೆ ನೆಗೆದು ತನ್ನ ಉಗುರುಗಳಿಂದಲೂ, ಹಲ್ಲುಗಳಿಂದಲೂ, ಪಂಜಗಳಿಂದಲೂ, ಹೊಡೆಯುತ್ತಾ ಅನೇಕ ಮಂದಿಯನ್ನು ನೆಲಕ್ಕೆ ಉರುಳಿಸಿಬಿಟ್ಟಿತು.

೪೩. ಅನಂತರ ತನ್ನ ನಾಲಿಗೆಯನ್ನು ಇತ್ತತ್ತ ಹೊರಳಿಸುತ್ತಾ ಕೇಸರಗಳನ್ನು ಕೆದರಿಕೊಂಡು ಹುಂಕಾರವನ್ನು ಮಾಡುತ್ತಾ ಆನೆಯು ಬಾಳೆಯಗಿಡವನ್ನುರುಳಿಸುವಂತೆ ಆ ವೃಕನನ್ನು ನೆಲದಮೇಲೆ ಕೆಡವಿಬಿಟ್ಟಿತು.

ಗೃಹೀತ್ವಾ ತು ವೃಕೋ ದೋರ್ಭ್ಯಾಂ ಪಾತಯಿತ್ವಾ ಮಹಿತಲೇ ।
ತಸ್ಯೋಪರಿ ಸಮಂಸ್ತಸ್ಥೌ ಮಲ್ಲೋ ಮಲ್ಲಂ ಯಥಾ ನೃಪ ॥ ೪೪ ॥

ಉತ್ಪತಂತಂ ಪುನಃ ಸಿಂಹಂ ಚರ್ವಯಂತಂ ತನುಂ ಬಲಾತ್ ।
ತತಾಡ ಮುಷ್ಟಿನಾ ತಂ ವೈ ಮಿತ್ರವಿಂದಾತ್ಮಜೋ ಬಲೀ ॥ ೪೫ ॥

ತಸ್ಯ ಮುಷ್ಟಿಪ್ರಹಾರೇಣ ಕೇಸರೀ ಪಂಚತಾಂ ಗತಃ ।
ತದಾ ಕ್ರುದ್ಧೋ ಹೃಷ್ಟದೈತ್ಯಃ ಶೂಲಂ ಚಿಕ್ಷೇಪ ಸತ್ವರಂ ॥ ೪೬ ॥

ಶೂಲಂ ಸ್ಫುರನ್ಮಹೋಲ್ಕಾಭಂ ಚಿಚ್ಛೇದ ತ್ವಸಿನಾ ವೃಕಃ ।
ತೀಕ್ಷ್ಣಯಾ ತುಂಡಯಾ ರಾಜನ್ಫಣಿನಂ ಗರುಡೋ ಯಥಾ ॥ ೪೭ ॥

---

೪೪. ರಾಜೇಂದ್ರ! ಕೂಡಲೇ ಆ ವೃಕನು ಜಟ್ಟಿಯು ಮತ್ತೊಬ್ಬ ಜಟ್ಟಿಯನ್ನು ಕೆಡಹುವಂತೆ ತನ್ನೆರಡು ತೋಳುಗಳಿಂದಲೂ ಆ ಸಿಂಹವನ್ನು ಬಿಗಿಯಾಗಿ ಹಿಡಿದು ನೆಲದಮೇಲೆ ಕೆಡವಿ ತಾನು ಅದರ ಮೇಲೆ ಸಿಂಹನಾದವನ್ನು ಮಾಡುತ್ತಾ ಕಾಲುಗಳಿಂದ ಮೆಟ್ಟಿ ನಿಂತನು.

೪೫. ಆದರೂ ಸಿಂಹವು ಮತ್ತೆ ಮೇಲಕ್ಕೆ ಹಾರಿ ಬಲಾತ್ಕಾರದಿಂದ ಅವನ ದೇಹವನ್ನು ನುಂಗಲಾರಂಭಿಸಿತು. ಆಗ ಮಹಾಬಲಿಷ್ಠನಾದ ಆ ಮಿತ್ರವಿಂದಾ ಪುತ್ರನು ಮುಷ್ಟಿಯಿಂದ ಆ ಸಿಂಹವನ್ನು ಪ್ರಹರಿಸಲು,

೪೬. ಆ ಸಿಂಹವು ಅದರ ನೋವನ್ನು ತಾಳಲಾರದೆ ಕೂಡಲೇ ತನ್ನ ಪ್ರಾಣವನ್ನು ಬಿಟ್ಟಿತು. ಆಗ ಕುಪಿತನಾದ ಹೃಷ್ಟನೆಂಬ ದೈತ್ಯನು ತನ್ನ ಕೈಲಿದ್ದ ಶೂಲವನ್ನು ತಿರಗಿಸ್ಸಿ ಸರ್‍ರನೆ ಆ ವೃಕನಮೇಲೆ ಪ್ರಹರಿಸಿದನು.

೪೭. ರಾಜೇಂದ್ರ! ಆ ಶೂಲವು ಭಾರಿಯಾದ ಕೊಳ್ಳಿಯಂತೆ ಹೊಳೆಯುತ್ತಾ ಬರುತ್ತಿರುವುದನ್ನು ಕಂಡು ವೃಕನು ತನ್ನ ಕತ್ತಿಯನ್ನು ತೆಗೆದುಕೊಂಡು ಗರುಡನು ತನ್ನ ಕ್ರೂರವಾದ ಕೊಕ್ಕಿನಿಂದ ಹಾವನ್ನು ತುಂಡಾಗಿ ಕತ್ತರಿಸುವಂತೆ ಆ ಶೂಲವನ್ನು ತಟ್ಟನೆ ಕತ್ತರಿಸಿಬಿಟ್ಟನು.

ಹೃಷ್ಟೋಽಪಿ ಸ್ವಮುಸಿಂ ನೀತ್ವಾ ನಾದಯನ್ಸ್ವಂ ಮಹಾಬಲಂ।
ಜಘಾನ ತಂ ವೃಕಂ ಮೂರ್ಧ್ನಿ ಕಂಪಯನ್ವಸುಧಾತಲಂ ॥ ೪೮ ॥

ಖಡ್ಗಕೋಶಂ ತತಃ ಖಡ್ಗಮುಪಧಾರ್ಯ ವೃಕೋ ಬಲೀ।
ಕಂಧರೇ ಸ್ವೇನ ಖಡ್ಗೇನ ತಂ ತತಾಡ ಸ್ಫುರಚ್ಛ್ವಿಜಂ ॥ ೪೯ ॥

ಖಡ್ಗಭಿನ್ನಶಿರಸ್ತಸ್ಯ ದೈತ್ಯಸ್ಯ ಪತಿತಂ ಭುವಿ।
ರೇಜೇ ಕಮಂಡಲುಮಿವ ಸಕಿರೀಟಂ ಸಕುಂಡಲಂ ॥ ೫೦ ॥

ಹೃಷ್ಟೇ ಮೃತೇ ತದಾ ದೈತ್ಯಾಃ ಶೇಷಾಃ ಸರ್ವೇ ಪಲಾಯಿತಾಃ।
ಭಯಾತುರಾ ಮಹಾರಾಜ ಯಯುಶ್ಚಂದ್ರಾವತೀಂ ಪುರೀಂ ॥ ೫೧ ॥

---

೪೮. ಅದನ್ನು ಕಂಡು ಆ ಹೃಷ್ಟನು ತನ್ನ ಕತ್ತಿಯನ್ನು ಕೈಗೆ ತೆಗೆದುಕೊಂಡು ಝಣಝಣವೆಂದು ಝಳಪಿಸುತ್ತಾ ತನ್ನ ತುಳಿತದಿಂದ ಭೂಮಿಯೇ ನಡುಗುವಂತೆ ಕಾಲಿಕ್ಕುತ್ತಾ ವೇಗದಿಂದ ಮುಂದೆ ಬಂದು ಆ ವೃಕನ ತಲೆಯ ಮೇಲೆ ಜೋರಾಗಿ ಬೀಸಿದನು.

೪೯. ಕೂಡಲೇ ವೃಕನು ತನ್ನ ಕತ್ತಿಯ ವರೆಯಿಂದ ಆ ಹೃಷ್ಟನ ಏಟನ್ನು ತಡೆದು ತಪ್ಪಿಸಿಕೊಂಡುದಲ್ಲದೆ, ತನ್ನ ಕತ್ತಿಯನ್ನು ಅವನ ಕುತ್ತಿಗೆಗೆ ಸರಿಯಾಗಿ ಬೀಸಿ ಹೊಡೆದನು.

೫೦. ಕೂಡಲೇ ಕಿರೀಟಕುಂಡಲಗಳಿಂದ ಮೆರೆಯುತ್ತಿದ್ದ ಆ ದೈತ್ಯೇಂದ್ರನ ತಲೆಯು ಕತ್ತರಿಸಿ ಹೋಗಿ ಮಣ್ಣಿನ ಗಡಿಗೆಯಂತೆ ನೆಲದ ಮೇಲೆ ಬಿದ್ದು ಬಿಟ್ಟಿತು.

೫೧. ಈ ರೀತಿಯಾಗಿ ಹೃಷ್ಟದೈತ್ಯನು ಹತನಾದುದನ್ನು ಕಂಡು ಭಯಗ್ರಸ್ತರಾದ ಉಳಿದ ದೈತ್ಯರೆಲ್ಲರೂ ಚಂದ್ರಾವತಿ ನಗರಕ್ಕೆ ಓಡಿಹೋದರು.

ದೇವದುಂದುಭಯೋ ನೇದುರ್ನರದುಂದುಭಯಸ್ತದಾ ।
ಶ್ರೀವೃಕಸ್ಯೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೫೨ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ಹೃಷ್ಟದೈತ್ಯವಧೋ ನಾಮ ದ್ವಾತ್ರಿಂಶೋಽಧ್ಯಾಯಃ

---

೫೨. ಆಗ ದೇವತೆಗಳೂ, ಯಾದವರೂ, ವಿಜಯಸೂಚಕವಾಗಿ ತಮ್ಮತಮ್ಮ ನಗಾರಿಗಳನ್ನು ಬಾರಿಸಿದರು. ಮತ್ತು ಆ ವೃಕನಮೇಲೆ ದೇವತೆಗಳು ಹೂಮಳೆಯನ್ನು ಕರೆದರು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ನಾರದಬಹುಲಾಶ್ವ
ಸಂವಾದದಲ್ಲಿ ಹೃಷ್ಟದೈತ್ಯವಧವೆಂಬ ಮೂವತ್ತೆರಡನೆಯ
ಅಧ್ಯಾಯವು ಮುಗಿದುದು

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ತ್ರಯಸ್ತ್ರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಹೃಷ್ಟಂ ನಿಪತಿತಂ ಶ್ರುತ್ವಾ ಶಕುನಿಃ ಕ್ರೋಧಮೂರ್ಛಿತಃ ।
ಭ್ರಾತೄನ್ಸಂಪ್ರೇಷಯಾಮಾಸ ದೇವಾನಾಂ ಭಯಕಾರಕಾನ್ ॥ ೧ ॥

ಭೂತಸಂತಾಪನೋ ನಾಮ ಗಜಮಾರುಹ್ಯ ನಿರ್ಗತಃ ।
ವೃಕಃ ಖರಂ ಸಮಾರುಹ್ಯ ಕಾಲನಾಭೋಽಥ ಸೂಕರಂ ॥ ೨ ॥

ಮೂವತ್ತಮೂರನೆಯ ಅಧ್ಯಾಯವು

೧. ಹೃಷ್ಟನು ಮಡಿದು ಬಿದ್ದನೆಂಬ ಸಂಗತಿಯನ್ನು ಕೇಳುತ್ತಲೇ ಆ ಶಕುನಿಯು ಬಹುವಾಗಿ ಕೋಪವನ್ನು ತಾಳಿದನು. ಕೂಡಲೇ ದೇವತೆಗಳಿಗೂ ಹೆದರಿಕೆಯನ್ನು ಹುಟ್ಟಿಸುವಂತಿದ್ದ ತನ್ನ ತಮ್ಮಂದಿರನ್ನು ಯುದ್ಧಕ್ಕಾಗಿ ಕಳುಹಿಸಿದನು.

೨. ಆ ತಮ್ಮಂದಿರಲ್ಲಿ ಒಬ್ಬ ಭೂತಸಂತಾಪನನೆಂಬ ವೀರನು ಆನೆಯನ್ನು ಹತ್ತಿ ಬಂದನು. ವೃಕನೆಂಬ ದೈತ್ಯನು ಕತ್ತೆಯ ಮೇಲೆ ಕುಳಿತು ಬಂದನು. ಕಾಲನಾಭನು ಹಂದಿಯನ್ನೇರಿ ಬಂದನು.

ಮಹಾನಾಭೋ ಮತ್ತಉಷ್ಟ್ರಂ ಹರಿಶ್ಮಶ್ರುಸ್ತಿಮಿಂಗಿಲಂ ।
ವೈಜಯಂತಂ ರಥಂ ಜೈತ್ರಂ ಮಯದೈತ್ಯವಿನಿರ್ಮಿತಂ ॥ ೩ ॥

ಪಂಚಯೋಜನವಿಸ್ತೀರ್ಣಂ ಸಹಸ್ರಾಶ್ವನಿಯೋಜಿತಂ ।
ಮಾಯಾಮಯಂ ಕಾಮಗಂ ಚ ಪತಾಕಾಶತಸಂವೃತಂ ॥ ೪ ॥

ಸಹಸ್ರಕಲಶಾಢ್ಯಂ ಚ ಮುಕ್ತಾದಾಮವಿಲಂಬಿತಂ ।
ರತ್ನಭೂಷಣಭೂಷಾಢ್ಯಂ ಶತಚಂದ್ರಸಮೋಜ್ಜ್ವಲಂ ॥ ೫ ॥

ಸಹಸ್ರಚಕ್ರಸಂಯುಕ್ತಂ ಘಂಟಾಕಾರವಿಭೂಷಣಂ ।
ಆರುಹ್ಯ ಶಕುನಿಃ ಪಶ್ಚಾದ್ಯೋದ್ಧುಕಾಮೋ ವಿನಿರ್ಯಯೌ ॥ ೬ ॥

ಅಕ್ಷೌಹಿಣೀಭಿರ್ದ್ವಾದಶಭಿರ್ದೈತ್ಯಾನಾಂ ಮೈಥಿಲೇಶ್ವರ ।
ಧನುಃಸ್ವನೈರ್ವೀರಶಬ್ದೈರಶ್ವಹೇಷಾರಥಸ್ವನೈಃ ॥ ೭ ॥

೩–೬. ಮಹನಾಭನು ಮದಿಸಿದ ಒಂಟೆಯನ್ನೂ ಹರಿಶ್ಮಶ್ರುವು ತಿಮಿಂಗಿಲವನ್ನೂ ಹತ್ತಿ ಹೊರಟರು. ಅನಂತರ ಯುದ್ಧಕುತೂಹಲಿಯಾದ ಆ ಶಕುನಿಯೆಂಬ ದೈತ್ಯರಾಜನು ದೈತ್ಯಶಿಲ್ಪಿಯಾದ ಮಯನಿಂದ ವಿಜಯಾರ್ಥವಾಗಿಯೇ ನಿರ್ಮಿಸಲ್ಪಟ್ಟು, ನಾನಾ ವಿಧವಾದ ಮಾಯೆಗಳನ್ನೊಳಗೊಂಡು ಬೇಕಾದಲ್ಲಿಗೆ ಹೋಗಬಲ್ಲ ಶಕ್ತಿಯುಳ್ಳ ತಾಗಿ ಸಾವಿರ ಕುದುರೆಗಳಿಂದಲೂ, ಸಾವಿರ ಚಕ್ರಗಳಿಂದಲೂ, ಸಾವಿರ ಕಲಶಗಳಿಂದಲೂ, ನೂರು ಧ್ವಜಗಳಿಂದಲೂ ತೂಗುಬಿಟ್ಟಿರುವ ಮುತ್ತಿನ ಹಾರಗಳಿಂದಲೂ, ರತ್ನಾಭರಣಗಳಿಂದಲೂ ಅಲಂಕರಿಸಲ್ಪಟ್ಟು ಕಂಗೊಳಿಸುತ್ತಿರುವ ಐದು ಯೋಜನಗಳಷ್ಟು ಅಗಲವಾಗಿರುವ ನೂರು ಚಂದ್ರರಿಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿರುವ ಭಾರಿಯಾದ ರಥವೊಂದನ್ನೇರಿ ಕುಳಿತು ಅವರೆಲ್ಲರಹಿಂದೆ ಹೊರಟು ಬಂದನು.

೭. ಓ ಮಿಥಿಲೇಶ್ವರಾ! ಅವನೊಡನೆ ಹನ್ನೆರಡು ಅಕ್ಷೋಹಿಣಿಗಳಷ್ಟು ದೈತ್ಯಸೇನೆಯು ಯುದ್ಧಸನ್ನದ್ಧವಾಗಿ ಹೊರಟಿತು. ಆಗ ಧನುಸ್ಸುಗಳ ಟಂಕಾರದಿಂದಲೂ, ವೀರನಾದಗಳಿಂದಲೂ, ಕುದುರೆಗಳ ಹೇಷಾಧ್ವನಿಗಳಿಂದಲೂ, ರಥಗಳ ಚಕ್ರಗಳ ಚೀತ್ಕಾರ ಧ್ವನಿಗಳಿಂದಲೂ.

ಚೀತ್ಕಾರೈರ್ಹಸ್ತಿನಾಮಾಶಾಂ ಮಂಡಲಂ ತು ಜಗರ್ಜ ಹ ।
ದೈತ್ಯಸೇನಾಪ್ರಯಾಣೇನ ಚಕಂಪೇ ಮಂಡಲಂ ಭುವಃ ॥ ೮ ॥

ನಿಪೇತುರ್ಗಿರಯೋಽನೇಕಾ ವಿಚೇಲುಃ ಸಿಂಧವೋ ನೃಪ ।
ನಿಪಾತಿತಾರ್ಗಲಾ ದೇವೈರ್ಬಭೂವಾಶ್ವಮರಾವತೀ ॥ ೯ ॥

ತತ್ಸೈನ್ಯಂ ಭೀಷಣಂ ದೃಷ್ಟ್ವಾ ಪ್ರದ್ಯುಮ್ನೋ ಧನ್ವಿನಾಂ ವರಃ ।
ಬಲೀ ಧೈರ್ಯಕರಃ ಕಾರ್ಷ್ಣಿಃ ಪ್ರಾಹೇದಂ ಯದುಪುಂಗವಾನ್ ॥ ೧೦ ॥

॥ ಪ್ರದ್ಯುಮ್ನ ಉವಾಚ ॥

ಇದಂ ಶರೀರಂ ಭುವಿ ಪಾಂಚಭೌತಿಕಂ
ಫೇನೋಪಮಂ ಕರ್ಮಗುಣಾದಿನಿರ್ಮಿತಂ ।
ಗತಾಗತಂ ಕಾಲವಶಂ ಕದಾಪಿ ಹಿ
ಬುಧಾ ನ ಶೋಚಂತಿ ಯಥಾರ್ಭಕೈಃ ಕೃತಂ ॥ ೧೧ ॥

---

೮. ಆನೆಗಳ ಘೀಂಕಾರಗಳಿಂದಲೂ ಸುತ್ತುಮುತ್ತಣ ದಿಕ್ಕುಗಳೆಲ್ಲವೂ ತುಂಬಿಹೋಗಿ ಪ್ರತಿಧ್ವನಿಯುಂಟಾಯಿತು. ಆ ದೈತ್ಯಸೇನೆಯ ಪದಾಘಾತದಿಂದ ಭೂಮಂಡಲವೇ ನಡುಗಿಹೋಯಿತು.

೯. ಅನೇಕವಾದ ಬೆಟ್ಟಗಳು ಕೆಳಗೆ ಉರುಳಿದುವು. ಸಮುದ್ರಗಳು ಅಲ್ಲಾಡಿದುವು. ಇದೆಲ್ಲವನ್ನೂ ಕಂಡು ಭಯಾಕ್ರಾಂತರಾದ ದೇವತೆಗಳು ಅಮರಾವತಿಯ ಹೆಬ್ಬಾಗಿಲನ್ನು ಮುಚ್ಚಿ ಅಗಳಿಯನ್ನೂ ಹಾಕಿಬಿಟ್ಟರು.

೧೦. ಆಗ ಧನುರ್ಧಾರಿಗಳಲ್ಲೆಲ್ಲಾ ಮೇಲೆನಿಸಿದ ಆ ಪ್ರದ್ಯುಮ್ನನು ಅಪಾರವಾದ ದೈತ್ಯಸೇನೆಯು ಎದುರಾಗಿ ಬರುತ್ತಿರುವುದನ್ನು ಕಂಡು ತನ್ನ ಕಡೆಯ ವೀರರಿಗೆ ಧೈರ್ಯವನ್ನು ಹೇಳಿ ಹುರಿದುಂಬಿಸುತ್ತಾ ಅವರನ್ನು ಕುರಿತು ಇಂತೆಂದು ನುಡಿದನು.

೧೧. "ಎಲೈ ವೀರರಿರಾ! ಈ ಪಾಂಚಭೌತಿಕವಾದ ಶರೀರವು ಕರ್ಮವಶದಿಂದಲೂ, ಗುಣಾದಿಗಳ ಸಂಯೋಗದಿಂದಲೂ ನಿರ್ಮಿಸಲ್ಪಟ್ಟು ನೊರೆಯಂತೆ ಕ್ಷಣಮಾತ್ರ ಸ್ಥಾಯಿಯಾಗಿರುವುದು. ಈ ಶರೀರವು ಬರುವುದೂ ಹೋಗುವುದೂ ಕಾಲಾಧೀನವಾದುದು. ತಾವು ಆಟಕ್ಕಾಗಿ ಕಟ್ಟಿದ ಮನೆಮಠಗಳನ್ನು ಉರುಳಿಸಿ ಸ್ವಲ್ಪವೂ ವ್ಯಥೆಪಡದಿರುವ ಕ್ರೀಡಾಸಕ್ತರಾದ ಬಾಲಕರಂತೆ ಪ್ರಾಜ್ಞರಾದವರಾರೂ ಇದನ್ನು ಕುರಿತು ಎಂದಿಗೂ ದುಃಖಿಸಬಾರದು.

ಗಚ್ಛಂತಿ ಚೋರ್ಧ್ವಂ ಕಿಲ ಸಾತ್ವಿಕಾ ಜನಾ
ಮಧ್ಯೇ ಚ ತಿಷ್ಠಂತಿ ಹಿ ರಾಜಸಾ ನರಾಃ ।
ಅಧಃ ಪ್ರಗಚ್ಛಂತಿ ಹಿ ತಾಮಸಾಃ ಪರೇ
ಮುಹುರ್ಮುಹುಸ್ತೇ ವಿಚರಂತಿ ಕರ್ಮಭಿಃ ॥ ೧೨ ॥

ಬಿಭೇತ್ಯಯಂ ವಾ ಕಿಲ ಸರ್ವತೋ ಯಥಾ
ನೇತ್ರಭ್ರಮೇಣಾ ಚಲತೀವ ಭೂರ್ವೃಥಾ ।
ತಥಾ ಚ ಸರ್ವಂ ಮನಸಾ ಕೃತಂ ಜಗ-
ತ್ಕಾಚೇಽರ್ಭಕಂ ಹ್ಯರ್ಭಕ ಆವೃತೋ ಯಥಾ ॥ ೧೩ ॥

ಯಥಾ ಸುಖಂ ಮಂಡಲವರ್ತಿನಾಂ ಚಲಂ
ತಥಾಸ್ತಿ ಪಾತಾಲನಿವಾಸಿನಾಮಪಿ ।
ತಥಾಮರಾಣಾಂ ಕ್ರತುಭಿಃ ಕೃತಂ ಸ್ಮರೇ-
ತ್ಸರ್ವಂ ತ್ಯಜೇತ್ತತ್ತೃಣವತ್ಪರೋ ಜನಃ ॥ ೧೪ ॥

---

೧೨. ಈ ದೇಹಿಗಳಲ್ಲಿ ಸಾತ್ತ್ವಿಕರಾದವರು ಉತ್ತಮವಾದ ಲೋಕಗಳನ್ನು ಹೊಂದುವರು. ರಾಜಸಗುಣದವರು ಉತ್ತಮವೂ ಅಧಮವೂ ಅಲ್ಲದ ಮಧ್ಯಮ ಲೋಕಗಳನ್ನು ಪಡೆಯುವರು. ತಾಮಸವಾದ ಪ್ರವೃತ್ತಿಯುಳ್ಳವರು ನೀಚವಾದ ಅಧೋಗತಿಯನ್ನು ಅನುಭವಿಸುವರು. ಈ ರೀತಿಯಾಗಿ ತಮ್ಮ ತಮ್ಮ ಕರ್ಮಗಳಿಂದಲೇ ಜೀವರು ಪುನಃ ಪುನಃ ತೊಳಲುತ್ತಿರುವರು.

೧೩. ಹೀಗಿರುವಾಗ ಈ ಜೀವನು ಮತ್ತೊಬ್ಬನಿಗೆ ಹೆದರುವದೆಂದರೇನು ? ಅಥವಾ ಹಾಗೆ ಹೆದರುವದಾದರೂ ಉಂಟೆ ? ಈ ಹೆದರಿಕೆಯೆನ್ನುವುದೆಲ್ಲವೂ ಅಚಲವಾದ ಭೂಮಿಯು ಚಲಿಸಿತೆನ್ನುವುದು, ಬರಿಯ ನೇತ್ರಭ್ರಮೆಯೇ ವಿನಾ ಮತ್ತೆ ಬೇರೆಯಲ್ಲ. ಗಾಜಿನ ಗೊಂಬೆಯು ಮಗುವೆಂದು ಭಾವಿಸಲ್ಪಡುವಂತೆ ಈ ಜಗತ್ತೆಲ್ಲವೂ ಚಲಿಸಿತೆನ್ನುವುದು ಅಸತ್ಯವಾದುದು. ಹಾಗೆ ಈ ಹೆದರಿಕೆ ಮುಂತಾದುವೆಲ್ಲವು ಕೇವಲ ಮನಸ್ಸಿನ ಕಲ್ಪನೆಗಳೇ ಅಲ್ಲದೆ ಮತ್ತೆ ಬೇರೆ ಅಲ್ಲ. ಈ ಜಗತ್ತೆಲ್ಲವೂ ಮನಸ್ಸಿನ ಕಲ್ಪನಾಬಲದಿಂದ ನಾನಾರೂಪವಾಗಿ ತೋರುವುದು.

೧೪. ಭೂಮಿಯಲ್ಲಿ ವಾಸಮಾಡುವ ನಮ್ಮಂಥ ಮಾನವರಿಗೆ ಯಾವ ರೀತಿ ಸುಖವು ಕ್ಷಣಿಕವೆನಿಸುವುದೋ ಅದೇ ರೀತಿ ಪಾತಾಳಲೋಕದವರಿಗೂ ಸ್ವಲ್ಪವಾಗಿಯೇ ಇರುವುದು. ಇದರಂತೆಯೇ ಯಜ್ಞಯಾಗಾದಿಗಳನ್ನು ಮಾಡಿದ ಪುಣ್ಯಬಲದಿಂದ ಪ್ರಾಪ್ತವಾಗುವ ದೇವತೆಗಳ ಸ್ವರ್ಗಸುಖವೂ ಚಂಚಲವೆನಿಸಿರುವುದು. ಆದುದರಿಂದ ಪ್ರಾಜ್ಞರಾದವರು ಅದೆಲ್ಲವನ್ನೂ ಹುಲ್ಲಿನಂತೆ ಕಡೆಗಣಿಸಬೇಕು.

ಋತೋರ್ಗುಣಾ ದೇಹಗುಣಾಃ ಸ್ವಭಾವಾ
ಅಹರ್ದಿನಂ ಯಾಂತಿ ಯಥಾ ತಥಾ ಜನಾಃ ।
ದೃಶ್ಯಂ ಚ ಯದ್ಯನ್ನ ಹಿ ಕಿಂಚಿದಸ್ತಿ
ಯಥಾ ವ್ರಜೇದ್ಗಚ್ಛತಿ ಪಾಂಥಸಂಗಮಃ ॥ ೧೫ ॥

ದೃಷ್ಟಂ ಯಥಾ ವಸ್ತು ಯದೋಲ್ಕಯಾ ತಥಾ
ಪರೇ ಗತೇ ಕಿಂ ಹ್ಯುಭಯಪ್ರಯೋಜನೇ ।
ವಿಧಾಯ ಮಾರ್ಗಂ ವಿಚರೇಚ್ಛಿವಸ್ಯ
ಪಶ್ಯನ್ಹಿ ಸರ್ವತ್ರ ಹರಿಂ ಪರೇಶ್ವರಂ ॥ ೧೬ ॥

---

೧೫. ಋತುಗಳ ಆಯಾ ವಿಶೇಷ ಧರ್ಮಗಳೂ ಶರೀರದ ಅವಸ್ಥಾವಿಶೇಷಗಳ ಬೇರೆ ಬೇರೆ ಸ್ವಭಾವಗಳೂ, ರಾತ್ರಿ ಹಗಲುಗಳೂ ಯಾವ ರೀತಿ ಕಳೆದುಹೋಗುತ್ತಿರುವುದೋ ಅದೇ ರೀತಿ ಜನಿಸಿದ ವಸ್ತುವೆಲ್ಲವೂ ನಾಶವನ್ನು ಹೊಂದುತ್ತಿರುವುದು. ಮತ್ತು ಒಂದು ಕಡೆ ಸೇರಿದ್ದ ಪ್ರಯಾಣಿಕರ ಗುಂಪು ಕೆಲವು ಕಾಲಾನಂತರ ಯಾವ ರೀತಿ ಅಲ್ಲಿ ನಿಲ್ಲದೆ ಮುಂದೆ ತೆರಳುವುದೋ ಅದೇ ರೀತಿ ಕಣ್ಣಿಗೆ ಕಾಣುವ ಪ್ರತಿಯೊಂದು ವಸ್ತುವೂ ಈ ಜಗತ್ತಿನಲ್ಲಿ ಸ್ಥಾಯಿಯಾಗಿ ನಿಲ್ಲಲಾರದೆ ನಾಶವಾಗಿ ಹೋಗುವುದು.

೧೬. ಕಗ್ಗತ್ತಲಲ್ಲಿ ಪ್ರಯಾಣಮಾಡುವವನು ತನ್ನ ಮುಂದೆ ಇರುವ ವಸ್ತುಗಳು ಕಾಣಿಸಲೆಂದು ಕೈಯಲ್ಲಿ ಪಂಜನ್ನು ಹಿಡಿದು ಹೋಗುವನಷ್ಟೆ! ಅದರಿಂದ ಅವನಿಗೆ ಪ್ರಯೋಜನವಾಗುವಂತೆ ಎದುರಿಗೆ ಬರುವ ಮತ್ತೊಬ್ಬ ವ್ಯಕ್ತಿಗೂ ಪ್ರಯೋಜನವುಂಟಾಗುವುದು. ಅದರಂತೆ ಪ್ರತಿಯೊಬ್ಬನೂ ತನಗೂ, ಮತ್ತೊಬ್ಬನಿಗೂ ಒಳ್ಳೆಯದಾಗುವಂತಹ ಮಾರ್ಗವನ್ನೇ ಅವಲಂಬಿಸಬೇಕು. ಹಾಗಲ್ಲದಿದ್ದ ಮೇಲೆ ಅವನಿಂದ ಏನು ಪ್ರಯೋಜನ ? ಆದುದರಿಂದ ಮಾನವನು ಪ್ರತಿಯೊಂದು ವಸ್ತುವಿನಲ್ಲಿಯೂ ಶ್ರೀಹರಿಯು ನೆಲಸಿರುವನೆಂಬುದನ್ನು ಮನಗಾಣುತ್ತಾ ಶ್ರೇಯಸ್ಸಿಗೆ ಸಾಧನವಾದ ಮಾರ್ಗವನ್ನು ಅವಲಂಭಿಸಿ ಅದರಲ್ಲಿ ಮುಂದುವರಿಯಬೇಕು.

ಯಥೇಂದುರೇಕೋ ಜಲಪಾತ್ರವೃಂದಗೋ
ಯಥಾಗ್ನಿರೇಕೋ ವಿದಿತಃ ಸಮಿಚ್ಛಯೇ ।
ತಥಾ ಪರಾತ್ಮಾ ಭಗವಾನನೇಕವ-
ತ್ಸೋಽಂತರ್ಬಹಿಃ ಸ್ಯಾತ್ಸ್ವಕೃತೇಷು ದೇಹಿಷು ॥ ೧೭ ॥

ಯೋ ಜ್ಞಾನನಿಷ್ಠೋಽತಿವಿರಾಗಮಾಶ್ರಿತಃ
ಶ್ರೀಕೃಷ್ಣಭಕ್ತಃ ಸ್ವನಪೇಕ್ಷಕೋಽಪಿ ಯಃ ।
ತಪೋವನಂ ವಾಪಿ ಗೃಹಂ ಗೃಹಂ ವನಂ
ಸ್ಪೃಶಂತಿ ತಂ ತೇ ತ್ರಿಗುಣಾ ನ ಸರ್ವತಃ ॥ ೧೮ ॥

ತತೋ ಯತಿಸ್ತ್ವಧ್ಯಗಮತ್ಪರಾತ್ಪರಂ
ಸುಖೇ ಸದಾನಂದಮಯಸ್ತು ಬಾಲವತ್ ।
ದೇಹೇನ ಪಶ್ಯತ್ಯುತ ಸರ್ವಕಾರಣಂ
ಧೃತಂ ಚ ವಾಸೋ ಮದಿರಾ ಮದಾಂಧವತ್ ॥ ೧೯ ॥

---

೧೭. ಚಂದ್ರನು ಒಬ್ಬನೇ ಆದರೂ ತಾನು ಪ್ರತಿಬಿಂಬಿಸಿದ ನೀರಿನ ಪಾತ್ರೆಗಳಲ್ಲಿ ಯಾವ ರೀತಿ ಅನೇಕವಾಗಿ ತೋರುವನೋ, ಬೆಂಕಿಯೊಂದೇ ಆದರೂ ತನಗೆ ಒಟ್ಟಿದ ಸೌದೆಗಳಲ್ಲಿ ಯಾವ ರೀತಿ ಬೇರೆ ಬೇರೆಯಾಗಿ ತೋರುವುದೋ ಅದೇ ರೀತಿ ಆ ಭಗವಂತನು ತಾನು ಏಕೈಕನಾಗಿದ್ದರೂ ಪ್ರತಿಯೊಬ್ಬನಲ್ಲಿಯೂ ನೆಲಸಿರುವುದರಿಂದ ಅನೇಕವಾಗಿ ತೋರುತ್ತಾ ಒಳಗೂ ಹೊರಗೂ ವ್ಯಾಪಿಸಿರುವನು.

೧೮. ಯಾವನು ಶುದ್ಧವಾದ ಜ್ಞಾನವನ್ನು ತಳೆದು ವೈರಾಗ್ಯವನ್ನವಲಂಬಿಸಿ ಶ್ರೀಹರಿಯಲ್ಲೇ ನೆಟ್ಟ ಮನಸ್ಸುಳ್ಳವನಾಗಿ ನಿರಪೇಕ್ಷಸ್ವಭಾವದಿಂದ ತಪೋವನವನ್ನು ಮನೆಯಂತೆಯೂ, ಮನೆಯನ್ನು ತಪೋವನದಂತೆಯೂ ಭಾವಿಸಬಲ್ಲನೋ ಅಂಥ ಮಹಾತ್ಮನನ್ನು ತ್ರಿಗುಣಗಳು ಯಾವುವೂ ಬಂಧಿಸಲಾರವು.

೧೯. ಇಂಥವನೇ ನಿಜವಾದ ಯತಿಯೆನಿಸಿ ಆ ಪರಾತ್ಪರನಾದ ಭಗವಂತನನ್ನು ಸಾಕ್ಷಾತ್ಕರಿಸುವನು. ಅವನು ಯಾವಾಗಲು ಹುಡುಗನಂತೆಯೂ, ಮದ್ಯಪಾನದಿಂದ ಮತ್ತೇರಿ ಮೈಮರೆತಿರುವವನಂತೆಯೂ ಸುಖದಲ್ಲಿ ಓಲಾಡುತ್ತಾ ಆನಂದದಿಂದ ವಿಹರಿಸುತ್ತಿರುವನು. ಅಂಥವನೀದೇಹವನ್ನು ಉಟ್ಟ ಬಟ್ಟೆಯಂತೆ ಐಚ್ಛಿಕವಾದುದೆಂಬುದಾಗಿ ಪರಿಗಣಿಸುವನು. ಮತ್ತು ಅವನು ಸರ್ವದಾ ಪರಮಪುರುಷನನ್ನು ಸಾಕ್ಷಾತ್ಕರಿಸುವನು.

ಸೂರ್ಯೋದಯೇ ಸರ್ವತಮೋ ವಿಲೀಯತೇ
ಪ್ರದೃಶ್ಯತೇ ವಸ್ತು ಗೃಹೇ ಯಥಾ ಜನೈಃ ।
ಜ್ಞಾನೋದಯೇಽಜ್ಞಾನತಮಃ ಪ್ರಲೀಯತೇ
ಸಂಭ್ರಾಜತೇ ಬ್ರಹ್ಮ ಪರಂ ತನೌ ಯಥಾ ॥ ೨೦ ॥

ಯಥೇಂದ್ರಿಯಾಣಾಂ ಚ ಪೃಥಕ್ಚ ವರ್ತ್ಮಭಿ-
ರ್ನ್ನೋರ್ನೀಯತೇಽರ್ಥಸ್ತ್ರಿಗುಣಾಶ್ರಯಃಪರಃ ।
ಏಕಂ ಹ್ಯಸಂತಸ್ಯ ಪರಸ್ಯ ಧಾಮ ತ-
ತ್ತಥಾ ಮುನೀನಾಂ ಕಿಲ ಶಾಸ್ತ್ರವರ್ತ್ಮಭಿಃ ॥ ೨೧ ॥

ಪರಂ ಪದಂ ಕೇಽಪಿ ವದಂತಿ ವೈಷ್ಣವಂ
ಕೇ ವಾಪಿ ವೈಕುಂಠಪರಂ ಪರೇಶಂ ।
ಶಾಂತಿಂ ಚ ಯತ್ಕೇಽಪಿ ತಮಃ ಪರಂ ಬೃಹ-
ತ್ಕೈವಲ್ಯಮೇಕೇ ಪ್ರವದಂತಿ ಧಾಮಕೇ ॥ ೨೨ ॥

---

೨೦. ಯಾವ ರೀತಿ ಸೂರ್ಯೋದಯವಾದಾಗ ಕತ್ತಲೆಲ್ಲವೂ ಅಡಗಿಹೋಗಿ ಮನೆಯಲ್ಲಿರುವ ಪ್ರತಿಯೊಂದು ವಸ್ತುವೂ ಜನರಿಗೆ ಸ್ಫುಟವಾಗಿ ತೋರುವುದೋ ಅದೇ ರೀತಿ ಶುದ್ಧ ಜ್ಞಾನವು ಉದಯಿಸಿದಾಗ ಅಜ್ಞಾನವು ಅಡಗಿಹೋಗಿ ತನ್ನ ದೇಹದಲ್ಲಿಯೇ ಪರಮಾತ್ಮನು ಪ್ರಕಾಶಸ್ವರೂಪನಾಗಿ ಪ್ರತಿಯೊಬ್ಬನಿಗೂ ಗೋಚರಿಸುವನು.

೨೧. ಚಕ್ಷುರಾದಿ ವಿವಿಧೇಂದ್ರಿಯಗಳ ವಸ್ತುಸಾಕ್ಷಾತ್ಕಾರರೀತಿಯು ಬೇರೆ ಬೇರೆಯಾದರೂ ಸತ್ತ್ವಾದಿ ಗುಣತ್ರಯಾಶ್ರಯವೆನಿಸಿದ ವಸ್ತುವು ವಿವಿಧೇಂದ್ರಿಯಗಳಿಂದ ಯಾವ ರೀತಿ ಒಂದೇ ಬಗೆಯಾಗಿ ಗೋಚರಿಸುವುದೋ ಅದೇ ರೀತಿ ಅವಿನಾಶಿಯಾದ ಆ ಪರಬ್ರಹ್ಮತತ್ತ್ವವು ಪರಸ್ಪರವಿಭಿನ್ನವಾದ ನಾನಾಮಹರ್ಷಿಪ್ರಣೀತವಾದ ಶಾಸ್ತ್ರಮಾರ್ಗಗಳಿಂದಲೂ ಏಕರೂಪವಾಗಿಯೇ ತೋರುವುದು.

೨೨. ಆ ತತ್ತ್ವವನ್ನು ಕೆಲವರು ಪರಮೋತ್ತಮವಾದ ವಿಷ್ಣುವಿನ ಪದವೆನ್ನುವರು. ಮತ್ತೆ ಕೆಲವರು ವೈಕುಂಠಕ್ಕೆ ಮೇಲೆನಿಸಿದ ಪರಮಾತ್ಮನೆನ್ನುವರು. ಕೆಲಮಂದಿ ತಮೋಮಂಡಲಕ್ಕಿಂತಲೂ ಅತೀತವಾದ ಶಾಂತಸ್ವರೂಪವೆನ್ನುವರು. ಇನ್ನು ಕೆಲಮಂದಿ ಸ್ವಯಂಪ್ರಕಾಶರೂಪವಾದ ಕೈವಲ್ಯವೆನ್ನುವರು.

ಯದಕ್ಷರಂ ಕೇಽಪಿ ದಿಶಂ ವದಂತಿ ಕೇ
ಗೋಲೋಕಮಾದ್ಯಂ ಪ್ರವದಂತ್ಯಥಾಪರೇ ।
ಕೇಚಿನ್ನಿಕುಂಜಂ ನಿಜಲೀಲಯಾ ವೃತಂ
ಪ್ರಾಪ್ನೋತಿ ಕೃಷ್ಣಸ್ಯ ಪದಂ ಚ ತನ್ಮುನಿಃ ॥ ೨೩ ॥

॥ ಶ್ರೀ ನಾರದ ಉವಾಚ ॥

ಇತಿ ಕಾರ್ಷ್ಣೇರ್ವಚಃ ಶ್ರುತ್ವಾ ಸರ್ವೇ ಯಾದವಪುಂಗವಾಃ ।
ಶಸ್ತ್ರಾಣಿ ಜಗೃಹುರ್ಹೃಷ್ಟಾ ತಜ್ಜ್ಞಾನೇ ಧೈರ್ಯವರ್ಧನೇ ॥ ೨೪ ॥

ಬಭೂವ ತುಮುಲಂ ಯುದ್ಧಂ ದೈತ್ಯಾನಾಂ ಯದುಭಿಃ ಸಹ ।
ಸೀತಾಗಂಗಾತಟೇ ಚಾಬ್ಧೌ ರಕ್ಷಸಾಂ ಕಪಿಭಿರ್ಯಥಾ ॥ ೨೫ ॥

---

೨೩. ಆ ಅವಿನಾಶಿಯಾದ ಪರತತ್ತ್ವವನ್ನು ಕೆಲವರು ದಿಕ್ಕೆಂದು ಕರೆಯುವರು. ಮತ್ತೆ ಕೆಲವರು ಆದಿಲೋಕವೆನಿಸಿದ ಗೋಲೋಕವೆಂದು ತಿಳಿಸುವರು. ಇನ್ನು ಕೆಲವರು ಪರಮಾತ್ಮನ ಲೀಲೆಯಿಂದ ಆವೃತವಾದ ನಿಕುಂಜವೆನ್ನುವರು. ಕೃಷ್ಣನ ಸ್ವಸ್ವರೂಪವೆನಿಸಿದ ಇಂತಹ ಆ ಪದವನ್ನು ನಿಜವಾದ ಮುನಿಯೆನ್ನುವನು ಪಡೆಯುವನು" ಎಂದನು.

೨೪. ಓ ಬಹುಲಾಶ್ವರಾಜೇಂದ್ರ ! ಈ ರೀತಿ ಪ್ರದ್ಯುಮ್ನನು ನುಡಿದ ಮಾತನ್ನು ಕೇಳಿ ಆ ಯದುವೀರರೆಲ್ಲರೂ ಧೈರ್ಯವರ್ಧನವಾದ ಆತನ ಮಾತುಗಳಿಂದ ಬಹಳ ಸಂತೋಷವನ್ನು ತಾಳಿ ಆಯುಧಗಳನ್ನು ಧರಿಸಿ ಯುದ್ಧಸನ್ನದ್ಧರಾದರು.

೨೫. ಆಗ ಸೀತಾ ಎಂಬ ಹೆಸರಿನಿಂದ ಪ್ರವಹಿಸುತ್ತಿದ್ದ ಆ ಗಂಗೆಯ ತಡಿಯಲ್ಲಿ ಹಿಂದೆ ರಾಕ್ಷಸರಿಗೂ, ವಾನರರಿಗೂ ಜರುಗಿದಂತೆ, ಆ ದೈತ್ಯರಿಗೂ, ಯಾದವರಿಗೂ ಕೈಕೈ ಕಲೆತು ಭಾರಿ ಯುದ್ಧವು ಮೊದಲಾಯಿತು.

ರಥಿನೋ ರಥಿಭಿಸ್ತತ್ರ ಪತ್ತಿಭಿಃ ಪತ್ತಯೋ ನೃಪ ।
ಅಶ್ವವಾಹೈರಶ್ವವಾಹಾ ಯುಯುಧುಶ್ಚ ಗಜಾ ಗಜೈಃ ॥ ೨೬ ॥

ಕೇಚಿತ್ಕರೀಂದ್ರಾ ಉನ್ಮತ್ತಾ ಮಹಾಮಾತ್ರೈಃ ಪ್ರಣೋದಿತಾಃ ।
ಗಿರೀಂದ್ರಾ ಇವ ದೃಶ್ಯಂತೇ ಮುಕ್ತಾನಾಂ ಮೇಘಡಂಬರೈಃ ॥ ೨೭ ॥

ಶುಂಡಾದಂಡೈಶ್ಚ ಫೂತ್ಕಾರೈಃ ಸಚೀತ್ಕಾರೈಃ ಸಶೃಂಖಲೈಃ ।
ಪಾತಯಂತೋ ರಥಾನಶ್ವಾನ್ವೀರಾನ್ರಾಜನ್ರಣಾಂಗಣೇ ॥ ೨೮ ॥

ಶುಂಡಾದಂಡೈಃ ಸಂಗೃಹೀತ್ವಾ ರಥಾನ್ಸಾಶ್ವಾನ್ಸಸಾರಥೀನ್ ।
ನಿಪಾತ್ಯ ಭೂಮಾವುತ್ಥಾಪ್ಯ ಚಿಕ್ಷಿಪುಶ್ಚಾಂಬರೇ ಬಲಾತ್ ॥ ೨೯ ॥

---

೨೬. ರಾಜೇಂದ್ರ ! ಆಗ ರಥಾರೂಢರು ರಥಾರೂಢರೊಡನೆಯೂ, ಪದಾತಿಗಳು ಪದಾತಿಗಳೊಡನೆಯೂ, ಅಶ್ವಾರೋಹಿಗಳು ಅಶ್ವಾರೋಹಿಗಳೊಡನೆಯೂ, ಗಜಾರೂಢರು ಗಜಾರೂಢರೊಡನೆಯೂ, ಹೋರಾಡತೊಡಗಿದರು.

೨೭. ಕೆಲವು ಮದಿಸಿದ ಆನೆಗಳು ತಮ್ಮ ಮಾವುತರಿಂದ ಪ್ರೇರಿಸಲ್ಪಟ್ಟು ಹೋರಾಡುತ್ತಾ ಮೇಘಗರ್ಜನೆಯಿಲ್ಲದಿರುವ ಪರ್ವತಗಳೋ ಎನ್ನುವಂತೆ ಶೋಭಿಸಿದುವು.

೨೮. ಇನ್ನು ಕೆಲವು ಆನೆಗಳು ಆಗಾಗ್ಗೆ ಗಟ್ಟಿಯಾಗಿ ಗರ್ಜಿಸುತ್ತಲೂ, ಪುನಃ ಪುನಃ ಫೂತ್ಕಾರಗಳನ್ನು ಮಾಡುತ್ತಲೂ, ಮುನ್ನುಗ್ಗುತ್ತಾ ತಮ್ಮ ಸೊಂಡಲುಗಳಿಂದಲೂ, ಸರಪಳಿಗಳಿಂದಲೂ, ಎದುರಿಗೆ ಸಿಕ್ಕಿದ ತೇರುಗಳನ್ನೂ, ಕುದುರೆಗಳನ್ನೂ ಯೋಧರನ್ನೂ ಕೆಳಗುರುಳಿಸುತ್ತಾ ಯುದ್ಧರಂಗದಲ್ಲಿ ಸಂಚರಿಸಿದುವು.

೨೯. ಕೆಲವು ಮದ್ದಾನೆಗಳು ಕುದುರೆಗಳಿಂದಲೂ, ಸಾರಥಿಗಳಿಂದಲೂ ಸಮೇತವಾದ ರಥಗಳನ್ನು ತಮ್ಮ ಸೊಂಡಲುಗಳಿಂದ ಸುತ್ತಿಕೊಂಡು ನೆಲದ ಮೇಲೆ ಅಪ್ಪಳಿಸಿ ಬಿಟ್ಟುದಲ್ಲದೆ ಆಕಾಶದಲ್ಲಿಯೂ ದೂರವಾಗಿ ಎಸೆದುಬಿಟ್ಟುವು.

ಕಾಂಶ್ಚಿನ್ಮಮರ್ದುಃ ಪಾದಾಭ್ಯಾಂ ಸಂವಿದಾರ್ಯುರ್ಕರೈರ್ದೃಢೈಃ ।
ಸಕ್ಷತಾಶ್ಚ ಗಜಾ ರಾಜನ್ಪ್ರಧಾವಂತೋ ರಣಾಂಗಣೇ ॥ ೩೦ ॥

ಸಪಕ್ಷಾಸ್ತುರಗಾ ರಾಜನ್ನಶ್ವವಾಹಪ್ರಣೋದಿತಾಃ ।
ಉಲ್ಲಂಘಯಂತೋಽಥ ರಥಾನ್ಗಜಕುಂಭಾಂತರೇ ಗತಾಃ ॥ ೩೧ ॥

ಕೇಚಿದಶ್ವೈರ್ಮಹಾವೀರಾಃ ಶಕ್ತಿಹಸ್ತಾ ಮದೋತ್ಕಟಾಃ ।
ಜಘ್ನುರ್ಗಜಸ್ಥಾನ್ನೃಪತೀನ್ಮೃಗೇಂದ್ರಾ ಇವ ಯೂಥಪಾನ್ ॥ ೩೨ ॥

ಅಶ್ವಾರೂಢಾಃ ಕೇಽಪಿ ಸೇನಾಂ ಸಂವಿದಾರ್ಯ ವಿನಿರ್ಗತಾಃ ।
ಖಡ್ಗವೇಗೈಃ ಪದ್ಮವನಂ ಲೀಲಾಭಿರ್ವಾಯವೋ ಯಥಾ ॥ ೩೩ ॥

---

೩೦. ರಾಜೇಂದ್ರ ! ಕೆಲವು ಮಂದಿ ಆನೆಗಳು ತಮ್ಮ ಎದುರುಕಡೆಯ ವೀರರ ಆಯುಧ ಪ್ರಹಾರಗಳಿಂದ ಗಾಯಗಳನ್ನು ಹೊಂದಿ ಓಡುತ್ತಾ ಕೋಪದಿಂದ ಕೆಲವರನ್ನು ಕಾಲಿನಿಂದ ಹೊಸೆದುಬಿಟ್ಟುವು. ಕೆಲವರನ್ನು ಸೊಂಡಲುಗಳಿಂದಲೂ, ಕೊಂಬುಗಳಿಂದಲೂ ತಿವಿದು ಸೀಳಿಬಿಟ್ಟುವು.

೩೧. ಓ ಮಿಥಿಲಾಧಿಪ! ಇನ್ನೊಂದು ಕಡೆ ಕುದುರೆಯ ಪಡೆಗಳು ತಮ್ಮ ತಮ್ಮ ಸವಾರರ ಸಂಜ್ಞೆಗಳನ್ನರಿತು ವೇಗದಿಂದ ತಮ್ಮ ರೆಕ್ಕೆಗಳೊಡನೆ ಹಾರುತ್ತಾ ಎದುರಾದ ರಥಗಳನ್ನು ಒಂದೇ ನೆಗೆತದಿಂದ ದಾಟುತ್ತಾ ಉನ್ನತವಾದ ಆನೆಗಳ ಕುಂಭಸ್ಥಳಗಳ ನಡುವೆ ಬಂದೆರಗುತ್ತಿದ್ದುವು.

೩೨. ಶೌರ್ಯಮದದಿಂದ ಬೀಗುತ್ತಿರುವ ಕೆಲಮಂದಿ ಮಹಾವೀರರು ಶಕ್ತಿಯೆಂಬ ಆಯುಧವನ್ನು ಕೈಯಲ್ಲಿ ಹಿಡಿದು ಕುದುರೆಗಳ ಮೇಲೆ ಸಂಚರಿಸುತ್ತಾ 'ಸಿಂಹಗಳು ಆನೆಗಳನ್ನು ಕೊಲ್ಲುವಂತೆ' ಮದ್ದಾನೆಗಳನ್ನೇರಿ ಹೋರಾಡುತ್ತಿರುವ ಶತ್ರುಸೇನಾಪತಿಗಳನ್ನು ಕೊಲ್ಲುತ್ತಿದ್ದರು.

೩೩. ರಾಜೇಂದ್ರ ! ಬಿರ್ರನೆ ಬೀಸುವ ಗಾಳಿಗಳು ಕಮಲಗಳ ವನವನ್ನು ಹೊಕ್ಕು ಯಾವ ರೀತಿ ಅವನ್ನು ತುಂಡರಿಸಿಬಿಸುಡುತ್ತಾ ತೂರಿಕೊಂಡು ಹೋಗುವುವೋ ಆ ರೀತಿ ಕೆಲಮಂದಿ ಅಶ್ವಾರೋಹಿಗಳು ತಮ್ಮ ಖಡ್ಗಪ್ರಹಾರದಿಂದ ಶತ್ರುಸೇನೆಯನ್ನು ತುಂಡರಿಸುತ್ತಾ ನಿರಾಯಾಸವಾಗಿ ಭೇದಿಸಿಕೊಂಡು ನುಗ್ಗುತ್ತಿದ್ದರು.

ಕೇಚಿತ್ಪರಸ್ಪರಂ ಸಾಶ್ವೈರುತ್ಪತಂತೋ ರಣಾಂಗಣೇ ।
ಖಡ್ಗೈರ್ಜಘ್ನುರ್ಯಥಾ ಕ್ರವ್ಯೇ ಚಂಚುಭಿಃ ಪಕ್ಷಿಣೋಂಬರೇ ॥ ೩೪ ॥

ಕೇಚಿತ್ಖಡ್ಗೈಃ ಪರಶುಭಿಃ ಕೇಚಿಚ್ಚಕ್ರೈಃ ಪದಾತಯಃ ।
ಚಿಚ್ಛಿದುರ್ನಿಶಿತೈರ್ಭಲ್ಲೈಃ ಫಲಾನೀವ ಶಿರಾಂಸಿ ಚ ॥ ೩೫ ॥

ಸಂಗ್ರಾಮಜಿದ್ಬೃಹತ್ಸೇನಃ ಶೂರಃ ಪ್ರಹರಣೋ ವಿಜಿತ್ ।
ಜಯಃ ಸುಭದ್ರೋ ವಾಮಶ್ಚ ಸತ್ಯಕೋಽಶ್ವಯುರೇವ ಹಿ ॥ ೩೬ ॥

ಭದ್ರಾಯಾಶ್ಚ ಸುತಾ ಹ್ಯೇತೇ ಶ್ರೀಕೃಷ್ಣಸ್ಯೌರಸಾಃ ಶುಭಾಃ ।
ಸರ್ವೇಷಾಮಗ್ರತಃ ಪ್ರಾಪ್ತಾ ಯುಯುಧುರ್ದೈತ್ಯಪುಂಗವೈಃ ॥ ೩೭ ॥

ಭೂತಸಂತಾಪನೋ ನಾಮ ಗಜಾರೂಢೋ ಮಹಾಸುರಃ ।
ಯದುಸೈನ್ಯೇ ಮಹಾರಾಜ ಚಕ್ರೇ ನಾರಾಚದುರ್ದಿನಂ ॥ ೩೮ ॥

---

೩೪. ಮತ್ತು ಆ ಯುದ್ಧರಂಗದಲ್ಲಿ ಉಭಯ ಸೇನೆಯ ಅಶ್ವಾರೋಹಿಗಳು ಒಬ್ಬರ ಮೇಲೆ ಒಬ್ಬರು ತಮ್ಮ ಕುದುರೆಗಳನ್ನು ಹಾರಿಸುತ್ತಾ ತಮ್ಮ ಕೊಕ್ಕುಗಳಿಂದ ಮಾಂಸವನ್ನು ಕಚ್ಚಿಕೊಂಡೊಯ್ಯುವ ಆಕಾಶದಲ್ಲಿನ ಪಕ್ಷಿಗಳಂತೆ ತಮ್ಮ ಶತ್ರುಗಳ ಮೇಲೆ ಕತ್ತಿಗಳನ್ನು ಬೀಸುತ್ತಾ ಸಂಚರಿಸುತ್ತಿದ್ದರು.

೩೫. ಪದಾತಿಗಳಲ್ಲಿ ಕೆಲವರು ಖಡ್ಗಗಳಿಂದಲೂ, ಕೆಲವರು ಗಂಡುಗೊಡಲಿಗಳಿಂದಲೂ, ಕೆಲವರು ಚಕ್ರಗಳಿಂದಲೂ, ಕೆಲವರು ಮೊನಚಾದ ಭಲ್ಲೆಗಳಿಂದಲೂ ತಮ್ಮ ಎದುರಾಳಿಗಳ ತಲೆಗಳನ್ನು ಹಣ್ಣುಗಳಂತೆ ಕತ್ತರಿಸಿ ಕೆಡಹುತ್ತಿದ್ದರು.

೩೬–೩೭. ಆಗ ಭದ್ರಾ ಎಂಬ ಪಟ್ಟಮಹಿಷಿಯಲ್ಲಿ ಜನಿಸಿದ ಶ್ರೀಕೃಷ್ಣನ ಔರಸಪುತ್ರರಾದ ಸಂಗ್ರಾಮಜಿತ್ತು, ಬೃಹತ್ಸೇನ, ಶೂರ, ಪ್ರಹರಣ, ವಿಜಿತ್ತು, ಜಯ, ಸುಭದ್ರ. ವಾಮ. ಸತ್ಯಕ, ಅಶ್ವಯು ಎಂಬ ಕುಮಾರರು ಯದುವೀರರೆಲ್ಲರಿಗಿಂತಲೂ ಮುಂದೆ ಬಂದು ಆ ದೈತ್ಯವೀರರೊಡನೆ ಹೋರಾಡತೊಡಗಿದರು.

೩೮. ರಾಜೇಂದ್ರ! ಆಗ ಭೂತಸಂತಾಪನೆಂಬ ದೈತ್ಯಶ್ರೇಷ್ಠನು ಗಜಾರೂಢನಾಗಿ ಬರುತ್ತಾ ಯಾದವ ಸೇನೆಯ ಮೇಲೆ ಮಳೆಯಂತೆ ತನ್ನ ಬಾಣಗಳನ್ನು ಎಡಬಿಡದೆ ಸುರಿಸಿದನು.

ಬಾಣಾಂಧಕಾರೇ ಚ ಕೃತೇ ಭೂತಸಂತಾಪನೇನ ವೈ ।
ಸಂಗ್ರಾಮಜಿತ್ತದಾ ಪ್ರಾಪ್ತಃ ಶ್ರೀಕೃಷ್ಣಸ್ಯ ಸುತೋ ಬಲೀ ॥ ೩೯ ॥

ವಿವ್ಯಾಧ ಬಾಣಶತಕೈರ್ಭೂತಸಂತಾಪನಂ ರಣೇ ।
ಪ್ರಲಯಾರ್ಣವಸಂಘೋಷಭೀಮಸಂಘಟ್ಟನಾದಿನೀಂ ॥ ೪೦ ॥

ಧನುರ್ಜ್ಯಾಂ ತಸ್ಯ ಚಿಚ್ಛೇದ ಭೂತಸಂತಾಪನೋ ಬಲೀ ।
ಸಂಗ್ರಾಮಜಿದ್ಧನುಶ್ಚಾನ್ಯದ್ಗೃಹೀತ್ವಾ ಸ್ವಂ ತಡಿತ್ಪ್ರಭಂ ॥ ೪೧ ॥

ಸಜ್ಯಂ ಕೃತ್ವಾ ವಿಧಾನೇನ ಶತಂ ಬಾಣಾನ್ಸಮಾದಧೇ ।
ತೇ ಬಾಣಾಸ್ತದ್ಧನುರ್ಜ್ಯಾಂ ಚ ಕವಚಂ ಲೋಹನಿರ್ಮಿತಂ ॥ ೪೨ ॥

---

೩೯. ಈ ರೀತಿಯಾಗಿ ಆ ಭೂತಸಂತಾಪನ ಬಾಣದಿಂದ ಸುತ್ತಲೂ ಕಗ್ಗತ್ತಲೆಯು ಕವಿದಂತಾಗಲು ಶ್ರೀಕೃಷ್ಣಪುತ್ರನಾದ ಸಂಗ್ರಾಮಜಿತ್ತೆಂಬ ವೀರನು ಮುಂದೆ ಬಂದು.

೪೦–೪೧. ನೂರು ಬಾಣಗಳಿಂದ ಆ ಭೂತಸಂತಾಪನನ್ನು ಮೈಯೆಲ್ಲಾ ನಾಟಿಕೊಳ್ಳುವಂತೆ ಪ್ರಹರಿಸಿದನು. ಆಗ ಕುಪಿತನಾದ ಆ ದೈತ್ಯನು ಪ್ರಳಯಕಾಲದ ಸಾಗರ ತರಂಗಗಳು ಪರಸ್ಪರ ಸಂಘರ್ಷಿಸುವಾಗ ಉಂಟಾಗುವ ಮಹಾಧ್ವನಿಯಂತೆ ಝೇಂಕಾರವನ್ನು ಮಾಡುತ್ತಿರುವ ಆ ಸಂಗ್ರಾಮಜಿತ್ತಿನ ಬಿಲ್ಲನ್ನು ಕತ್ತರಿಸಿಬಿಟ್ಟನು.

೪೨. ಕೂಡಲೇ ಆ ಸಂಗ್ರಾಮಜಿತ್ತು ಮಿಂಚಿನಂತೆ ಹೊಳೆಯುತ್ತಿರುವ ಬೇರೊಂದು ಬಿಲ್ಲನ್ನು ತೆಗೆದುಕೊಂಡು ಶಾಸ್ತ್ರೀಯವಾಗಿ ಅದಕ್ಕೆ ಹೆದೆಯೇರಿಸಿ ನೂರು ಬಾಣಗಳನ್ನು ಹೂಡಿ ಆ ದೈತ್ಯನ ಮೇಲೆ ಪ್ರಯೋಗಿಸಲು ಆ ಬಾಣಗಳು ಅವನ ಧನುಸ್ಸನ್ನೂ ಕತ್ತರಿಸಿದುದಲ್ಲದೆ, ಉಕ್ಕಿನಿಂದ ನಿರ್ಮಿಸಲ್ಪಟ್ಟಿದ್ದ ಅವನ ಕವಚವನ್ನು ಛೇದಿಸಿ.

ಭಿತ್ವಾ ಭಿತ್ವಾ ತನುಂ ತಸ್ಯ ಗಜಂ ಭಿತ್ವಾವನಿಂ ಗತಾಃ ।
ಬಾಣಪ್ರಹಾರವ್ಯಥಿತಃ ಕಿಂಚಿದ್ವ್ಯಾಕುಲಮಾನಸಃ ॥ ೪೩ ॥

ಗಜಂ ಸ್ವಂ ನೋದಯಾಮಾಸ ಭೂತಸಂತಾಪನೋ ಬಲೀ ।
ಕಾಲಾಂತಕಸಮಂ ನಾಗಂ ದೃಷ್ಟ್ವಾ ಸಂಗ್ರಾಮಜಿದ್ಬಲೀ ॥ ೪೪ ॥

ಗೃಹೀತ್ವಾ ಸ್ವಮಸಿಂ ದಿವ್ಯಂ ಸಂಜಘಾನ ರಣಾಂಗಣೇ ।
ತಸ್ಯ ಖಡ್ಗಪ್ರಹಾರೇಣ ಶುಂಡಾದಂಡೋ ದ್ವಿಧಾಭವತ್ ॥ ೪೫ ॥

ಚೀತ್ಕಾರಮುತ್ಕಟಂ ಕುರ್ವನ್ಮದಂ ಸಂಸ್ರಾವಯನ್ಕಟಾತ್ ।
ಭೂತಸಂತಾಪನಂ ತ್ಯಕ್ತ್ವಾ ಭುವನಂ ಕಂಪಯನ್ಗಜಃ ॥ ೪೬ ॥

ನಿಪಾತಯನ್ಮಹಾವೀರಾನ್ಘಂಟಾನಾದೈರ್ನದನ್ಮುಹುಃ ।
ನ ಬಲಾತ್ಸ್ತಂಭಿತೋ ದೈತ್ಯೈಃ ಪುರೀಂ ಚಂದ್ರಾವತೀಂ ಯಯೌ ॥ ೪೭ ॥

---

೪೩. ಆ ದೈತ್ಯನ ಶರೀರವನ್ನೂ, ಅವನು ಕುಳಿತಿದ್ದ ಆನೆಯನ್ನೂ ನೆಲದಲ್ಲಿ ನಾಟಿಬಿಟ್ಟುವು. ಆ ಬಾಣಪ್ರಹಾರದಿಂದ ನೋವನ್ನು ತಾಳಲಾರದೆ ಆ ದೈತ್ಯನು ಸ್ವಲ್ಪಮಟ್ಟಿಗೆ ಕಳವಳಕ್ಕೀಡಾದನು.

೪೪. ಆದರೇನು ? ಆ ಬಲಶಾಲಿಯು ತನ್ನ ಆನೆಯನ್ನು ಆ ಸಂಗ್ರಾಮಜಿತ್ತಿನ ಮೇಲೆ ನುಗ್ಗಿಸಿದನು. ಆಗ ಆ ಯದುವೀರನು ತನ್ನ ಮೇಲೆ ಪ್ರಳಯಕಾಲದ ಯಮನಂತೆ ನುಗ್ಗಿಬರುತ್ತಿರುವ ಆ ಆನೆಯನ್ನು,

೪೫. ಕಾಣುತ್ತಲೇ ತನ್ನ ದಿವ್ಯವಾದ ಖಡ್ಗವೊಂದನ್ನು ತೆಗೆದು ಜೋರಾಗಿ ಪ್ರಹರಿಸಿ ಅದರ ಸೊಂಡಿಲನ್ನು ಎರಡು ತುಂಡಾಗಿ ಕತ್ತರಿಸಿಬಿಟ್ಟನು.

೪೬–೪೭. ಕೂಡಲೇ ಆ ಭೂತಸಂತಾಪನನ್ನು ಹೊತ್ತಿದ್ದ ಮದ್ದಾನೆಯು ಗಟ್ಟಿಯಾಗಿ ಚೀತ್ಕಾರವನ್ನು ಮಾಡುತ್ತಾ, ತನ್ನ ಕಪೋಲಸ್ಥಳದಿಂದ ಮದೋದಕವನ್ನು ಸುರಿಸುತ್ತಾ, ತನ್ನ ಸ್ವಾಮಿಯನ್ನು ಬಿಟ್ಟು ಭೂಮಿಯು ನಡುಗುವಂತೆ ವೇಗದಿಂದ ಕಾಲಿಕ್ಕುತ್ತಾ, ಎದುರಿಗೆ ಸಿಕ್ಕುವ ವೀರರೆಲ್ಲರನ್ನೂ ಉರುಳಿಸುತ್ತಾ ಟಣಟಣ ಗುಟ್ಟುತ್ತಿರುವ ಗಂಟೆಗಳ ಧ್ವನಿಯೊಡನೆ ಸರ್ರನೆ ಚಂದ್ರಾವತೀನಗರಕ್ಕೆ ಅಭಿಮುಖವಾಗಿ ಓಡಿಬಿಟ್ಟಿತು. ಅದನ್ನು ತಡೆಯಲು ಯಾವ ದೈತ್ಯನಿಗೂ ಸಾಧ್ಯವಾಗಲಿಲ್ಲ.

ಕೋಲಾಹಲೋ ಮಹಾನಾಸೀದ್ವ್ರಜನ್ನೇವಂ ಗಜೇ ಚ್ಯುತೇ ।
ಭೂತಸಂತಾಪನಶ್ಚಕ್ರಂ ಶ್ರೀಕೃಷ್ಣಸ್ಯ ಸುತಾಯ ವೈ　　॥ ೪೮ ॥

ಚಿಕ್ಷೇಪ ನಿಶಿತಂ ಶೀಘ್ರಂ ಗ್ರೀಷ್ಮಮಾರ್ತಂಡವತ್ಸ್ಫುರತ್ ।
ತದಾಗತಂ ಭ್ರಮದ್ದೃಷ್ಟ್ವಾ ಚಕ್ರಂ ಭದ್ರಾತ್ಮಜೋ ಬಲೀ　　॥ ೪೯ ॥

ಸ್ವಚಕ್ರೇಣ ಮಹಾರಾಜ ಲೀಲಯಾ ಶತಧಾಚ್ಛಿನತ್ ।
ಜಠರಸ್ಯ ಗಿರೇಃ ಶೃಂಗಂ ಸಮುತ್ಪಾಟ್ಯ ಮಹಾಸುರಃ　　॥ ೫೦ ॥

ಚಿಕ್ಷೇಪ ಕೃಷ್ಣಪುತ್ರಾಯ ನಾದಯನ್ವ್ಯೋಮಮಂಡಲಂ ।
ಸಂಗ್ರಾಮಜಿಚ್ಚ ತಚ್ಛೃಂಗಂ ಗೃಹೀತ್ವಾ ಭುಜಯೋರ್ಬಲಾತ್　　॥ ೫೧ ॥

---

೪೮. ಈ ರೀತಿಯಾಗಿ ಆ ಆನೆಯು ಓಡಿಹೋದುವನ್ನು ಕಂಡು ಆ ದೈತ್ಯ ಸೇನೆಯಲ್ಲಿ ಬಹಳ ಗದ್ದಲವುಂಟಾಯಿತು. ಆಗ ಆ ಭೂತಸಂತಾನನು ಕೃಷ್ಣಪುತ್ರನಾದ ಆ ಸಂಗ್ರಾಮಜಿತ್ತನ್ನು ಕೊಲ್ಲಲೋಸುಗ ಅತಿ ತೀಕ್ಷ್ಣವಾದ ಅಲುಗುಳ್ಳ ಚಕ್ರವೊಂದನ್ನು ತೆಗೆದುಕೊಂಡು ಬೀಸಿದನು.

೪೯. ಈ ರೀತಿ ಆ ದೈತ್ಯನಿಂದ ಪ್ರಯೋಗಿಸಲ್ಪಟ್ಟು ಗ್ರೀಷ್ಮಕಾಲದ ಸೂರ್ಯನಂತೆ ಧಗಧಗಿಸುತ್ತಾ ತನ್ನೆಡೆಗೆ ಬರುತ್ತಿರುವ ಆ ಚಕ್ರವನ್ನು ಕಂಡು ಭದ್ರಾತ್ಮಜನಾದ ಆ ವೀರನು,

೫೦. ತನ್ನ ಚಕ್ರವನ್ನು ತೆಗೆದುಕೊಂಡು ಲೀಲಾಮಾತ್ರದಿಂದ ಕತ್ತರಿಸಿಬಿಟ್ಟನು. ಆಗ ಆ ಮಹಾದೈತ್ಯನು ಜಠರಪರ್ವತದ ಕೋಡುಗಲ್ಲನ್ನು ಕಿತ್ತುಕೊಂಡು,

೫೧. ಆಕಾಶವೆಲ್ಲವೂ ಮಾರ್ಮೊಳಗುವಂತೆ ಗಟ್ಟಿಯಾಗಿ ಅಬ್ಬರಿಸುತ್ತಾ ಆ ಕೃಷ್ಣಪುತ್ರನಿಗೆ ಸರಿಯಾಗಿ ಗುರಿಯಿಟ್ಟು ಬೀಸಿದನು. ಕೂಡಲೇ ಆ ಸಂಗ್ರಾಮಜಿತ್ತು ತನ್ನೆಡೆಗೆ ಬರುತ್ತಿರುವ ಆ ಕೋಡುಗಲ್ಲನ್ನು ತನ್ನೆರಡು ತೋಳುಗಳಿಂದಲೂ ಆತುಕೊಂಡು ಹಿಡಿದುಬಿಟ್ಟನು.

ತತಾಡ ತೇನ ರಾಜೇಂದ್ರ ಭೂತಸಂತಾಪನಂ ರಣೇ ।
ಭೂತಸಂತಾಪನೋ ದೈತ್ಯಃ ಸಂಪೂರ್ಣಂ ಜಠರಂ ಗಿರಿಂ ॥ ೫೨ ॥

ಗೃಹೀತ್ವಾ ಸಂಗರೇ ತಸ್ಥಾವುದ್ಭಟೋ ದೈತ್ಯಪುಂಗವಃ ।
ಅನೇನ ಘಾತಯಿಷ್ಯಾಮಿ ತ್ವಾಂ ರಣೇ ಪ್ರವದನ್ಮುಖಾತ್ ॥ ೫೩ ॥

ದೇವಕೂಟಂ ಸಮುತ್ಪಾಟ್ಯ ಗಿರಿಂ ಚ ಶ್ರೀಹರೇಃ ಸುತಃ ।
ಅನೇನ ಘಾತಯಿಷ್ಯಾಮಿ ತ್ವಾಂ ರಣೇ ಪ್ರವದನ್ಮುಖಾತ್ ॥ ೫೪ ॥

ತಸ್ಥೌ ತತ್ಸಂಮುಖೇ ರಾಜಂಸ್ತದದ್ಭುತಮಿವಾಭವತ್ ।
ಕ್ಷಿಪಂತಂ ಪರ್ವತಂ ದೈತ್ಯಂ ಭೂತಸಂತಾಪನಂ ನೃಪಃ ॥ ೫೫ ॥

ತತಾಡ ಗಿರಿಣಾ ಸ್ವೇನ ರಣೇ ಸಂಗ್ರಾಮಜಿದ್ಬಲೀ ।
ಜಠರೋ ದೇವಕೂಟಶ್ಚ ದ್ವೌ ಗಿರೀ ದೈತ್ಯಮಸ್ತಕೇ ॥ ೫೬ ॥

ಪತಿತೌ ಭೂರಿಭಾರಾಢ್ಯೌ ವಜ್ರಸಂಘರ್ಷನಾದಿನೌ ॥ ೫೭ ॥

೫೨–೫೩. ಅನಂತರ ಅದೇ ಪರ್ವತಶೃಂಗದಿಂದಲೇ ಆ ಭೂತಸಂತಾಪನನ್ನು ಪ್ರಹರಿಸಿದನು. ಆಗ ಕುಪಿತನಾದ ಆ ಭೂತಸಂತಾಪನು ಸಂಪೂರ್ಣವಾಗಿ ಆ ಜಠರ ಪರ್ವತವನ್ನೇ ಕಿತ್ತುಕೊಂಡು ಆ ಪರ್ವತದಿಂದ ಈಗಲೇ ನಿನ್ನನ್ನು ಸಾಯಿಸಿಬಿಡುವೆನೆಂದು ಗಟ್ಟಿಯಾಗಿ ಕೂಗುತ್ತಾ ಆ ರಣರಂಗದಲ್ಲಿ ಸಿದ್ಧವಾಗಿ ನಿಂತನು.

೫೪. ಅದನ್ನು ಕಂಡು ಕೃಷ್ಣಪುತ್ರನಾದ ಆ ಸಂಗ್ರಾಮಜಿತ್ತೂ ಸಹ ದೇವಕೂಟವೆಂಬ ಪರ್ವತವನ್ನು ಕಿತ್ತುಕೊಂಡು ಇದರಿಂದ ನಿನ್ನನ್ನೇ ಕೊಂದುಬಿಡುವೆನೆಂದು ಹೇಳುತ್ತಾ ಅವನೆದುರಾಗಿ ನಿಂತನು.

೫೫–೫೭. ಓ ರಾಜೇಂದ್ರ! ಆ ಆಶ್ಚರ್ಯವನ್ನು ಏನೆಂದು ಹೇಳಲಿ! ಭೂತಸಂತಾಪನು ತನ್ನ ಕೈಲಿ ಹಿಡಿದಿದ್ದ ಆ ಪರ್ವತವನ್ನು ಆ ಸಂಗ್ರಾಮಜಿತ್ತಿನ ಮೇಲೆ ಪ್ರಯೋಗಿಸುತ್ತಲೇ ಆ ಯದುವೀರನೂ ಸಹ ತಾನು ಹಿಡಿದಿದ್ದ ಪರ್ವತದಿಂದ ಅದರ ಮೇಲೆ ಬೀಸಿ ಹೊಡೆದನು. ಆಗ ಅವರಿಬ್ಬರೂ ಪ್ರಹರಿಸಿದ ದೇವಕೂಟ ಮತ್ತು ಜಠರಗಳೆಂಬ ಎರಡು ಪರ್ವತಗಳೂ ಒಂದಕ್ಕೊಂದು ತಗುಲಿ ಭಾರಿ ಸಿಡಿಲುಗಳೆರಡರಂತೆ ಕಠೋರವಾದ ಧ್ವನಿಯನ್ನು ಮಾಡುತ್ತಾ ಆ ದೈತ್ಯರಾಜನ ತಲೆಯ ಮೇಲೆ ಬಿದ್ದುಹೋದುವು.

ಭೂತಸಂತಾಪನಸ್ತಾಭ್ಯಾಂ ಪತಿತಃ ಪಂಚತಾಂ ಗತಃ ।
ತಜ್ಜ್ಯೋತಿಃ ಸಂಗ್ರಾಮಜಿತಿ ಲೀನಂ ಜಾತಂ ವಿದೇಹರಾಟ್ ॥ ೫೮ ॥

ಶ್ರೀಸಂಗ್ರಾಮಜಿತಃ ಸೈನ್ಯೇ ನೇದುರ್ದುಂದುಭಯಸ್ತದಾ ।
ಭದ್ರಾತ್ಮಜೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೫೯ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ಭೂತಸಂತಾಪನದೈತ್ಯವಧೋ ನಾಮ ತ್ರಯಸ್ತ್ರಿಂಶೋಽಧ್ಯಾಯಃ

---

೫೮. ಈ ರೀತಿ ಬಹು ಭಾರಿಯಾದ ಪರ್ವತಗಳೆರಡೂ ತನ್ನ ತಲೆಯ ಮೇಲೆ ಬಿದ್ದು ಬಿಟ್ಟೊಡನೆಯೇ ಆ ಭೂತಸಂತಾಪನು ಕ್ಷಣಮಾತ್ರದಲ್ಲಿ ತನ್ನ ಪ್ರಾಣಗಳನ್ನು ತೊರೆದುಬಿಟ್ಟನು. ಆಗ ಅವನ ದೇಹದಿಂದ ಜ್ಯೋತಿಯೊಂದು ಹೊರಟು ಕೃಷ್ಣ ಪುತ್ರನಾದ ಆ ಸಂಗ್ರಾಮಜಿತ್ತಿನಲ್ಲಿ ಐಕ್ಯವಾಗಿಬಿಟ್ಟಿತು.

೫೯. ಆಗ ಸಂಗ್ರಾಮಜಿತ್ತಿನ ಸೇನೆಯಲ್ಲಿ ವಿಜಯಸೂಚಕವಾದ ನಗಾರಿಗಳು ಬಾರಿಸಲ್ಪಟ್ಟವು. ದೇವತೆಗಳು ಆತನ ಮೇಲೆ ಹೂವಿನ ಮಳೆಯನ್ನು ಸುರಿಸಿದರು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀನಾರದ
ಬಹುಲಾಶ್ವ ಸಂವಾದದಲ್ಲಿ ಭೂತಸಂತಾಪನವಧವೆಂಬ
ಮೂವತ್ತಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಚತುಸ್ತ್ರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಸಂಗ್ರಾಮಜಿನ್ಮಹಾಯುದ್ಧೇ ಭೂತಸಂತಾಪನೇ ಮೃತೇ ।
ಹಾಹಾಕಾರೋ ಮಹಾನಾಸೀದ್ದೈತ್ಯಸೇನಾಸು ಮೈಥಿಲ ॥ ೧ ॥

ಶಕುನಿರ್ವೃಕಃ ಕಾಲನಾಭೋ ಮಹಾನಾಭಸ್ತಥೈವ ಚ ।
ಹರಿಶ್ಮಶ್ರುಶ್ಚ ಪಂಚೈತೇ ಸಂಪ್ರಾಪ್ತಾ ರಣಮಂಡಲೇ ॥ ೨ ॥

ಮೂವತ್ತನಾಲ್ಕನೆಯ ಅಧ್ಯಾಯವು

೧. ಓ ಮಿಥಿಲಾಧೀಶ! ಈ ರೀತಿಯಾಗಿ ಸಂಗ್ರಾಮಜಿತ್ತಿನೊಡನೆ ನಡೆದ ಭಾರಿ ಯುದ್ಧದಲ್ಲಿ ಭೂತಸಂತಾಪನನು ಮಡಿದುಹೋದುದನ್ನು ಕಂಡು ದೈತ್ಯಸೈನ್ಯದಲ್ಲಿ ಭಾರಿ ಹಾಹಾಕಾರವುಂಟಾಯಿತು.

೨. ಆಗ ಶಕುನಿಯೆಂಬ ದೈತ್ಯೇಂದ್ರನೂ, ಅವನ ತಮ್ಮಂದಿರಾದ ವೃಕ, ಕಾಲನಾಭ, ಮಹಾನಾಭ, ಹರಿಶ್ಮಶ್ರು ಎಂಬ ವೀರರೂ ಸೇರಿ ಒಟ್ಟಿಗೆ ಐದು ಮಂದಿ ರಣರಂಗಕ್ಕೆ ಬಂದರು.

ಕಾರ್ಷ್ಣಿಃ ಶಕುನಿನಾಯುಧ್ಯದನಿರುದ್ಧೋ ವೃಕೇಣ ವೈ ।
ಕಾಲನಾಭೇನ ಸಾಂಬಸ್ತು ಮಹಾನಾಭೇನ ದೀಪ್ತಿಮಾನ್ ॥ ೩ ॥

ಹರಿಶ್ಮಶ್ರುಸುರೇಣಾಪಿ ಭಾನುಃ ಕೃಷ್ಣಸುತೋ ಬಲೀ ।
ಸರ್ವೇಷಾಮಗ್ರತಃ ಪ್ರಾಪ್ತೋಽನಿರುದ್ಧೋ ಧನ್ವಿನಾಂ ವರಃ ॥ ೪ ॥

ಬಿಭೇದ ಬಾಣೈರ್ದೈತ್ಯಾಂಶ್ಚ ವಜ್ರೇಣೇಂದ್ರೋ ಯಥಾ ಗಿರೀನ್ ।
ಅನಿರುದ್ಧಶರೈರ್ದೈತ್ಯಾಶ್ಛಿನ್ನಪಾದಾಂಸಜಾನವಃ ॥ ೫ ॥

ನಿಪೇತುರ್ಮೂರ್ಛಿತಾ ಭೂಮೌ ವೃಕ್ಷಾ ವಾತಹತಾ ಇವ ।
ಅನಿರುದ್ಧಶರೈಸ್ತೀಕ್ಷ್ಣೈಃ ಸಂಭಿನ್ನಾ ಮೇಘಡಂಬರಾಃ ॥ ೬ ॥

---

೩. ಆ ದೈತ್ಯೇಂದ್ರನಾದ ಶಕುನಿಯೊಡನೆ ಪ್ರದ್ಯುಮ್ನನೇ ಯುದ್ಧಕ್ಕೆ ನಿಂತನು. ವೃಕನೊಡನೆ ಅನಿರುದ್ಧನು ನಿಂತನು. ಕಾಲನಾಭನೊಂದಿಗೆ ಸಾಂಬನೂ, ಮಹಾನಾಭನೊಂದಿಗೆ ದೀಪ್ತಿಮಂತನೂ ಹೋರಾಡಲು ಸಿದ್ಧರಾದರು.

೪. ಹರಿಶ್ಮಶ್ರುವಿನೊಡನೆ ಸೆಣಸಲು ಕೃಷ್ಣಪುತ್ರನಾದ ಭಾನುವೆಂಬ ವೀರನು ನಿಂತನು. ಇವರೆಲ್ಲರಿಗಿಂತಲೂ ಮುಂದೆ ಧನುರ್ಧರಾಗ್ರೇಸರನಾದ ಅನಿರುದ್ಧನು ನಿಂತು ಹೋರಾಡತೊಡಗಿದನು.

೫. ಆ ಅನಿರುದ್ಧನು "ಇಂದ್ರನು ವಜ್ರಾಯುಧದಿಂದ ಪರ್ವತಗಳನ್ನು ಕತ್ತರಿಸಿದಂತೆ" ತನ್ನ ಬಾಣಗಳಿಂದ ದೈತ್ಯವೀರರನ್ನು ತುಂಡರಿಸುತ್ತಾ ಬಂದನು. ಆ ಬಾಣದಿಂದ ದೈತ್ಯರ ಕಾಲುಗಳೂ, ಭುಜಗಳೂ. ಮುಂಡಿಗೆಳೂ ಕತ್ತರಿಸಿಹೋಗಿ,

೬. 'ಅವರೆಲ್ಲರೂ ಬಿರುಗಾಳಿಗೆ ಸಿಕ್ಕಿ ಮುರಿದುಬಿದ್ದ ಭಾರಿ ಮರಗಳಂತೆ, ನೆಲದ ಮೇಲೆ ಮೂರ್ಛಿತರಾಗಿ ಬಿದ್ದುಬಿಟ್ಟರು. ಮತ್ತು ಆತನ ಮೊನಚಾದ ಅಲುಗುಗಳುಳ್ಳ ಬಾಣಗಳ ಏಟಿನಿಂದ ಮೇಘದಂತೆ ಘರ್ಜಿಸುತ್ತಾ ಬರುತ್ತಿದ್ದ ದೈತ್ಯವೀರರ ಮದ್ದಾನೆಗಳು ಸೈನ್ಯಗಳೆಲ್ಲಾ ಕತ್ತರಿಸಲ್ಪಟ್ಟು ಆ ಯುದ್ಧಭೂಮಿಯಲ್ಲಿ ಕೆಳಕ್ಕೆ ಉರುಳಿದುವು.

ಭಿನ್ನಕುಂಭಾ ಭಿನ್ನಶುಂಡಾಃ ಪತಿತಾ ರಣಮಂಡಲೇ ।
ರುಗ್ಣದಂತಾಶ್ಛಿನ್ನಕಕ್ಷಾಃ ಶೈಲಾ ವಜ್ರಹತಾ ಇವ ॥ ೭ ॥

ದ್ವಿಧಾಭೂತಾ ಗಜಾಃ ಪೇತುಃ ಸ್ಫುರತ್ಕಾಶ್ಮೀರಕಂಬಲಾಃ ।
ಕರಿಣಾಂ ಭಿನ್ನಕುಂಭಾನಾಂ ಮುಕ್ತಾ ರೇಜುಃ ಸ್ಫುರತ್ಪ್ರಭಾಃ ॥ ೮ ॥

ಬಾಣಾಂಧಕಾರೇ ರಾಜೇಂದ್ರ ರಾತ್ರೌ ತಾರಾಗಣಾ ಇವ ।
ಪ್ರಧರ್ಷಿತಾಃ ಕೇಪಿ ವೀರಾ ಅನಿರುದ್ಧಶರಾನ್ವಿತಾಃ ॥ ೯ ॥

ನಿಪೇತುರ್ಮೂರ್ಛಿತಾ ಭೂಮೌ ತದದ್ಭುತಮಿವಾಭವತ್ ।
ಕೇಚಿತ್ಕೌ ರಥಿನಃ ಪೇತುಸ್ತೇಷಾಂ ಶೂನ್ಯಾ ರಥಾಃ ಸ್ಥಿತಾಃ ॥ ೧೦ ॥

೭–೮. ಕೆಲವು ಆನೆಗಳ ಕುಂಭಸ್ಥಳಗಳು ಭೇದಿಸಲ್ಪಟ್ಟುವು. ಕೆಲವು ಆನೆಗಳ ಸೊಂಡಿಲುಗಳು ಕತ್ತರಿಸಲ್ಪಟ್ಟುವು. ಕೆಲವಕ್ಕೆ ಕೊಂಬು (ದಂತ) ಗಳೇ ಮುರಿದು ಹೋದುವು. ಕೆಲವುಗಳಿಗೆ ಕಟ್ಟಿದ್ದ ಮಿಣಿಗಳೇ (ಹಗ್ಗ) ಕತ್ತರಿಸಿಹೋದುವು. ಈ ರೀತಿಯಾಗಿ ಇಂದ್ರನ ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಪರ್ವತಗಳಂತೆ ಹೊಳೆಯುತ್ತಿರುವ ಕಾಶ್ಮೀರದ ರತ್ನಗಂಬಳಿಗಳಿಂದ ಅಲಂಕರಿಸಲ್ಪಟ್ಟಿದ್ದ ಆ ದೈತ್ಯ ವೀರರ ಮದ್ದಾನೆಗಳು ಅನಿರುದ್ಧನ ಬಾಣದ ಏಟಿಗೆ ಸಿಕ್ಕಿ ಎರಡೆರಡು ತುಂಡಾಗಿ ಬಿದ್ದುಹೋದುವು. ಓ ರಾಜೇಂದ್ರ ! ಕೆಲವು ಆನೆಗಳ ಕುಂಭಸ್ಥಳಗಳು ಕತ್ತರಿಸಲ್ಪಟ್ಟವಷ್ಟೆ ! ಆ ರೀತಿ ಕತ್ತರಿಸಲ್ಪಟ್ಟ ಕುಂಭಸ್ಥಳಗಳಿಂದ ಎಲ್ಲೆಲ್ಲೂ ಬಾಣಪ್ರಯೋಗದಿಂದ ಕಗ್ಗತ್ತಲು ಕವಿದಿದ್ದ ಆ ರಣರಂಗದಲ್ಲಿ ಶುಭ್ರವಾದ ಕಾಂತಿಯಿಂದ ಥಳಥಳಿಸುತ್ತಿದ್ದ ಮುತ್ತುಗಳು ಉದುರುತ್ತಾ ರಾತ್ರಿಯ ವೇಳೆ ನೆಲದ ಮೇಲೆ ಬೀಳುವ ನಕ್ಷತ್ರಗಳಂತೆ ತೋರಿದುವು.

೯–೧೦. ಕೆಲಮಂದಿ ಯೋಧರು ಅನಿರುದ್ಧನ ಬಾಣದೇಟನ್ನು ತಾಳಲಾರದೆ ಮೂರ್ಛಾಕ್ರಾಂತರಾಗಿ ನೆಲದ ಮೇಲೆ ಬಿದ್ದುಹೋದರು. ಅದು ಅತ್ಯದ್ಭುತವಾಗಿ ಕಂಡಿತು. ಕೆಲವು ಮಂದಿ ರಥಿಕರು ತಾವು ಕುಳಿತಲ್ಲಿಂದ ನೆಲದ ಮೇಲೆ ಬಿದ್ದು ಹೋಗಲು ಆ ರಥಗಳೆಲ್ಲವೂ ಬರಿದಾಗಿ ನಿಂತವು.

ಕಪಿತ್ಥಸ್ಯ ಫಲಾನೀವ ಹಸ್ತಿಕೋಷ್ಠಗತಾನಿ ಚ ।
ಕ್ಷಣಮಾತ್ರೇಣ ರಾಜೇಂದ್ರ ದೈತ್ಯಾನಾಂ ವಾಹಿನೀಷು ಚ ॥ ೧೧ ॥

ನದೀ ಬಭೂವ ಸಂಗ್ರಾಮೇ ಭೀಷಣಾ ಕ್ಷತಜಸ್ರವಾತ್ ।
ದ್ವಿಪಗ್ರಾಹಾ ಚೋಷ್ಟ್ರಖರಕಬಂಧಾಸ್ಯಾದಿಕಚ್ಛಪಾ ॥ ೧೨ ॥

ಶಿಶುಮಾರರಥಾ ಕೇಶಶೈವಾಲಾ ಭುಜಸರ್ಪಿಣೀ ।
ಕರಮೀನಾ ಮೌಲಿರತ್ನಹಾರಕುಂಡಲಶರ್ಕರಾ ॥ ೧೩ ॥

ಶಸ್ತ್ರಶಕ್ತೀ ಛತ್ರಶಂಖಾ ಚಾಮರಧ್ವಜಸೈಕತಾ ।
ರಥಾಂಗಾವರ್ತಸಂಯುಕ್ತಾ ಸೇನಾದ್ವಯತಟಾವೃತಾ ॥ ೧೪ ॥

---

೧೧. ಓ ರಾಜೇಂದ್ರ ! ಈ ರೀತಿಯಾಗಿ ಕ್ಷಣಮಾತ್ರದಲ್ಲಿಯೇ ಆ ದೈತ್ಯವೀರರ ಸೇನೆಯಲ್ಲಿ ಪ್ರತಿಯೊಬ್ಬರೂ ಆನೆಯಿಂದ ಅಲ್ಲಾಡಿಸಲ್ಪಟ್ಟ ಬೇಲದಮರದ ಹಣ್ಣುಗಳಂತೆ ತಪತಪನೆ ಬೀಳುತ್ತಾ ಬಂದರು.

೧೨. ಆಗ ಆ ರಣರಂಗದಲ್ಲಿ ಮಡಿದುಬಿದ್ದ ವೀರರ ದೇಹಗಳಿಂದ ಹರಿದು ಬರುತ್ತಿರುವ ರಕ್ತಗಳಿಂದ ಭಯಂಕರವಾದ ಭಾರಿ ನದಿಯೊಂದು ಉದ್ಭವಿಸಿತು. ಆ ನದಿಗೆ ಯುದ್ಧರಂಗದಲ್ಲಿ ಸತ್ತುಬಿದ್ದಿದ್ದ ಆನೆಗಳೇ ಮೊಸಳೆಗಳು! ಒಂಟೆ, ಕತ್ತೆ, ರುಂಡ, ಮುಂಡಗಳೇ ಮೊದಲಾದುವುಗಳು ಆಮೆಗಳು!

೧೩. ರಥಗಳೇ ನೆಗಳುಗಳು! ಕೂದಲುಗಳೇ ಪಾಚಿಗಳು! ಕಡಿದುಬಿದ್ದ ತೋಳುಗಳೇ ಹಾವುಗಳು! ಕೈಗಳೇ ಮೀನುಗಳು! ಕಿರೀಟಗಳೂ, ರತ್ನಗಳೂ, ಹಾರಗಳೂ, ಕುಂಡಲಗಳೂ ಸುರುಚುಕಲ್ಲುಗಳು!

೧೪. ಆಯುಧಗಳೇ ಕಪ್ಪೆಚಿಪ್ಪುಗಳು! ಛತ್ರಿಗಳೇ ಶಂಖಗಳು! ಚಾಮರಗಳು ಮತ್ತು ಧ್ವಜಗಳೇ ಮರಳು! ಮುರಿದುಬಿದ್ದ ತೇರಿನ ಚಕ್ರಗಳೇ ಸುಳಿಗಳು! ಉಭಯ ಸೇನೆಗಳೇ ದಡಗಳು!

ಶತಯೋಜನವಿಸ್ತೀರ್ಣಾ ಬಭೌ ವೈತರಣೀ ಯಥಾ ।
ಪ್ರಮಥಾ ಭೈರವಾ ಭೂತಾ ವೇತಾಲಾ ಯೋಗಿನೀಗಣಾಃ ॥ ೧೫ ॥

ಅಟ್ಟಹಾಸಂ ಪ್ರಕುರ್ವಂತೋ ನೃತ್ಯಂತೋ ರಣಮಂಡಲೇ ।
ಪಿಬಂತೋ ರುಧಿರಂ ಶಶ್ವತ್ಕಪಾಲೇನ ನೃಪೇಶ್ವರ ॥ ೧೬ ॥

ಹರಸ್ಯ ಮುಂಡಮಾಲಾರ್ಥಂ ಜಗೃಹುಸ್ತೇ ಶಿರಾಂಸಿ ಚ ।
ಸಿಂಹಾರೂಢಾ ಭದ್ರಕಾಳೀ ಡಾಕಿನೀಶತಸಂವೃತಾ ॥ ೧೭ ॥

ಭಕ್ಷಯಂತೀ ರಣೇ ದೈತ್ಯಾನಟ್ಟಹಾಸಂ ಚಕಾರ ಹ ।
ವಿದ್ಯಾಧರ್ಯಸ್ತ್ವಂಬರಸ್ಥಾ ಗಂಧರ್ವ್ಯೋಽಪ್ಸರಸಸ್ತಥಾ ॥ ೧೮ ॥

---

೧೫. ಈ ರೀತಿಯಾಗಿ ನೂರು ಯೋಜನಗಳಷ್ಟು ಅಗಲವಾಗಿ ಹರಿಯುತ್ತಿದ್ದ ಆ ರಕ್ತದ ನದಿಯು ವೈತರಣಿಯಂತೆ ಭಯಂಕರವಾಗಿ ತೋರುತ್ತಾ ಮೆರೆಯುತ್ತಿತ್ತು. ಆಗ ಪ್ರಮಥರೂ, ಭೈರವರೂ, ಭೂತಗಳೂ, ಭೇತಾಳಗಳೂ ಯೋಗಿನೀ ಗಣಗಳೂ

೧೬. ಆ ರಂಣರಂಗದಲ್ಲಿ ಗಟ್ಟಿಯಾಗಿ ಅಟ್ಟಹಾಸವನ್ನು ಮಾಡುತ್ತಾ ಸತ್ತು ಬಿದ್ದಿದ್ದವರ ತಲೆಯೋಡುಗಳಿಂದ ಪುನಃ ಪುನಃ ರಕ್ತವನ್ನು ಕುಡಿಯುತ್ತಾ ಆನಂದದಿಂದ ನರ್ತಿಸುತ್ತಿದ್ದರು.

೧೭. ಹಾಗೆ ನರ್ತಿಸುತ್ತಾ ಆ ಪಿಶಾಚರಗಣಗಳು ಶಿವನ ರುಂಡಮಾಲೆಗಾಗಿ ಕೆಳಗೆ ಬಿದ್ದಿದ್ದ ವೀರರ ಶಿರಸ್ಸುಗಳನ್ನು ಸಂಗ್ರಹಿಸುತ್ತಿದ್ದರು. ಆಗ ಭದ್ರಕಾಲಿಯು ತನ್ನ ವಾಹನವಾದ ಸಿಂಹವನ್ನೇರಿ ಕುಳಿತು ನೂರು ಮಂದಿ ಡಾಕಿನಿಯರೊಡನೆ ಪರಿವೃತಳಾಗಿ,

೧೮. ಆ ರಣರಂಗವನ್ನು ಹೊಕ್ಕು ದೈತ್ಯರನ್ನು ತಿನ್ನುತ್ತಾ ಅಟ್ಟಹಾಸವನ್ನು ಮಾಡುತ್ತಾ ಇದ್ದಳು. ಆಗ ಅಂತರಿಕ್ಷದಲ್ಲಿ ವಿದ್ಯಾಧರಿಯರೂ, ಗಂಧರ್ವಸ್ತ್ರೀಯರೂ, ಅಪ್ಸರೆಯರೂ ನೆರೆದು ನಿಂತು,

ಕ್ಷತ್ರಧರ್ಮಸ್ಥಿತಾನ್ವೀರಾನ್ವವ್ರಿರೇ ದೇವರೂಪಿಣಃ ।
ಪರಸ್ಪರಂ ಕಲಿಭೂರ್ತ್ವಾ ತಾಸಾಂ ಪತ್ಯರ್ಥಮಂಬರೇ ॥ ೧೯ ॥

ಮಮಾನುರೂಪೋ ನಾಯಂ ಮ ಇತಿ ವಿಹ್ವಲಚೇತಸಾಂ ।
ಕೇಚಿದ್ವೀರಾ ಧರ್ಮಪರಾ ರಣರಂಗಾನ್ನ ಚಾಲಿತಾಃ ॥ ೨೦ ॥

ಯಯುರ್ವಿಷ್ಣುಪದಂ ದಿವ್ಯಂ ಭಿತ್ವಾ ಮಾರ್ತಂಡಮಂಡಲಂ ।
ಅನಿರುದ್ಧಂ ರಿಪುಂ ದೃಷ್ಟ್ವಾ ಕೇಚಿದ್ದೈತ್ಯಾಃ ಪಲಾಯಿತಾಃ ॥ ೨೧ ॥

ಕೇಚಿತ್ಸ್ವಂ ಸ್ವಂ ರಣಂ ತ್ಯಕ್ತ್ವಾ ದುದ್ರುವುಸ್ತೇ ದಿಶೋ ದಶ ।
ತದಾ ವೃಕೋ ಮಹಾದೈತ್ಯಃ ಖರಾರೂಢೋ ಭಯಂಕರಃ ॥ ೨೨ ॥

---

೧೯. ಯುದ್ಧದಲ್ಲಿ ಕ್ಷತ್ರಿಯೋಚಿತವಾದ ವೀರಮರಣವನ್ನು ಹೊಂದಿ ದಿವ್ಯವಾದ ರೂಪದಿಂದ ಮೆರೆಯುತ್ತಾ ತಮಗುಚಿತವಾದ ವೀರಸ್ವರ್ಗವನ್ನು ಪಡೆಯಲು ಬರುತ್ತಿರುವ ಆ ವೀರರನ್ನು ತಾವಾಗಿ ವರಿಸುತ್ತಿದ್ದರು.

೨೦. ಈ ರೀತಿಯಾಗಿ ಅವರು ತಮಗೆ ಒಲಿದ ವೀರರನ್ನು ಆರಿಸಿಕೊಳ್ಳುವಾಗ ಆ ಸ್ತ್ರೀಯರಲ್ಲಿ ಒಬ್ಬೊಬ್ಬರಿಗೂ "ನನಗೆ ಇವನೇ ಅನುರೂಪನಾದವನೆಂಬ" ಮನದಾಸೆಯಿಂದ ಪರಸ್ಪರವಾಗಿ ಜಗಳವು ಹತ್ತಿಕೊಳ್ಳುತ್ತಿತ್ತು.

೨೧. ಕೆಲಮಂದಿ ವೀರರು ಕ್ಷತ್ರಧರ್ಮವನ್ನು ಎಳೆಯಷ್ಟೂ ತಪ್ಪದೆ ಯುದ್ಧರಂಗದಿಂದ ಸ್ವಲ್ಪವೂ ಅಲುಗಾಡದೆ ತಮ್ಮೆದುರಾಳಿಗಳೊಡನೆ ಹೋರಾಡುತ್ತಿರುವಂತೆಯೇ ಮರಣವನ್ನು ಪಡೆದುದರಿಂದ ಸೂರ್ಯಮಂಡಲವನ್ನು ಭೇದಿಸಿಕೊಂಡು ಪರಮೋತ್ತಮವಾದ ವಿಷ್ಣುವಿನ ನಿವಾಸವನ್ನು ಹೊಂದಿದರು. ಕೆಲವು ಮಂದಿ ದೈತ್ಯವೀರರು ತಮ್ಮ ಶತ್ರುವಾದ ಅನಿರುದ್ಧನನ್ನು ಕಾಣುತ್ತಲೇ ಯುದ್ಧರಂಗದಿಂದ ಓಡಿಹೋದರು.

೨೨. ಇನ್ನು ಕೆಲವರು ತಾವು ಹೋರಾಡುತ್ತಿದ್ದ ಸ್ಥಳವನ್ನು ಬಿಟ್ಟು ದಿಕ್ಕುದಿಕ್ಕುಗಳಿಗೆ ಚದುರಿ ಓಡಿಹೋದರು. ಇದನ್ನು ಕಂಡು ಮಹಾಭಯಂಕರನಾದ ವೃಕನೆಂಬ ದೈತ್ಯನು ಕತ್ತೆಯ ಮೇಲೆ ಕುಳಿತು ತನ್ನ ಧನುಸ್ಸನ್ನು ಪುನಃ ಪುನಃ ಧ್ವನಿಮಾಡುತ್ತಾ ಯುದ್ಧರಂಗವನ್ನು ಪ್ರವೇಶಿಸಿದನು.

ಆಜಗಾಮ ಸದಸ್ಯುದ್ಧೇ ಧನುಷ್ಟಂಕಾರಯುಸ್ಮಹುಃ ।
ಅನಿರುದ್ಧಸ್ಯಾಪಿ ಚಾಯುಂ ಸಿಂಜಿನೀಸಹಿತಂ ಧನುಃ ॥ ೨೩ ॥

ಚಿಚ್ಛೇದ ದಶಭಿರ್ಬಾಣೈರ್ವೃಕೋಽಪಿ ರಣದುರ್ಮದಃ ।
ಭಿನ್ನಧನ್ವಾನಿರುದ್ಧಸ್ತು ದ್ವಿತೀಯಂ ಧನುರಾದದೇ ॥ ೨೪ ॥

ಚಿಚ್ಛೇದ ದಶಭಿರ್ಬಾಣೈರ್ವೃಕಚಾಪಂ ಮಹಾಬಲಃ ।
ವೃಕಸ್ತ್ರಿಶೂಲಮುದ್ಯಮ್ಯ ರುಷಾ ಪ್ರಸ್ಫುರಿತಾಧರಃ ॥ ೨೫ ॥

ಲಲಜ್ಜಿಹ್ವಃ ಪ್ರತ್ಯುವಾಚಾನಿರುದ್ಧಂ ಧನ್ವಿನಾಂ ವರಂ ।

॥ ದೈತ್ಯ ಉವಾಚ ॥

ಅದ್ಯೈವ ತ್ವಾಂ ಹನಿಷ್ಯಾಮಿ ಕ್ಷತ್ರಿಯಂ ಸ್ವಸ್ಥವಿಕ್ರಮಂ ।
ತ್ವಯಾ ಸೇನಾ ಹತಾ ಮೇಽದ್ಯ ಪಶ್ಯ ವಿಕ್ರಮಮದ್ಭುತಂ ॥ ೨೬ ॥

೨೩-೨೪. ಹಾಗೆ ಬಂದವನೇ ಹತ್ತು ಬಾಣಗಳನ್ನು ತೆಗೆದುಕೊಂಡು ಆ ಅನಿರುದ್ಧನ ಬಿಲ್ಲನ್ನು ಅದರ ಹೆದೆಯ ಸಮೇತವಾಗಿ ಕತ್ತರಿಸಿಬಿಟ್ಟನು. ಈ ರೀತಿಯಾಗಿ ರಣದುರ್ಮದನಾದ ಆ ವೃಕನು ತನ್ನ ಧನುಸ್ಸನ್ನು ಕತ್ತರಿಸಿಬಿಟ್ಟುದನ್ನು ಕಂಡು ಅನಿರುದ್ಧನು ಕೂಡಲೇ ಮತ್ತೊಂದು ಬಿಲ್ಲನ್ನು ಕೈಗೆ ತೆಗೆದುಕೊಂಡು.

೨೫. ಹತ್ತು ಬಾಣಗಳನ್ನು ಹೂಡಿ ಆ ವೃಕನ ಬಿಲ್ಲನ್ನು ಕತ್ತರಿಸಿಬಿಟ್ಟನು. ಇದರಿಂದ ಆ ವೃಕನು ಕೋಪವನ್ನು ತಾಳಿ ತ್ರಿಶೂಲವೊಂದನ್ನು ಕೈಗೆ ತೆಗೆದುಕೊಂಡು ಕೋಪದಿಂದ ನಡುಗುತ್ತಿರುವ ತುಟಿಗಳೊಡನೆಯೂ, ತೊಳಲುತ್ತಿರುವ ನಾಲಿಗೆಯೊಡನೆಯೂ ಧನುರ್ಧರಾಗ್ರೇಸರನಾದ ಆ ಅನಿರುದ್ಧನನ್ನು ಕುರಿತು :—

೨೬. ಓ ಅನಿರುದ್ಧಾ ! ಅಪಾರವಾದ ಪರಾಕ್ರಮದಿಂದ ಮೆರೆಯುತ್ತಿರುವ ಕ್ಷತ್ರಿಯಶ್ರೇಷ್ಠನಾದ ನಿನ್ನನ್ನು ಈಗಲೇ ಕೊಲ್ಲುವೆನು. ನನ್ನ ಸೇನೆಯನ್ನು ನೀನೀಗ ಕೊಂದೆಯಲ್ಲವೆ ? ಈಗ ನನ್ನ ಅದ್ಭುತವಾದ ಪರಾಕ್ರಮವನ್ನಾದರೂ ನೋಡು ” ಎಂದು ನುಡಿದನು.

॥ ಅನಿರುದ್ಧ ಉವಾಚ ॥

ಯೇ ವದಂತಿ ಮುಖೇನೇಹ ತೇ ಕುರ್ವಂತಿ ನ ಕಿಂಚನ ।
ಅದ್ಯೈವ ತ್ವಾಂ ಹನಿಷ್ಯಾಮಿ ಪಶ್ಯ ಮೇ ವಿಕ್ರಮಂ ಪರಂ ॥ ೨೭ ॥

ನ ಚೇತ್ತ್ವಾಂ ಘಾತಯಿಷ್ಯಾಮಿ ಶೃಣು ತಾಚ್ಛಪಥಂ ಮಮ ।
ವಿಪ್ರಗೋಭ್ರೂಣಬಾಲಾನಾಂ ಹತ್ಯಾ ಮೇ ಸ್ಯಾತ್ಸದೈವ ಹಿ ॥ ೨೮ ॥

॥ ಶ್ರೀ ನಾರದ ಉವಾಚ ॥

ವೃಕೋಽಪಿ ಶಪಥಂ ಕೃತ್ವಾ ಖರಾರೂಢೋ ಮಹಾಖಲಃ ।
ಜಘಾನ ತಂ ತ್ರಿಶೂಲೇನಾನಿರುದ್ಧಂ ಧನ್ವಿನಾಂ ವರಂ ॥ ೨೯ ॥

ತಚ್ಛೂಲಂ ವಾಮಹಸ್ತೇನ ಗೃಹೀತ್ವಾ ಕಾರ್ಷ್ಣಿನಂದನಃ ।
ತತಾಡ ಸಹಸಾ ರಾಜನ್ವೃಕಂ ದೈತ್ಯಂ ಮಹಾಬಲಂ ॥ ೩೦ ॥

---

೨೭. ಅದನ್ನು ಕೇಳಿ ಆ ಅನಿರುದ್ಧನು ವೃಕನನ್ನು ಕುರಿತು "ಎಲಾ ದೈತ್ಯಾಧಮ! ಯಾರು ಬರಿಯ ಮಾತಿನ ಮಲ್ಲರೋ ಅವರು ಕೈಯಲ್ಲೇನೂ ಮಾಡಲಾರರು! ಈಗಲೇ ನಾನು ನಿನ್ನನ್ನು ಕೊಲ್ಲುವೆನು. ನನ್ನ ಪರಾಕ್ರಮವನ್ನಾದರೂ ನೋಡುವೆಯಂತೆ!

೨೮. ನಾನು ಮಾಡುವ ಶಪಥವನ್ನಾದರೂ ಕೇಳು:—ಒಂದು ವೇಳೆ ನಾನು ನಿನ್ನನ್ನು ಕೊಲ್ಲದಿದ್ದರೆ, ಆಗ ನನಗೆ ಗೋಬ್ರಾಹ್ಮಣರನ್ನೂ, ಗರ್ಭಗಳನ್ನೂ ಶಿಶುಗಳನ್ನೂ ಕೊಂದ ಪಾತಕವು ಸಂಘಟಿಸಲಿ" ಎಂದು ಕ್ರೂರವಾದ ಪ್ರತಿಜ್ಞೆ ಮಾಡಿದನು.

೨೯. ರಾಜೇಂದ್ರ! ಆಗ ಖರಾರೂಢನಾಗಿ ಬಂದ ಆ ಮಹಾಬಲನಾದ ವೃಕನೆಂಬ ದೈತ್ಯನೂ ಸಹ ಇದೇ ರೀತಿ ಪ್ರತಿಜ್ಞೆ ಮಾಡಿ ತನ್ನ ಕೈಲಿದ್ದ ತ್ರಿಶೂಲದಿಂದ ಬಿಲ್ಲುಗಾರರಲ್ಲೆಲ್ಲಾ ಮೇಲೆನಿಸಿದ್ದ ಆ ಅನಿರುದ್ಧನನ್ನು ಪ್ರಹರಿಸಿದನು.

೩೦. ಆಗ ಆ ಅನಿರುದ್ಧನು ಆ ಶೂಲವನ್ನು ತನ್ನ ಎಡಗೈಯಿಂದಲೇ ಲೀಲಾಜಾಲವಾಗಿ ಹಿಡಿದುಬಿಟ್ಟನು. ಬಳಿಕ ಅದೇ ಶೂಲದಿಂದಲೇ ಆ ದೈತ್ಯನನ್ನು ತಾನೂ ಪ್ರಹರಿಸಿದನು.

ತದಾಸುರಃ ಕೋಪಪೂರ್ಣೋ ಮುಕ್ತ್ವಾಥ ಮಹತೀಂ ಗದಾಂ |
ಚೂರ್ಣಯಾಮಾಸ ಸಹಸಾ ಚಾನಿರುದ್ಧರಥಂ ಬಲಾತ್ || ೩೧

ಪ್ರಾದ್ಯುಮ್ನಿಃ ಶಿತಧಾರೇಣ ಖಡ್ಗೇನಾರಿಭುಜದ್ವಯಂ |
ಚಿಚ್ಛೇದ ಭಿದುರೇಣಾಶು ಶೈಲಪಕ್ಷೌ ಯಥಾ ವೃಷಾ || ೩೨ ||

ತದಾ ಭಿನ್ನಭುಜೋ ದೈತ್ಯಃ ಪದ್ಭ್ಯಾಮಾಕಂಪಯನ್ನೃಪಂ || ೩೩ ||

ವಿಸ್ತೀರ್ಣಂ ವದನಂ ಕೃತ್ವಾ ಲಲಜ್ಜಿಹ್ವಂ ಭಯಂಕರಂ |
ಕರಾಲದಂಷ್ಟ್ರಃ ಪ್ರಪಿಬನ್ನಾಕಾಂ ದೈತ್ಯಪುಂಗವಃ || ೩೪ ||

---

೩೧ ಆಗ ಆ ದೈತ್ಯನು ಮಿತಿಮೀರಿದ ಕೋಪವನ್ನು ತಾಳಿ ಭಾರಿಯಾದ ಗದೆಯೊಂದನ್ನು ತೆಗೆದುಕೊಂಡು ಅನಿರುದ್ಧನು ಕುಳಿತಿದ್ದ ತೇರಿನ ಮೇಲೆ ಬೀಸಿದನು. ಆ ಏಟಿಗೆ ಆ ತೇರು ಪುಡಿಪುಡಿಯಾಗಿ ಹೋಯಿತು.

೩೨. ಕೂಡಲೇ ಆ ಅನಿರುದ್ಧನು ಇಂದ್ರನು ವಜ್ರಾಯುಧದಿಂದ ಪರ್ವತಗಳ ರೆಕ್ಕೆಗಳನ್ನು ಕತ್ತರಿಸುವಂತೆ ಹರಿತವಾದ ಅಲುಗುಳ್ಳ ತನ್ನ ಖಡ್ಗದಿಂದ ಆ ದೈತ್ಯನ ತೋಳುಗಳೆರಡನ್ನೂ ಕತ್ತರಿಸಿಬಿಟ್ಟನು.

೩೩. ಈ ರೀತಿಯಾಗಿ ತನ್ನ ಕೈಗಳು ಕತ್ತರಿಸಿಹೋಗಲು ಕುಪಿತನಾದ ಆ ದೈತ್ಯನು ತನ್ನ ನಡಿಗೆಯಿಂದಲೇ ಭೂಮಿಯೆಲ್ಲವೂ ಅಲ್ಲಾಡಿಹೋಗುವಂತೆ ಕಾಲುಗಳನ್ನಿಕ್ಕುತ್ತಾ,

೩೪. ಹೊರಳುತ್ತಿರುವ ನಾಲಿಗೆಯಿಂದಲೂ, ಕ್ರೂರವಾದ ಕೋರೆದಾಡೆಗಳಿಂದಲೂ ಮತ್ತಷ್ಟು ಭಯಂಕರವಾಗಿರುವ ತನ್ನ ಬಾಯನ್ನು ಅಗಲವಾಗಿ ತೆರೆದುಕೊಂಡು ಆಕಾಶವನ್ನೇ ನುಂಗುವಂತೆ ಬರುತ್ತಾ,

ತಿಮಿಂ ತಿಮಿಂಗಿಲ ಇವ ಪ್ರಾಗ್ರಸತ್ಕಾರ್ಷ್ಣಿನಂದನಂ ।
ದೈತ್ಯೋದರೇ ಕೃಷ್ಣಪೌತ್ರಃ ಶ್ರೀಕೃಷ್ಣಸ್ಯಾನುಕಂಪಯಾ ॥ ೩೫ ॥

ನ ಮಮಾರ ಮಹಾರಾಜ ಕಾರ್ಷ್ಣಿರ್ಮೀನೋದರೇ ಯಥಾ ।
ವೃಕೋದರೇ ಯಥಾ ಕೃಷ್ಣೋ ಯಥಾ ಗೋಪಾ ಹ್ಯಘೋದರೇ ॥ ೩೬ ॥

ಬಕೋದರೇ ಯಥಾ ಕಂಸೋ ಯಥಾ ವೃತ್ರೋದರೇ ವೃಷಾ ।
ಹಾಹಾಕಾರೇ ತದಾ ಜಾತೇ ಯದುಸೈನ್ಯೇ ವಿದೇಹರಾಟ್ ॥ ೩೭ ॥

ಗದೋ ಗದಾಂ ಸಮಾದಾಯ ಬಲದೇವಾನುಜೋ ಬಲೀ ।
ತತಾಡ ಮಸ್ತಕೇ ದೈತ್ಯಂ ವೃಕಂ ನಾಮ ಮಹಾಬಲಂ ॥ ೩೮ ॥

---

೩೫. "ತಿಮಿಂಗಿಲವೆಂಬ ಭಾರಿ ಮತ್ಸ್ಯವು ತಿಮಿಯೆಂಬ ಚಿಕ್ಕ ಮತ್ಸ್ಯವನ್ನು ನುಂಗುವಂತೆ" ಪ್ರದ್ಯುಮ್ನಪುತ್ರನಾದ ಆ ಅನಿರುದ್ಧನನ್ನು ಒಂದೇ ಬಾರಿಗೆ ಕಬಳಿಸಿಬಿಟ್ಟನು.

೩೬–೩೭. ಓ ರಾಜೇಂದ್ರ ! ಈ ರೀತಿಯಾಗಿ ಆ ದೈತ್ಯನಿಂದ ನುಂಗಲ್ಪಟ್ಟ ಆ ಅನಿರುದ್ಧನು ಅವನ ಜಠರದಲ್ಲಿ ಸೇರಿಬಿಟ್ಟಿದ್ದರೂ, ಶ್ರೀಕೃಷ್ಣಾನುಗ್ರಹದಿಂದ ಹಿಂದೆ ಶಂಬರಾಸುರನಿಂದ ಸಮುದ್ರಕ್ಕೆ ಎಸೆಯಲ್ಪಟ್ಟು ಮೀನಿನಿಂದ ನುಂಗಲ್ಪಟ್ಟಿದ್ದ ಪ್ರದ್ಯುಮ್ನನಂತೆಯೂ, ವೃಕನ ಶರೀರವನ್ನು ಹೊಕ್ಕಿದ್ದ ಕೃಷ್ಣನಂತೆಯೂ, ಅಘಾಸುರನ ದೇಹದಲ್ಲಿ ಸಿಕ್ಕಿಕೊಂಡಿದ್ದ ಗೋಪಾಲಕರಂತೆಯೂ, ಬಕನ ಶರೀರವನ್ನು ಸೇರಿದ್ದ ಕಂಸನಂತೆಯೂ, ವೃತ್ರಾಸುರನ ಶರೀರದಲ್ಲಿ ಪ್ರವಿಷ್ಟನಾಗಿದ್ದ ದೇವೇಂದ್ರನಂತೆಯೂ, ಸಾವಿಗೀಡಾಗದೆ ಸುಖವಾಗಿದ್ದನು. ಓ ವಿದೇಹರಾಜಾ ! ಆಗ ಯಾದವ ಸೇನೆಯಲ್ಲಿ ಎಲ್ಲೆಲ್ಲೂ ಹಾಹಾಕಾರವುಂಟಾಯಿತು.

೩೮. ಆಗ ಬಲದೇವನ ತಮ್ಮನಾದ ಗದನೆಂಬ ವೀರನು ತನ್ನ ಕೈಲಿದ್ದ ಗದೆಯಿಂದ ಮಹಾಬಲನಾದ ಆ ದೈತ್ಯನನ್ನು ಪ್ರಹರಿಸಿದನು.

ತದಾ ಹತಶಿರಾ ದೈತ್ಯೋ ರೇಜೇ ಕ್ಷತಜಬಿಂದುಭಿಃ ।
ಗರಿಷ್ಠ ಜಲಧಾರಾಭಿರ್ಯಥಾ ವಿಂಧ್ಯಾಚಲೋ ನೃಪ ॥ ೩೯ ॥

ಫಾಲ್ಗುನಃ ಸ್ವಮುಸಿಂ ನೀತ್ವಾ ತತ್ಪಾದೌ ಚಾಂಜಸಾಹರತ್ ।
ಛಿನ್ನಾಂಘ್ರಿಃ ಸ ಪಪಾತೋರ್ವ್ಯಾಂ ಛಿನ್ನಪಕ್ಷೋ ಯಥಾ ಗಿರಿಃ ॥ ೪೦ ॥

ಅನಿರುದ್ಧಸ್ತದುದರಂ ಭಿತ್ವಾ ಖಡ್ಗೇನ ನಿರ್ಗತಃ ।
ಜಹಾರ ತಚ್ಛಿರಶ್ಚಾಯಂ ಯಥಾ ವಜ್ರೇಣ ವೃತ್ರಹಾ ॥ ೪೧ ॥

ತದಾ ಜಯಜಯಾರಾವೋ ಯದುಸೈನ್ಯೇ ಬಭೂವ ಹ ।
ದೇವದುಂದುಭಯೋ ನೇದುರ್ನರದುಂದುಭಯಸ್ತಥಾ ॥ ೪೨ ॥

---

೩೯. ಬಹುಲಾಶ್ವರಾಜ! ಆ ಗದಾಪ್ರಹಾರದಿಂದ ಆ ದೈತ್ಯನ ತಲೆಯೊಡೆದು ಹೋಗಿ ರಕ್ತದ ಹನಿಗಳು ಸುರಿಯುತೊಡಗಿದುವು. ಆಗ ಆ ವೀರನು ಭಾರಿಭಾರಿಯಾದ ಮಳೆ ಹನಿಗಳಿಂದ ತೊಯ್ಯಲ್ಪಡುವ ವಿಂಧ್ಯಪರ್ವತದಂತೆ ಕಾಣಿಸಿದನು.

೪೦. ಇತ್ತಲಾಗಿ ಅರ್ಜುನನು ತನ್ನ ಖಡ್ಗಪ್ರಹಾರದಿಂದ ಸರ್‍ರನೆ ಆ ವೃಕನ ಕಾಲುಗಳನ್ನು ಕತ್ತರಿಸಿಬಿಟ್ಟನು. ಕೂಡಲೇ ಆ ದೈತ್ಯನು ರೆಕ್ಕೆಗಳು ಕತ್ತರಿಸಲ್ಪಟ್ಟ ಪರ್ವತದಂತೆ ನೆಲಕ್ಕೆ ಕುಸಿದುಬಿಟ್ಟನು.

೪೧. ಅಷ್ಟರೊಳಗಾಗಿ ಆ ವೃಕನ ಶರೀರದಲ್ಲಿ ಸೇರಿಕೊಂಡಿದ್ದ ಅನಿರುದ್ಧನು ತನ್ನ ಕತ್ತಿಯಿಂದ ಅವನ ಹೊಟ್ಟೆಯನ್ನು ಸೀಳಿಕೊಂಡು ಈಚೆಗೆ ಬಂದು, ಅದೇ ಕತ್ತಿಯಿಂದಲೇ ಇಂದ್ರನು ವಜ್ರಾಯುಧದಿಂದ ವೃತ್ರಾಸುರನ ತಲೆಯನ್ನು ಕಡಿದಂತೆ ಆ ವೃಕನ ತಲೆಯನ್ನು ಕತ್ತರಿಸಿಬಿಟ್ಟನು.

೪೨. ಆಗ ಯದುಸೈನ್ಯದಲ್ಲಿ ಎಲ್ಲೆಲ್ಲೂ ಸಂತೋಷದಿಂದ ಜಯಜಯಧ್ವನಿಗೆ ಳಾದುವು. ಅವರ ವಿಜಯಸೂಚಕವಾದ ನಗಾರಿಗಳೊಡನೆ ದೇವತೆಗಳ ದುಂದುಭಿಗಳೂ ಬಾರಿಸಲ್ಪಟ್ಟುವು.

ಅನಿರುದ್ಧೋಽಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ।
ಕಥಿತಂ ಹ್ಯದ್ಭುತಂ ಚೈತತ್ಕಿಂ ಭೂಯಃ ಶ್ರೋತುಮಿಚ್ಛಸಿ ॥ ೪೩ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದ ಬಹುಲಾಶ್ವ ಸಂವಾದೇ ವೃಕದೈತ್ಯವಧೋ ನಾಮ ಚತುಸ್ತ್ರಿಂಶೋಽಧ್ಯಾಯಃ

---

೪೩. ಅನಿರುದ್ಧನ ಮೇಲೆ ದೇವತೆಗಳು ಹರ್ಷದಿಂದ ಪುಷ್ಪವೃಷ್ಟಿಯನ್ನು ಮಾಡಿದರು. " ರಾಜೇಂದ್ರ ! ಅತ್ಯದ್ಭುತವಾದ ಈ ಚರಿತ್ರವನ್ನು ನಿನಗೆ ತಿಳಿಸಿದೆನು. ಮತ್ತೇನು ಕೇಳಬೇಕೆಂದಿರುವೆ ? ಹೇಳು " ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ನಾರದಬಹುಲಾಶ್ವ ಸಂವಾದದಲ್ಲಿ ವೃಕದೈತ್ಯವಧವೆಂಬ ಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಪಂಚತ್ರಿಂಶೋಽಧ್ಯಾಯಃ

॥ ಬಹುಲಾಶ್ವ ಉವಾಚ ॥

ಅಹೋ ಅತ್ಯುದ್ಭುತಂ ಯುದ್ಧಂ ಮುನೇ ಪ್ರಾದ್ಯುಮ್ನಿನಾ ಕೃತಂ ।
ವೃಕೇ ಹತೇ ಮಹಾದೈತ್ಯೇ ಕಿಂ ಬಭೂವ ರಣೇ ಪುನಃ ॥ ೧ ॥

॥ ಶ್ರೀ ನಾರದ ಉವಾಚ ॥

ವೃಕದೈತ್ಯಂ ಹತಂ ವೀಕ್ಷ್ಯ ಕಾಲನಾಭೋ ಮಹಾಸುರಃ ।
ಕ್ರೋಡಾರೂಢೋ ರಣಂ ಪ್ರಾಗಾದ್ಧನುಷ್ಟಂಕಾರಯನ್ಮುಹುಃ ॥ ೨ ॥

ಮೂವತ್ತೈದನೆಯ ಅಧ್ಯಾಯವು

೧. ಆಗ ಬಹುಲಾಶ್ವರಾಜನು ನಾರದಮಹರ್ಷಿಯನ್ನು ಕುರಿತು "ಓ ಮುನೀಂದ್ರ! ಪ್ರದ್ಯುಮ್ನಪುತ್ರನಾದ ಆ ಅನಿರುದ್ಧನು ಮಾಡಿದ ಯುದ್ಧವು ಅತ್ಯಾಶ್ಚರ್ಯಕರವಾದುದೇ ಸರಿ. ಆ ಮಹಾದೈತ್ಯನಾದ ವೃಕನು ಸತ್ತಮೇಲೆ ಆ ಯುದ್ಧದಲ್ಲಿ ಮುಂದೇನು ನಡೆಯಿತು? ಇದನ್ನು ತಿಳಿಸಬೇಕು" ಎನ್ನಲು ಆ ನಾರದಮಹರ್ಷಿಯು ಇಂತೆಂದನು :—

೨. ಓ ಬಹುಲಾಶ್ವರಾಜ! ವೃಕನೆಂಬ ಆ ದೈತ್ಯನು ಹತನಾದುದನ್ನು ಕಂಡು ಅವನ ತಮ್ಮನಾದ ಕಾಲನಾಭನೆಂಬ ಮಹಾದೈತ್ಯನು ಬಹುವಾಗಿ ಕೋಪವನ್ನು ತಾಳಿ ತನ್ನ ಬಿಲ್ಲಿನ ಹೆದೆಯನ್ನು ಟಂಕಾರಮಾಡುತ್ತಾ ಆ ರಣರಂಗವನ್ನು ಪ್ರವೇಶಿಸಿದನು.

ಅಕ್ರೂರಂ ಬಾಣವಿಂಶತ್ಯಾ ಗದಂ ಚ ದಶಭಿಃ ಶರೈಃ ।
ಅರ್ಜುನಂ ದಶಭಿರ್ಬಾಣೈರ್ಯುಯುಧಾನಂ ಚ ಪಂಚಭಿಃ ॥ ೩ ॥

ದಶಭಿಃ ಕೃತವರ್ಮಾಣಂ ಕಾರ್ಷ್ಣಿಂ ಬಾಣಶತೇನ ವೈ ।
ಅನಿರುದ್ಧಂ ಚ ವಿಂಶತ್ಯಾ ದೀಪ್ತಿಮಂತಂ ಚ ಪಂಚಭಿಃ ॥ ೪ ॥

ಸಾಂಬಂ ಚ ಶತಬಾಣೈಶ್ಚ ವಿವ್ಯಾಧ ಸಮರೇಽಸುರಃ ।
ತದ್ಬಾಣೈರ್ವ್ಯಾಕುಲಾ ವೀರಾ ಬಭೂವುರ್ಘಟಿಕಾದ್ವಯಂ ॥ ೫ ॥

ಹಯಾಶ್ಚ ಪಂಚತಾಂ ಪ್ರಾಪ್ತಾಶ್ಚೂರ್ಣೀಭೂತಾ ರಣಾಂಗಣೇ ।
ತದ್ಧಸ್ತಲಾಘವಂ ದೃಷ್ಟ್ವಾ ಪ್ರಸನ್ನೋ ರುಕ್ಮಿಣೀಸುತಃ ॥ ೬ ॥

---

೩. ಹಾಗೆ ಬಂದವನೇ ಅಕ್ರೂರನನ್ನು ಇಪ್ಪತ್ತು ಬಾಣಗಳಿಂದಲೂ, ಗದನನ್ನು ಹತ್ತು ಬಾಣಗಳಿಂದಲೂ, ಅರ್ಜುನನನ್ನು ಹತ್ತು ಬಾಣಗಳಿಂದಲೂ, ಯುಯುಧಾನನನ್ನು ಐದು ಬಾಣಗಳಿಂದಲೂ.

೪-೫. ಕೃತವರ್ಮನನ್ನು ಹತ್ತು ಬಾಣಗಳಿಂದಲೂ, ಪ್ರದ್ಯುಮ್ನನನ್ನು ನೂರು ಬಾಣಗಳಿಂದಲೂ, ಅನಿರುದ್ಧನನ್ನು ಇಪ್ಪತ್ತು ಬಾಣಗಳಿಂದಲೂ, ದೀಪ್ತಿಮಂತನನ್ನು ಐದು ಬಾಣಗಳಿಂದಲೂ, ಸಾಂಬನನ್ನು ನೂರು ಬಾಣಗಳಿಂದಲೂ, ಏಕಕಾಲದಲ್ಲಿ ಪ್ರಹರಿಸಿದನು. ಆ ಬಾಣಗಳಿಂದ ಯದುವೀರರೆಲ್ಲರೂ ಎರಡು ಘಳಿಗೆಗಳ ಕಾಲ ಕಳವಳಕ್ಕೀಡಾದರು.

೬. ಅವರ ಸೇನೆಯಲ್ಲಿದ್ದ ಕುದುರೆಗಳು ಚೂರುಚೂರಾಗಿ ಕತ್ತರಿಸಲ್ಪಟ್ಟು ಸಾವಿಗೀಡಾದುವು. ಆಗ ರುಕ್ಮಿಣಿಯ ಪುತ್ರನಾದ ಪ್ರದ್ಯುಮ್ನನು ಆ ಕಾಲನಾಭನೆಂಬ ದೈತ್ಯನ ಕೈಚಳಕವನ್ನು ಕಂಡು ಸಂತೋಷದಿಂದ ಅವನನ್ನು ಭಲೆ! ಭಲೆ! ಎಂದು ಕೊಂಡಾಡಿದನು.

ಕಾಲನಾಭಂ ಸಾಧುಪದ್ಯೈಃ ಪೂಜಯಾಮಾಸ ಸಂಗರೇ ।
ಪ್ರದ್ಯುಮ್ನಃ ಸ್ವಂ ಧನುರ್ನೀತ್ವಾ ಬಾಣಮೇಕಂ ಸಮಾದಧೇ ॥ ೭ ॥

ಕೋದಂಡಮುಕ್ತೋ ವಿಶಿಖಸ್ತತ್ಕ್ರೋಡಂ ದೀರ್ಘರೂಪಿಣಂ ।
ಸಮುನ್ನೀಯ ಭ್ರಾಮಯಿತ್ವಾ ಸ್ವರ್ಲೋಕೇ ಲಕ್ಷಯೋಜನಂ ॥ ೮ ॥

ಆಕಾಶಾತ್ಪಾತಯಾಮಾಸ ಸಮುದ್ರೇ ಭೀಮನಾದಿನಿ ।
ಪ್ರದ್ಯುಮ್ನೋ ಭಗವಾನ್ಸಾಕ್ಷಾದ್ದ್ವಿತೀಯಂ ಬಾಣಮಾದಧೇ ॥ ೯ ॥

ಸೋಽಪಿ ಬಾಣಃ ಸಮುನ್ನೀಯ ಕಾಲನಾಭಂ ಮಹಾಬಲಂ ।
ಭ್ರಾಮಯನ್ಪಾತಯಾಮಾಸ ಚಂದ್ರಾವತ್ಯಾಂ ಬಲಾತ್ಪುರೀಂ ॥ ೧೦ ॥

ಕಾಲನಾಭಃ ಪ್ರಪತಿತಃ ಕಿಂಚಿದ್ವ್ಯಾಕುಲಮಾನಸಃ ।
ಗೃಹೀತ್ವಾಥ ಗದಾಂ ಗುರ್ವೀಂ ಲಕ್ಷಭಾರವಿನಿರ್ಮಿತಾಂ ॥ ೧೧ ॥

ರಣಂ ಪ್ರಾಪ್ತೋ ಯದುಬಲಂ ಪೋಥಯಾಮಾಸ ದೈತ್ಯರಾಟ್ ।
ಗಜಾನ್ರಥಾನ್ಹಯಾನ್ವೀರಾನ್ಗದಯಾ ವಜ್ರಕಲ್ಪಯಾ ॥ ೧೨ ॥

೭–೮. ಅನಂತರ ಧನುಸ್ಸನ್ನು ಕೈಗೆ ತೆಗೆದುಕೊಂಡು ಅದರಲ್ಲಿ ಬಾಣವೊಂದನ್ನು ಹೂಡಿದನು. ಆ ಬಾಣವು ಧನುಸ್ಸಿನಿಂದ ಬಿಡಲ್ಪಟ್ಟೊಡನೆಯೇ ಬೃಹದಾಕಾರದ ಆ ಕಾಲನಾಭನ ವಾಹನವಾದ ಸೂಕರವನ್ನು ಮೇಲಕ್ಕೆತ್ತಿಕೊಂಡು ಹೋಗಿ ಸ್ವರ್ಗಲೋಕವಲ್ಲಿ ಲಕ್ಷ ಯೋಜನಗಳಷ್ಟು ದೂರ ಗರಗರನೆ ತಿರುಗಿಸಿ ಅಲ್ಲಿಂದ ಭಯಂಕರವಾಗಿ ಮೆರೆಯುತ್ತಿರುವ ಸಮುದ್ರದಲ್ಲಿ ಕೆಡವಿಬಿಟ್ಟಿತು.

೯–೧೦. ಇತ್ತಲಾಗಿ ಆ ಪ್ರದ್ಯುಮ್ನನು ತನ್ನ ಧನುಸ್ಸಿನಲ್ಲಿ ಮತ್ತೊಂದು ಬಾಣವನ್ನು ಹೂಡಿ ಪ್ರಯೋಗಿಸಲು ಆ ಬಾಣವು ಮಹಾಬಲಾಢ್ಯನಾದ ಆ ಕಾಲನಾಭನನ್ನು ಆಕಾಶಕ್ಕೆ ಕೊಂಡೊಯ್ದು ಅಲ್ಲಿಂದ ಗರಗರನೆ ತಿರುಗಿಸಿ ಚಂದ್ರಾವತಿಯೆಂಬ ಆತನ ನಗರಿಯಲ್ಲಿ ಕೆಡವಿಬಿಟ್ಟಿತು.

೧೧–೧೨. ಆ ಏಟಿಗೆ ಕಾಲನಾಭನು ಸ್ವಲ್ಪಮಟ್ಟಿಗೆ ಕಳವಳಕ್ಕೀಡಾದನು. ಕೂಡಲೇ ಆ ದೈತ್ಯನು ಲಕ್ಷಭಾರ ತೂಕವಿರುವಂತಹ ಭಾರಿಯಾದ ಗದೆಯೊಂದನ್ನು ತೆಗೆದುಕೊಂಡು ಮತ್ತೆ ಯುದ್ಧರಂಗವನ್ನು ಪ್ರವೇಶಿಸಿ ವಜ್ರಾಯುಧದಂತೆ ಕರ್ಕಶವಾಗಿದ್ದ ಆ ಗದೆಯಿಂದ ಆ ಯದುಸೇನೆಯಲ್ಲಿದ್ದ ಆನೆ ಕುದುರೆಗಳನ್ನೂ, ರಥಗಳನ್ನೂ, ಯೋಧರನ್ನೂ ಸದೆಬಡಿಯುತ್ತಾ ಬಂದನು.

ಪಾತಯಾಮಾಸ ವೇಗೇನ ಮಹಾವಾತೋ ಯಥಾ ತರೂನ್ ।
ಕಾಂಶ್ಚಿತ್ಕರಾಭ್ಯಾಂ ಪ್ರೋನ್ನೀಯ ಚಿಕ್ಷೇಪ ಗಗನೇ ಬಲಾತ್ ॥ ೧೩ ॥

ಅಂಬರಾತ್ತೇ ನಿಪೇತುಃ ಕೌ ರಾಜನ್ವರ್ಷೋಪಲಾ ಇವ ।
ತದಾ ಗದಾಂ ಸಮಾದಾಯ ಸಾಂಬೋ ಜಾಂಬವತೀಸುತಃ ॥ ೧೪ ॥

ತತಾಡ ಮೂರ್ಧ್ನಿ ತಂ ದೈತ್ಯಂ ಕಾಲನಾಭಂ ಮಹಾಸುರಂ ।
ತಯೋರ್ಯುದ್ಧಮಭೂದ್ಘೋರಂ ಗದಾಭ್ಯಾಂ ರಣಮಂಡಲೇ ॥ ೧೫ ॥

ವಿಸ್ಫುಲಿಂಗಾನ್ ಕ್ಷರಂತ್ಯೌ ದ್ವೇ ಗದೇ ಚೂರ್ಣೇ ಬಭೂವತುಃ ।
ಅನ್ಯೇ ಗದೇ ಸಮಾದಾಯ ತಸ್ಥತುಃ ಸಂಗರೇ ಚ ತೌ ॥ ೧೬ ॥

---

೧೩. ಆ ಗದಾಪ್ರಹಾರದಿಂದ ಬಿರುಗಾಳಿಗೆ ಸಿಕ್ಕಿದ ಭಾರಿ ಮರಗಳಂತೆ ಅವೆಲ್ಲವೂ ಪಟಪಟನೆ ಉರುಳುತ್ತಾ ಬಂದುವು. ಆ ದೈತ್ಯನು ಕೆಲವರನ್ನು ಕೈಗಳಿಂದ ಹಿಡಿದುಕೊಂಡು ಆಕಾಶದಲ್ಲಿ ಎತ್ತಿ ಬಿಸಾಡಿದನು.

೧೪. ಹಾಗೆ ಬಿಸಾಡಲ್ಪಟ್ಟವರೆಲ್ಲರೂ ಆನೆಕಲ್ಲುಗಳಂತೆ ಆಕಾಶದಿಂದ ತಪತಪನೆ ಬಿದ್ದುಹೋದರು. ಆಗ ಜಾಂಬವತೀಪುತ್ರನಾದ ಸಾಂಬನು ಗದೆಯನ್ನು ತೆಗೆದು ಕೊಂಡು,

೧೫. ಆ ಕಾಲನಾಭನೆಂಬ ದೈತ್ಯನ ತಲೆಯ ಮೇಲೆ ಜೋರಾಗಿ ಪ್ರಹರಿಸಿದನು. ರಾಜೇಂದ್ರ! ಆಗ ಆ ದೈತ್ಯನಿಗೂ, ಸಾಂಬನಿಗೂ ಆ ಯುದ್ಧರಂಗದಲ್ಲಿ ಭಾರಿ ಗದಾಯುದ್ಧವೇ ಜರುಗಿತು.

೧೬. ಆ ವೀರರಿಬ್ಬರ ಗದೆಗಳೆರಡೂ ಒಂದಕ್ಕೊಂದು ತಗುಲಿ ಕಿಡಿಗಳನ್ನು ಕಾರುತ್ತಾ ನೆಲದ ಮೇಲೆ ಬಿದ್ದು ಬೂದಿಯಾಗಿಹೋದುವು. ಕೂಡಲೇ ಆ ವೀರರಿಬ್ಬರೂ ಬೇರೆ ಗದೆಗಳೆರಡನ್ನು ತೆಗೆದುಕೊಂಡು ಮರಳಿ ಹೋರಾಡತೊಡಗಿದರು.

ಕಾಲನಾಭಸ್ತದಾ ಪ್ರಾಹ ಸಾಂಬಂ ಜಾಂಬವತೀಸುತಂ ।
ಏಕೇನಾಪಿ ಪ್ರಹಾರೇಣ ಹನ್ಮಿ ತ್ವಾಂ ನಾತ್ರ ಸಂಶಯಃ ॥ ೧೭ ॥

ಪೂರ್ವಪ್ರಹಾರಂ ಕುರು ಮೇ ಇತಿ ಸಾಂಬೋಽಪದದ್ರಿಪುಂ ।
ಕಾಲನಾಭೋಽಥ ಗದಯಾ ಸಾಂಬಮೂರ್ಧ್ನಿ ತತಾಡ ಹ ॥ ೧೮ ॥

ಗದೋಪರಿ ಗದಾಂ ನೀತ್ವಾ ಸಾಂಬೋ ಜಾಂಬವತೀಸುತಃ ।
ಜಘಾನ ಗದಯಾ ದೈತ್ಯಂ ಕಾಲನಾಭಮುರಸ್ಥಲೇ ॥ ೧೯ ॥

ಗದಯಾ ಭಿನ್ನಹೃದಯ ಉದ್ವಮನ್ರುಧಿರಂ ಮುಖಾತ್ ।
ವ್ಯಸುಃ ಪಪಾತ ಭೂಪೃಷ್ಠೇ ವಜ್ರಾಹತ ಇವಾಚಲಃ ॥ ೨೦ ॥

---

೧೭. ಆಗ ಕಾಲನಾಭನು ಸಾಂಬನನ್ನು ಕುರಿತು 'ಒಂದೇ ಒಂದು ಪ್ರಹಾರದಿಂದ ನಿನ್ನನ್ನು ಕೊಂದುಬಿಡುವೆನು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ' ಎನ್ನಲು,

೧೮. ಆ ಸಾಂಬನು ಅವನನ್ನು ಕುರಿತು 'ನೀನೇ ನನ್ನನ್ನು ಮೊದಲು ಪ್ರಹರಿಸು' ಎಂದು ನುಡಿದನು. ಆಗ ಕಾಲನಾಭನು ಗದೆಯಿಂದ ಸಾಂಬನ ತಲೆಯ ಮೇಲೆ ಪ್ರಹರಿಸಿದನು.

೧೯. ಕೂಡಲೇ ಆ ಸಾಂಬನು ಆ ಗದೆಯು ಬೀಳುವುದರೊಳಗಾಗಿ ತನ್ನ ಗದೆಯಿಂದ ಅದರ ಮೇಲೆ ಪ್ರಹರಿಸಿ ಅದನ್ನು ತಪ್ಪಿಸಿಕೊಂಡುದಲ್ಲದೆ ಆ ದೈತ್ಯನ ಎದೆಯ ಮೇಲೆ ಪುನಃ ತನ್ನ ಗದೆಯಿಂದ ಪ್ರಹರಿಸಿದನು.

೨೦. ಆ ಏಟಿನಿಂದ ಅವನ ಎದೆಯು ಬಿಚ್ಚಿಹೋಯಿತು. ಮುಖದಿಂದ ರಕ್ತವು ಕಿತ್ತುಕೊಂಡಿತು. ಕೂಡಲೇ ಆತನು ವಜ್ರಾಹತವಾದ ಪರ್ವತದಂತೆ ಗತಪ್ರಾಣನಾಗಿ ನೆಲದ ಮೇಲೆ ಬಿದ್ದುಬಿಟ್ಟನು.

ಅಭೂಜ್ಜಯಜಯಾರಾವಃ ಸಾಧುವಾದಃ ಸತಾಂ ನೃಪ ।
ದೇವದುಂದುಭಯೋ ನೇದುರ್ನರದುಂದುಭಯಸ್ತಥಾ || ೨೧ ||

ಸಾಂಬಸೇನೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ।
ವಿದ್ಯಾಧರ್ಯಶ್ಚ ಗಂಧರ್ವಾ ನನೃತುಶ್ಚ ಜಗುರ್ಮುದಾ || ೨೨ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದ ಬಹುಲಾಶ್ವ ಸಂವಾದೇ ಕಾಲನಾಭದೈತ್ಯವಧೋ ನಾಮ ಪಂಚತ್ರಿಂಶೋಽಧ್ಯಾಯಃ

---

೨೧. ರಾಜೇಂದ್ರ! ಆಗ ಭಲೆ! ಭಲೆ! ಎಂದು ಸಜ್ಜನರೆಲ್ಲರೂ ಜಯ ಧ್ವನಿಯನ್ನು ಮಾಡಿದರು. ದೇವದುಂದುಭಿಗಳೂ, ಯಾದವಸೇನೆಯ ದುಂದುಭಿಗಳೂ ಮೊಳಗಿದುವು.

೨೨. ಆಗ ಸಾಂಬನ ಸೇನೆಯ ಮೇಲೆ ದೇವತೆಗಳು ಹೂವಿನ ಮಳೆಯನ್ನು ಸುರಿಸಿದರು. ವಿದ್ಯಾಧರಸ್ತ್ರೀಯರೂ, ಗಂಧರ್ವರೂ ಸಂತೋಷದಿಂದ ಗಾನಮಾಡುತ್ತಾ ನರ್ತನವನ್ನು ಮಾಡಿದರು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವಸಂವಾದದಲ್ಲಿ ಕಾಲನಾಭದೈತ್ಯವಧವೆಂಬ ಮೂವತ್ತೈದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಷಟ್ತ್ರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಕಾಲನಾಭೇಽಥ ಪತಿತೇ ಮಹಾನ್ಕೋಲಾಹಲೋಽಭವತ್ ।
ಉಷ್ಟ್ರಾರೂಢೋ ಮಹಾನಾಭೋ ದೈತ್ಯಃ ಪ್ರಾಪ್ತೋ ರಣಾಂಗಣೇ ॥ ೧ ॥

ಮುಖಾದಗ್ನಿಂ ಸಮುಸೃಜನ್ಮಾಯಾವೀ ದೈತ್ಯಪುಂಗವಃ ।
ತೇನಾಗ್ನಿನಾ ಭೂಮಿವೃಕ್ಷಾ ಜಜ್ವಲುಶ್ಚ ದಿಶೋ ದಶ ॥ ೨ ॥

ಮೂವತ್ತಾರನೆಯ ಅಧ್ಯಾಯವು

೧. ಬಹುಲಾಶ್ವರಾಜೇಂದ್ರ! ಆಲಿಸು. ದೈತ್ಯವೀರನಾದ ಕಾಲನಾಭನು ಮಡಿದುಬಿದ್ದುದನ್ನು ಕಂಡು ದೈತ್ಯಸೇನೆಯಲ್ಲಿ ಭಾರಿ ಗದ್ದಲವುಂಟಾಯಿತು. ಆಗ ಮಹಾನಾಭನೆಂಬ ಮತ್ತೊಬ್ಬ ದೈತ್ಯವೀರನು ಒಂಟೆಯ ಮೇಲೆ ಕುಳಿತು ಯುದ್ಧರಂಗಕ್ಕೆ ಬಂದು ಸೇರಲು ನಿಂತನು.

೨. ಕೂಡಲೇ ಮಾಯಾಕುಶಲನಾದ ಆ ದೈತ್ಯಶ್ರೇಷ್ಠನು ತನ್ನ ಮುಖದಿಂದ ಬೆಂಕಿಯನ್ನು ಸೃಷ್ಟಿಸಿದನು. ರಾಜೇಂದ್ರ! ಆ ಅಗ್ನಿಯಿಂದ ಭೂಮಿಯೂ, ಅದರ ಮೇಲೆ ಬೆಳೆದಿರುವ ಮರಗಿಡಗಳೂ, ದಶದಿಕ್ಕುಗಳೂ ಉರಿಯತೊಡಗಿದುವು.

ವೀರಾಣಾಂ ಕಂಚುಕೋಷ್ಣೀಷಕಟಿಬಂಧಾಂಗರಕ್ಷಕಾಃ ।
ಪ್ರಜಜ್ವಲುರ್ಮಹಾರಾಜ ಮುಂಜಪುಷ್ಪಪ್ರತೂಲವತ್ ॥ ೩ ॥

ಸಮುದ್ರಪಟ್ಟನಭವೈಃ ಪೀತಾರುಣಸಿತಾಸಿತೈಃ ।
ಹರಿತೈಶ್ಚಿತ್ರವರ್ಣೈಶ್ಚ ಸೂಕ್ಷ್ಮೈಃ ಕಾಶ್ಮೀರಜೈರಪಿ ॥ ೪ ॥

ಹೇಮರತ್ನಖಚಿದ್ಭಿಶ್ಚ ಕಂಬಲೈಃ ಸಹಿತಾ ಗಜಾಃ ।
ಪ್ರಜಜ್ವಲುರ್ಮೃಧೇ ರಾಜನ್ವೃಕ್ಷೈಃ ಶೈಲಾ ಇವಾಗ್ನಿನಾ ॥ ೫ ॥

ಶಿಖಾರತ್ನೈಶ್ಚಾಮರೈಶ್ಚ ಹಾರೈರ್ಹೈರನ್ಯೈಃ ಪರಿಚ್ಛದೈಃ ।
ಉತ್ಪತಂತೋ ಹಯಾ ಯುದ್ಧೇ ಮೃಗಾ ಇವ ದವಾಗ್ನಿನಾ ॥ ೬ ॥

---

೩. ಮತ್ತು ಯಾದವಯೋಧರು ಧರಿಸಿದ್ದ ಉಷ್ಣೀಷ (ಪಾಗು)ಗಳೂ, ಕವಚಗಳೂ. ನಡುಕಟ್ಟುಗಳೂ, ತಮ್ಮ ಮೈಯನ್ನು ಆಯುಧಗಳಿಂದ ಸಂರಕ್ಷಿಸುವಂತಹ ಇತರ ವಿಧವಾದ ರಕ್ಷಣೋಪಾಯಗಳೂ ಎಲ್ಲವೂ, ಮುಂಜವೆಂಬ ತೃಣವಿಶೇಷದಲ್ಲಿ ಬಿಡುವ ಹೂಗಳಿಂದುಂಟಾಗುವ ಹತ್ತಿಯ ರಾಶಿಯಂತೆ ಕ್ಷಣಮಾತ್ರದಲ್ಲಿ ಹೊತ್ತಿಕೊಂಡು ಜೋರಾಗಿ ಉರಿಯತೊಡಗಿದುವು.

೪–೫. ಇವುಗಳ ಜೊತೆಗೆ ಸಮುದ್ರದಲ್ಲಿಯೂ, ಕಾಶ್ಮೀರದಲ್ಲಿಯೂ ರಚಿಸಲ್ಪಟ್ಟ ಹಳದಿ, ಕೆಂಪು, ಬಿಳುಪು, ಕಪ್ಪು, ಹಸಿರು ಮುಂತಾದ ಬಣ್ಣಗಳನ್ನೊಳಗೊಂಡು ಚಿನ್ನದೆಳೆಗಳಿಂದಲೂ ಬಗೆಬಗೆಯ ರತ್ನಗಳಿಂದಲೂ ಅಲಂಕೃತವಾಗಿದ್ದ ಆ ರತ್ನಗಂಬಳಿಗಳಿಂದ ಮೆರೆಯುತ್ತಿದ್ದ ಸೇನಾಗಜಗಳೂ ಸಹ ಕಾಳ್ಕಿಚ್ಚಿಗೆ ಸಿಲುಕಿ ಉರಿಯುವ ವೃಕ್ಷಸಮೇತವಾದ ಪರ್ವತಗಳಂತೆ ಜ್ವಲಿಸತೊಡಗಿದುವು.

೬. ಇದರಂತೆಯೇ ಶಿಖಾಭೂಷಣವಾದ ರತ್ನಗಳಿಂದಲೂ. ಚಾಮರಗಳಿಂದಲೂ. ಚಿನ್ನದ ಸರಗಳಿಂದಲೂ, ಇತರ ಆಭರಣಗಳಿಂದಲೂ ಅಲಂಕೃತವಾಗಿ ಇತ್ತಲಿಂದತ್ತ ನೆಗೆಯುತ್ತಿರುವ ಕುದುರೆಗಳೂ ಸಹ ಕಾಡುಕಿಚ್ಚಿಗೆ ಸಿಕ್ಕಿದ ಜಿಂಕೆಗಳಂತೆ ಆ ದೈತ್ಯನ ಮಾಯಾಗ್ನಿಗೆ ಸಿಕ್ಕಿ ಉರಿಯುತೊಡಗಿದುವು.

ಸೈನ್ಯಂ ಭಯಾತುರಂ ದೃಷ್ಟ್ವಾ ದೀಪ್ತಿಮಾನ್ಕೃಷ್ಣನಂದನಃ ।
ಮಾಯಾವನ್ಹಿಪ್ರಶಾಂತ್ಯರ್ಥಂ ಪರ್ಜನ್ಯಾಸ್ತ್ರಂ ಸಮಾದಧೇ ॥ ೭ ॥

ಬಾಣಾದ್ವಿನಿರ್ಗತಾ ಮೇಘಾ ಸಾಂವರ್ತಕಗಣಾ ಇವ ।
ವವೃಷುರ್ಜಲಧಾರಾಭಿರ್ನದಂತೋ ಭೈರವಂ ರವಂ ॥ ೮ ॥

ಆಸಾರೇಣ ಮಹಾರಾಜ ಪ್ರಾವಟ್ಕಾಲೋಽಭವತ್ಕ್ಷಿತೌ ।
ಪುಂಸ್ಕೋಕಿಲಾಃ ಕೋಕಿಲಾಶ್ಚ ಮಯೂರಾಃ ಸಾರಸಾದಯಃ ॥ ೯ ॥

ಮಂಡೂಕಾಃ ಪ್ರಜಗುರ್ಗೀರ್ಭಿರಿಂದ್ರಗೋಪಾಶ್ಚ ರೇಜಿರೇ ।
ಇಂದ್ರಚಾಪೇನ ದಾಮಿನ್ಯಾ ಮೈಥಿಲೇಂದ್ರ ಬಭೌ ನಭಃ ॥ ೧೦ ॥

---

೭. ಈ ರೀತಿ ದೈತ್ಯನ ಮಾಯಾಪ್ರಭಾವದಿಂದ ತನ್ನ ಸೈನ್ಯವೆಲ್ಲವೂ ಹೆದರಿ ತಲ್ಲಣಿಸುತ್ತಿರುವುದನ್ನು ಕಂಡು ಕುಪಿತನಾದ ದೀಪ್ತಿಮಂತನೆಂಬ ಕೃಷ್ಣಪುತ್ರನು ಆ ಮಾಯಾಗ್ನಿಯನ್ನು ಶಮನಗೊಳಿಸಲು ಪರ್ಜನ್ಯಾಸ್ತ್ರವನ್ನು ತನ್ನ ಧನುಸ್ಸಿನಲ್ಲಿ ಸಂಧಾನಮಾಡಿದನು.

೮. ಕೂಡಲೇ ಆ ಅಸ್ತ್ರದಿಂದ ಪ್ರಳಯಕಾಲದ ಸಂವರ್ತಕಾದಿ ಮೇಘಗಳಂತೆ ಭಾರಿಯಾದ ಮೋಡಗಳು ಕವಿಯತೊಡಗಿ ಜೋರಾಗಿ ಆರ್ಭಟಿಸುತ್ತಾ ಭಾರಿ ಭಾರಿ ಹನಿಗಳಿಂದ ಮಳೆಯನ್ನು ಸುರಿಸಲಾರಂಭಿಸಿದುವು.

೯–೧೦. ಓ ರಾಜೇಂದ್ರ! ಆ ರೀತಿ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ಭೂಮಿಯಲ್ಲೆಲ್ಲಾ ವರ್ಷಾಕಾಲವು ಪ್ರಾಪ್ತವಾದಂತಾಯಿತು. ಆಗ ಗಂಡು, ಮತ್ತು ಹೆಣ್ಣು ಕೋಗಿಲೆಗಳೂ, ನವಿಲುಗಳೂ, ಸಾರಸಾದಿ ಜಲಚರ ಪಕ್ಷಿಗಳೂ ಆನಂದದಿಂದ ಧ್ವನಿಮಾಡತೊಡಗಿದುವು. ಇಂದ್ರಗೋಪವೆಂಬ ಕೆಂಪುಬಣ್ಣದ ಹುಳುಗಳು ಕಂಗೊಳಿಸತೊಡಗಿದುವು. ಕಾಮನ ಬಿಲ್ಲುಗಳೂ, ಬಳ್ಳಿ ಮಿಂಚುಗಳೂ ಥಳಥಳಿಸತೊಡಗಿದುದರಿಂದ ಆಕಾಶವು ರಮಣೀಯವಾಗಿ ತೋರತೊಡಗಿತು.

ಇತ್ಥಂ ಶಾಂತಿಂ ಗತೇ ವನ್ಹೌ ಮಹಾನಾಭೋ ಮಹಾಸುರಃ ।
ಪ್ರಾಹಿಣೋನ್ನಿಶಿತಂ ಶೂಲಂ ರುಷಾ ದೀಪ್ತಿಮತೇ ತ್ವರಂ ॥ ೧೧ ॥

ಶೂಲಂ ಸರ್ಪಮಿವಾಯಾಂತಂ ದೀಪ್ತಿಮಾನ್ರೋಹಿಣೀಸುತಃ ।
ಚಿಚ್ಛೇದ ತ್ವಸಿನಾ ಯುದ್ಧೇ ಫಣಿನಂ ಗರುಡೋ ಯಥಾ ॥ ೧೨ ॥

ದಶಂತಂ ಚೋದ್ಭಟಂ ಚೋಷ್ಟ್ರಂ ಮಹಾನಾಭಸ್ಯ ವಾಹನಂ ।
ದೀಪ್ತಿಮಾನ್ಸ್ವೇನ ಖಡ್ಗೇನ ಸಂಜಘಾನ ರಣಾಂಗಣೇ ॥ ೧೩ ॥

ದ್ವಿಧಾಭೂತಃ ಪಪಾತೋರ್ವ್ಯಾಂ ಖಡ್ಗಸಂಭಿನ್ನಕಂಧರಃ ।
ಜಗಾಮ ಪಂಚತಾಮುಷ್ಟ್ರೋ ಮಹಾನಾಭಸ್ಯ ಪಶ್ಯತಃ ॥ ೧೪ ॥

---

೧೧. ಹೀಗೆ ತನ್ನ ಮಾಯಾಗ್ನಿಯು ಅಡಗಿಹೋದುದನ್ನು ಕಂಡು ಆ ಮಹಾನಾಭನೆಂಬ ದೈತ್ಯನು ಕೋಪಾಕ್ರಾಂತನಾಗಿ ಆ ದೀಪ್ತಿಮಂತನ ಮೇಲೆ ಚೂಪಾದ ಮೊನೆಯುಳ್ಳ ಶೂಲವೊಂದನ್ನು ವೇಗದಿಂದ ಪ್ರಹರಿಸಿದನು.

೧೨. ಆ ಶೂಲವು ಬುಸುಗುಟ್ಟುವ ಸರ್ಪವಂತೆ ತನ್ನ ಕಡೆಗೇ ಬರುತ್ತಿರುವುದನ್ನು ಕಂಡು ರೋಹಿಣಿಯ ಪುತ್ರನಾದ ಆ ದೀಪ್ತಿಮಂತನು ಅದನ್ನು ತನ್ನ ಕತ್ತಿಯಿಂದ ಗರುಡನು ಹಾವನ್ನು ತುಂಡರಿಸುವಂತೆ ಕತ್ತರಿಸಿಬಿಟ್ಟನು.

೧೩. ಅನಂತರ ಆ ದೀಪ್ತಿಮಂತನು ತನ್ನನ್ನು ಕಚ್ಚಲು ಬರುತ್ತಿರುವ ಆ ಮಹಾನಾಭನ ವಾಹನವಾದ ಮದೋದ್ಧತವಾದ ಉಷ್ಟ್ರ (ಒಂಟೆ) ವನ್ನು ಕಂಡು ತನ್ನ ಕತ್ತಿಯನ್ನು ಬೀಸಿ ವೇಗವಾಗಿ ಪ್ರಹರಿಸಿದನು.

೧೪. ಆ ಏಟಿನಿಂದ ಆ ಉಷ್ಟ್ರದ ಕತ್ತು ಕತ್ತರಿಸಿಹೋಗಿ ಎರಡು ತುಂಡಾಗಿ ನೆಲದ ಮೇಲೆ ಬಿದ್ದುಹೋಯಿತು. ಹೀಗೆ ಆ ಒಂಟೆಯು ತನ್ನ ಸ್ವಾಮಿಯು ನೋಡುತ್ತಿರುವಂತೆಯೇ ಎರಡು ತುಂಡಾಗಿ ಕತ್ತರಿಸಲ್ಪಟ್ಟು ತನ್ನ ಪ್ರಾಣಗಳನ್ನು ನೀಗಿತು.

ಮಹಾನಾಭೋ ಮಹಾದೈತ್ಯೋ ಗಜಮಾರುಹ್ಯ ವೇಗತಃ |
ಶೂಲಹಸ್ತಃ ಪುನಃ ಪ್ರಾದಾನ್ನಾದಯನ್ವ್ಯೋಮಮಂಡಲಂ || ೧೫ ||

ದೀಪ್ತಿಮಾನಶ್ವಮಾರುಹ್ಯ ಸೈಂಧವಂ ಚಂಚಲಾಸಿತಂ |
ತಡಿತ್ಪ್ರಭೇಣ ಖಡ್ಗೇನ ಬಭೌ ಶ್ರೀಕೃಷ್ಣನಂದನಃ || ೧೬ ||

ತುರಗಂ ಪಾರ್ಷ್ಣಿಘಾತೇನ ಪ್ರೋತ್ಪತನ್ಧರಣೀತಲಾತ್ |
ಆರೂಢೋ ಗಜಕುಂಭಾಂತಂ ಗಿರಿಶೃಂಗಂ ಯಥಾ ಹರಿಃ || ೧೭ ||

ಖಡ್ಗೇನ ಶಿತಧಾರೇಣ ದೀಪ್ತಿಮಾನ್ಕೃಷ್ಣನಂದನಃ |
ಮಹಾನಾಭಸ್ಯ ಸಹಸಾ ಶಿರಃ ಕಾಯಾದಪಾಹರತ್ || ೧೮ ||

---

೧೫. ಆಗ ಕುಪಿತನಾದ ಆ ಮಹಾನಾಭನೆಂಬ ದೈತ್ಯವೀರನು ಬೇಗನೆ ಆನೆಯೊಂದನ್ನು ಹತ್ತಿ ಕುಳಿತು ಕೈಯಲ್ಲಿ ಶೂಲವೊಂದನ್ನು ಹಿಡಿದು ಆಕಾಶವು ಬೊಬ್ಬರಿಯುವಂತೆ ಗರ್ಜಿಸುತ್ತಾ ಮತ್ತೆ ಯುದ್ಧರಂಗಕ್ಕೆ ಬಂದನು.

೧೬. ಇತ್ತಲಾಗಿ ಕೃಷ್ಣಪುತ್ರನಾದ ದೀಪ್ತಿಮಂತನೂ ಸಹ ಸಿಂಧುದೇಶದಲ್ಲಿ ಹುಟ್ಟಿದ ಮಿಂಚಿನಂತೆ ಥಳಥಳಿಸುವ ಬಿಳುಪಿನಿಂದ ಮೆರೆಯುತ್ತಿದ್ದ ಜಾತ್ಯಶ್ವವನ್ನು ಹತ್ತಿ ಕುಳಿತು ಮಿಂಚಿನಂತೆ ಹೊಳೆಯುತ್ತಿರುವ ಕತ್ತಿಯೊಂದನ್ನು ಕೈಲಿ ಹಿಡಿದು ಮಹಾಯುದ್ಧಕ್ಕೆ ಬಂದನು.

೧೭. ಹಾಗೆ ಬಂದವನೇ ತನ್ನ ಹಿಮ್ಮಡಿಗಳಿಂದ ತಾನು ಕುಳಿತಿದ್ದ ಕುದುರೆಯನ್ನು ಚುಚ್ಚಿ ಅದನ್ನು ಮೇಲಕ್ಕೆ ಹಾರಿಸುತ್ತಾ ಪರ್ವತದ ಶಿಖರವನ್ನು ಏರುವ ಸಿಂಹದಂತೆ ಆ ದೈತ್ಯನು ಕುಳಿತಿದ್ದ ಮದ್ದಾನೆಯ ಕುಂಭಸ್ಥಳವನ್ನು ಹತ್ತಿಬಿಟ್ಟನು.

೧೮. ಹಾಗೆ ಹತ್ತಿದ ಕೂಡಲೇ ಸರಕ್ಕನೆ ಆ ಕೃಷ್ಣಪುತ್ರನಾದ ದೀಪ್ತಿಮಂತನು ಕ್ರೂರವಾದ ಅಲುಗುಳ್ಳ ತನ್ನ ಕತ್ತಿಯಿಂದ ಒಂದೇ ಏಟಿಗೆ ಆ ಮಹಾನಾಭನ ಶಿರಸ್ಸನ್ನು ಕತ್ತರಿಸಿ ದೇಹದಿಂದ ಬೇರೆಮಾಡಿಬಿಟ್ಟನು.

ಬಾಣವರ್ಷಂ ಪ್ರಕುರ್ವಂತಂ ಸೇನಾಂ ತಸ್ಯ ದುರಾತ್ಮನಃ |
ಜಘಾನ ದೀಪ್ತಿಮಾನ್ಸಿಂಹೋ ಗಜಯೂಥಂ ಯಥಾಸಿನಾ || ೧೯ ||

ಕೇಚಿತ್ಖಡ್ಗೇನಾಭಿಹತಾಃ ಶೇಷಾ ದೈತ್ಯಾಃ ಪಲಾಯಿತಾಃ |
ದೇವಾ ದೀಪ್ತಿಮತೋ ಮೂರ್ಧ್ನಿ ಪುಷ್ಪವರ್ಷಂ ಪ್ರಚಕ್ರಿರೇ || ೨೦ ||

ಜಗುಃ ಕಿನ್ನರಗಂಧರ್ವಾ ನನೃತುಶ್ಚಾಪ್ಸರೋ ಗಣಾಃ |
ಋಷಯೋ ಮುನಯೋ ದೇವಾಸ್ತುಷ್ಟುವುಃ ಶ್ರೀಹರೇಃ ಸುತಂ || ೨೧ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಮಹಾನಾಭವಧೋ ನಾಮ ಷಟ್ತ್ರಿಂಶೋಽಧ್ಯಾಯಃ

---

೧೯. ಆಗ ಆ ದುರಾತ್ಮನ ಸೇನೆಯು ತನ್ನ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಿರುವುದನ್ನು ಕಂಡು ಕುಪಿತನಾದ ಆ ದೀಪ್ತಿಮಂತನು ಆನೆಯ ಹಿಂಡನ್ನು ಪ್ರವೇಶಿಸುವ ಮೃಗರಾಜನಂತೆ ಆ ದೈತ್ಯಸೇನೆಯ ನಡುವೆ ತನ್ನ ಕತ್ತಿಯೊಡನೆ ನುಗ್ಗಿಬಿಟ್ಟನು.

೨೦. ಆತನ ಕತ್ತಿಯ ಏಟಿಗೆ ಸಿಕ್ಕಿ ಅನೇಕ ಮಂದಿ ದೈತ್ಯರು ತಮ್ಮ ತಮ್ಮ ಪ್ರಾಣಗಳನ್ನು ತೊರೆದರು ಉಳಿದ ದೈತ್ಯರೆಲ್ಲರೂ ಅವನ ಸಾಹಸವನ್ನು ತಾಳಲಾರದೆ ರಣರಂಗದಿಂದ ಪಲಾಯನವಾಡಿದರು. ಆಗ ದೇವತೆಗಳು ದೀಪ್ತಿಮಂತನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು.

೨೧. ಕಿನ್ನರರೂ, ಗಂಧರ್ವರೂ, ಆತನ ಗುಣಗಳನ್ನು ಕೊಂಡಾಡುತ್ತಾ ಮಧುರವಾಗಿ ಗಾನಮಾಡಿದರು. ಅಪ್ಸರಸ್ತ್ರೀಯರು ಗುಂಪುಗುಂಪಾಗಿ ಸಂತೋಷದಿಂದ ನರ್ತನವಾಡಿದರು. ಋಷಿಗಳೂ, ಮುನಿಗಳೂ, ದೇವತೆಗಳೂ ಆ ಕೃಷ್ಣಪುತ್ರನನ್ನು ಸ್ತೋತ್ರಮಾಡಿದರು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ನಾರದಬಹುಲಾಶ್ವ ಸಂವಾದದಲ್ಲಿ ಮಹಾನಾಭವಧವೆಂಬ ಮೂವತ್ತಾರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಸಪ್ತತ್ರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಮಹಾನಾಭಂ ಮೃತಂ ಶ್ರುತ್ವಾ ಸೇನಾಂ ವೀಕ್ಷ್ಯ ಪಲಾಯಿತಾಂ ।
ದೈತ್ಯಸ್ತಿಮಿಂಗಿಲಾರೂಢೋ ಹರಿಶ್ಮಶ್ರುಃ ಸಮಾಯಯೌ ॥ ೧ ॥

ಹರಿಶ್ಮಶ್ರುಸ್ತದಾ ದೈತ್ಯೋ ರುಷಾ ಪ್ರಸ್ಫುರಿತಾಧರಃ ।
ಉವಾಚ ಪರುಷಂ ವಾಕ್ಯಂ ಯಾದವಾನಾಂ ಚ ಶೃಣ್ವತಾಂ ॥ ೨ ॥

ಮೂವತ್ತೇಳನೆಯ ಅಧ್ಯಾಯವು

೧. ರಾಜೇಂದ್ರ ! ಆಲಿಸು. ಈ ರೀತಿಯಾಗಿ ಮಹಾನಾಭನು ಹತನಾದನೆಂಬ ಸುದ್ಧಿಯನ್ನು ಕೇಳಿ ಅವನ ಕಡೆಯ ಸೇನೆಯು ದಿಕ್ಕೆಟ್ಟು ಓಡಿಹೋಗುತ್ತಿರುವುದನ್ನು ಕಂಡು ಹರಿಶ್ಮಶ್ರುವೆಂಬ ದೈತ್ಯನು ತಿಮಿಂಗಿಲಾರೂಢನಾಗಿ ಯುದ್ಧರಂಗಕ್ಕೆ ಬಂದನು.

೨. ಬಂದವನೇ ಮಹಾಕೋಪದಿಂದ ತನ್ನ ತುಟಿಗಳನ್ನು ಅಲುಗಿಸುತ್ತಾ ಯಾದವರೆಲ್ಲರಿಗೂ ಕೇಳಿಸುವಂತೆ ಕ್ರೂರವಾದ ಈ ಕೆಳಗಿನ ವಾಕ್ಯಗಳನ್ನಾಡಿದನು.

॥ ಹರಿಶ್ಮಶ್ರುರುವಾಚ ॥

ಯೂಯಂ ಸರ್ವೇಽಪಿ ಮೇ ಶಕ್ತ್ಯಾ ಮನುಷ್ಯಾಃ ಸ್ವಲ್ಪವಿಕ್ರಮಾಃ ।
ಶಸ್ತ್ರೈರ್ಜಯಂತೋ ದೀನಾ ವೈ ಪೌರುಷಂ ಕಿಂ ಭವಾದೃಶೇ ॥ ೩ ॥

ಭವತಾಂ ಬಲವಾನ್ಕೋಽಪಿ ವಿನಾ ಶಸ್ತ್ರಂ ಮಯಾ ಸಹ ।
ಕರೋತಿ ಮಲ್ಲಯುದ್ಧಂ ವೈ ಪೌರುಷಂ ಯೇನ ದೃಶ್ಯತೇ ॥ ೪ ॥

॥ ಶ್ರೀ ನಾರದ ಉವಾಚ ॥

ಇತ್ಥಂ ದೈತ್ಯವಚಃ ಶ್ರುತ್ವಾ ದೃಷ್ಟ್ವಾ ತತ್ಪ್ರೋದ್ಭಟಂ ವಪುಃ ।
ಸರ್ವೇ ಭಭೂವುಸ್ತೇ ತೂಷ್ಣೀಂ ಪ್ರಶಂಸಂತಃ ಪರಸ್ಪರಂ ॥ ೫ ॥

---

೩. "ಎಲೈ ಯಾದವರಿರಾ! ನನ್ನ ಶಕ್ತಿಯೊಡನೆ ಹೋಲಿಸುವುದಾದರೆ ನೀವೆಲ್ಲರೂ ತೀರ ದುರ್ಬಲರೇ ಸರಿ. ಮನುಷ್ಯಮಾತ್ರರಾದವರಿಗೆ ಪರಾಕ್ರಮವು ಅತ್ಯಲ್ಪವೆಂಬುದು ಸರ್ವರಿಗೂ ವಿದಿತವಾಗಿಯೇ ಇರುವುದು. ನೀವು ಜಯಿಸುವುದಾದರೂ ಆಯುಧಗಳ ಸಹಾಯದಿಂದಲ್ಲದೆ, ಮತ್ತೆ ಬೇರೆ ಅಲ್ಲ. ಇಂತಹ ನಿಮ್ಮ ಮೇಲೆ ನಾನು ಪೌರುಷವನ್ನು ತೋರಬೇಕೆ?

೪. ನಿಮ್ಮಲ್ಲಿ ಯಾವನಾದರೂ ಬಲಶಾಲಿಯಾದ ವೀರನಿದ್ದರೆ ನನ್ನೊಡನೆ ಯಾವೊಂದು ಆಯುಧದ ಸಹಾಯವನ್ನೂ ಅಪೇಕ್ಷಿಸದೆ ಬರಿಗೈಯಲ್ಲೇ ಮಲ್ಲಯುದ್ಧಕ್ಕೆ ನಿಂತು ತನ್ನ ಪೌರುಷವನ್ನು ತೋರಿಸಲಿ."

೫. ರಾಜೇಂದ್ರ! ಈ ರೀತಿಯಾಗಿ ಆ ದೈತ್ಯನು ನುಡಿದುದನ್ನು ಕೇಳಿ, ಅವನ ಭಾರಿಯಾದ ಶರೀರವನ್ನೂ ಕಂಡು ಯಾದವರೆಲ್ಲರೂ ತಮ್ಮ ತಮ್ಮಲ್ಲೇ ಒಬ್ಬರನ್ನೊಬ್ಬರು ಪ್ರಶಂಸಿಸುತ್ತಾ ಸುಮ್ಮನೆ ನಿಂತುಬಿಟ್ಟರು.

ಸರ್ವೇಷಾಂ ಪಶ್ಯತಾಂ ಭಾನುಃ ಸತ್ಯಭಾಮಾತ್ಮಜೋ ಬಲೀ ।
ತ್ಯಕ್ತ್ವಾ ಶಸ್ತ್ರಾಣಿ ಸಹಸಾ ತಸ್ಥೌ ಕೃಷ್ಣಂ ಸ್ಮರನ್ನೃಣೇ ॥ ೬ ॥

ತಿಮಿಂಗಿಲಾತ್ಸಮುತ್ತೀರ್ಯ ಹರಿಶ್ಮಶ್ರುರ್ಮಹಾಬಲಃ ।
ತಸ್ಥೌ ತತ್ಸಂಮುಖೇ ರಾಜನ್ಭುಜಮಾಸ್ಫೋಟ್ಯ ಯತ್ನತಃ ॥ ೭ ॥

ಭುಜಾಭ್ಯಾಂ ಚ ಭುಜೌ ಬಧ್ವಾ ನೋದನಾಂಚಕ್ರತುರ್ಬಲಾತ್
ದಂತೈರ್ಗಜಾವಿವ ವನೇ ಪ್ರಹರಂತೌ ಪರಸ್ಪರಂ ॥ ೮ ॥

ನೋದಯಾಮಾಸ ತಂ ಭಾನುಂ ಸ ದೈತ್ಯಃ ಶತಯೋಜನಂ ।
ಭುಜಾಭ್ಯಾಂ ರಾಜರಾಜೇಂದ್ರ ಸಿಂಹಃ ಸಿಂಹಮಿವೌಜಸಾ ॥ ೯ ॥

ತತಃ ಪುನಃ ಕೃಷ್ಣಸುತೋ ಹರಿಶ್ಮಶ್ರುಂ ಮಹಾಸುರಂ ।
ನೋದಯಾಮಾಸ ಸಹಸಾ ಸಹಸ್ರಂ ಯೋಜನಂ ಬಲಾತ್ ॥ ೧೦ ॥

---

೬. ಆಗ ಅವರೆಲ್ಲರೂ ನೋಡುತ್ತಿರುವಂತೆಯೇ ಸತ್ಯಭಾಮಾಸುತನಾದ ಭಾನುವೆಂಬ ವೀರನು ಯಾವುದೊಂದು ಆಯುಧಗಳನ್ನೂ ಧರಿಸದೆ ಬರಿಗೈಯಲ್ಲೇ ಹೊರಟು ಕೃಷ್ಣನನ್ನು ಸ್ಮರಿಸುತ್ತಾ ಅವನಿಗೆದುರಾಗಿ ಬಂದು ನಿಂತನು.

೭. ಆಗ ಹರಿಶ್ಮಶ್ರುವೆಂಬ ಮಹಾಬಲಾಢ್ಯನಾದ ಆ ದೈತ್ಯನೂ ಸಹ ತಾನು ಕುಳಿತಿದ್ದ ತಿಮಿಂಗಿಲದಿಂದ ಇಳಿದುಬಂದು ಬಲವಾಗಿ ತನ್ನ ತೋಳುಗಳನ್ನು ತಟ್ಟುತ್ತಾ ಅವನ ಮುಂದೆ ನಿಂತನು.

೮. ಆ ವೀರರಿಬ್ಬರೂ ಪರಸ್ಪರವಾಗಿ ತಮ್ಮ ತೋಳುಗಳಿಂದ ಒಬ್ಬರನ್ನೊಬ್ಬರು ಅಪ್ಪಿ ಹಿಡಿಯುತ್ತಲೂ, ನೂಕುತ್ತಲೂ ತಮ್ಮ ತಮ್ಮ ದಂತಗಳಿಂದ ಗುದ್ದಾಡುವ ಕಾಡಾನೆಗಳಂತೆ ಬಲವಾಗಿ ಹೋರಾಡಿದರು.

೯. ರಾಜೇಂದ್ರ! ಆಗ ಸಿಂಹವು ಸಿಂಹವನ್ನು ತಳ್ಳುವಂತೆ ಆ ದೈತ್ಯನು ಕೃಷ್ಣಪುತ್ರನಾದ ಭಾನುವನ್ನು ವೇಗದಿಂದ ನೂರು ಯೋಜನಗಳಷ್ಟು ದೂರಕ್ಕೆ ತಳ್ಳಿಬಿಟ್ಟನು.

೧೦. ಅವರಿಂದ ಕುಪಿತನಾದ ಭಾನುವು ಆ ಹರಿಸ್ಮಶ್ರುವನ್ನು ಸಾವಿರ ಯೋಜನಗಳಷ್ಟು ದೂರಕ್ಕೆ ತಾನೂ ತಳ್ಳಿಬಿಟ್ಟನು.

ಕಂಧರೇ ಸ್ವಭುಜಾಂ ಕೃತ್ವಾ ಕಟೌ ಚ ವಿನಿಧಾಯ ತಂ ।
ಭಾನುಂ ಜಾನೌ ಸಂಗೃಹೀತ್ವಾ ಪಾತಯಾಮಾಸ ದೈತ್ಯರಾಟ್ ॥ ೧೧ ॥

ಭಾನುಸ್ತಂ ಪೃಷ್ಠದೇಶೇಽಪಿ ಸಂನಿಧಾಯ ಭುಜೌಜಸಾ ।
ಗೃಹೀತ್ವಾ ಜಂಘಯೋರ್ದೈತ್ಯಂ ಪಾತಯಾಮಾಸ ಭೂತಲೇ ॥ ೧೨ ॥

ಅಥ ತೌ ಪುನರುತ್ಥಾಯ ಭುಜಾವಾಸ್ಫೋಟ್ಯ ತಸ್ಥತುಃ ।
ತ್ವರಂತೌ ಬಲಿನೌ ರಾಜನ್ಸುಪರ್ಣಫಣಿನಾವಿವ ॥ ೧೩ ॥

ದೈತ್ಯೋ ಭುಜೌಜಸಾ ನೀತ್ವಾ ಭಾನುಂ ಶ್ರೀಕೃಷ್ಣನಂದನಂ ।
ಚಿಕ್ಷೇಪ ಧೃತ್ವಾ ಚರಣಾವಾಕಾಶೇ ಲಕ್ಷಯೋಜನಂ ॥ ೧೪ ॥

ಆಕಾಶಾತ್ಪತಿತೋ ಭಾನುಃ ಕಿಂಚಿದ್ವ್ಯಾಕುಲಮಾನಸಃ ।
ಪ್ರಹ್ಲಾದ ಇವ ಶೈಲಾಂಗಾದ್ರಕ್ಷಿತಃ ಕೃಪಯಾ ಹರೇಃ ॥ ೧೫ ॥

---

೧೧. ಅನಂತರ ಆ ದೈತ್ಯೇಂದ್ರನು ತನ್ನ ಒಂದು ಕೈಯಿಂದ ಭಾನುವಿನ ಕುತ್ತಿಗೆಯನ್ನೂ, ಮತ್ತೊಂದು ಕೈಯಿಂದ ನಡುವನ್ನೂ, ಸುತ್ತಿಕೊಂಡು ಮುಂಡಿಗೆ ಕಾಲುಕೊಟ್ಟು ಅವನನ್ನು ನೆಲದ ಮೇಲೆ ಕೆಡವಿದನು.

೧೨. ಆ ಭಾನುವು ಕೆಳಗೆ ಬಿದ್ದರೂ ಸಹ ತನ್ನ ತೋಳ್ಬಲದಿಂದ ಆ ದೈತ್ಯನ ಬೆನ್ನನ್ನೂ, ಮೊಳಕಾಲುಗಳನ್ನೂ, ಹಿಡಿದು ಜಗ್ಗಿಸಿ ನೆಲದ ಮೇಲೆ ಕೆಡವಿಬಿಟ್ಟನು.

೧೩. ಕೂಡಲೇ ಆ ವೀರರಿಬ್ಬರೂ ತಟ್ಟನೆ ಮೇಲಕ್ಕೆದ್ದು ತಮ್ಮ ತೋಳುಗಳನ್ನು ತಟ್ಟುತ್ತಾ ಪರಸ್ಪರ ಹೋರಾಡುವ ಪಕ್ಷಿ. ಸರ್ಪರಾಜರಂತೆ ಕನಲುತ್ತಾ ನಿಂತರು.

೧೪. ಆಗ ಆ ದೈತ್ಯನು ತನ್ನ ಪರಾಕ್ರಮಾತಿಶಯದಿಂದ ಆ ಕೃಷ್ಣಪುತ್ರನಾದ ಭಾನುವನ್ನು ಎರಡು ಕಾಲುಗಳಲ್ಲಿಯೂ ಹಿಡಿದು, ಎರಡು ಕೈಗಳಿಂದಲೂ ಆಕಾಶದಲ್ಲಿ ಒಂದು ಲಕ್ಷ ಯೋಜನಗಳಷ್ಟು ದೂರಕ್ಕೆ ಎಸೆದುಬಿಟ್ಟನು.

೧೫. ಆ ಭಾನುವು ದೈತ್ಯನಿಂದೆಸೆಯಲ್ಪಟ್ಟು ಆಕಾಶದಿಂದ ಕೆಳಕ್ಕೆ ಬಿದ್ದು ಸ್ವಲ್ಪಮಟ್ಟಿಗೆ ಕಳವಳಕ್ಕೀಡಾದರೂ, ಪರ್ವತಾಗ್ರದಿಂದ ಬೀಳಿಸಲ್ಪಟ್ಟ ಪ್ರಹ್ಲಾದನಂತೆ ಶ್ರೀಹರಿಯ ಕೃಪೆಯಿಂದ ಸುರಕ್ಷಿತನಾಗಿಯೇ ಇದ್ದನು.

ಹರಿಶ್ಮಶ್ರುಂ ಸಂಗೃಹೀತ್ವಾ ದೀರ್ಘಶ್ಮಶ್ರೌ ಹರೇಃ ಸುತಃ ।
ಭ್ರಾಮಯಿತ್ವಾಽಥ ಚಿಕ್ಷೇಪ ವ್ಯೋಮ್ನಿ ತಂ ಲಕ್ಷಯೋಜನಂ ॥ ೧೬ ॥

ಆಕಾಶಾತ್ಪತಿತಃ ಸೋಽಪಿ ಕಿಂಚಿದ್ವ್ಯಾಕುಲಮಾನಸಃ ।
ಮುಖೇ ಕೃತ್ವಾ ಸ್ವಕಂ ಕೂರ್ಚಂ ಮುಷ್ಟಿನಾ ತಂ ತತಾಡ ಹ ॥ ೧೭ ॥

ಮುಷ್ಟಾಮುಷ್ಟಿರಣಂ ರಾಜನ್ಬಭೂವ ಘಟಿಕಾದ್ವಯಂ ।
ನಿಷ್ಪಿಷ್ಟಾಂಗೋ ಹರಿಶ್ಮಶ್ರುರ್ಗ್ರಾವಾಣಂ ಭಾನುಮೂರ್ಧನಿ ॥ ೧೮ ॥

ಚಿಕ್ಷೇಪ ಚ ಮಹಾವೇಗಾದ್ರಕ್ತಾಕ್ಷಃ ಕ್ರೋಧಮೂರ್ಚ್ಛಿತಃ ।
ಭಾನುರ್ದ್ರುಮಂ ಸಂಗೃಹೀತ್ವಾ ಪ್ರಾಕ್ಷಿಪತ್ತಸ್ಯ ಮಸ್ತಕೇ ॥ ೧೯ ॥

---

೧೬. ಕೂಡಲೇ ಆ ಭಾನುವು ತನ್ನ ವೈರಿಯಾದ ಆ ಹರಿಶ್ಮಶ್ರುವಿನ ಉದ್ದವಾದ ಮೀಸೆಗಳನ್ನೇ ಹಿಡಿದುಕೊಂಡು ಅವನನ್ನು ಗರಗರನೆ ತಿರುಗಿಸಿ ಆಕಾಶದಲ್ಲಿ ಒಂದು ಲಕ್ಷ ಯೋಜನಗಳಷ್ಟು ದೂರಕ್ಕೆ ಎಸೆದುಬಿಟ್ಟನು.

೧೭. ಈ ರೀತಿ ಭಾನುವಿನ ಎಸೆತದಿಂದ ಕೆಳಕ್ಕೆ ಬಿದ್ದ ಆ ದೈತ್ಯೇಂದ್ರನು ಸ್ವಲ್ಪಮಟ್ಟಿಗೆ ವ್ಯಥೆಗೀಡಾದರೂ ಅದನ್ನು ಲೆಕ್ಕಿಸದೆ ತನ್ನ ಗಡ್ಡ ಮೀಸೆಯನ್ನು ಬಾಯಲ್ಲಿ ತುರುಕಿಕೊಂಡು ಕೋಪದಿಂದ ಅವನನ್ನು ತನ್ನ ಮುಷ್ಟಿಯಿಂದ ಜೋರಾಗಿ ಪ್ರಹರಿಸಿದನು.

೧೮. ರಾಜೇಂದ್ರ! ಆಗ ವೀರರಿಬ್ಬರಿಗೂ ಎರಡು ಘಳಿಗೆಗಳ ಕಾಲ ಪರಸ್ಪರವಾಗಿ ಮುಷ್ಟಿಯುದ್ಧವು ಜರುಗಿತು. ಆ ಯುದ್ಧದಲ್ಲಿ ಮೈಕೈಯೆಲ್ಲಾ ಜಜ್ಜಿಹೋದ ಆ ಹರಿಶ್ಮಶ್ರುವು,

೧೯. ಮಿತಿಮೀರಿದ ಕೋಪದಿಂದ ಕಣ್ಣುಗಳಲ್ಲಿ ಕೆಂಡವನ್ನು ಕಾರುತ್ತಾ ಭಾರಿಯಾದ ಬಂಡೆಯೊಂದನ್ನು ತೆಗೆದುಕೊಂಡು ಆ ಭಾನುವಿನ ತಲೆಯ ಮೇಲೆ ಬಹು ಜೋರಾಗಿ ಅಪ್ಪಳಿಸಿದನು. ಆಗ ಭಾನುಕುಮಾರನೂ ಸಹ ಭಾರಿಯಾದ ಮರವೊಂದರಿಂದ ಆತನ ತಲೆಯ ಮೇಲೆ ಬೀಸಿ ಹೊಡೆದನು.

ಸೋಽಪಿ ದ್ರುಮಂ ಸಂಗೃಹಿತ್ವಾ ಪ್ರಾಹಿಣೋದ್ಭಾನುಮೂರ್ಧನಿ ।
ಹರಿಶ್ಮಶ್ರುರ್ಮಹಾದೈತ್ಯೋ ರಕ್ತಾಕ್ಷಃ ಕ್ರೋಧಮೂರ್ಛಿತಃ ॥ ೨೦ ॥

ಗಜಂ ಗೃಹೀತ್ವಾ ಶುಂಡಾಯಾಂ ತೇನ ಭಾನುಂ ತತಾಡ ಹ ।
ಭಾನುಶ್ಚಾನ್ಯಂ ಗಜಂ ನೀತ್ವಾ ಗೃಹೀತ್ವಾ ತದ್ಗಜಂ ಕರೇ ॥ ೨೧ ॥

ಹರಿಶ್ಮಶ್ರುಂ ಮಹಾದೈತ್ಯಂ ಗಜೇನಾಭ್ಯಹನದ್ದೃಢಂ ।
ಚೀತ್ಕಾರಮಥ ಕುರ್ವಂತಂ ಗಜಂ ನೀತ್ವಾ ನಿಪಾತ್ಯ ತಂ ॥ ೨೨ ॥

ತಸ್ಯ ದಂತೌ ಸಮುತ್ಪಾಟ್ಯ ತಾಭ್ಯಾಂ ಭಾನುಂ ತತಾಡ ಹ ।
ಭಾನುಮಾಕಾಶವಾಗಾಹ ಕೂರ್ಚೇ ಮೃತ್ಯುಃ ಕಿಲಾಸ್ಯ ಚ ॥ ೨೩ ॥

ವರೇಣ ಶಿವದತ್ತೇನ ಪ್ರೋಜ್ಝಿತೋಽಯಂ ಮಹಾಸುರಃ ।
ಇತಿ ಶ್ರುತ್ವಾ ವಚೋ ಭಾನುರ್ಧಾವನ್ಕ್ರೋಧಪ್ರಪೂರಿತಃ ॥ ೨೪ ॥

೨೦–೨೧. ಇದರಿಂದ ಕುಪಿತನಾದ ಹರಿಶ್ಮಶ್ರುವು ತಾನೂ ಮರವೊಂದನ್ನು ತೆಗೆದುಕೊಂಡು ಆ ಭಾನುವಿನ ತಲೆಗೆ ಗುರಿಯಿಟ್ಟು ಬೀಸಿದುದಲ್ಲದೆ, ಹತ್ತಿರದಲ್ಲಿದ್ದ ಆನೆಯೊಂದನ್ನು ಸೊಂಡಿಲನಲ್ಲಿ ಹಿಡಿದುಕೊಂಡು ತಿರುಗಿಸಿ ಅದರಿಂದಲೇ ಆ ಭಾನುವನ್ನು ಅಪ್ಪಳಿಸಿದನು. ಆಗ ಆ ಭಾನುವು ತನ್ನ ಶತ್ರುವೆಸೆದ ಆ ಆನೆಯನ್ನು ತಟ್ಟನೆ ಕೈಲಿ ಹಿಡಿದುಬಿಟ್ಟುದಲ್ಲದೆ, ತಾನೂ ಬೇರೊಂದು ಆನೆಯೊಂದನ್ನು ತೆಗೆದುಕೊಂಡು ಅದರಿಂದ ಅವನನ್ನು ಬಲವಾಗಿ ಪ್ರಹರಿಸಿದನು.

೨೨-೨೪. ಆ ಬಾಹುವಿನ ಬಾಹುವೇಗವನ್ನು ತಾಳಲಾರದೆ ಆ ಆನೆಯು ಚೀತ್ಕಾರವನ್ನು ಮಾಡುತ್ತಾ ತನ್ನ ಮೇಲೆ ಬೀಳುತ್ತಿರುವುದನ್ನು ಕಂಡು ಆ ದೈತ್ಯನು ಕೂಡಲೇ ಕೌಶಲದಿಂದ ತಪ್ಪಿಸಿಕೊಂಡು ಬರಿಯ ನೆಲದ ಮೇಲೆ ಕುಕ್ಕರಿಸಿ ಬಿದ್ದ ಆ ಆನೆಯ ದಂತಗಳನ್ನೇ ಕಿತ್ತುಕೊಂಡು ಆ ಭಾನುವನ್ನು ಜೋರಾಗಿ ಪ್ರಹರಿಸಿದನು. ಆಗ ಆ ಭಾನುವನ್ನು ಕುರಿತು ಆಕಾಶವಾಣಿಯು "ಈ ದೈತ್ಯನಿಗೆ ಮೃತ್ಯುವು ಅವನ ಗಡ್ಡ ಮೀಸೆಗಳಲ್ಲೇ ನೆಲಸಿರುವುದೆಂದು ಇವನಿಗೆ ಶಿವನು ವರವನ್ನು ಇತ್ತಿರುವನು. ಆದುದರಿಂದಲೇ ಈ ದೈತ್ಯನು ಇಷ್ಟು ಉದ್ಧತನಾಗಿ ಮೆರೆಯುತ್ತಿರುವನು" ಎಂಬ ರಹಸ್ಯವನ್ನು ತಿಳಿಸಿತು. ಇದನ್ನು ಆಲಿಸುತ್ತಲೇ ಕುಪಿತನಾಗಿದ್ದ ಆ ಭಾನುವು ಓಡುತ್ತಾ ಮುನ್ನುಗ್ಗಿ,

ಸಂಗೃಹೀತ್ವಾ ಭುಜಾಭ್ಯಾಂ ತಂ ಪಾದಯೋಃ ಪ್ರಣದನ್ಮುಹುಃ ।
ಭ್ರಾಮಯಿತ್ವಾ ಮಹಾರಾಜ ಸರ್ವೇಷಾಂ ಪಶ್ಯತಾಂ ಸತಾಂ ॥ ೨೫ ॥

ಪಾತಯಾಮಾಸ ಭೂಪೃಷ್ಠೇ ಕಮಂಡಲುಮಿವಾರ್ಭಕಃ ।
ಮುಖಾತ್ಕೂರ್ಚಂ ಸಮುನ್ನೀಯ ಸಮುತ್ಪಾಟ್ಯ ಕರೌಜಸಾ ॥ ೨೬ ॥

ತತಾಡ ಮುಷ್ಟಿನಾ ಮೂರ್ಧ್ನಿ ಹರಿಶ್ಮಶ್ರುಂ ಮಹಾಸುರಂ ।
ತದಾ ಮೃತ್ಯುಂ ಗತೇ ದೈತ್ಯೇ ಹರಿಶ್ಮಶ್ರೌ ನೃಪೇಶ್ವರ ॥ ೨೭ ॥

ದೇವದುಂದುಭಯೋ ನೇದುರ್ನರದುಂದುಭಯಸ್ತಥಾ ।
ಅಭೂಜ್ಜಯಜಯಾರಾವೋ ನನೃತುರ್ದೇವನಾಯಕಾಃ ॥ ೨೮ ॥

---

೨೫. ಗಟ್ಟಿಯಾಗಿ ಸಿಂಹನಾದವನ್ನು ಮಾಡುತ್ತಾ ಆ ದೈತ್ಯನ ಕಾಲುಗಳೆರಡನ್ನೂ ತನ್ನ ತೋಳುಗಳಿಂದ ಬಲವಾಗಿ ಹಿಡಿದು ಎಲ್ಲರೂ ನೋಡುತ್ತಿರುವಂತೆಯೇ ಗರಗರನೆ ತಿರುಗಿಸಿ,

೨೬. ಹುಡುಗನು ಗಡಿಗೆಯನ್ನು ಕುಕ್ಕುವಂತೆ ಅವನನ್ನು ನೆಲದ ಮೇಲೆ ಬಲವಾಗಿ ಕುಕ್ಕಿಬಿಟ್ಟನು. ಕೂಡಲೇ ತನ್ನ ಕೈಗಳಿಂದ ಅವನ ಬಾಯನ್ನು ಬಲವಂತದಿಂದ ಬಿಡಿಸಿ ಅದರಲ್ಲಿ ತುರುಕಿಕೊಂಡಿದ್ದ ಅವನ ಗಡ್ಡ ಮೀಸೆಗಳನ್ನು ಹೊರತೆಗೆದು ಜೋರಾಗಿ ಕಿತ್ತುಬಿಟ್ಟನು.

೨೭. ಮತ್ತು ತನ್ನ ಮುಷ್ಟಿಯಿಂದ ಆ ಹರಿಶ್ಮಶ್ರುವನ್ನು ತಲೆಯ ಮೇಲೆ ಬಲವಾಗಿ ಪ್ರಹರಿಸಿದನು. ಭಾನುವಿನ ಈ ಸಾಹಸಕಾರ್ಯದಿಂದ ಆ ದೈತ್ಯವೀರನು ಸಾವಿಗೆ ತುತ್ತಾದನು.

೨೮. ಆಗ ದೇವಲೋಕದ ದುಂದುಭಿಗಳೂ, ಯದುಸೇನೆಯ ಭೇರಿಗಳೂ ಹರ್ಷಸೂಚಕವಾಗಿ ಬಾರಿಸಲ್ಪಟ್ಟುವು. ಎಲ್ಲೆಲ್ಲೂ ಜಯಜಯ ಎಂಬ ಶಬ್ದಗಳು ತುಂಬಿಹೋದುವು. ದೇವತೆಗಳೆಲ್ಲರೂ ಆನಂದದಿಂದ ನರ್ತಿಸಿದರು.

ಪ್ರಸನ್ನಾ ದಿವಿಜಾ ರಾಜನ್ಪುಷ್ಪವರ್ಷಂ ಪ್ರಚಕ್ರಿರೇ ।
ಇತ್ಥಂ ಶ್ರಿಕೃಷ್ಣಪುತ್ರಾಣಾಂ ವಿಕ್ರಮಃ ಪರಮಾದ್ಭುತಃ ॥ ೨೯ ॥

ಮಯಾ ತೇ ಕಥಿತಃ ಪುಣ್ಯಃ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೩೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಹರಿಶ್ಮಶ್ರುದೈತ್ಯವಧೋ ನಾಮ ಸಪ್ತತ್ರಿಂಶೋಽಧ್ಯಾಯಃ

೨೯-೩೦. ಆಗ ಸುಪ್ರೀತರಾದ ಆ ದೇವತೆಗಳು ಆತನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ರಾಜೇಂದ್ರ! ಈ ರೀತಿಯಾಗಿ ನಿನಗೆ ಪವಿತ್ರವಾದಂತಹ ಶ್ರೀಕೃಷ್ಣಪುತ್ರರ ಅತ್ಯದ್ಭುತವಾದ ಪರಾಕ್ರಮವನ್ನು ತಿಳಿಸಿದೆನು. ಇನ್ನೇನು ಕೇಳಬೇಕೆಂದಿರುವೆ? ಹೇಳು! ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಹರಿಶ್ಮಶ್ರುವಧವೆಂಬ ಮೂವತ್ತೇಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಅಷ್ಟತ್ರಿಂಶೋಽಧ್ಯಾಯಃ

॥ ಬಹುಲಾಶ್ವ ಉವಾಚ ॥

ಹರಿಶ್ಮಶ್ರ್ವಾದಿಕಾನ್ಭ್ರಾತೄನ್ಮೃತಾನ್ ಜ್ಞಾತ್ವಾ ಮಹಾಸುರಃ ।
ಶಕುನಿಃ ಕಿಂ ಚಕಾರಾಗ್ರೇ ವದ ತನ್ಮೇ ನಿಸತ್ತಮ ॥ ೧ ॥

॥ ಶ್ರೀ ನಾರದ ಉವಾಚ ॥

ಹರಿಶ್ಮಶ್ರೌ ಹತೇ ರಾಜನ್ ಶಕುನಿಃ ಕ್ರೋಧಮೂರ್ಛಿತಃ ।
ರಣಾಂಗಣೇ ಪ್ರಾಹ ದೈತ್ಯಾನ್ಭ್ರಾತೃಶೋಕಪರಿಪ್ಲುತಃ ॥ ೨ ॥

ಮೂವತ್ತೆಂಟನೆಯ ಅಧ್ಯಾಯವು

೧. ಆಗ ಮಿಥಿಲಾಧಿಪತಿಯಾದ ಬಹುಲಾಶ್ವನು ನಾರದನನ್ನು ಕುರಿತು "ಓ ಮಹರ್ಷಿ! ಹರಿಶ್ಮಶ್ರು ಮೊದಲಾದ ತನ್ನ ತಮ್ಮಂದಿರೆಲ್ಲರೂ ಯುದ್ಧದಲ್ಲಿ ಮಡಿದುದನ್ನು ಅರಿತ ಮೇಲೆ ಆ ಶಕುನಿಯು ಮುಂದೇನು ಮಾಡಿದನು ? ಇದನ್ನು ನನಗೆ ತಿಳಿಸಬೇಕು" ಎಂದು ಪ್ರಶ್ನಿಸಿದನು.

೨. ಆಗ ನಾರದನು ಇಂತೆಂದನು :—ರಾಜೇಂದ್ರ ! ಆಲಿಸು. ಹರಿಶ್ಮಶ್ರುವು ಯುದ್ಧದಲ್ಲಿ ಮಡಿದುಹೋದುದನ್ನು ಕೇಳಿ ಆ ಶಕುನಿಯು ಬಹುವಾಗಿ ಪರಿತಪಿಸಿದನು. ಅನಂತರ ಮಿತಿಮೀರಿದ ಕೋಪವನ್ನು ತಾಳಿ ಯುದ್ಧರಂಗದಲ್ಲಿದ್ದ ತನ್ನ ಕಡೆಯ ರೆಲ್ಲರನ್ನೂ ಕುರಿತು ಇಂತು ನುಡಿದನು.

॥ ಶಕುನಿರುವಾಚ ॥

ಹೇ ಪೌಲೋಮಕಾಲಕೇಯಾಃ ಸರ್ವೇ ಶೃಣುತ ಮದ್ವಚಃ ।
ಅಹೋ ದೈವಬಲಂ ಯೇನ ಕಿಂ ನ ಭೂಯಾದ್ವಿಪರ್ಯಯಃ ॥ ೩ ॥

ಕಾಲನಾಭೇನ ಮೇ ಭ್ರಾತ್ರಾ ಸಮುದ್ರಮಥನೇ ಯಮಃ ।
ಜಿತಃ ಪೂರ್ವಂ ಸೋಽಪಿ ದೈವಾನ್ಮನುಷ್ಯೈರಿಹ ಮಾರಿತಃ ॥ ೪ ॥

ಶಂಬರಃ ಸೂರ್ಯಜಿತ್ಸಾಕ್ಷಾತ್ಕಾರ್ಷ್ಣಿನಾ ಶಿಶುನಾ ಜಿತಃ ।
ಉತ್ಕಚಃ ಶಕ್ರಜೇತಾಪಿ ಮಹಾಬಲಮಹಾಬಲಃ ॥ ೫ ॥

ಸೋಽಪಿ ಬಾಲೇನ ಕೃಷ್ಣೇನ ಮಾರಿತೋ ನಾರದಾಚ್ಛ್ರುತಂ ।
ಸಮುದ್ರಮಥನೇ ಪೂರ್ವಮಸುರಾಣಾಂ ಚ ಪಶ್ಯತಾಂ ॥ ೬ ॥

---

೩. "ಎಲೈ ಪೌಲೋಮರಿರಾ! ಎಲೈ ಕಾಲಕೇಯರಿರಾ! ದೈತ್ಯರಾದ ನೀವೆಲ್ಲರೂ ಈ ನನ್ನ ಮಾತನ್ನು ಆಲಿಸಿರಿ. ದೈವದ ಬಲವೇ ಬಲವು. ಆ ದೈವದಿಂದ ಯಾವ ಬದಲಾವಣೆಯು ತಾನೇ ಆಗದಿರುವುದು ?

೪. ಹಿಂದೆ ಸಮುದ್ರಮಥನ ಸಮಯದಲ್ಲಿ ನನ್ನ ತಮ್ಮನಾದ ಕಾಲನಾಭನು ಯಮನನ್ನೂ ಜಯಿಸಿದ್ದನು. ಅಂತಹ ವೀರನನ್ನು ಇಂದು ಮನುಷ್ಯಮಾತ್ರದವನು ಕೊಂದುಬಿಟ್ಟನು. ಇದಕ್ಕಿಂತಲೂ ದುರ್ದೈವವುಂಟೇ ?

೫. ಸಾಕ್ಷಾತ್ ಸೂರ್ಯನನ್ನೇ ಜಯಿಸಿದ್ದಂತಹ ನನ್ನ ಇನ್ನೊಬ್ಬ ತಮ್ಮನಾದ ಶಂಬರನನ್ನು ಕೃಷ್ಣಪುತ್ರನಾದ ಆ ಪ್ರದ್ಯುಮ್ನನು ತಾನಿನ್ನೂ ಎಳೆಯವನಾಗಿರುವಾಗಲೇ ಜಯಿಸಿಬಿಡಲಿಲ್ಲವೇ? ಮಹಾಬಲಾಢ್ಯನೆನಿಸಿದ ವೀರರಲ್ಲೆಲ್ಲಾ ಅತಿಶಯವಾದ ಬಲಶಾಲಿಯೆಂದು ಪ್ರಸಿದ್ಧಿ ಹೊಂದಿದ್ದ ಇಂದ್ರನನ್ನೂ ಜಯಿಸಿದ್ದ ಉತ್ಕಚನೆಂಬ ನನ್ನ ಮತ್ತೊಬ್ಬ ತಮ್ಮನನ್ನು,

೬. ಶ್ರೀಕೃಷ್ಣನೇ ತನ್ನ ಬಾಲಲೀಲೆಯನ್ನು ತೋರುತ್ತಾ ಕೊಂದುಬಿಟ್ಟನು. ಈ ವಿಷಯವನ್ನು ನನಗೆ ನಾರದನು ತಿಳಿಸಿದನು. ಇದೂ ಇರಲಿ. ಹಿಂದೆ ಸಮುದ್ರವನ್ನು ಮಥಿಸಿದಾಗ ದೈತ್ಯರೆಲ್ಲರ ಕಣ್ಣೆದುರಿನಲ್ಲಿಯೇ ಯಾವನು ಅಗ್ನಿಯನ್ನು ಜಯಿಸಿಬಿಟ್ಟನೋ ಅಂತಹ ವೀರಾಗ್ರಣಿಯಾದ ಹೃಷ್ಟನೆಂಬ ನನ್ನ ಮಗದೊಬ್ಬ ತಮ್ಮನೂ ಸಹ ಈಗ ಕ್ಷುದ್ರರಾದ ಶತ್ರುಗಳಿಂದ ಕೊಲ್ಲಲ್ಪಟ್ಟನು.

ವಹ್ನಿರ್ಜಿತೋ ಹಿ ಯೇನಾಪಿ ಹೃಷ್ಟಃ ಸೋಽಪಿ ನಿಪಾತಿತಃ ।
ಯಸ್ಯಾಗ್ರೇ ವರುಣಃ ಪೂರ್ವಂ ಯುದ್ಧಭೀತಃ ಪಲಾಯಿತಃ ॥ ೭ ॥

ಭೂತಸಂತಾಪನಃ ಸೋಽಪಿ ಮಾರಿತಸ್ತುಚ್ಛವಿಕ್ರಮೈಃ ।
ಯೇನ ಪೂರ್ವಂ ಮಹಾಬುದ್ಧೇ ವಿಕ್ರಮೈಸ್ತೋಷಿತಃ ಶಿವಃ ॥ ೮ ॥

ಸವೃಕೋ ವೃಷ್ಣಿಭಿಸ್ತುಚ್ಛೈರ್ಮಾರಿತಃ ಸಂಗರೇಽತ್ರ ವೈ ।
ಮಹಾನಾಭೇನ ಮೇ ಭ್ರಾತ್ರಾ ದಿವಿ ವಾಯುರ್ವಿನಿರ್ಜಿತಃ ॥ ೯ ॥

ಮಾನುಷೈರ್ಯಾದವೈರತ್ರ ಮಾರಿತಃ ಸೋಽಪಿ ಸಾಂಪ್ರತಂ ।
ಹಾ ದೈವ ಯೇನ ಸ್ವರ್ಲೋಕೇ ಜಿತಃ ಶಕ್ರಸುತೋ ಬಲೀ ॥ ೧೦ ॥

ನಿಪಾತಿತಃ ಸೋಽಪಿ ಚಾತ್ರ ಹರಿಶ್ಮಶ್ರುಶ್ಚ ಮಾನವೈಃ ।
ತಸ್ಮಾದಯಾದವೀಂ ಪೃಥ್ವೀಂ ಕರಿಷ್ಯೇ ಶಪಥೋ ಮಮ ॥ ೧೧ ॥

---

೭. ಯಾವನ ಮುಂದೆ ಜಲಾಧಿಪತಿಯೆನಿಸಿದ ವರುಣನೂ ಸಹ ನಿಂತು ಹೋರಾಡಲಾರದೆ ಹೆದರಿ ಓಡಿಹೋದನೋ ಅಂತಹ ಭೂತಸಂತಾಪನನ್ನು ಅತಿ ವಿಹೀನವಾದ ಪರಾಕ್ರಮವುಳ್ಳ ಆ ಶತ್ರುಗಳು ಕೊಂದುಬಿಟ್ಟರು.

೮. ಯಾವನು ಹಿಂದೆ ತನ್ನ ಸಾಹಸದಿಂದ ಶಿವನನ್ನು ಮೆಚ್ಚಿಸಿದ್ದನೋ ಅಂತಹ ವೃಕನೆಂಬ ಮತ್ತೊಬ್ಬ ತಮ್ಮನು ಈ ತುಚ್ಛರಾದ ವೃಷ್ಣಿಗಳಿಂದ ಈ ಯುದ್ಧ ರಂಗದಲ್ಲಿಯೇ ಸಾಯಿಸಲ್ಪಟ್ಟನು.

೯. ಎಲೈ ದೈತ್ಯರಿರಾ! ಮಹಾನಾಭನೆಂಬ ನನ್ನ ಇನ್ನೊಬ್ಬ ತಮ್ಮನು ಹಿಂದೆ ಸ್ವರ್ಗದಲ್ಲಿ ವಾಯುವನ್ನೂ ಸಹ ಗೆದ್ದು ಬಂದಿದ್ದನು. ಅದೇ ಮಹಾನಾಭನು ಇಂದು ಮನುಷ್ಯಮಾತ್ರರಾದ ಯಾದವರಿಂದ ಯುದ್ಧದಲ್ಲಿ ಕೊಲ್ಲಲ್ಪಟ್ಟಿರುವನು.

೧೦–೧೧ ಅಯ್ಯೋ! ಮದೈವವೇ, ಹಿಂದೆ ಸ್ವರ್ಗಲೋಕದಲ್ಲಿ ಮಹಾ ಬಲಾಢ್ಯನಾದ ಇಂದ್ರಪುತ್ರನನ್ನೂ ಸಹ ಗೆದ್ದು ಬಂದಿದ್ದಂತಹ ನನ್ನ ತಮ್ಮ ಹರಿಶ್ಮಶ್ರುವನ್ನು ಇಂದು ಹುಲ್ಲುಮನುಜರೆನಿಸಿದವರು ಕೊಂದುಬಿಟ್ಟರು. ಆದುದರಿಂದ ಈ ನನ್ನ ಪ್ರತಿಜ್ಞೆಯನ್ನು ಕೇಳಿರಿ. ಈ ಭೂಮಂಡಲವಲ್ಲೇ ಯಾದವರಿಲ್ಲದಂತೆ ಮಾಡಿಬಿಡುವೆನು.

ಜರಾಸಂಧೇನ ಶಾಲ್ವೇನ ದಂತವಕ್ರೇಣ ಧೀಮತಾ ।
ಶಿಶುಪಾಲೇನ ಮಿತ್ರೇಣ ಯುಷ್ಮಾಭಿಃ ಸಹಿತೋ ಹ್ಯಹಂ　　　　॥ ೧೨ ॥

ಸುತಲಾಚ್ಚ ಸಮಾಹೂತೈರ್ದಾನವೈಶ್ಚಂಡವಿಕ್ರಮೈಃ ।
ದೇವಾಞ್ಜೇತುಂ ಗಮಿಷ್ಯಾಮಿ ಬಾಣಾಸುರಸಮನ್ವಿತಃ　　　　॥ ೧೩ ॥

ಕಾಷ್ಣ್ಯಾದೀನುದ್ಭಟಾನ್ಸರ್ವಾನ್ವೃಷ್ಣೀನ್ಜಿತ್ವಾ ದುರಾತ್ಮನಃ ।
ಸಸ್ತ್ರೀಕಾನಮರಾನ್ಬಧ್ವಾ ಕ್ಷಿಪೇ ಮೇರುಗುಹಾಮುಖೇ　　　　॥ ೧೪ ॥

ಗೋವಿಪ್ರಸುರಸಾಧೂಂಶ್ಚ ಛಂದಾಂಸಿ ಚ ತಪಸ್ವಿನಃ ।
ಯಜ್ಞಂ ಶ್ರಾದ್ಧಂ ತಿತಿಕ್ಷೂಂಶ್ಚ ನಾನಾತೀರ್ಥಕರಾನ್ಪುನಃ　　　　॥ ೧೫ ॥

ಹನಿಷ್ಯಾಮಿ ನ ಸಂದೇಹಶ್ಚರಿಷ್ಯಾಮಿ ಸುಖಂ ತತಃ ।
ಧನ್ಯಃ ಕಂಸೋ ಮಹಾವೀರ್ಯೋ ದೇವಾನಾಂ ವಿಜಯೀ ಬಲೀ　　॥ ೧೬ ॥

೧೨-೧೪. ಈಗ ನಾನು ಜರಾಸಂಧನೊಡನೆಯೂ, ಶಾಲ್ವನೊಡನೆಯೂ, ಕುಶಲನಾದ ದಂತವಕ್ರನೊಡನೆಯೂ, ಮಿತ್ರನಾದ ಶಿಶುಪಾಲನೊಡನೆಯೂ, ನಿಮ್ಮೆಲ್ಲ ದೈತ್ಯರೊಡನೆಯೂ ಮತ್ತು ಸುತಲದಿಂದ ಕರೆಸಲ್ಪಟ್ಟ ಅತ್ಯುಗ್ರ ಪರಾಕ್ರಮಶಾಲಿಗಳಾದ ದಾನವರೊಂದಿಗೂ, ಬಾಣಾಸುರನೊಂದಿಗೂ, ಕೂಡಿದವನಾಗಿ ಈ ದುಷ್ಟರೂ, ಮದಾಂಧರೂ ಆದ ಪ್ರದ್ಯುಮ್ನಾದಿ ವೃಷ್ಣಿಗಳನ್ನು ಸದೆಬಡಿದು ಬಳಿಕ ದೇವತೆಗಳನ್ನು ಜಯಿಸಲು ಹೊರಡುವೆನು. ಅಲ್ಲಿ ಅವರನ್ನು ಗೆದ್ದು ಆ ದೇವತೆಗಳನ್ನು ಅವರ ಸ್ತ್ರೀಯರೊಂದಿಗೆ ಮೇರುಪರ್ವತದ ಗುಹೆಯಲ್ಲಿ ಕಟ್ಟಿಬಿಸಾಡುವೆನು (ಸೆರೆಯಿಡುವೆನು.)

೧೫. ಬಳಿಕ ಗೋಬ್ರಾಹ್ಮಣರನ್ನೂ, ದೇವತೆಗಳನ್ನೂ, ಸಜ್ಜನರನ್ನೂ, ವೇದಗಳನ್ನೂ, ತಪಸ್ವಿಗಳನ್ನೂ, ಯಜ್ಞಯಾಗಗಳನ್ನೂ, ಶ್ರಾದ್ಧಕರ್ಮಗಳನ್ನೂ, ತೀರ್ಥಯಾತ್ರಾದಿ ಧರ್ಮಕಾರ್ಯನಿರತರೂ, ಶಾಂತಚಿತ್ತರೂ ಆದ ಪುರುಷರನ್ನೂ,

೧೬. ಕೊಲ್ಲುತ್ತಾ ಬರುವೆನು. ಇದರಲ್ಲಿ ಸ್ವಲ್ಪವೂ ಸಂಶಯವನ್ನಿಡಬೇಡಿ. ಹೀಗಾದರೆ ಆಮೇಲೆ ನಾನು ಬಹು ಸುಖವಾಗಿ ವಿಹರಿಸುವೆನು. ಆ ಮಹಾಬಲಶಾಲಿಯಾದ ಕಂಸನೇ ಬಹು ಧನ್ಯನು. ಏಕೆಂದರೆ ಅವನು ದೇವತೆಗಳನ್ನೆಲ್ಲಾ ಜಯಿಸಿದ್ದನು. ಅಂತಹ ನನ್ನ ಪರಮಾಪ್ತಸ್ನೇಹಿತನಾದ ಆ ಬಲಶಾಲಿಯೂ ಈಗ ಈ ಭೂಮಿಯ ಮೇಲೆ ಇಲ್ಲವಾಗಿರುವನು.

ನ ವಿದ್ಯತೇ ಭೂಮಿತಲೇ ಮಿತ್ರಂ ಮೇ ಪರಮಃ ಸುಹೃತ್ ।

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಶಕುನಿರ್ಯುದ್ಧೇ ದಾನವೇಂದ್ರೋ ಮಹಾಬಲಃ ॥ ೧೭ ॥

ಆಯಯೌ ಸಹಸಾ ದೈತ್ಯಃ ಪ್ರದ್ಯುಮ್ನಸ್ಯಾಪಿ ಸಂಮುಖೇ ।
ಮಹಾಧನುಃ ಸಮಾದಾಯ ಲಕ್ಷಭಾರಸಮಂ ದೃಢಂ ॥ ೧೮ ॥

ಮಯೇನ ನಿರ್ಮಿತಂ ತಜ್ಜ್ಯಾಟಂಕಾರಂ ಸ ಚಕಾರ ಹ ।
ಧನುಷ್ಟಂಕಾರಶಬ್ದೇನ ದಿಗ್ಗಜಾ ಬಧಿರೀಕೃತಾಃ ॥ ೧೯ ॥

ನಿಪೇತುರ್ಗಿರಯೋಽನೇಕಾ ವಿಚೇಲುಃ ಸಿಂಧವೋ ನೃಪ ।
ನನಾದ ಸರ್ವಂ ಬ್ರಹ್ಮಾಂಡಂ ಚಕಂಪೇ ಮಂಡಲಂ ಭುವಃ ॥ ೨೦ ॥

---

೧೭. ಹೀಗೆಂಬುದಾಗಿ ಆ ಮಹಾಬಲಿಷ್ಠನೂ, ದಾನವಾಧಿಪತಿಯೂ ಆದ ಆ ಶಕುನಿಯು ರಣಾಂಗದಲ್ಲಿ ತನ್ನ ಕಡೆಯ ದೈತ್ಯರಿಗೆ ಹೇಳಿ,

೧೮. ತಾನು ಅಲ್ಲಿಂದ ಹೊರಟು ಬೇಗನೆ ಪ್ರದ್ಯುಮ್ನನಿಗೆದುರಾಗಿ ಬಂದು ನಿಂತನು. ಆತನು ತನ್ನ ಕೈಯಲ್ಲಿ ಒಂದು ಲಕ್ಷ ಭಾರಗಳು ತೂಗುವಂತಹ ಭಾರಿಯಾದ ಧನುಸ್ಸನ್ನು ಧರಿಸಿದ್ದನು.

೧೯. ಆ ದೈತ್ಯನು ಅಲ್ಲಿಗೆ ಬಂದೊಡನೆಯೇ ಮಯನಿಂದ ನಿರ್ಮಿತವಾಗಿದ್ದ ಬಹು ದೃಢವಾದ ಆ ಧನುಸ್ಸನ್ನು ಒಂದು ಬಾರಿ ಟಂಕಾರಮಾಡಿದನು. ಆ ಶಬ್ದದಿಂದ ದಿಗ್ಗಜಗಳು ಕಿವುಡಾದುವು.

೨೦. ಅನೇಕವಾದ ಬೆಟ್ಟಗುಡ್ಡಗಳು ಬಿದ್ದುಹೋದುವು. ಸಾಗರಗಳು ಅಲ್ಲಾಡಿಹೋದುವು. ಬ್ರಹ್ಮಾಂಡವೆಲ್ಲವೂ ಪ್ರತಿಧ್ವನಿಯಿಂದ ಅಲ್ಲಾಡಿಹೋಯಿತು. ಭೂಮಂಡವು ನಡುಗಹೋಯಿತು.

ವೀರೋಪರಿ ಗತಾ ವೀರಾ ಜ್ಯಾಘೋಷೇಣಾತಿವಿಹ್ವಲಾಃ ।
ರಣಾದ್ವಿದುದ್ರುವುರ್ನಾಗಾ ಉತ್ಪತಂತೋ ಹಯಾ ಮೃಧೇ　　॥ ೨೧ ॥

ಏವಂ ಪಲಾಯಿತಾಃ ಸರ್ವೇ ಅಕಸ್ಮಾದ್ಭಯವಿಹ್ವಲಾಃ ।
ತದಾ ಗದಾದಯೋ ವೀರಾ ಆಜಗ್ಮುಃ ಸ್ಯಂದನೇ ಸ್ಥಿತಾಃ　　॥ ೨೨ ॥

ಧನುಷ್ಟಂಕಾರಯಂತಸ್ತೇ ಮಹಾಬಲಪರಾಕ್ರಮಾಃ ।
ಶಕುನಿರ್ದಶಭಿರ್ಬಾಣೈರ್ವಿವ್ಯಾಧಾರ್ಜುನಮಾಹವೇ　　॥ ೨೩ ॥

ಗಾಂಡೀವೀ ಸರಥಸ್ತಸ್ಮಾಚ್ಚತುಷ್ಕ್ರೋಶೇ ಪಪಾತ ಹ ।
ಗದಂ ಚ ಬಾಣವಿಂಶತ್ಯಾ ಶಕುನಿರ್ಯುದ್ಧದುರ್ಮದಃ　　॥ ೨೪ ॥

---

೨೧. ಆ ಜ್ಯಾಘೋಷ (ಹೆದೆಯ ಮಿಡಿತದಿಂದಾದ ಧ್ವನಿ) ದಿಂದ ವೀರ ಪುರುಷರು ವಿಶೇಷವಾಗಿ ತಲ್ಲಣಿಸುತ್ತಾ ನಿಲ್ಲಲಾರದೆ ತಮ್ಮ ಪಕ್ಕದಲ್ಲಿರುವ ವೀರರ ಮೇಲೆಯೇ ಬಿದ್ದುಬಿಟ್ಟರು. ಆನೆಗಳೂ, ಕುದುರೆಗಳೂ ಯುದ್ಧರಂಗವನ್ನು ತೊರೆದು ನಾಗಾಲೋಟದಿಂದ ಓಡಿಹೋದುವು.

೨೨. ಈ ರೀತಿಯಾಗಿ ಸೇನೆಯಲ್ಲಿದ್ದವರೆಲ್ಲರೂ ಆಕಸ್ಮಿಕವಾದ ಭಯದಿಂದ ತತ್ತಳಿಸುತ್ತಾ ಓಡಿಹೋಗುತ್ತಿರುವುದನ್ನು ಕಂಡು ಗದನೇ ಮೊದಲಾದ ಯದುವೀರರು ರಥಗಳಲ್ಲಿ ಕುಳಿತು ಯುದ್ಧರಂಗಕ್ಕೆ ಬಂದರು.

೨೩. ಅತಿಶಯವಾದ ಬಲದಿಂದಲೂ, ಪರಾಕ್ರಮದಿಂದಲೂ, ಮೆರೆಯುತ್ತಿದ್ದ ಆ ಯದುವೀರರು ತಮ್ಮ ಧನುಸ್ಸುಗಳ ಹೆದೆಯನ್ನು ಮಿಡಿಯುತ್ತಾ ಟಂಕಾರವನ್ನು ಮಾಡಿದರು. ಅದನ್ನು ಕಂಡು ಕುಪಿತನಾದ ಆ ಶಕುನಿಯೆಂಬ ದೈತ್ಯನು ಹತ್ತು ಬಾಣಗಳನ್ನು ತೆಗೆದುಕೊಂಡು ಅರ್ಜುನನ ಮೇಲೆ ನಾಟುವಂತೆ ಪ್ರಹರಿಸಿದನು.

೨೪. ಆ ಪ್ರಹಾರದಿಂದ ಗಾಂಡೀವಿಯೆನಿಸಿದ ಆ ಅರ್ಜುನನೂ ಸಹ ತನ್ನ ರಥದೊಡನೆ ನಾಲ್ಕು ಹರಿದಾರಿಗಳಷ್ಟು ದೂರಕ್ಕೆ ಹೋಗಿ ಬಿದ್ದನು. ಬಳಿಕ ಯುದ್ಧದಲ್ಲಿ ಮಿತಿಮೀರಿದ ಉತ್ಸಾಹವುಳ್ಳ ಆ ಶಕುನಿಯು ಇಪ್ಪತ್ತು ಬಾಣಗಳನ್ನು ತೆಗೆದುಕೊಂಡು,

ಚಿಕ್ಷೇಪ ಸರಥಂ ರಾಜನ್ನಾದಯನ್ವ್ಯೋಮಮಂಡಲಂ ।
ಚತ್ವಾರಿಂಶಚ್ಛರೈರ್ವೀರೋಽನಿರುದ್ಧಂ ಧನ್ವಿನಾಂ ವರಂ ॥ ೨೫ ॥

ವಿವ್ಯಾಧ ಸರಥಂ ರಾಜನ್ನಾದಯನ್ವ್ಯೋಮಮಂಡಲಂ ।
ಸಾಶ್ವೋ ರಥೋಽನಿರುದ್ಧಸ್ಯ ಷೋಡಶ ಕ್ರೋಶಮಾಸ್ಥಿತಃ ॥ ೨೬ ॥

ಸಾಂಬಂ ಚ ಶಿತಬಾಣೈಶ್ಚ ತತಾಡ ಶಕುನಿರ್ಮೃಧೇ ।
ಸಾಂಬೋಽಪಿ ಸರಥೋ ರಾಜನ್ನಂಬರೇ ಸಮರಾಂಗಣಾತ್ ॥ ೨೭ ॥

ದ್ವಾತ್ರಿಂಶದ್ಯೋಜನಂ ಮಾರ್ಗಂ ನಿಪಪಾತ ವಿದೇಹರಾಟ್ ।
ಕಾರ್ಷ್ಣಿಂ ಸಮಾಗತಂ ದೃಷ್ಟ್ವಾ ಶಕುನಿಃ ಕ್ರೋಧಪೂರಿತಃ ॥ ೨೮ ॥

---

೨೫. ತನ್ನ ಬೊಬ್ಬೆಯಿಂದ ಅಂತರಿಕ್ಷವನ್ನೆಲ್ಲಾ ತುಂಬುತ್ತಾ ಗದನೆಂಬ ವೀರನನ್ನು ಪ್ರಹರಿಸಿ ಅವನನ್ನೂ, ಅವನ ತೇರನ್ನೂ ದೂರವಾಗಿ ಹಾರಿಸಿಬಿಟ್ಟನು. ಅನಂತರ ಆ ವೀರನು ನಲವತ್ತು ಬಾಣಗಳಿಂದ ಧನುರ್ಧರಾಗ್ರೇಸರನಾದ ಅನಿರುದ್ಧನನ್ನು ಪ್ರಹರಿಸಿ,

೨೬. ಆಕಾಶವೆಲ್ಲವೂ ತುಂಬಿಹೋಗುವಂತೆ ಬೊಬ್ಬೆಹಾಕುತ್ತಾ ನಿಂತನು. ಆ ಪ್ರಹಾರದಿಂದ ಅನಿರುದ್ಧನ ರಥವು ತನಗೆ ಕಟ್ಟಿದ್ದ ರಥಗಳೊಡನೆ ಹದಿನಾರು ಹರಿದಾರಿಗಳಷ್ಟು ದೂರದಲ್ಲಿ ಹೋಗಿ ಬಿದ್ದಿತು.

೨೭. ಅನಂತರ ಆ ಶಕುನಿಯು ಚೂಪಾದ ಬಾಣಗಳನ್ನು ತೆಗೆದುಕೊಂಡು ಸಾಂಬನನ್ನು ಪ್ರಹರಿಸಿದನು. ರಾಜೇಂದ್ರ ! ಆ ಸಾಂಬನೂ ಸಹ ಆ ಏಟನ್ನು ತಾಳಲಾರದೆ ರಣಾಂಗಣದಿಂದ ಹೊರಗೆ ಆಕಾಶದಲ್ಲಿ ತೂರಾಡುತ್ತಾ,

೨೮. ಮೂವತ್ತೆರಡು ಯೋಜನಗಳಷ್ಟು ದೂರದಲ್ಲಿ ಹೋಗಿ ಬಿದ್ದನು. ಓ ವಿದೇಹರಾಜಾ ! ಅಷ್ಟು ಹೊತ್ತಿಗೆ ಸರಿಯಾಗಿ ಕೃಷ್ಣಪುತ್ರನಾದ ಪ್ರದ್ಯುಮ್ನನು ಆ ಯುದ್ಧರಂಗಕ್ಕೆ ಬಂದನು. ಅವನ್ನು ಕಂಡು ಕೋಪಾಕ್ರಾಂತನಾದ ಶಕುನಿಯು,

ಸಹಸಾ ಬಾಣಪಟಲೈಃ ಸಂಜಘಾನ ರಣಾಂಗಣೇ ।
ಪ್ರದ್ಯುಮ್ನಸ್ಯ ರಥೋ ರಾಜನ್ಸಂಭ್ರಮನ್ಘಟಿಕಾದ್ವಯಂ　　　॥ ೨೯ ॥

ಶತಕ್ರೋಶೇ ಪಪಾತೋರ್ವ್ಯಾಂ ಕಮಂಡಲುರಿವಾಹತಃ ।
ಸರ್ವೇ ವಿಸಿಸ್ಮುಃ ಶಕುನೇರ್ಬಲಂ ದೃಷ್ಟ್ವಾಥ ಯಾದವಾಃ　　　॥ ೩೦ ॥

ಜಘ್ನುರ್ನಾನಾವಿಧೈಃ ಶಸ್ತ್ರೈರ್ದೈತ್ಯಮದ್ರಿಂ ಯಥಾ ಗಜಾಃ ।
ಗದೋಽರ್ಜುನೋಽನಿರುದ್ಧಸ್ತು ಸಾಂಬೋ ಜಾಂಬವತೀಸುತಃ　　　॥ ೩೧ ॥

ಧನುಷ್ಟಂಕಾರಯಂತಸ್ತೇ ಪುನರ್ಯುದ್ಧಂ ಸಮಾಗತಾಃ ।
ಅಥ ಕಾರ್ಷ್ಣಿರ್ಮಹಾಬಾಹುರ್ವಾಯುವೇಗರಥೇ ಸ್ಥಿತಃ　　　॥ ೩೨ ॥

---

೨೯. ಗುಂಪುಗುಂಪಾಗಿ ಬಾಣಗಳನ್ನು ಬಿಡುತ್ತಾ ಅವನನ್ನು ಬಲವಾಗಿ ಪ್ರಹರಿಸಿದನು. ಆ ಬಾಣಪ್ರಹಾರದಿಂದ ಪ್ರದ್ಯುಮ್ನನ ರಥವು ಎರಡು ಗಳಿಗೆಗಳ ಕಾಲ ಗರಗರನೆ ಸುತ್ತುತ್ತಿದ್ದು,

೩೦. ನೂರು ಯೋಜನಗಳಾಚೆ ಜೋರಾಗಿ ಎಸೆಯಲ್ಪಟ್ಟ ಕಮಂಡಲುವಿನಂತೆ ದೂರವಾಗಿ ಹೋಗಿ ಬಿದ್ದಿತು. ರಾಜೇಂದ್ರ! ಈ ಪರಾಕ್ರಮವನ್ನು ಕಂಡು ಯಾದವರೆಲ್ಲರೂ ಬಹಳ ಆಶ್ಚರ್ಯವನ್ನು ಹೊಂದಿದರು.

೩೧. ಆಗ ಯದುವೀರರೆಲ್ಲರೂ ಬಗೆಬಗೆಯಾದ ಆಯುಧಗಳನ್ನು ತೆಗೆದುಕೊಂಡು ಮದ್ದಾನೆಗಳು ತಮ್ಮ ದಂತಗಳಿಂದ ಪರ್ವತವನ್ನು ಪ್ರಹರಿಸುವಂತೆ ಆ ದೈತ್ಯನನ್ನು ಪ್ರಹರಿಸತೊಡಗಿದರು. ಇತ್ತಲಾಗಿ ಗದನೂ, ಅರ್ಜುನನೂ, ಅನಿರುದ್ಧನೂ, ಜಾಂಬವತೀಪುತ್ರನಾದ ಸಾಂಬನೂ,

೩೨-೩೩. ತಮ್ಮ ತಮ್ಮ ಬಿಲ್ಲುಗಳ ಹೆದೆಯನ್ನು ಝುಂಕಾರವಾಡುತ್ತಾ ಮರಳಿ ಯುದ್ಧಮಾಡಲೋಸುಗ ಅಲ್ಲಿಗೆ ಬಂದರು. ಅನಂತರ ಮಹಾಬಾಹುವಾದ ಪ್ರದ್ಯುಮ್ನನು ವಾಯುವಿಗೆ ಸಮಾನವಾದ ವೇಗವುಳ್ಳ ತನ್ನ ತೇರಿನಲ್ಲಿ ಕುಳಿತು ತನ್ನ

ಧನುಷ್ಟಂಕಾರಯನ್ರಾಜನ್ಪ್ರಾಪ್ತೋಽಭೂದ್ರಣಮಂಡಲೇ ।
ಪ್ರಲಯಾರ್ಣವಸಂಘಟ್ಟಭೀಮಸಂಘರ್ಷನಾದಿನೀಂ ॥ ೩೩ ॥

ಧನುರ್ಜ್ಯಾಂ ಶಕುನೇಃ ಕಾರ್ಷ್ಣಿಶ್ಚಿಚ್ಛೇದ ದಶಭಿಃ ಶರೈಃ ।
ಸಹಸ್ರೈಶ್ಚ ಸಹಸ್ರಾಶ್ವಾನ್ರಥಂ ಚ ವಿಶಿಖೈಃ ಶತೈಃ ॥ ೩೪ ॥

ಸಾರಥಿಂ ಬಾಣವಿಂಶತ್ಯಾ ಪಾತಯಾಮಾಸ ಭೂತಲೇ ।
ತತೋ ರಥಂ ಸಮುತ್ಥಾಪ್ಯ ಹಯೈರನ್ಯೈರ್ನಿಯೋಜಿತಂ ॥ ೩೫ ॥

ಅನ್ಯಂ ಸೂತಂ ರಥೇ ಕೃತ್ವಾ ರಥಮಾರುಹ್ಯ ದೈತ್ಯರಾಟ್ ।
ಸಂದಧೇ ಸಿಂಜಿನೀಂ ರಾಜನ್ಕೋದಂಡೇ ಚಂಡವಿಕ್ರಮೇ ॥ ೩೬ ॥

ಧನುಸ್ಸನ್ನು ಪುನಃ ಪುನಃ ಟಂಕಾರಮಾಡುತ್ತಾ ಯುದ್ಧರಂಗವನ್ನು ಪ್ರವೇಶಿಸಿ ಪ್ರಳಯಕಾಲದ ಸಾಗರಗಳು ಪರಸ್ಪರ ಸಂಘರ್ಷಿಸಿದಾಗ ಮೊರೆಯುವಂತೆ ಜೋರಾಗಿ ಮೊರೆಯುತ್ತಿರುವ ಆ ಶಕುನಿಯ ಬಿಲ್ಲಿನ ಹೆದೆಯನ್ನು,

೩೪. ಹತ್ತು ಬಾಣಗಳಿಂದ ಕತ್ತರಿಸಿಬಿಟ್ಟನು. ಮತ್ತು ಸಾವಿರ ಬಾಣಗಳಿಂದ ಅವನ ತೇರಿಗೆ ಕಟ್ಟಿದ್ದ ಸಾವಿರ ಕುದುರೆಗಳನ್ನೂ, ನೂರು ಬಾಣಗಳಿಂದ ಅವನ ರಥವನ್ನೂ,

೩೫. ಇಪ್ಪತ್ತು ಬಾಣಗಳಿಂದ ಅದರ ಸಾರಥಿಯನ್ನೂ ನೆಲದ ಮೇಲೆ ಕೆಡಹಿದನು. ಅದನ್ನು ಕಂಡು ಆ ದೈತ್ಯರಾಜನು ಹೊಸದಾದ ಕುದುರೆಗಳನ್ನು ಕಟ್ಟಿದ್ದ ಮತ್ತೊಂದು ರಥವನ್ನು ತರಿಸಿ,

೩೬. ಬೇರೊಬ್ಬ ಸಾರಥಿಯನ್ನು ನೇಮಿಸಿಕೊಂಡು ಅದರಲ್ಲಿ ತಾನು ಹತ್ತಿ ಕುಳಿತು ಅತ್ಯುಗ್ರವಾದ ಧನುಸ್ಸೊಂದನ್ನು ಕೈಗೆ ತೆಗೆದುಕೊಂಡು ಅದಕ್ಕೆ ಹೆದೆಯನ್ನು ಬಿಗಿದು ಕಟ್ಟಿದನು.

ಶತಂ ಬಾಣಾನ್ಸಮಾಕೃಷ್ಯ ನಿಷಂಗಾತ್ಸ್ಪೃಷ್ಠತೋ ಗತಾನ್ ।
ಚಾಪೇ ನಿಧಾಯ ಕರ್ಣಾಂತಮಾಕೃಷ್ಯ ಪ್ರಾಹ ಮನ್ಮಥಂ　　　　　॥ ೩೭ ॥

॥ ಶಕುನಿರುವಾಚ ॥

ಸರ್ವೇಷಾಂ ಘಾತಯಿಷ್ಯಾಮಿ ಶತ್ರುಮುಖ್ಯಂ ಮದೋತ್ಕಟಂ ।
ಪಶ್ಚಾತ್ಸೇನಾಂ ಹನಿಷ್ಯಾಮಿ ಯದೂನಾಂ ಸ್ವಸ್ಥತೇಜಸಾಂ ।　　　　॥ ೩೮ ॥

॥ ಪ್ರದ್ಯುಮ್ನ ಉವಾಚ ॥

ಸದಾ ವಯಃ ಕಾಲಬಲೇನ ದೇಹಿನಾಂ
ಪ್ರಯಾತಿ ಛಾಯೇವ ಮುಖೇ ಮುಹುರ್ಮುಹುಃ ।
ತಥಾ ಚ ದುಃಖಂ ಚ ಸುಖಂ ಗತಾಗತಂ
ಘನಾವಲಿರ್ವಾಯುಬಲೇನ ಖೇ ಯಥಾ　　　　　॥ ೩೯ ॥

---

೩೭. ಬಳಿಕ ತನ್ನ ಬೆನ್ನಿಗೆ ಕಟ್ಟಿಕೊಂಡಿದ್ದ ಬತ್ತಳಿಕೆಯಿಂದ ನೂರು ಬಾಣಗಳನ್ನು ಎಳೆದು ಬಿಲ್ಲಿನಲ್ಲಿ ಹೂಡಿ ಕಿವಿಯ ಕೊನೆಯವರಿಗೂ ಸೆಳೆಯುತ್ತಾ ಆ ಪ್ರದ್ಯುಮ್ನನನ್ನು ಕುರಿತು,

೩೮. "ಶತ್ರುಗಳಲ್ಲೆಲ್ಲಾ ಪ್ರಧಾನನೆನಿಸಿದವನೂ, ಮಿತಿಮೀರಿ ಕೊಬ್ಬಿಹೋಗಿ ಮೆರೆಯುತ್ತಿರುವವನೂ, ಆದ ನಿನ್ನನ್ನು ಮೊದಲು ಕೊಂದು, ಬಳಿಕ ಅಲ್ಪ ಪರಾಕ್ರಮಿಗಳಾದ ಆ ಯಾದವರ ಸೇನೆಯನ್ನು ಕೊಲ್ಲುವೆನು" ಎಂದು ನುಡಿದನು.

೩೯. ಆಗ ಪ್ರದ್ಯುಮ್ನನು ಅವನನ್ನು ಕುರಿತು "ಓ ದೈತ್ಯೇಂದ್ರ! ಕಾಲದ ಮಹಿಮೆಯಿಂದ ಜನರ ಆಯುಸ್ಸು ಬೆಳಗಿನ ಹೊತ್ತು ಉದ್ದವಾಗಿದ್ದು ಬರುಬರುತ್ತಾ ಕ್ಷಣಿಸಿಹೋಗುವ ಆ ಜನರ ನೆರಳಿನಂತೆಯೇ ಕ್ರಮಕ್ರಮವಾಗಿ ಕ್ಷೀಣಿಸುತ್ತಾ ಕೊನೆಗೆ ಇಲ್ಲದಾಗುವುದು. ಅದೇ ರೀತಿ ಜೀವಿಯಾದವನಿಗೆ ಒದಗುವ ಸುಖ, ದುಃಖಗಳೂ, ಆದಾಯವ್ಯಯಗಳೂ, ಎಲ್ಲವೂ ಆಕಾಶದಲ್ಲಿ ಗಾಳಿಯ ಹೊಡೆತಕ್ಕೆ ಸಿಕ್ಕಿ ಒಂದು ಕಡೆ ಒಟ್ಟುಗೂಡಿದ್ದು ಮತ್ತೆ ಚೆದುರಿ ದೂರದೂರವಾಗಿ ಹೋಗುವ ಮೋಡಗಳ ತಂಡಗಳಂತೆ ಅಸ್ಥಿರವಾದುವುಗಳೇ ಆಗಿರುವುವು.

ಕೃತಾಂ ಕೃಷಿಂ ಸಿಂಚತಿ ಯಾಂತಿ ಸರ್ವತ-
ಶ್ಛಿನತ್ತಿ ದಾತ್ರೇಣ ಯಥಾ ಕೃಷೀವಲಃ ।
ತಥಾ ಹಿ ಕಾಲಃ ಸ್ವಕೃತಾಂ ಜನಾವಲೀಂ
ದುರತ್ಯಯಃ ಪಾತಿ ಗುಣೈರ್ವಿಲುಂಪತಿ ॥ ೪೦ ॥

ಇದಂ ಕರಿಷ್ಯಾಮಿ ಕರೋಮಿ ಭೂಯೋ
ಮಮೇದಮಸ್ತೀತಿ ತದೇವಮಬ್ರುವನ್ ।
ಅಹಂ ಸುಖೀ ದುಃಖಯುತಃ ಸುಹೃಜ್ಜನೋ
ಲೋಕಸ್ತ್ವಹಂಕಾರವಿಮೋಹಿತೋಽಸುರ ॥ ೪೧ ॥

ಧನ್ಯಸ್ತ್ವಂ ರಾಜಶಾರ್ದೂಲ ಮುನೀನ್ವಾಗ್ಭಿರ್ವಿಡಂಬಯನ್ ।
ಸ್ವಭಾವೋ ದುಸ್ತ್ಯಜೋ ನ್ಯಣಾಂ ಪೃಥಗ್ಭೂತಸ್ತ್ರಿಭಿರ್ಗುಣೈಃ ॥ ೪೨ ॥

---

೪೦. ರೈತನು ತಾನಾಗಿ ಕಷ್ಟಪಟ್ಟು ನೀರೆರೆದು ಪೋಷಿಸಿ ಬೆಳೆಸಿದ ಪೈರನ್ನು ಕೊನೆಗೆ ತಾನೇ ಕುಡುಗೋಲಿನಿಂದ ಸುತ್ತಲೂ ಕತ್ತರಿಸುತ್ತಾ ಬರುವಂತೆ, ಆ ಕಾಲವು ಯಾರ ಅಡ್ಡಿ ಆತಂಕಗಳನ್ನೂ ಗಮನಿಸದೆ, ತಾನೇ ಸೃಷ್ಟಿಸಿದ ಜನಜಂಗುಳಿಯನ್ನು ಕೊನೆಗೆ ತಾನೇ ನಾಶಪಡಿಸುವುದು.

೪೧. ಎಲೈ ದೈತ್ಯೇಂದ್ರನೇ! ಹೀಗೆ ವಸ್ತುಸ್ಥಿತಿಯಿರುವಾಗ ಈ ಜಗತ್ತೆಲ್ಲವೂ ಇದೋ ನಾನು ಮಾಡುತ್ತಿರುವೆನು, ಮುಂದೆ ಮಾಡಲಿರುವೆನು, ಇದು ಹಿಂದೆ ನನ್ನದಾಗಿದ್ದಿತು, ಇಂದು ನನ್ನದಾಗಿರುವುದು, ಮುಂದೆ ನನ್ನದಾಗುವುದು, ನಾನು ಸುಖವಾಗಿರುವೆನು, ನಾನು ದುಃಖಿಸುತ್ತಿರುವೆನು, ಇವನು ನನಗೆ ಬೇಕಾದವನು, ಇವನು ಬೇಕಾದವನಲ್ಲ, ಎಂದು ಮುಂತಾಗಿ ಅಹಂಕಾರ ಮಮಕಾರಗಳಿಗೆ ಸಿಕ್ಕಿ ಭ್ರಾಂತಿಗೊಳಗಾಗಿರುವುದು. ಇದು ಲೋಕದ ಸ್ವಭಾವವೇ ಆಗಿರುವುದು ಎಂದನು.

೪೨. ಇದನ್ನು ಕೇಳಿ ಆ ದೈತ್ಯನು ಪ್ರದ್ಯುಮ್ನನನ್ನು ಕುರಿತು "ಓ ರಾಜಶ್ರೇಷ್ಠಾ! ಮಾತುಗಳಿಂದ ಮಹರ್ಷಿಗಳನ್ನು ಮೀರಿಸುವಂತಹ ನೀನೇ ಧನ್ಯನು, ತಮ್ಮ ತಮ್ಮ ಸ್ವಭಾವವನ್ನು ಮೀರಲು ಯಾವ ಮನುಷ್ಯರಿಗೆ ತಾನೇ ಸಾಧ್ಯವು? ಆ ಸ್ವಭಾವವು ಸತ್ತ್ವಾದಿಗುಣಗಳ ವಿಚಿತ್ರ ಸಂಯೋಗದಿಂದ ಒಬ್ಬೊಬ್ಬರಿಗೂ ವಿಶಿಷ್ಟವಾಗಿಯೇ ಇರುವುದು" ಎಂದನು.

॥ ಶ್ರೀ ನಾರದ ಉವಾಚ ॥

ಏವಂ ಬ್ರುವಾಣಾವನ್ಯೋನ್ಯಂ ಪ್ರದ್ಯುಮ್ನಶಕುನೀ ಮೃಧೇ ।
ಯುಯುಧಾತೇ ಮೈಥಿಲೇಂದ್ರ ಶಕ್ರವೃತ್ರಾವಿವ ಸ್ಥಿತೌ ॥ ೪೩ ॥

ಇತಿ ತೌ ಧನುಷೋ ಮುಕ್ತಾನ್ನಿಶಿಖಾನ್ಸೂರ್ಯರಶ್ಮಿವತ್ ।
ಚಿಚ್ಛೇದ ಕಾರ್ಷ್ಣಿರ್ಬಾಣೇನ ಕುವಾಕ್ಯೇನೇವ ಮಿತ್ರತಾಂ ॥ ೪೪ ॥

ಲಕ್ಷಭಾರಮಯೀಂ ಗುರ್ವೀಂ ಗೃಹೀತ್ವಾ ಮಹತೀಂ ಗದಾಂ ।
ಜಘಾನ ಮೂರ್ಧ್ನಿ ಪ್ರದ್ಯುಮ್ನಂ ಶಕುನಿರ್ಯುದ್ಧದುರ್ಮದಃ ॥ ೪೫ ॥

ಪ್ರದ್ಯುಮ್ನೋ ಭಗವಾನ್ಸಾಕ್ಷಾದ್ಗದಯಾ ವಜ್ರಕಲ್ಪಯಾ ।
ಕಾಚಪಾತ್ರಂ ಯಥಾ ದಂಡಸ್ತದ್ಗದಾಂ ಶತಧಾಽಕರೋತ್ ॥ ೪೬ ॥

---

೪೩. ಓ ಬಹುಲಾಶ್ವರಾಜೇಂದ್ರ ! ಈ ರೀತಿಯಾಗಿ ದೈತ್ಯೇಂದ್ರಿಯನಾದ ಆ ಶಕುನಿಯೂ, ಯದುಶ್ರೇಷ್ಠನಾದ ಪ್ರದ್ಯುಮ್ನನೂ, ಪರಸ್ಪರವಾಗಿ ಮಾತಾಡುತ್ತಾ ವೃತ್ರಾಸುರನಂತೆಯೂ, ದೇವೇಂದ್ರನಂತೆಯೂ, ಪರಸ್ಪರವಾಗಿ ಹೋರಾಡ ತೊಡಗಿದರು.

೪೪. ಆಗ ಪ್ರದ್ಯುಮ್ನನು ತನ್ನ ಮೇಲೆ ಶತ್ರುವು ಪ್ರಯೋಗಿಸಿದ ಸೂರ್ಯ ಕಿರಣಗಳಂತೆ ಥಳಥಳಿಸುತ್ತಿರುವ ಬಾಣಗಳನ್ನು ತನ್ನ ಒಂದು ಬಾಣದಿಂದ ಸಲ್ಲದ ಮಾತಿನಿಂದ ಗೆಳೆತನವನ್ನು ಮುರಿಯುವಂತೆ ಕತ್ತರಿಸಿಬಿಟ್ಟನು.

೪೫. ಆಗ ಯುದ್ಧದುರ್ಮಧನಾದ ಆ ಶಕುನಿಯು ಲಕ್ಷಭಾರಗಳು ತೂಗುವಂತಹ ಭಾರಿಯಾದ ಗದೆಯೊಂದನ್ನು ತೆಗೆದುಕೊಂಡು ಆ ಪ್ರದ್ಯುಮ್ನನ ತಲೆಯ ಮೇಲೆ ಜೋರಾಗಿ ಹೊಡೆದನು.

೪೬. ಅಷ್ಟರಲ್ಲಿಯೇ ಆ ಪ್ರದ್ಯುಮ್ನನು ವಜ್ರಾಯುಧಕ್ಕೆ ಸರಿಸಮವಾಗಿದ್ದ ತನ್ನ ಗದೆಯಿಂದ ಆ ಶಕುನಿಯ ಗದೆಯನ್ನು ಕೋಲಿನಿಂದ ಗಾಜಿನ ಪಾತ್ರೆಯನ್ನು ಒಡದುಬಿಡುವಂತೆ ಕ್ಷಣಮಾತ್ರದಲ್ಲಿ ನೂರಾರು ಚೂರುಗಳಾಗಿ ಪುಡಿಪುಡಿ ಮಾಡಿ ಬಿಟ್ಟನು.

ಅಥ ದೈತ್ಯೋ ರುಷಾವಿಷ್ಟಸ್ತ್ರಿಶೂಲಂ ಚ ಸ್ಫುರದ್ರುಚಾ ।
ಪ್ರದ್ಯುಮ್ನಸ್ಯಾಹನನ್ಮೂರ್ಧ್ನಿ ಶಬ್ದಮುಚ್ಚೈಃ ಸಮುಚ್ಚರನ್ ॥ ೪೭ ॥

ತ್ರಿಶೂಲೇನ ಹರೇಃ ಪುತ್ರಸ್ತ್ರಿಶೂಲಂ ಶತಧಾಚ್ಛಿನತ್ ।
ಕುಂತಂ ತೀಕ್ಷ್ಣಂ ಶಕುನಯೇ ಪ್ರಾಹಿಣೋದ್ರುಕ್ಮಿಣೀಸುತಃ ॥ ೪೮ ॥

ಕುಂತೇನ ವಿದ್ಧಹೃದಯಃ ಕಿಂಚಿದ್ವ್ಯಾಕುಲಮಾನಸಃ ।
ಪರಿಘೇಣ ಹರೇಃ ಪುತ್ರಂ ಸಂತತಾಡ ರಣಾಂಗಣೇ ॥ ೪೯ ॥

ಯಮದಂಡಂ ತತೋ ನೀತ್ವಾ ರುಕ್ಮಿಣೀನಂದನೋ ಬಲೀ ।
ಚೂರ್ಣೀಚಕಾರ ದೈತ್ಯಸ್ಯ ಪರಿಘಂ ಪರಮಾದ್ಭುತಂ ॥ ೫೦ ॥

---

೪೭. ಈ ರೀತಿ ತನ್ನ ಗದೆಯು ಪುಡಿಪುಡಿಯಾದುದನ್ನು ಕಂಡು ಕುಪಿತನಾದ ಆ ದೈತ್ಯನು ಗಟ್ಟಿಯಾಗಿ ಅಬ್ಬರಿಸುತ್ತಾ ಥಳಥಳಿಸುತ್ತಿರುವ ತ್ರಿಶೂಲವೊಂದರಿಂದ ಆ ಪ್ರದ್ಯುಮ್ನನ ತಲೆಯ ಮೇಲೆ ಪ್ರಹರಿಸಿದನು.

೪೮. ಅದಕ್ಕೆ ಪ್ರತಿಯಾಗಿ ಆ ಪ್ರದ್ಯುಮ್ನನೂ ಕೂಡ ತ್ರಿಶೂಲವೊಂದನ್ನು ತೆಗೆದುಕೊಂಡು ಪ್ರಹರಿಸಿ ಆ ದೈತ್ಯನ ತ್ರಿಶೂಲವನ್ನು ತುಂಡರಿಸಿದನು. ಕೂಡಲೇ ಮೊನಚಾದ ಮೊನೆಯುಳ್ಳ ಕುಂತಾಯುಧವನ್ನು ತೆಗೆದುಕೊಂಡು ಆ ಶಕುನಿಗೆ ಗುರಿಯಿಟ್ಟು ಬೀಸಿ ಹೊಡೆದನು.

೪೯. ಆ ಪ್ರಹಾರದಿಂದ ಆ ದೈತ್ಯನ ಹೃದಯವು ಭೇದಿಸಲ್ಪಟ್ಟಿತು. ಅದರಿಂದ ಅವನು ಸ್ವಲ್ಪಮಟ್ಟಿಗೆ ಕಳವಳಕ್ಕೀಡಾದನು. ಆದರೇನು ? ಆ ದೈತ್ಯನು ತಟ್ಟನೆ ಸಾವರಿಸಿಕೊಂಡು ಪರಿಘವೆಂಬ ಆಯುಧದಿಂದ ಆ ಪ್ರದ್ಯುಮ್ನನನ್ನು ಪ್ರಹರಿಸಿದನು.

೫೦. ಅದಕ್ಕೆ ಪ್ರತಿಯಾಗಿ ರುಕ್ಮಿಣೀಪುತ್ರನಾದ ಆ ಪ್ರದ್ಯುಮ್ನನು ಯಮದಂಡವೆಂಬ ಆಯುಧವನ್ನು ಪ್ರಯೋಗಿಸಿದನು. ಆ ಯಮದಂಡವು ಪರಿಘಾಯುಧವನ್ನು ಪುಡಿಪುಡಿಮಾಡಿದುದಲ್ಲದೆ,

ಚಚಾಲಾಶ್ವಾಂಶ್ಚ ಸಹಸಾ ಯಮದಂಡೇನ ವೇಗತಃ ।
ಸಾರಥಿಂ ಸ್ಯಂದನಂ ದಿವ್ಯಂ ಪಾತಯಾಮಾಸ ಭೂತಲೇ ॥ ೫೧ ॥

ಸೂತೇ ಮೃತ್ಯುಂ ಗತೇ ಸಾಶ್ವೇ ಚೂರ್ಣೀಭೂತೇ ರಥೇ ನೃಪ ।
ಪರಿಘೇ ಚ ಮಹಾದೈತ್ಯಃ ಖಡ್ಗಂ ಜಗ್ರಾಹ ರೋಷತಃ ॥ ೫೨ ॥

ಪ್ರದ್ಯುಮ್ನೋಽಪಿ ಮಹಾವೀರೋ ಯಮದಂಡೇನ ಮೈಥಿಲ ।
ದ್ವಿಧಾಚಕಾರ ತತ್ಖಡ್ಗಂ ಪನ್ನಗಂ ಗರುಡೋ ಯಥಾ ॥ ೫೩ ॥

ಯಮದಂಡೇನ ತಂ ದೈತ್ಯಂ ಸ್ಕಂಧೇ ಕಾರ್ಷ್ಣಿಸ್ತತಾಡ ಹ ।
ತಸ್ಯಾಘಾತೇನ ಶಕುನಿಃ ಸದ್ಯೋ ಮೂರ್ಚ್ಛಾಮವಾಪ ಹ ॥ ೫೪ ॥

---

೫೧. ಆ ದೈತ್ಯನು ಕುಳಿತಿದ್ದ ದಿವ್ಯವಾದ ರಥವನ್ನೂ, ಸಾರಥಿಯನ್ನೂ, ಕುದುರೆಗಳನ್ನೂ ನೆಲಕ್ಕೆ ಕೆಡವಿ ಧ್ವಂಸಮಾಡಿಬಿಟ್ಟಿತು.

೫೨. ರಾಜೇಂದ್ರ! ಈ ರೀತಿಯಾಗಿ ತನ್ನ ಸಾರಥಿಯು ಸಾವಿಗೀಡಾಗಿ, ರಥವೂ ಅದರ ಕುದುರೆಗಳೂ ಮತ್ತು ಪರಿಘಾಯುಧವೂ ಪುಡಿಪುಡಿಯಾಗಿ ಬಿಟ್ಟುದನ್ನು ಕಂಡು ಆ ಮಹಾದೈತ್ಯನು ಕೋಪದಿಂದ ತನ್ನ ಕತ್ತಿಯನ್ನು ತೆಗೆದುಕೊಂಡು ಪ್ರಹರಿಸಲು ಬಂದನು.

೫೩. ಆಗ ಮಹಾವೀರನಾದ ಪ್ರದ್ಯುಮ್ನನು ತನ್ನ ಆ ಯಮದಂಡವೆಂಬ ಆಯುಧದಿಂದಲೇ ಗರುಡನು ಹಾವನ್ನು ಹೇಗೋ ಹಾಗೆ, ಆ ದೈತ್ಯನ ಕತ್ತಿಯನ್ನು ಒಂದೇ ಏಟಿಗೆ ಎರಡಾಗುವಂತೆ ಕತ್ತರಿಸಿಬಿಟ್ಟನು.

೫೪. ಬಳಿಕ ಅದೇ ಯಮದಂಡದಿಂದಲೇ ಆ ದೈತ್ಯನ ಹೆಗಲಿನ ಮೇಲೆ ಬಲವಾಗಿ ಪ್ರಹರಿಸಿದನು. ಆ ಶಕುನಿಯು ಅದರ ವೇಗವನ್ನು ತಾಳಲಾರದೆ ಕೂಡಲೇ ಮೂರ್ಛೆಯನ್ನು ಹೊಂದಿದನು.

ದೈತ್ಯಸೇನಾಂ ವಿವೇಶಾಶು ಶ್ರೀಕೃಷ್ಣಃ ಕ್ರೋಧಮೂರ್ಛಿತಃ ।
ನಿಪಾತಯನ್ಮಹಾವೀರಾನ್ವನಂ ವೈಶ್ವಾನರೋ ಯಥಾ ॥ ೫೫ ॥

ಗಜಾಂಸ್ತುರಂಗಾಂಶ್ಚ ರಥಾನ್ದೈತ್ಯಾಂಸ್ತಾನಾತತಾಯಿನಃ ।
ಪಾತಯಾಮಾಸ ಯಮವದ್ಯಮದಂಡೇನ ಮಾಧವಃ ॥ ೫೬ ॥

ಭಿನ್ನಪಾದಾಶ್ಛಿನ್ನಮುಖಾಶ್ಛಿನ್ನಾಂಗಾಶ್ಛಿನ್ನಬಾಹವಃ ।
ದೈತೇಯಾ ದನುಜಾ ಯುದ್ಧೇ ಮೂರ್ಛಿತಾ ನಿಧನಂ ಗತಾಃ ॥ ೫೭ ॥

ಯಮರೂಪಧರಂ ದೃಷ್ಟ್ವಾ ಪ್ರದ್ಯುಮ್ನಂ ಭೀಮವಿಕ್ರಮಂ ।
ತ್ಯಕ್ತ್ವಾ ಸ್ವಂ ಸ್ವಂ ರಣಂ ಕೇಚಿದ್ದುದ್ರುವುಸ್ತೇ ದಿಶೋ ದಶ ॥ ೫೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಶಕುನಿಯುದ್ಧವರ್ಣನಂ ನಾಮಾಽಷ್ಟತ್ರಿಂಶೋಽಧ್ಯಾಯಃ

---

೫೫. ಇತ್ತಲಾಗಿ ಕುಪಿತನಾದ ಆ ಕೃಷ್ಣಪುತ್ರನು ಕಾಡನ್ನು ಹೊಗುವ ಕಾಳ್ಗಿಚ್ಚಿನಂತೆ ಆ ದೈತ್ಯಸೇನೆಯನ್ನು ಕ್ಷಣಮಾತ್ರದಲ್ಲಿ ಪ್ರವೇಶಿಸಿ ಎದುರಾದ ವೀರಾಗ್ರಣಿಗಳನ್ನೆಲ್ಲಾ ತನ್ನ ಯಮದಂಡದಿಂದ ತುಂಡರಿಸಿ ಕೆಡಹುತ್ತಾ ಬಂದುದಲ್ಲದೆ,

೫೬. ಆನೆಗಳನ್ನೂ, ಕುದುರೆಗಳನ್ನೂ, ರಥಗಳನ್ನೂ, ಆತತಾಯಿ (ಮಹಾ ಪಾತಕಿ)ಗಳಾದ ದೈತ್ಯರನ್ನೂ ಯಮನಂತೆ ಕೊಲ್ಲುತ್ತಾ ಬಂದನು.

೫೭. ಆ ಯಮದಂಡದ ಪ್ರಹಾರದಿಂದ ಆ ದೈತ್ಯಸೇನೆಯಲ್ಲಿದ್ದ ದೈತ್ಯರೂ, ದಾನವರೂ ಎಲ್ಲರೂ ತಮ್ಮ ತಮ್ಮ ಕೈಕಾಲುಗಳನ್ನೂ ಮುಖಗಳನ್ನೂ ಇತರ ಅಂಗಗಳನ್ನೂ ಕಳೆದುಕೊಂಡು ಮೂರ್ಛೆಗೀಡಾಗಿ ನೆಲದ ಮೇಲೆ ಬಿದ್ದುದಲ್ಲದೆ ಸ್ವಲ್ಪ ಹೊತ್ತಿನಲ್ಲಿಯೇ ತಮ್ಮ ಪ್ರಾಣಗಳನ್ನು ನೀಗಿದರು.

೫೮. ಈ ರೀತಿಯಾಗಿ ಯಮನಂತೆ ತೋರುತ್ತಾ ಅತಿಭಯಂಕರವಾದ ಪರಾಕ್ರಮವುಳ್ಳ ಆ ಪ್ರದ್ಯುಮ್ನನು ಯುದ್ಧರಂಗದಲ್ಲಿ ಬರುತ್ತಿರುವುದನ್ನು ಕಂಡು ಆ ಸೇನೆಯಲ್ಲಿ ಅಳಿದುಳಿದ ಕೆಲಮಂದಿ ಯೋಧರು ತಾವು ಹೋರಾಡುತ್ತಿದ್ದ ಸ್ಥಳವನ್ನು ಬಿಟ್ಟು ದಿಕ್ಕುದಿಕ್ಕಿಗೆ ಚೆದುರಿ ಓಡಿಹೋದರು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ನಾರದಬಹುಲಾಶ್ವ ಸಂವಾದದಲ್ಲಿ ಶಕುನಿ ಯುದ್ಧವರ್ಣನವೆಂಬ ಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಏಕೋನಚತ್ವಾರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಶಕುನಿಃ ಪುನರುತ್ಥಾಯ ಸ್ವಬಲಂ ವೀಕ್ಷ್ಯ ಪೋಥಿತಂ ।
ಜಗ್ರಾಹ ಸ ಮಹಾರಾಜನ್ ಲಕ್ಷಭಾರಸಮಂ ಧನುಃ ॥ ೧ ॥

ನಿಧಾಯ ಬಾಣಂ ನಿಶಿತಂ ಕೋದಂಡೇ ಚಂಡವಿಕ್ರಮೇ ।
ಕಾರ್ಷ್ಣಿಂ ಪ್ರಾಹ ರಣೇ ರಾಜನ್ ಶಕುನಿರ್ದೈತ್ಯರಾಡ್ಬಲೀ ॥ ೨ ॥

ಮೂವತ್ತೊಂಬತ್ತನೆಯ ಅಧ್ಯಾಯವು

೧. ರಾಜೇಂದ್ರ! ಆಲಿಸು. ಇತ್ತಲಾಗಿ ಆ ಶಕುನಿಯು ಸ್ವಲ್ಪ ಹೊತ್ತಿನಲ್ಲಿಯೇ ಮೂರ್ಛೆ ತಿಳಿದೆದ್ದು ತನ್ನ ಸೇನೆಯೆಲ್ಲವೂ ಪ್ರದ್ಯುಮ್ನನಿಂದ ನುಚ್ಚುನೂರು ಮಾಡಲ್ಪಟ್ಟುದನ್ನು ಕಂಡು ಕೋಪದಿಂದ ಒಂದು ಲಕ್ಷ ಭಾರಗಳಷ್ಟು ತೂಕವಿರುವಂತಹ ಭಾರಿಯಾದ ಧನುಸ್ಸೊಂದನ್ನು ಕೈಗೆ ತೆಗೆದುಕೊಂಡನು. ಬಳಿಕ,

೨. ಆ ಅತಿಘೋರವಾದ ಪರಾಕ್ರಮವುಳ್ಳ ಧನುಸ್ಸಿನಲ್ಲಿ ಬಹಳ ಚೂಪಾಗಿರುವಂತಹ ಅಲುಗುಳ್ಳ ಬಾಣವೊಂದನ್ನು ಹೂಡಿದನು. ಅನಂತರ ಆ ದೈತ್ಯರಾಜನಾದ ಶಕುನಿಯು ಪ್ರದ್ಯುಮ್ನನನ್ನು ಕುರಿತು,

॥ ಶಕುನಿರುವಾಚ ॥

ಕರ್ಮ ಪ್ರಧಾನಂ ಜಗತೀತಲೇ ಮಹ-
ತ್ಕರ್ಮೈವ ಸಾಕ್ಷಾದ್ಗುರುರೀಶ್ವರಃ ಪ್ರಭುಃ ।
ಉಚ್ಚಾವಚತ್ವಂ ಭವತೀಹ ಕರ್ಮಣಾ
ತೇನೈವ ರಾಜನ್ವಿಜಯಃ ಪರಾಜಯಃ ॥ ೩ ॥

ಗವಾಂ ಸಹಸ್ರೇಷು ಯಥಾ ಹಿ ವತ್ಸಕಃ
ಸ್ವಮಾತರಂ ವಿಂದತಿ ಪಶ್ಯತಾಂ ಸತಾಂ ।
ತಥಾ ಹಿ ಯೇನಾಪಿ ಕೃತಂ ಶುಭಾಶುಭಂ
ನರೇಷು ತಿಷ್ಠತ್ಸು ತಮೇವ ಗಚ್ಛತಿ ॥ ೪ ॥

ತತೋ ವಿಜೇಷ್ಯಾಮಿ ದೃಢೇನ ಕರ್ಮಣಾ
ರಿಪುಂ ಭವಂತಂ ಶಪಥಃ ಕೃತೋ ಮಯಾ ।
ಸದ್ಯ: ಕುರು ತ್ವಂ ಪ್ರತಿಕಾರಮೇವ ತ-
ದ್ಯೇನಾಪಿ ನ ಸ್ಯಾದ್ಭುವಿ ತೇ ಪರಾಜಯಃ ॥ ೫ ॥

---

೩. ಓ ಯಾದವೇಂದ್ರ ! ಈ ಜಗತ್ತಿನಲ್ಲಿ ಮಾನವನಿಗೆ ಕರ್ಮವೇ ಮುಖ್ಯವಾದದ್ದು, ಕರ್ಮವೇ ಮಹತ್ತಾದುದು, ಆ ಕರ್ಮವೇ ಸಾಕ್ಷಾತ್ತಾದುದು, ಅದೇ ಈಶ್ವರನು, ಅದೇ ಸ್ವಾಮಿಯು. ಆ ಕರ್ಮದಿಂದಲೇ ಮನುಷ್ಯನಿಗೆ ಈ ಲೋಕದಲ್ಲಿ ಮೇಲ್ಮೆಯೂ, ಕೀಳ್ತನವೂ ಉಂಟಾಗುವುದು. ಮತ್ತು ಆ ಕರ್ಮದಿಂದಲೇ ಮಾನವನಿಗೆ ಗೆಲವೋ, ಇಲ್ಲವೇ ಸೋಲೋ ಸಂಭವಿಸುವುದು.

೪. ಮನುಷ್ಯನು ಮಾಡಿದ ಶುಭಾಶುಭ ಕರ್ಮವು ಹಸುಗಳ ಮಂದೆಯಲ್ಲಿ ಎಳಗರುವು ಇನ್ನಾವ ಹಸುಗಳನ್ನೂ ಒಲ್ಲದೆ ತನ್ನ ತಾಯಿಯನ್ನೇ ಆರಸಿಕೊಂಡು ಹೋಗಿ ಅದರ ಬಳಿಯಲ್ಲಿಯಲ್ಲಿಯೇ ನಿಲ್ಲುವಂತೆ, ಮತ್ತಾರನ್ನೂ ಬಳಿಸಾರದೆ ತನ್ನ ಕರ್ತೃವಾದ ಪುರುಷನನ್ನೇ ಆಶ್ರಯಿಸಿ ನಿಲ್ಲುವುದು.

೫, ಹೀಗೆ ವಸ್ತುಸ್ಥಿತಿಯಿರುವುದರಿಂದ ನಾನು ಅದೇ ಕರ್ಮವನ್ನೇ ದೃಢವಾಗಿ ನೆಮ್ಮಿ ಶತ್ರುವಾದ ನಿನ್ನನ್ನು ಗೆದ್ದೇ ಗೆಲ್ಲುವೆನು. ಇದೋ ಪ್ರತಿಜ್ಞೆಮಾಡಿ ಹೇಳುವೆನು. ಆದುದರಿಂದ ನಿನಗೆ ಈ ಜಗತ್ತಿನಲ್ಲಿ ಸೋಲುಂಟಾಗದಿರಬೇಕಾದರೆ ಕೂಡಲೇ ಇದಕ್ಕೆ ತಕ್ಕ ಪ್ರತೀಕಾರವನ್ನು ಮಾಡು ಎಂದು ನುಡಿದನು.

|| ಪ್ರದ್ಯುಮ್ನ ಉವಾಚ ||

ಕರ್ಮ ಪ್ರಧಾನಂ ಯದಿ ಮನ್ಯಸೇ ಭವಾ-
ನ್ಕಾಲಂ ವಿನಾ ತರ್ಹಿ ಫಲಂ ನ ವಿದ್ಯತೇ ।
ಕೃತೇ ಚ ಪಾಕೇ ಯದಿ ವಿಘ್ನತಾ ಕ್ವಚಿ-
ತ್ತದಾ ಬಲಿಷ್ಠಂ ಸಮಯಂ ವಿದುಃ ಪರೇ || ೬ ||

ಪಾಕಪ್ರಕಾರೇ ಸತಿ ಪಾಕಸಾಧನಂ
ತದಾಪಿ ಕರ್ತಾರಮೃತೇ ನ ಜಾಯತೇ ।
ವದಂತಿ ಕರ್ತಾರಮತಃ ಪರಂ ಪರೇ
ನ ಕರ್ಮ ಕಾಲಂ ಶೃಣು ದೈತ್ಯಪುಂಗವ || ೭ ||

---

೬. ಇದನ್ನು ಕೇಳಿ ಪ್ರದ್ಯುಮ್ನನು ಆ ದೈತ್ಯನನ್ನು ಕುರಿತು ಇಂತೆಂದು ನುಡಿದನು. ಓ ದೈತ್ಯೇಂದ್ರ! ನಿನ್ನ ಅಭಿಪ್ರಾಯದಲ್ಲಿ ಕರ್ಮವೇ ಪ್ರಧಾನವಾದುದಲ್ಲವೆ? ಹಾಗಾದರೆ ನನ್ನ ಅಭಿಪ್ರಾಯವನ್ನು ಕೇಳು. ಕರ್ಮಕ್ಕಿಂತಲೂ ಕಾಲವೇ ಪ್ರಧಾನವಾದುದು. ಆ ಕಾಲವೊದಗದಿದ್ದರೆ ಯಾವ ಕರ್ಮಕ್ಕೂ ಫಲವು ದೊರೆಯಲಾರದು. ಅದು ಹೇಗೆಂದರೆ ಕೇಳು. ನೀನು ನಿನ್ನ ಕರ್ಮವನ್ನು ಮಾಡಿಬಿಡಬಹುದು. ಆದರೆ ಆ ಕರ್ಮದ ಫಲವು ದೊರೆಯುವವರಿಗೂ ನಡುವೆ ವಿಘ್ನವು ಒದಗಬಾರದು. ಹಾಗೇನಾದರೂ ವಿಘ್ನವು ಒದಗುವುದಾದ ಪಕ್ಷದಲ್ಲಿ ಅದನ್ನು ಕಾಲದ ಮಹಿಮೆಯಿಂದಲೇ ಒದಗಿದುದನ್ನಾಗಿ ಅರಿಯಬೇಕು. ಆದುದರಿಂದರೇ ಕರ್ಮಕ್ಕಿಂತಲೂ ಕಾಲವೇ ಪ್ರಧಾನವೆಂಬುದಾಗಿ ಕೆಲವರು ಮನಗಂಡಿರುವರು.

೭. ಇನ್ನು ಕೆಲವರು ಈ ರೀತಿ ಅಭಿಪ್ರಾಯಪಡುವರು. "ಕೆಲಸವೊಂದು ನೆರವೇರಬೇಕಾದರೆ ಅದಕ್ಕೆ ಬೇಕಾದ ಸಲಕರಣೆಗಳು ಇದ್ದರೂ ಕರ್ತೃವಿಲ್ಲದಿದ್ದರೆ ಅದು ಎಂದಿಗೂ ನೆರವೇರಲಾರದು. ಆದುದರಿಂದ ಜಗತ್ತಿನಲ್ಲಿ ಕರ್ತೃವೇ ಪ್ರಧಾನವಾದುದು. ಕರ್ಮವಾಗಲೀ, ಕಾಲವಾಗಲೀ, ಮುಖ್ಯವಾದುದಲ್ಲ."

ಯೋಗಂ ವಿದುಃ ಕೇಽಪಿ ಯದಾ ಹ್ಯಯೋಗತಃ
ಕಥಂ ಭವೇತ್ಕಾರ್ಯ್ಯ ಕಿಲ ಪಾಕಸಾಧನಂ।
ಸರ್ವಂ ಹಿ ವಾ ಯೋಗಮೃತೇಽವೃಥಾ ಭವೇ-
ತ್ಕಾಲೇ ತಥಾ ಕರ್ಮಣಿ ಕರ್ತರಿ ಸ್ಥಿತೇ ॥ ೮ ॥

ಯೋಗಂ ತಥಾ ಕರ್ಮಣಿ ಕರ್ತರಿ ಸ್ಥಿತೇ
ಕಾಲೇ ವಿಧಿಃ ಸಾಂಖ್ಯಮೃತೇ ವೃಥಾ ಭವೇತ್ ।
ಪಾಕಪ್ರಕಾರಾದ್ಯವಿಚಾರಕೃದ್ಯದಾ
ನ ತರ್ಹಿ ಪಾಕಸ್ಯ ಯಥಾ ಪ್ರಸಾದನಂ ॥ ೯ ॥

ಯೋಗಕರ್ಮವಿಧಿಕಾರಕಸಂಖ್ಯೈ-
ಬ್ರಹ್ಮಪೂರುಷಮೃತೇ ನ ಹಿ ಕಿಂಚಿತ್ ।
ತನ್ನಮಾಮಿ ಪರಿಪೂರ್ಣತಮಾಂಶಂ
ಯೇನ ವಿಶ್ವಮಖಿಲಂ ವಿದಿತಂ ಖೇ ॥ ೧೦ ॥

---

೮. ಮತ್ತೆ ಕೆಲವರು ಈ ರೀತಿ ತಮ್ಮ ವಾದವನ್ನು ಹೂಡುವರು. "ಪ್ರಪಂಚದಲ್ಲಿ ಯೋಗವೇ ಪ್ರಧಾನವಾದುದು. ಯೋಗವಿಲ್ಲದಿದ್ದರೆ ಈ ಜಗತ್ತಿನಲ್ಲಿ ಯಾವ ಕಾರ್ಯವು ತಾನೇ ನೆರವೇರೀತು ? ಪ್ರತಿಯೊಂದು ವಸ್ತುವೂ ಸಹ, ಕರ್ಮವಿದ್ದರೂ, ಕಾಲವಿದ್ದರೂ, ಕರ್ತೃವಿದ್ದರೂ ಯೋಗವಿಲ್ಲದಿದ್ದರೆ ವ್ಯರ್ಥವಾಗಿ ಪರಿಣಮಿಸುವುದು. ಆದುದರಿಂದ ಕರ್ಮಸಿದ್ಧಾಂತ ಕಾಲಸಿದ್ಧಾಂತ, ಕರ್ತೃಸಿದ್ಧಾಂತಗಳಿಗಿಂತಲೂ ಯೋಗಸಿದ್ಧಾಂತವೇ ಯುಕ್ತಿಯುಕ್ತವಾದುದು."

೯. "ಬೇರೆ ಕೆಲವರು ಹೀಗೆ ತಮ್ಮ ಯುಕ್ತಿಗಳನ್ನು ಮುಂದೊಡ್ಡುವರು :— ಯೋಗವಿರಲಿ, ಕರ್ಮವಿರಲಿ, ಕರ್ತೃವಿರಲಿ, ಕಾಲವಿರಲಿ, ಯಾವುದಿದ್ದರೂ ಜಗತ್ತಿನಲ್ಲಿ ಯಾವ ಪ್ರಯತ್ನವೂ ಸಾಂಖ್ಯವಿಲ್ಲದಿದ್ದರೆ ವ್ಯರ್ಥವೆನಿಸುವುದು. ಸಾಂಖ್ಯವೆಂದರೆ, ವಿಚಾರವೆಂದರ್ಥ. ಕಾರ್ಯಕಾರಣಾದಿಗಳ ವಿಚಾರವಿಲ್ಲದಿದ್ದಲ್ಲಿ ಕಾರ್ಯವು ಸಿದ್ಧಿಸುವುದಾದರೂ ಹೇಗೆ ? ಆದುದರಿಂದ ಜಗತ್ತಿನಲ್ಲಿ ಸಾಂಖ್ಯವೇ ಪ್ರಧಾನವಾದುದು."

೧೦. ಕೆಲಮಂದಿ ಪ್ರಾಜ್ಞರು ಈ ರೀತಿ ತಮ್ಮ ಅನುಭವವನ್ನು ವಿವರಿಸಿವರು :— "ಯಾವ ಕಾರ್ಯವೇ ಆಗಲಿ, ಯೋಗವಿದ್ದರೂ, ಕರ್ಮವಿದ್ದರೂ, ಕಾಲವಿದ್ದರೂ, ಕರ್ತೃವಿದ್ದರೂ, ಸಾಂಖ್ಯವಿದ್ದರೂ, ಪರಬ್ರಹ್ಮಸ್ವರೂಪನಾದ ಯಾವ ಪುರುಷನಿಲ್ಲದಿದ್ದರೆ ನೆರವೇರಲಾರದೋ, ಆ ಪರಮಪುರುಷನೇ ಈ ಜಗತ್ತಿನಲ್ಲಿ ಪ್ರಧಾನನಾದವನು" ಓ ದೈತ್ಯೇಂದ್ರ ! ಈ ಜಗತ್ತೆಲ್ಲವೂ ಯಾವನ ಮುಂದೆ ಆಕಾಶದಂತೆ ಶೂನ್ಯವಾಗಿ ತೋರುವುದೋ ಅಂಥ ಪರಿಪೂರ್ಣಸ್ವರೂಪನಾದ ಪರಮಪುರುಷನನ್ನೇ ನಂಬಿ ಆತನನ್ನೇ ನಮಸ್ಕರಿಸುವೆನು " ಎಂದನು.

॥ ಶಕುನಿರುವಾಚ ॥

ಹೇ ಪ್ರದ್ಯುಮ್ನ ಮಹಾಬಾಹೋ ತ್ವಂ ಸಾಕ್ಷಾಜ್ಜ್ಞಾನಶೇವಧಿಃ ।
ತವ ದರ್ಶನಮಾತ್ರೇಣ ನರೋ ಯಾತಿ ಕೃತಾರ್ಥತಾಂ ॥ ೧೧ ॥

ಯೇ ತ್ವತ್ಸಂಗಂ ಸಮಾಸಾದ್ಯ ವಾರ್ತಾಂ ಕುರ್ವಂತಿ ನಿತ್ಯಶಃ ।
ತೇಷಾಂ ತು ಮಹಿಮಾನಂ ಹಿ ವಕ್ತುಂ ನಾಲಂ ಚತುರ್ಮುಖಃ ॥ ೧೨ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಶಕುನಿರ್ದೈತ್ಯೋ ಮಾಯಾವೀ ದೈತ್ಯರಾಡ್ಬಲೀ ।
ಶಿಕ್ಷಿತಂ ಮಯದೈತ್ಯೇನ ರೌರವಾಸ್ತ್ರಂ ಸಮಾದಧೇ ॥ ೧೩ ॥

ಮಹೋರಗಾ ದಂದಶೂಕಾ ವೃಶ್ಚಿಕಾಶ್ಚ ವಿಷೋತ್ಕಟಾಃ ।
ಕೋಟಿಶೋ ನಿರ್ಗತಾ ರಾಜನ್ಕರಾಲಾ ರೌದ್ರರೂಪಿಣಃ ॥ ೧೪ ॥

---

೧೧. ಹೀಗೆ ಪ್ರದ್ಯುಮ್ನನು ನುಡಿಯುತ್ತಲೇ ಆ ಶಕುನಿಯು “ ಓ ಪ್ರದ್ಯುಮ್ನ ! ಹೇ ಮಹಾಬಾಹು ! ನೀನೇ ನಿಜವಾಗಿಯೂ ಜ್ಞಾನನಿಧಿಯು. ನಿನ್ನನ್ನು ನೋಡಿದ ಮಾತ್ರದಿಂದಲೇ ಮಾನವನು ಕೃತಕೃತ್ಯತೆಯನ್ನು ಪಡೆಯುವನು.

೧೨. ಯಾರು ನಿನ್ನೊಡನೆ ಕಲೆತು ಪ್ರತಿನಿತ್ಯವೂ ಸಂಭಾಷಣೆಯಲ್ಲಿ ತೊಡಗುವರೋ ಅಂಥವರ ಹಿರಿಮೆಯನ್ನು ವರ್ಣಿಸಲು ಚತುರ್ಮುಖಬ್ರಹ್ಮನಿಗೂ ಸಾಧ್ಯವಿಲ್ಲವು ” ಎಂದು ನುಡಿದನು.

೧೩. ಬಹುಲಾಶ್ವರಾಜೇಂದ್ರ ! ಈ ರೀತಿಯಾಗಿ ದೈತ್ಯರಾಜನಾದ ಆ ಶಕುನಿಯು ನುಡಿದು ತಾನು ಮಾಯೆಗಳೆಲ್ಲವನ್ನೂ ಚೆನ್ನಾಗಿ ಬಲ್ಲವನಾದುದರಿಂದ ಹಿಂದೆ ತಾನು ಮಯನೆಂಬ ದೈತ್ಯಶಿಲ್ಪಿಯಿಂದ ಕಲಿತಿದ್ದ ರೌರವವೆಂಬ ಅಸ್ತ್ರವನ್ನು ತನ್ನ ಧನುಸ್ಸಿನಲ್ಲಿ ಹೂಡಿ ಆ ಪ್ರದ್ಯುಮ್ನನ ಮೇಲೆ ಪ್ರಯೋಗಿಸಿದನು.

೧೪. ಆ ಅಸ್ತ್ರದಿಂದ ಅತ್ಯುಗ್ರವಾದ ವಿಷದಿಂದ ಕೂಡಿದ ಮಹಾಭಯಂಕರಗಳಾದ ಕ್ರೂರವಾದ ಭಾರಿ ಭಾರಿ ಹಾವುಗಳೂ, ಚೇಳುಗಳೂ ಕೋಟಿಗಟ್ಟಲೆ ಬರತೊಡಗಿದುವು.

ತೈರ್ದಂಶಿತಂ ಬಲಂ ಸರ್ವಂ ಫೂತ್ಕಾರೈರ್ಮೂರ್ಚ್ಛಿತಾಂ ಗತಂ |
ವೀಕ್ಷ್ಯ ಕಾರ್ಷ್ಣಿರ್ಮಹಾಬುದ್ಧಿರ್ಗರುಡಾಸ್ತ್ರಂ ಸಮಾದಧೇ || ೧೫ ||

ಕೋಟಿಶೋ ಗರುಡಾ ಬಾಣಾನ್ನೀಲಕಂಠಾಃ ಕಲಾಪಿನಃ |
ಅನ್ಯೇ ಚ ಪಕ್ಷಿಣೋ ಭೀಮಾ ನಿರ್ಗತಾಸ್ತಸ್ಯ ಪಶ್ಯತಃ || ೧೬ ||

ಅಗ್ರಸನ್ನುರಗಾನ್ಯುದ್ಧೇ ದಂದಶೂಕಾನ್ಸವೃಶ್ಚಿಕಾನ್ |
ತೀಕ್ಷ್ಣತುಂಡಾ ಬೃಹತ್ಪಕ್ಷಾಃ ಕ್ಷಣಾತ್ತೇಽದೃಶ್ಯತಾಂ ಗತಾಃ || ೧೭ ||

ದೈತ್ಯೋಽಪಿ ರಾಕ್ಷಸೀಂ ಮಾಯಾಂ ಗಾಂಧರ್ವೀಂ ಗೌಹ್ಯಕೀಂ ಪುನಃ |
ಪೈಶಾಚೀಂ ಸಂದಧೇ ರಾಜಞ್ಛಕುನಿರ್ಯುದ್ಧದುರ್ಮದಃ || ೧೮ ||

---

೧೫. ಅವುಗಳ ವಿಷಮಯವಾದ ಫೂತ್ಕಾರಗಳಿಗೆ ಗುರಿಯಾಗಿಯೂ, ಕಡಿತಕ್ಕೆ ಒಳಗಾಗಿಯೂ ತನ್ನ ಸೈನ್ಯವೆಲ್ಲವೂ ಎಚ್ಚರತಪ್ಪಿ ಹೋದುದನ್ನು ಕಂಡು ಮಹಾಪ್ರಾಜ್ಞನಾದ ಆ ಪ್ರದ್ಯುಮ್ನನು ತನ್ನ ಧನುಸ್ಸಿನಲ್ಲಿ ಗಾರುಡಾಸ್ತ್ರವನ್ನು ಸಂಧಾನ ಮಾಡಿದನು.

೧೬. ರಾಜೇಂದ್ರ ! ಆ ಅಸ್ತ್ರದಿಂದ ಆ ಪ್ರದ್ಯುಮ್ನನು ನೋಡುತ್ತಿರುವಂತೆಯೇ ಭಯಂಕರವಾದ ಆಕಾರವುಳ್ಳ ಗರುಡಪಕ್ಷಿಗಳೂ, ಕಪ್ಪುಗೊರಲಿನ ನವಿಲುಗಳೂ, ಇನ್ನೂ ಇತರ ವಿಧವಾದ ಪಕ್ಷಿಗಳೂ ಕೋಟಿಗಟ್ಟಲೆ ಹೊರಬಿದ್ದು ಬರತೊಡಗಿದುವು.

೧೭. ಅತಿಚೂಪಾದ ಕೊಕ್ಕಿನಿಂದಲೂ, ಭಾರಿಭಾರಿಯಾದ ರೆಕ್ಕೆಗಳಿಂದಲೂ ಕೂಡಿದ್ದ ಆ ಪಕ್ಷಿಗಳು ಕ್ಷಣಮಾತ್ರದಲ್ಲಿಯೇ ವಿಷಮಯವಾದ ಆ ಹಾವುಗಳನ್ನೂ, ಚೇಳುಗಳನ್ನೂ ನುಂಗಿಬಿಟ್ಟು ಕೂಡಲೇ ಕಣ್ಮರೆಯಾಗಿಬಿಟ್ಟುವು.

೧೮. ಹೀಗೆ ತನ್ನ ಅಸ್ತ್ರವು ವಿಫಲವಾದುದನ್ನು ಕಂಡು ಯುದ್ಧದಲ್ಲಿ ವಿಶೇಷವಾದ ಹೆಮ್ಮೆಯಿಂದ ಮೆರೆಯುತ್ತಿದ್ದ ಆ ದೈತ್ಯನು ಒಂದಾದ ಮೇಲೆ ಒಂದರಂತೆ ರಾಕ್ಷಸ, ಗಂಧರ್ವ, ಗುಹ್ಯಕ, ಪಿಶಾಚ, ಮಾಯೆಗಳನ್ನು ತನ್ನ ಧನುಸ್ಸಿನಲ್ಲಿ ಸಂಧಾನ ಮಾಡುತ್ತಾ ಬಂದನು.

ತದ್ಬಾಣನಿರ್ಗತಾ ಭೂತಾಸ್ತಥಾ ಪ್ರೇತಾಶ್ಚ ಕೋಟಿಶಃ ।
ಅಂಗಾರಾಸ್ಮಮುಚುಸ್ತೇ ವೈ ಕರಾಲಾಃ ಕೃಷ್ಣರೂಪಿಣಃ ॥ ೧೯ ॥

ಜ್ಞಾತ್ವಾಥ ತಾಮಸೀಂ ಮಾಯಾಂ ಪೈಶಾಚೀಂ ಮೀನಕೇತನಃ ।
ಸತ್ತ್ವಾಸ್ತ್ರಂ ಸಂದಧೇ ಬಾಣೇ ಯುದ್ಧಾಕಾಂಕ್ಷೀ ಹರೇಃ ಸುತಃ ॥ ೨೦ ॥

ತಸ್ಮಾದ್ವಿನಿರ್ಗತಾ ರಾಜನ್ಕೋಟಿಶೋ ವಿಷ್ಣುಪಾರ್ಷದಾಃ ।
ಜಘ್ನುಃ ಪೈಶಾಚೀಂ ತಾಂ ಮಾಯಾಂ ಪನ್ನಗೀಂ ಗರುಡೋ ಯಥಾ ॥ ೨೧ ॥

ಮಾಯಾಂ ದೈತ್ಯೋಽಪಿ ಮಾಯಾವೀ ಗೌಹ್ಯಕೀಂ ಸಂದಧೇ ಪುನಃ ।
ಸಂಭೂತಾಃ ಕೋಟಿಶೋ ಮೇಘಾ ಗರ್ಜಂತೋ ಭೀಮರೂಪಿಣಃ ॥ ೨೨ ॥

---

೧೯. ಆ ಬಾಣದಿಂದ ಕೋಟಿಸಂಖ್ಯೆಯಲ್ಲಿ ತಮ್ಮ ಕಪ್ಪಾದ ಆಕೃತಿಯಿಂದ ಎಂಥವರಿಗೂ ಎದೆಯು ನಡುಕವನ್ನುಂಟುಮಾಡುವ ಅತ್ಯುಗ್ರವಾದ ಭೂತಗಳೂ, ಪ್ರೇತಗಳೂ ಹೊರಬಿದ್ದು ಕೆಂಡಗಳನ್ನು ಕಾರುತ್ತಾ ಬಂದವು.

೨೦. ಅದನ್ನು ಕಂಡು "ಇದು ತಾಮಸವಾದ ಪೈಶಾಚವೆಂಬ ಮಾಯೆಯೇ ಸರಿ" ಎಂಬುದಾಗಿ ನಿರ್ಧರಿಸಿ ಪ್ರದ್ಯುಮ್ನನು ಜಯಾಪೇಕ್ಷೆಯಿಂದ ಸಾತ್ವಿಕವಾದ ವೈಷ್ಣವಾಸ್ತ್ರವನ್ನು ಪ್ರಯೋಗಿಸಿದನು.

೨೧. ಕೂಡಲೇ ಆ ಅಸ್ತ್ರದಿಂದ ಕೋಟಿಸಂಖ್ಯೆಯಲ್ಲಿ ವಿಷ್ಣುದೂತರು ಹೊರಬಿದ್ದು ಹಾವನ್ನು ಗರುಡನು ಕೊಲ್ಲುವಂತೆ ಆ ಪೈಶಾಚ ಮಾಯೆಯನ್ನು ಸದೆಬಡಿದು ಬಿಟ್ಟರು.

೨೨. ಅದನ್ನು ಕಂಡು ಮಾಯಾವಿಯಾದ ಆ ದೈತ್ಯನು ಗೌಹ್ಯಕ ಮಾಯೆಯನ್ನು ತನ್ನ ಧನುಸ್ಸಿನಲ್ಲಿ ಸಂಧಾನಮಾಡಿದನು. ಅದರಿಂದ ಅತಿಭಯಂಕರವಾದ ಆಕಾರವುಳ್ಳ ಮೇಘಗಳು ಗಟ್ಟಿಯಾಗಿ ಗರ್ಜನೆಮಾಡುತ್ತಾ ಕೋಟಿಸಂಖ್ಯೆಯಲ್ಲಿ ಹೊರಬಿದ್ದುವು.

ವಿಷ್ಠಾಂ ಮೂತ್ರಂ ಚ ರುಧಿರಂ ಮೇದೋ ಮಜ್ಜಾಸ್ಥಿವರ್ಷಿಣಃ ।
ತ್ಞಾಜ್ಞಾಥ ಗೌಹ್ಯಕೀಂ ಮಾಯಾಂ ಪ್ರದ್ಯುಮ್ನೋ ಭಗವಾನ್ಹರಿಃ ॥ ೨೩ ॥

ತನ್ನಾಶಾರ್ಥಂ ಮಹಾರಾಜ ಕೋಲಾಸ್ತ್ರಂ ಸಂದಧೇ ತ್ರಿಷೌ ।
ತದ್ಬಾಣಾದ್ಯಜ್ಞವಾರಾಹೋ ನಿರ್ಗತೋ ಘುರ್ಘುರಸ್ವನಃ ॥ ೨೪ ॥

ಸಟಾ ವಿಧೂಯ ವೇಗೇನ ದಂಷ್ಟ್ರಯಾ ತೀಕ್ಷ್ಣಯಾ ಘನಾನ್ ।
ವಿದಾರಯನ್ರಣೇ ರೇಜೇ ವೇಣೂನ್ಮತ್ತಗಜೋ ಯಥಾ ॥ ೨೫ ॥

ದೈತ್ಯೋಽಥ ಮಾಯಾಂ ಗಾಂಧರ್ವೀಂ ಚಕಾರ ರಣಮಂಡಲೇ ।
ಯುದ್ಧಂ ನ ದೃಶ್ಯತೇ ತದ್ವದ್ಧೇಮಸೌಧಾನಿ ಕೋಟಿಶಃ ॥ ೨೬ ॥

---

೨೩. ಆ ಮೇಘಗಳು ಪ್ರದ್ಯುಮ್ನಸೇನೆಯ ಮೇಲೆ ಮಲಮೂತ್ರಗಳನ್ನೂ, ರಕ್ತ, ಮೇದಸ್ಸು, ಮಜ್ಜೆ, ಅಸ್ಥಿ ಮುಂತಾದ ಅಸಹ್ಯಕರವಾದ ಶರೀರಾಂತರ್ಗತವಾದ ಧಾತುಗಳನ್ನೂ ವರ್ಷಿಸುತ್ತಾ ಬಂದುವು

೨೪. ಆಗ ಅದನ್ನು ಅಡಗಿಸಲು ತನ್ನ ಧನುಸ್ಸಿನಲ್ಲಿ ಸೂಕರಾಸ್ತ್ರವನ್ನು ಪ್ರದ್ಯುಮ್ನನು ಸಂಧಾನಮಾಡಿದನು. ಆ ಅಸ್ತ್ರದಿಂದ ಸಾಕ್ಷಾತ್ ಯಜ್ಞವರಾಹ ಮೂರ್ತಿಯೇ ಘುರಘುರನೆ ಸದ್ದುಮಾಡುತ್ತಾ ಆವಿರ್ಭವಿಸಿದನು.

೨೫. ಆ ವರಾಹನು ತನ್ನ ತಲೆಕೂದಲುಗಳನ್ನು ಕೊಡವಿಕೊಂಡು ಮದ್ದಾನೆಯು ಬಿದಿರು ಮೆಳೆಗಳನ್ನು ಮುರಿದಿಕ್ಕುವಂತೆ ತೀಕ್ಷ್ಣವಾದ ತನ್ನ ಕೋರೆದಾಡೆಗಳಿಂದ ಮೋಡಗಳನ್ನು ಭೇದಿಸುತ್ತಾ ಶೋಭಿಸಿದನು.

೨೬. ಈ ರೀತಿ ತನ್ನ ಅಸ್ತ್ರವು ಪ್ರತಿಹತವಾದುದನ್ನು ಕಂಡು ಆ ದೈತ್ಯನು ಗಂಧರ್ವಮಾಯೆಯನ್ನು ಪ್ರಯೋಗಿಸಿದನು. ಅದರ ಪ್ರವಾಹದಿಂದ ಆ ರಣರಂಗದಲ್ಲಿ ಯುದ್ಧವೇ ಕಾಣಿಸದೆ ಸ್ವರ್ಣನಿರ್ಮಿತಗಳಾದ ಉಪ್ಪರಿಗೆಗಳು ಅಸಂಖ್ಯಾತವಾಗಿ ಕಾಣಬಂದುವು.

ವಸ್ತ್ರಾಲಂಕಾರಯುಕ್ತಾನಿ ಬಭೂವುಃ ಪಶ್ಯತಾಂ ಸತಾಂ ।
ವಿದ್ಯಾಧರ್ಯಶ್ಚ ಗಂಧರ್ವಾ ಗಾಯಂತ್ಯೋ ನೃತ್ಯತತ್ಪರಾಃ ॥ ೨೭ ॥

ಮೃದಂಗತಾಲವಾದಿತ್ರೈರ್ಮನೋಹನ್ಯೈ ರಾಗಮಿಶ್ರಿತೈಃ ।
ಹಾವಭಾವಕಟಾಕ್ಷೈಶ್ಚ ತೋಷಯಂತ್ಯೋ ಜನಾನ್ನೃಪ ॥ ೨೮ ॥

ಮೋಹಿನ್ಯಃ ಸುಂದರೀ ರಾಮಾಃ ಶ್ಯಾಮಾಃ ಕಮಲಲೋಚನಾಃ ।
ತಾಸಾಂ ಲಾವಣ್ಯರಾಗಾಭ್ಯಾಂ ಮೋಹಂ ಯಾತೇಷು ವೃಷ್ಣಿಷು ॥ ೨೯ ॥

ಗಾಂಧರ್ವೀಂ ಮೋಹಿನೀಂ ಮಾಯಾಂ ಜ್ಞಾತ್ವಾ ಕಾರ್ಷ್ಣಿರ್ಮಹಾಬಲಃ ।
ಸಂದಧೇ ತತ್ಪ್ರಹಾರಾರ್ಥೇ ಜ್ಞಾನಾಸ್ತ್ರಂ ರಣಮಂಡಲೇ ॥ ೩೦ ॥

---

೨೭. ಆ ಮನೆಗಳು ದಿವ್ಯವಾದ ವಸ್ತ್ರಗಳಿಂದಲೂ, ಆಭರಣಗಳಿಂದಲೂ, ಅಲಂಕೃತವಾಗಿದ್ದುವು. ಅಲ್ಲಿ ವಿದ್ಯಾಧರಿಯರೂ, ಗಂಧರ್ವಾಂಗನೆಯರೂ ಮಧುರವಾಗಿ ಹಾಡುತ್ತಾ ನರ್ತನದಲ್ಲಿ ತಲ್ಲೀನರಾಗಿದ್ದರು.

೨೮. ಆ ಲಲನೆಯರು ಮನೋಹರವಾದ ಮೃದಂಗ, ತಾಲ ಮೊದಲಾದ ನಾಲ್ಕುಬಗೆಯ ವಾದ್ಯಗಳಿಂದಲೂ ರಮಣೀಯವಾದ ರಾಗಗಳಿಂದಲೂ ಹಾವ ಭಾವ ಸೂಚಕವಾದ ಕುಡಿನೋಟಗಳಿಂದಲೂ ಜನರೆಲ್ಲರನ್ನೂ ಸಂತೋಷಗೊಳಿಸುತ್ತಿದ್ದರು.

೨೯. ರಾಜೇಂದ್ರ! ಈ ರೀತಿಯಾಗಿ ತಮ್ಮ ಸೌಂದರ್ಯದಿಂದ ಸಕಲರನ್ನೂ ಮೋಹಗೊಳಿಸುತ್ತಾ ಕಮಲದಂತಹ ಕಣ್ಣುಗಳಿಂದ ಎಂತಹವರನ್ನೂ ಆಕರ್ಷಿಸುತ್ತಿದ್ದ ವಿಹಾರಶೀಲೆಯರಾದ ಆ ನವಯೌವನವತಿಯರ ಲಾವಣ್ಯದಿಂದಲೂ, ರಾಗಮಾಧುರ್ಯದಿಂದಲೂ ತನ್ನ ಕಡೆಯ ವೃಷ್ಣಿಗಳೆಲ್ಲರೂ ಮೋಹಪರವಶರಾಗಿರುವುದನ್ನು ಕಂಡು,

೩೦. ಆ ಪ್ರದ್ಯುಮ್ನನು ಇದು ಮೋಹಕವಾದ ಗಂಧರ್ವಮಾಯೆಯೇ ಸರಿಯೆಂದು ನಿಶ್ಚಯಿಸಿ ಅದನ್ನು ಶಮನಗೊಳಿಸಲು ಜ್ಞಾನಾಸ್ತ್ರವನ್ನು ತನ್ನ ಧನುಸ್ಸಿನಲ್ಲಿ ಸಂಧಾನಮಾಡಿದನು.

ಜ್ಞಾನೋದಯೇ ತದಾ ಜಾತೇ ಮೋಹನಾಶೋ ನೃಪೇಶ್ವರ ।
ನಾಶಂ ಗತಾಯಾಂ ಮಾಯಾಯಾಂ ಶಕುನಿಃ ಕ್ರೋಧಮೂರ್ಛಿತಃ ೩೧ ॥

ರಾಕ್ಷಸೀಂ ಸಂದಧೇ ಮಾಯಾಂ ಮಾಯಾವೀ ದೈತ್ಯಪುಂಗವಃ ।
ಸಪಕ್ಷೈಃ ಪರ್ವತೈ ರಾಜನ್ ಕ್ಷಣಾತ್ತಚ್ಛಾದಿತಂ ನಭಃ ॥ ೩೨ ॥

ಮಹಾಂಧಕಾರೋಽಭೂತ್ಪೃಥಿವ್ಯಾಂ ಪರಾರ್ಧಂ ಚಯುನ್ನೈರಿವ ।
ದಗ್ಧವೃಕ್ಷಶಿಲಾಸ್ಥೀನಿ ಕಬಂಧರುಧಿರಾಣಿ ಚ ॥ ೩೩ ॥

ಗದಾಪರಿಘನಿಸ್ತ್ರಿಂಶಮುಸಲಾದೀನಿ ಸರ್ವತಃ ।
ಅಂಬರಾದ್ಬಭ್ರಮುಃ ಶೈಲಾ ಮೇಘಾ ಇವ ವಿದೇಹರಾಟ್ ॥ ೩೪ ॥

---

೩೧. ರಾಜೇಂದ್ರ! ಜ್ಞಾನೋದಯವಾಯಿತೋ ಇಲ್ಲವೋ ಅಷ್ಟರಲ್ಲಿಯೇ ಆ ವೃಷ್ಣಿಗಳಿಗೆ ಕವಿದಿದ್ದ ಮೋಹವೆಲ್ಲವೂ ಮರೆಯಾಯಿತು. ಈ ರೀತಿ ತನ್ನ ಅಸ್ತ್ರವು ವಿಫಲವಾದುದನ್ನು ಕಂಡು ಮಾಯಾವಿಯಾದ ಆ ದೈತ್ಯನು ಮಿತಿಮೀರಿದ ಕೋಪವನ್ನು ತಾಳಿ,

೩೨. ರಾಕ್ಷಸ ಮಾಯೆಯನ್ನು ಸಂಧಾನಮಾಡಿದನು. ಕೂಡಲೇ ಅದರ ಪ್ರಭಾವದಿಂದ ಭಾರಿ ಭಾರಿ ರೆಕ್ಕೆಗಳುಳ್ಳ ಪರ್ವತಗಳು ಆಕಾಶವನ್ನೆಲ್ಲಾ ವ್ಯಾಪಿಸಿ ಮರೆಮಾಡಿಬಿಟ್ಟುವು.

೩೩–೩೪. ಅದರಿಂದ ಭೂಮಂಡಲವಲ್ಲೆತ್ತೆತ್ತಲೂ ಪರಾರ್ಧಸಂವತ್ಸರಗಳು ಕಳೆದನಂತರ ಸಂಭವಿಸುವಂತೆ ಭಾರಿಯಾದ ಕಗ್ಗತ್ತಲೆಯು ಕವಿದು ಆಗ ಅಂತರಿಕ್ಷದಿಂದ ಸುಟ್ಟುಹೋದ ಮರಗಳೂ, ಕಲ್ಲುಗಳೂ, ಮೂಳೆಗಳೂ, ರುಂಡವಿಲ್ಲದ ಮುಂಡಗಳೂ, ರಕ್ತಗಳೂ, ಗದೆ, ಪರಿಘ, ಕತ್ತಿ, ಒನಕೆ, ಮುಂತಾದ ಆಯುಧಗಳೂ, ಬೆಟ್ಟಗಳೂ ಮೋಡಗಳಂತೆ ಸುತ್ತುತ್ತಾ ಬೀಳತೊಡಗಿದುವು.

ರಕ್ಷೋಗಣಾಃ ಶೂಲಹಸ್ತಾಶ್ಛಿಂಧಿ ಭಿಂಧೀತಿ ವಾದಿನಃ ।
ಯಾತುಧಾನಾಶ್ಚ ಶತಶೋ ಭಕ್ಷಯಂತೋ ದ್ವಿಪಾನ್ಹಯಾನ್ ॥ ೩೫ ॥

ಸಿಂಹವ್ಯಾಘ್ರವರಾಹಾಂಶ್ಚ ದೃಶ್ಯಂತೇ ರಣಮಂಡಲೇ ।
ಮರ್ದಯಂತೋ ನಖೈರ್ನಾಗಾಂಶ್ಚರ್ವಯಂತೋ ವಪೂಂಷಿ ವೈ ॥ ೩೬ ॥

ಪಲಾಯಮಾನಂ ಸ್ವಬಲಂ ದೃಷ್ಟ್ವಾ ಕಾರ್ಷ್ಣಿರ್ಮಹಾಬಲಃ ।
ಜೇತುಂ ತಾಂ ರಾಕ್ಷಸೀಂ ಮಾಯಾಂ ನೃಸಿಂಹಾಸ್ತ್ರಂ ಸಮಾದಧೇ ॥ ೩೭ ॥

ಆವಿರ್ಭೂತೋ ಹರಿಸ್ಸಾಕ್ಷಾನ್ನೃಸಿಂಹೋ ರೌದ್ರರೂಪಧೃಕ್ ।
ಸ್ಫುರತ್ಸಟೋ ಲಲಜ್ಜಿಹ್ವೋ ನಖಲಾಂಗೂಲಭೂಷಿತಃ ॥ ೩೮ ॥

---

೩೫. ಮತ್ತು ನೂರಾರುಗಟ್ಟಲೆ ರಾಕ್ಷಸರು ಗುಂಪುಗುಂಪಾಗಿ ಬರುತ್ತಾ ಶೂಲಗಳನ್ನು ಧರಿಸಿ, ಹೊಡಿ, ಕಡಿ, ಸೀಳು ಎಂದು ಮುಂತಾಗಿ ಕೂಗುತ್ತಾ ಸೇನೆಯಲ್ಲಿದ್ದ ಆನೆಗಳನ್ನೂ ಕುದುರೆಗಳನ್ನೂ ತಿನ್ನತೊಡಗಿದರು.

೩೬. ಇವರ ಜೊತೆಗೆ ಆ ರಣಾಂಗಣದಲ್ಲಿ ಸಿಂಹಗಳೂ, ಹುಲಿಗಳೂ, ಕಾಡುಹಂದಿಗಳೂ ಪ್ರವೇಶಿಸಿ ತಮ್ಮ ಉಗುರುಗಳಿಂದಲೂ, ದಾಡೆಗಳಿಂದಲೂ ಆನೆಗಳನ್ನು ನುಚ್ಚುನೂರು ಮಾಡುತ್ತಾ ಅವುಗಳ ದೇಹಗಳನ್ನು ತಿನ್ನುತ್ತಾ ಬಂದುವು.

೩೭. ಈ ರೀತಿ ಗಾಸಿಗೊಳಗಾಗಿ ತನ್ನ ಸೇನೆಯು ಓಡತೊಡಗಿದುದನ್ನು ಕಂಡು ಕೃಷ್ಣಪುತ್ರನು ಆ ರಾಕ್ಷಸಮಾಯೆಯನ್ನು ನಿಗ್ರಹಿಸಲು ನೃಸಿಂಹಾಸ್ತ್ರವನ್ನು ಸಂಧಾನಮಾಡಿದನು.

೩೮. ಕೂಡಲೇ ಆ ಅಸ್ತ್ರದಿಂದ ನೃಸಿಂಹನು ಭಯಂಕರವಾದ ಆಕಾರದಿಂದ ಆವಿರ್ಭವಿಸಿದನು. ಆತನ ರೌದ್ರರೂಪವನ್ನೇನೆಂದು ವರ್ಣಿಸಲಿ! ಹೊಳೆಯುತ್ತಿರುವ ಕೇಸರಗಳು! ಹೊರಳುತ್ತಿರುವ ನಾಲಿಗೆ! ಭೀಕರವಾದ ಉಗುರು ಮತ್ತು ಬಾಲಗಳು! ಅಲುಗುತ್ತಿರುವ ಕೂದಲುಗಳು! ಭಯಂಕರವಾದ ಮುಖ! ಆ ಮುಖದಿಂದ ಬರುತ್ತಿರುವ ಭೀಕರವಾದ ಹುಂಕಾರ! ಇಂಥ ರೂಪದಿಂದ ಅವತರಿಸಿದ ಆ ನೃಸಿಂಹನು ಗರ್ಜಿಸುತ್ತಾ ರಣರಂಗದಲ್ಲಿ ನಿಂತನು.

ಲದ್ವಾಲೋ ಭೀಷಣಾಸೋಜ್ಯೇ ಹುಂಕಾರೇಣಾತಿಭೀಷಣಃ ।
ಸಿಂಹನಾದಂ ಚ ಕುರ್ವನ್ವೈ ಸಂಸ್ಥಿತೋ ರಣಮಂಡಲೇ ॥ ೩೯ ॥

ನನಾದ ತೇನ ಬ್ರಹ್ಮಾಂಡಂ ಸಪ್ತಲೋಕೈರ್ಬಿಲೈಸ್ಸಹ ।
ವಿಚೇಲುರ್ದಿಗ್ಗಜಾಸ್ತಾರಾ ರಾಜನ್ಭೂಖಂಡಮಂಡಲಂ ॥ ೪೦ ॥

ಗೃಹೀತ್ವಾ ಹ್ಯಂಬರೇ ಶೈಲಾನ್ಸವೃಕ್ಷಾನ್ನಖರೈಃ ಖರೈಃ ।
ಪಾತಯಾಮಾಸ ಭೂಪೃಷ್ಠೇ ದೈತ್ಯಾನಾಂ ಚ ಪ್ರಪಶ್ಯತಾಂ ॥ ೪೧ ॥

ರಕ್ಷೋಗಣಾನ್ಸಂಗೃಹೀತ್ವಾ ಪಾಟಯಾಮಾಸ ವೇಗತಃ ।
ಯಾತುಧಾನಗಣಾನ್ಪದ್ಭ್ಯಾಂ ಸ ಮಮರ್ದ ಹರಿರ್ಮೃಧೇ ॥ ೪೨ ॥

೩೯–೪೦. ಆ ಸಿಂಹನಾದದಿಂದ ಭೂಮಿಯೇ ಮೊದಲಾದ ಮೇಲಿನ ಏಳು ಲೋಕಗಳಿಂದಲೂ, ಅತಲವೇ ಮೊದಲಾದ ಕೆಳಗಿನ ಏಳು ಲೋಕಗಳಿಂದಲೂ ಕೂಡಿದ ಬ್ರಹ್ಮಾಂಡವೆಲ್ಲವೂ ತುಂಬಿಹೋಯಿತು. ಮತ್ತು ದಿಗ್ಗಜಗಳೂ, ಅಂತರಿಕ್ಷದಲ್ಲಿನ ನಕ್ಷತ್ರಗಳೂ, ಭೂಮಂಡಲವೂ ತಮ್ಮ ತಮ್ಮ ಸ್ಥಾನದಿಂದ ಚಲಿಸಿಹೋದುವು.

೪೧. ಆಗ ಆ ನರಸಿಂಹನು ದೈತ್ಯರೆಲ್ಲರೂ ನೋಡುತ್ತಿರುವಂತೆಯೇ ತನ್ನ ಕ್ರೂರವಾದ ಉಗುರುಗಳಿಂದ ಹಿಡಿದು ಆಕಾಶದಲ್ಲಿ ಹಾರಾಡುತ್ತಿದ್ದ ಮರಗಿಡಗಳಿಂದ ತುಂಬಿದ ಬೆಟ್ಟಗಳನ್ನು ನೆಲದ ಮೇಲೆ ಕೆಡವಿದನು.

೪೨. ರಾಕ್ಷಸರನ್ನು ಗುಂಪುಗುಂಪಾಗಿ ಹಿಡಿದು ಅವರೆಲ್ಲರನ್ನೂ ತನ್ನ ಕ್ರೂರವಾದ ಉಗುರುಗಳಿಂದ ಸೀಳಿಬಿಟ್ಟನು. ಯಾತುಧಾನ (ರಾಕ್ಷಸರ ಪ್ರಭೇದ)ರನ್ನು ತನ್ನ ಕಾಲುಗಳಿಂದ ತುಳಿದು ಅರೆದುಬಿಟ್ಟನು.

ಸಿಂಹಾನ್ವ್ಯಾಘ್ರಾನ್ವರಾಹಾಂಶ್ಚ ಸಂವಿದಾರ್ಯ ನಖೈಃ ಖರೈಃ ।
ಚಿಕ್ಷೇಪ ಗಗನೇ ವಿಷ್ಣುಸ್ತತ್ರೈವಾಂತರ್ದಧೇ ಪುನಃ ॥ ೪೩ ॥

ನಾಶಂ ಗತಾಯಾಂ ಮಾಯಾಯಾಂ ರಾಕ್ಷಸ್ಯಾಂ ರುಕ್ಮಿಣೀಸುತಃ ।
ಶಂಖಂ ದಧ್ಮೌ ವಿಜಯದಂ ಮೌಲೇಂದ್ರಂ ಚ ರಣಾಂಗಣೇ ॥ ೪೪ ॥

ಅಭೂಜ್ಜಯಜಯಾರಾವೋ ದುಂದುಭಿಧ್ವನಿಮಿಶ್ರಿತಃ ।
ಪ್ರದ್ಯುಮ್ನಸ್ಯೋಽಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೪೫ ॥

ಸ್ವಮಾಯಾಯಾಂ ನಿರ್ಗತಾಯಾಂ ಶಕುನಿರ್ದೈತ್ಯಪುಂಗವಃ ।
ಸರಥಃ ಸೈನಿಕೈಃ ಸಾರ್ಧಂ ತತ್ರೈವಾಂತರ್ಹಿತೋಽಭವತ್ ॥ ೪೬ ॥

---

೪೩. ಮತ್ತು ಸಿಂಹಗಳನ್ನೂ, ಹುಲಿಗಳನ್ನೂ, ಕಾಡುಹಂದಿಗಳನ್ನೂ ತನ್ನ ಕ್ರೂರವಾದ ಉಗುರುಗಳಿಂದ ಸೀಳಿಬಿಟ್ಟುದಲ್ಲದೆ ಅವನ್ನು ಆಕಾಶಕ್ಕೆಸೆದುಬಿಟ್ಟನು. ಹೀಗೆ ಕ್ಷಣಮಾತ್ರದಲ್ಲಿ ರಾಕ್ಷಸಮಾಯೆಯನ್ನು ನಿಗ್ರಹಿಸಿ ಆ ನರಸಿಂಹನು ಅಂತರ್ಧಾನವನ್ನು ಹೊಂದಿದನು.

೪೪. ಈ ರೀತಿ ರಾಕ್ಷಸ ಮಾಯೆಯೆಲ್ಲವೂ ಶಮನಹೊಂದಿದುದನ್ನು ಕಂಡು ಪ್ರದ್ಯುಮ್ನನು ಸಂತೋಷದಿಂದ ಮೌಲೇಂದ್ರವೆಂಬ ತನ್ನ ವಿಜಯಪ್ರದವಾದ ಶಂಖವನ್ನು ಊದಿದನು.

೪೫. ಆಗ ಎಲ್ಲೆಲ್ಲಿಯೂ ವಿಜಯಸೂಚಕವಾದ ನಗಾರಿಯ ನಾದಗಳೊಡನೆ ಜಯಜಯ ಎಂಬ ಸಂತೋಷ ಶಬ್ದಗಳು ಕೇಳತೊಡಗಿದುವು. ದೇವತೆಗಳು ಜಯಶೀಲನಾದ ಪ್ರದ್ಯುಮ್ನನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು.

೪೬. ಹೀಗೆ ತನ್ನ ಮಾಯೆಯು ವ್ಯರ್ಥವಾದುದನ್ನು ಕಂಡು ದೈತ್ಯೇಂದ್ರಿಯನಾದ ಶಕುನಿಯು ತನ್ನ ರಥದೊಡನೆಯೂ, ಸೈನ್ಯದೊಡನೆಯೂ ಅಲ್ಲಿಯೇ ಕಣ್ಮರೆಯಾಗಿಬಿಟ್ಟನು.

ಮಾಯಾಂ ಚಕಾರ ದೈತೇಯಿಾಂ ಮಯದೈತ್ಯಪ್ರದರ್ಶಿತಾಂ ।
ಹಸ್ತಿಶುಂಡಾಸಮಾಂ ಧಾರಾಂ ವರ್ಷಂತೋಽತಿತಡಿತ್ಸ್ವನಾಃ ॥ ೪೭ ॥

ಸಾಂವರ್ತಕಗಣಾ ಮೇಘಾ ಆಜಗ್ಮುಃ ಪಶ್ಯತಾಂ ಸತಾಂ ।
ಕ್ಷಣಾತ್ಸರ್ವೇ ಸಮುದ್ರಾಸ್ತೇ ಚಂಡವಾತೇನ ನೇಪಿತಾಃ ॥ ೪೮ ॥

ಕ್ಷುಭಿತಾ ರುಕ್ಮಸಂಘರ್ಷಾವರ್ತೈರ್ತಾವಿತಭೂರುಜಾಃ ।
ಭೂಮಂಡಲಂ ಸಪದಿ ತತ್ಪ್ಲಾವಿತಂ ಚಾತ್ಮಭಿಃ ಸಮಂ ॥ ೪೯ ॥

ದೃಷ್ಟ್ವಾಽಥ ಯಾದವಾಃ ಸರ್ವೇ ಪ್ರಾಪುಸ್ತತ್ರ ಭಯಂ ಬಹು ।
ವದಂತೋ ರಾಮಕೃಷ್ಣೇತಿ ವಿಸ್ಮೃತಸ್ವಪರಾಕ್ರಮಾಃ ॥ ೫೦ ॥

೪೭–೪೮. ಅನಂತರ ಅವನು ತನಗೆ ಮಯನು ತೋರಿಸಿದ್ದ ದೈತ್ಯೇಯ ಮಾಯೆಯನ್ನು ಯದುಸೇನೆಯ ಮೇಲೆ ಪ್ರಯೋಗಿಸಿದನು. ಆಗ ಅಲ್ಲಿರುವವರು ನೋಡುತ್ತಿರುವಂತೆಯೇ ಇದ್ದಕ್ಕಿದ್ದಂತೆ ಪ್ರಳಯಕಾಲದಲ್ಲಿ ಸೇರುವಂತಹ ಭಾರಿ ಭಾರಿ ಮೇಘಗಳು ಮಿಂಚುಗಳಿಂದಲೂ, ಸಿಡಿಲು ಗುಡುಗುಗಳಿಂದಲೂ ಕೂಡಿ ಆನೆಯ ಸೊಂಡಲಿನಂತೆ ದಪ್ಪನಾದ ಮಳೆ ಹನಿಗಳನ್ನು ಸುರಿಸುತ್ತಾ ಆಕಾಶವನ್ನೆಲ್ಲಾ ಆವರಿಸಿ ಬಿಟ್ಟುವು. ಕೂಡಲೇ ಭಯಂಕರವಾದ ಬಿರುಗಾಳಿಯಿಂದ ಸಮುದ್ರಗಳೆಲ್ಲವೂ ಕ್ಷಣಮಾತ್ರದಲ್ಲಿ ಅಲ್ಲೋಲಕಲ್ಲೋಲವಾದುವು.

೪೯. ಆ ಸಾಗರಗಳಲ್ಲಿ ದೊಡ್ಡ ದೊಡ್ಡ ಸುಳಿಗಳೆದ್ದು ಒಂದಕ್ಕೊಂದು ತಗುಲಿ ಉಜ್ಜುತ್ತಾ ಮೇರೆಗಳನ್ನೂ ಮಿಾರಿ ಹರಿದು ದಡಗಳು ಕುಸಿಯುವಂತೆ ಮಾಡಿದುವು. ಕೂಡಲೇ ಭೂಮಂಡಲವೂ ತಾವೂ ಎಲ್ಲರೂ ಆ ಸಾಗರಜಲದಿಂದ ಕೊಚ್ಚಿಕೊಂಡು ಹೋಗುವಂತಾದುದನ್ನು ಕಂಡು,

೫೦. ಯದುವೀರರೆಲ್ಲರೂ ವಿಶೇಷವಾಗಿ ಹೆದರಿಕೆಯಿಂದ ತಲ್ಲಣಿಸುತ್ತಾ ತಮ್ಮ ತಮ್ಮ ಪರಾಕ್ರಮಗಳನ್ನೂ ಮರೆತು ರಾಮಾ! ಕೃಷ್ಣಾ! ಎಂದು ಹಂಬಲಿಸುತ್ತಾ ಏನು ಮಾಡಲೂ ಸಾಗದೆ ಕ್ಷಣಮಾತ್ರದಲ್ಲಿ ಸೋತುಹೋದರು.

ಕ್ಷಣಮಾತ್ರೇಣ ರಾಜೇಂದ್ರ ತೂಷ್ಣೀಂಭೂತಾಃ ಪರಾಜಿತಾಃ ।
ತದಾ ಕಾರ್ಷ್ಣಿರ್ಮಹಾಬಾಹುಃ ಕೋದಂಡೇ ಚಂಡವಿಕ್ರಮೇ ॥
ಬಾಣಂ ನಿಧಾಯ ಸಹಸಾ ಶ್ರೀಕೃಷ್ಣಾಸ್ತ್ರಂ ಸಮಾದಧೇ ॥ ೫೧ ॥

ನವಾರ್ಕಕೋಟಿದ್ಯುತಿಮುಸ್ಮಹನ್ಮಹೋ
ವೀರಂ ಜಯನ್ಮೈಥಿಲ ನೈ ದಿಶೋ ದಶ ।
ಸಮಾಗತಂ ತತ್ರ ಕುಶಸ್ಥಲೀಪುರಃ
ಸ್ವಯಂ ಪರಂ ಸ್ವಾರ್ಥಮಿವಾತ್ಮವಾಂಛಿತಂ ॥ ೫೨ ॥

ತಸ್ಮಿನ್ಪರೇ ತೇಜಸಿ ನೂತನಾಂಬುದ-
ಚ್ಛವಿಂ ಸುವರ್ಣಾಂಬುಜರೇಣುವಾಸಸಂ ।
ಭೃಂಗಾವಲೀಕೂಜಿತಕುಂತಲಾವಲಿಂ
ಸ್ರಜಂ ದಧಾನಂ ನವ ವೈಜಯಂತೀಂ ॥ ೫೩ ॥

---

೫೧. ಅದನ್ನು ಕಂಡು ಮಹಾಬಾಹುವಾದ ಪ್ರದ್ಯುಮ್ನನು ಅದ್ಭುತ ಪರಾಕ್ರಮದಿಂದ ಮೆರೆಯುತ್ತಿರುವ ತನ್ನ ಧನುಸ್ಸಿನಲ್ಲಿ ಬಾಣವೊಂದನ್ನು ಹೂಡಿ ಅದರಲ್ಲಿ ಶ್ರೀಕೃಷ್ಣಾಸ್ತ್ರವನ್ನು ಅನುಸಂಧಾನಮಾಡಿದನು.

೫೨. ಓ ಮಿಥಿಲೇಶ್ವರ! ಆ ಅದ್ಭುತವನ್ನೇನೆಂದು ಹೇಳಲಿ! ಕೂಡಲೇ ತಾನು ಬಯಸಿದ ಮನೋರಥವೇ ಪ್ರತ್ಯಕ್ಷವಾಯಿತೋ ಎನ್ನುವಂತೆ ಆಗ ತಾನೇ ಉದಯಿಸುತ್ತಿರುವ ಕೋಟಿಸೂರ್ಯರಿಗೆಣೆಯಾದ ಹೊಳಪಿನಿಂದ ಕೂಡಿ ಹತ್ತು ದಿಕ್ಕುಗಳನ್ನೂ ಬೆಳಗುತ್ತಾ ಇರುವಂತಹ ಭಾರಿಯಾದ ತೇಜಸ್ಸೊಂದು ದ್ವಾರಕಾ ನಗರಿಯಿಂದ ಹೊರಟು ಆ ಯುದ್ಧರಂಗದಲ್ಲಿ ಬಂದಿಳಿಯಿತು.

೫೩. ಆ ಅದ್ಭುತವಾದ ತೇಜೋಮಂಡಲದ ನಡುವೆ ಪರಮಪುರುಷನಾದ ಶ್ರೀಕೃಷ್ಣನು ಆವಿರ್ಭವಿಸಿದನು. ರಾಜೇಂದ್ರ! ಆ ದಿವ್ಯಸೌಂದರ್ಯವೇನೆಂದು ವರ್ಣಿಸಲಿ! ವರ್ಷಾಕಾಲದಲ್ಲಿ ಹೊಸದಾಗಿ ಮೂಡಿಬರುವ ಮೇಘದಂತೆ ಶ್ಯಾಮಲವಾದ ಕಾಂತಿ! ಚಿನ್ನದ ಕಮಲದ ಪರಾಗಗಳಂತೆ ಹೊಂಬಣ್ಣದಿಂದ ಥಳಥಳಿಸುವ ಪೀತಾಂಬರವೆಂಬ ಪಟ್ಟೆಮಡಿ! ಭ್ರಮರಗಳಂತೆ ಕಪ್ಪಾಗಿ ಸುರುಳಿ ಸುರುಳಿಯಾಗಿರುವ ಮುಂಗುರುಳು! ಕುತ್ತಿಗೆಯಲ್ಲಿ ಧರಿಸಿರುವ ವೈಜಯಂತಿಯೆಂಬ ಮಾಲಿಕೆ!

ಶ್ರೀವತ್ಸರತ್ನೋತ್ತಮಚಾರುವಕ್ಷಸಂ
ಚತುರ್ಭುಜಂ ಪದ್ಮವಿಶಾಲವೀಕ್ಷಣಂ ।
ಸ್ಫುರತ್ಕಿರೀಟಂ ವರಹಾರನೂಪುರಂ
ಲಸನ್ನವಾರ್ಕದ್ಯುತಿಹೇಮಕುಂಡಲಂ || ೫೪ ||

ವಿಲೋಕ್ಯ ದೇವಂ ಯದವೋಽತಿಹರ್ಷಿತಾಃ
ಪರಂ ಪ್ರಣೇಮುಃ ಕೃತಹಸ್ತಸಂಪುಟಾಃ ।
ಪ್ರಚಕ್ರಿರೇ ನೈಥಿಲ ಪುಷ್ಪವರ್ಷಿಣೋಽ–
ಮರಾ ಜಯಾರಾವಮತೀವ ಸರ್ವತಃ || ೫೫ ||

ತದೈತ್ಯ ಶಕುನೇಃ ಸಜ್ಯಂ ಕೋದಂಡಂ ಪ್ರಾಚ್ಛಿನದ್ರುಷಾ ।
ಶಾರ್ಙ್ಗಮುಕ್ತೇನ ತಚ್ಛಾರ್ಙ್ಗೀ ಬಾಣೇನೈಕೇನ ಲೀಲಯಾ || ೫೬ ||

---

೫೪. ಸುಂದರವಾದ ಎದೆಯ ಮೇಲೆ ಶೋಭಿಸುತ್ತಿರುವ ಶ್ರೀವತ್ಸವೆಂಬ ಮಚ್ಚೆ! ಅದರ ಬಳಿಯಲ್ಲಿಯೇ ಥಳಥಳಿಸುತ್ತಿರುವ ಕೌಸ್ತುಭವೆಂಬ ದಿವ್ಯರತ್ನ! ನಾಲ್ಕು ತೋಳುಗಳು! ಕಮಲದಂತೆ ವಿಶಾಲವಾಗಿರುವ ಕಣ್ಣುಗಳು! ಹೊಳೆಯುತ್ತಿರುವಂತಹ ಕಿರೀಟ! ಅನರ್ಘವಾದ ಹಾರಗಳು! ಅಂದವಾದ ಕಾಲುಂದಿಗೆ! ಆಗತಾನೇ ಉದಯಿಸುತ್ತಿರುವ ಬಾಲಸೂರ್ಯನಂತೆ ನಸುಗೆಂಪಾದ ಕಾಂತಿಯನ್ನು ಬೀರುತ್ತಿರುವ ಮನೋಹರವಾದ ಕಡುಕು!

೫೫. ಇಂತಹ ಸೌಂದರ್ಯದಿಂದ ಮೆರೆಯುತ್ತಿರುವ ತಮ್ಮ ಪ್ರಭುವಾದ ಶ್ರೀಕೃಷ್ಣನನ್ನು ಕಾಣುತ್ತಲೇ ಆ ಯಾದವರೆಲ್ಲರೂ ಮಿತಿಮೀರಿದ ಸಂತೋಷವನ್ನು ತಾಳಿ ಕೈಗಳನ್ನು ಮುಗಿದುಕೊಂಡು ತಟಕ್ಕನೆ ನಮಸ್ಕಾರವನ್ನು ಮಾಡಿದರು. ಆಗ ದೇವತೆಗಳು ಜಯಜಯ ಎಂಬುದಾಗಿ ನುಡಿಯುತ್ತಾ ಎತ್ತೆತ್ತಲೂ ಹೂವಿನ ಮಳೆಯನ್ನು ಸುರಿಸಿದರು.

೫೬. ಆ ಶ್ರೀಕೃಷ್ಣನು ಅಲ್ಲಿಗೆ ಬಂದ ಕೂಡಲೇ ತನ್ನ ಶಾರ್ಙ್ಗವೆಂಬ ಧನುಸ್ಸಿನಲ್ಲಿ ಬಾಣವೊಂದನ್ನು ಹೂಡಿ ಅದರಿಂದ ಆ ಶಕುನಿಯ ಧನುಸ್ಸನ್ನು ಅದರ ಹೆದೆಯ ಸಮೇತವಾಗಿ ಲೀಲಾಮಾತ್ರದಿಂದ ಕತ್ತರಿಸಿಬಿಟ್ಟನು.

ಸಭಿನ್ನಧನ್ವಾ ಶಕುನಿಸ್ತ್ಯಕ್ತ್ವಾ ಯುದ್ಧಂ ಪ್ರಧರ್ಷಿತಃ ।
ಹೇತಿಸಂಹತಿಮಾನೇತುಂ ಯಯೌ ಚಂದ್ರಾವತೀಂ ಪುರೀಂ　　　॥ ೫೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದ ಬಹುಲಾಶ್ವಸಂವಾದೇ ಶ್ರೀಕೃಷ್ಣಾಗಮನಂ ನಾಮೈಕೋನಚತ್ವಾರಿಂಶೋಽಧ್ಯಾಯಃ

---

೫೭. ಆ ಶಕುನಿದೈತ್ಯನು ತನ್ನ ಬಿಲ್ಲು ಕತ್ತರಿಸಿಹೋದುದರಿಂದ ಸೋತು ಹೋಗಿ ತನಗೆ ಬೇಕಾದ ಆಯುಧಗಳನ್ನು ತರುವುದಕ್ಕೋಸ್ಕರ ತನ್ನ ಊರಾದ ಚಂದ್ರಾವತಿಗೆ ಹೊರಟುಬಿಟ್ಟನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಕೃಷ್ಣಾಗಮನವೆಂಬ ಮೂವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಚತ್ವಾರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ದೈತ್ಯೇ ಗತೇಽಥ ಶಕುನೌ ಭಗವಾನ್ಕಮಲೇಕ್ಷಣಃ ।
ಕಾರ್ಷ್ಣ್ಯಾದಿಯಾದವಾನ್ಸರ್ವಾನಾಹೂಯೇತ್ಥಮುವಾಚ ಹ ॥ ೧ ॥

॥ ಶ್ರೀ ಭಗವಾನುವಾಚ ॥

ದೈತ್ಯೋಽಯಂ ಶಕುನಿಃ ಪೂರ್ವಂ ಸುಮೇರೋಃ ಪಾರ್ಶ್ವ ಉತ್ತರೇ ।
ಚತುರ್ಯುಗಂ ವರ್ಜಿತಾನ್ನಸ್ತಪಸಾತೋಷಯಚ್ಛಿವಂ ॥ ೨ ॥

ನಲವತ್ತನೆಯ ಅಧ್ಯಾಯವು

೧. ಬಹುಲಾಶ್ವರಾಜೇಂದ್ರ ! ಶಕುನಿಯು ಹೊರಟುಹೋದನಂತರ ಕಮಲದಂತೆ ಸುಂದರವಾದ ಕಣ್ಣುಗಳುಳ್ಳ ಆ ಕೃಷ್ಣನು ಪ್ರದ್ಯುಮ್ನನೇ ಮೊದಲಾದ ಯಾದವರನ್ನು ಕರೆದು ಈ ರೀತಿಯಾಗಿ ಹೇಳಿದನು.

೨. "ಹಿಂದೆ ಈ ಶಕುನಿದೈತ್ಯನು ಮೇರುಪರ್ವತಕ್ಕೆ ಉತ್ತರದಲ್ಲಿ ನಾಲ್ಕು ಯುಗಗಳಷ್ಟು ಕಾಲ ಅನ್ನಾಹಾರಗಳನ್ನು ತೊರೆದು ತಪಸ್ಸುಮಾಡುತ್ತಾ ಶಂಕರನನ್ನು ಮೆಚ್ಚಿಸಿದನು.

ಚತುರ್ಯುಗೇ ವ್ಯತೀತೇ ತು ಸಾಕ್ಷಾದ್ದೇವೋ ಮಹೇಶ್ವರಃ ।
ಪ್ರಸನ್ನೋ ದರ್ಶನಂ ದತ್ವಾ ವರಂ ಬ್ರೂಹೀತ್ಯುವಾಚ ಹ ॥ ೩ ॥

ನತ್ವಾಽಥ ಶಕುನಿರ್ದೈತ್ಯಃ ಕೃತಾಂಜಲಿಪುಟಃ ಶನೈಃ ।
ಹೃಷ್ಟರೋಮಾಶ್ರುಪೂರ್ಣಾಕ್ಷಃ ಪ್ರಾಹ ಗದ್ಗದಯಾ ಗಿರಾ ॥ ೪ ॥

ಮೃತಃ ಸನ್ಭೂಮಿಸಂಸ್ಪರ್ಶಾದ್ಭೂಯಾತ್ಸಂಜೀವಿತಃ ಪ್ರಭೋ ।
ಆಕಾಶೇ ಮೇ ಮೃತಿರ್ದೇವ ಮಾ ಭೂಯಾದ್ಘಟಿಕಾದ್ವಯಂ ॥ ೫ ॥

ದೈತ್ಯೇನೋಕ್ತೋ ಹರಃ ಸಾಕ್ಷಾದ್ದತ್ವಾ ತಸ್ಮೈ ವರದ್ವಯಂ ।
ಪಂಜರಸ್ಥಂ ಶುಕಂ ದತ್ವಾ ಪ್ರಾಹ ದೈತ್ಯಂ ನತಾನನಂ ॥ ೬ ॥

---

೩. ಆ ಶಕುನಿಯು ತಪಸ್ಸಿಗೆ ಆರಂಭಿಸಿ ನಾಲ್ಕು ಯುಗಗಳು ಕಳೆದು ಹೋದುವು. ಅನಂತರ ಅವನ ತಪಸ್ಸಿಗೆ ಒಲಿದು ಮಹೇಶ್ವರನೇ ಪ್ರತ್ಯಕ್ಷನಾಗಿ ವರವನ್ನು ಕೇಳು" ಎಂದು ಹೇಳಿದನು.

೪. ಆ ಶಂಕರನನ್ನು ಕಾಣುತ್ತಲೇ ಶಕುನಿದೈತ್ಯನು ಸಂತೋಷದಿಂದಲೂ, ಭಕ್ತಿಯಿಂದಲೂ ಆತನನ್ನು ನಮಸ್ಕರಿಸಿ ಕೈಗಳನ್ನು ಮುಗಿದುಕೊಂಡು ಮೈಯಲೆಲ್ಲಾ ರೋಮಾಂಚನವನ್ನು ತಳೆದು ಆನಂದಾಶ್ರುಗಳನ್ನು ಸುರಿಸುತ್ತಾ ಗದ್ಗದ ವಾಣಿಯಿಂದ ಮೆಲ್ಲನೆ ಇಂತೆಂದು ನುಡಿದನು.

೫. "ಎಲೈ ಪ್ರಭುವೇ! ನಾನು ಸಾವಿಗೆ ತುತ್ತಾಗಿದ್ದರೂ ನೆಲದ ಮೇಲೆ ಬಿದ್ದೊಡನೆಯೇ ಮರಳಿ ನಾನು ಜೀವಿಸುವಂತೆ ಆಗಬೇಕು. ಆಕಾಶದಲ್ಲಿಯೂ ಸಹ ಎರಡು ಘಳಿಗೆಗಳ ಕಾಲ ನನಗೆ ಸಾವು ಉಂಟಾಗದಿರಬೇಕು."

೬. ಹೀಗೆಂದು ಆ ದೈತ್ಯನು ವರವನ್ನು ಪ್ರಾರ್ಥಿಸಲು ಹಾಗೆಯೇ ಆಗಲೆಂದು ಆವನು ಕೇಳಿದ ವರಗಳೆರಡನ್ನೂ ಆ ಮಹೇಶನು ಅನುಗ್ರಹಿಸಿದನು. ಅನಂತರ ಆ ಶಿವನು ಪಂಜರದಲ್ಲಿಟ್ಟಿದ್ದ ಗಿಳಿಯೊಂದನ್ನು ಅವನಿಗೆ ಕೊಟ್ಟು ತಲೆಬಾಗಿ ನಿಂತಿದ್ದ ಅವನನ್ನು ಕುರಿತು ಮತ್ತೆ ಇಂತೆಂದನು.

ಜೀವಕಲ್ಪಂ ಶುಕಂ ಚೈನಂ ರಕ್ಷ ದೈತ್ಯ ಸದಾನಘ ।
ಅಸ್ಮಿನ್ಮೃತೇ ಚ ಜ್ಞಾತವ್ಯಂ ನಿಧನಂ ಸ್ವಂ ತ್ವಯಾಽಸುರ ॥ ೭ ॥

ಇತಿ ದತ್ವಾ ವರಂ ತಸ್ಮೈ ರುದ್ರಶ್ಚಾಂತರಧೀಯತ ।
ತಸ್ಮಾತ್ತಸ್ಯ ವಧೋ ದುರ್ಗೇ ಭವಿಷ್ಯತಿ ಶುಕೇ ಮೃತೇ ॥ ೮ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ವೀರಸದಸಿ ಭಗವಾನ್ದೇವಕೀಸುತಃ ।
ಸುಪರ್ಣಂ ಶೀಘ್ರಮಾಹೂಯ ಪ್ರಾಹ ಪ್ರಹಸಿತಾನನಃ ॥ ೯ ॥

॥ ಶ್ರೀ ಭಗವಾನುವಾಚ ॥

ಶೃಣು ತಾರ್ಕ್ಷ್ಯ ಮಹಾಬುದ್ಧೇ ಗಚ್ಛ ಚಂದ್ರಾವತೀಂ ಪುರೀಂ ।
ಶತಯೋಜನವಿಸ್ತೀರ್ಣಾಂ ದೈತ್ಯಸೇನಾಸಮಾಕುಲಾಂ ॥ ೧೦ ॥

---

೭. "ಎಲೈ ದೈತ್ಯನೇ! ಈ ಗಿಳಿಯು ನಿನ್ನ ಜೀವದಂತಿರುವುದು. ಇದನ್ನು ನೀನು ಸರ್ವಕಾಲದಲ್ಲಿಯೂ ಬಹು ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕು. ಈ ಗಿಳಿಯು ಏನಾದರೂ ಸಾವಿಗೀಡಾದಲ್ಲಿ ನಿನಗೆ ಮೃತ್ಯುವು ಒದಗಿತೆಂದು ತಿಳಿ."

೮. ಎಂಬುದಾಗಿ ಆ ದೈತ್ಯನಿಗೆ ವರವನ್ನಿತ್ತು ಆ ಶಿವನು ಅಂತರ್ಧಾನವನ್ನು ಹೊಂದಿದನು. ಎಲೈ ಯಾದವರಿರಾ! ಆದುದರಿಂದ ಈ ದೈತ್ಯನು ಸಾಯಬೇಕಾದರೆ ಅತಿದುರ್ಗಮವಾದ ಪ್ರದೇಶದಲ್ಲಿ ಸಂರಕ್ಷಿಸಲ್ಪಡುತ್ತಿರುವಂತಹ ಆ ಗಿಳಿಯು ಮೊದಲು ಸಾಯಬೇಕು."

೯. ಹೀಗೆಂಬುದಾಗಿ ವೀರಾಗ್ರಣಿಗಳಿಂದ ತುಂಬಿದ ಆ ಸಭೆಯಲ್ಲಿ ನುಡಿದು ಶ್ರೀಕೃಷ್ಣನು ತನ್ನ ವಾಹನವಾದ ಗರುಡನನ್ನು ಮನಸಾ ಆಹ್ವಾನಿಸಿದನು ಬಳಿಕ ತನ್ನ ಆಹ್ವಾನದಂತೆ ಅವನು ಬರುತ್ತಲೇ ನಗುನಗುತ್ತಾ,

೧೦. "ಎಲೈ ಬುದ್ಧಿಶಾಲಿಯಾದ ತಾರ್ಕ್ಷ್ಯನೇ! ನೀನೀಗಲೇ ಚಂದ್ರಾವತೀ ನಗರಕ್ಕೆ ಹೋಗು" ಎಂದು ಆಜ್ಞಾಪಿಸಲು ಗರುಡನು ಅಲ್ಲಿಗೆ ಹೊರಟನು. ರಾಜೇಂದ್ರ! ಆ ನಗರವು ನೂರು ಯೋಜನಗಳಷ್ಟು ವಿಸ್ತಾರವಾಗಿ ಹಬ್ಬಿರುವುದು. ಅವರಲ್ಲಿ ದೈತ್ಯಸೇನೆಗಳು ಕಿಕ್ಕಿರಿದು ಕಾಯುತ್ತಾ ಇರುವುವು.

ಪ್ರಾಸಾದೈರ್ಗಗನಸ್ಪರ್ಶೈರ್ಹೇಮರತ್ನಮನೋಹರೈಃ ।
ವಿಚಿತ್ರೋಪವನಾರಾಮೈಃ ಶೋಭಿತಾಂ ದೈತ್ಯಪುಂಗವೈಃ ॥ ೧೧ ॥

ದುರ್ಗೇ ದುರ್ಗೇ ದ್ವಾರದೇಶೇ ರಕ್ಷಿತಾಂ ದೈತ್ಯಪುಂಗವೈಃ ।
ತಾಂ ದ್ರಷ್ಟುಂ ಗರುಡೋ ರಾಜನ್ಸೂಕ್ಷ್ಮರೂಪಂ ದಧಾರ ಹ ॥ ೧೨ ॥

ಅಲಕ್ಷಿತಾ ದೈತ್ಯವೃಂದೈಃ ಪಶ್ಯನ್ಪ್ರಾಸಾದತೋಲಿಕಾಃ ।
ತೇಷೂತ್ಪತನ್ನುತ್ಪತಂಶ್ಚ ಶಕುನೇರ್ಮಂದಿರೇ ಗತಃ ॥ ೧೩ ॥

ಪ್ರೇಕ್ಷನ್ ಶುಕಂ ದೈತ್ಯಜೀವಂ ಕ್ಷಣಂ ತತ್ರ ಸ್ಥಿತೋಽಭವತ್ ।
ಯುದ್ಧಾರ್ಥಂ ದಂಶಿತಂ ತತ್ರ ಶಕುನಿಂ ದೈತ್ಯಪುಂಗವಂ ॥ ೧೪ ॥

---

೧೧. ಆ ನಗರದ ಉಪ್ಪರಿಗೆಗಳು ಚಿನ್ನದಿಂದಲೂ, ಬಗೆಬಗೆಯ ರತ್ನಗಳಿಂದಲೂ ನಿರ್ಮಿಸಲ್ಪಟ್ಟು ಆಕಾಶವನ್ನು ಸ್ಪರ್ಶಿಸುತ್ತಿರುವುವೋ ಎನ್ನುವಂತೆ ಎತ್ತರವಾಗಿರುವುವು. ಮತ್ತು ಆ ನಗರದ ಸೌಂದರ್ಯವನ್ನು ಮನೋಹರವಾದ ಉದ್ಯಾನಗಳೂ, ಕ್ರೀಡಾವನಗಳೂ ಮತ್ತಷ್ಟು ಹೆಚ್ಚಿಸುತ್ತಿರುವುವು.

೧೨. ಅಲ್ಲಿಯ ಪ್ರತಿಯೊಂದು ಆಯಕಟ್ಟಾದ ಸ್ಥಳದಲ್ಲಿಯೂ, ದ್ವಾರಪ್ರದೇಶಗಳಲ್ಲಿಯೂ ಬಲಾಢ್ಯರಾದ ದೈತ್ಯವೀರರು ನಿಂತು ಸರ್ವದಾ ಸಂರಕ್ಷಿಸುತ್ತಿರುವರು. ಇಂತಹ ಆ ನಗರವನ್ನು ಚೆನ್ನಾಗಿ ಪರೀಕ್ಷಿಸಿ ನೋಡಲು ಅನುಕೂಲವಾಗುವಂತೆ ಆ ಗರುಡನು ಸೂಕ್ಷ್ಮವಾದ ರೂಪವನ್ನು ಧರಿಸಿದನು.

೧೩. ಬಳಿಕ ಆ ಗರುಡನು ದೈತ್ಯರಿಗಾರಿಗೂ ಕಾಣಿಸದಂತೆ ಉಪ್ಪರಿಗೆಗಳನ್ನೂ ರಾಜಮಾರ್ಗಗಳನ್ನೂ ನೋಡುತ್ತಾ ಕೆಲವು ಕಡೆ ಮೇಲಕ್ಕೆ ಹಾರಿಹೋಗುತ್ತಲೂ, ಮತ್ತೆ ಕೆಲವು ಕಡೆ ಹಾರಿಬಂದು ಕುಳಿತುಕೊಳ್ಳಲೂ ಇದ್ದು ಕೊನೆಗೆ ಶಕುನಿಯ ಅರಮನೆಯನ್ನು ಪ್ರವೇಶಿಸಿದನು.

೧೪. ಆ ಅರಮನೆಯಲ್ಲಿ ಶಕುನಿಯ ಜೀವವೆನಿಸಿದ್ದ ಗಿಳಿಯನ್ನು ಹುಡುಕುತ್ತಾ ಒಂದು ಕ್ಷಣಕಾಲವಿದ್ದನು. ಆ ಸಮಯಕ್ಕೆ ಸರಿಯಾಗಿ ದೈತ್ಯೇಂದ್ರನಾದ ಶಕುನಿಯು ಯುದ್ಧಾರ್ಹವಾದ ಕವಚವನ್ನು ತೊಟ್ಟು,

ನಾನಾಶಸ್ತ್ರಧರಂ ವೀರಂ ಕ್ರೋಧಪೂರಿತಮಾನಸಂ ।
ಗೃಹೀತ್ವಾ ತಂ ಪರಿಕರೇ ಪ್ರಾಹ ರಾಜನ್ಮದಾಲಸಾ ॥ ೧೫ ॥

॥ ಮದಾಲಸೋವಾಚ ॥

ರಾಜನ್ಸರ್ವೇಽಪಿ ಸುಹೃದೋಽನುಕೂಲಾ ಭ್ರಾತರಸ್ತವ ।
ಮಾರಿತಾಃ ಸಂಗರೇ ಭರ್ತಃ ಪ್ರೋದ್ಭಟಾ ದೈತ್ಯಪುಂಗವಾಃ ॥ ೧೬ ॥

ಮಾ ಯಾಹಿ ಯೋದ್ಧುಂ ಯದುಭಿರಾಗತೋ ಭಗವಾನ್ಹರಿಃ ।
ದೇಹಿ ತಸ್ಮೈ ಬಲಿಂ ಸದ್ಯೋ ಯೇನ ಶ್ರೇಯೋ ಹ್ಯವಾಪ್ಸ್ಯಸಿ ॥ ೧೭ ॥

॥ ಶಕುನಿರುವಾಚ ॥

ಹನಿಷ್ಯಾಮಿ ಯದೂನ್ಸೈನ್ಯೈರ್ಮೇ ಹತಾ ಭ್ರಾತರೋ ಬಲಾತ್ ।
ಮೃತ್ಯುರ್ಮೇ ನಾಸ್ತಿ ಭೂಮಧ್ಯೇ ಶಿವಸ್ಯಾಪಿ ವರೇಣ ಮೇ ॥ ೧೮ ॥

---

೧೫. ಬಗೆಬಗೆಯ ಶಸ್ತ್ರಾಸ್ತ್ರಗಳನ್ನು ಧರಿಸಿ ಕೋಪದಿಂದ ಯುದ್ಧಕ್ಕೆಂದು ಹೊರಟಿದ್ದನು. ಆಗ ಆತನ ಪ್ರಿಯೆಯಾದ ಮದಾಲಸೆಯೆಂಬ ಮಡದಿಯು ಅವನ ನಡುಕಟ್ಟನ್ನು ಹಿಡಿದುಕೊಂಡು,

೧೬. "ರಾಜೇಂದ್ರ! ನಿನ್ನ ಇಷ್ಟದಂತೆಯೇ ನಡೆಯುತ್ತಿದ್ದ ನಿನ್ನ ಸ್ನೇಹಿತರಾದ ಅನೇಕ ಮಂದಿ ದೈತ್ಯವೀರರೂ ಮತ್ತು ಸಹೋದರರೂ ರಣರಂಗದಲ್ಲಿ ಶತ್ರುಗಳಿಂದ ಸಾವಿಗೀಡುಮಾಡಲ್ಪಟ್ಟಿರುವರು.

೧೭. ಆದುದರಿಂದ ನೀನು ಆ ಯದುಗಳೊಡನೆ ಯುದ್ಧಮಾಡುವುದಕ್ಕೆ ಹೋಗದಿರು. ಅಲ್ಲಿಗೆ ಸಾಕ್ಷಾತ್ ಶ್ರೀಕೃಷ್ಣನೇ ಬಂದಿರುವನು. ನಿನಗೆ ಈಗ ಒದಗಿರುವ ಈ ವಿಪತ್ತೆಲ್ಲವೂ ನಾಶವಾಗಿ ನೀನು ಶ್ರೇಯೋಭಾಗಿಯಾಗಬೇಕಾದರೆ ನೀನೀಗಲೇ ಆತನಿಗೆ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಹೋಗಿ ಒಪ್ಪಿಸು" ಎಂದು ಪ್ರಾರ್ಥಿಸಿದಳು.

೧೮. ಅವನ್ನು ಕೇಳಿ ಆ ದೈತ್ಯೇಂದ್ರನಾದ ಶಕುನಿಯು "ಈ ಯಾದವರನ್ನು ಕ್ಷಣಮಾತ್ರದಲ್ಲಿ ನನ್ನ ಸೇನೆಯಿಂದ ನಾಶಪಡಿಸಿಬಿಡುವೆನು. ನನ್ನ ಸಹೋದರರಾದರೋ ಬಲವಂತವಾಗಿ ಸಾವಿಗೆ ಗುರಿಮಾಡಲ್ಪಟ್ಟರು. ನನಗಂತೂ ಶಿವನ ಅನುಗ್ರಹದಿಂದ ಈ ಭೂಮಿಯ ಮೇಲೆ ಸಾವೆನ್ನುವುದೇ ಸಂಭವಿಸಲಾರದು.

ಉಪದ್ವೀಪೇ ಚಂದ್ರನಾಮ್ನಿ ಪತಂಗಃ ಪರ್ವತೇ ಶುಭೇ ।
ಮೇ ಜೀವರೂಪೀ ತು ಶುಕೋ ವರ್ತತೇ ಸಾಂಪ್ರತಂ ಪ್ರಿಯೇ ॥ ೧೯ ॥

ಶಂಖಚೂಡೇನ ಸರ್ಪೇಣ ರಕ್ಷಿತೋಽಹರ್ನಿಶಂ ಶುಕಃ ।
ಏತತ್ಕೋಽಪಿ ನ ಜಾನಾತಿ ಕಥಂ ಮೃತ್ಯುಶ್ಚ ಮೇ ಭವೇತ್ ॥ ೨೦ ॥

॥ ಶ್ರೀ ನಾರದ ಉವಾಚ ॥

ಶುಕವಾರ್ತಾಂ ತತಃ ಶ್ರುತ್ವಾ ಗರುಡೋ ದಿವ್ಯವಾಹನಃ ।
ಉಪದ್ವೀಪಂ ತು ಚಂದ್ರಾಖ್ಯಂ ಗಂತುಂ ತಸ್ಮಾನ್ಮನೋ ದಧೇ ॥ ೨೧ ॥

ಉತ್ಪತನ್ಗರುಡೋ ವೇಗಾತ್ಸಮುದ್ರಸ್ಯ ತಟೇ ಗತಃ ।
ದ್ವೀಪಂ ವಿಚಿನ್ವಶ್ಚಂದ್ರಾಖ್ಯಮಾಕಾಶೇ ವಿಚರನ್ಖಗಃ ॥ ೨೨ ॥

---

೧೯. ಚಂದ್ರವೆಂಬ ಹೆಸರಿನ ಉಪದ್ವೀಪವೊಂದಿರುವುದು. ಅಲ್ಲಿ ಮಂಗಳಕರವಾದ ಪರ್ವತವೊಂದಿರುವುದು. ಎಲೌ ಪ್ರಿಯೇ! ಆ ಪರ್ವತದಲ್ಲಿ ನನ್ನ ಜೀವವೆನಿಸಿದ ಗಿಳಿಯಿರುವುದು.

೨೦. ಆ ಗಿಳಿಯನ್ನು ಶಂಖಚೂಡವೆಂಬ ಸರ್ಪವು ಹಗಲಿರುಳೂ ಕಾಯುತ್ತಿರುವುದು. ಈ ರಹಸ್ಯವು ಯಾರಿಗೂ ತಿಳಿಯದು. ಆದುದರಿಂದ ನನಗೆ ಸಾವು ಒದಗುವುದೆಂದರೇನು? ಎಂದು ತನ್ನ ಪ್ರಿಯೆಯನ್ನು ಸಂತೈಸಿದನು.

೨೧. ಈ ರೀತಿ ತನ್ನ ಜೀವಭೂತವಾದ ಗಿಳಿಗೆ ಸಂಬಂಧಪಟ್ಟ ಸಂಗತಿಯನ್ನು ಶಕುನಿದೈತ್ಯನು ವಿವರಿಸಿದುದನ್ನು ಅಲ್ಲಿಯೇ ಯಾರಿಗೂ ಗೊತ್ತಾಗದಂತೆ ಸೂಕ್ಷ್ಮರೂಪದಲ್ಲಿದ್ದ ಗರುಡನು ಆಲಿಸಿದ ಕೂಡಲೇ ಚಂದ್ರವೆಂಬ ಉಪದ್ವೀಪಕ್ಕೆ ಹೋಗಲು ನಿಶ್ಚಯಿಸಿದನು.

೨೨. ಕೂಡಲೇ ಆ ಗರುಡನು ಅಲ್ಲಿಂದ ಮುಂದಕ್ಕೆ ನೆಗೆದು ಆಕಾಶದಲ್ಲಿ ಬಹುವೇಗದಿಂದ ಹಾರುತ್ತಾ ಚಂದ್ರವೆಂಬ ಆ ಉಪದ್ವೀಪವನ್ನು ಹುಡುಕಿಕೊಂಡು ಸಮುದ್ರತೀರದಲ್ಲಿಯೇ ಬರುತ್ತಿದ್ದನು.

ಶತಯೋಜನವಿಸ್ತೀರ್ಣೇ ಸಮುದ್ರೇ ಭೀಮನಾದಿನಿ ।
ಪಕ್ಷಿರಾಟ್ ಸಿಂಹಲಂ ಪ್ರಾಪ ಲತಾವೃಂದಮನೋಹರಂ ॥ ೨೩ ॥

ತತ್ರ ಪಪ್ರಚ್ಛ ಗರುಡಃ ಕಿಂ ನಾಮಾಸ್ಯ ಜನಾನ್ಪ್ರತಿ ।
ಸಿಂಹಲೋಽಯಮಿತಿ ಶ್ರುತ್ವಾ ಗರುಡಃ ಪ್ರೋತ್ಪಪಾತ ಖಗಃ ॥ ೨೪ ॥

ಲಂಕಾಂ ಪ್ರಾಪ್ತೋ ಮಹಾವೇಗಾತ್ತ್ರಿಕೂಟಶಿಖರೇ ನೃಪ ।
ಲಂಕಾಂ ಪ್ರಾಪ್ಯ ತತೋ ವೇಗಾತ್ಪಾಂಚಜನ್ಯಂ ಜಗಾಮ ಹ ॥ ೨೫ ॥

ಪಾಂಚಜನ್ಯಾಬ್ಧಿನಿಕಟೇ ಕ್ಷುಧಿತಃ ಪಕ್ಷಿರಾಡ್ಬಲೀ ।
ಪ್ರಸಹ್ಯ ಮೀನಾನ್ಜಗ್ರಾಹ ತೀಕ್ಷ್ಣಯಾ ತುಂಡಯಾ ಭೃಶಂ ॥ ೨೬ ॥

---

೨೩. ಅನಂತರ ಆ ಗರುಡನು ನೂರು ಯೋಜನಗಳಷ್ಟು ಅಗಲವಾಗಿ ಭಯಂಕರವಾಗಿ ಮೆರೆಯುತ್ತಿರುವ ಆ ಸಮುದ್ರವನ್ನು ದಾಟಿ ನಾನಾ ವಿಧವಾದ ಬಳ್ಳಿಗಳ ಸಮೂಹದಿಂದ ಕಂಗೊಳಿಸುತ್ತಿದ್ದ ಸಿಂಹಲದ್ವೀಪವನ್ನು ಸೇರಿದನು.

೨೪. ಬಳಿಕ ಅಲ್ಲಿನ ಜನರನ್ನು ಈ ದ್ವೀಪವಾವುದೆಂದು ಪ್ರಶ್ನಿಸಿ ಇದು ಸಿಂಹಲವೆಂದು ಅವರಿಂದ ಉತ್ತರವನ್ನು ಪಡೆದನಂತರ ಆ ಗರುಡನು ಅಲ್ಲಿಂದಲೂ ಮೇಲಕ್ಕೆ ನೆಗೆದು ಹಾರುತ್ತಾ,

೨೫. ಬಹು ವೇಗದಿಂದ ತ್ರಿಕೂಟಶಿಖರದಲ್ಲಿ ರಾಜಿಸುತ್ತಿದ್ದ ಲಂಕಾನಗರವನ್ನು ಸೇರಿ ಅಲ್ಲಿಯೂ ನಿಲ್ಲದೆ ಪಾಂಚಜನ್ಯವೆಂಬ ಸಾಗರದ ಬಳಿಗೆ ಬಂದನು.

೨೬. ಆ ಸಾಗರದ ಬಳಿ ಪಕ್ಷಿರಾಜನಾದ ಆ ಗರುಡನಿಗೆ ಬಹುವಾಗಿ ಹಸಿವಾಯಿತು. ಕೂಡಲೇ ಆ ಬಲಾಢ್ಯನು ತನ್ನ ಕೂರಾದ ಕೊಕ್ಕಿನಿಂದ ಅಲ್ಲಿದ್ದ ಮೀನುಗಳನ್ನು ಸರಸರನೆ ತಿನ್ನುತ್ತಾ ಬಂದನು.

ತತ್ರ ಚೈಕೋ ಮಹಾನ್ನಕ್ರೋ ಲಂಬಿತೋ ಯೋಜನದ್ವಯಂ ।
ಪಾದೇ ಗೃಹೀತ್ವಾ ಗರುಡಂ ವಿಚಕರ್ಷ ಜಲಾಂತರೇ　　　　॥ ೨೭ ॥

ಬಲೇನ ಗರುಡಸ್ತಸ್ಯ ಚಕಾರಾಕರ್ಷಣಂ ತಟೇ ।
ತಯೋರಾಕರ್ಷಣಂ ರಾಜನ್ಮಿಥೋಽಭೂದ್ಘಟಿಕಾದ್ವಯಂ　　　　॥ ೨೮ ॥

ಪ್ರಚಂಡವೇಗೋ ಗರುಡಸ್ತೀಕ್ಷ್ಣಯಾ ತುಂಡಯಾ ಚ ತಂ ।
ತತಾಡ ಪೃಷ್ಠೇ ಧೃಷ್ಟಾಂಗಂ ದಂಡೇನ ಯಮರಾಡ್ಯಥಾ　　　　॥ ೨೯ ॥

ನಕ್ರರೂಪಂ ವಿಹಾಯಾಶು ಸೋಽಭೂದ್ವಿದ್ಯಾಧರೋ ಮಹಾನ್ ।
ನತ್ವಾ ಶ್ರೀಗರುಡಂ ಸಾಕ್ಷಾತ್ಪ್ರಾಹ ಪ್ರಹಸಿತಾನನಃ　　　　॥ ೩೦ ॥

---

೨೭. ಆ ಪಾಂಚಜನ್ಯವೆಂಬ ಸಮುದ್ರದಲ್ಲಿ ಎರಡು ಯೋಜನಗಳಷ್ಟು ಉದ್ದವಾದ ಭಾರಿ ಮೊಸಳೆಯೊಂದಿದ್ದಿತು. ಆ ಮೊಸಳೆಯು ಸಾಗರ ತೀರದಲ್ಲಿ ಕುಳಿತು ಮಿಾನುಗಳನ್ನು ತಿನ್ನುತ್ತಿದ್ದ ಆ ಗರುಡನ ಎರಡು ಕಾಲುಗಳನ್ನೂ ಹಿಡಿದು ನೀರಿನೊಳಕ್ಕೆ ಎಳೆಯಲಾರಂಭಿಸಿತು.

೨೮. ಇತ್ತಲಾಗ ಗರುಡನು ತಾನೂ ಕೂಡ ಮೊಸಳೆಯನ್ನು ದಡದ ಕಡೆಗೆ ಬಲವಂತದಿಂದ ಎಳೆಯತೊಡಗಿದನು. ಹೀಗೆ ಅವರಿಬ್ಬರೂ ಎರಡು ಗಳಿಗೆಗಳ ಕಾಲ ಪರಸ್ಪರವಾಗಿ ಎಳೆದಾಡುತ್ತಿದ್ದರು.

೨೯. ಅನಂತರ ಸಹಿಸಲಸಾಧ್ಯವಾದ ಪರಾಕ್ರಮವುಳ್ಳ ಆ ಗರುಡನು ಕೂರಾದ ತನ್ನ ಕೊಕ್ಕಿನಿಂದ ಚೆನ್ನಾಗಿ ಕೊಬ್ಬಿ ಬೆಳೆದಿದ್ದ ಆ ಮೊಸಳೆಯನ್ನು ಯಮದಂಡದಿಂದ ಯಮನು ಪ್ರಹರಿಸುವಂತೆ ಜೋರಾಗಿ ಕುಕ್ಕಿ ಕುಕ್ಕಿ ಸಾಯಿಸಿಬಿಟ್ಟನು.

೩೦. ಕೂಡಲೇ ಆ ಮೊಸಳೆಯು ತನ್ನ ರೂಪವನ್ನು ತೊರೆದು ವಿದ್ಯಾಧರ ವರ್ಗಕ್ಕೆ ಸೇರಿದ ಮಹಾಪುರುಷನೋರ್ವನ ರೂಪವನ್ನು ತಾಳಿತು. ಆ ವಿದ್ಯಾಧರನು ಗರುಡನಿಗೆ ನಮಸ್ಕರಿಸಿ ಸಂತೋಷದಿಂದ ನಗುನಗುತ್ತಾ ಇಂತೆಂದನು.

|| ವಿದ್ಯಾಧರ ಉವಾಚ ||

ಅಹಂ ವಿದ್ಯಾಧರಃ ಪೂರ್ವಂ ನಾಮ್ನಾ ವೈ ಹೇಮಕುಂಡಲಃ ।
ಆಕಾಶಗಂಗಾಯಾಂ ಸ್ನಾತುಂ ಗತೋ ದಿವಿಜಮಂಡಲೇ || ೩೧ ||

ತತ್ರ ಸ್ನಾನಂ ಪ್ರಕುರ್ವಂತಂ ಕಕುತ್ಥಂ ಮುನಿಸತ್ತಮಂ ।
ಪಾದೇ ಗೃಹೀತ್ವಾ ಹಾಸ್ಯೇನ ಜಲಾಂತರ್ಗತವಾನಹಂ || ೩೨ ||

ಮಾಂ ಶಶಾಪ ಕಕುತ್ಥೋಽಪಿ ತ್ವಂ ನಕ್ರೋ ಭವ ದುರ್ಮತೇ ।
ಮಯಾ ಪ್ರಸಾದಿತಃ ಶೀಘ್ರಂ ಪ್ರಸನ್ನಃ ಸನ್ವರಂ ದದೌ || ೩೩ ||

ತಾರ್ಕ್ಷ್ಯತುಂಡಪ್ರಹಾರೇಣ ನಕ್ರತ್ವಾತ್ತ್ವಂ ವಿಮುಚ್ಯಸೇ ।
ತಸ್ಯ ಶಾಪಾದದ್ಯ ಮುಕ್ತಃ ಕೃಪಯಾ ತವ ಸುವ್ರತ || ೩೪ ||

---

೩೧. ಓ ಪಕ್ಷಿರಾಜಾ! ನಾನು ಹಿಂದೆ ವಿದ್ಯಾಧರರೆಂಬ ದೇವತಾಪ್ರಭೇದಕ್ಕೆ ಸೇರಿದ್ದವನು, ನನ್ನನ್ನು ಹೇಮಕುಂಡಲನೆಂದು ಕರೆಯುವರು. ಒಂದು ಸಲ ನಾನು ಸ್ವರ್ಗಲೋಕವಲ್ಲಿ ಆಕಾಶ ಗಂಗಾನದಿಗೆ ಸ್ನಾನಮಾಡಬೇಕೆಂದು ಹೋದೆನು.

೩೨. ಅಲ್ಲಿ ಕಕುತ್ಥನೆಂಬ ಮುನಿಶ್ರೇಷ್ಠನು ಸ್ನಾನಮಾಡುತ್ತಿದ್ದನು. ಆಗ ನಾನು ಪರಿಹಾಸಾರ್ಥವಾಗಿ ಆ ಮುನಿಯ ಕಾಲುಗಳನ್ನು ಹಿಡಿದುಕೊಂಡು ನೀರೊಳಕ್ಕೆ ಎಳೆದುಬಿಟ್ಟೆನು.

೩೩. ಇದರಿಂದ ಕುಪಿತನಾದ ಆ ಕುಕುತ್ಥಮುನಿಯು ನನ್ನನ್ನು ಕುರಿತು ' ಎಲೈ ದುರ್ಬುದ್ಧಿಯೇ! ನೀನು ಮೊಸಳೆಯಾಗು. ಎಂದು ಶಾಪವಿತ್ತನು. ಅನಂತರ ನಾನು ಆತನನ್ನು ಬಗೆಬಗೆಯ ರೀತಿಯಲ್ಲಿ ಪ್ರಸನ್ನನಾಗುವಂತೆ ಪ್ರಾರ್ಥಿಸಲು ಆ ಮುನಿಯು ಕೂಡಲೇ ಶಾಂತನಾಗಿ,

೩೪. " ನೀನು ಗರುಡನ ಕೊಕ್ಕಿನಿಂದ ಕುಕ್ಕಲ್ಪಟ್ಟಾಗ ಮೊಸಳೆಯ ರೂಪದಿಂದ ಬಿಡುಗಡೆಯನ್ನು ಹೊಂದುವೆ " ಎಂದು ವರವಿತ್ತನು. ಓ ಮಹಾತ್ಮ! ನಿನ್ನ ಅನುಗ್ರಹದಿಂದ ಇಂದು ನಾನು ಶಾಪದಿಂದ ಬಿಡುಗಡೆಯನ್ನು ಹೊಂದಿದೆನು " ಎಂದನು.

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಚ ಗತೇ ಸ್ವರ್ಗೇ ವಿದಾಧ್ರೇ ಹೇಮಕುಂಡಲೇ ।
ಉಡ್ಡಿತೋ ಗರುಡಸ್ತಸ್ಮಾತ್ಪಕ್ಷಾಭ್ಯಾಂ ವ್ಯೋಮಮಂಡಲೇ ॥ ೩೫ ॥

ಹರಿಣಾಖ್ಯಂ ಚೋಪದ್ವೀಪಂ ಪ್ರಾಪ್ತವಾನ್ವೇಗತಃ ಖಗಃ ।
ಅಪಾಂತರತಮಸ್ತತ್ರ ಕರೋತಿ ವಿಪುಲಂ ತಪಃ ॥ ೩೬ ॥

ತಸ್ಯಾಶ್ರಮೇ ಖಗೇಶಸ್ಯ ಪಕ್ಷಚಂದ್ರಂ ಪಪಾತ ಹ ।
ತಂ ದೃಷ್ಟ್ವಾ ಪ್ರಾಹ ಗರುಡಮಪಾಂತರತಮೋ ಮುನಿಃ ॥ ೩೭ ॥

ಪಕ್ಷಂ ನಿಧಾಯ ಮೇ ಮೂರ್ಧ್ನಿ ಗಚ್ಛ ಪಕ್ಷಿನ್ಯಥಾಸುಖಂ ।
ಪಕ್ಷಂ ನೀತ್ವಾ ಗತಸ್ತಾರ್ಕ್ಷ್ಯೋ ಧೃತ್ವಾ ತನ್ಮಸ್ತಕೇ ಚ ತಂ ॥ ೩೮ ॥

---

೩೫. ರಾಜೇಂದ್ರ! ಈ ರೀತಿಯಾಗಿ ನುಡಿದು ಆ ಹೇಮಕುಂಡಲನೆಂಬ ವಿದ್ಯಾಧರನು ಆಕಾಶದಲ್ಲಿ ಹಾರಿಹೋದನು. ಇತ್ತಲಾಗಿ ಗರುಡನೂ ಸಹ ಅಲ್ಲಿಂದ ಹೊರಟು ಅಂತರಿಕ್ಷದಲ್ಲಿ ತನ್ನ ರೆಕ್ಕೆಗಳನ್ನು ಬೀಸುತ್ತಾ,

೩೬. ವೇಗದಿಂದ ಹಾರಿ ಹರಿಣವೆಂಬ ಹೆಸರಿನ ಉಪದ್ವೀಪವೊಂದನ್ನು ಸೇರಿದನು. ಅಲ್ಲಿ ಅಪಾಂತರತಮನೆಂಬ ಮಹರ್ಷಿಯು ಭಾರಿಯಾದ ತಪಸ್ಸನ್ನು ಮಾಡುತ್ತಿದ್ದನು.

೩೭. ಆತನ ಆಶ್ರಮದಲ್ಲಿ ಆ ಪಕ್ಷಿರಾಜನಾದ ಗರುಡನ ರೆಕ್ಕೆಯಿಂದ ಗರಿಯೊಂದು ಉದುರಿಬಿದ್ದಿತು. ಅದನ್ನು ಕಂಡು ಅಪಾಂತರತಮನೆಂಬ ಆ ಮಹ ರ್ಷಿಯು ಗರುಡನನ್ನು ಕುರಿತು,

೩೮. "ಓ ಪಕ್ಷಿರಾಜಾ! ನನ್ನ ತಲೆಯ ಮೇಲೆ ಆ ಗರಿಯನ್ನು ಇಟ್ಟು ಅನಂತರ ನಿನಗೆ ಇಷ್ಟಬಂದ ಕಡೆಗೆ ಹೋಗುವೆಯಂತೆ" ಎಂದನು. ಅದನ್ನು ಕೇಳಿ ಹಾಗೆಯೇ ಆಗಲೆಂದು ಸಮ್ಮತಿಸಿ ಆ ಗರುಡನು ತನ್ನ ರೆಕ್ಕೆಯ ಗರಿಯನ್ನು ಆ ಮುನಿಯ ತಲೆಯ ಮೇಲೆ ಇಟ್ಟನು.

ತತ್ಸಮಾನಾನ್ಸ್ವಪಕ್ಷಚಂದ್ರಾನನೇಕಾನ್ಸ ದದರ್ಶ ಹ।
ಪ್ರಾಹಾತಿವಿಸ್ಮಿತಂ ತಾರ್ಕ್ಷ್ಯಮಪಾಂತರತಮೋ ಮುನಿಃ ॥ ೩೯ ॥

ಯದಾ ಯದಾ ಹಿ ಶ್ರೀಕೃಷ್ಣಾವತಾರೋಽಭೂತ್ತದಾ ತದಾ।
ಪಕ್ಷೋಽಪಿ ಗರುಡಸ್ಯಾತ್ರ ಪತತ್ಯೇಕಃ ಸದಾ ಖಗಾ ॥ ೪೦ ॥

ಕಲ್ಪೇ ಕಲ್ಪೇ ಕೃಷ್ಣಚಂದ್ರಾವತಾರೋ
ಪಕ್ಷಃ ಪಕ್ಷೋ ಮೂರ್ಧ್ನಿ ಮೇ ಸೋಽಪಿ ಸೋಽಪಿ।
ಅನಂತ್ಯಾದ್ವಾದ್ಯಂತವಂತಂ ವದಂತಿ
ಪಕ್ಷಿನ್ಮೂರ್ಧ್ನಾ ನೌಮಿ ಕೃಷ್ಣಾಯ ತಸ್ಮೈ ॥ ೪೧ ॥

---

೩೯. ಅಲ್ಲಿ ತನ್ನ ಗರಿಯಂತೆಯೇ ಇನ್ನೂ ಅನೇಕ ಗರಿಗಳಿರುವುದನ್ನು ಕಂಡು ಆ ಗರುಡನು ಬಹುಮಟ್ಟಿಗೆ ಅಚ್ಚರಿಯನ್ನು ಹೊಂದಿದನು. ಆಗ ಅಪಾಂತರತಮ ಮುನಿಯು ಅಚ್ಚರಿಗೊಂಡಿದ್ದ ಆ ಪಕ್ಷಿರಾಜನನ್ನು.

೪೦. ಕುರಿತು "ಓ ಖಗರಾಜ! ಶ್ರೀಕೃಷ್ಣನ ಅವತಾರವು ಯಾವಾಗ ಆಗುವುದೋ ಆಗಲೆಲ್ಲಾ ಇಲ್ಲಿ ಗರುಡನ ರೆಕ್ಕೆಯಿಂದ ಒಂದೊಂದು ಗರಿಯು ಉದುರುತ್ತಿರುವುದು.

೪೧. ಆ ಶ್ರೀಕೃಷ್ಣನು ಪ್ರತಿಯೊಂದು ಕಲ್ಪದಲ್ಲಿಯೂ ಅವತರಿಸುವನು. ಆ ಕೃಷ್ಣನ ಅವತಾರವಾದಾಗಲೆಲ್ಲಾ ನನ್ನ ತಲೆಯ ಮೇಲೆ ಗರುಡನ ರೆಕ್ಕೆಯಿಂದ ಗರಿಯೂ ಉದುರುತ್ತಿರುವುದು. ಓ ಪಕ್ಷಿರಾಜಾ! ಆ ಪರಮಪುರುಷನು ವಸ್ತುತಃ ನಾಶರಹಿತನಾಗಿದ್ದರೂ ಆತನು ನಾನಾ ರೂಪಗಳನ್ನು ಧರಿಸಿರುವುದರಿಂದ ಆತನನ್ನು ಆದಿಯೂ, ಅಂತ್ಯವೂ ಉಳ್ಳ ಸಾಮಾನ್ಯ ಪುರುಷನಂತೆ ಎಲ್ಲರೂ ಭಾವಿಸುವರು. ಇಂತಹ ಮಹಾತ್ಮ್ಯಶಾಲಿಯಾದ ಆ ಕೃಷ್ಣನಿಗೆ ತಲೆವಾಗಿ ನಮಸ್ಕರಿಸುವೆನು" ಎಂದನು.

॥ ಶ್ರೀ ನಾರದ ಉವಾಚ ॥

ತಚ್ಛ್ರುತ್ವಾ ವಿಸ್ಮಿತಸ್ತಾರ್ಕ್ಷ್ಯೋ ನತ್ವಾ ತಂ ಮುನಿಪುಂಗವಮ್ ।
ದ್ವೀಪಂ ರಮಣಕಂ ಪ್ರಾಗಾದುತ್ಪತನ್ವ್ಯೋಮಮಂಡಲಾತ್ ॥ ೪೨ ॥

ಸರ್ಪೇಭ್ಯೋಽಪಿ ಬಲಿಂ ನೀತ್ವಾ ದ್ವೀಪಮಾವರ್ತಕಂ ಗತಃ ।
ತತ್ರ ದಿವ್ಯೇ ಸುಧಾಕುಂಡೇ ಸುಧಾಂ ಪೀತ್ವಾ ವಿರಾಡ್ಬಲೀ ॥ ೪೩ ॥

ಶುಕ್ಲದ್ವೀಪಂ ತು ಸಂಪ್ರಾಪ್ತೋ ಪಪ್ರಚ್ಛ ದ್ವೀಪಚಂದ್ರಭಾಕ್ ।
ಮಯಾ ಪ್ರಣೋದಿತಃ ಪಕ್ಷೀ ಪ್ರಯಯಾವುತ್ತರಾಂ ದಿಶಂ ॥ ೪೪ ॥

ಚಂದ್ರದ್ವೀಪಂ ತು ಸಂಪ್ರಾಪ್ತಃ ಪರ್ವತೇ ಪತಗೇಶ್ವರಃ ।
ಜಲದುರ್ಗಂ ವಹ್ನಿದುರ್ಗಂ ವೈನತೇಯೋ ದದರ್ಶ ಹ ॥ ೪೫ ॥

---

೪೨. ಓ ಬಹುಳಾಶ್ವರಾಜ! ಈ ರೀತಿ ಆ ಮುನಿಯು ನುಡಿಯುತ್ತಲೇ ಗರುಡನು ಮತ್ತಷ್ಟು ಆಚ್ಚರಿಗೊಂಡು ಆ ಮುನಿಶ್ರೇಷ್ಠನಿಗೆ ನಮಸ್ಕರಿಸಿ, ಅಲ್ಲಿಂದ ಹೊರಟು ಆಕಾಶದಲ್ಲಿ ಹಾರಿ ಬರುತ್ತಾ ರಮಣಕವೆಂಬ ದ್ವೀಪವನ್ನು ಕುರಿತು ತೆರಳಿದನು.

೪೩. ಆ ದ್ವೀಪದಲ್ಲಿ ಸರ್ಪಗಳಿಗೆ ಬಲಿಯನ್ನಿತ್ತು ಅಲ್ಲಿಂದ ಆವರ್ತಕವೆಂಬ ದ್ವೀಪವನ್ನು ಸೇರಿ ಅಲ್ಲಿದ್ದ ದಿವ್ಯವಾದ ಸುಧಾಕುಂಡದಲ್ಲಿ (ಅಮೃತಕುಂಡ) ಅಮೃತವನ್ನು ಪಾನಮಾಡಿ,

೪೪. ಅಲ್ಲಿಂದ ಹೊರಟು ಶುಕ್ಲದ್ವೀಪವನ್ನು ಸೇರಿದನು. ಅಲ್ಲಿ ಆ ಪಕ್ಷಿರಾಜನು ನನ್ನನ್ನು (ನಾರದನನ್ನು) ಸಂಧಿಸಿ ಚಂದ್ರದ್ವೀಪವೆಲ್ಲಿರುವುದು ಎಂದು ಪ್ರಶ್ನೆಮಾಡಿದನು. ಆಗ ನಾನು ಆ ದ್ವೀಪವಿರುವ ಕಡೆಯನ್ನು ತಿಳಿಸಲು ಆ ಗರುಡನು ಅಲ್ಲಿಂದ ಉತ್ತರಮುಖವಾಗಿ ಹಾರುತ್ತಾ,

೪೫. ಚಂದ್ರದ್ವೀಪವನ್ನು ಸೇರಿದನು. ಆ ದ್ವೀಪದಲ್ಲಿದ್ದ ಪರ್ವತದಲ್ಲಿ ಜಲದುರ್ಗವನ್ನೂ, (ನೀರಿನಕೋಟೆ) ವಹ್ನಿದುರ್ಗ (ಬೆಂಕಿಯ ಕೋಟೆ) ವನ್ನೂ ಆ ವೈನತೇಯನು ಸಂದರ್ಶಿಸಿದನು.

ಜಲದುರ್ಗಂ ಚಂಚುಪುಟೇ ಸರ್ವಂ ಕೃತ್ವಾ ವಿರಾಡ್ಬಲೀ ।
ವಹ್ನಿದುರ್ಗಂ ಚ ತೇನಾಪಿ ಸಾಂತ್ವಯಾಮಾಸ ಮೈಥಿಲ ॥ ೪೬ ॥

ದರೀಮುಖೇ ಶಯಾನಾ ಯೇ ದೈತ್ಯಾ ಲಕ್ಷಂ ಸಮುತ್ಥಿತಾಃ ।
ತೈಃ ಸಾರ್ಧಂ ಸಮಭೂದ್ಯುದ್ಧಂ ತಾರ್ಕ್ಷ್ಯಸ್ಯ ಘಟಿಕಾದ್ವಯಂ ॥ ೪೭ ॥

ಕಾಂಶ್ಚಿತ್ಪಾದನಖೈರ್ಯುದ್ಧೇ ವಿದದಾರ ಖಗೇಶ್ವರಃ ।
ಕಾಂಶ್ಚಿದ್ದೈತ್ಯಾಸ್ಸ್ವಪಕ್ಷಾಭ್ಯಾಂ ಪಾತಯಾಮಾಸ ಭೂತಲೇ ॥ ೪೮ ॥

ಕಾಂಶ್ಚಿಚ್ಚಂಚುಪುಟೇನಾಪಿ ಗೃಹೀತ್ವಾ ಪಕ್ಷಿರಾಡ್ಬಲೀ ।
ಪಾತಯಿತ್ವಾ ಗಿರೇಃ ಪೃಷ್ಠೇ ಚಿಕ್ಷೇಪ ಗಗನೇ ಬಲಾತ್ ॥ ೪೯ ॥

---

೪೬. ಆಗ ಬಲಾಢ್ಯನಾದ ಆ ಪಕ್ಷಿರಾಜನು ತನ್ನ ಕೊಕ್ಕಿನಿಂದ ಜಲದುರ್ಗವನ್ನು ಭೇದಿಸಿಬಿಟ್ಟುದಲ್ಲದೆ ಅದರಿಂದ ಹೊರಟ ಜಲಪ್ರವಾಹದಿಂದ ವಹ್ನಿದುರ್ಗವನ್ನೂ ಶಮನಗೊಳಿಸಿದನು.

೪೭. ಓ ಮಿಥಿಲಾಧೀಶ ! ಆ ಪರ್ವತದಲ್ಲಿದ್ದ ಗುಹೆಯಲ್ಲಿ ಕಾವಲುಗಾರರಾದ ಒಂದುಲಕ್ಷಮಂದಿ ದೈತ್ಯರು ಮಲಗಿದ್ದರು. ಅವರು ಈ ಗದ್ದಲದಿಂದ ಎಚ್ಚೆತ್ತು ಗರುಡನೊಡನೆ ಯುದ್ಧಕ್ಕೆ ನಿಂತರು.

೪೮. ಆ ಯುದ್ಧವೂ ಎರಡು ಗಳಿಗೆಗಳ ಕಾಲ ನಡೆಯಿತು. ಆಗ ಖಗರಾಜನು ಕೆಲವರನ್ನು ಕಾಲಿನ ಉಗುರುಗಳಿಂದ ಸೀಳಿಬಿಟ್ಟನು. ಕೆಲಮಂದಿ ದೈತ್ಯರನ್ನು ತನ್ನ ರೆಕ್ಕೆಗಳಿಂದ ಬಡಿದು ನೆಲದ ಮೇಲೆ ಬೀಳಿಸಿದನು.

೪೯. ಕೆಲವು ಮಂದಿ ದೈತ್ಯೇಯರನ್ನು ಕೊಕ್ಕಿನಿಂದ ಮೇಲಕ್ಕೆ ಹಾರಿ ಮೇಲಿನಿಂದ ಅವರನ್ನು ಪರ್ವತದ ಮೇಲೆ ಕೆಡಹಿದುದಲ್ಲದೆ, ಪುನಃ ಕಚ್ಚಿಕೊಂಡು ಜೋರಾಗಿ ಆಕಾಶದಲ್ಲಿ ಎಸೆದುಬಿಟ್ಟನು.

ಕೇಚಿನ್ಮೃತಾಸ್ತಥಾ ಶೇಷಾ ದುದ್ರುವುಸ್ತೇ ದಿಶೋ ದಶ ।
ಇತ್ಥಂ ದೈತ್ಯವಧಂ ಕೃತ್ವಾ ದರೀಮಧ್ಯೇ ಗತಃ ಖಗಃ　　　　॥ ೫೦ ॥

ಚಕಾರ ಪಾದವಿಕ್ಷೇಪಂ ಶಂಖಚೂಡೋಪರಿ ಸ್ಫುರತ್ ।
ಶಂಖಚೂಡೋಽಪಿ ಗರುಡಂ ದೃಷ್ಟ್ವಾ ಸೋಽತಿಪ್ರಧರ್ಷಿತಃ　　　　॥ ೫೧ ॥

ಶುಕಂ ಜಲೇ ಪಂಜರಸ್ಥಂ ಶೀಘ್ರಂ ತ್ಯಕ್ತ್ವಾ ಪಲಾಯಿತಃ ।
ಚಂಚುದೇಶೇನ ತಂ ನೀತ್ವಾ ಶುಕಂ ಸದ್ಯಃ ಸಪಂಜರಂ　　　　॥ ೫೨ ॥

ಪ್ರೋತ್ಪತನ್ನಂಬರೇ ರಾಜನ್ಯುದ್ಧೇ ಗಂತುಂ ಮನೋ ದಧೇ ।
ಪಲಾಯಿತಾನಾಂ ದೈತ್ಯಾನಾಂ ತಾವತ್ಕೋಲಾಹಲೋ ಮಹಾನ್　　　　॥ ೫೩ ॥

---

೫೦. ಹೀಗಾಗಿ ಆ ಯುದ್ಧದಲ್ಲಿ ಲಕ್ಷಮಂದಿ ದೈತ್ಯರ ನಡುವೆ ಅನೇಕರು ಅಲ್ಲಿಯೇ ಸತ್ತುಹೋದರು. ಉಳಿದವರೆಲ್ಲರೂ ಅಲ್ಲಿ ನಿಲ್ಲಲಾರದೆ ದಿಕ್ಕುದಿಕ್ಕಿಗೂ ಚೆದುರಿ ಓಡಿಹೋದರು. ಈ ರೀತಿಯಾಗಿ ಆ ಗರುಡನು ಆ ದೈತ್ಯರೆಲ್ಲರನ್ನೂ ನಿಗ್ರಹಿಸಿ ಆ ಗುಹೆಯ ನಡುವೆ ಪ್ರವೇಶಮಾಡಿದನು.

೫೧. ಹಾಗೆ ಪ್ರವೇಶಿಸಿದವನೇ ಗಿಳಿಗೆ ಕಾವಲಾಗಿದ್ದ ಶಂಖಚೂಡನೆಂಬ ಸರ್ಪದ ಮೇಲೆ ಜ್ವಲಿಸುತ್ತಿರುವ ತನ್ನ ಪಾದವನ್ನೂರಿದನು. ಆ ಶಂಜಚೂಡನೆಂಬ ಸರ್ಪವು ತನ್ನ ಮೇಲೆ ಕಾಲಿಟ್ಟ ಗರುಡನನ್ನು ಕಂಡೊಡನೆಯೇ,

೫೨. ವಿಶೇಷವಾಗಿ ಕಳವಳವನ್ನು ಹೊಂದಿ ನೀರಿನ ನಡುವೆ ಪಂಜರದಲ್ಲಿಟ್ಟಿದ್ದ ಆ ಗಿಳಿಯನ್ನು ಸಂರಕ್ಷಿಸದೆ ಅದನ್ನು ತೊರೆದು ಸರ್ರನೆ ಓಡಿಹೋಯಿತು. ಕೂಡಲೇ ಆ ಗರುಡನು ತನ್ನ ಕೊಕ್ಕಿನಿಂದ ಆ ಗಿಳಿಯಿದ್ದ ಪಂಜರವನ್ನೇ ಕಚ್ಚಿಕೊಂಡು,

೫೩. ವೇಗದಿಂದ ಆಕಾಶದಲ್ಲಿ ಹಾರುತ್ತಾ ಪ್ರದ್ಯುಮ್ನನು ಹೋರಾಡುತ್ತಿದ್ದ ಯುದ್ಧರಂಗಕ್ಕೆ ಅಭಿಮುಖವಾಗಿ ಬರುತ್ತಿದ್ದನು. ಇತ್ತಲಾಗಿ ಗರುಡನೊಡನೇ ಹೋರಾಡಿ ಹತಾವಶಿಷ್ಟರಾಗಿ ಓಡಿಹೋದ ದೈತ್ಯರು,

ಶುಕೋ ನೀತಃ ಶುಕೋ ನೀತೋ ವದತಾಮುಂಬರೇ ನೃಪ ।
ತಚ್ಛಬ್ದೋ ದಿಕ್ಷು ಸೈನ್ಯಾನಾಂ ಗತಶಬ್ದಸ್ತು ಶೃಣ್ವತಾಂ ॥ ೫೪ ॥

ದಿವಿ ಭೂಮೌ ಸರ್ವತೋಽಪಿ ಬ್ರಹ್ಮಾಂಡೇಽಪಿ ಪ್ರಪೂರಿತಃ ।
ಶುಕೋ ನೀತ ಇತಿ ಶ್ರುತ್ವಾ ಶಕುನಿಃ ಶಂಕಿತೋಽಸುರೈಃ ॥ ೫೫ ॥

ಶೂಲಂ ಧೃತ್ವಾ ತತಃ ಸದ್ಯಶ್ಚಂದ್ರಾವತ್ಯಾಂ ಸಮುತ್ಥಿತಃ ।
ಗರುಡೇನ ಶುಕೋ ನೀತಃ ಶ್ರುತ್ವಾ ಕ್ರುದ್ಧಃ ಸಮನ್ವಯಾತ್ ॥ ೫೬ ॥

---

೫೪. ಗಟ್ಟಿಯಾಗಿ "ಗಿಳಿಯು ಒಯ್ಯಲ್ಪಟ್ಟಿತು! ಗಿಳಿಯು ಒಯ್ಯಲ್ಪಟ್ಟಿತು!" ಎಂದು ಕೂಗಿಕೊಳ್ಳುತ್ತಾ ಇದ್ದುದರಿಂದ ಆಕಾಶದಲ್ಲೆಲ್ಲಾ ಭಾರಿ ಗದ್ದಲವುಂಟಾಯಿತು. ಆ ದೈತ್ಯಸೇನೆಯ ಕೋಲಾಹಲವು ದಿಕ್ಕುದಿಕ್ಕಿಗೂ ಹರಡಿಬಿಟ್ಟುದಲ್ಲದೆ,

೫೫. ಸ್ವರ್ಗಲೋಕವನ್ನೂ, ಭೂಮಂಡಲವನ್ನೂ ಅಷ್ಟೇಕೆ? ಬ್ರಹ್ಮಾಂಡವೆಲ್ಲವನ್ನೂ ತುಂಬಿಬಿಟ್ಟಿತು. ಗಿಳಿಯು ಕೊಂಡೊಯ್ಯಲ್ಪಟ್ಟಿತೆಂಬ ಈ ಮಾತನ್ನು ಕೇಳಿದೊಡನೆಯೇ ದೈತ್ಯೇಂದ್ರನಾದ ಶಕುನಿಯು ಈ ಕಾರ್ಯವು ದೇವತೆಗಳದೇ ಇರಬಹುದೆಂದು ಶಂಕಿಸುತ್ತಾ,

೫೬. ಮಹಾಕೋಪದಿಂದ ಶೂಲವನ್ನು ಧರಿಸಿ, ಕೂಡಲೇ ತನ್ನ ನಗರಿಯಾದ ಚಂದ್ರಾವತಿಯಿಂದ ಮೇಲಕ್ಕೆ ಹಾರಿದನು. ಬಳಿಕ ಆ ದೈತ್ಯನು ಗರುಡನು ಗಿಳಿಯನ್ನು ಕದ್ದೊಯ್ದನು ಎಂಬ ವಾಸ್ತವ ಸಂಗತಿಯನ್ನು ಅರಿತು, ಆ ಗರುಡನನ್ನು ಹಿಂಬಾಲಿಸುತ್ತಾ ಅಟ್ಟಿಸಿಕೊಂಡು ಹೋದನು.

ತಚ್ಛೂಲತಾಡಿತಸ್ತಾರ್ಕ್ಷ್ಯೋ ನ ಜಹೌ ಮುಖತಃ ಶುಕಂ ।
ಸಪ್ತ ದ್ವೀಪಾನ್ಸಪ್ತ ಸಿಂಧೂನ್ನಿರೀಕ್ಷನ್ಸ ಗತಃ ಖಗಃ ॥ ೫೭ ॥

ತಮನ್ವಧಾವದ್ದೈತ್ಯೇಂದ್ರೋ ದಿಕ್ಷು ದಿಕ್ಷು ನಭೋಂತರೇ ।
ಭ್ರಮನ್ನಾಗಾಂತಕೋ ರಾಜನ್ನಾಕಾಶೇ ಕೋಟಿಯೋಜನಂ ॥ ೫೮ ॥

ದೈತ್ಯತ್ರಿಶೂಲಕ್ಷತಭೃನ್ನ ಜಹೌ ಮುಖತಃ ಶುಕಂ ।
ಸಪಂಜರಃ ಶುಕೋ ರಾಜನ್ನಾಕಾಶೇ ಲಕ್ಷಯೋಜನಂ ॥ ೫೯ ॥

ಪಪಾತೋಪಲವದ್ವೇಗಾತ್ಸುಮೇರೋರ್ಗಿರಿಮೂರ್ಧನಿ ।
ಪಂಜರೋಗಾತ್ಪಗಸ್ತತ್ರ ವ್ಯಶೀರ್ಣೋಽಭೂದ್ವ್ಯಸುಃ ಶುಕಃ ॥ ೬೦ ॥

---

೫೭. ಈ ರೀತಿ ಅಟ್ಟಿಸಿಕೊಂಡು ಬರುತ್ತಿರುವ ಆ ಶಕುನಿದೈತ್ಯನು ತನ್ನ ಶೂಲಾಯುಧದಿಂದ ಆ ಗರುಡನನ್ನು ಎಷ್ಟು ಪ್ರಹರಿಸಿದರೂ ಆ ಖಗರಾಜನು ಮಾತ್ರ ತಾನು ಕೊಕ್ಕಿನಲ್ಲಿ ಕಚ್ಚಿಕೊಂಡಿದ್ದ ಗಿಳಿಯನ್ನು ಬೇರೆ ಬಿಡಲಿಲ್ಲ. ಹಾಗೆಯೇ ಆ ವೈನತೇಯನು ಸಪ್ತದ್ವೀಪಗಳನ್ನೂ, ಸಪ್ತಸಮುದ್ರಗಳನ್ನೂ, ನೋಡುತ್ತಾ ಹಾರಿ ಬರುತ್ತಿದ್ದನು.

೫೮. ಆ ಗರುಡನಂತೆಯೇ ಅವನನ್ನು ಅಟ್ಟಿಸಿಕೊಂಡು ಬರುತ್ತಿದ್ದ ಆ ಶಕುನಿಯೂ ಸಹ ದಿಕ್ಕುದಿಕ್ಕುಗಳಲ್ಲೂ, ಅಂತರಿಕ್ಷಮಧ್ಯದಲ್ಲಿಯೂ ಆ ಗರುಡನನ್ನು ಬಿಡದೆ ಹಿಂಬಾಲಿಸುತ್ತಿದ್ದನು. ರಾಜೇಂದ್ರ! ಈ ರೀತಿಯಾಗಿ ಆ ಗರುಡನು ಆಕಾಶದಲ್ಲಿ ಕೋಟಿ ಯೋಜನಗಳಷ್ಟು ದೂರ ಸುತ್ತಾಡಿ ದೈತ್ಯೇಂದ್ರನಾದ ಆ ಶಕುನಿಯ ತ್ರಿಶೂಲದಿಂದ ನಾನಾವಿಧವಾಗಿ ಪ್ರಹರಿಸಲ್ಪಟ್ಟಿದ್ದರೂ ಕೂಡ,

೫೯. ತನ್ನ ಬಾಯಿಂದ ಬೇರೆ ಕಚ್ಚಿಕೊಂಡಿದ್ದ ಆ ಗಿಳಿಯನ್ನು ಕೆಳಗೆ ಬಿಡಲಿಲ್ಲ. ಓ ಮಿಥಿಲಾಧಿಪ! ಅನಂತರ ಆ ಪಕ್ಷಿರಾಜನು ಆಕಾಶದಲ್ಲಿ ಒಂದುಲಕ್ಷ ಯೋಜನಗಳಷ್ಟು ಎತ್ತರಕ್ಕೆ ಹಾರಿ ಅಲ್ಲಿಂದ,

೬೦. ಜೋರಾಗಿ ಮೇರುಪರ್ವತದ ಮೇಲೆ ತಾನು ಬಾಯಲ್ಲಿ ಕಚ್ಚಿಕೊಂಡಿದ್ದ ಗಿಳಿಯ ಪಂಜರವನ್ನು ಬಂಡೆಯನ್ನು ಎತ್ತಿಹಾಕುವಂತೆ ಬೀಳಿಸಿಬಿಟ್ಟನು. ಆ ಏಟಿಗೆ ಪಂಜರವು ಚೂರುಚೂರಾಯಿತು. ಅದರಲ್ಲಿದ್ದ ಗಿಳಿಯು ಮೈಕೈಯೆಲ್ಲಾ ಅಜ್ಜಿಗುಜ್ಜಾಗಿ ತನ್ನ ಪ್ರಾಣಗಳನ್ನು ಬಿಟ್ಟುಬಿಟ್ಟಿತು.

ಗರುಡೋऽಥ ಮಹಾಯುದ್ಧೇ ಕೃಷ್ಣಪಾರ್ಶ್ವಂ ಸಮಾಗತಃ ।
ದೈತ್ಯಃ ಖಿನ್ನಮನಾ ರಾಜನ್ಪುರೀಂ ಚಂದ್ರಾವತೀಂ ಯಯೌ ॥ ೬೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಗರುಡಾಗಮನೋ ನಾಮ ಚತ್ವಾರಿಂಶೋऽಧ್ಯಾಯಃ

---

೬೧. ಅನಂತರ ಆ ಗರುಡನು ಯುದ್ಧರಂಗದಲ್ಲಿದ್ದ ಶ್ರೀಕೃಷ್ಣನ ಬಳಿಗೆ ಬಂದುಬಿಟ್ಟನು. ಇತ್ತಲಾಗಿ ಆ ಶಕುನಿದೈತ್ಯನು ಖೇದದಿಂದ ತನ್ನ ನಗರಿಯಾದ ಚಂದ್ರಾವತಿಗೆ ಬಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವಸಂವಾದದಲ್ಲಿ ಗರುಡಾಗಮನವೆಂಬ
ನಲವತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಏಕಚತ್ವಾರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ದೈತ್ಯಾನ್ ಶೇಷಾನ್ಸಮಾನೀಯ ನಾನಾಯುದ್ಧಧರೋ ಬಲೀ ।
ಉಚ್ಚೈಃಶ್ರವಸಮಾಹೂಯ ಹಯಂ ದಿವ್ಯಂ ಮನೋಹರಂ ॥ ೧ ॥

ಧನುಷ್ಟಂಕಾರಯನ್ವೀರಃ ಶಕುನಿಃ ಕ್ರೋಧಮೂರ್ಛಿತಃ ।
ಆಯಯೌ ಸಂಮುಖೇ ಯೋದ್ಧುಂ ಶ್ರೀಕೃಷ್ಣಸ್ಯಾಪಿ ಸಂಮುಖೇ ॥ ೨ ॥

ಪುನಃ ಪ್ರಾಪ್ತಂ ದೈತ್ಯಸೈನ್ಯಂ ಶಕುನಿಂ ಯುದ್ಧದುರ್ಮದಂ ।
ತಂ ವೀಕ್ಷ್ಯ ವೃಷ್ಣಯಃ ಸರ್ವೇ ಜಗೃಹುಃ ಸ್ವಾಯುಧಾನಿ ಚ ॥ ೩ ॥

ನಲವತ್ತೊಂದನೆಯ ಅಧ್ಯಾಯವು

೧-೨. ರಾಜೇಂದ್ರ! ಆಲಿಸು. ಅನಂತರ ಆ ದೈತ್ಯೇಂದ್ರನಾದ ಆ ಶಕುನಿಯು ತನ್ನ ನಗರದಲ್ಲಿ ಉಳಿದುಕೊಂಡಿದ್ದ ದೈತ್ಯರೆಲ್ಲರನ್ನೂ ಕರೆದುಕೊಂಡು ಉಚ್ಚೈಶ್ರವಸ್ಸೆಂಬ ಬಹು ರಮಣೀಯವಾದ ದಿವ್ಯಾಶ್ವವನ್ನು ಹತ್ತಿ ಕುಳಿತು ಮಿತಿನಿರದ ಕೋಪದಿಂದ ತನ್ನ ಧನುಸ್ಸನ್ನು ಟಂಕಾರಮಾಡುತ್ತಾ ಯುದ್ಧರಂಗದಲ್ಲಿ ಎದುರಾಗಿ ನಿಂತು ಹೋರಾಡಬಯಸಿ ಶ್ರೀಕೃಷ್ಣನಿಗೆದುರಾಗಿ ಬಂದು ನಿಂತನು.

೩. ಈ ರೀತಿ ಯುದ್ಧಮದದಿಂದ ಬೀಗುತ್ತಿದ್ದ ಶಕುನಿಯೂ, ಆತನ ದೈತ್ಯಸೈನ್ಯವೂ ಮರಳಿ ಯುದ್ಧರಂಗಕ್ಕೆ ಬಂದುದನ್ನು ಕಂಡು ಒಡನೆಯೇ ಆ ವೃಷ್ಣಿಗಳೆಲ್ಲರೂ ತಮ್ಮ ತಮ್ಮ ಆಯುಧಗಳನ್ನು ಧರಿಸಿ ಸಿದ್ಧವಾಗಿ ನಿಂತರು.

ದೈತ್ಯಾನಾಂ ಯದುಭಿಃ ಸಾರ್ಧಂ ಘೋರಂ ಯುದ್ಧಂ ಬಭೂವ ಹ ।
ವೀರೈಃ ಸಂಯುಯುಧುರ್ವೀರಾಃ ಸಿಂಹಾಃ ಸಿಂಹೈರಿವಾಹವೇ ॥ ೪ ॥

ಸರ್ವೇಷಾಮಗ್ರತಃ ಪ್ರಾಪ್ತಃ ಕೋದಂಡಂ ನಾದಯನ್ಮುಹುಃ ।
ಶಕುನಿರ್ಮೇಘವದ್ರಾಜನ್ಚಕ್ರೇ ನಾರಾಚದುರ್ದಿನಂ ॥ ೫ ॥

ಬಾಣಾಂಧಕಾರೇ ಸಂಜಾತೇ ಭಗವಾನ್ಗರುಡಧ್ವಜಃ ।
ಶಾರ್ಙ್ಗೀ ಶಾರ್ಙ್ಗೇಣ ಧನುಷಾ ಯಥೇಂದ್ರೇಣ ಘನೋ ಬಭೌ ॥ ೬ ॥

ಶ್ರೀಕೃಷ್ಣೋಭಗವಾನ್ಸಾಕ್ಷಾಚ್ಛಕುನೇರಸುರಸ್ಯ ಚ ।
ಚಿಕ್ಷೇಪ ಬಾಣಪಟಲಂ ಬಾಣೇನೈಕೇನ ಲೀಲಯಾ ॥ ೭ ॥

---

೪. ರಾಜೇಂದ್ರ! ಆಗ ದೈತ್ಯರಿಗೂ ಯಾದವರಿಗೂ ಬಹು ಘೋರವಾದ ಯುದ್ಧವು ಜರುಗಿತು. ಆಗ ಉಭಯಪಕ್ಷದ ವೀರರೂ ತಮ್ಮ ತಮ್ಮ ಎದುರಾಳಿಗಳೊಡನೆ ಸಿಂಹಗಳು ಸಿಂಹಗಳೊಡನೆ ಹೋರಾಡುವಂತೆ ಸೆಣಸತೊಡಗಿದರು.

೫. ಆ ಶಕುನಿಯು ತನ್ನ ಕಡೆಯ ದೈತ್ಯರೆಲ್ಲರನ್ನೂ ಹಿಂದಕ್ಕೆ ಬಿಟ್ಟುಕೊಂಡು ಅವರೆಲ್ಲರಿಗೂ ಮುಂದೆ ತಾನೇ ನಿಂತುಕೊಂಡು ತನ್ನ ಧನುಸ್ಸನ್ನು ಪುನಃ ಪುನಃ ಟಂಕಾರಮಾಡುತ್ತಾ ಮೇಘವು ಮಳೆಯನ್ನು ಸುರಿಸುವಂತೆ ಬಾಣಗಳನ್ನು ಪರಂಪರೆಯಾಗಿ ವರ್ಷಿಸುತ್ತಾ ಸೂರ್ಯರಶ್ಮಿಗಳು ಕಾಣಿಸದಂತೆ ಆಕಾಶವನ್ನು ಮುಚ್ಚಿಬಿಟ್ಟನು.

೬. ಈ ರೀತಿಯಾಗಿ ಆ ಶಕುನಿಯು ಬಾಣಗಳಿಂದ ಎಲ್ಲೆಲ್ಲಿಯೂ ಕಗ್ಗತ್ತಲು ಕವಿದಂತಾಗಲು ಆ ಶ್ರೀಕೃಷ್ಣನು ತನ್ನ ಶಾರ್ಙ್ಗವೆಂಬ ಧನುಸ್ಸನ್ನು ಕೈಗೆ ತೆಗೆದುಕೊಂಡನು. ಆಗ ಆ ಗರುಡಧ್ವಜನು ಕಾಮನಬಿಲ್ಲಿನಿಂದ ಒಡಗೂಡಿದ ಕಾರ್ಗಾಲದ ಮೋಡದಂತೆ ಕಂಗೊಳಿಸಿದನು.

೭. ಕೂಡಲೇ ಆ ಶ್ರೀಕೃಷ್ಣನು ತನ್ನ ಧನುಸ್ಸಿನಲ್ಲಿ ಒಂದೇ ಒಂದು ಬಾಣವನ್ನು ಹೂಡಿ ದೈತ್ಯೇಂದ್ರನಾದ ಆ ಶಕುನಿಯು ಪ್ರಯೋಗಿಸಿದ್ದ ಬಾಣಸಮೂಹವೆಲ್ಲವನ್ನೂ ಲೀಲಾಮಾತ್ರದಲ್ಲಿ ಕತ್ತರಿಸಿಬಿಟ್ಟನು.

ಆಕೃಷ್ಯ ಕರ್ಣಪರ್ಯಂತಂ ಕೋದಂಡಂ ಶಕುನಿರ್ಮೃಧೇ।
ತತಾಡ ದಶಭಿರ್ಬಾಣೈಃ ಶ್ರೀಕೃಷ್ಣಂ ಹೃದಿ ಮೈಥಿಲ ॥ ೮ ॥

ಪ್ರಲಯಾಬ್ಧಿಮಹಾವರ್ತಭೀಮಸಂಘರ್ಷನಾದಿನೀಂ।
ಧನುರ್ಜ್ಯಾಂ ಶಕುನೇಃ ಶೌರಿಶ್ಚಿಚ್ಛೇದ ದಶಭಿಃ ಶರೈಃ ॥ ೯ ॥

ಮಾಯಾವೀ ಶಕುನಿರ್ದೈತ್ಯಃ ಶತರೂಪೀ ಬಭೂವ ಹ।
ಯುಯೋಧ ಹರಿಣಾ ಯುದ್ಧೇ ಸರ್ವೇಷಾಂ ಪಶ್ಯತಾಂ ನೃಪ ॥ ೧೦ ॥

ಸಹಸ್ರಾಣಿ ಸ್ವರೂಪಾಣಿ ಧೃತ್ವಾ ಸಾಕ್ಷಾದ್ಧರಿಃ ಸ್ವಯಂ।
ಯುಯುಧೇ ತೇನ ದೈತ್ಯೇನ ತದದ್ಭುತಮಿವಾಭವತ್ ॥ ೧೧ ॥

---

೮. ಓ ಮಿಥಿಲಾಧಿಪ! ಆಗ ಶಕುನಿಯು ತನ್ನ ಧನುಸ್ಸನ್ನು ಆಕರ್ಣಾಂತವಾಗಿ ಸೆಳೆದು ಹತ್ತು ಬಾಣಗಳಿಂದ ಶ್ರೀಕೃಷ್ಣನ ಎದೆಗೆ ನಾಟುವಂತೆ ಪ್ರಹರಿಸಿದನು.

೯. ಆಗ ಶ್ರೀಕೃಷ್ಣನು ಪ್ರಳಯಕಾಲದ ಸಾಗರಗಳಲ್ಲೇಳುವ ಸುಳಿಗಳು ಒಂದಕ್ಕೊಂದು ಉಜ್ಜುವಾಗ ಉಂಟಾಗುವ ಮೊರೆತದಂತೆ ಮೊರೆಯುತ್ತಿರುವ ಆ ಶಕುನಿಯ ಬಿಲ್ಲಿನ ಹೆದೆಯನ್ನು ಹತ್ತು ಬಾಣಗಳಿಂದ ಕತ್ತರಿಸಿಬಿಟ್ಟನು.

೧೦. ಆಗ ಮಾಯಾವಿಶಾರದನಾದ ಆ ದೈತ್ಯನು ಅವರೆಲ್ಲರೂ ನೋಡುತ್ತಿರುವಂತೆಯೇ ನೂರಾರು ರೂಪಗಳನ್ನು ತಾಳಿ, ಆ ಕೃಷ್ಣನೊಡನೆ ಹೋರಾಡತೊಡಗಿದನು.

೧೧. ಅದನ್ನು ಕಂಡು ಶ್ರೀಕೃಷ್ಣನು ತಾನೂ ಸಹ ಸಹಸ್ರರೂಪಗಳನ್ನು ಧರಿಸಿ, ಆ ದೈತ್ಯನೊಡನೆ ಹೋರಾಡಿದನು. ರಾಜೇಂದ್ರ! ಆ ಆಶ್ಚರ್ಯವನ್ನೇನೆಂದು ಹೇಳಲಿ ?

ಮಯದೈತ್ಯೇನ ರಚಿತಂ ತ್ರಿಶೂಲಂ ಜ್ವಲನಪ್ರಭಂ ।
ಭ್ರಾಮಯಿತ್ವಾಽಥ ಹರಯೇ ಪ್ರಾಹಿಣೋದ್ದೈತ್ಯರಾಡ್ಬಲೀ ॥ ೧೨ ॥

ತತಃ ಕ್ರುದ್ಧೋ ಮಹಾಬಾಹುಃ ಪರಿಪೂರ್ಣತಮೋ ಹರಿಃ ।
ಚಿಚ್ಛೇದ ತಂ ತೀಕ್ಷ್ಣತುಂಡಂ ಪನ್ನಗಂ ಗರುಡೋ ಯಥಾ ॥ ೧೩ ॥

ತತಃ ಕ್ರುದ್ಧೋ ಮಹಾಬಾಹುರ್ಗದಾಂ ಚಿಕ್ಷೇಪ ಮೂರ್ಧನಿ ।
ಹಯಾತ್ತಂ ಪಾತಯಾಮಾಸ ಗದಯಾ ವಜ್ರಕಲ್ಪಯಾ ॥ ೧೪ ॥

ಗದಾ ಪ್ರಹಾರವ್ಯಥಿತಃ ಕ್ಷಣಂ ಮೂರ್ಚ್ಛಾಂ ಗತೋಽಸುರಃ ।
ಗೃಹೀತ್ವಾ ಸ್ವಾಂ ಗದಾಂ ಯುದ್ಧೇ ಯುಯುಧೇ ಮಾಧವೇನ ವೈ ॥ ೧೫ ॥

---

೧೨. ಆಗ ಬಲಾಢ್ಯನಾದ ಆ ದೈತ್ಯರಾಜನು ಮಯನಿಂದ ನಿರ್ಮಿಸಲ್ಪಟ್ಟ ಅಗ್ನಿಯಂತೆ ಪ್ರಜ್ವಲಿಸುತ್ತಿರುವ ತ್ರಿಶೂಲವನ್ನು ಕೈಗೆ ತೆಗೆದುಕೊಂಡು ಗರಗರನೆ ತಿರುಗಿಸಿ ಕೃಷ್ಣನಿಗೆ ಗುರಿಯಿಟ್ಟು ಬೀಸಿದನು.

೧೩. ಅದನ್ನು ಕಂಡು ಪರಿಪೂರ್ಣತಮನೆನಿಸಿದ ಮಹಾಬಾಹುವಾದ ಶ್ರೀಹರಿಯು ಗರುಡನು ತೀಕ್ಷ್ಣವಾದ ವಿಷದಿಂದ ತುಂಬಿದ ಮುಖವುಳ್ಳ ಸರ್ಪವನ್ನು ತುಂಡು ತುಂಡು ಮಾಡುವಂತೆ ಆ ತ್ರಿಶೂಲವನ್ನು ತುಂಡರಿಸಿಬಿಟ್ಟನು.

೧೪. ಅನಂತರ ವಜ್ರಸದೃಶವಾದ ಗದೆಯೊಂದನ್ನು ತೆಗೆದುಕೊಂಡು ಅದರಿಂದ ಆ ದೈತ್ಯೇಂದ್ರನ ತಲೆಯ ಮೇಲೆ ಬಲವಾಗಿ ಪ್ರಹರಿಸಿದನು.

೧೫. ಆ ಗದಾಪ್ರಹಾರದಿಂದ ಆ ದೈತ್ಯನು ಕ್ಷಣಕಾಲ ವ್ಯಥೆಯಿಂದ ತಲ್ಲಣಿಸಿ ಮೂರ್ಛೆಗೀಡಾದನು. ಕೂಡಲೇ ಅವನು ಮರಳಿ ಎಚ್ಚೆತ್ತು ಕೃಷ್ಣನೊಡನೆ ತಾನೂ ಗದಾಯುದ್ಧಕ್ಕೆ ನಿಂತನು.

ತಯೋರ್ಯುದ್ಧಮಭೂದ್ಘೋರಂ ಗದಾಭ್ಯಾಂ ರಣಮಂಡಲೇ।
ಅಭೂಚ್ಚಟಚಟಾರಾವೋ ವಜ್ರನಿಷ್ಪೇಷವತ್ಕಿಲ　　　　॥ ೧೬ ॥

ಶ್ರೀಕೃಷ್ಣಗದಯಾ ತಸ್ಯ ಚೂರ್ಣೀಭೂತಾ ಗದಾ ಭುವಿ।
ವಿರೇಜೇಂಗಾರವತ್ತತ್ರ ಸರ್ವೇಷಾಂ ಪಶ್ಯತಾಂ ಮೃಧೇ　　　　॥ ೧೭ ॥

ಗಿರಿದರ್ಯಾಂ ಯಥಾ ಸಿಂಹೌ ವನೇ ಮತ್ತೌ ಗಜಾವುಭೌ।
ರಣಮಧ್ಯೇ ತಥಾ ತೌ ದ್ವೌ ಯುಯುಧಾತೇ ಪರಸ್ಪರಂ　　　　॥ ೧೮ ॥

ಶ್ರೀಕೃಷ್ಣಂ ನೋದಯಾಮಾಸ ಶಕುನಿಃ ಶತಯೋಜನಂ।
ಹರಿಸ್ತಂ ಪ್ರೇಷಯಾಮಾಸ ಸಹಸ್ರಂ ಯೋಜನಂ ಭುವಿ　　　　॥ ೧೯ ॥

---

೧೬. ಹಾಗೆ ಆ ವೀರರಿಬ್ಬರೂ ಗದೆಗಳಿಂದ ಹೋರಾಡುತ್ತಿರುವಾಗ ಆ ಗದೆಗಳು ಒಂದಕ್ಕೊಂದು ತಗುಲಿ ಸಿಡಿಲುಗಳೆರಡು ತಗುಲಿದಾಗಾಗುವಂತೆ ಜೋರಾದ ಚಟಚಟ ನೆಂಬ ಶಬ್ದವನ್ನು ಮಾಡಿದುವು

೧೭. ಆ ಯುದ್ಧದಲ್ಲಿ ಶಕುನಿಯು ಗದೆಯು ಶ್ರೀಕೃಷ್ಣನ ಗದೆಯಿಂದ ಧ್ವಂಸ ವಾಗಿ ನೆಲದ ಮೇಲೆ ಪುಡಿಪುಡಿಯಾಗಿ ಬಿದ್ದುಬಿಟ್ಟಿತು. ಆ ಗದೆಯ ತುಣುಕುಗಳು ಕೆಂಡಗಳಂತೆ ಅಲ್ಲಿದ್ದವರೆಲ್ಲರಿಗೂ ತೋರುತ್ತಾ ಕೆಂಪಾಗಿ ಕಂಗೊಳಿಸಿದುವು.

೧೮. ಅನಂತರ ಆ ವೀರರಿಬ್ಬರೂ ಪರ್ವತಕಂದರದಲ್ಲಿ ಹೋರಾಡುವ ಸಿಂಹ ಗಳಂತೆಯೂ, ಕಾಡಿನ ನಡುವೆ ಕಾದಾಡುವ ಮದ್ದಾನೆಗಳಂತೆಯೂ ಒಬ್ಬರಿಗೊಬ್ಬರು ಕೈಕೈ ಕಲೆತು ಹೋರಾಡಿದರು.

೧೯. ಆ ಬಾಹುಯುದ್ಧದಲ್ಲಿ ಶಕುನಿಯು ಶ್ರೀಕೃಷ್ಣನನ್ನು ನೂರು ಯೋಜನ ಗಳಷ್ಟು ದೂರಕ್ಕೆ ನೂಕಿಬಿಟ್ಟನು. ಶ್ರೀಕೃಷ್ಣನು ಅದಕ್ಕೆ ಪ್ರತಿಯಾಗಿ ಆ ದೈತ್ಯನನ್ನು ಸಾವಿರ ಯೋಜನಗಳಾಚೆಗೆ ತಳ್ಳಿಬಿಟ್ಟನು.

ಗೃಹೀತ್ವಾ ಭುಜಯೋಸ್ತಂ ವೈ ಜಂಘಾಭ್ಯಾಂ ಭುವನೇಶ್ವರಃ ।
ಪಾತಯಾಮಾಸ ಭೂಪೃಷ್ಠೇ ಕಮಂಡಲುಮಿವಾರ್ಭಕಃ ॥ ೨೦ ॥

ಕಿಂಚಿದ್ವ್ಯಥಾಂ ಗತೋ ದೈತ್ಯೋ ಗೃಹೀತ್ವಾ ಜಾರುಧಿಂ ಗಿರಿಂ ।
ಪ್ರಾಹಿಣೋಚ್ಚ ದುರಾಚಾರಃ ಶಕುನಿರ್ಯುದ್ಧದುರ್ಮದಃ ॥ ೨೧ ॥

ಸಮಾಗತಂ ಗಿರಿಂ ವೀಕ್ಷ್ಯ ಭಗವಾನ್ಕಮಲೇಕ್ಷಣಃ ।
ಜಯಶಬ್ದಂ ಪ್ರಕುರ್ವಂತಾವನ್ಯೋನ್ಯಂ ತಾಡಯನ್ಗಿರಿಂ ॥ ೨೨ ॥

ಚೂರ್ಣಯಾಮಾಸತೂ ರಾಜಂಸ್ತಥಾ ಚಂದ್ರಾವತೀಂ ಪುರೀಂ ।
ತದಾ ದೈತ್ಯೋಽತಿಸಂಕ್ರುದ್ಧೋ ಗೃಹೀತ್ವಾ ಖಡ್ಗಚರ್ಮಣೀ ॥ ೨೩ ॥

---

೨೦. ಅನಂತರ ಆ ಜಗತ್ಪ್ರಭುವು ತನ್ನೆರಡು ಮೊಳಕಾಲುಗಳಿಂದಲೂ ಆ ಶಕುನಿಯ ತೋಳುಗಳೆರಡನ್ನೂ ಬಿಗಿಯಾಗಿ ಹಿಡಿದು ಎಳೆ ಹುಡುಗನು ಮಣ್ಣಿನ ಪಾತ್ರೆಯನ್ನು ಕುಕ್ಕುವಂತೆ ಅವನನ್ನು ಮರದ ಮೇಲೆ ದೊಪ್ಪನೆ ಬೀಳಿಸಿದನು.

೨೧. ಆ ದುರಾಚಾರಿಯಾದ ಶಕುನಿದೈತ್ಯನು ಯುದ್ಧವಲ್ಲಿ ಯಾರಿಗೂ ಸಗ್ಗದಂತಹ ಕೊಬ್ಬಿದ ವೀರನಾಗಿದ್ದರೂ ಆ ಏಟನ್ನು ತಾಳಲಾರದೆ ಸ್ವಲ್ಪಹೊತ್ತು ವ್ಯಥೆಗೀಡಾದನು. ಆಮೇಲೆ ಅವನು ಜಾರುಧಿಯೆಂಬ ಪರ್ವತವನ್ನು ಕೈಗೆತ್ತಿಕೊಂಡು ಕೃಷ್ಣನಿಗೆ ಗುರಿಯಿಟ್ಟು ಬೀಸಿದನು.

೨೨. ಆ ಪರ್ವತವು ತನ್ನ ಕಡೆಗೆ ಬರುತ್ತಿರುವುದನ್ನು ಕಂಡು ಶ್ರೀಕೃಷ್ಣನೂ ಮತ್ತೊಂದು ಪರ್ವತವನ್ನು ಅದಕ್ಕೆ ಪ್ರತಿಯಾಗಿ ಪ್ರಹರಿಸಿದನು. ಈ ರೀತಿ ಆ ವೀರರಿಬ್ಬರೂ ಒಬ್ಬರ ಮೇಲೊಬ್ಬರು ಪರ್ವತಗಳನ್ನು ಪ್ರಹರಿಸಿ ತಾವೇ ಗೆಲ್ಲುವೆನೆಂಬ ಹರ್ಷದಿಂದ ಅಬ್ಬರಿಸತೊಡಗಿದರು. ಆಗ ಆ ಪರ್ವತಗಳೆರಡೂ ಒಂದಕ್ಕೊಂದಕ್ಕೆ ತಗುಲಿ ತಾವೂ ಪುಡಿಪುಡಿಯಾಗಿ ಬಿದ್ದುವಲ್ಲದೆ ತಾವು ಬಿದ್ದ ಪ್ರದೇಶದಲ್ಲಿದ್ದ ಚಂದ್ರಾವತೀನಗರವನ್ನೂ ಪುಡಿಪುಡಿಮಾಡಿಬಿಟ್ಟುವು.

೨೩-೨೪. ಆಗ ಮಿತಿಮೀರಿ ಕೋಪವನ್ನು ತಾಳಿದ ಶಕುನಿದೈತ್ಯನು ಕತ್ತಿಯನ್ನೂ, ಗುರಾಣಿಯನ್ನೂ ಕೈಗೆ ತೆಗೆದುಕೊಂಡು ಕೃಷ್ಣನಿಗೆದುರಾಗಿ ಹೋರಾಡಲು

ಆಯಯೌ ಸಂಮುಖೇ ರಾಜಞ್ಛ್ರೀಕೃಷ್ಣಸ್ಯ ಮಹಾತ್ಮನಃ ।
ಶಾರ್ಙ್ಗೀ ಶಾರ್ಙ್ಗಂ ಸಂಗೃಹೀತ್ವಾಥಾರ್ಧಚಂದ್ರಮುಖಂ ಶರಂ ॥ ೨೪ ॥

ಸಂದಧೇ ಸಹಸಾ ಯುದ್ಧೇ ಗ್ರೀಷ್ಮಮಾರ್ತಂಡಸನ್ನಿಭಂ ।
ಶಾರ್ಙ್ಗಮುಕ್ತೋ ದಿವ್ಯಬಾಣೋ ದ್ಯೋತಯನ್ಮಂಡಲಂ ದಿಶಾಂ ॥ ೨೫ ॥

ಶಕುನೇರ್ಮಸ್ತಕಂ ಛಿತ್ವಾ ಭೂಮಿಂ ಭಿತ್ವಾತಲಂ ಗತಃ ।
ವ್ಯಸುರ್ಭೂತ್ವಾ ತದಾ ದೈತ್ಯಃ ಪತಿತೋ ರಣಮಂಡಲೇ ॥ ೨೬ ॥

ಭೂಮಿಸ್ಪರ್ಶಾತ್ಸಜೀವೋಽಭೂತ್ಕ್ಷಣಮಾತ್ರೇಣ ಮೈಥಿಲ ।
ಕರೇಣಾದಾಯ ಮುಂಡಂ ಸ್ವಂ ಸ್ವಕಬಂಧೇ ನಿಧಾಯ ಸಃ ॥ ೨೭ ॥

ಬಂದನು. ಆಗ ಶ್ರೀಕೃಷ್ಣನು ತನ್ನ ಶಾರ್ಙ್ಗಧನುಸ್ಸಿನಲ್ಲಿ ಗ್ರೀಷ್ಮಕಾಲದ ಸೂರ್ಯನಂತೆ ಜ್ವಲಿಸುತ್ತಿರುವ ಅರ್ಧಚಂದ್ರಾಕೃತಿಯುಳ್ಳ ಬಾಣವೊಂದನ್ನು ಸರಕ್ಕನೆ ಹೂಡಿ ಅವನ ಮೇಲೆ ಪ್ರಯೋಗಿಸಿದನು.

೨೫. ರಾಜೇಂದ್ರ! ಆ ಬಾಣವು ಶ್ರೀಕೃಷ್ಣನ ಶಾರ್ಙ್ಗಧನುಸ್ಸಿನಿಂದ ಬಿಡಲ್ಪಟ್ಟೊಡನೆಯೇ ದಿಕ್ಕುಗಳೆಲ್ಲವನ್ನೂ ಬೆಳಗುತ್ತಾ,

೨೬. ದೈತ್ಯೇಂದ್ರನಾದ ಆ ಶಕುನಿಯ ತಲೆಯನ್ನು ಕತ್ತರಿಸಿದುದಲ್ಲದೆ ನೆಲವನ್ನು ಕೊರೆದುಕೊಂಡು ಪಾತಾಳವನ್ನೂ ಪ್ರವೇಶಿಸಿಬಿಟ್ಟಿತು. ಆಗ ಆ ದೈತ್ಯನು ಸಾವಿಗೀಡಾಗಿ ನೆಲದ ಮೇಲೆ ಬಿದ್ದುಬಿಟ್ಟನು.

೨೭. ಓ ಮಿಥಿಲಾಧೀಶ! ಆಗ ನಡೆದ ಆಶ್ಚರ್ಯವನ್ನು ಏನೆಂದು ಹೇಳಲಿ! ಆ ದೈತ್ಯನು ನೆಲದ ಮೇಲೆ ಬಿದ್ದೊಡನೆಯೇ ಶಿವನ ವರಬಲದಿಂದ ಕ್ಷಣಮಾತ್ರದಲ್ಲಿಯೇ ತನ್ನ ಪ್ರಾಣಗಳನ್ನು ಮರಳಿ ಹೊಂದಿಬಿಟ್ಟನು. ಆಗ ಆ ದೈತ್ಯನು ತನ್ನ ಕೈಯಿಂದ ಕತ್ತರಿಸಿ ಹೋಗಿದ್ದ ತಲೆಯನ್ನು ತನ್ನ ಮುಂಡದ ಮೇಲೆ ಇಟ್ಟುಕೊಂಡು ಎಂದಿನಂತೆ,

ಯುದ್ಧಂ ಕರ್ತುಂ ಸಮುತ್ತಸ್ಥೌ ತದದ್ಭುತಮಿವಾಭವತ್ ।
ಇತ್ಥಂ ಕೃಷ್ಣೇನ ನಿಹತಃ ಸಪ್ತವಾರಂ ಮಹಾಸುರಃ ॥ ೨೮ ॥

ಭೂಮಿಸ್ಪರ್ಶಾತ್ಸಜೀವೋಽಭೂದ್ರಾಹುವತ್ಪುನರುತ್ಥಿತಃ ।
ಏಕಾಕೀ ಯಾದವಕುಲಸಂಹಾರಂ ಕರ್ತುಮುದ್ಯತಃ ॥ ೨೯ ॥

ವಿವೇಶಾಶು ಮಹಾದೈತ್ಯೋ ವನೇ ವಹ್ನಿರಿವ ಪ್ರಭುಃ ।
ಸತುರಂಗಾನ್ಮಹಾವೀರಾನ್ಸಶಸ್ತ್ರಾನುತ್ಕಟಾನ್ಗಜಾನ್ ॥ ೩೦ ॥

ಸಂಗೃಹೀತ್ವಾ ಭುಜಾಭ್ಯಾಂ ಖೇ ಪ್ರಾಕ್ಷಿಪಲ್ಲಕ್ಷಯೋಜನಂ ।
ಕಾಂಶ್ಚಿದ್ಗಜಾನ್ಮುಖೇ ಧೃತ್ವಾ ಸ್ಕಂಧಯೋರುಭಯೋರಪಿ ॥ ೩೧ ॥

ಕಕ್ಷಯೋರುಭಯೋರ್ದೈತ್ಯೋ ಬಭೌ ಕಾಲಾಗ್ನಿರುದ್ರವತ್ ।
ಪದ್ಭ್ಯಾಂ ಕರಾಭ್ಯಾಂ ದೈತ್ಯಸ್ಯ ತ್ರಾಸಂ ಯಾತೇ ಮಹಾಮೃಧೇ ॥ ೩೨ ॥

---

೨೮. ಯುದ್ಧಮಾಡಲು ಮೇಲಕ್ಕೆದ್ದು ನಿಂತನು. ಈ ರೀತಿಯಾಗಿ ಆ ದೈತ್ಯನು ಕೃಷ್ಣನಿಂದ ಏಳು ಬಾರಿ ಕತ್ತರಿಸಲ್ಪಟ್ಟು ಕೆಳಗೆ ಬಿದ್ದರೂ,

೨೯. ಭೂಮಿಯನ್ನು ತಾಗುತ್ತಲೇ ಮರಳಿ ಜೀವವನ್ನು ಹೊಂದಿ ರಾಹುವಿನಂತೆ ಮೇಲೆದ್ದು ಬಂದು ತಾನೊಬ್ಬನೇ ಯಾದವ ವೀರರನ್ನು ಕೊಲ್ಲುತ್ತಾ ಬಂದನು.

೩೦. ಅನಂತರ ಆ ದೈತ್ಯಶ್ರೇಷ್ಠನು ಕಾಡನ್ನು ಒಳಹೋಗುವ ಕಾಳ್ಗಿಚ್ಚಿನಂತೆ ಆ ಯದುಸೇನೆಯನ್ನು ಸರ್ರನೆ ಪ್ರವೇಶಿಸಿ ಶಸ್ತ್ರಪಾಣಿಗಳಾಗಿ ಕುದುರೆಗಳ ಮೇಲೆ ಕುಳಿತು ಹೋರಾಡುತ್ತಿದ್ದ ವೀರಾಗ್ರಣಿಗಳನ್ನೂ ಮದಿಸಿದ ಆನೆಗಳನ್ನೂ,

೩೧. ತನ್ನೆರಡು ತೋಳುಗಳಿಂದಲೂ ಹಿಡಿದು ಹಿಡಿದು ಆಕಾಶದಲ್ಲಿ ಲಕ್ಷ ಯೋಜನಗಳಷ್ಟು ದೂರಕ್ಕೆ ಎಸೆದುಬಿಟ್ಟನು. ಆ ದೈತ್ಯನು ಕೆಲವು ಆನೆಗಳನ್ನು ಬಾಯಲ್ಲಿಯೂ, ಕೆಲವು ಆನೆಗಳನ್ನು ಹೆಗಲ ಮೇಲೆಯೂ, ಕೆಲವು ಆನೆಗಳನ್ನು ಕಂಕುಳಲ್ಲಿಯೂ,

೩೨. ಧರಿಸಿ ಕಾಲಾಗ್ನಿ ರುದ್ರನಂತೆ ಕಂಗೊಳಿಸಿದನು. ಈ ರೀತಿಯಾಗಿ ಆ ದೈತ್ಯನ ಕೈಗಳಿಂದಲೂ, ಕಾಲುಗಳಿಂದಲೂ ನಾನಾವಿಧವಾದ ಪೀಡೆಗೊಳಗಾದುದರಿಂದ ಆ ಯುದ್ಧರಂಗದಲ್ಲಿದ್ದವರೆಲ್ಲರೂ ಹೆದರಿಕೆಯಿಂದ ತತ್ತಳಿಸುತ್ತಾ,

ಹಾಹಾಕಾರೋ ಮಹಾನಾಸೀಚ್ಛ್ರೀಕೃಷ್ಣಸ್ಯ ಮಹಾತ್ಮನಃ ।
ತದೈವ ಭಗವಾನ್ಸಾಕ್ಷಾಚ್ಛ್ರೀಕೃಷ್ಣೋ ವಿಶ್ವರಕ್ಷಕಃ ॥
ಸುದರ್ಶನಾಸ್ತ್ರಂ ಪ್ರಾಯುಂಕ್ತ ಸಾಧೂನಾಂ ರಕ್ಷಣಾಯ ವೈ ॥ ೩೩ ॥

ತದ್ಧಸ್ತಮುಕ್ತಂ ನಿಶಿತಂ ಸುದರ್ಶನಂ
ಲಯಾರ್ಕಕೋಟಿದ್ಯುತಿಮುಜ್ಜ್ವಲತ್ಪ್ರಭಂ ।
ಜಹಾರ ಸದ್ಯಃ ಶಕುನೇರ್ದೃಢಂ ಶಿರೋ
ಯಥಾ ಚ ವೃತ್ರಸ್ಯ ಪವಿರ್ಮಹಾಮೃಧೇ ॥ ೩೪ ॥

ತಾವದ್ಗೃಹೀತ್ವಾ ಶಕುನಿಂ ಮಹಾಮೃಧೇ
ಚಿಕ್ಷೇಪ ಸದ್ಯೋ ಮೃತಮಂಬರೇ ಬಲಾತ್ ।
ಉತ್ಕ್ಷೇಪಣಂ ಭೋಃ ಕುರುತೇಷುಭಿರ್ದಿವಿ
ಯದೂನ್ಗಿರಾ ಶ್ರೀಪತಿರಿತ್ಯುವಾಚ ॥ ೩೫ ॥

---

೩೩. ಹಾಹಾಕಾರವನ್ನು ಮಾಡತೊಡಗಿದುದನ್ನು ಕಂಡು ಪ್ರಪಂಚವನ್ನು ಪರಿಪಾಲಿಸುವುದೇ ಮುಖ್ಯಕರ್ತವ್ಯನಾಗಿರುವ ಆ ಭಗವಂತನಾದ ಶ್ರೀಕೃಷ್ಣನು ಸಜ್ಜನರ ಸಂರಕ್ಷಣಾರ್ಥವಾಗಿ ತನ್ನ ಸುದರ್ಶನ ಚಕ್ರವನ್ನು ತೆಗೆದುಕೊಂಡು ಆ ದೈತ್ಯನ ಮೇಲೆ ಪ್ರಯೋಗಿಸಿದನು.

೩೪. ಆ ಸುದರ್ಶನಚಕ್ರವು ಶ್ರೀಕೃಷ್ಣನ ಕೈಯಿಂದ ಬಿಡುತ್ತಲೇ ಕೋಟಿ ಸೂರ್ಯರಂತೆ ಪ್ರಜ್ವಲಿಸುತ್ತಿರುವ ಪ್ರಭೆಯನ್ನು ಚೆಲ್ಲುತ್ತಾ ಇಂದ್ರಪ್ರಯುಕ್ತವಾದ ವಜ್ರಾಯುಧವು ವೃತ್ರಾಸುರನ ತಲೆಯನ್ನು ಕತ್ತರಿಸಿದಂತೆ ಆ ದೈತ್ಯೇಂದ್ರನಾದ ಶಕುನಿಯ ತಲೆಯನ್ನು ಕ್ಷಣಮಾತ್ರದಲ್ಲಿ ಕತ್ತರಿಸಿಬಿಟ್ಟಿತು.

೩೫. ಕೂಡಲೇ ಆ ಶ್ರೀಕೃಷ್ಣನು ಆಕಾಶದಲ್ಲಿ ಗತಜೀವಿತನಾದ ಆ ದೈತ್ಯನು ನೆಲದ ಮೇಲೆ ಬೀಳದ ಹಾಗೆ ತನ್ನ ಬಾಣದಿಂದ ಪುನಃ ಪ್ರಹರಿಸಿ ಆ ಯದುವೀರರನ್ನು ಕುರಿತು " ನೀವೆಲ್ಲರೂ ಇದೇ ರೀತಿ ಆ ದೈತ್ಯನ ದೇಹವು ನೆಲದ ಮೇಲೆ ಬೀಳದಂತೆ ನಿಮ್ಮ ನಿಮ್ಮ ಬಾಣಗಳಿಂದ ಆಕಾಶದಲ್ಲಿಯೇ ಆರಿಸುತ್ತಾ ಇರಿ " ಎಂದನು.

॥ ಶ್ರೀ ನಾರದ ಉವಾಚ ॥

ಇತ್ಥಂ ಹರೇರ್ವಚಃ ಶ್ರುತ್ವಾ ಸರ್ವೇ ಯಾದವಪುಂಗವಾಃ ।
ಅಂಬರಾತ್ಪ್ರಪತಂತಂ ತೇ ತೇಡುರ್ಬಾಣೈಃ ಸ್ಫುರತ್ಪ್ರಭೈಃ ॥ ೩೬ ॥

ದೈತ್ಯೋ ದೀಪ್ತಿಮತೋರ್ಬಾಣೈರಂಬರೇ ಶತಯೋಜನಂ ।
ಗತಃ ಕಂದುಕವದ್ರಾಜನ್ನೂರ್ಧ್ವಂ ಲೋಕಸ್ಯ ಪಶ್ಯತಃ ॥ ೩೭ ॥

ಸಾಂಬಸ್ಯಾಪಿ ಸ ಬಾಣೇನ ಸಹಸ್ರಂ ಯೋಜನಂ ಗತಃ ।
ಪುನಸ್ತಮಾಪತಂತಂ ಖಾಜ್ಜಘಾನ ತ್ವಿಷುಣಾರ್ಜುನಃ ॥ ೩೮ ॥

ತೇನ ಬಾಣೇನ ದೈತ್ಯೇಂದ್ರೋ ಯೋಜನಂ ಚಾಯುತಂ ಗತಃ ।
ಅನಿರುದ್ಧಸ್ಯ ಬಾಣೇನ ಲಕ್ಷಯೋಜನಮಾಸ್ಥಿತಃ ॥ ೩೯ ॥

---

೩೬. ಓ ಬಹುಲಾಶ್ವರಾಜೇಂದ್ರ! ಈ ರೀತಿಯಾಗಿ ಕೃಷ್ಣನು ನುಡಿದುದನ್ನು ಕೇಳಿ ಆ ಯದುವೀರರೆಲ್ಲರೂ ಆಕಾಶದಿಂದ ಬೀಳುತ್ತಿದ್ದ ಆ ದೈತ್ಯನನ್ನು ನೆಲದ ಮೇಲೆ ಬೀಳದ ಹಾಗೆ ತಮ್ಮ ತಮ್ಮ ಬಾಣಗಳಿಂದ ಪ್ರಹರಿಸತೊಡಗಿದರು.

೩೭. ಆಗ ದೀಪ್ತಿಮಂತನೆಂಬ ಯದುವೀರನು ತನ್ನ ಬಾಣಗಳಿಂದ ಆ ದೈತ್ಯನನ್ನು ಪ್ರಹರಿಸಿದನು. ರಾಜೇಂದ್ರ! ಆ ಬಾಣದ ಪ್ರಹಾರದಿಂದ ಆ ದೈತ್ಯನು ಎಲ್ಲರೂ ನೋಡುತ್ತಿರುವಂತೆ ಆಕಾಶದಲ್ಲಿ ನೂರು ಯೋಜನಗಳು ಎತ್ತರಕ್ಕೆ ಚೆಂಡಿನಂತೆ ಎಸೆಯಲ್ಪಟ್ಟನು.

೩೮. ಅನಂತರ ಸಾಂಬನು ತನ್ನ ಬಾಣದಿಂದ ಆ ದೈತ್ಯನನ್ನು ಸಾವಿರ ಯೋಜನಗಳಷ್ಟು ದೂರಕ್ಕೆ ಹಾರಿಸಿಬಿಟ್ಟನು. ಬಳಿಕ ಆ ದೈತ್ಯನು ನೆಲಕ್ಕೆ ಬೀಳುವುದರಲ್ಲಿಯೇ ಅರ್ಜುನನು ತನ್ನ ಬಾಣದಿಂದ ಪ್ರಹರಿಸಿ,

೩೯. ಹತ್ತು ಸಾವಿರ ಯೋಜನಗಳಷ್ಟು ಎತ್ತರಕ್ಕೆ ಹಾರಿಸಿಬಿಟ್ಟನು. ಅಲ್ಲಿಂದ ಅವನು ಬೀಳುವಷ್ಟರಲ್ಲಿ ಅನಿರುದ್ಧನು ತನ್ನ ಬಾಣದಿಂದ ಆ ದೈತ್ಯನನ್ನು ಹೊಡೆದು ಲಕ್ಷ ಯೋಜನಗಳಷ್ಟಾಚೆಗೆ ಚಿಮ್ಮಿಸಿದನು.

ಪ್ರದ್ಯುಮ್ನಸ್ಯಾಪಿ ಬಾಣೇನ ನಿಯುತಂ ಯೋಜನಂ ಗತಃ ।
ಪ್ರನಸ್ತಮಾಪತಂತಂ ಖಾದ್ವೀಕ್ಷ್ಯ ಯೋಗೇಶ್ವರೇಶ್ವರಃ ॥ ೪೦ ॥

ಬಾಣಂ ಸಮಾದಧೇ ತೇನ ಗತಃ ಖೇ ಕೋಟಿಯೋಜನಂ ।
ಏವಂ ಖೇ ಸಂಸ್ಥಿತೇ ದೈತ್ಯೇ ವ್ಯತೀತೇ ಪ್ರಹರದ್ವಯೇ ॥ ೪೧ ॥

ದ್ವಿತೀಯೇನಾಽಪಿ ಬಾಣೇನ ತಂ ಜಘಾನ ಹರಿಃ ಸ್ವಯಂ ।
ಸ ಬಾಣಸ್ತಂ ಭ್ರಾಮಯಿತ್ವಾ ದಿಕ್ಷು ವೈ ಕೋಟಿಯೋಜನಂ ॥ ೪೨ ॥

ಸಮುದ್ರೇ ಪಾತಯಾಮಾಸ ವಾತಃ ಪದ್ಮಮಿವ ಪ್ರಭುಃ ।
ಏವಂ ಮೃತೇ ತದಾ ದೈತ್ಯೇ ತಜ್ಜ್ಯೋತಿರ್ನಿರ್ಗತಂ ಸ್ಫುರತ್ ॥ ೪೩ ॥

---

೪೦. ಅನಂತರ ಪ್ರದ್ಯುಮ್ನನು ಆ ದೈತ್ಯನು ಕೆಳಗೆ ಬೀಳುವುದರೊಳಗಾಗಿ ತಾನು ಬಾಣವನ್ನು ಪ್ರಯೋಗಿಸಿ ಹತ್ತುಲಕ್ಷ ಯೋಜನಗಳಷ್ಟು ಎತ್ತರಕ್ಕೆ ಹಾರಿಸಿದನು. ಮರಳಿ ಆ ದೈತ್ಯನು ಕೆಳಗೆ ಬೀಳುವಷ್ಟರಲ್ಲಿಯೇ ಸಾಕ್ಷಾದ್ಯೋಗೇಶ್ವರನಾದ ಶ್ರೀಕೃಷ್ಣನು,

೪೧. ತನ್ನ ಬಾಣದಿಂದ ಪ್ರಹರಿಸಿ ಆ ದೈತ್ಯನನ್ನು ಒಂದು ಕೋಟಿ ಯೋಜನಗಳಷ್ಟು ಎತ್ತರಕ್ಕೆ ಚಿಮ್ಮಿಸಿದನು. ಈ ರೀತಿಯಾಗಿ ಆ ದೈತ್ಯನು ಯದುವೀರರ ಬಾಣಗಳಿಗೆ ಸಿಲುಕಿ ಆಕಾಶದಲ್ಲಿ ಹಾರುತ್ತಿರುವಾಗ ಎರಡು ಪ್ರಹರಗಳು ಕಳೆದುಹೋದುವು.

೪೨. ಕೂಡಲೇ ಆ ಶ್ರೀಕೃಷ್ಣನು ಮತ್ತೊಂದು ಬಾಣವನ್ನು ಪ್ರಯೋಗಿಸಿ ಆ ದೈತ್ಯನನ್ನು ಪ್ರಹರಿಸಲು ಆ ಬಾಣವು ಅವನನ್ನು ಒಂದುಕೋಟಿ ಯೋಜನಗಳಷ್ಟು ದೂರ ದಿಕ್ಕುದಿಕ್ಕುಗಳಲ್ಲೆಲ್ಲಾ ತಿರುಗಿಸಿ,

೪೩. ಗಾಳಿಯು ಕಮಲವನ್ನು ಕೆಡಹಿಬಿಡುವಂತೆ ಸಮುದ್ರದಲ್ಲಿ ಕೆಡಹಿಬಿಟ್ಟಿತು. ಈ ರೀತಿಯಾಗಿ ಆ ದೈತ್ಯನು ಸಾವಿಗೀಡಾಗಲು ಆ ದೈತ್ಯನಿಂದ ತೇಜಸ್ಸೊಂದು ಹೊರಟು,

ಸರ್ವತೋಽಪಿ ಭ್ರಮದ್ರಾಜ್ಞ ಶ್ರೀಕೃಷ್ಣೇ ಲೀನತಾಂ ಗತಂ ।
ತದಾ ಜಯಜಯಾರಾವೋ ದಿವಿ ಭೂಮಾವವರ್ತತ || ೪೪ ||

ವಿದ್ಯಾಧರ್ಯಶ್ಚ ಗಂಧರ್ವ್ಯೋ ನನೃತುಃ ಖೇ ಸುಖಾನ್ವಿತಾಃ ।
ಜಗುಃ ಕಿನ್ನರಗಂಧರ್ವಾಸ್ತುಷ್ಟುವುಃ ಸಿದ್ಧಚಾರಣಾಃ || ೪೫ ||

ಋಷಯೋ ಮುನಯಸ್ಸರ್ವೇ ಪ್ರಶಶಂಸುರ್ಹರಿಂ ಪರಂ ।
ಬ್ರಹ್ಮರುದ್ರೇಂದ್ರಸೂರ್ಯಾದ್ಯಾಃ ಸರ್ವೇ ತತ್ರ ಸಮಾಗತಾಃ || ೪೬ ||

ಶ್ರೀಕೃಷ್ಣಸ್ಯೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ || ೪೭ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಶಕುನಿದೈತ್ಯವಧೋ ನಾಮೈಕಚತ್ವಾರಿಂಶೋಽಧ್ಯಾಯಃ

---

೪೪. ಸುತ್ತಲೂ ಸುತ್ತುತ್ತಾ ಕೊನೆಗೆ ಶ್ರೀಕೃಷ್ಣನಲ್ಲಿಯೇ ಐಕ್ಯವಾಗಿಬಿಟ್ಟಿತು. ಆಗ ಅಂತರಿಕ್ಷದಲ್ಲಿಯೂ, ಭೂಮಿಯಲ್ಲಿಯೂ ಎಲ್ಲೆಲ್ಲೂ ಜಯಜಯ ಎಂಬ ಶಬ್ದಗಳು ಕೇಳಬರತೊಡಗಿದುವು.

೪೫. ಆಕಾಶದಲ್ಲಿ ವಿದ್ಯಾಧರಿಯರೂ, ಗಂಧರ್ವಾಂಗನೆಯರೂ, ಸಂತೋಷಾತಿಶಯದಿಂದ ನರ್ತನವನ್ನು ಮಾಡಿದರು. ಕಿನ್ನರರೂ, ಗಂಧರ್ವರೂ, ಸಿದ್ಧಚಾರಣರೂ ಇಂಪಾಗಿ ಗಾನಮಾಡಿದರು.

೪೬. ಆಗ ಆ ಯುದ್ಧರಂಗದಲ್ಲಿ ಋಷಿಗಳೂ, ಮುನಿಗಳೂ, ಬ್ರಹ್ಮನೂ, ಶಂಕರನೂ, ದೇವೇಂದ್ರ, ಮೊದಲಾದ ದೇವತೆಗಳೂ ಬಂದು ಸೇರಿ ಪರಮಪುರುಷನಾದ ಆ ಶ್ರೀಹರಿಯನ್ನು ಕೊಂಡಾಡಿದರು.

೪೭. ಆಗ ಶ್ರೀಕೃಷ್ಣನ ಮೇಲೆ ದೇವತೆಗಳು ಪುಷ್ಪವೃಷ್ಟಿಯನ್ನು ಸುರಿಸಿದರು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಶಕುನಿದೈತ್ಯವಧವೆಂಬ ನಲವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ದ್ವಿಚತ್ವಾರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಪಲಾಯಿತೇಷು ಶೇಷೇಷು ದೈತ್ಯೇಷು ರಣಮಂಡಲಾತ್ ।
ವೀಣಾವೇಣುಮೃದಂಗಾದೀನ್ನಾದಯನ್ದುಂದುಭೀನ್ಹರಿಃ ॥ ೧ ॥

ಗೀಯಮಾನೋ ಯಾದವೇಂದ್ರಃ ಸೂತಮಾಗಧಬಂದಿಭಿಃ ।
ಸ್ವಪುತ್ರೈರ್ಯಾದವೈಃ ಸಾರ್ಧಂ ಸ್ವಸೈನ್ಯಪರಿವಾರಿತಃ ॥ ೨ ॥

ಶಂಖಚಕ್ರಗದಾಪದ್ಮಶಾರ್ಙ್ಗಚಾಪವಿರಾಜಿತಃ ।
ಪ್ರವಿವೇಶ ಸುರೈಃ ಸಾರ್ಧಂ ಪುರೀಂ ಚಂದ್ರಾವತೀಂ ಪ್ರಭುಃ ॥ ೩ ॥

ನಲವತ್ತೆರಡನೆಯ ಅಧ್ಯಾಯವು

೧-೩. ರಾಜೇಂದ್ರ! ಆಲಿಸು ತಮ್ಮ ಪ್ರಭುವು ಮಡಿಯುತ್ತಲೇ ದೈತ್ಯರೆಲ್ಲರೂ ಯುದ್ಧರಂಗದಿಂದ ಹಿಮ್ಮೆಟ್ಟಿ ಓಡಿಹೋದರು. ಅನಂತರ ಯಾದವೇಂದ್ರನಾದ ಆ ಶ್ರೀಕೃಷ್ಣನು ವಿಜಯಸೂಚಕವಾದ ವೀಣಾ, ವೇಣು, ಮೃದಂಗ ಮೊದಲಾದ ಮಂಗಳವಾದ್ಯಗಳನ್ನೂ, ನಗರಿಗಳನ್ನೂ ಮೊಳಗಿಸುತ್ತಾ ತನ್ನ ಕಡೆಯ ಸೂತಮಾಗಧರಿಂದಲೂ, ವಂದಿಗಳಿಂದಲೂ ಸ್ತುತಿಸಲ್ಪಡುತ್ತಾ ತನ್ನ ಕುಮಾರರಿಂದಲೂ. ಇತರ ಯದುವೀರರಿಂದಲೂ, ತನ್ನ ಸೇನೆಗಳಿಂದಲೂ ಸುತ್ತುವರಿಯಲ್ಪಟ್ಟು ತನ್ನ ಆಯುಧಗಳಾದ ಶಂಖ, ಚಕ್ರ, ಗದಾ, ಪದ್ಮ, ಶಾರ್ಙ್ಗಚಾಪಗಳಿಂದ ಒಪ್ಪುತ್ತಾ ದೇವತೆಗಳೊಡನೆ ಚಂದ್ರಾವತೀನಗರಕ್ಕೆ ಬಂದನು.

ದುಃಖಾರ್ತಾ ಭರ್ತರಿ ಮೃತೇ ರುದಂತೀ ಕರುಣಂ ಬಹು ।
ಅಂಕಂ ಗೃಹೀತ್ವಾ ಶಕುನೇಃ ಸುತಂ ರಾಜ್ಞೀ ಮದಾಲಸಾ ॥ ೪ ॥

ಶ್ರೀಕೃಷ್ಣಚರಣೇ ಬಾಲಂ ನಿಧಾಯಾಶು ಕೃತಾಂಜಲಿಃ ।
ಅಶ್ರುಪೂರ್ಣಮುಖೀ ದೀನಾ ಹರಿಂ ನತ್ವಾ ಜಗಾದ ಹ ॥ ೫ ॥

॥ ಮದಾಲಸೋವಾಚ ॥

ಭಾರಾವತಾರಾಯ ಭುವಿ ಪ್ರಭೋ ತ್ವಂ
ಜಾತೋ ಯದೂನಾಂ ಕುಲ ಆದಿದೇವ ।
ಗೃಹಿಷ್ಯಸೇ ಯಾನಿ ಭವಂ ನಿಧಾಯ
ಗುಣೈರ್ನ ಲಿಪ್ತೋಽಸಿ ನಮಾಮಿ ತುಭ್ಯಂ ॥ ೬ ॥

---

೪. ಅಲ್ಲಿ ದೈತ್ಯರಾಜನಾದ ಶಕುನಿಯ ಪತ್ನಿಯಾದ ಮದಾಲಸೆಯೆಂಬ ರಾಣಿಯು ತನ್ನ ಪತಿಯು ಮಡಿದುದನ್ನು ಕೇಳಿ ಮಿತಿಮೀರಿದ ದುಃಖದಿಂದ ಎಂಥವರಿಗೂ ದುಃಖವುಂಟಾಗುವಂತೆ ಬಹುವಾಗಿ ವಿಲಪಿಸುತ್ತಾ ತನ್ನ ಮಗನನ್ನು ತೊಡೆಯ ಮೇಲೆತ್ತಿಕೊಂಡು ವ್ಯಥೆಯಲ್ಲಿ ಮುಳುಗಿಹೋಗಿದ್ದಳು

೫. ಆ ಮದಾಲಸೆಯು ಶ್ರೀಕೃಷ್ಣನು ತಮ್ಮ ನಗರಕ್ಕೆ ಬಂದುದನ್ನರಿತೊಡನೆಯೇ ಇನ್ನೂ ಎಳೆಯ ವಯಸ್ಸಿನವನಾದ ತನ್ನ ಮಗನನ್ನು ಆತನ ಕಾಲ್ಗಳ ಮೇಲೆ ಕೆಡಹಿ ಕೈಮುಗಿದುಕೊಂಡು ಕಣ್ಣುಗಳಲ್ಲಿ ನೀರನ್ನು ಸುರಿಸುತ್ತಾ ಆ ಪ್ರಭುವಿಗೆ ನಮಸ್ಕಾರಮಾಡಿ ದೈನ್ಯದಿಂದ ಇಂತೆಂದಳು.

೬. "ಎಲೈ ಪ್ರಭುವೇ ! ದೇವತೆಗಳಿಗೂ ಆದಿಪುರುಷನೆನಿಸಿದ ನೀನು ಭೂಭಾರವನ್ನು ಪರಿಹರಿಸುವ ಸಲುವಾಗಿ ಯದುವಂಶದಲ್ಲಿ ಅವತರಿಸಿ ದುಷ್ಟರಾದವರನ್ನೆಲ್ಲಾ ದಂಡಿಸುತ್ತಾ ಬಂದಿರುವೆ. ಓ ದೇವ! ನೀನು ಗುಣಕರ್ಮಾಧೀನರಾದ ಮನುಷ್ಯರಂತೆಯೇ ವರ್ತಿಸುತ್ತಿದ್ದರೂ ಆ ಗುಣಗಳಿಂದ ಮಾತ್ರ ಸ್ವಲ್ಪವೂ ಸ್ಪರ್ಶಿಸಲ್ಪಡದೆಯೇ ಇರುವೆ. ಇಂತಹ ನಿನ್ನನ್ನು ನಮಸ್ಕರಿಸುವೆನು.

ಮದಾತ್ಮಜಂ ಪಾಲಯ ಭೀತಭೀತ-
ಮಮುಷ್ಯ ಹಸ್ತಂ ಕುರು ಶೀರ್ಷ್ಣಿ ದೇವ ।
ಭರ್ತ್ರಾ ಕೃತಂ ಮೇ ಕಿಲ ತೇಽಪರಾಧಂ
ಕ್ಷಮಸ್ವ ದೇವೇಶ ಜಗನ್ನಿವಾಸ ॥ ೭ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತೋ ಭಗವಾಂಸ್ತಸ್ಯ ಮೂರ್ಧ್ನಿ ಕೃತ್ವಾ ಕರದ್ವಯಂ ।
ಸರ್ವಂ ಚಂದ್ರಾವತೀರಾಜ್ಯಂ ದದೌ ತಸ್ಮೈ ಮಹಾಮುನಿಃ ॥ ೮ ॥

ದತ್ವಾ ಕಲ್ಪಾಂತಮಾಯುಷ್ಯಂ ಭಕ್ತಿಜ್ಞಾನಂ ವಿರಕ್ತಿಮತ್ ।
ಶಕುನೇಃ ಶಿಶವೇ ಕೃಷ್ಣಃ ಸ್ವಮಾಲಾಂ ಪ್ರದದೌ ಶುಭಾಂ ॥ ೯ ॥

---

೭. ಓ ದೇವೇಶ! ಜಗನ್ನಿವಾಸ! ನನ್ನ ಪತಿಯು ಮಾಡಿದ ಅಪರಾಧವನ್ನು ಮನ್ನಿಸಿ, ಬಹುವಾಗಿ ಭಯದಿಂದ ತಲ್ಲಣಿಸುತ್ತಿರುವ ಈ ನನ್ನ ಎಳೆಯ ಮಗನನ್ನು ಕಾಪಾಡು. ಈ ಕುಮಾರನ ತಲೆಯ ಮೇಲೆ ನಿನ್ನ ಅಭಯಹಸ್ತವನ್ನು ಇಟ್ಟು ರಕ್ಷಿಸು ಎಂದು ಪ್ರಾರ್ಥಿಸಿದಳು.

೮. ಓ ಬಹುಲಾಶ್ವರಾಜೇಂದ್ರ! ಈ ರೀತಿಯಾಗಿ ಆ ಮದಾಲಸೆಯು ತನ್ನನ್ನು ಪ್ರಾರ್ಥಿಸಲು ಆ ಶ್ರೀಕೃಷ್ಣನು ಹಾಗೆಯೇ ಆಗಲೆಂದು ಆ ಕುಮಾರನ ತಲೆಯ ಮೇಲೆ ತನ್ನ ಕೈಗಳೆರಡನ್ನೂ ಇಟ್ಟು ಸಮಸ್ತವಾದ ಚಂದ್ರಾವತೀರಾಜ್ಯವನ್ನೂ ಅವನಿಗೇ ಕೊಟ್ಟು ಬಿಟ್ಟನು.

೯. ಬಳಿಕ ಆ ಕುಮಾರನಿಗೆ ಕಲ್ಪಪರ್ಯಂತವಾಗಿ ಬದುಕುವಂತೆ ಪೂರ್ಣಾಯುಷ್ಯವನ್ನೂ ಇತ್ತು ವೈರಾಗ್ಯಪೂರ್ವಕವೂ, ಭಕ್ತಿಪೂರ್ಣವೂ, ಆದ ದಿವ್ಯಜ್ಞಾನವು ದೊರೆಯುವಂತೆ ಅನುಗ್ರಹಿಸಿ ತಾನು ಧರಿಸಿದ್ದ ಶುಭಕರವಾದ ಮಾಲೆಯೊಂದನ್ನು ಅವನಿಗೆ ಇತ್ತನು.

ಉಚ್ಚೈಃಶ್ರವೋ ಹಯೋರತ್ನಕಾಮಧೇನುಸುರದ್ರುಮಾಃ ।
ಆಹೃತಾ ಯೇ ಶಕುನಿನಾ ಪುರಾ ಯುದ್ಧೇ ಪುರಂದರಾತ್ ॥ ೧೦ ॥

ಪುರಂದರಾಯ ತಾನ್ಪ್ರಾದಾತ್ಪ್ರಯತ್ನಾಚ್ಛ್ರೀಜನಾರ್ದನಃ ।
ಗೋವಿಪ್ರಸುರಸಾಧೂನಾಂ ಛಂದಸಾಂ ಪಾಲಕಃ ಸ್ವಯಂ ॥ ೧೧ ॥

॥ ಬಹುಲಾಶ್ವ ಉವಾಚ ॥

ಕೇಽಮೀ ದೈತ್ಯಾಃ ಪೂರ್ವಕಾಲೇ ಶಕುನ್ಯಾದ್ಯಾ ಮಹಾಬಲಾಃ ।
ದೇವರ್ಷೇ ಮೇ ಪರಂ ಚಿತ್ರಂ ಕಸ್ಮಾನ್ಮೋಕ್ಷಮುಪಾಗತಾಃ ॥ ೧೨ ॥

॥ ಶ್ರೀ ನಾರದ ಉವಾಚ ॥

ಬ್ರಹ್ಮಕಲ್ಪೇ ಪುರಾ ರಾಜನ್ಗಂಧರ್ವೇಶಃ ಪುರಾವಸುಃ ।
ಆಸೀತ್ತಸ್ಯ ಶುಭಾಃ ಪುತ್ರಾ ಬಭೂವುರ್ನವ ಚೌರಸಾಃ ॥ ೧೩ ॥

೧೦–೧೧. ಅನಂತರ ಗೋಬ್ರಾಹ್ಮಣರಿಗೂ, ಸಜ್ಜನರಿಗೂ, ದೇವತೆಗಳಿಗೂ, ವೇದಗಳಿಗೂ, ಪರಿಪಾಲಕನೆನಿಸಿದ ಆ ಶ್ರೀಕೃಷ್ಣನು ಹಿಂದೆ ದೈತ್ಯೇಂದ್ರನಾದ ಶಕುನಿಯು ಇಂದ್ರನೊಡನೆ ಯುದ್ಧಮಾಡಿದಾಗ ಆತನನ್ನು ಸೋಲಿಸಿ ಕಸಿದುಕೊಂಡು ಬಂದಿದ್ದ ಉಚ್ಚೈಶ್ರವಸ್ಸೆಂಬ ಕುದುರೆಯನ್ನೂ, ನವರತ್ನಗಳನ್ನೂ, ಕಾಮಧೇನು, ಕಲ್ಪವೃಕ್ಷಗಳನ್ನೂ, ತರಿಸಿ, ಮರಳಿ ಆ ದೇವೇಂದ್ರನಿಗೇ ಕೊಟ್ಟುಬಿಟ್ಟನು.

೧೨. ಹೀಗೆಂಬುದಾಗಿ ನಾರದಮಹರ್ಷಿಯು ನುಡಿಯಲು ಆ ಬಹುಲಾಶ್ವ ನರೇಂದ್ರನು ಆತನನ್ನು ಕುರಿತು "ಓ ಮಹರ್ಷಿ ! ಮಹಾಬಲಶಾಲಿಗಳಾದ ಈ ಶಕುನಿ ಮೊದಲಾದ ದೈತ್ಯರು ಹಿಂದಿನ ಕಾಲದಲ್ಲಿ ಯಾರಾಗಿದ್ದರು ? ಈ ದೈತ್ಯರೆಲ್ಲರೂ ಯುದ್ಧದಲ್ಲಿ ಮಡಿದೊಡನೆಯೇ ಮೋಕ್ಷಭಾಗಿಗಳಾದರಲ್ಲವೆ ? ಈ ವೃತ್ತಾಂತವು ನನಗೆ ಬಹು ಆಶ್ಚರ್ಯವನ್ನುಂಟುಮಾಡುತ್ತಿರುವುದು ಇದನ್ನು ತಿಳಿಸಬೇಕು" ಎನ್ನಲು,

೧೩. ರಾಜೇಂದ್ರ ! ಹಿಂದೆ ಬ್ರಹ್ಮಕಲ್ಪದಲ್ಲಿ ಪುರಾವಸುವೆಂಬ ಗಂಧರ್ವಾಧಿಪತಿಯಿದ್ದನು. ಆತನಿಗೆ ಒಂಭತ್ತುಮಂದಿ ಸಚ್ಚರಿತ್ರರಾದ ಔರಸಪುತ್ರರಿದ್ದರು.

ಕಂದರ್ಪಸಮಲಾವಣ್ಯಾ ದಿವ್ಯಭೂಷಣಭೂಷಿತಾಃ ।
ನಿತ್ಯಂ ಜಗುರ್ಬ್ರಹ್ಮಲೋಕೇ ಗೀತವಾದ್ಯವಿಶಾರದಾಃ । ॥ ೧೪ ॥

ಮಂದಾರೋ ಮಂದರೋ ಮಂದೋ ಮಂದಹಾಸೋ ಮಹಾಬಲಃ ।
ಸುದೇವಃ ಸುಧನಃ ಸೌಧಃ ಶ್ರೀಭಾನುರಿತಿ ವಿಶ್ರುತಾಃ ॥ ೧೫ ॥

ಏಕದಾ ಮೋಹತಃ ಪುತ್ರೀಂ ವಾಗ್ದೇವೀಂ ವೀಕ್ಷ್ಯ ವೇಧಸಃ ।
ಜಹಸುಸ್ತೇ ಸ್ವಮನಸಿ ಪ್ರರಾವಸುಸುತಾಶ್ಚ ಯೇ ॥ ೧೬ ॥

ಸುರಜ್ಯೇಷ್ಠಾಽಪರಾಧೇನ ಗತಾ ಯೋನಿಂ ಚ ತಾಮಸೀಂ ।
ವಾರಾಹೇಽಥ ಹಿರಣ್ಯಾಕ್ಷಪತ್ನ್ಯಾಂ ತೇ ಜಜ್ಞಿರೇ ನವ ॥ ೧೭ ॥

---

೧೪. ಆ ಗಂಧರ್ವಕುಮಾರರು ಸೌಂದರ್ಯದಲ್ಲಿ ಮನ್ಮಥನನ್ನು ಸರಿಗಟ್ಟುತ್ತಾ ದಿವ್ಯವಾದ ಆಭರಣಗಳನ್ನು ಧರಿಸಿದವರಾಗಿ ಗಾನಮಾಡುವುದರಲ್ಲಿಯೂ, ವಾದ್ಯಗಳನ್ನು ನುಡಿಸುವುದರಲ್ಲಿಯೂ ವಿಶೇಷವಾಗಿ ಕೌಶಲವನ್ನು ಪಡೆದು ಪ್ರತಿನಿತ್ಯವೂ ಬ್ರಹ್ಮಲೋಕಕ್ಕೆ ಹೋಗಿ ಮಧುರವಾಗಿ ಗಾನಮಾಡುತ್ತಿದ್ದರು.

೧೫. ಆ ಒಂಭತ್ತು ಮಂದಿಯೂ ಕ್ರಮವಾಗಿ ಮಂದಾರ, ಮಂಥರ, ಮಂದ, ಮಂದಹಾಸ, ಮಹಾಬಲ, ಸುದೇವ, ಸುಧನ, ಸೌಧ, ಶ್ರೀಭಾನು, ಎಂಬ ಹೆಸರುಗಳಿಂದ ಪ್ರಖ್ಯಾತರಾಗಿದ್ದರು.

೧೬. (ಹೀಗಿರುವಾಗ) ಒಂದು ದಿನ ಆ ಗಂಧರ್ವಕುಮಾರರು ಬ್ರಹ್ಮನು ತನ್ನ ಪುತ್ರಿಯಾದ ವಾಗ್ದೇವಿಯಲ್ಲಿ ಮೋಹಗೊಂಡಿರುವುದಕ್ಕಾಗಿ ತಮ್ಮ ಮನಸ್ಸಿನಲ್ಲಿಯೇ ಆತನ ವಿಷಯವಾಗಿ ಅಪಹಾಸ್ಯವನ್ನು ಮಾಡಿಬಿಟ್ಟರು.

೧೭. ಈ ರೀತಿಯಾಗಿ ಆ ಗಂಧರ್ವಪುತ್ರರು ಸುರಜ್ಯೇಷ್ಠನಾದ ಬ್ರಹ್ಮನ ವಿಷಯದಲ್ಲಿ ಸಲ್ಲದ ರೀತಿಯಲ್ಲಿ ವರ್ತಿಸಿದುದರಿಂದ ಆ ಒಂಭತ್ತು ಮಂದಿಯೂ ವರಾಹಕಲ್ಪದಲ್ಲಿ ತಾಮಸವಾದ ಜನ್ಮವನ್ನು ತಾಳಿ ಹಿರಣ್ಯಾಕ್ಷನ ಪತ್ನಿಯಲ್ಲಿ ಜನಿಸಿದರು.

ಶಕುನಿಃ ಶಂಬರೋ ಹೃಷ್ಟೋ ಭೂತಸಂತಾಪನೋ ವೃಕಃ ।
ಕಾಲನಾಭೋ ಮಹಾನಾಭೋ ಹರಿಶ್ಮಶ್ರುಸ್ತಥೋತ್ಕಚಃ ॥ ೧೮ ॥

ಏಕದಾ ಗೃಹಮಾಯಾಂತಮಪಾಂತರತಮಂ ಮುನಿಂ ।
ನತ್ವಾ ಸಂಪೂಜ್ಯ ವಿಧಿವತ್ಪಪ್ರಚ್ಛುರಿದಮಾದರಾತ್ ॥ ೧೯ ॥

॥ ದೈತ್ಯಾ ಊಚುಃ ॥

ಶೃಣು ತ್ವಂ ಸ್ವಮುಖಾದ್ಬ್ರಹ್ಮನ್ಕೈವಲ್ಯೇಶೋ ಹರಿಃ ಸ್ವಯಂ ।
ದದಾತಿ ಮೋಕ್ಷಂ ಭಗವಾನ್ಭಕ್ತಾನಾಂ ಭಕ್ತವತ್ಸಲಃ ॥ ೨೦ ॥

ಅಸ್ಮಾಭಿರ್ನ ಕೃತಾ ಭಕ್ತಿರಾಸುರೀಂ ಯೋನಿಮಾಸ್ಥಿತೈಃ ।
ದುಃಸಂಗನಿರತೈರ್ದುಷ್ಟೈಃ ಕಥಂ ಮೋಕ್ಷೋ ಭವೇದಿಹ ॥ ೨೧ ॥

---

೧೮. ಆ ಒಂಭತ್ತುಮಂದಿಗೂ ಕ್ರಮವಾಗಿ ಶಕುನಿ, ಶಂಬರ, ಹೃಷ್ಟ, ಭೂತಸಂತಾಪನ, ವೃಕ, ಕಾಲನಾಭ, ಮಹಾನಾಭ, ಹರಿಶ್ಮಶ್ರು, ಉತ್ಕಚ, ಎಂಬ ಹೆಸರುಗಳಾದುವು.

೧೯. ಒಮ್ಮೆ ಈ ದೈತ್ಯಪುತ್ರರು ಅಪಾಂತರತಮನೆಂಬ ಮಹರ್ಷಿಯೋರ್ವನು ತಮ್ಮ ಮನೆಗೆ ಬಂದುದನ್ನು ಕಂಡು ಆತನನ್ನು ವಿಧಿವತ್ತಾಗಿ ಪೂಜಿಸಿ ನಮಸ್ಕಾರ ಮಾಡಿ ಆದರದಿಂದ ಈ ರೀತಿಯಾಗಿ ಪ್ರಶ್ನಿಸಿದರು.

೨೦. ಓ ಬ್ರಹ್ಮಜ್ಞಾ! ನಮ್ಮ ಬಿನ್ನಹವನ್ನು ಆಲಿಸು. ಸಾಕ್ಷಾತ್ ಮೋಕ್ಷದಾಯಕನಾದ ಆ ಶ್ರೀಹರಿಯು ಭಕ್ತರಲ್ಲಿ ವಿಶೇಷವಾದ ಮಮತೆಯುಳ್ಳವನಾದುದರಿಂದ ಅವರಿಗೆ ಮೋಕ್ಷವನ್ನು ಕರುಣಿಸುವನೆಂದು ನಾವು ಕೇಳಿರುವೆವು.

೨೧. ಆದರೆ ಅಸುರಜಾತಿಯಲ್ಲಿ ಹುಟ್ಟಿ ದುಷ್ಟರ ಸಹವಾಸವನ್ನು ಮಾಡಿ ಸರ್ವದಾ ದುಷ್ಟವಾದ ರೀತಿಯಲ್ಲಿಯೇ ವ್ಯವಹರಿಸುತ್ತಿರುವ ನಮಗೆ ಆ ಪರಮ ಪುರುಷನಲ್ಲಿ ಭಕ್ತಿಯು ಉಂಟಾಗಲಿಲ್ಲವು. ಇಂತಹ ನಮಗೆ ಮೋಕ್ಷವು ದೊರೆಯುವುದಾದರೂ ಹೇಗೆ ?

ಉಪಾಯಂ ವದ ನೋ ಬ್ರಹ್ಮನ್ಕಲ್ಯಾಣಸ್ಯ ಪರಸ್ಯ ಚ ।
ಕಲ್ಯಾಣಾರ್ಥಂ ವಿಚರಸಿ ದೀನಾನಾಂ ಜಗತಿ ಪ್ರಭೋ ॥ ೨೨ ॥

॥ ಅಪಾಂತರತಮ ಉವಾಚ ॥

ಗುಣಾನಾಮಪೃಥಗ್ಭಾವೈರ್ಯೇ ಭಜಂತಿ ಹರಿಂ ಪರಂ ।
ತೇಽಂತೇ ಪ್ರಾಪುಃ ಪರಂ ದೈತ್ಯಾ ನಿರ್ಗುಣಂ ಮೋಕ್ಷನಾಯಕಂ ॥ ೨೩ ॥

ಐಕ್ಯಂ ಚ ಸೌಹೃದಂ ಸ್ನೇಹಂ ಭಯಂ ಕ್ರೋಧಂ ಸ್ಮಯಂ ತಥಾ ।
ವಿಧಾಯ ಪೂರ್ವಂ ಸತತಂ ಶ್ರೀಕೃಷ್ಣೇ ಲೀನತಾಂ ಗತಾಃ ॥ ೨೪ ॥

---

೨೨. ಓ ಬ್ರಹ್ಮಜ್ಞ! ಮಂಗಲದಾಯಕವೂ, ಉತ್ತಮೋತ್ತಮವೂ ಆದ ಆ ಮೋಕ್ಷಪ್ರಾಪ್ತಿಯಾಗಬೇಕಾದರೆ ಯಾವ ಉಪಾಯವನ್ನು ಆಶ್ರಯಿಸಬೇಕು. ಅವನ್ನು ನಮಗೆ ತಿಳಿಸು. ಹೇ ಪ್ರಭು! ನೀನು ಜಗತ್ತಿನಲ್ಲಿರುವ ನಮ್ಮಂಥ ದೀನರಿಗೆ ಮಂಗಳವುಂಟಾಗಲೆಂದೇ ಈ ರೀತಿ ಸಂಚರಿಸುತ್ತಿರುವೆಯಲ್ಲವೇ ? " ಎನ್ನಲು,

೨೩. ಆ ಅಪಾಂತರತಮಮುನಿಯು ಅವರನ್ನು ಕುರಿತು " ಎಲೈ ದೈತ್ಯರಿರಾ! ಯಾರು ಸತ್ತ್ವಾದಿಗುಣಗಳ ಉದ್ರೇಕಗಳಿಗೆ ಒಳಗಾಗದೆ ಸಮಭಾವದಿಂದ ಆ ಶ್ರೀಹರಿಯನ್ನು ಭಜಿಸುವರೋ ಆ ಧೀರರೇ ಕೊನೆಗೆ ಗುಣಾತೀತನೂ, ಮೋಕ್ಷದಾಯಕನೂ ಆದ ಆ ಪ್ರಭುವನ್ನು ಸೇರುವರು.

೨೪-೨೫. ಹಿಂದೆ ಆ ಪರಮಪುರುಷನೊಡನೆ ಕೆಲಮಂದಿ ಸಹವರ್ತನೆಯಿಂದಲೂ, ಕೆಲಮಂದಿ ತಮ್ಮ ಶುದ್ಧವಾದ ಅಂತಃಕರಣದಿಂದಲೂ, ಕೆಲವರು ಗೆಳೆತನದಿಂದಲೂ, ಇನ್ನು ಕೆಲವರು ಭಯದಿಂದಲೂ, ಮತ್ತೆ ಕೆಲವರು ಕೋಪದಿಂದಲೂ. ಬೇರೆ ಕೆಲವರು ಅಹಂಕಾರದಿಂದಲೂ ವರ್ತಿಸುತ್ತಾ ಹಿರಣ್ಯಗರ್ಭನೆನಿಸಿದ ಆತನ ಸಂಬಂಧವನ್ನು ಪಡೆದು ಕರ್ದಮಾದಿಪ್ರಜಾಪತಿಗಳಂತೆ ಆ ಶ್ರೀಕೃಷ್ಣನಲ್ಲಿಯೇ

ಪೃಶ್ನಿಗರ್ಭಸ್ಯ ಸಂಬಂಧಾತ್ಪ್ರಜಾನಾಂ ಪತಯೋ ಯಥಾ ।
ಕಾಯಾಪವಃ ಸೌಹೃದಾಚ್ಚ ಸ್ನೇಹಾಚ್ಚ ಸುತಪಾ ಮುನಿಃ ॥ ೨೫ ॥

ಭಯಾದ್ಧಿರಣ್ಯಕಶಿಪುಃ ಕ್ರೋಧಾದ್ವಕ್ಷ ಪಿತಾಽಸುರಃ ।
ಸ್ಮಯಾಚ್ಚ ಶ್ರುತಯಃ ಪ್ರಾಪುರ್ಯೋಽತನಾಂ ದುರ್ಲಭಂ ಪರಂ ॥ ೨೬ ॥

ಯೇನ ಕೇನಾಪಿ ಭಾವೇನ ಶ್ರೀಕೃಷ್ಣೇ ಧಾರಯೇನ್ಮನಃ ।
ಭಕ್ತಿಯೋಗೇನ ತದ್ಧಾಮ ಯದೇಭಿಃ ಪ್ರಾಪ್ಯತೇಽಸುರಾಃ ॥ ೨೭ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾಂತರ್ಹಿತೇ ರಾಜನ್ನಪಾಂತರತಮೋ ಮುನೌ ।
ಚಕ್ರುರ್ವೈರಂ ಶಕುನ್ಯಾದ್ಯಾಃ ಪರಿಪೂರ್ಣತಮೋ ಹರೌ ॥ ೨೮ ॥

ಐಕ್ಯವನ್ನು ಹೊಂದಿದರು. ಎಲೈ ದೈತ್ಯರಿರಾ! ಮಹಾಯೋಗಿಗಳಿಗೂ ದುರ್ಲಭವೆನಿಸಿದ ಆ ಪರಮಪುರುಷನನ್ನೇ ಕಯಾದು ಪುತ್ರನಾದ ಪ್ರಹ್ಲಾದನು ತನ್ನ ಶುದ್ಧಾಂತಃಕರಣದಿಂದಲೂ ಸುತಪಸ್ಸೆಂಬ ಮಹರ್ಷಿಯು ಗೆಳೆತನದಿಂದಲೂ,

೨೬. ಹಿರಣ್ಯಕಶಿಪುವು ಭಯದಿಂದಲೂ, ನಿಮ್ಮ ತಂದೆಯಾದ ಹಿರಣ್ಯಾಕ್ಷನು ಕ್ರೋಧದಿಂದಲೂ, ವೇದಗಳು ಅಹಂಕಾರದಿಂದಲೂ ಹೊಂದಿದರು.

೨೭ ಎಲೈ ಅಸುರರಿರಾ! ಆ ಶ್ರೀಕೃಷ್ಣನಲ್ಲಿ ಯಾವ ರೀತಿಯಿಂದಲಾದರೂ ಸರಿಯೆ! ನಮ್ಮ ಮನಸ್ಸು ನೆಲೆಗೊಳ್ಳುವಂತೆ ಮಾಡಬೇಕು. ಹಾಗಾದಲ್ಲಿ ಭಕ್ತಿಯೋಗದಿಂದ ಹಿಂದಿನ ಮಹಾತ್ಮರು ಪಡೆದಂತಹ ಆ ದಿವ್ಯಧಾಮವನ್ನೇ ಎಲ್ಲರೂ ಸೇರುವರು " ಎಂದನು.

೨೮. ಓ ಬಹುಲಾಶ್ವರಾಜ! ಹೀಗೆಂಬುದಾಗಿ ನುಡಿದು ಅಪಾಂತರತಮ ಮುನಿಯು ಅಂತರ್ಧಾನವನ್ನು ಹೊಂದಿದನು. ಬಳಿಕ ಈ ಶಕುನಿ ಮೊದಲಾದ ದೈತ್ಯಸಹೋದರರು ಪರಿಪೂರ್ಣತಮನೆನಿಸಿದ ಈ ಶ್ರೀಕೃಷ್ಣನಲ್ಲಿ ವೈರವನ್ನೇ ಸಾಧಿಸುತ್ತಾ ಬಂದರು.

ತೇ ಪ್ರಾಪ್ತುರ್ವೈರಭಾವೇನ ಶ್ರೀಕೃಷ್ಣಂ ಪರಮೇಶ್ವರಂ ।
ನ ಚಿತ್ರಂ ವಿದ್ಧಿ ರಾಜೇಂದ್ರ ಕೀಟಃ ಪೇಶಸ್ಕೃತಂ ಯಥಾ ॥ ೨೯ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಶಕುನಿವಧೋ ನಾಮ ದ್ವಿಚತ್ವಾರಿಂಶೋಽಧ್ಯಾಯಃ

---

೨೯. ಕೊನೆಗೆ ಆ ವೈರದಿಂದಲೇ ಪರಮಪುರುಷನಾದ ಆ ಶ್ರೀಹರಿಯನ್ನು ಸೇರಿಬಿಟ್ಟರು. ರಾಜೇಂದ್ರ! ಇದರಲ್ಲಿ ಆಶ್ಚರ್ಯವೇನೂ ಇಲ್ಲ" ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಶಕುನಿ ವಧವೆಂಬ ನಲವತ್ತೆರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ತ್ರಿಚತ್ವಾರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಇತ್ಥಂ ಖಂಡಂ ತು ಭದ್ರಾಶ್ವಂ ಜಿತ್ವಾ ಶ್ರೀಯಾದವೇಶ್ವರಃ ।
ಯದುಭಿಃ ಸೈನಿಕೈಃ ಸಾರ್ಧಮಿಲಾವೃತಮಥಾಯಯೌ ॥ ೧ ॥

ವಿಭಾತಿ ಯತ್ರೈವ ಗಿರೀಂದ್ರರಾಜೋ
ಭೂಪದ್ಮಗೋಲಸ್ಯ ಚ ಕರ್ಣಿಕೇವ ।
ಸ್ಫುರದ್ದ್ಯುತಿಃ ಸ್ವರ್ಣಮಯಃ ಸುಮೇರುಃ
ಸುರಾಲಯೋ ಮೈಥಿಲ ರತ್ನಸಾನುಃ ॥ ೨ ॥

ನಲವತ್ತಮೂರನೆಯ ಅಧ್ಯಾಯವು

೧. ಬಹುಲಾಶ್ವರಾಜೇಂದ್ರ! ಈ ರೀತಿಯಾಗಿ ಆ ಶ್ರೀಕೃಷ್ಣನು ಭದ್ರಾಶ್ವ ಖಂಡವನ್ನು ಗೆದ್ದನಂತರ ತನ್ನ ಯಾದವಸೇನೆಯೊಡನೆ ಇಲಾವೃತಖಂಡಕ್ಕೆ ಬಂದನು.

೨. ಆ ಖಂಡದಲ್ಲಿರುವ ಪರ್ವತಗಳಿಗೆಲ್ಲಾ ರಾಜನೆನಿಸಿದ ಮೇರು ಪರ್ವತವು ಭೂಮಂಡಲವೆಂಬ ಕಮಲಕ್ಕೆ ಕರ್ಣಿಕೆಯಂತೆ ಕಂಗೊಳಿಸುತ್ತಿರುವುದು. ಆ ಸುಮೇರುವು ಸಂಪೂರ್ಣವಾಗಿ ಸುವರ್ಣದಿಂದಲೇ ನಿರ್ಮಿಸಲ್ಪಟ್ಟು ಥಳಥಳನೆ ಹೊಳೆಯುತ್ತಾ ದೇವತೆಗಳಿಗೆ ನಿವಾಸವೆನಿಸಿದ ರತ್ನಗಳಿಗೆ ನೆಲೆಯಾದ ತನ್ನ ತಪ್ಪಲು ಪ್ರದೇಶಗಳಿಂದ ರಮಣೀಯವಾಗಿರುವುದು.

ತಂ ಸರ್ವತೋ ಮಂದರಮೇರುಸುಂದರೌ
ಸುಪಾರ್ಶ್ವ ಏವಂ ಕುಮುದಶ್ಚ ತುರ್ಥಕಃ ।
ವಿಭಾತಿ ಸೈಕೋ ಗಿರಿಭಿರ್ನಗೇಶ್ವರ–
ಶ್ಚತುಷ್ಪದಾರ್ಥೈಶ್ಚ ಮನೋರಥಾ ಇವ ॥ ೩ ॥

ಜಾಂಬೂನದಂ ಜಂಬುಭವಂ ಹಿ ಯತ್ರ
ಯತಃ ಸ್ವತಃ ಸಿದ್ಧಿಭವಂ ಸುವರ್ಣಂ ।
ಯತ್ರಾರುಣೋದಾಖ್ಯನದೀ ಚ ಜಾತಾ
ಯದ್ವಾರಿಪಾನಾದ್ಭುವಿ ನಾಮಯಿತ್ವಂ ॥ ೪ ॥

ಕದಂಬಜಾಮಧುಧರಾಶ್ಚ ಪಂಚ
ಯಾಸಾಂ ತು ಪಾನೇನ ನೃಣಾಂ ಕದಾಪಿ ।
ಶೀತೋಷ್ಣವೈವರ್ಣ್ಯಪರಿಶ್ರಮಾದ್ಯಾ
ದೌರ್ಗಂಧ್ಯಭಾವಾ ನ ಭವಂತಿ ರಾಜನ್ ॥ ೫ ॥

---

೩. ಆ ಸುಮೇರುವಿನ ಸುತ್ತಲೂ ಮಂದರ, ಮೇರುಸುಂದರ, ಸುಪಾರ್ಶ್ವ, ಕುಮುದ, ಎಂಬ ನಾಲ್ಕು ಪರ್ವತಗಳು ಇರುವುವು. ಆ ಪರ್ವತಗಳಿಂದ ಕೂಡಿದ ಈ ಪರ್ವತರಾಜನಾದ ಮೇರುವು ಧರ್ಮಾರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳಿಂದ ಸಮನ್ವಿತವಾದ ಮನೋರಥದಂತೆ ಶೋಭಿಸುತ್ತಿರುವುದು.

೪. ಆ ಇಲಾವೃತಖಂಡದಲ್ಲಿ ಜಂಬೂವೃಕ್ಷದಿಂದ ಹುಟ್ಟಿದುದರಿಂದಲೇ ಜಾಂಬೂನದವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಸುವರ್ಣವು ಜನರಿಗೆ ಸ್ವಯಂ ಸಿದ್ಧಿಯನ್ನುಂಟುಮಾಡುತ್ತಿರುವುದು ಮತ್ತು ಆ ಜಂಬೂವೃಕ್ಷದಿಂದಲೇ ಅರುಣೋದಾ ಎಂಬ ನದಿಯು ಹುಟ್ಟಿ ಹರಿಯುತ್ತಿರುವುದು. ಆ ನದಿಯ ನೀರನ್ನು ಕುಡಿದ ಮಾನವನಿಗೆ ಯಾವ ರೋಗವೂ ಉಂಟಾಗುವುದಿಲ್ಲವು.

೫. ಆ ಖಂಡದಲ್ಲಿ ಕದಂಬವೃಕ್ಷದಿಂದ ಮದಿರೆಯು ಐದು ಧಾರೆಗಳಾಗಿ ಹರಿಯುತ್ತಿರುವುದು. ಆ ಮದ್ಯಧಾರೆಗಳನ್ನು ಸವಿದ ಮಾನವನಿಗೆ ಎಂದೆಂದಿಗೂ ಶಖೆ, ಚಳಿ, ಮುಖವು ಬಣ್ಣಗೆಡುವುದು, (ವೈವರ್ಣ್ಯ) ಬಳಲಿಕೆ, ದುರ್ವಾಸನೆ, ಇವುಗಳು ಉಂಟಾಗಲಾರವು.

ಯದುದ್ಭವಾಃ ಕಾಮದುಘಾ ನದಾಶ್ಚ
ರತ್ನಾನ್ನವಾಸಃ ಶುಭಭೂಷಣಾನಿ ।
ಶಯ್ಯಾಸನಾದೀನಿ ಫಲಾನಿ ಯಾನಿ
ದಿವ್ಯಾನಿ ತಾನಿ ತ್ವಥ ಚಾರ್ಪಯಂತಿ ॥ ೬ ॥

ಏವಂ ಚ ಯತ್ರೋರ್ಧ್ವವನಂ ಪ್ರಸಿದ್ಧಂ
ಸಂಕರ್ಷಣೋ ಯತ್ರ ವಿರಾಜತೇಽಥ ।
ಶಿವಃ ಸದಾಽಸೌ ರಮತೇ ಪ್ರಿಯಾಭಿ-
ಸ್ತ್ರಿಭಾಸತಾಂ ಯಾಂತಿ ಜನಾಸ್ತು ತತ್ರ ॥ ೭ ॥

ಹೈಮಾಂಬುಜೈಃ ಶೀತವಸಂತವಾಯುಭಿಃ
ಕಾಶ್ಮೀರವೃಕ್ಷೈಶ್ಚ ಲವಂಗಜಾಲೈಃ ।

---

೬. ಆ ಮಧುಧಾರೆಗಳಿಂದ ಕೇಳಿದವರ ಇಷ್ಟಾರ್ಥಗಳೆಲ್ಲವನ್ನೂ ಕರುಣಿಸುವಂತಹ ನದಗಳು (ಗಂಡುಹೊಳೆ) ಹುಟ್ಟಿ ಹರಿಯುತ್ತಾ ಜನರಿಗೆ ನವರತ್ನಗಳನ್ನೂ, ಬಗೆಬಗೆಯ ಅನ್ನಗಳನ್ನೂ, ವಸ್ತ್ರಗಳನ್ನೂ, ಶುಭಕರವಾದ ಒಡವೆ ವಸ್ತುಗಳನ್ನೂ, ಶಯ್ಯಾ ಆಸನಾದಿಗಳನ್ನೂ, ಮಧುರವಾದ ಫಲಗಳನ್ನೂ ಇನ್ನೂ ಇತರ ದಿವ್ಯವಾದ ವಸ್ತುಗಳನ್ನೂ ಒದಗಿಸುತ್ತಿರುವುವು.

೭. ಆ ಇಲಾವೃತಖಂಡದಲ್ಲಿಯೇ ಭಗವಂತನ ಸಂಕರ್ಷಣವೆಂಬ ಮೂರ್ತಿಯೆನಿಸಿದ ಬಲಭದ್ರನಿಗೆ ಪ್ರಿಯವಾದ ಊರ್ಧ್ವವನವೆಂಬ ಉದ್ಯಾನವಿರುವುದು. ಆ ಉದ್ಯಾನದಲ್ಲಿ ಬಲಭದ್ರನು ಸೌಮ್ಯವಾದ ಆಕಾರದಿಂದ ಕಂಗೊಳಿಸುತ್ತಾ ಮಂಗಳದಾಯಕನಾಗಿ ತನಗೆ ಪ್ರೀತಿಪಾತ್ರರಾದ ರಮಣಿಯರೊಡನೆ ವಿಹರಿಸುತ್ತಿರುವನು. ಆ ಉದ್ಯಾನವನವನ್ನು ಪ್ರವೇಶಿಸಿದ ಮಾನವರೆಲ್ಲರೂ ಮೂರು ಬಗೆಯ ಕಾಂತಿಯಿಂದ ಕಂಗೊಳಿಸುವರು.

ದೇವದ್ರುಮಾಮೋದಮುದಾಂಧಷಟ್ಪದೈ-
ರಿಲಾವೃತಂ ಖಂಡಮತೀವ ರೇಜೇ || ೮ ||

ಪಶ್ಯನ್ಭುವಂ ಸ್ವರ್ಣಮಯೀಂ ಮನೋಹರಾಂ
ವೈಡೂರ್ಯರದ್ನಾಂಕುರವೃಂದಚಿತ್ರಿತಾಂ ।
ಇಲಾವೃತಂ ಪೂರ್ಣಮಲಂಕೃತೈಃ ಸುರೈ-
ರ್ವಿಜಿತ್ಯ ಖಂಡಂ ಜಗೃಹೇ ಬಲಿಂ ಹರಿಃ || ೯ ||

ಶ್ರೀಶೋಭನೋ ನಾಮ ಪುರಾ ಕೃತೇನ
ಜಾಮಾತೃಕೋಽಭೂನ್ಮುಚುಕುಂದಭೂಭೃತಃ ।
ಏಕಾದಶೀಂ ಯಃ ಸಮುಪೋಷ್ಯ ಭಾರತೇ
ಪ್ರಾಪ್ತಃ ಸ ದೇವೈಃ ಕಿಲ ಮಂದರಾಚಲೇ || ೧೦ ||

---

೮. ಈ ರೀತಿಯಾಗಿ ಇಲಾವೃತಖಂಡವು ಚಿನ್ನದ ಕಮಲಗಳಿಂದಲೂ ಕೇಸರ ವೃಕ್ಷಗಳಿಂದಲೂ, ಲವಂಗ ಲತೆಗಳಿಂದಲೂ, ದೇವದಾರುವೆಂಬ ವೃಕ್ಷ ವಿಶೇಷಗಳಿಂದಲೂ, ಆ ಪುಷ್ಪಾದಿಗಳ ಸೌರಭಕ್ಕೆ ಮನಸೋತು ಬಂದು ಮುತ್ತುವ ಭ್ರಮರಗಳಿಂದಲೂ ಅತಿಶಯವಾಗಿ ಕಂಗೊಳಿಸುತ್ತಿರುವುದು.

೯. ಇಂತಹ ಆ ಇಲಾವೃತಖಂಡದಲ್ಲಿ ಸಂಪೂರ್ಣವಾಗಿ ಚಿನ್ನದಿಂದಲೇ ನಿರ್ಮಿಸಲ್ಪಟ್ಟು ನಡುನಡುವೆ ವೈಡೂರ್ಯವೆಂಬ ರತ್ನಪ್ರಭೇದಕ್ಕೆ ಸೇರಿದ ಎಳೆಯ ಚಿಗುರುಗಳಿಂದ ಅಲಂಕೃತವಾಗಿ ಸಕಲರ ಮನಸ್ಸನ್ನೂ ಅಪಹರಿಸುತ್ತಿರುವ ಆ ಪ್ರದೇಶದ ಭೂಮಿಯನ್ನು ನೋಡುತ್ತಾ ಬರುತ್ತಿರುವ ಶ್ರೀಕೃಷ್ಣನು ತನ್ನ ವಿಜಯವನ್ನು ಒಪ್ಪಿಕೊಂಡ ಅಲ್ಲಿಯ ನಿವಾಸಿಗಳಾದ ದೇವತೆಗಳಿಂದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿದನು.

೧೦. ಓ ರಾಜೇಂದ್ರ! ಹಿಂದೆ ಭರತಖಂಡದಲ್ಲಿ ಮುಚುಕುಂದನೆಂಬ ರಾಜರ್ಷಿಗೆ ಶ್ರೀ ಶೋಭನವೆಂಬ ರಾಜಕುಮಾರನು ಅಳಿಯನಾಗಿದ್ದನು. ಆ ರಾಜಕುಮಾರನು ಏಕಾದಶಿಯ ದಿವಸದಲ್ಲಿ ಸಂಪೂರ್ಣವಾಗಿ ಉಪವಾಸ ನಿಯಮವನ್ನು ಪರಿಪಾಲಿಸುತ್ತಿದ್ದನು. ಆ ಪೂರ್ವಕರ್ಮದ ಪುಣ್ಯಫಲದಿಂದ ಆ ರಾಜಕುಮಾರನು ದೈವತ್ವವನ್ನು ಹೊಂದಿ ಮಂದರಪರ್ವತನಿವಾಸಿಗಳಾದ ದೇವತೆಗಳಿಂದ ಅರಸನಾಗಿ ಸ್ವೀಕರಿಸಲ್ಪಟ್ಟನು.

ಅದ್ಯಾಪಿ ರಾಜ್ಯಂ ಕುರುತೇ ಕುಬೇರವ-
ದ್ರಾಜ್ಞಃ ಸುತೋಽಸೌ ಕಿಲ ಚಂದ್ರಭಾಗಯಾ ।
ನೀತ್ವಾ ಬಲಿಂ ದೇವವರಸ್ಯ ಸಂಮುಖೇ
ಸಮಾಯಯೌ ಮೈಥಿಲ ಸುಂದರಃ ಪರಃ ॥ ೧೧ ॥

ಪ್ರದಕ್ಷಿಣೀಕೃತ್ಯ ಹರಿಂ ಯದೂತ್ತಮಂ
ಪಾದಾರವಿಂದೇ ಪತಿತೋಽಥ ಶೋಭನಃ ।
ಭಕ್ತ್ಯಾ ಪ್ರಣಮ್ಯಾಶು ಬಲಿಂ ಮಹಾತ್ಮನೇ
ದತ್ವಾ ಯಯೌ ಮೈಥಿಲ ಮಂದರಾಚಲಂ ॥ ೧೨ ॥

॥ ಬಹುಲಾಶ್ವ ಉವಾಚ ॥

ಶೋಭನೇ ಚ ನೃಪೇ ಯಾತೇ ಭಗವಾನ್ಮಧುಸೂದನಃ ।
ಅಗ್ರೇ ಚಕಾರ ಕಿಂ ದೇವೋ ವದ ದೇವರ್ಷಿಸತ್ತಮ ॥ ೧೩ ॥

---

೧೧. ಓ ಮಿಥಿಲಾಧಿಪ! ಈಗಲೂ ಕೂಡ ಆ ಶ್ರೀಶೋಭನವೆಂಬ ರಾಜಕುಮಾರನು ಚಂದ್ರಭಾಗಾ ಎಂಬ ಪಟ್ಟಣದಲ್ಲಿ ಕುಬೇರನಂತೆ ರಾಜ್ಯವಾಳುತ್ತಿರುವನು. ಆ ರಾಜಪುತ್ರನು ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಶ್ರೀಕೃಷ್ಣನಿಗೆದುರಾಗಿ ಬಂದು,

೧೨. ಯದುಶ್ರೇಷ್ಠನಾದ ಆತನಿಗೆ ಪ್ರದಕ್ಷಿಣವನ್ನು ಮಾಡಿ ಭಕ್ತಿಯಿಂದ ಕಾಲುಗಳನ್ನು ಮುಟ್ಟಿ ನಮಸ್ಕಾರಮಾಡಿದನು. ಅನಂತರ ತಾನು ತಂದಿದ್ದ ಕಪ್ಪಕಾಣಿಕೆಗಳನ್ನು ಆ ಮಹಾಪುರುಷನಿಗೆ ಒಪ್ಪಿಸಿ ಬಳಿಕ ತನ್ನ ನಿವಾಸವಾದ ಮಂದರಪರ್ವತಕ್ಕೆ ತೆರಳಿದನು.

೧೩. ಹೀಗೆಂಬುದಾಗಿ ನಾರದಮಹರ್ಷಿಯು ನುಡಿಯಲು ಆ ಬಹುಲಾಶ್ವರಾಜನು ಆತನನ್ನು ಕುರಿತು "ಓ ದೇವರ್ಷಿಶ್ರೇಷ್ಠ! ಶ್ರೀಶೋಭನವೆಂಬ ಆ ರಾಜಕುಮಾರನು ಹೊರಟುಹೋದನಂತರ ಭಗವಂತನಾದ ಶ್ರೀಕೃಷ್ಣನು ಮುಂದೇನು ಮಾಡಿದನು? ಅದನ್ನು ತಿಳಿಸಬೇಕು" ಎಂದು ಪ್ರಾರ್ಥಿಸಲು, ಪುನಃ ಆ ನಾರದಮಹರ್ಷಿಯು ಇಂತು ನುಡಿಯತೊಡಗಿದನು.

॥ ಶ್ರೀ ನಾರದ ಉವಾಚ ॥

ಸರೋವರಂ ಪರಂ ದಿವ್ಯಂ ತಸ್ಮಿನ್ಮಂದರಸಾನುನಿ ।
ಸೌವರ್ಣಪಂಕಜಂ ವೀಕ್ಷ್ಯ ಕಿರೀಟೀ ಪ್ರಾಹ ಮಾಧವಂ ॥ ೧೪ ॥

॥ ಅರ್ಜುನ ಉವಾಚ ॥

ಕಾಂಚನೀಭಿರ್ಲತಾಭಿಷ್ಷ ಸೌವರ್ಣೈಃ ಪಂಕಜೈರ್ವೃತಂ ।
ವದ ಮಾಂ ದೇವಕೀಪುತ್ರ ಕಸ್ಯೇದಂ ಕುಂಡಮದ್ಭುತಂ ॥ ೧೫ ॥

॥ ಶ್ರೀ ಭಗವಾನುವಾಚ ॥

ಪೃಥುಃ ಪೂರ್ವೋ ರಾಜರಾಜಃ ಸ್ವಾಯಂಭುವಕುಲೋದ್ಭವಃ ।
ತತಾಪ ಸ ತಪೋ ದಿವ್ಯಂ ತಸ್ಯೇದಂ ಕುಂಡಮದ್ಭುತಂ ॥ ೧೬ ॥

ಅಸ್ಯ ಪೀತ್ವಾ ಜಲಂ ಸದ್ಯಃ ಸರ್ವಪಾಪೈಃ ಪ್ರಮುಚ್ಯತೇ ।
ಸ್ನಾತ್ವಾ ತದ್ಧಾಮ ಪರಮಂ ಯಾತಿ ಪಾರ್ಥ ನರೋತ್ತಮಃ ॥ ೧೭ ॥

---

೧೪. ಅನಂತರ ಆ ಮಂದರಪರ್ವತದಲ್ಲಿ ದಿವ್ಯವಾದ ಸರೋವರವೊಂದಿರುವುದನ್ನೂ, ಅದರಲ್ಲಿ ಚಿನ್ನದ ಕಮಲಗಳು ಬಿಟ್ಟಿರುವುದನ್ನೂ ಕಂಡು ಅರ್ಜುನನು ಶ್ರೀಕೃಷ್ಣನನ್ನು ಕುರಿತು,

೧೫. "ಓ ದೇವಕೀನಂದನ! ಚಿನ್ನದ ಬಳ್ಳಿಗಳಿಂದಲೂ, ಚಿನ್ನದ ಕಮಲಗಳಿಂದಲೂ ಕೂಡಿ ಆತ್ಯಾಶ್ಚರ್ಯಕರವಾಗಿ ಕಂಗೊಳಿಸುತ್ತಿರುವ ಈ ಸರೋವರವು ಯಾರಿಗೆ ಸೇರಿದುದು? ಇದನ್ನು ನನಗೆ ತಿಳಿಸಬೇಕು" ಎಂದು ಪ್ರಾರ್ಥಿಸಲು ಅವನನ್ನು ಕುರಿತು ಶ್ರೀಕೃಷ್ಣನು ಇಂತೆಂದನು.

೧೬. "ಓ ಪಾರ್ಥ! ಸ್ವಾಯಂಭುವಮನುವಿನ ವಂಶದಲ್ಲಿ ಜನಿಸಿದ ಪೃಥುವೆಂಬ ಚಕ್ರವರ್ತಿಯಿದ್ದನಷ್ಟೆ! ಆತನು ಇಲ್ಲಿ ಅದ್ಭುತವಾದ ತಪಸ್ಸನ್ನು ಮಾಡಿದನು. ಈ ಕುಂಡವು ಆ ಪೃಥುವಿನಿಂದ ನಿರ್ಮಿತವಾದುದು.

೧೭. ಈ ಕುಂಡದ ನೀರನ್ನು ಕುಡಿದೊಡನೆಯೇ ಮಾನವನ ಸಕಲ ಪಾತಕಗಳೂ ನಾಶವನ್ನು ಹೊಂದುವುವು. ಇಲ್ಲಿ ಸ್ನಾನವನ್ನೇದರೂ ಮಾಡಿದರೆ ಅಂಥ ಮಾನವನು ತೇಜೋಮಯವಾದ ಪರಮಪದವಿಯನ್ನೇ ಪಡೆಯುವನು" ಎಂದನು.

॥ ಶ್ರೀ ನಾರದ ಉವಾಚ ॥

ಅತ್ರೈವ ಭಗವಾನ್ಸಾಕ್ಷಾತ್ತಪೋ ಭೂಮಿಂ ಜಗಾಮ ಹ ।
ಸರೂಪಾಸ್ತತ್ರ ನೃತ್ಯಂತಿ ಸರ್ವಾಸ್ತಾ ಹ್ಯಷ್ಟಸಿದ್ಧಯಃ ॥ ೧೮ ॥

ತಾ ವೀಕ್ಷ್ಯ ಚೋದ್ಧವಃ ಪ್ರಾಹ ಭಗವಂತಂ ಸನಾತನಂ ।

॥ ಉದ್ಧವ ಉವಾಚ ॥

ಕಸ್ಯೇಯಂ ಸುತಪೋ ಭೂಮಿರ್ಮಂದರಾಚಲಸನ್ನಿಧೌ ॥
ಮೂರ್ತಿಮತ್ಯೋ ವಿರಾಜಂತ್ಯಃ ಕಾಃ ಸ್ತ್ರಿಯೋ ವದ ಹೇ ಪ್ರಭೋ ॥ ೧೯ ॥

॥ ಶ್ರೀ ಭಗವಾನುವಾಚ ॥

ಸ್ವಾಯಂಭುವೇನ ಮನುನಾ ತಪಶ್ಚಾತ್ರ ಕೃತಂ ಪುರಾ ।
ತಸ್ಯೇಯಂ ಸುತಪೋ ಭೂಮಿರದ್ಯಾಪಿ ಶ್ರೇಯಸೀ ಬಹು ॥ ೨೦ ॥

---

೧೮. ಓ ಬಹುಲಾಶ್ವರಾಜ! ಹಿಂದೆ ಇದೇ ಸ್ಥಳವನ್ನೇ ಸ್ವಾಯಂಭುವಮನುವು ತಪೋಭೂಮಿಯನ್ನಾಗಿ ಮಾಡಿಕೊಂಡು ಕೆಲವು ಕಾಲ ತಪಸ್ಸನ್ನಾಚರಿಸುತ್ತಿದ್ದನು. ಈ ಸ್ಥಳದಲ್ಲಿ ಅಣಿಮಾದಿ ಅಷ್ಟಸಿದ್ಧಿಗಳು ಶರೀರವನ್ನು ಧರಿಸಿ ಬಂದು ನರ್ತನ ಮಾಡುತ್ತಿರುವುವು.

೧೯. ಈ ರೀತಿ ನರ್ತನದಲ್ಲಿ ತೊಡಗಿರುವ ಆ ಅಣಿಮಾದಿ ಅಷ್ಟಸಿದ್ಧಿಗಳನ್ನು ಕಂಡು ಯದುಮಂತ್ರಿಯಾದ ಉದ್ಧವನು ಸನಾತನನಾದ ಆ ಭಗವಂತನನ್ನು ಕುರಿತು "ಹೇ ಪ್ರಭೂ! ಈ ಮಂದರಪರ್ವತದ ತಪ್ಪಲಲ್ಲಿ ಕಂಗೊಳಿಸುತ್ತಿರುವ ತಪೋಭೂಮಿಯು ಯಾರಿಗೆ ಸೇರಿದುದು? ಇದನ್ನು ತಿಳಿಸಬೇಕು" ಎಂದು ಪ್ರಶ್ನಿಸಲು,

೨೦. ಆ ಭಗವಂತನು ಈ ರೀತಿ ನುಡಿದನು:—"ಹಿಂದೆ ಈ ಸ್ಥಳದಲ್ಲಿ ಸ್ವಾಯಂಭುವಮನುವು ತಪಸ್ಸನ್ನಾಚರಿಸಿದನು. ಆ ಮಹಾತ್ಮನು ತಪಸ್ಸುಮಾಡಿದ ಈ ಆಶ್ರಮಭೂಮಿಯು ಇಂದಿಗೂ ಸಹ ಅನೇಕ ವಿಧವಾದ ಶ್ರೇಯಸ್ಸುಗಳಿಗೆ ಸಾಧನವಾಗಿರುವುದು.

ಸದಾತ್ರೈವ ಹಿ ವರ್ತಂತೇ ನಾರೀರೂಪಾಷ್ಟಸಿದ್ಧಯಃ ।
ಅತ್ರ ಪ್ರಾಪ್ತಸ್ಯ ಕಸ್ಯಾಪಿ ತತಸ್ತಾಶ್ಚ ಭವಂತಿ ಹಿ ॥ ೨೧ ॥

ಅತ್ರ ಕ್ಷಣೇನ ತಪಸಾ ದೇವತ್ವಂ ಯಾತಿ ಮಾನವಃ ।
ತಪೋ ಭೂಮೇಶ್ಚ ಮಾಹಾತ್ಮ್ಯಂ ವಕ್ತುಂ ನಾಲಂ ಚತುರ್ಮುಖಃ ॥ ೨೨ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ಭಗವಾನ್ಕೃಷ್ಣಃ ಸ್ವಸೈನ್ಯಪರಿವಾರಿತಃ ।
ಜಗಾಮ ಪ್ರೋತ್ಕಟಾನ್ದೇಶಾನ್ದುಂದುಭೀನ್ನಾದಯನ್ಮುಹುಃ ॥ ೨೩ ॥

ಹಿರಣ್ಯಕಶಿಪುರ್ದೈತ್ಯೋ ಯತ್ರ ತೇಪೇ ತಪಃ ಪುರಾ ।
ಯತ್ರ ಲೀಲಾವತೀ ನಾಮ ವರ್ತತೇ ಕಾಂಚನೀ ಪುರೀ ॥ ೨೪ ॥

---

೨೧. ಈ ತಪೋಭೂಮಿಯಲ್ಲಿ ಅಣಿಮಾದ್ಯಷ್ಟ ಸಿದ್ಧಿಗಳು ಸ್ತ್ರೀರೂಪವನ್ನು ಧರಿಸಿ ಸರ್ವಕಾಲದಲ್ಲಿಯೂ ವಿಹರಿಸುತ್ತಿರುವುವು. ಈ ಆಶ್ರಮವನ್ನು ಪ್ರವೇಶಿಸುವ ಪ್ರತಿಯೊಬ್ಬ ಮಾನವನಿಗೂ ಆ ಸಿದ್ಧಿಗಳು ಕರಗತವಾಗುವುವು.

೨೨. ಈ ಸ್ಥಳದಲ್ಲಿ ಒಂದು ಕ್ಷಣಕಾಲ ತಪಸ್ಸುಮಾಡಿದರೂ ಅದರಿಂದ ಮನುಷ್ಯನಾದವನು ದೇವತ್ವವನ್ನು ಪಡೆಯುವನು. (ದೇವತೆಯೇ ಆಗುವನು) ಈ ತಪೋಭೂಮಿಯ ಮಹಿಮೆಯನ್ನು ವರ್ಣಿಸಲು ಚತುರ್ಮುಖಬ್ರಹ್ಮನಿಗೂ ಸಾಧ್ಯವಿಲ್ಲವು.

೨೩. ಓ ಬಹುಲಾಶ್ವರಾಜ! ಈ ರೀತಿಯಾಗಿ ನುಡಿದನಂತರ ಭಗವಂತನಾದ ಆ ಶ್ರೀಕೃಷ್ಣನು ತನ್ನ ಸೇನೆಯಿಂದ ಪರಿವೃತನಾಗಿ ನಗಾರಿಗಳನ್ನು ಹೊಡೆಸುತ್ತಾ ಪ್ರೋತ್ಕಟವೆಂಬ ದೇಶಕ್ಕೆ ಅಭಿಮುಖನಾಗಿ ಪ್ರಯಾಣ ಬೆಳಸಿದನು.

೨೪. ಆ ಪ್ರದೇಶದಲ್ಲಿಯೇ ಹಿಂದೆ ಹಿರಣ್ಯಕಶಿಪುವು ತಪಸ್ಸನ್ನು ಮಾಡಿದ್ದನು. ಆ ದೇಶಕ್ಕೆ ಲೀಲಾವತೀ ಎಂಬ ಹೆಸರಿನಿಂದ ಪ್ರಸಿದ್ಧವಾದ ಸುವರ್ಣನಿರ್ಮಿತವಾದ ಒಂದು ನಗರಿಯು ರಾಜಧಾನಿಯಾಗಿರುವುದು.

ಲೀಲಾವತೀಶ್ವರಃ ಸಾಕ್ಷಾದ್ವೀತಿಹೋತ್ರೋ ಹುತಾಶನಃ ।
ನಿತ್ಯಂ ರಾಜ್ಯಂ ಪ್ರಕುರುತೇ ಮೂರ್ತಿಮಾನ್ಭುವಿ ಸುವ್ರತಃ ॥ ೨೫ ॥

ಸೋಽಪಿ ಶ್ರೀಕೃಷ್ಣಚಂದ್ರಾಯ ಪುರುಷಾಯ ಮಹಾತ್ಮನೇ ।
ಬಲಿಂ ದತ್ವಾ ಪರಾಂ ಶಶ್ವತ್ಸ್ತುತಿಂ ಚಕ್ರೇ ಧನಂಜಯಃ ॥ ೨೬ ॥

ಇತ್ಥಂ ಪಶ್ಯನ್ದೇವದೇವಃ ಸರ್ವಂ ವರ್ಷಮಿಲಾವೃತಂ ।
ಜಗಾಮ ವೇದನಗರಂ ಜಂಬೂದ್ವೀಪಂ ಮನೋರಮಂ ॥ ೨೭ ॥

ಮೂರ್ತಿಮಾನ್ಯತ್ರ ನಿಗಮೋ ದೃಶ್ಯತೇ ಸರ್ವದೈವ ಹಿ ।
ತತ್ಸಭಾಯಾಂ ಸದಾ ವಾಣೀ ವೀಣಾಪುಸ್ತಕಧಾರಿಣೀ ॥ ೨೮ ॥

---

೨೫. ಆ ಲೀಲಾವತೀ ನಗರದಲ್ಲಿ ಸಾಕ್ಷಾದ್ಯಜ್ಞೇಶ್ವರನೇ ಶರೀರವನ್ನು ಧರಿಸಿ ಬಂದು ಸರ್ವಕಾಲದಲ್ಲಿಯೂ ರಾಜ್ಯವನ್ನಾಳುತ್ತಿರುವನು.

೨೬. ಆ ಯಜ್ಞೇಶ್ವರನೂ ಸಹ ಶ್ರೀಕೃಷ್ಣನು ಬಂದುದನ್ನು ಕಂಡು ಆ ಮಹಾತ್ಮನಿಗೆ ಅತ್ಯುತ್ತಮವಾದ ಕಪ್ಪಕಾಣಿಕೆಗಳನ್ನೊಪ್ಪಿಸಿ ಆತನನ್ನು ಬಹುವಿಧವಾಗಿ ಸ್ತೋತ್ರಮಾಡಿದನು.

೨೭. ಈ ರೀತಿಯಾಗಿ ದೇವದೇವನಾದ ಆ ಶ್ರೀಹರಿಯು ಇಲಾವೃತ ವರ್ಷವನ್ನೆಲ್ಲಾ ನೋಡಿಕೊಂಡು ಬಂದುದಾದ ಮೇಲೆ ಜಂಬೂದ್ವೀಪವಲ್ಲಿ ಮನೋಹರವಾಗಿರುವ ವೇದನಗರವನ್ನು ಪ್ರವೇಶಿಸಿದನು.

೨೮. ಅಲ್ಲಿ ಪರಬ್ರಹ್ಮಸ್ವರೂಪವಾದ ವೇದವು ಶರೀರವನ್ನು ಧರಿಸಿ ರಾಜ್ಯವಾಳುತ್ತಾ ಸಕಲರಿಗೂ ಪ್ರತ್ಯಕ್ಷವಾಗಿ ಗೋಚರಿಸುತ್ತಿರುವುದು. ಆ ವೇದಪುರುಷನ ಸಭೆಯಲ್ಲಿ ಸಾಕ್ಷಾತ್ಸರಸ್ವತಿಯು ವೀಣಾಪುಸ್ತಕಗಳನ್ನು ಧರಿಸಿದವಳಾಗಿ,

ಗಾಯಂತೀ ಕೃಷ್ಣಚರಿತಂ ಸುಭಗಂ ಮಂಗಲಾಯನಂ ।
ಉರ್ವಶೀಪೂರ್ವಚಿತ್ತ್ಯಾದ್ಯಾ ನೃತ್ಯಂತ್ಯಪ್ಸರಸೋ ನೃಪ　|| ೨೯ ||

ಹಾವಭಾವಕಟಾಕ್ಷೈಶ್ಚ ತೋಷಯಂತ್ಯಃ ಶ್ರುತೀಶ್ವರಂ ।
ಅಹಂ ವಿಶ್ವಾವಸುಶ್ಚೈವ ತುಂಬುರುಶ್ಚ ಸುದರ್ಶನಃ　|| ೩೦ ||

ತಥಾ ಚಿತ್ರರಥೋ ಹ್ಯೇತೇ ವಾದಿತ್ರಾಣಿ ಮುಹುರ್ಮುಹುಃ ।
ವೇಣುವೀಣಾಮೃದಂಗಾನಿ ಮುರುಯಷ್ಟಿಯುತಾನಿ ಚ　|| ೩೧ ||

ತಾಲದುಂದುಭಿಭಿಃ ಸಾರ್ಧಂ ವಾದಯಂತಿ ಯಥಾವಿಧಿ ।
ಹ್ರಸ್ವದೀರ್ಘಪ್ಲುತೋದಾತ್ತಾನುದಾತ್ತಸ್ವರಿತಾ ನೃಪ　|| ೩೨ ||

ಸಾನುನಾಸಿಕಭೇದಶ್ಚ ತಥಾ ನಿರನುನಾಸಿಕಃ ।
ಏತೈರಷ್ಟಾದಶೈರ್ಭೇದೈರ್ಗೀಯಂತೇ ಶ್ರುತಯಃ ಪರೈಃ　|| ೩೩ ||

೨೯–೩೦. ಸರ್ವಕಾಲದಲ್ಲಿಯೂ ಮನೋಹರವೂ, ಮಂಗಲದಾಯಕವೂ ಆದ ಶ್ರೀಕೃಷ್ಣನ ದಿವ್ಯಚರಿತ್ರವನ್ನು ಗಾನಮಾಡುತ್ತಿರುವಳು. ಓ ರಾಜೇಂದ್ರ! ಪ್ರಭುವಾದ ಆ ವೇದಪುರುಷನ ಆಸ್ಥಾನದಲ್ಲಿ ಊರ್ವಶೀ, ಪೂರ್ವಚಿತ್ತಿ ಮೊದಲಾದ ಅಪ್ಸರಸ್ತ್ರೀಯರು ತಮ್ಮ ಹಾವಭಾವಗಳಿಂದಲೂ, ಕಡೆಗಣ್ಣಿನ ನೋಟಗಳಿಂದಲೂ ಆ ವೇದರಾಜನನ್ನು ಸ್ತುತಿಸಿ ನರ್ತಿಸುತ್ತಿರುವರು

೩೧–೩೩. ಮತ್ತು ನಾನೂ (ನಾರದನು) ವಿಶ್ವಾವಸುವೂ, ತುಂಬುರುವೂ, ಸುದರ್ಶನನೂ, ಚಿತ್ರರಥನೂ ಎಲ್ಲರೂ ವೀಣಾ, ವೇಣು, ಮೃದಂಗ ತಾಲಗಳೆಂಬ ನಾಲ್ಕು ಪ್ರಭೇದಗಳುಳ್ಳ ವಾದ್ಯಗಳನ್ನೂ, ಮುರುವೆಂಬ ವಾದ್ಯವಿಶೇಷವನ್ನೂ, ದುಂದುಭಿಗಳನ್ನೂ ನುಡಿಸುತ್ತಾ ಇರುವೆವು. ಓ ಮಿಥಿಲೇಶ್ವರ! ಆ ವೇದಪುರುಷನ ಆಸ್ಥಾನದಲ್ಲಿ ಹ್ರಸ್ವ, ದೀರ್ಘ, ಪ್ಲುತ, ಉದಾತ್ತ, ಅನುದಾತ್ತ, ಸ್ವರಿತ, ಸಾನುನಾಸಿಕ, ನಿರನುನಾಸಿಕ, ಎಂಬೀ ಮುಂತಾದ ಹದಿನೆಂಟು ಭೇದಗಳಿಂದ ಉಚ್ಚರಿಸಲ್ಪಡುವಂತಹ ಶ್ರುತಿಗಳು.

ಮೂರ್ತಿಮಂತೋ ವಿರಾಜಂತೇ ತತ್ರ ವೇದಪುರೇ ನೃಪ ।
ಅಷ್ಟೌ ತಾಲಾಃ ಸ್ವರಾಃ ಸಪ್ತ ತಥಾ ಗ್ರಾಮತ್ರಯಂ ನೃಪ ॥ ೩೪ ॥

ವದಂತಿ ವೇದನಗರೇ ಮೂರ್ತಿಮಂತಃ ಸದೈವ ಹಿ ।
ಭೈರವೋ ಮೇಘಮಲ್ಲಾರೋ ದೀಪಕೋ ಮಾಲಕಂಸಕಃ ॥ ೩೫ ॥

ಶ್ರೀರಾಗಶ್ಚಾಪಿ ಹಿಂಡೋಲೋ ರಾಗಾಃ ಷಟ್ಸಂಪ್ರಕೀರ್ತಿತಾಃ ।
ಪಂಚಭಿಶ್ಚ ಪ್ರಿಯಾಭಿಶ್ಚ ತನುಜೈರಷ್ಟಭಿಃ ಪೃಥಕ್ ॥ ೩೬ ॥

ಮೂರ್ತಿಮಂತಸ್ತು ತೇ ತತ್ರ ವಿಚರಂತಿ ನರೇಶ್ವರ ।
ಭೈರವೋ ಬಭ್ರುವರ್ಣಶ್ಚ ಮಾಲಕಂಸಃ ಶುಕದ್ಯುತಿಃ ॥ ೩೭ ॥

---

೩೪. ನಮ್ಮಂತೆಯೇ ಶರೀರವನ್ನು ಧರಿಸಿ ಕಂಗೊಳಿಸುತ್ತಿರುವುವು. ಇವುಗಳ ಜೊತೆಗೆ ಎಂಟು ಬಗೆಯ ತಾಲಗಳೂ, ಏಳು ಸ್ವರಗಳೂ, ಮೂರು ಗ್ರಾಮಗಳೂ,

೩೫. ಆ ವೇದನಗರದಲ್ಲಿ ಸದಾಕಾಲದಲ್ಲಿಯೂ ದೇಹಧಾರಿಗಳಾಗಿ ವಿರಾಜಿಸುತ್ತಿರುವುವು. ಓ ರಾಜೇಂದ್ರ! ಭೈರವ, ಮೇಘಮಲ್ಲಾರ, ದೀಪಕ, ಮಾಲಕಂಸಕ, ಶ್ರೀರಾಗ, ಹಿಂದೋಲ,

೩೬. ಇಂಬಿವು ಆರು ಪ್ರಸಿದ್ಧ ರಾಗಗಳು. ಈ ಒಂದೊಂದು ರಾಗಕ್ಕೂ ಐದೈದು ಮಂದಿ ಪ್ರಿಯಪತ್ನಿಯರೂ, ಎಂಟೆಂಟು ಮಂದಿ ಪ್ರಿಯಪುತ್ರರೂ ಇರುವರು.

೩೭. ಓ ಮಿಥಿಲಾಧಿಪಾ! ಈ ರಾಗರಾಗಿಣಿಯರೂ, ಆ ರಾಗಕುಮಾರರೂ ಸಾಕಾರರಾಗಿ ಆ ವೇದನಗರಿಯಲ್ಲಿ ಸಂಚರಿಸುತ್ತಿರುವರು. ಆ ರಾಗಗಳ ನಡುವೆ ಭೈರವರಾಗವು ಬೂದುಬಣ್ಣದಿಂದ ಕಂಗೊಳಿಸುತ್ತಿರುವುದು. ಮಾಲಕಂಸರಾಗವು ಗಿಳಿಯಂತೆ ಎಳೆಯ ಹಸರುಬಣ್ಣದಿಂದ ಶೋಭಿಸುತ್ತಿರುವುದು.

ಮಯೂರದ್ಯುತಿಸಂಯುಕ್ತೋ ಮೇಘಮಲ್ಲಾರ ಏವ ಹಿ ।
ಸುವರ್ಣಾಭೋ ದೀಪಕಶ್ಚ ಶ್ರೀರಾಗೋಽರುಣವರ್ಣಭೃತ್ ॥ ೩೮ ॥

ಹಿಂಡೋಲೋ ದಿವ್ಯಹಂಸಾಭೋ ರಾಜತೇ ಮಿಥಿಲೇಶ್ವರ ।

॥ ಬಹುಲಾಶ್ವ ಉವಾಚ ॥

ತಾಲಾನಾಂ ಚ ಸ್ವರಾಣಾಂ ಚ ಗ್ರಾಮಾಣಾಂ ಮುನಿಸತ್ತಮ ।
ನೃತ್ಯಾನಾಂ ಕತಿ ಭೇದಾ ಯೇ ನಾಮಭಿಃ ಸಹಿತಾನ್ವದ ॥ ೩೯ ॥

॥ ಶ್ರೀ ನಾರದ ಉವಾಚ ॥

ರೂಪಕಶ್ಚಂಚರೀಕಶ್ಚ ತಾಲಃ ಪರಮತಸ್ಮೃತಃ ।
ವಿರಾಡಕಮಠಶ್ಚೈವ ಮಲ್ಲಕಶ್ಚ ಝುಟಿರ್ಜುಟಾ ॥ ೪೦ ॥

---

೩೮. ಮೇಘಮಲ್ಲಾರವು ನವಿಲಿನಂತೆ ನೀಲವಾದ ವರ್ಣದಿಂದ ಮೆರೆಯುತ್ತಿರುವುದು. ದೀಪಕವು ಚಿನ್ನದಂತೆ ಹೊಂಬಣ್ಣದಿಂದಲೂ, ಶ್ರೀರಾಗವು ಎಳೆಯ ನೇಸರಿನಂತೆ ತಿಳಿಗೆಂಪು ಬಣ್ಣದಿಂದಲೂ ರಾಜಿಸುತ್ತಿರುವುದು.

೩೯. ಹಿಂದೋಲವು ದಿವ್ಯವಾದ ಹಂಸದಂತೆ ಶುಭ್ರವಾದ ವರ್ಣದಿಂದ ರಂಜಿಸುತ್ತಿರುವುದು. ಹೀಗೆಂದು ನಾರದಮಹರ್ಷಿಯು ನುಡಿಯಲು ಆ ಬಹುಲಾಶ್ವ ನರೇಂದ್ರನು ಆತನನ್ನು ಕುರಿತು, ಓ "ಮುನಿಶ್ರೇಷ್ಠ! ತಾಲಗಳಲ್ಲಿಯೂ, ಸ್ವರಗಳಲ್ಲಿಯೂ, ಗ್ರಾಮಗಳಲ್ಲಿಯೂ, ನೃತ್ಯಗಳಲ್ಲಿಯೂ ಎಷ್ಟು ಎಷ್ಟು ಪ್ರಭೇದಗಳಿರುವುವು? ಅವುಗಳಿಗೆ ಪ್ರತಿಯೊಂದಕ್ಕೂ ಏನೇನು ಹೆಸರು? ಇವೆಲ್ಲವನ್ನೂ ನನಗೆ ತಿಳಿಸಬೇಕು" ಎಂದು ಪ್ರಶ್ನಿಸಿದನು.

೪೦. ಆಗ ನಾರದಮಹರ್ಷಿಯು ಈ ರೀತಿ ಹೇಳತೊಡಗಿದನು. "ರಾಜೇಂದ್ರ! ಆಲಿಸು. ರೂಪಕ, ಚಂಚರೀಕ, ಅಡ, ವಿರಾಡ, ಕಮಠ, ಮಲ್ಲಕ, ಝುಟಿ, ಜುಟಾ, ಎಂದು ತಾಲವು ಎಂಟು ಬಗೆಯಾಗಿರುವುದು.

ನಿಷಾದರ್ಷಭಗಾಂಧಾರಷಡ್ಜಮಧ್ಯಮಧೈವತಾಃ ।
ಪಂಚಮಶ್ಚೇತ್ಯಮೀ ರಾಜನ್ಸ್ವರಾಃ ಸಪ್ತ ಪ್ರಕೀರ್ತಿತಾಃ ॥ ೪೧ ॥

ಮಾಧುರ್ಯಮಥ ಗಾಂಧಾರ್ಯಂ ಧ್ರೌವ್ಯಂ ಗ್ರಾಮತ್ರಯಂ ಸ್ಮೃತಂ ।
ರಾಸಂ ಚ ತಾಂಡವಂ ನಾಟ್ಯಂ ಗಾಂಧರ್ವಂ ಕೈನ್ನರಂ ತಥಾ ॥ ೪೨ ॥

ವೈದ್ಯಾಧರಂ ಗೌಹ್ಯಕಂ ಚ ನೃತ್ಯಮಾಕ್ರೂರಸಂ ನೃಪ ।
ಹಾವಭಾವಾನುಭಾವೈಶ್ಚ ದಶಭಿಶ್ಚಾಷ್ಟಭೇದವತ್ ॥ ೪೩ ॥

ಸಾರಂಗಮಯಥಾನ್ಯಾನಿ ಸ್ವರಗಸ್ಯಂ ಪದಂ ಸ್ಮೃತಂ ।
ಏತತ್ತೇ ಕಥಿಕಂ ರಾಜನ್ಕಿಂ ಭೂಯಃ ಶ್ರೋತುಮಿಚ್ಛಸಿ ॥ ೪೪ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವಸಂವಾದೇ ವೇದನಗರವರ್ಣನಂ ನಾಮ ತ್ರಿಚತ್ವಾರಿಂಶೋಽಧ್ಯಾಯಃ

---

೪೧. ಅದರಂತೆ ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ, ಪಂಚಮವೆಂದು ಸ್ವರವು ಏಳು ತೆರನಾಗಿರುವುದು.

೪೨. ಹಾಗೆಯೇ ಮಾಧುರ್ಯ, ಗಾಂಧಾರ್ಯ, ಧ್ರೌವ್ಯ, ಎಂಬುದಾಗಿ ಗ್ರಾಮವು ಮೂರು ರೀತಿಗಳನ್ನೊಳಗೊಂಡಿರುವುದು.

೪೩. ಇದರಂತೆ ನಾಟ್ಯವು ಪ್ರಧಾನವಾಗಿ ದಾನ, ತಾಂಡವ, ಗಾಂಧರ್ವ, ಕೈನ್ನರ, ವೈದ್ಯಾಧರ, ಗೌಹ್ಯಕ, ಆಕ್ರೂರಸ, ಸಾರಂಗವೆಂಬ ಎಂಟು ಪ್ರಭೇದಗಳನ್ನು ಒಳಗೊಂಡಿರುವುದಲ್ಲದೆ, ಹಾವ, ಭಾವ, ಅನುಭಾವಗಳೆಂಬ ಹತ್ತು ಅಂಗಗಳನ್ನೂ ಹೊಂದಿರುವುದು.

೪೪. ರಾಜೇಂದ್ರ! ಸ್ವರಗಳ ವಿನ್ಯಾಸದಿಂದ ಮಾಧುರ್ಯಪೂರ್ಣವಾಗಿ ಗೋಚರಿಸುವುದನ್ನೇ ಪದವೆನ್ನುವರು. ರಾಜೇಂದ್ರ! ನೀನು ಕೇಳಿದುದೆಲ್ಲವನ್ನೂ ತಿಳಿಸಿದುದಾಯಿತು. ಇದರ ಮೇಲೆ ಇನ್ನೂ ಏನು ಕೇಳಬೇಕೆಂದಿರುವೆ? ಹೇಳು" ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ವೇದನಗರವರ್ಣನವೆಂಬ ನಲವತ್ತಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗ ಸಂಹಿತಾಯಾಂ

ವಿಶ್ವಜಿತ್ಖಂಡೇ

ಚತುಶ್ಚತ್ವಾರಿಂಶೋಽಧ್ಯಾಯಃ

॥ ಬಹುಲಾಶ್ವ ಉವಾಚ ॥

ರಾಗಿಣೀನಾಂ ಚ ನಾಮಾನಿ ವದ ದೇವಋಷೇ ಮುನ ।
ತಥಾ ವೈ ರಾಗಪುತ್ರಾಣಾಂ ತ್ವಂ ಪರಾವರವಿತ್ತಮಃ ॥ ೧ ॥

॥ ಶ್ರೀ ನಾರದ ಉವಾಚ ॥

ಕಾಲೇನ ದೇಶಭೇದೇನ ಕ್ರಿಯಯಾ ಸ್ವರಮಿಶ್ರಯಾ ।
ಭೇದಾ ಬುಧೈಃ ಷಟ್ಪಂಚಾಶತ್ಕೋಟ್ಯೋ ಗೀತಸ್ಯ ಕೀರ್ತಿತಾಃ ॥ ೨ ॥

ನಲವತ್ತನಾಲ್ಕನೆಯ ಅಧ್ಯಾಯವು

೧. ಈ ರೀತಿ ನಾರದಮಹರ್ಷಿಯು ನುಡಿದುದನ್ನು ಕೇಳಿ ಆ ಬಹುಲಾಶ್ವ ನರೇಂದ್ರನು ಆತನನ್ನು ಕುರಿತು "ಓ ದೇವರ್ಷಿ! ನೀನು ಅತಿ ಸಾಮಾನ್ಯವಾದ ವಿಷಯದಿಂದ ಹಿಡಿದು ಅತ್ಯುತ್ತಮವಾದ ರಹಸ್ಯವಿಷಯಗಳವರೆಗೂ ಎಲ್ಲವನ್ನೂ ಚೆನ್ನಾಗಿ ಬಲ್ಲವನಲ್ಲವೆ? ಆದುದರಿಂದ ಹಿಂದೆ ನೀನು ವರ್ಣಿಸಿದ ರಾಗಗಳ ಪತ್ನಿಯರಾದ ರಾಗಿಣಿಯರ ಹೆಸರನ್ನೂ, ಅವರ ಪುತ್ರರ ಹೆಸರನ್ನೂ, ದಯವಿಟ್ಟು ನನಗೆ ತಿಳಿಸಬೇಕು" ಎಂದು ಪ್ರಾರ್ಥಿಸಿದನು.

೨. ಆಗ ನಾರದಮಹರ್ಷಿಯು ಈ ರೀತಿ ನುಡಿಯತೊಡಗಿದನು. ರಾಜೇಂದ್ರ! ಪ್ರಾಜ್ಞರಾದವರು ಗೀತಗಳಲ್ಲಿ ಐವತ್ತಾರು (೫೬) ಕೋಟಿ ಭೇದಗಳಿರುವುವೆಂದು ಹೇಳುವರು. ಆ ಭೇದಗಳು ಕಾಲಭೇದದಿಂದಲೂ, ದೇಶಭೇದದಿಂದಲೂ, ಸ್ವರ ಮಿಶ್ರದಿಂದುಂಟಾಗುವ ಕ್ರಿಯೆಯ ಭೇದದಿಂದಲೂ ಸಂಭವಿಸುವುವು.

ಅಂತರ್ಭೇದಾ ಅನಂತಾ ಹಿ ತೇಷಾಂ ಸಂತಿ ನೃಪೇಶ್ವರ ।
ವಿದ್ಧ್ಯೇನಂ ರಾಗಮಾನಂದಂ ಶಬ್ದಬ್ರಹ್ಮಮಯಂ ಹರಿಂ ॥ ೩ ॥

ತಸ್ಮಾನ್ಮುಖ್ಯಾಶ್ಚ ಭೇದಾಃ ಕೌ ವದಿಷ್ಯಾಮಿ ತವಾಗ್ರತಃ ।
ಭೈರವೀ ಪಿಂಗಲಾ ಶಂಕೀ ಲೀಲಾವತ್ಯಗರೀ ತಥಾ ॥ ೪ ॥

ಭೈರವಸ್ಯಾಪಿ ರಾಗಸ್ಯ ರಾಗಿಣ್ಯಃ ಪಂಚ ಕೀರ್ತಿತಾಃ ।
ಮಹರ್ಷಿಶ್ಚ ಸಮೃದ್ಧಶ್ಚ ಪಿಂಗಲೋ ಮಾಗಧಸ್ತಥಾ ॥ ೫ ॥

ಬಿಲಾವಲಶ್ಚ ವೈಶಾಖೋ ಲಲಿತಃ ಪಂಚಮಸ್ತಥಾ ।
ಭೈರವಸ್ಯಾಷ್ಟ ಪುತ್ರಾ ಯೇ ಗೀಯಂತೇ ಚ ಪೃಥಕ್ಪೃಥಕ್ ॥ ೬ ॥

ಚಿತ್ರಾ ಜಯಜಯಾವಂತೀ ವಿಚಿತ್ರಾ ಕಥಿತಾ ಪುನಃ ।
ವ್ರಜಲ್ಲಾಷ್ಯಂಧಕಾಕಾರೀ ರಾಗಿಣ್ಯೋಽಪಿ ಮನೋಹರಾಃ ॥ ೭ ॥

---

೩. ಇವುಗಳಲ್ಲದೆ ಇವುಗಳ ಒಳಭೇದಗಳು ಇನ್ನೂ ಲೆಖ್ಖವಿಲ್ಲದಷ್ಟು ಇರುವುವು. ಈ ರಾಗವು ಮತ್ತಾವುದೂ ಅಲ್ಲ. ಸಾಕ್ಷಾದಾನಂದಸ್ವರೂಪನಾದ ಶ್ರೀಹರಿಯೇನೇ! ಆ ಶ್ರೀಕೃಷ್ಣನೇ ಶಬ್ದಬ್ರಹ್ಮಾತ್ಮಕನಾಗಿ ರಾಗವೆಂಬ ಪದದಿಂದ ವ್ಯವಹರಿಸಲ್ಪಡುವನು.

೪. ಆದುದರಿಂದ ಈ ಪ್ರಪಂಚದಲ್ಲಿ ಪ್ರಸಿದ್ಧವಾಗಿರುವ ಕೆಲವು ಪ್ರಧಾನವಾದ ರಾಗಭೇದಗಳನ್ನು ಮಾತ್ರ ನಿನಗೆ ತಿಳಿಸುವೆನು. ಕೇಳು. ಭೈರವೀ. ಪಿಂಗಳಾ, ಶಂಕೀ, ಲೀಲಾವತಿ, ಅಗರೀ ಎಂಬವೈದು ಭೈರವರಾಗದ ರಾಗಿಣಿಯರು.

೫-೬. ಈ ರಾಗರಾಗಿಣಿಯರಿಗೆ ಮಹರ್ಷಿ, ಸಮೃದ್ಧ, ಪಿಂಗಲ, ಮಗಧ, ಬಿಲಾವಲ, ವೈಶಾಖ, ಲಲಿತ, ಪಂಚಮ ಎಂಬ ಎಂಟು ಮಂದಿ ರಾಗಕುಮಾರರು ಇರುವರು. ಇವೆಲ್ಲವೂ ಬೇರೆಬೇರೆಯ ರೀತಿಯಾಗಿ ಹಾಡಲ್ಪಡುವುವು.

೭. ಇದರಂತೆ ಚಿತ್ರಾ, ಜಯಜಯಂತೀ, ವಿಚಿತ್ರಾ, ವ್ರಜಲ್ಲಾಷೀ, ಅಂಧಕಾಕಾರೀ ಎಂಬೀ ಮನೋಹರವಾದ ಐದು ಮಂದಿ ರಾಗಿಣಿಯರು ಮೇಘ ಮಲ್ಲಾರರಾಗದ ಪ್ರಿಯಪತ್ನಿಯರಾಗಿರುವರು.

ಮೇಘಮಲ್ಲಾರರಾಗಸ್ಯ ಕಥಿತಾಃ ಪಂಚ ಮೈಥಿಲ |
ಶ್ಯಾಮಕಾರಃ ಸೋರಟಶ್ಚ ನಟೋ ಡಾಯನ ಏವ ಚ　　|| ೮ ||

ಕೇದಾರೋ ವ್ರಜರಂಹಸ್ಯೋ ಜಲಧಾರಸ್ತಥೈವ ಚ |
ಬಿಹಾಗಶ್ಚೇತ್ಯಷ್ಟಪುತ್ರಾಃ ಕಥಿತಾಃ ಪೂರ್ವಸೂರಿಭಿಃ　　|| ೯ ||

ಮೇಘಮಲ್ಲಾರರಾಗಸ್ಯ ರಾಗಿಣ್ಯಃ ಪಂಚ ಚ ಸ್ಮೃತಾಃ |
ಕಲ್ಯಾಣಃ ಶುಭಕಾಮಶ್ಚ ಗೌಡಕಲ್ಯಾಣ ಏವ ಚ　　|| ೧೦ ||

ಕಾಮರೂಪಃ ಕಾನ್ಹರೇತಿ ರಾಮಸಂಜೀವನಸ್ತಥಾ |
ಸುಖನಾಮಾ ಮಂದಹಾಸಃ ಪುತ್ರಾಶ್ಚಾಷ್ಟೌ ವಿದೇಹರಾಟ್　　|| ೧೧ ||

ರಾಗಸ್ಯ ದೀಪಕಸ್ಯಾಪಿ ಕಥಿತಾ ರಾಗಪಂಡಿತೈಃ |
ಗಾಂಧಾರೀ ವೇದಗಾಂಧಾರೀ ಧನಾಶ್ರೀ ಸ್ವರ್ಮಣಿಸ್ತಥಾ　　|| ೧೨ ||

ಗುಣಾಗರೀತಿ ರಾಗಿಣ್ಯಃ ಪಂಚೈತಾ ಮೈಥಿಲೇಶ್ವರ |
ಮಾಲಕಂಸಸ್ಯ ರಾಗಸ್ಯ ಚಾಷ್ಟ ಪುತ್ರಾಃ ಪ್ರಕೀರ್ತಿತಾಃ　　|| ೧೩ ||

೮-೯. ಈ ರಾಗದಂಪತಿಗಳಿಗೆ ಶ್ಯಾಮಕಾರ, ಸೋರಟ, ನಟ, ಡಾಯನ, ಕೇದಾರ, ವ್ರಜರಂಹಸ್ಯ, ಜಲಧಾರ, ಬಿಹಾಗವೆಂಬ ಎಂಟು ಮಂದಿ ಕುಮಾರರಿರುವರು.

೧೦-೧೧. * ಓ ರಾಜೇಂದ್ರ! ದೀಪಕದ ರಾಗರಾಗಿಣಿಯರಿಗೆ ಕಲ್ಯಾಣ, ಶುಭಕಾಮ, ಗೌಡಕಲ್ಯಾಣ, ಕಾಮರೂಪ ಕಾನ್ಹರ, ರಾಮಸಂಜೀವನ, ಸುಖನಾಮ, ಮಂದಹಾಸ ಎಂಬ ಎಂಟು ಮಂದಿ ಪುತ್ರರಿರುವರು. ಹೀಗೆಂದು ರಾಗಜ್ಞರಾದ ವಿದ್ವಾಂಸರು ತಿಳಿಸುವರು.

* (ದೀಪಕರಾಗದ ರಾಗಿಣಿಯರ ಹೆಸರು ಬಿಟ್ಟುಹೋಗಿದೆ.)

೧೨-೧೩. ಅದರಂತೆ ಗಾಂಧಾರಿ, ವೇದಗಾಂಧಾರಿ, ಧನಾಶ್ರೀ, ಸ್ವರ್ಮಣಿ, ಗುಣಾಗರೀ ಎಂಬುದಾಗಿ ಐದು ಮಂದಿ ರಾಗಿಣಿಯರು ಮಾಲಕಂಸರಾಗಕ್ಕೆ ಪ್ರಿಯೆಯರಾಗಿರುವರು. ಇವರೀರ್ವರಿಗೂ ಎಂಟು ಮಂದಿ ಕುಮಾರರಿರುವರು.

ಚಂದ್ರಹಾರೋ ಘುಂಘುಟುಶ್ಚ ವಿಹಾರೋ ನಂದ ಏವ ಚ ।
ವೈರಾಟೀ ಚೈಕಕರ್ನಾಟೀ ಗೌರೀ ಗೌರಾವಟೀ ತಥಾ ॥ ೧೪ ॥

ಚತುಶ್ಚಂದ್ರಕಲಾ ಚೈವ ರಾಗಿಣ್ಯಃ ಪಂಚ ವಿಶ್ರುತಾಃ ।
ಶ್ರೀರಾಗಸ್ಯಾಪಿ ರಾಜೇಂದ್ರ ಕಥಿತಾಃ ಪೂರ್ವಸೂರಿಭಿಃ ॥ ೧೫ ॥

ಸಾರಂಗಃ ಸಾಗರೋ ಗೌರೋ ಮರುತ್ಪಂಚಶರಸ್ತಥಾ ।
ಗೋವಿಂದಶ್ಚ ಹಮೀರಶ್ಚ ಗೀರ್ಭೀರಶ್ಚ ತಥೈವ ಚ ॥ ೧೬ ॥

ಶ್ರೀರಾಗಸ್ಯಾಪಿ ರಾಜೇಂದ್ರ ಅಷ್ಟೌ ಪುತ್ರಾಃ ಮನೋಹರಾಃ ।
ವಸಂತೀ ಐರಜಾ ಹೇರೀ ತೈಲಂಗೀ ಸುಂದರೀ ತಥಾ ॥ ೧೭ ॥

ಹಿಂಡೋಲಸ್ಯಾಪಿ ರಾಗಸ್ಯ ರಾಗಿಣ್ಯಃ ಪಂಚ ವಿಶ್ರುತಾಃ ।
ಮಂಗಲಶ್ಚ ವಸಂತಶ್ಚ ವಿನೋದಃ ಕುಮುದಸ್ತಥಾ ॥ ೧೮ ॥

ಏವಂ ಚ ವಿಹಿತೋ ನಾಮ ವಿಭಾಸಃ ಸ್ವರಮಂಡಲಃ ।
ಪುತ್ರಾಶ್ಚಾಷ್ಟೌ ಸಮಾಖ್ಯಾತಾ ಮೈಥಿಲೇಂದ್ರ ವಿಚಕ್ಷಣೈಃ ॥ ೧೯ ॥

೧೪-೧೫. ಚಂದ್ರಹಾರ, ಘುಂಘುಟ, ವಿಹಾರ, ನಂದ* ಎಂಬೀ ಎಂಟು ಹೆಸರುಗಳು ಅವರುಗಳಿಗೆ ಕ್ರಮವಾಗಿ ಇರುವುವು. ಓ ರಾಜೇಂದ್ರ! ವೈರಾಟಿ, ಏಕಕರ್ಣಾಟಿ, ಗೌರಿ, ಗೌರಾವಟಿ, ಚತುಶ್ಚಂದ್ರಕಲಾ ಎಂಬ ಐದು ಮಂದಿ ಪ್ರಖ್ಯಾತರಾದ ರಾಗಿಣಿಯರು ಶ್ರೀರಾಗದ ಪ್ರಿಯಪತ್ನಿಯರೆಂದು ಪ್ರಾಚೀನರಾದ ವಿದ್ವಾಂಸರು ನಮಗೆ ತಿಳಿಸುವರು.

* ಇಲ್ಲಿಯೂ ಮಾಲಕಂಸರಾಗದ ಪುತ್ರರ ಹೆಸರು ಮೂಲದಲ್ಲೇ ಬಿಟ್ಟಿರುವುದು.

೧೬-೧೭. ಆ ರಾಗ ರಾಗಿಣಿಯರಿಗೆ ಸಾರಂಗ, ಸಾಗರ, ಗೌರ, ಮರುತ್, ಪಂಚಶರ, ಗೋವಿಂದ, ಹಮೀರ, ಗೀರ್ಭೀರ, ಎಂಬ ಎಂಟು ಮಂದಿ ರಾಗ ಕುಮಾರರಿರುವರು. ಓ ಬಹುಲಾಶ್ವನೃಪಾಲ! ವಸಂತೀ, ಐರಜಾ, ಆಹೇರೀ, ತೈಲಂಗೀ, ಸುಂದರೀ ಎಂಬ ಐದು ಮಂದಿ ಪ್ರಖ್ಯಾತರಾದ ರಾಗಿಣಿಯರು ಹಿಂದೋಲದ ರಾಗದ ಪ್ರಿಯಪತ್ನಿಯರಾಗಿರುವರು.

೧೮-೧೯. ಈ ದಂಪತಿಗಳಿಗೆ ಮಂಗಲ, ವಸಂತ, ವಿನೋದ, ಕುಮುದ, ವಿಹಿತ, ನಾಮ, ವಿಭಾಸ, ಸ್ವರಮಂಡಲ, ಎಂಬ ಎಂಟು ಮಂದಿ ಪ್ರಸಿದ್ಧರಾದ ಕುಮಾರರಿರುವರು. ಹೀಗೆಂಬುದಾಗಿ ಪ್ರಾಜ್ಞರಾದವರು ಹೇಳುವರು" ಎಂದನು.

॥ ಬಹುಲಾಶ್ವ ಉವಾಚ ॥

ಶಬ್ದಬ್ರಹ್ಮಹರೇಃ ಸಾಕ್ಷಾನ್ನಿಗಮಸ್ಯ ಮಹಾತ್ಮನಃ ।
ರಾಸಮಂಡಲ ಇತ್ಯೇವಂ ಹಿಂಡೋಲಸ್ಯ ಪೃಥಕ್ಪೃಥಕ್ ॥ ೨೦ ॥

ಅಂಗಾನಿ ವದ ಮೇ ದೇವ ಕಾನಿ ಕಾನಿ ಮಹೀತಲೇ ।

॥ ಶ್ರೀ ನಾರದ ಉವಾಚ ॥

ಮುಖ್ಯಂ ವ್ಯಾಕರಣಂ ಪ್ರೋಕ್ತಂ ಪಿಂಗಲಃ ಪಾದ ಉಚ್ಯತೇ ॥ ೨೧ ॥

ಮೀಮಾಂಸಶಾಸ್ತ್ರಂ ಹಸ್ತೌ ಚ ಜ್ಯೋತಿರ್ನೇತ್ರಂ ಪ್ರಕೀರ್ತಿತಂ ।
ಆಯುರ್ವೇದಃ ಪೃಷ್ಠದೇಶೋ ಧನುರ್ವೇದ ಉರಸ್ಥಲಂ ॥
ಗಾಂಧರ್ವಂ ರಸನಂ ವಿದ್ಧಿ ಮುನೇ ವೈಶೇಷಿಕಂ ಸ್ಮೃತಂ ॥ ೨೨ ॥

ಸಾಂಖ್ಯಂ ಬುದ್ಧಿರಹಂಕಾರೋ ನ್ಯಾಯವಾದಃ ಪ್ರಕೀರ್ತಿತಃ ।
ವೇದಾಂತಂ ತಸ್ಯ ಚಿತ್ತಂ ಹಿ ವೇದಸ್ಯಾಪಿ ಮಹಾತ್ಮನಃ ॥ ೨೩ ॥

---

೨೦. ಅದನ್ನು ಕೇಳಿ ಬಹುಲಾಶ್ವನರೇಂದ್ರನು ಆತನನ್ನು ಕುರಿತು "ಓ ಮಹರ್ಷಿ! ಸಾಕ್ಷಾತ್ ಪರಮಪುರುಷನಾದ ಶ್ರೀಹರಿಯು ಶಬ್ದಮಯವಾದ ಶರೀರವೆನಿಸಿದ ಆ ವೇದಪುರುಷನಿಗೆ ಯಾವ ಯಾವ ಅವಯವಗಳು ಈ ಜಗತ್ತಿನಲ್ಲಿ ಪ್ರಸಿದ್ಧವಾಗಿರುವುವು? ಅವೆಲ್ಲವನ್ನೂ ನನಗೆ ಪ್ರತ್ಯೇಕವಾಗಿ ವಿವರಿಸಬೇಕು" ಎಂದು ಪ್ರಾರ್ಥಿಸಿದನು.

೨೧. ಆಗ ನಾರದಮಹರ್ಷಿಯು ಇಂತೆಂದನು :—"ರಾಜೇಂದ್ರ! ಕೇಳು. ಆ ವೇದಪುರುಷನ ಮುಖವು ವ್ಯಾಕರಣಶಾಸ್ತ್ರವು. ಪಿಂಗಲ (ಛಂದಸ್ಸು)ನು ಪಾದವು.

೨೨. ಮೀಮಾಂಸೆಯು ಕೈಗಳು. ಜ್ಯೋತಿಷವು ಕಣ್ಣುಗಳು. ಆಯುರ್ವೇದವು ಬೆನ್ನು. ಧನುರ್ವೇದವು ಎದೆಯು ಗಂಧರ್ವವಿದ್ಯೆಯು ನಾಲಿಗೆಯು (ಸಂಗೀತ). ವೈಶೇಷಿಕ ದರ್ಶನವು ಮನಸ್ಸು.

೨೩. ಸಾಂಖ್ಯದರ್ಶನವೇ ಬುದ್ಧಿಯು. ನ್ಯಾಯಶಾಸ್ತ್ರವೇ ಅಹಂಕಾರವು. ವೇದಾಂತವು ಅದರ ಚಿತ್ತವು. ಈ ರೀತಿಯಾಗಿ ಮಹಾತ್ಮನಾದ ಆ ವೇದಪುರುಷನ ಅಂಗಾಂಗಗಳನ್ನು ಪ್ರಾಜ್ಞರಾದವರು ವಿವರಿಸುವರು.

ರಾಗರೂಪಮಿಮಂ ರಾಜನ್ನಿಹಾರಂ ವಿದ್ಧಿ ಮೈಥಿಲ ।
ಏತತ್ತೇ ಕಥಿತಂ ರಾಜನ್ಕಿಂ ಭೂಯಃ ಶ್ರೋತುಮಿಚ್ಛಸಿ ॥ ೨೪ ॥

॥ ಬಹುಲಾಶ್ವ ಉವಾಚ ॥

ತಸ್ಮಿನ್ವೇದಪುರೇ ರಮ್ಯೇ ಕಿಂ ಚಕಾರ ಹರಿಃ ಸ್ವಯಂ ।
ಏತನ್ಮೇ ವದ ದೇವರ್ಷೇ ತ್ವಂ ಸಾಕ್ಷಾದ್ದಿವ್ಯದರ್ಶನಃ ॥ ೨೫ ॥

॥ ಶ್ರೀ ನಾರದ ಉವಾಚ ॥

ಆಯಾಂತಂ ವೇದನಗರಂ ಶ್ರೀಕೃಷ್ಣಂ ಯಾದವೇಶ್ವರಂ ।
ನಿಗಮೋಽಪಿ ಬಲಿಂ ನೀತ್ವಾ ಸರಸ್ವತ್ಯಾ ತಯಾ ಸಹ ॥ ೨೬ ॥

---

೨೪. ಓ ಮಿಥಿಲಾಧೀಶ್ವರ! ಈ ರಾಗಗಳೆಲ್ಲವೂ ಆ ವೇದಪುರುಷನ ವಿಹಾರವೆಂಬುದಾಗಿ ಭಾವಿಸು " ಓ ಬಹುಲಾಶ್ವರಾಜ! ನೀನು ಕೇಳಿದುದೆಲ್ಲವನ್ನೂ ತಿಳಿಸಿರುವೆನು. ಮತ್ತೆ ಇನ್ನೇನು ಕೇಳಬೇಕೆಂದಿರುವೆ? ಎಂದು ನಾರದಮಹರ್ಷಿಯು ನುಡಿಯಲು,

೨೫. ಆ ಬಹುಲಾಶ್ವನು ಆತನನ್ನು ಕುರಿತು "ಎಲೈ ದೇವಋಷಿಯೇ! ನೀನು ದಿವ್ಯವಾದ ದೃಷ್ಟಿಯುಳ್ಳವನಲ್ಲವೇ! ಆದುದರಿಂದ ರಮಣೀಯವಾದ ಆ ವೇದನಗರಿಯಲ್ಲಿ ಶ್ರೀಕೃಷ್ಣನು ಏನುಮಾಡಿದನು? ಇದನ್ನು ದಯವಿಟ್ಟು ತಿಳಿಸಬೇಕು" ಎಂದನು.

೨೬. ಆಗ ನಾರದನು ಇಂತು ನುಡಿಯತೊಡಗಿದನು :–ಓ ಮಿಥಿಲಾಧೀಶ್ವರ! ತನ್ನ ರಾಜಧಾನಿಯಾದ ವೇದನಗರಕ್ಕೆ ಶ್ರೀಕೃಷ್ಣನು ಬರುತ್ತಿರುವುದನ್ನರಿತು ಆ ವೇದಪುರುಷನು ತನ್ನ ರಾಣಿಯಾದ ಸರಸ್ವತಿಯೊಡನೆ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಆತನನ್ನು ಕಾಣಲು ಹೊರಟನು.

ಗಂಧರ್ವೈರಪ್ಸರೋಭಿಶ್ಚ ಗ್ರಾಮತಾಲೈಃ ಸ್ವರೈಃ ಸಹ ।
ರಾಗೈಃ ಸಭೇದೈಃ ಸಹಿತಃ ಪ್ರಣನಾಮ ಕೃತಾಂಜಲಿಃ ॥ ೨೭ ॥

ಪ್ರಸನ್ನೋ ಭಗವಾನ್ಸಾಕ್ಷಾದ್ದೇವದೇವೋ ಜನಾರ್ದನಃ ।
ವೇದಂ ಪ್ರಾಹ ಯದೂನಾಂ ಚ ಸರ್ವೇಷಾಂ ಶೃಣ್ವತಾಂ ಸತಾಂ ॥ ೨೮ ॥

॥ ಶ್ರೀ ಭಗವಾನುವಾಚ ॥

ನಿಗಮ ತ್ವಂ ವರಂ ಬ್ರೂಹಿ ಯತ್ತೇ ಮನಸಿ ವರ್ತತೇ ।
ದುರ್ಲಭಂ ಕಿಂ ತ್ರಿಲೋಕೇಷು ಭಕ್ತಾನಾಂ ಹರ್ಷಿತೇ ಮಯಿ ॥ ೨೯ ॥

॥ ವೇದ ಉವಾಚ ॥

ಯದಿ ದೇವ ಪ್ರಸನ್ನೋಽಸಿ ಸರ್ವೇ ಯೇ ಮೇ ಸುಪಾರ್ಷದಾಃ ।
ತೇಷಾಂ ದೇವ ನಿಜಂ ರೂಪಂ ದರ್ಶಯಾತ್ರ ಪರೇಶ್ವರ ॥ ೩೦ ॥

೨೭. ಆತನ ಜೊತೆಯಲ್ಲಿ ಗಂಧರ್ವರೂ, ಅಪ್ಸರಸ್ಸುಗಳೂ, ಗ್ರಾಮಗಳೂ. ತಾಳಗಳೂ, ಸ್ವರಗಳೂ. ನಾನಾವಿಧವಾದ ಅಂತರಿಕಭೇದಗಳಿಂದ ಕೂಡಿದ ರಾಗಗಳೂ ಹೊರಟುಬಂದುವು.

೨೮. ಆ ಶ್ರೀಕೃಷ್ಣನನ್ನು ಕಂಡೊಡನೆಯೇ ವೇದಪುರುಷನು ತನ್ನ ಕಡೆಯವರೆಲ್ಲರೊಡನೆ ಕೈಗಳನ್ನು ಮುಗಿದುಕೊಂಡು ನಮಸ್ಕರಿಸಿದನು. ಆಗ ದೇವದೇವನಾದ ಶ್ರೀಕೃಷ್ಣನು ಬಹು ಪ್ರಸನ್ನನಾಗಿ ಯಾದವರೂ, ಇತರ ಸಜ್ಜನರೂ ಕೇಳುತ್ತಿರುವಂತೆ ಆ ವೇದಪುರುಷನನ್ನು ಕುರಿತು ಇಂತೆಂದನು.

೨೯. "ಎಲೈ ವೇದಪುರುಷನೇ, ನಿನ್ನ ಮನಸ್ಸಿನಲ್ಲಿರುವ ವರವಾವುದು? ಅದನ್ನು ನಿರ್ಭಯವಾಗಿ ಕೇಳು. ನಾನು ಸಂತುಷ್ಟನಾದ ಮೇಲೆ ಈ ಜಗತ್ತಿನಲ್ಲಿ ಭಕ್ತರಿಗೆ ದುರ್ಲಭವಾದುದು ಯಾವುದು ತಾನೇ ಇರುವುದು?" ಎಂದನು.

೩೦. ಆಗ ವೇದಪುರುಷನು ಶ್ರೀಹರಿಯನ್ನು ಕುರಿತು, ಓ ದೇವೇಶ! ನೀನು ನನ್ನಲ್ಲಿ ಅನುಗ್ರಹವನ್ನು ತೋರಿರುವುದು ನಿಜವೇ ಆಗಿದ್ದಲ್ಲಿ ನನಗೂ ನನ್ನ ಈ ಅನುಚರರಿಗೂ ನಿನ್ನ ನಿಜರೂಪವನ್ನು ತೋರಬೇಕೆಂದು ಪ್ರಾರ್ಥಿಸುವೆನು.

ಯದ್ರೂಪಂ ತೇ ಚ ಗೋಲೋಕೇ ಸ್ವಧಾಮ್ನಿ ಪ್ರಸ್ಫುರದ್ದ್ಯುತೌ ।
ವೃಂದಾವನೇ ಚ ತದ್ರಾಸೇ ತಸ್ಯ ದರ್ಶನಕಾಂಕ್ಷಿಣಃ ॥ ೩೦ ॥

॥ ಶ್ರೀ ನಾರದ ಉವಾಚ ॥

ಶ್ರುತ್ವಾ ವೇದವಚಃ ಕೃಷ್ಣಃ ಪರಿಪೂರ್ಣತಮಃ ಸ್ವಯಂ ।
ಸ್ವರೂಪಂ ದರ್ಶಯಾಮಾಸ ರಾಧಯಾ ಸಹಿತಂ ಪರಂ ॥ ೩೧ ॥

ತದ್ರೂಪಂ ಸುಂದರಂ ದೃಷ್ಟ್ವಾ ಸರ್ವೇ ವೈ ಮೂರ್ಛನಾಂ ಗತಾಃ ।
ಪೂರಿತಾಃ ಸಾತ್ತ್ವಿಕೈರ್ಭಾವೈರ್ವಿಸ್ಮೃತ್ಯ ಸ್ವತನುಂ ಸುಖಂ ॥ ೩೨ ॥

ತದಾಪಿ ಹರ್ಷಿತಾಃ ಸರ್ವೇ ವಾದಿತ್ರೈರ್ಮಧುರಸ್ವನೈಃ ।
ಜಗುಸ್ತತ್ಪುರತೋ ರಾಜನ್ನನೃತುಃ ಪಶ್ಯತಾಂ ಸತಾಂ ॥ ೩೩ ॥

---

೩೦. ಓ ಪರಮಪುರುಷಾ! ನಿನ್ನ ನಿಜಧಾಮವೆನಿಸಿದ ತೇಜೋಮಯವಾದ ಗೋಲೋಕದಲ್ಲಿಯೂ, ವೃಂದಾವನದಲ್ಲಿಯೂ, ರಾಸಮಂಡಲದಲ್ಲಿಯೂ, ನೀನು ಯಾವ ರೂಪವನ್ನು ತಳೆದಿರುವೆಯೋ ಆ ದಿವ್ಯಸುಂದರ ರೂಪವನ್ನೇ ನೋಡಲು ನಾವು ಕಾತುರರಾಗಿರುವೆವು” ಎಂದು ಪ್ರಾರ್ಥಿಸಿದನು.

೩೧. ಓ ಮಿಥಿಲಾಸರಾಧೀಶ! ಈ ರೀತಿಯಾಗಿ ವೇದಪುರುಷನು ತನ್ನನ್ನು ಪ್ರಾರ್ಥಿಸಲು ಪರಿಪೂರ್ಣತಮನಾದ ಆ ಶ್ರೀಹರಿಯು ರಾಧಾಸಮೇತವಾಗಿರುವ ತನ್ನ ಪರಸ್ವರೂಪವನ್ನು ಅವರೆಲ್ಲರಿಗೂ ತೋರ್ಪಡಿಸಿದನು.

೩೨. ಆಗ ಆ ವೇದಪುರುಷನೂ ಅವನ ಅನುಯಾಯಿಗಳೂ ಮನೋಹರವಾದ ಆ ಕೃಷ್ಣನ ದಿವ್ಯರೂಪವನ್ನು ಕಂಡು ಆನಂದಾತಿಶಯದಿಂದ ಸ್ತಂಭಪ್ರಲಯರೋಮಾಂಚಾದಿಸಾತ್ತ್ವಿಕಾಭಾವಗಳನ್ನು ತಳೆದು ಮೈಮೇಲೆ ಪ್ರಜ್ಞೆಯೇ ಇಲ್ಲದೆ ಮೂರ್ಛಿತರಾಗಿಬಿಟ್ಟರು.

೩೩. ಆಗ ಅವರೆಲ್ಲರೂ ಮಿತಿಮೀರಿದ ಸಂತೋಷದಿಂದ ವೀಣಾ, ವೇಣು, ಮೃದಂಗಾದಿ ವಾದ್ಯಗಳನ್ನು ಇಂಪಾಗಿ ಗಾನಮಾಡಿದರಲ್ಲದೆ, ನರ್ತನವನ್ನೂ ಮಾಡಿದರು.

ಯಥಾಶ್ರುತಂ ತಥಾ ದೃಷ್ಟಂ ಮಾಧುರ್ಯಂ ರೂಪಮದ್ಭುತಂ ।
ತಥೈವ ಚಕ್ರುರ್ವೇದಾದ್ಯಾ ವರ್ಣನಂ ಮೈಥಿಲೇಶ್ವರ || ೩೫ ||

॥ ವೇದ ಉವಾಚ ॥

ಸಜ್ಜ್ಞಾನಮಾತ್ರಂ ಸದಸತ್ಪರಂ ಬೃಹ-
ಚ್ಚಕ್ಷುಷ್ಪತ್ರಶಾಂತಂ ವಿಭವಂ ಸಮಂ ಮಹತ್ ।
ತ್ವಾಂ ಬ್ರಹ್ಮ ವಂದೇ ವಸುದುರ್ಗಮಂ ಪರಂ
ಸದಾ ಸ್ವಧಾಮ್ನಾ ಪರಿಭೂತಕೈತವಂ || ೩೬ ||

॥ ಸರಸ್ವತ್ಯುವಾಚ ॥

ಮಹಃ ಪರಂ ತ್ವಾಂ ಕಿಲ ಯೋಗಿನೋ ವಿದುಃ
ಸವಿಗ್ರಹಂ ತತ್ರ ವದಂತಿ ಸಾತ್ವತಾಃ ।

---

೩೫. ಓ ಮಿಥಿಲಾಧಿಪಾ! ಆಗ ವೇದಪ್ರುರುಷನೂ, ಅವನ ಅನುಚರರೂ ಆ ಶ್ರೀಕೃಷ್ಣನ ಅತ್ಯದ್ಭುತವೂ, ಮಾಧುರ್ಯಪೂರ್ಣವೂ ಆದ ದಿವ್ಯರೂಪವನ್ನು ತಾವು ಯಾವ ರೀತಿ ಕೇಳಿದ್ದರೋ ಮತ್ತು ಯಾವ ರೀತಿ ಸಾಕ್ಷಾತ್ಕರಿಸಿದರೋ ಆ ರೀತಿಯಾಗಿಯೇ ಸ್ತೋತ್ರಮಾಡಿದರು.

೩೬. ಆಗ ವೇದಪುರುಷನು :—ಓ ದೇವ! ನೀನು ನಾಶರಹಿತನು. ಸ್ವಯಂಪ್ರಕಾಶವಾದ ಜ್ಞಾನಸ್ವರೂಪನು. ಮತ್ತು ಸದ್ರೂಪನಾಗಿಯೂ, ಅಸದ್ರೂಪನಾಗಿಯೂ ತೋರುವವನು. ಸಕಲ ವಸ್ತುಗಳಿಗಿಂತಲೂ ಉತ್ತಮವೆನಿಸಿದವನು. ವ್ಯಾಪ್ತಿಗೂ ಬೃಹತ್ತಾದವನು. ತ್ರಿಕಾಲಾಬಾಧಿತನು. ಶಾಂತನು. ಸರ್ವಸಮನು. ಜಗತ್ತಿಗೇ ಸಂಪತ್ತೆನಿಸಿದವನು. ಇಂತಹ ಪರಬ್ರಹ್ಮಸ್ವರೂಪನೂ ವಸುಗಳಿಗೂ ಅಲಭ್ಯನೆನಿಸಿದವನೂ, ನೈಜವಾದ ತೇಜಸ್ಸಿನಿಂದ ಮಾಯಾಜನ್ಯವಾದ ಸಕಲ ಭ್ರಾಂತಿಗಳನ್ನೂ ಪರಿಹರಿಸುವವನೂ ಆದ ನಿನ್ನನ್ನು ಸರ್ವಕಾಲವಲ್ಲಿಯೂ ನಮಸ್ಕರಿಸುವೆನು " ಎಂದು ಸ್ತುತಿಸಿದನು.

ದೃಷ್ಟಂ ತು ಯತ್ತೇ ಪದಯೋರ್ದ್ವಯಂ ಮೇ
ಕ್ಷೇಮಸ್ಯ ಭೂಯಾನ್ಮಹಸಾಮಧೀಶ್ವರಂ ॥ ೩೭ ॥

॥ ಗಂಧರ್ವಾ ಊಚುಃ ॥

ಶ್ಯಾಮಂ ಚ ಗೌರಂ ವಿದಿತಂ ಸ್ವಧಾಮ್ನಾ
ಕೃತಂ ತ್ವಯಾ ಧಾಮ ನಿಜೇಚ್ಛಯಾ ಹಿ ।
ವಿರಾಜಸೇ ನಿತ್ಯಮಲಂ ಚ ತಾಭ್ಯಾಂ
ಘನೋ ಯಥಾ ಮೇಚಕದಾಮನೀಭ್ಯಾಂ ॥ ೩೮ ॥

॥ ಅಪ್ಸರಸ ಊಚುಃ ॥

ಯಥಾ ತಮಾಲಃ ಕಲಧೌತವಲ್ಲ್ಯಾ
ಘನೋ ಯಥಾ ಚಂಚಲಯಾ ಚಕಾಸ್ತಿ ।
ನೀಲೋಽದ್ರಿರಾಜೋ ನಿಕಷಾಶ್ಮಖನ್ಯಾ
ಶ್ರೀರಾಧಯಾದ್ಯಸ್ತು ತಥಾ ರಮಣ್ಯಾ ॥ ೩೯ ॥

---

೩೭. ಅನಂತರ ಸರಸ್ವತಿಯು ಆತನನ್ನು ಕುರಿತು "ಓ ದೇವ! ನಿನ್ನನ್ನು ಯೋಗಿಗಳು ಆಕಾರವೇ ಇಲ್ಲದ ಮಹತ್ತಾದ ತೇಜಸ್ಸೆಂಬುದಾಗಿ ತಿಳಿದಿರುವರು. ಸಾತ್ತ್ವತರು ಸಾಕಾರನಾದ ಪುರಾಣಪುರುಷನೆಂದು ಭಾವಿಸುವರು. ತೇಜಸ್ಸುಗಳೆಲ್ಲಕ್ಕೂ ಅಧಿಪತಿಯೆನಿಸಿದ ಎಲೈ ಪ್ರಭುವೇ! ನಾನು ಸಂದರ್ಶಿಸಿದ ನಿನ್ನ ಈ ಪದಯುಗಲವು ನನಗೆ ನಿರಂತರವೂ ಮಂಗಲವನ್ನುಂಟುಮಾಡಲಿ" ಎಂದು ಪ್ರಾರ್ಥಿಸಿದಳು.

೩೮. ಬಳಿಕ ಗಂಧರ್ವರು ಹೇ ಪ್ರಭು! ನೀನು ನಿನ್ನ ತೇಜಸ್ಸಿನಿಂದಲೇ ಶ್ಯಾಮಲವಾದ ರೂಪವೊಂದನ್ನೂ (ಕೃಷ್ಣ) ಗೌರವರ್ಣದ ಮತ್ತೊಂದು ರೂಪವನ್ನೂ (ರಾಧ) ನಿನ್ನ ಸ್ವೇಚ್ಛೆಯಿಂದಲೇ ನಿರ್ಮಿಸಿ ಅವೆರಡು ರೂಪಗಳಿಂದಲೂ, ಮೇಘವು ಕಪ್ಪಾದ ತನ್ನ ಆಕೃತಿಯಿಂದಲೂ, ಚಿನ್ನದ ಬಣ್ಣವುಳ್ಳ ಮಿಂಚಿನ ಬಳ್ಳಿಯಿಂದಲೂ ಕಂಗೊಳಿಸುವಂತೆ ಸರ್ವದಾ ಪ್ರಕಾಶಿಸುತ್ತಿರುವೆ" ಇಂತಹ ನಿನ್ನನ್ನು ವಂದಿಸುವೆವು. ಎಂದು ಸ್ತೋತ್ರಮಾಡಿದರು.

೩೯. ಆಮೇಲೆ ಅಪ್ಸರಸ್ತ್ರೀಯರು ಆ ಪರಮಪುರುಷನನ್ನು ಕುರಿತು "ಓ ದೇವ! ಯಾವ ರೀತಿ ಕಪ್ಪಾದ ಹೊಂಗೆಯ ಮರವು ಚಿನ್ನದ ಬಣ್ಣವುಳ್ಳ ಬಳ್ಳಿಯಿಂದ ಕೂಡಿ

॥ ಗ್ರಾಮಾ ಊಚುಃ ॥

ಯಸ್ಯ ಪದಸ್ಯ ಪರಾಗಂ ಶಂಭೂಮಾರಮಾಕವಿದೇವೈಃ ।
ಇಚ್ಛತಿ ಚೇತಸಿ ರಾಧಾ ತಂ ಭಜ ಮಾಧವಪಾದಂ ॥ ೪೦ ॥

॥ ತಾಲಾ ಊಚುಃ ॥

ಯೇನ ಬಲಿಃ ಸನ್ನಿಹರತೇ ತದ್ಬಲಿಮೇವ ಹರೇಶ್ ।
ತಂ ಭಜ ಪಾದಂ ಕು ಹರೇಶ್ಚೇತಸಿ ಸಪ್ತೇ ಕುಹರೇ ॥ ೪೧ ॥

॥ ಮಾನಾ ಊಚುಃ ॥

ಉತ್ಕ್ಷಿಪಂತಿ ಬಹಿರ್ದುಃಖಂ ಸಂತೋ ಯಚ್ಛರಣಂ ಗತಾಃ ।
ರಾಧಾಮಾಧವಯೋರ್ದಿವ್ಯಂ ದಧಾಮ ಪದಪಂಕಜಂ ॥ ೪೨ ॥

ಕಂಗೊಳಿಸುವುದೋ ಯಾವ ರೀತಿ ವರ್ಷಾಕಾಲದ ಮೇಘವು ಚಿನ್ನದೆಳೆಯಂತಿರುವ ಮಿಂಚಿನ ಬಳ್ಳಿಯಿಂದ ರಂಜಿಸುವುದೋ ಯಾವ ರೀತಿ ನೀಲಾದ್ರಿಯು ಒರೆಗಲ್ಲಿನ ಗಣಿಯಿಂದ ಶೋಭಿಸುವುದೋ ಅದೇ ರೀತಿ ನೀನು ನಿನ್ನ ಪ್ರಿಯೆಯಾದ ರಾಧೆಯಿಂದೊಡಗೂಡಿ ಕಂಗೊಳಿಸುತ್ತಿರುವೆ" ಎಂದು ಪ್ರಶಂಸಿದರು.

೪೦. ಅದಾದ ಬಳಿಕ ಗ್ರಾಮಗಳು ಆ ಶ್ರೀಹರಿಯನ್ನು ಕುರಿತು "ಯಾವುದರ ಧೂಳಿಯನ್ನು ಶಂಕರನೂ, ಪಾರ್ವತಿಯೂ, ಲಕ್ಷ್ಮಿಯೂ, ಬ್ರಹ್ಮನೂ, ದೇವತೆಗಳೂ ಶಿರಸಾವಹಿಸುವರೋ ಮತ್ತು ಯಾವುದನ್ನು ವ್ರಜೇಶ್ವರಿಯಾದ ರಾಧೆಯು ನಿರಂತರವೂ ತನ್ನ ಹೃದಯದಲ್ಲಿ ಧ್ಯಾನಿಸಲು ಆಶಿಸುವಳೋ ಅಂತಹ ಶ್ರೀಹರಿಯ ಪದಯುಗಲವನ್ನು ಸೇವಿಸಿರಿ" ಎಂದು ಸ್ತೋತ್ರಮಾಡಿದಳು.

೪೧. ಅನಂತರ ತಾಲಗಳು "ಯಾವುದರ ಅನುಗ್ರಹದಿಂದ ಪೂಜೆಯು ಸಫಲವೆನಿಸುವುದೋ ಮತ್ತು ಯಾವುದಕ್ಕೇ ಪೂಜೆಯನ್ನು ಸಲ್ಲಿಸಬೇಕಾಗಿರುವುದೋ ಅಂತಹ ಶ್ರೀಹರಿಯ ಚರಣಯುಗಲವನ್ನು ನಿಮ್ಮ ಹೃದಯಾಂತರಾಳದಲ್ಲಿ ಅನನ್ಯತೆಯಿಂದ ಭಜಿಸಿರಿ" ಎಂಬುದಾಗಿ ಆತನನ್ನು ಹೊಗಳಿದುವು.

೪೨. ಬಳಿಕ ಮಾನಗಳು "ಯಾವ ಪದದ್ವಂದ್ವಗಳನ್ನು ಮರೆಹೊಕ್ಕುದರ ಮಹಿಮೆಯಿಂದಲೇ ಸಜ್ಜನರಾದವರು ಬಾಹ್ಯವಾದ ದುಃಖಗಳನ್ನು ಪರಿಹರಿಸಲು ಶಕ್ತರಾಗುವರೋ ಅಂತಹ ರಾಧಾಮಾಧವರ ದಿವ್ಯವಾದ ಪಾದಕಮಲಗಳನ್ನು ನಿರಂತರವೂ ಮನಸ್ಸಿನಿಂದ ಧರಿಸುವೆವು" ಎಂದು ನುಡಿದುವು.

॥ ಸ್ವರಾ ಊಚುಃ ॥

ಶರದ್ವಿಕಚಪಂಕಜಶ್ರಿಯಮತೀವ ವಿದ್ವೇಷಕಂ
ಮಿಲಿಂದಮುನಿಲೇಢಿತಂ ಕುಲಿಶಕಂಜಚಿನ್ಹಾನ್ವಿತಂ।
ಸ್ಫುರತ್ಕನಕನೂಪುರಂ ದಲಿತಭಕ್ತತಾಪತ್ರಯಂ
ಚಲದ್ದ್ಯುತಿಪದದ್ವಯಂ ಹೃದಿ ದಧಾಮಿ ರಾಧಾಪತೇಃ ॥ ೪೩ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ವೇದಾದಿಸ್ತುತಿವರ್ಣನಂ ನಾಮ ಚತುಶ್ಚತ್ವಾರಿಂಶೋಽಧ್ಯಾಯಃ

---

೪೩. ಅನಂತರ ಸ್ವರಗಳು ಈ ರೀತಿಯಾಗಿ ಸ್ತುತಿಸಿದುವು:—ಯಾವುದು ತನ್ನ ಸೌಂದರ್ಯದಿಂದ ಶರತ್ಕಾಲದ ಅರಳಿದ ತಾವರೆಯನ್ನೂ ಹಳಿಯುವುದೋ ಮತ್ತು ಯಾವುದರ ರಸವನ್ನು ಆಸ್ವಾದಿಸಲೋಸುಗ ಮಹರ್ಷಿಗಳೂ ಸಹ ಭ್ರಮರಗಳಂತೆ ಸರ್ವದಾ ಸೇವಿಸುತ್ತಿರುವರೋ ಮತ್ತು ಯಾವುದು ವಜ್ರ, ಕಮಲ, ಮುಂತಾದ ಶುಭಚಿಹ್ನೆಗಳಿಂದ ನಿಬಿಡವಾಗಿ ಕಂಗೊಳಿಸುತ್ತಿರುವುದೋ ಮತ್ತು ಯಾವುದು ತನ್ನನ್ನು ನಂಬಿದ ಭಕ್ತರ ಅಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ಮೂರು ಬಗೆಯ ತಾಪಗಳನ್ನೂ ಪರಿಹರಿಸುತ್ತಿರುವುದೋ ಅಂತಹ ಚಿನ್ನದ ಕಾಲಂದುಗೆಗಳಿಂದ ರಮಣೀಯವಾಗಿರುವ ಆ ರಾಧಾರಮಣನ ಕಾಂತಿವಿಶಿಷ್ಟವಾದ ಚರಣಯುಗಲವನ್ನು ನಿರಂತರವೂ ಹೃದಯದಲ್ಲಿ ಧರಿಸುವೆನು."

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ವೇದಾದಿಸ್ತುತಿವರ್ಣನವೆಂಬ ನಲವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಪಂಚಚತ್ವಾರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಭೈರವಾದ್ಯಾ ರಾಗಗಣಾಃ ಪುರಃ ಪ್ರಾಪ್ತಾ ಹರೇಃ ಪ್ರಭೋ ।
ರೂಪಾನುರೂಪಾವಯವಾಂ ತನುಂ ದೃಷ್ಟ್ವಾತಿಹರ್ಷಿತಾಃ ॥ ೧ ॥

ಯತ್ರ ಯತ್ರ ಚ ತೇಷಾಂ ವೈ ದೃಷ್ಟಿಃ ಪ್ರಾಪ್ತಾ ಹರೇಸ್ತನೌ ।
ತತ್ರ ಸ್ಥಿತಾ ಚ ನಿರ್ಗಂತುಂ ಲಾವಣ್ಯಾನ್ನ ಶಶಾಕ ಹ ॥ ೨ ॥

ನಲವತ್ತೈದನೆಯ ಅಧ್ಯಾಯವು

೧. ಓ ಬಹುಲಾಶ್ವರಾಜೇಂದ್ರ ! ಅನಂತರ ಭೈರವ ಮೊದಲಾದ ರಾಗಗಳು ತಮ್ಮ ತಮ್ಮ ಪರಿವಾರಗಳೊಡನೆ ಆ ಶ್ರೀಕೃಷ್ಣನ ಮುಂದೆ ಬಂದು ಸೌಂದರ್ಯಕ್ಕೆ ಒಪ್ಪುವಂತಹ ಅವಯವಗಳಿಂದ ಕಂಗೊಳಿಸುತ್ತಿರುವ ಆತನ ದಿವ್ಯಶರೀರವನ್ನು ಕಂಡು ಅತಿಶಯವಾದ ಸಂತೋಷವನ್ನು ತಾಳಿದರು.

೨. ರಾಜೇಂದ್ರ ! ಆ ರಾಗರಾಗಿಣಿಯರ ದೃಷ್ಟಿಗಳು ಆ ಶ್ರೀಕೃಷ್ಣನ ಶರೀರದಲ್ಲಿ ಯಾವಾವ ಕಡೆಗಳಲ್ಲಿ ಬಿದ್ದುವೋ ಆಯಾ ಅವಯವಗಳ ಲಾವಣ್ಯಾತಿಶಯದಿಂದ ಆ ದೃಷ್ಟಿಗಳು ಆಕರ್ಷಿತರಾದಂತಾಗಿ ಮತ್ತೊಂದು ಕಡೆ ಹೊರಳಲಾರದೆ ಅಲ್ಲಿಯೇ ನೆಲಸಿಬಿಟ್ಟುವು.

ಅಹೋ ಶ್ರೀಕೃಷ್ಣಚಂದ್ರಸ್ಯ ರೂಪಮತ್ಯದ್ಭುತಂ ಹರೇಃ ।
ದೃಷ್ಟ್ವಾಽಪವರ್ಣನಂ ತಸ್ಯ ಚಕ್ರುಸ್ತೇಽಪಿ ಪೃಥಕ್ಪೃಥಕ್ ॥ ೩ ॥

॥ ಭೈರವ ಉವಾಚ ॥

ಭಜ ಹರಿ ಜಾನುದ್ವಯಮಿತಿ ಭಜತಿ
ಸದಾಂಕೇ ಕಮಲಕರಾಭ್ಯಾಂ ॥ ೪ ॥

॥ ಮೇಘಮಲ್ಲಾರ ಉವಾಚ ॥

ಊರೂ ವಿಷ್ಣೋಃ ರಂಭಾಖಂಡೌ ಹೇಮಸ್ತಂಭೌ ಧ್ಯಾಯೇ ವಂಧ್ಯೌ ।
ಓಜಃಪೂರ್ಣೌ ಶೋಭಾಯುಕ್ತೌ ವಸ್ತ್ರಪೀತೌ ಕೃಷ್ಣಸ್ಯೋಭೌ ॥ ೫ ॥

---

೩. ಆಹಾ! ಆ ಶ್ರೀಕೃಷ್ಣಚಂದ್ರನ ರೂಪವನ್ನು ಏನೆಂದು ಹೇಳೋಣ! ಆ ರೂಪವು ಎಂತಹವರನ್ನೂ ಅತಿಶಯವಾಗಿ ಬೆರಗುಗೊಳಿಸುವಂತಹುದು. ಅಂತಹ ಆ ದಿವ್ಯರೂಪವನ್ನು ಕಂಡು ಆ ರಾಗರಾಗಿಣಿಯರೂ, ರಾಗಕುಮಾರರೂ ಒಬ್ಬೊಬ್ಬರೂ ಬೇರೆಬೇರೆಯಾಗಿ ಸ್ತುತಿಸಿದರು.

೪. ಆಗ ಭೈರವರಾಗವು ಈ ರೀತಿ ಆತನನ್ನು ಸ್ತುತಿಸಿತು :—"ಶ್ರೀಹರಿಯ ಪಾದಗಳನ್ನು ತನ್ನ ತೊಡೆಗಳ ಮೇಲೆ ಇಟ್ಟುಕೊಂಡು ತನ್ನ ಮೃದುವಾದ ಕೈಗಳಿಂದ ಅವನ್ನು ಒತ್ತುತ್ತಾ ಸದಾಕಾಲವಲ್ಲಿಯೂ ಆ ಶ್ರೀಹರಿಯನ್ನು ಸೇವಿಸುತ್ತಿರುವ ಲಕ್ಷ್ಮೀದೇವಿಯು ಜಾನು (ಮಂಡಿ) ಗಳನ್ನು ಎಡಬಿಡದೆ ನೀವೂ ಸೇವಿಸಿರೆಂದು ಜಗತ್ತಿಗೇ ಬೋಧಿಸುತ್ತಿರುವಳೋ ಎನ್ನುವಂತೆ ಕಂಗೊಳಿಸುವಳು.

೫. ಮೇಘಮಲ್ಲಾರರಾಗವು ಈ ರೀತಿ ಪ್ರಶಂಸಿಸಿತು :—"ಚಿನ್ನದ ಬಾಳೆಯ ಕಂಬಗಳಂತೆ ತೇಜಃಪೂರ್ಣವಾಗಿಯೂ, ಕಾಂತಿಯುಕ್ತವಾಗಿಯೂ ಇರುವ ಆ ಶ್ರೀಹರಿಯ ಪೀತಾಂಬರದಿಂದ ಆವೃತವಾಗಿರುವ ಊರು (ತೊಡೆ) ಗಳೆರಡನ್ನೂ ಮನಸಾ ಸ್ಮರಿಸುವೆನು."

॥ ದೀಪಕ ಉವಾಚ ॥

ಸಕಲಸುಖಕರಂ ಕನಕರುಚಿಧರಂ ।
ಪ್ರಥಿತಹರಿಪದಂ ಭಜತ ಕಟಿತಲಂ ॥ ೬ ॥

॥ ಮಾಲಕಂಸ ಉವಾಚ ॥

ಕಟಿಕೇಶವಧಾಹರೇರಸ್ತಿ ತತ್ರ
ನೃಣಾಂ ನೇತ್ರಯೋರ್ದೃಷ್ಟಿಮಾನಂ ಹರಂತಿ ।
ಪರಂ ಕಂಪಿತಾಧರಂ ಮೋದಗಚ್ಛತ್ಸಮೀರೈಃ
ಸುಜನ್ಮ್ರೇಣ ಸಾವರ್ತ ಚೇತೋ ಹರಿತ್ಥಂ ॥ ೭ ॥

---

೬. ದೀಪಕರಾಗವು ಹೀಗೆ ವರ್ಣಿಸಿತು :—"ಸಕಲರಿಗೂ ಸೌಖ್ಯವನ್ನು ಕರುಣಿಸುತ್ತಾ ಚಿನ್ನದಂತೆ ಥಳಥಳಿಸುತ್ತಿರುವ ಕಾಂತಿಯಿಂದ ಕೂಡಿ ಹರಿಪದವೆಂದರೆ ಆಕಾಶಕ್ಕೇ ಕಾರಣವೆಂಬುದಾಗಿ ಪ್ರಖ್ಯಾತವಾಗಿರುವ ಶ್ರೀಹರಿಯ ಕಟಿ(ನಡುವನ್ನು) ತಟವನ್ನು ಸಕಲರೂ ಸೇವಿಸಿರಿ."

೭. ಮಾಲಕಂಸರಾಗವು ಈ ಕೆಳಗೆ ಕಂಡಂತೆ ಕೊಂಡಾಡಿತು :–(ಈ ಪದ್ಯವು ಅರ್ಥವೇ ಆಗದಂತೆ ಅಸಂಬದ್ಧವಾಗಿರುವುದು. ಈ ಕೆಳಗಿನ ಅರ್ಥವು ಇರಬಹುದೋ ಏನೋ ಎಂದು ಬರೆಯಲಾಗಿದೆ ಇದೇ ಸರಿಯೆಂದು ಮಾತ್ರ ನಿರ್ಧರವಾಗಿ ಹೇಳಲಾಗುವುದಿಲ್ಲ) ಶ್ರೀಹರಿಯ ಕಟಿಪ್ರದೇಶವನ್ನಾಗಲಿ, ಕೇಶಪಾಶವನ್ನಾಗಲಿ ಸಂದರ್ಶಿಸುವ ಮಾನವರ ನೇತ್ರಗಳು ತಾವು ನೋಡುತ್ತಿದ್ದಷ್ಟೂ ಮತ್ತು ನೋಡಬೇಕೆನ್ನುವ ಆಸೆಯಿಂದ ತಮ್ಮ ನೋಟದ ಮಿತಿಯನ್ನೇ ಕಳೆದುಕೊಂಡು ಬಿಡುವುವು. ಇದಕ್ಕಿಂತಲೂ ಹೆಚ್ಚಾಗಿ ಆ ಶ್ರೀಹರಿಯು ಕೊಳಲನ್ನು ನುಡಿಸುವುದಕ್ಕೋಸ್ಕರ ಅದರ ರಂಧ್ರದಲ್ಲಿ ಮುಖವಿಟ್ಟು ಅಲುಗುತ್ತಿರುವ ತುಟಿಗಳಿಂದ ಗಾಳಿಯನ್ನು ತುಂಬುತ್ತಿರುವುದು, ಎಂಥವರ ಮನಸ್ಸನ್ನೂ ಅಪಹರಿಸುವುದು.

|| ಶ್ರೀರಾಗ ಉವಾಚ ||

ನಾಭೇಃ ಸರಃ ಪುಷ್ಕರಕುಂಡವಚ್ಚ-
ಲ್ಲಸತ್ತ್ರಿವಲ್ಲ್ಯೂರ್ಮಿಮನೋಹರಂ ಪದಂ |
ರೋಮಾವಲಿಪ್ರೋಜ್ಝಿತಕಾಮಕಾನನಂ
ಭಜಾಮಿ ನಿತ್ಯಂ ಹೃದಿ ರಾಧಿಕಾಪತೇಃ || ೮ ||

|| ಹಿಂಡೋಲ ಉವಾಚ ||

ಅಕ್ಷರಪಂಕ್ತಿಃ ಕಿಂ ನ್ವಲಿಪಂಕ್ತಿಃ ಪಿಪ್ಪಲಪತ್ರೇ |
ಮೋಹನಮಾಯಾ ಕಿಂ ಕಮಲೇ ಯಚ್ಛ್ಯಾಮಲರೇಖಾ || ೯ ||

---

೮. ಶ್ರೀರಾಗವು ಇಂತೆಂದಿತು :—"ಆ ಶ್ರೀಹರಿಯ ನಾಭೀಪ್ರದೇಶವು ಪುಷ್ಕರಸರೋವರವನ್ನು ಹೋಲುತ್ತಿರುವುದು. ಆ ನಾಭಿಯ ಅಕ್ಕಪಕ್ಕದಲ್ಲಿರುವ ವಳಿತ್ರಯಗಳು (ಮೂರುಗೆರೆ) ಆ ಸರೋವರದ ಅಲೆಗಳಂತೆ ಕಂಗೊಳಿಸುವುವು. ಮತ್ತು ಆ ನಾಭಿಯ ಮೇಲುಗಡೆ ಉದ್ದವಾಗಿ ಹಬ್ಬಿರುವ ರೋಮಾವಳಿಯು ಸರೋವರದ ಸುತ್ತಲೂ ಹರಡಿರುವ ಮನ್ಮಥೋದ್ಯಾನದಂತೆ ಶೋಭಿಸುತ್ತಿರುವುದು. ಇಂತಹ ಶ್ರೀಹರಿಯ ನಾಭಿಪ್ರದೇಶವನ್ನು ಸರ್ವದಾ ಹೃದಯದಲ್ಲಿ ಧ್ಯಾನಿಸುವೆನು."

೯. ಹಿಂದೋಲರಾಗವು ಹೀಗೆಂದು ಸ್ತುತಿಸಿತು :—ಇದಾವುದೀ ಮಾಯೆ ? ಈ ಮಾಯೆಯು ಎಂಥವರನ್ನೂ ಭ್ರಾಂತಿಗೊಳಿಸುವುದಲ್ಲಾ ! ಅರಳಿಯ ಎಲೆಯಲ್ಲಿ ಸಾಲಾಗಿ ಅಕ್ಷರಗಳು ಮೂಡುವುದುಂಟೆ ? ಅಥವಾ ದುಂಬಿಗಳು ಸಾಲಾಗಿ ಬಂದು ಎರುಗುವುದುಂಟೆ ? ಇಲ್ಲದಿದ್ದರೆ ಕಮಲಪುಷ್ಪದಲ್ಲಿ ಕಪ್ಪಾದ ಗೆರೆಯು ಮೂಡುವುದಾದರೂ ಸಂಭವಿಸುವುದೇ ? ಎಂಬುದಾಗಿ ನಾನಾವಿಧವಾದ ಭಾವನೆಗಳುಂಟಾಗುವಂತೆ ಮಾಡುವ ಆ ಶ್ರೀಹರಿಯ ಅರಳಿಯ ಎಲೆಯಂತೆ ಮುದ್ದಾದ ಆಕೃತಿಯಿಂದ ಹೊಳೆಯುತ್ತಿರುವ ಉದರಪ್ರದೇಶದಲ್ಲಿ ಮೇಲ್ಮುಖವಾಗಿ ಹಬ್ಬಿರುವ ರೋಮಾವಳಿಯನ್ನು ಮನಸಾರೆ ಭಜಿಸುವೆನು."

|| ಭೈರವರಾಗಿಣ್ಯ ಊಚುಃ ||

ಪೀತಕಟಿಂ ಭಜ ಕೃಷ್ಣ ಹರೇರಿಂದ್ರಧನುರ್ವಾರ್ದಸಿಯುತಂ ।
ಕಂಚನ ಶಿಲ್ಪೈಶ್ಚಾರುರುಚಿತದ್ಭುಜಸ್ನ್ವಾಣಾಂ ದುಃಖಹರಂ || ೧೦ ||

|| ಭೈರವಪುತ್ರಾ ಊಚುಃ ||

ಚತುಃಸಮುದ್ರಾ ಇವ ವಿಶ್ವಪೂರಕಾ
ಆನಂದದಾ ಏವ ಚತುಃಪದಾರ್ಥವಿತ್ ।
ತೇ ಬಾಹವೋ ಲೋಕವಿತಾನದಂಡವ-
ಜ್ಜಯಂತಿ ಭೂಧಾರಣದಿಗ್ಗಜಾ ಇವ || ೧೧ ||

|| ಮೇಘಮಲ್ಲಾರರಾಗಿಣ್ಯ ಊಚುಃ ||

ಅರುಣಬಿಂಬಫಲದ್ಯುತಿಮಂಡಿತಂ
ಭಜ ಹರೇರಧರಂ ಮಧುರಂ ಮನಃ ।
ನವಜಪಾದಲಮಲ್ಲದ್ಯುತಿಗ್ರಹಂ
ಸಕಲವಲ್ಲಭಭೂಮಿಪತೇಃ ಪ್ರಭೋಃ || ೧೨ ||

---

೧೦. ಭೈರವರಾಗದ ಪ್ರಿಯಪತ್ನಿಯರಾದ ರಾಗಿಣಿಯರು ಈ ರೀತಿ ವರ್ಣಿಸಿದರು:—"ಚಿನ್ನದ ಕಿರುಗೆಜ್ಜೆಗಳನ್ನು ಅಂದವಾಗಿ ಕೋರಿರುವ ಉಡಿದಾರದಿಂದ ಕೂಡಿ ಕಾಮನಬಿಲ್ಲನ್ನು ತಳೆದಿರುವ ಮೇಘವನ್ನು ಹೋಲುತ್ತಾ ದಿವ್ಯವಾದ ಕಾಂತಿಯನ್ನು ಬೀರುತ್ತಿರುವಂತಹ ಆ ಶ್ರೀಹರಿಯ ಪಟ್ಟೆಮಡಿಯಿಂದ ಅಲಂಕೃತವಾಗಿರುವ ಕಟಿಪ್ರದೇಶವನ್ನು ನಿರಂತರವೂ ಭಜಿಸಿರಿ.

೧೧. ಭೈರವಪುತ್ರರಾದ ರಾಗಕುಮಾರರು ಈ ರೀತಿ ಸ್ತುತಿಸಿದರು:—"ಚತುಸ್ಸಮುದ್ರಗಳಂತೆ ಪ್ರಪಂಚದ ಸುತ್ತಲೂ ವ್ಯಾಪಿಸಿ ಅದರ ಮರ್ಯಾದೆಯನ್ನು ಸಂರಕ್ಷಿಸುತ್ತಾ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳಂತೆ ಆನಂದದಾಯಕಗಳಾಗಿರುವ ಆ ಶ್ರೀಹರಿಯ ನಾಲ್ಕು, ತೋಳುಗಳು ಲೋಕಗಳೆಂಬ ಮೇಲ್ಕಟ್ಟು, ಅಲುಗಾಡದಂತೆ ನಿಲ್ಲಿಸಿರುವ ಆಧಾರಸ್ತಂಭಗಳಂತೆಯೂ ಭೂಮಂಡಲವನ್ನು ಹೊತ್ತಿರುವ ದಿಗ್ಗಜಗಳಂತೆಯೂ ರಮಣೀಯವಾಗಿ ಕಂಗೊಳಿಸುತ್ತಿರುವುವು. ಇಂತಹ ಬಾಹುಗಳನ್ನು ನಮಿಸುವೆವು.

೧೨. ಮೇಘಮಲ್ಲಾರದ ರಾಗಿಣಿಯರು ಇಂತೆಂದು ಪ್ರಾರ್ಥಿಸಿದರು:—"ಎಲೆ ಮನಸ್ಸೇ, ತನ್ನ ಸಹಜವಾದ ಕಾಂತಿಯಿಂದ ತೊಂಡೆಯ ಹಣ್ಣನ್ನೂ, ಎಳೆಯ ದಾಸವಾಳದ ಹೂವಿನ ರೇಖನ್ನೂ ಜಯಿಸಲು ಸ್ಪರ್ಧಿಸುತ್ತಿರುವಂತಹ ವ್ರಜೇಶ್ವರನಾದ ಆ ಶ್ರೀಹರಿಯ ಮಾಧುರ್ಯವಾದ ಕೆಂದುಟಿಯನ್ನು ಎಡೆಬಿಡದೆ ಸ್ಮರಿಸುತ್ತಿರು."

॥ ಮೇಘಮಲ್ಲಾರಪುತ್ರಾ ಊಚುಃ ॥

ಕರ್ಪೂರಕೇತಕಸುಮೌಕ್ತಿಕಹೀರಕಾಣಾಂ
ಶ್ರೀಖಂಡಚಂದ್ರಚಪಲಾಮೃತಮಲ್ಲಿಕಾನಾಂ ।
ತೇಷಾಂ ರುಚೇಶ್ಚ ಪರಿಭಾವಮುಕಾರಿ ಪೂರ್ವಂ
ಯಾ ದಂತಪಂಕ್ತಿರಮಲಾ ಸ್ಮರತಾಂ ಮಮಾಸ್ಯ ॥ ೧೩ ॥

॥ ದೀಪಕರಾಗಿಣ್ಯ ಊಚುಃ ॥

ನಯನಯುಗಲಜಾತಂ ಪಾತು ನೋಽಹರ್ನಿಶಂ ತೇ
ಮದನಶರಪರೋಕ್ಷಂ ಸರ್ವಲಾವಣ್ಯದೀಕ್ಷಂ ।
ಪರಿಹೃತಸುರವೃಕ್ಷಂ ಕೋಟಿಶೋ ಲಕ್ಷಲಕ್ಷಂ
ನಿಜಜನಕೃತರಕ್ಷಂ ದಾನದಕ್ಷಂ ಕಟಾಕ್ಷಂ ॥ ೧೪ ॥

---

೧೩. ಮೇಘಮಲ್ಲಾರ ರಾಗಕುಮಾರರು ಈ ರೀತಿ ಕೊಂಡಾಡಿದರು :— "ಯಾವುದು ತನ್ನ ಹೊಳಪಿನಿಂದ ಕರ್ಪೂರವನ್ನೂ, ತಾಳೆಯಹೂವನ್ನೂ, ಮುತ್ತಿನ ಸಾಲನ್ನೂ, ವಜ್ರದ ಹರಳುಗಳನ್ನೂ, ಶ್ರೀಗಂಧವನ್ನೂ, ಚಂದ್ರನನ್ನೂ, ಮಿಂಚನ್ನೂ, ಅಮೃತ (ಹಾಲು) ವನ್ನೂ, ಮಲ್ಲಿಗೆಯ ಮೊಗ್ಗುಗಳನ್ನೂ ಗೆದ್ದು ಆ ಗೆಲವಿನಿಂದ ಮತ್ತಷ್ಟು ಕಾಂತಿಯನ್ನು ತಳೆದು ಕಂಗೊಳಿಸುತ್ತಿರುವುದೋ ಅಂತಹ ಸ್ವಭಾವ ಶುಭ್ರವಾದ ಶ್ರೀಹರಿಯ ದಂತಪಂಕ್ತಿಯನ್ನು ನಿರಂತರವೂ ಸ್ಮರಿಸುತ್ತಿರುವೆವು."

೧೪. ದೀಪಕ ರಾಗಿಣಿಯರು ಇಂತೆಂದು ನುಡಿದರು :–" ಓ ದೇವ, ಮನ್ಮಥನ ಬಾಣಗಳಿಗೆ ಸರಿಸಮವೆನಿಸಿ ಸಮಸ್ತವಾದ ಲಾವಣ್ಯದಿಂದಲೂ ಪರಿಪೂರ್ಣವಾಗಿ ತನ್ನ ಕಡೆಯ ಜನರನ್ನು ಎಡೆಬಿಡದೆ ಸಂರಕ್ಷಿಸುತ್ತಲೂ ತಮ್ಮ ಔದಾರ್ಯದಿಂದ ಆಶ್ರಿತರಾದವರಿಗೆ ಲಕ್ಷಗಟ್ಟಲೆಯೂ, ಕೋಟಿಗಟ್ಟಲೆಯೂ ಕೇಳಿದ್ದನ್ನು ಕೊಡುವಂತಹ ದೇವಲೋಕದ ಕಲ್ಪವೃಕ್ಷಗಳನ್ನು ಅಲ್ಲಗಳೆಯುತ್ತಲೂ ಇರುವಂತಹ ನಿನ್ನ ನಯನ ಯುಗಲಗಳಿಂದ ಹೊರಬೀಳುವ ಕಟಾಕ್ಷಗಳು ನಮ್ಮನ್ನು ಹಗಲಿರುಳೂ ಸಲಹುತ್ತಿರಲಿ."

॥ ದೀಪಕಪುತ್ರಾ ಊಚುಃ ॥

ಕಿಂ ಬಾಹುಲಿಂಗಯುಗಲಂ ನವಪದ್ಮಮಧ್ಯೇ
ದುಃಖಕ್ಷಯಾಯ ವಸತಾಂ ನಿಶಿತಾಯ ಯುಗ್ಮಂ ।
ಗಜ್ಜೈವಂ ಧನುರ್ಜಯತಿ ಕಿಂ ಮಕರಧ್ವಜಸ್ಯ
ಭ್ರೂಮಂಡಲಂ ಕಿಮಥ ಚಂದ್ರಮುಖೇ ಪರಸ್ಯ ॥ ೧೫ ॥

॥ ಮಾಲಕಂಸರಾಗಿಣ್ಯ ಊಚುಃ ॥

ಪರಿನೃತ್ಯತಿ ಕರ್ಣಮಂಡಲೇ
ಫಣಿಪತ್ನ್ಯಾವಿವ ಲೋಲಕುಂಡಲೇ ।
ಕಮಲೇ ಮಕರಂದನಿರ್ಭರೇ
ಭ್ರಮರಾಲೀವ ಸುಗಂಡಮಂಡಲೇ ॥ ೧೬ ॥

---

೧೫. ದೀಪಕರಾಗ ಕುಮಾರರು ಈ ರೀತಿಯಾಗಿ ವರ್ಣಿಸಿದರು :—"ಇದೇನು ಕಮಲಪುಷ್ಪದಲ್ಲಿ ವಿಹರಿಸುತ್ತಿರುವ ಭ್ರಮರಗಳೋ! ಇಲ್ಲವೇ ರಾತ್ರಿಯ ಕಾಲದಲ್ಲಿ ಹೊಳೆಯುತ್ತಿರುವ ನಕ್ಷತ್ರಗಳೆರಡೋ! ಇಲ್ಲದಿದ್ದರೆ ಶ್ರೀಕೃಷ್ಣನ ಮುಖದಲ್ಲಿರುವ ನಯನಗಳೋ! ಇವೂ ಸಹ ಬಾಗಿಸಿ ಇಟ್ಟಿರುವ ಮನ್ಮಥನ ಜಯಪ್ರದವಾದ ಬಿಲ್ಲುಗಳೋ! ಇಲ್ಲವೇ ಚಂದ್ರನಂತೆ ಕಾಂತಿಯಿಂದ ತುಂಬಿ ತುಳುಕಾಡುತ್ತಿರುವ ಶ್ರೀಕೃಷ್ಣನ ಮುಖದಲ್ಲಿ ಕಂಗೊಳಿಸುತ್ತಿರುವ ಹುಬ್ಬುಗಳೋ! ಎಂಬೀ ರೀತಿಯಾಗಿ ನಾನಾವಿಧವಾದ ಸಂಶಯಗಳಿಗೆ ಕಾರಣವಾದ ಆ ಶ್ರೀಹರಿಯ ನಯನದ್ವಯಗಳೂ ಭ್ರೂಯುಗ್ಮವೂ ಸತ್ಪುರುಷರ ದುಃಖಗಳನ್ನು ಪರಿಹರಿಸಲಿ."

೧೬. ಮಾಲಕಂಸ ರಾಗಿಣಿಯರು ಈ ರೀತಿ ವರ್ಣಿಸಿದರು :—"ಮಕರಂದವು ತುಂಬಿ ತುಳುಕಾಡುತ್ತಿರುವ ತಾವರೆಯ ಹೂವಿನಲ್ಲಿ ಸುಳಿದಾಡುತ್ತಿರುವ ದುಂಬಿಗಳಂತೆ ಕಂಗೊಳಿಸುತ್ತಾ ಚಂಚಲವಾದ ಕುಂಡಲಗಳಿಂದ ಶೋಭಿಸುತ್ತಿರುವ ಆ ಶ್ರೀಹರಿಯ ಎರಡು ಕಿವಿಗಳು ಆತನ ಕಪೋಲ ಪ್ರದೇಶದಲ್ಲಿ ನೃತ್ಯನಿರತರಾದ ನಾಗಕನ್ನಿಕೆಯರಂತೆ ಅಲುಗುತ್ತಾ ಶೋಭಿಸುತ್ತಿರುವುವು.

॥ ಮಾಲಕಂಸಪುತ್ರಾ ಊಚುಃ ॥

ರವಿರೇವ ಖಮಂಡಲೇ ಕಿಮು
ಯದುಭರ್ತುಸ್ತ್ವಥ ವಾದ್ಯತೇ ತಡಿತ್ ।
ಅಧಿತಿಷ್ಠತಿ ಗಂಡಮಂಡಲಂ
ದ್ಯುತಿಖಂಡಂ ಕಲಧೌತಕುಂಡಲಂ ॥ ೧೭ ॥

॥ ಶ್ರೀರಾಗಿಣ್ಯ ಊಚುಃ ॥

ಕಲಿಂಗಯೋಃಖಂಜನಯೋಃ ಕಿಲಾರಾ-
ದಾಪಶ್ಯತಾಂ ಯುದ್ಧಮಭೂದಲೀನಾಂ ।
ತೇಷಾಂ ಗತಃ ಕೀರಡಷಪ್ರಫುಲೇನ
ಚಕಾಸ್ತಿ ಪದ್ಮೇಽರುಣೋಽವವಲಿಸುಃ ॥ ೧೮ ॥

॥ ರಾಗಪುತ್ರಾ ಊಚುಃ ॥

ಪರಿಕರೀಕೃತಪೀತಪಟಂ ಹರಿಂ
ಶಿಖಿಕಿರೀಟನತೀಕೃತಕಂಧರಂ ।
ಲಗುಡವೇಣುಕರಂ ಚಲಕುಂಡಲಂ
ಪಟುತರಂ ನಟವೇಷಧರಂ ಭಜೇ ॥ ೧೯ ॥

---

೧೭. ಮಾಲಕಂಸರಾಗಕುಮಾರರು ಇಂತೆಂದು ಬಣ್ಣಿಸಿದರು :—"ಓ ದೇವಾ! ಇದು ಅಂತರಿಕ್ಷದಲ್ಲಿ ಹೊಳೆಯುತ್ತಿರುವ ಸೂರ್ಯಬಿಂಬವೋ ಅಥವಾ ನಿನ್ನ ಗಂಡ ಮಂಡಲದಲ್ಲಿ (ವಿಶಾಲವಾದ ಕಪೋಲ ಪ್ರದೇಶದಲ್ಲಿ) ಓಲಾಡುತ್ತಿರುವ ಕಾಂತಿಯುತ ವಾದ ಚಿನ್ನದ ಕರ್ಣಕುಂಡಲವೊ! (ಈ ರೀತಿಯ ಸಂದೇಹಕ್ಕೆ ಜನಕವಾದ ನಿನ್ನ ಕುಂಡಲವನ್ನು ವಂದಿಸುವೆವು.)

೧೮. ಶ್ರೀರಾಗದ ರಾಗಿಣಿಯರು ಇಂತೆಂದರು :—"............(ಈ ಪದ್ಯವೂ ಸ್ಫುಟವಾಗಿಲ್ಲದಿರುವುದರಿಂದ ಇದರ ಅರ್ಥವು ಊಹಾತೀತವಾಗಿರುವುದು.)

೧೯. ಶ್ರೀರಾಗದ ಕುಮಾರರು ಇಂತೆಂದು ನುಡಿದರು ;—"ಹೊಂಬಣ್ಣದ ಪಟ್ಟೆಮಡಿಯನ್ನುಟ್ಟು ನವಿಲುಗರಿಯಿಂದ ಅಲಂಕೃತವಾದ ಕಿರೀಟವನ್ನು ತಲೆಯಲ್ಲಿ ಧರಿಸಿ, ಒಂದು ಕೈಲಿ ಬೆತ್ತವನ್ನೂ, ಮತ್ತೊಂದು ಕೈಲಿ ಕೊಳಲನ್ನೂ ಹಿಡಿದು ನಾಟ್ಯಕ್ಕೆ ಉಚಿತವಾದ ವೇಷವನ್ನು ಧರಿಸಿ, ಕಿವಿಯಲ್ಲಿನ ಕುಂಡಲಗಳು ಅಲುಗುವಂತೆ ನರ್ತನದಲ್ಲಿ ತೊಡಗಿರುವ ಆ ಶ್ರೀಹರಿಯನ್ನು ಭಜಿಸುವೆನು."

|| ಹಿಂಡೋಲರಾಗಿಣ್ಯ ಊಚುಃ ||

ಅತಸೀಕುಸುಮೋಪಮೇಯಕಾಂತಿ-
ರ್ಯಮುನಾಕೂಲಕದಂಬಮಧ್ಯವರ್ತೀ ।
ನವಗೋಪವಧೂವಿಲಾಸಶಾಲೀ
ವನಮಾಲೀ ವಿತನೋತು ಮಂಗಲಾನಿ || ೨೦ ||

|| ಹಿಂಡೋಲಪುತ್ರಾ ಊಚುಃ ||

ಹರೇ ಮತ್ಸಮಃ ಪಾತಕೀ ನಾಸ್ತಿ ಭೂಮೌ
ತಥಾ ತ್ವತ್ಸಮೋ ನಾಸ್ತಿ ಪಾಪಾಪಹಾರೀ ।
ಇತಿ ತ್ವಾಂ ಚ ಮತ್ವಾ ಜಗನ್ನಾಥ ದೇವಂ
ಯಥೇಚ್ಛಾಭವೇತ್ತೇ ತಥಾ ಮಾಂ ಕುರು ತ್ವಂ || ೨೧ ||

|| ಶ್ರೀ ನಾರದ ಉವಾಚ ||

ಇತಿ ರಾಗಕೃತಂ ಧ್ಯಾನಂ ಯಃ ಶೃಣೋತಿ ಪಠೇತ್ಸದಾ ।
ತನ್ನೇತ್ರಗೋಚರೋ ಯಾತಿ ಭಗವಾನ್ಭಕ್ತವತ್ಸಲಃ || ೨೨ ||

---

೨೦. ಹಿಂದೋಲದ ರಾಗಿಣಿಯರು ಈ ರೀತಿ ಪ್ರಾರ್ಥಿಸಿದರು :—"ಅಗಸೆಯ ಹೂವಿನಂತೆ ಶ್ಯಾಮಲವಾದ ಕಾಂತಿಯಿಂದ ಕಂಗೊಳಿಸುತ್ತಾ ಕುತ್ತಿಗೆಯಲ್ಲಿ ವನಮಾಲೆ ಯೆಂಬ ಹೂವಿನ ದಂಡೆಯನ್ನು ತಳೆದು ಯಮುನಾನದಿಯ ದಡದಲ್ಲಿರುವ ಕದಂಬ ವೃಕ್ಷಗಳ ನಡುವೆ ಗೋಪಾಂಗನೆಯರೊಡನೆ ವಿಹರಿಸುತ್ತಿರುವ ಆ ಶ್ರೀಹರಿಯು ನಮ್ಮೆಲ್ಲರಿಗೂ ಮಂಗಲವನ್ನುಂಟುಮಾಡಲಿ."

೨೧. ಕೊನೆಯದಾಗಿ ಹಿಂದೋಲರಾಗದ ಕುಮಾರರು ಈ ರೀತಿಯಾಗಿ ಸ್ತೋತ್ರಮಾಡಿದರು :—"ಓ ಜಗನ್ನಾಥ! ಶ್ರೀಹರೇ! ಈ ಭೂಮಿಯಲ್ಲಿ ನನ್ನಂತಹ ಪಾಪಿಯು ಯಾವನೂ ದೊರೆಯಲಾರನು. ಈ ರೀತಿಯಾಗಿ ತಿಳಿದಿರುವ ನನ್ನನ್ನು ನಿನಗೆ ಯಾವರೀತಿ ತೋರುವುದೋ ಆರೀತಿ ನಿಯೋಜಿಸುವವನಾಗು."

೨೨. ಓ ಬಹುಲಾಶ್ವರಾಜೇಂದ್ರ! ಈ ರೀತಿಯಾಗಿ ಆ ರಾಗರಾಗಿಣಿಯರೂ, ರಾಗಕುಮಾರರೂ ಮಾಡಿದ ಸ್ತೋತ್ರವನ್ನು ಸರ್ವಕಾಲದಲ್ಲಿಯೂ, ಯಾವನು ಶ್ರವಣ ಮಾಡುವನೋ ಮತ್ತು ಯಾವನು ಪಠಿಸುವನೋ ಅಂತಹ ಪುರುಷನಿಗೆ ಭಕ್ತವತ್ಸಲ ನಾದ ಆ ಶ್ರೀಹರಿಯು ಸಂದರ್ಶನವನ್ನೀಯುವನು."

ಇತ್ಥಂ ಸ್ವಂ ದರ್ಶನಂ ದತ್ವಾ ವೇದಾದಿಭ್ಯೋ ಹರಿಃ ಸ್ವಯಂ ।
ಬಭೂವ ಪಶ್ಯತಾಂ ತೇಷಾಂ ಶಾರ್ಙ್ಗಪಾಣಿಶ್ಚತುರ್ಭುಜಃ ॥ ೨೩ ॥

ಕೃತ್ವಾ ತು ದರ್ಶನಂ ವಿಷ್ಣೋರ್ಗತೇ ದೇವೇ ಗಣೈಃ ಸಹ ।
ಸೈನ್ಯೇ ಸುತಂ ಶಂಬರಾರಿಂ ಸ್ಥಾಪಯಿತ್ವಾ ಯದೂತ್ತಮಂ ॥ ೨೪ ॥

ದ್ವಾರಕಾಂ ಸ್ವಾಂ ಪುರೀಂ ಗಂತುಂ ಮನಶ್ಚಕ್ರೇ ಪರಾತ್ಪರಃ ॥ ೨೫ ॥

ಮಂಜೀರಘಂಟಾಕಲಕಿಂಕಿಣೀಕಲಂ
ಸುಕಾಂಸ್ಯಪಾತ್ರಧ್ವನಿನಾ ರಥೇನ ।
ಸುಗ್ರೀವಮುಖ್ಯೈಃ ಸ ಚ ಚಂಚಲಾಶ್ವೈ-
ರ್ನಿಯೋಜಿತೈರ್ಮೈಥಿಲ ದಾರುಕೇಣ ॥ ೨೬ ॥

---

೨೩. ಈ ರೀತಿಯಾಗಿ ಶ್ರೀಕೃಷ್ಣನು ಆ ವೇದಪುರುಷಾದಿಗಳಿಗೆ ತನ್ನ ದಿವ್ಯವಾದ ದರ್ಶನವನ್ನಿತ್ತು ಅವರೆಲ್ಲರೂ ನೋಡುತ್ತಿರುವಂತೆಯೇ ಮೊದಲಿನ ಹಾಗೆ ಶಾರ್ಙ್ಗಧನುರ್ಧರನಾಗಿ ಕಂಗೊಳಿಸಿದನು.

೨೪–೨೫. ಪರಮಪುರುಷನಾದ ಶ್ರೀಹರಿಯ ಸಂದರ್ಶನವನ್ನು ಪಡೆದು ತನ್ನ ಪರಿವಾರದೊಡನೆ ವೇದನಗರಕ್ಕೆ ಹಿಂದಿರುಗಿದನಂತರ ಶ್ರೀಕೃಷ್ಣನು ಮೊದಲಿನಂತೆ ಯಾದವಸೇನೆಯಲ್ಲಿ ತನ್ನ ಪುತ್ರನಾದ ಪ್ರದ್ಯುಮ್ನನನ್ನು ನಿಲ್ಲಿಸಿ ತನ್ನ ನಗರವಾದ ದ್ವಾರಕೆಗೆ ಹೊರಡಲು ಮನಸ್ಸುಮಾಡಿದನು.

೨೬–೨೭. ಅನಂತರ ಆ ಪ್ರಭುವು ದಾರುಕನೆಂಬ ಸಾರಥಿಯಿಂದಲೂ, ಸುಗ್ರೀವ ಮೊದಲಾದ ಉತ್ತಮಾಶ್ವಗಳಿಂದಲೂ, ಗರುಡಧ್ವಜದಿಂದಲೂ, ಚಕ್ರಗಳಿಗೆ ಕಟ್ಟಿರುವ ಕಿರುಗಂಟೆಗಳ ಕಂಚಿನ ನಾದವನ್ನು ಹೋಲುತ್ತಿರುವ ಇಂಪಾದ ಧ್ವನಿಯಿಂದಲೂ ಕೂಡಿ ರಮಣೀಯವಾಗಿರುವ ತನ್ನ ದಿವ್ಯರಥವನ್ನೇರಿ ಆ ವೇದನಗರಿ

ಯುತೇನ ಸದ್ರತ್ನಮತಶ್ರುತಿಸ್ವನೈಃ
ಪ್ರಭಂಜನೈರ್ಜದುಜದ್ಧರುಣಧ್ವಜೇನ ।
ವಿಹಾಯ ತಂ ವೇದಪುರೀಂ ಪರಾತ್ಮಾ
ಯಯೌ ಪುರೀಂ ಯಾದವಕಾಂಡಮಂಡಿತಾಂ ॥ ೨೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಶ್ರೀಕೃಷ್ಣಧ್ಯಾನವರ್ಣನಂ ನಾಮ ಪಂಚಚತ್ವಾರಿಂಶೋಽಧ್ಯಾಯಃ

ಯಿಂದ ಹೊರಟು ಯಾದವರ ಸಮೂಹದಿಂದ ನಿಬಿಡವಾಗಿರುವ ದ್ವಾರಕಾನಗರಿಯನ್ನು ಪ್ರವೇಶಿಸಿದನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಶ್ರೀಕೃಷ್ಣ ಧ್ಯಾನವರ್ಣನವೆಂಬ ನಲವತ್ತೈದನೆಯ ಅಧ್ಯಾಯವು ಮುಗಿದುದು.

—|| ಶ್ರೀಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಷಟ್ಚತ್ವಾರಿಂಶೋಽಧ್ಯಾಯಃ

|| ಶ್ರೀ ನಾರದ ಉವಾಚ ||

ಅಥ ಕೃಷ್ಣೇ ಭಗವತಿ ಪುರೀಂ ದ್ವಾರಾವತೀಂ ಗತೇ ।
ಪ್ರದ್ಯುಮ್ನಃ ಸೈನಿಕೈಃ ಸಾರ್ಧಂ ನದಂ ಕಾಮದುಘಂ ಯಯೌ || ೧ ||

ಶತಯೋಜನವಿಸ್ತೀರ್ಣಾ ಗಂಧರ್ವಾಣಾಂ ಮನೋಹರಾ ।
ವಸಂತಮಾಲತೀ ನಾಮ್ನಾ ಹೇಮರತ್ನಮಯೀ ಪುರೀ || ೨ ||

ಲವಂಗತಿಲಕಾಜಾಲೈರೇಲಾಕಾಶ್ಮೀರದೇಶಕೈಃ ।
ಜಾತೀಫಲಾದಿಜಾವಿತ್ರೀ ಶ್ರೀಖಂಡಪಾರಿಜಾತಕೈಃ || ೩ ||

ನಲವತ್ತಾರನೆಯ ಅಧ್ಯಾಯವು

೧. ಬಹುಲಾಶ್ವನರೇಂದ್ರ! ಶ್ರೀಕೃಷ್ಣನು ದ್ವಾರಕೆಗೆ ಹೊರಟನಂತರ ಪ್ರದ್ಯುಮ್ನನು ತನ್ನ ಸೈನಿಕರೊಡನೆ ಕಾಮದುಘವೆಂಬ ನದಕ್ಕೆ ಪ್ರಯಾಣಬೆಳಸಿದನು.

೨. ಆ ನದದ ದಡದಲ್ಲಿ ನೂರು ಯೋಜನಗಳಷ್ಟು ವಿಸ್ತಾರವಾಗಿ ನಾನಾ ವಿಧವಾದ ರತ್ನಗಳಿಂದಲೂ, ಚಿನ್ನದಿಂದಲೂ ನಿರ್ಮಿತವಾದ ವಸಂತಮಾಲತಿಯೆಂಬ ಮನೋಹರವಾದ ಗಂಧರ್ವರ ನಗರಿಯೊಂದಿರುವುದು.

೩. ಆ ನಗರದಲ್ಲಿ ಲವಂಗಲತೆಗಳೂ, ಏಲಕ್ಕಿಯ ಬಳ್ಳಿಗಳೂ ಕೇಸರ ವೃಕ್ಷಗಳೂ, ಜಾಜೀಕಾಯಿ, ಶ್ರೀಗಂಧ, ಪಾರಿಜಾತ ಮುಂತಾದ ವೃಕ್ಷಗಳೂ ಹೇರಳವಾಗಿ ಬೆಳೆದು ಕಂಗೊಳಿಸುತ್ತಿರುವುವು.

ಮತ್ತಾಲಿನಾದಿತಾ ಭೃಂಗೈಃ ಶಬ್ದಿತಾ ಚಿತ್ರಪಕ್ಷಿಭಿಃ ।
ಗಂಧರ್ವೈ ರಾಜಿತಾ ಭವ್ಯೈರ್ನಾಗೈರ್ಭೋಗವತೀ ಯಥಾ ॥ ೪ ॥

ಪತಂಗೋ ನಾಮ ತತ್ರೈವ ಗಂಧರ್ವೇಶೋ ಮಹಾಬಲಃ ।
ಕರೋತಿ ರಾಜ್ಯಂ ಸುಕೃತೀ ಶಕ್ರವದ್ಬಲಪೌರುಷಂ ॥ ೫ ॥

ಶ್ರುತ್ವಾ ಪ್ರದ್ಯುಮ್ನಮಾಯಾಂತಂ ದಿಗ್ಜಯಾರ್ಥಂ ವಿನಿರ್ಗತಂ ।
ಗಂಧರ್ವೈರುದ್ಭಟೈರ್ಯುಕ್ತೋ ಯುದ್ಧಂ ಕರ್ತುಂ ಮನೋದಧೇ ॥ ೬ ॥

ರಥಾಶ್ವಗಜವೀರೈಶ್ಚ ಗಂಧರ್ವೈರ್ದಶಕೋಟಿಭಿಃ ।
ಪತಂಗ ಆಗತೋ ಯೋದ್ಧುಂ ಪ್ರದ್ಯುಮ್ನಸ್ಯಾಪಿ ಸಂಮುಖೇ ॥ ೭ ॥

---

೪. ಮತ್ತು ಮದಿಸಿದ ಭ್ರಮರಗಳ ಝುಂಕಾರದಿಂದಲೂ, ನಾನಾ ಜಾತಿಗೆ ಸೇರಿದ ಚಿತ್ರವಿಚಿತ್ರಗಳಾದ ಪಕ್ಷಿಗಳ ಇಂಪಾದ ಕಲಕಲ ಧ್ವನಿಯಿಂದಲೂ ಕಂಗೊಳಿಸು ತ್ತಿರುವ ಆ ನಗರಿಯು ಮಂಗಲಕರವಾದ ವೇಷದಿಂದ ಒಪ್ಪುತ್ತಿರುವ ತನ್ನ ನಿವಾಸಿಗಳಾದ ಗಂಧರ್ವರಿಂದ ನಿಬಿಡೀಕೃತವಾಗಿ ನಾಗರಿಂದ ತುಂಬಿತುಳುಕುತ್ತಿರುವ ಭೋಗವತಿಯಂತೆ ಮೆರೆಯುತ್ತಿರುವುದು.

೫. ಆ ನಗರದಲ್ಲಿ ಇಂದ್ರನಂತೆ ಬಲದಿಂದಲೂ, ಸಾಹಸದಿಂದಲೂ ಮೆರೆಯು ತ್ತಿರುವ ಪತಂಗನೆಂಬ ಗಂಧರ್ವಾಧಿಪತಿಯು ರಾಜ್ಯಭಾರವನ್ನು ಮಾಡುತ್ತಿರುವನು.

೬. ಆ ಪತಂಗನು ದಿಗ್ವಿಜಯಾರ್ಥವಾಗಿ ಪ್ರದ್ಯುಮ್ನನು ದಂಡೆತ್ತಿ ಬಂದಿರು ವುದನ್ನು ಕೇಳಿ ಬಲದಿಂದ ಕೊಬ್ಬಿದ್ದ ತನ್ನ ಕಡೆಯ ಗಂಧರ್ವರಿಂದೊಡಗೂಡಿ ಆತನೊಡನೆ ಯುದ್ಧವನ್ನು ಮಾಡಲು ನಿಶ್ಚಯಿಸಿದನು.

೭. ಅನಂತರ ಆತನು ಆನೆ, ಕುದುರೆ, ರಥ, ಪದಾತಿಗಳೆಂಬ ಅಂಗಚತುಷ್ಟಯ ದಿಂದ ಕೂಡಿದ ಸೇನೆಯಿಂದಲೂ, ಹತ್ತು ಕೋಟಿ ಗಂಧರ್ವರಿಂದಲೂ ಪರಿವೃತನಾಗಿ ಆ ಪ್ರದ್ಯುಮ್ನನಿಗೆ ಎದುರಾಗಿ ಸೆಣಸಲು ಬಂದನು.

ಗಂಧರ್ವೈರ್ಯದುಭಿಃ ಸಾರ್ಧಂ ಘೋರಂ ಯುದ್ಧಂ ಬಭೂವ ಹ।
ಭಲ್ಲೈರ್ಗದಾಭಿಃ ಪರಿಘೈರ್ಮುದ್ಗರೈಸ್ತೋಮರಶ್ಪರ್ಭಿಃ ॥ ೮ ॥

ಬಾಣಾಂಧಕಾರೇ ಸಂಜಾತೇ ಪತಂಗೋಽತಿರಥೋ ಬಲೀ।
ಧನುಷ್ಟಂಕಾರಯನ್ಪ್ರಾಪ್ತೋ ಜಗರ್ಜ ಘನವದ್ಬಲೀ ॥ ೯ ॥

ಗದೋ ಗದಾಂ ಸಮಾದಾಯ ಬಲದೇವಾನುಜೋ ಬಲೀ।
ತದ್ಬಲಂ ಪೋಥಯಾಮಾಸ ವಜ್ರೇಣೇಂದ್ರೋ ಯಥಾ ಗಿರೀನ್ ॥ ೧೦ ॥

ಗದಸ್ಯ ಗದಯಾ ಕೇಚಿದ್ಗಂಧರ್ವಾಃ ಪತಿತಾ ರಣೇ।
ರಥಾಶ್ಚೂರ್ಣೀಕೃತಾಃ ಸರ್ವೇ ಮಾತಂಗಾ ಭಿನ್ನಮಸ್ತಕಾಃ ॥ ೧೧ ॥

---

೮. ಆಗ ಗಂಧರ್ವರಿಗೂ, ಯದುಗಳಿಗೂ ಭಯಂಕರವಾದ ಯುದ್ಧವು ಜರುಗಿತು. ಈ ಯುದ್ಧದಲ್ಲಿ ಎರಡು ಕಡೆಯವರೂ ಭಲ್ಲೆ, ಗದೆ, ಪರಿಘ, ಮುದ್ಗರ, ತೋಮರ, ಮುಂತಾದ ಆಯುಧಗಳನ್ನು ಪ್ರಯೋಗಿಸುತ್ತಾ ಜೋರಾಗಿ ಹೋರಾಡಿದರು.

೯. ಈ ರೀತಿಯಾಗಿ ಉಭಯ ಸೇನೆಗಳೂ ಹೋರಾಡುತ್ತಿರುವಾಗ ಅವರ ಬಾಣಗಳಿಂದ ಆಕಾಶವು ಮುಚ್ಚಿಹೋಗಿ ಕಗ್ಗತ್ತಲೆಯು ಕವಿದಂತಾಯಿತು. ಆಗ ಅತಿರಥನಾದ ಆ ಪತಂಗನೆಂಬ ಗಂಧರ್ವರಾಜನು ತನ್ನ ಧನುಸ್ಸಿಗೆ ಹೆದೆಯೇರಿಸಿ ಟಂಕಾರಮಾಡುತ್ತಾ ಮುಂದೆ ಬಂದು ಕಾರ್ಮೋಡದಂತೆ ಗಟ್ಟಿಯಾಗಿ ಒಂದು ಬಾರಿ ಗರ್ಜನೆಮಾಡಿದನು.

೧೦. ಆಗ ಬಲದೇವನ ತಮ್ಮನಾದ ಗದನೆಂಬ ಯದುವೀರನು ತನ್ನ ಗದೆಯನ್ನು ತೆಗೆದುಕೊಂಡು ಇಂದ್ರನು ವಜ್ರಾಯುಧದಿಂದ ಪರ್ವತಗಳನ್ನು ಕುಟ್ಟಿ ಕೆಡಹುವಂತೆ ಆ ಗಂಧರ್ವರಾಜನ ಸೇನೆಯನ್ನು ಕ್ಷಣಮಾತ್ರದಲ್ಲಿ ನುಚ್ಚುನೂರು ಮಾಡುತ್ತಾ ಬಂದನು.

೧೧. ಆ ಗದಾಪ್ರಹಾರದಿಂದ ಕೆಲವುಂದಿ ಗಂಧರ್ವರು ನೆಲದ ಮೇಲೆ ಬಿದ್ದು ಹೋದರು. ರಥಗಳೆಲ್ಲವೂ ಪುಡಿಪುಡಿಯಾದುವು. ಆನೆಗಳ ತಲೆಗಳೆಲ್ಲವೂ ಒಡೆದು ಸೀಳಿಹೋದುವು.

ಅಶ್ವಾರೂಢಾಃ ಕೇಽಪಿ ವೀರಾಃ ಪತಿತಾ ರಣಮೂರ್ಧನಿ ।
ಅಧೋಮುಖಾ ಊರ್ಧ್ವಮುಖಾ ಗಂಧರ್ವಾಶ್ಛಿನ್ನಬಾಹವಃ　　॥ ೧೨ ॥

ಕ್ಷಣಮಾತ್ರೇಣ ತತ್ಸೈನ್ಯೇ ರುಧಿರಾಣಾಂ ನದೀ ಹ್ಯಭೂತ್ ।
ಪ್ರಮಥಾ ಹರಮಾಲಾರ್ಥಂ ಶಿರಾಂಸಿ ಜಗೃಹುರ್ಮೃಧೇ　　॥ ೧೩ ॥

ಸಿಂಹಾರೂಢಾ ಭದ್ರಕಾಳೀ ಡಾಕಿನೀಶತಸಂವೃತಾ ।
ಕಪಾಲೇನಾಽಪಿ ರುಧಿರಂ ಪಿಬಂತೀ ದೃಶ್ಯತೇ ಮೃಧೇ　　॥ ೧೪ ॥

ಏವಂ ಯುದ್ಧೇ ಗದಕೃತೇ ಗಂಧರ್ವಾಣಾಂ ಪಲಾಯತಾಂ ।
ಗಂಧರ್ವೇಶಸ್ತದಾ ಪ್ರಾಪ್ತೋ ಹಸ್ತಿಲಕ್ಷಬಲಾನ್ವಿತಃ　　॥ ೧೫ ॥

---

೧೨. ಕುದುರೆಯ ಮೇಲೆ ಕುಳಿತು ಹೋರಾಡುತ್ತಿದ್ದ ಕೆಲಮಂದಿ ವೀರರು ತಾವು ಕುಳಿತಲ್ಲಿಂದ ನೆಲದ ಮೇಲಕ್ಕೆ ಉರುಳಿ ಬಿದ್ದುಬಿಟ್ಟರು. ಕೆಲವರು ಬೀಳುವಾಗ ಕೆಳಮುಖನಾದರು. ಮತ್ತೆ ಕೆಲವರು ಮೇಲ್ಮುಖನಾಗಿ ಉರುಳಿದರು ಇನ್ನು ಕೆಲವರಿಗೆ ಕೈಗಳೇ ಕತ್ತರಿಸಿಹೋದುವು.

೧೩. ಈ ರೀತಿಯಾಗಿ ಕ್ಷಣಮಾತ್ರದಲ್ಲೇ ಆ ಗಂಧರ್ವಸೈನ್ಯವು ಕತ್ತರಿಸಿ ಹೋಗಿ ರಕ್ತವು ನದಿಯಂತೆ ಹರಿಯತೊಡಗಿತು. ಆ ರಣರಂಗದಲ್ಲಿ ಕಡಿದುಬಿದ್ದಿದ್ದ ಯೋಧರ ತಲೆಗಳನ್ನು ಶಿವನ ರುಂಡಮಾಲೆಗೆಂದು ಪ್ರಮಥಗಣಗಳು ಕೊಂಡೊಯ್ಯ ತೊಡಗಿದರು.

೧೪. ಇವರ ಜೊತೆಗೆ ಭದ್ರಕಾಳಿಯೂ ಸಹ ನೂರಾರು ಮಂದಿ ಡಾಕಿನಿಯ ರೊಡನೆ ಸಿಂಹಾರೂಢಳಾಗಿ ಆ ರಣರಂಗವನ್ನು ಪ್ರವೇಶಿಸಿ ಕಡಿದುಬಿದ್ದಿದ್ದ ತಲೆಯೋಡು ಗಳಿಂದ ರಕ್ತವನ್ನು ಮೊಗೆದು ಮೊಗೆದು ಕುಡಿಯತೊಡಗಿದಳು.

೧೫. ಹೀಗೆ ಆ ಗದನ ಅಪ್ರತಿಮವಾದ ಪರಾಕ್ರಮವನ್ನು ತಾಳಲಾರದೆ ಗಂಧರ್ವಸೇನೆಯು ಯುದ್ಧರಂಗದಿಂದ ಹಿಮ್ಮೆಟ್ಟಿ ಓಡಿಹೋಗಲಾರಂಭಿಸಿದುದನ್ನು ಕಂಡು ಒಂದು ಲಕ್ಷ ಆನೆಗಳ ಬಲವಿರುವ ಆ ಗಂಧರ್ವಾಧಿಪತಿಯು ತಾನೇ ಮುಂದೆ ಬಂದು ಹೋರಾಡಲು ನಿಂತನು.

ಗದಂ ತತಾಡ ಗದಯಾ ಪತಂಗೋ ಹೃದಿ ಮೈಥಿಲ ।
ಗದೋಽಪಿ ತಂ ಸ್ವಗದಯಾ ಪತಂಗಂ ಹೃದಿ ಚೌಜಸಾ ॥ ೧೬ ॥

ತಯೋಶ್ಚ ಗದಯಾ ಯುದ್ಧಂ ಬಭೂವ ಘಟಿಕಾದ್ವಯಂ ।
ವಿಸ್ಫುಲಿಂಗಾನ್ ಕ್ಷರಂತ್ಯೌ ದ್ವೇ ಗದೇ ಚೂರ್ಣೀಬಭೂವತುಃ ॥ ೧೭ ॥

ಲಕ್ಷಭಾರಮಯೀಂ ಗುರ್ವೀಂ ಗದಾಮಾದಾಯ ಸತ್ವರಂ ।
ಗದಂ ತತಾಡ ಶಿರಸಿ ಪತಂಗೋ ರಣದುರ್ಮದಃ ॥ ೧೮ ॥

ಗದಾಪ್ರಹಾರೇಣ ಗದಃ ಕ್ಷಣಂ ಮೂರ್ಛಾಮವಾಪ ಹ ।
ಏವಂ ಕೃತೇ ಘೋರಮೃಧೇ ಪತಂಗೇನ ಮಹಾತ್ಮನಾ ॥ ೧೯ ॥

---

೧೬. ಓ ಮಿಥಿಲೇಶ್ವರ! ಕೂಡಲೇ ಆ ಗಂಧರ್ವರಾಜನು ತನ್ನ ಗದೆಯನ್ನು ತೆಗೆದುಕೊಂಡು ಆ ಗದನ ಎದೆಯ ಮೇಲೆ ಬಲವಾಗಿ ಅಪ್ಪಳಿಸಿದನು. ಆಗ ಅದಕ್ಕೆ ಪ್ರತಿಯಾಗಿ ಆ ಗದನೂ ಕೂಡ ಜೋರಾಗಿ ತನ್ನ ಗದೆಯಿಂದ ಅವನ ಎದೆಯ ಮೇಲೆ ಬೀಸಿ ಹೊಡೆದನು.

೧೭. ಈ ರೀತಿಯಾಗಿ ಆ ವೀರರಿಬ್ಬರಿಗೂ ಎರಡು ಗಳಿಗೆಗಳ ಕಾಲ ಭಾರಿಯಾದ ಗದಾಯುದ್ಧವು ಜರುಗಿತು. ಆ ಯುದ್ಧದ ರಭಸದಿಂದ ಆ ಗದೆಗಳೆರಡೂ ಕಿಡಿಗಳನ್ನು ಕಾರುತ್ತಾ ಪುಡಿಪುಡಿಯಾಗಿ ನೆಲದ ಮೇಲೆ ಬಿದ್ದುಬಿಟ್ಟವು.

೧೮. ಅನಂತರ ಆ ಕಡುಗಲಿಯಾದ ಪತಂಗನು ಸರ್‍ರನೆ ಒಂದು ಲಕ್ಷಭಾರ ತೂಗುವಂತಹ ತನ್ನ ಗದೆಯೊಂದನ್ನು ತೆಗೆದುಕೊಂಡು ಗದನ ತಲೆಯ ಮೇಲೆ ಜೋರಾಗಿ ಪ್ರಹರಿಸಿದನು.

೧೯. ಆ ಏಟಿನಿಂದ ಗದನು ಒಂದು ಕ್ಷಣಕಾಲ ಮೂರ್ಛಿತನಾಗಿ ಬಿದ್ದುಬಿಟ್ಟನು. ಈ ರೀತಿಯಾಗಿ ಆ ಮಹಾಪುರುಷನಾದ ಪತಂಗನು ಎಲ್ಲರಿಗೂ ಹೆದರಿಕೆಯಾಗುವಂತೆ ಜೋರಾಗಿ ಹೋರಾಡಿದನು.

ತದೈವ ದ್ವಾರಕಾಪುರ್ಯಾಸ್ತೇಜಃ ಸಂಘಟ್ಟಮಾಗತಂ ।
ದದೃಶುರ್ಯಾದವಾಃ ಸರ್ವೇ ಕೋಟಿಮಾರ್ತಂಡಸನ್ನಿಭಂ　　　॥ ೨೦ ॥

ತಸ್ಮಿಂಸ್ತೇಜಸಿ ಗೌರಾಂಗೋ ಬಲದೇವೋ ಮಹಾಬಲಃ ।
ಆವಿರ್ಬಭೂವ ಸಹಸಾ ಭಗವಾನ್ಭಕ್ತವತ್ಸಲಃ　　　॥ ೨೧ ॥

ಗಂಧರ್ವಾಣಾಂ ಬಲಂ ಸರ್ವಂ ಸಮಾಕೃಷ್ಯ ಹಲೇನ ವೈ ।
ತತಾಡ ಮುಸಲಂ ಕ್ರುದ್ಧೋ ಬಲೋ ನೀಲಾಂಬರೋ ಬಲೀ　　　॥ ೨೨ ॥

ರಥಾನ್ಗಜಾಂಸ್ತುರಂಗಾಂಶ್ಚ ವೀರಾಃ ಶಸ್ತ್ರಭೃತಾಂ ವರಾಃ ।
ನಿಪೇತುರ್ಯುಗಪತ್ಸರ್ವೇ ಚೂರ್ಣಿತಾಶ್ಚೋಪಲಾ ಇವ　　　॥ ೨೩ ॥

---

೨೦. ದ್ವಾರಕಾನಗರಿಯಿಂದ ಭಾರಿಯಾದ ತೇಜಸ್ಸೊಂದು ಕೋಟಿಸೂರ್ಯನಂತೆ ಸರಿಸಮಾನನಾಗ ಜ್ವಲಿಸುತ್ತಾ ಯಾದವರೆಲ್ಲರಿಗೂ ಕಾಣುವಂತೆ ಆ ಯುದ್ಧರಂಗವನ್ನು ಪ್ರವೇಶಿಸಿತು.

೨೧. ಆ ತೇಜೋರಾಶಿಯ ಮಧ್ಯದಿಂದ ಶುಭ್ರವಾದ ಶರೀರದಿಂದ ಶೋಭಿಸುತ್ತಿರುವ ಮಹಾಬಲಶಾಲಿಯಾದ ಬಲದೇವನು ತಟ್ಟನೆ ಆವಿರ್ಭವಿಸಿದನು.

೨೨. ಕೂಡಲೇ ಆ ಬಲಭದ್ರನು. ಮಿತಿಮೀರಿದ ಕೋಪವನ್ನು ತಾಳಿ ತನ್ನ ನೇಗಿಲಿನಿಂದ ಗಂಧರ್ವಸೇನೆಯುಲ್ಲವನ್ನೂ ಸೆಳೆದುಕೊಂಡು ಮುಸಲಾಯುಧದಿಂದ ಸದೆಬಡಿಯುತ್ತಾ ಬಂದನು.

೨೩. ಆ ಮುಸಲಪ್ರಹಾರದಿಂದ ಆನೆಗಳೂ. ಕುದುರೆಗಳೂ, ರಥಗಳೂ, ಶಸ್ತ್ರಧಾರಿಗಳೆಲ್ಲರೂ ಅಗ್ರೇಸರರೆನಿಸಿದ ವೀರಾಧಿವೀರರೂ ಒಂದೇ ಏಟಿಗೆ ನುಚ್ಚುನೂರಾಗಿ ಕಲ್ಲುಗಳಂತೆ ನೆಲದ ಮೇಲೆ ಉರುಳಿಬಿದ್ದರು.

ಪತಂಗೋ ವಿರಥಸ್ತಸ್ಮಾದ್ಭೀತಭೀತಃ ಪುರೀಂ ಯಯೌ ।
ಪುನರ್ಯೋದ್ಧುಂ ಯಾದವೈಶ್ಚ ಸೇನಾವ್ಯೂಹಂ ಚಕಾರ ಹ ॥ ೨೪ ॥

ಶತಯೋಜನವಿಸ್ತೀರ್ಣಾಂ ಗಂಧರ್ವಾಣಾಂ ಮಹಾಪುರೀಂ ।
ವಸಂತಮಾಲತೀಂ ಸರ್ವಾಮುದ್ವಿದಾರ್ಯ ಹಲೇನ ವೈ ॥ ೨೫ ॥

ವಿಚಕರ್ಷ ಬಲಃ ಕ್ರುದ್ಧೋ ನದೇ ಕಾಮದುಘೇ ನೃಪ ।
ಹಾಹಾಕಾರಸ್ತದೈವಾಸೀನ್ನಗರ್ಯಾಂ ಪತಿತೈರ್ಗೃಹೈಃ ॥ ೨೬ ॥

ತಿರ್ಯಕ್ಪ್ರೋತಮಿವಾಘೂರ್ಣಾಂ ನಗರೀಂ ವೀಕ್ಷ್ಯ ಸತ್ವರಂ ।
ಪತಂಗಃ ಸರ್ವಗಂಧರ್ವೈರ್ಹರ್ಷಿತಃ ಸನ್ಕೃತಾಂಜಲಿಃ ॥ ೨೭ ॥

---

೨೪. ಗಂಧರ್ವಾಧಿಪತಿಯಾದ ಆ ಪತಂಗನೂ ಸಹ ತನ್ನ ರಥವು ಮುರಿದು ಹೋಗಲು ಆ ಬಲರಾಮನಿಗೆ ಹೆದರುತ್ತಾ ಯಾರಿಗೂ ತಿಳಿಯದಂತೆ ತನ್ನ ಊರನ್ನು ಸೇರಿ ಆ ಯಾದವರೊಡನೆ ಮತ್ತೆ ಹೋರಾಡಬೇಕೆಂದು ತನ್ನ ಸೇನೆಯನ್ನು ವ್ಯೂಹಾಕಾರವಾಗಿ ಸಜ್ಜುಗೊಳಿಸುತ್ತಿದ್ದನು.

೨೫–೨೬. ಅಷ್ಟರಲ್ಲಿ ಕುಪಿತನಾದ ಆ ಬಲದೇವನು ನೂರು ಯೋಜನಗಳಷ್ಟು ವಿಸ್ತಾರವುಳ್ಳ ವಸಂತಮಾಲತಿಯೆಂಬ ಆ ಗಂಧರ್ವರ ಮಹಾನಗರಿಯನ್ನು ತನ್ನ ನೇಗಲಿನಿಂದ ಬಲವಾಗಿ ಊರಿ ಕಾಮದುಘವೆಂಬ ಆ ನದದ ಒಳಕ್ಕೆ ಸೆಳೆದುಬಿಟ್ಟನು. ಆಗ ಆ ನಗರದಲ್ಲಿದ್ದ ಮನೆಗಳೆಲ್ಲವೂ ಬಿದ್ದುಹೋಗಿ ಎಲ್ಲೆಲ್ಲಿಯೂ ಹಾಹಾಕಾರವುಂಟಾಯಿತು.

೨೭. ಆಗ ಗಂಧರ್ವರಾಜನಾದ ಪತಂಗನು ತನ್ನ ನಗರಿಯು ಇದ್ದಕ್ಕಿದ್ದಂತೆ ಹೊಳೆಗೆ ಅಡ್ಡಲಾಗಿ ಹಾಯುತ್ತಿರುವ ಹರಿಗೋಲು ಸುಳಿಗೆ ಸಿಕ್ಕಿದಾಗ ಸರ್ರನೆ ಸುತ್ತುವಂತೆ ಸುತ್ತತೊಡಗಿದುದನ್ನು ಕಂಡು ತನ್ನ ಯುದ್ಧೋದ್ಯಮವನ್ನು ನಿಲ್ಲಿಸಿ ಆ ಗಂಧರ್ವರೆಲ್ಲರೊಡನೆ ಮಹಾಸಂತೋಷದಿಂದ ಕೈಗಳನ್ನು ಮುಗಿದುಕೊಂಡು,

ಖಚಿದ್ಧೇಮಸುವರ್ಣಾನಾಂ ಮುಕ್ತಾತೋರಣಶಾಲಿನಾಂ ।
ದಶಯೋಜನವಿಸ್ತೀರ್ಣೀಕೃತಾನಾಂ ವಿಶ್ವಕರ್ಮಣಾ ॥ ೨೮ ॥

ಕಾಮಗಾನಾಂ ಪತಾಕಾಭಿರ್ಯುತಾನಾಂ ಕುಂಭಕೋಟಿಭಿಃ ।
ಸಹಸ್ರಾರ್ಕಪ್ರಕಾಶಾನಾಂ ವಿಮಾನಾನಾಂ ದ್ವಿಲಕ್ಷಕಂ ॥ ೨೯ ॥

ಚತುರ್ಲಕ್ಷಂ ಗವಾಂ ಚೈವ ತುರಂಗಾಣಾಂ ದಶಾರ್ಬುದಂ ।
ಏಲಾಲವಂಗಕಾಶ್ಮೀರಜಾತೀಫಲಫಲೈಃ ಸಹ ॥ ೩೦ ॥

ಸುಧಾಫಲಾನಾಂ ದಿವ್ಯಾನಾಂ ಕೋಟಿಶೋ ಭಾಜನಾನಿ ಚ ।
ನೀತ್ವಾ ಬಲಿಂ ಸಮಾದಾಯ ದತ್ವಾ ನತ್ವಾ ಪ್ರಧರ್ಷಿತಃ ॥ ೩೧ ॥

ಕೃತಾಂಜಲಿಃ ಪ್ರಾಹ ಬಲಂ ಬಲಭದ್ರಪ್ರಸಾದವಿತ್ ।

॥ ಪತಂಗ ಉವಾಚ ॥

ರಾಮ ರಾಮ ಮಹಾವೀರ್ಯ ನ ಜಾನೇ ತವ ವಿಕ್ರಮಂ ।
ಯಸ್ಯೈಕಮೂರ್ಧ್ನಿ ತಿಲಕಂ ದೃಶ್ಯತೇ ಭೂಮಿಮಂಡಲಂ । ॥ ೩೨ ॥

೨೮–೨೯. ಚಿನ್ನದಂತೆ ಥಳಥಳಿಸುತ್ತಿರುವ ವರ್ಣದಿಂದಲೂ, ಮುತ್ತಿನ ಜಾಲರಿಗಳಿಂದಲೂ, ಪತಾಕೆಗಳಿಂದಲೂ. ಒಂದುಕೋಟಿ ಕಲಶಗಳಿಂದಲೂ ಅಲಂಕೃತವಾಗಿ ಹತ್ತು ಯೋಜನಗಳಷ್ಟು ವಿಸ್ತಾರವಾಗಿರುವ ಇಚ್ಛಾಗಮನವುಳ್ಳ ವಿಶ್ವಕರ್ಮನಿರ್ಮಿತವಾದ ಸಾವಿರ ಸೂರ್ಯರಿಗೆ ಸರಿಸಮಾನವಾದ ತೇಜಸ್ಸಿನಿಂದ ಬೆಳಗುತ್ತಿರುವ ಎರಡು ಲಕ್ಷ ವಿಮಾನಗಳನ್ನೂ,

೩೦–೩೧. ನಾಲ್ಕು ಲಕ್ಷ ಗೋವುಗಳನ್ನೂ. ಹತ್ತು ಅರ್ಬುದ ಕುದುರೆಗಳನ್ನೂ, ಏಲಕ್ಕಿ, ಲವಂಗ, ಜಾಯಿಕಾಯಿ, ಕೇಸರಗಳಿಂದಲೂ ಅಮೃತದಂತೆ ಮಾಧುರ್ಯವುಳ್ಳ ಹಣ್ಣುಗಳಿಂದಲೂ ತುಂಬಿರುವ ಕೋಟಿಗಟ್ಟಲೆ ಹರಿವಾಣಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ಬಂದು ಆ ಬಲಭದ್ರನಿಗೆ ಒಪ್ಪಿಸಿ ನಮಸ್ಕಾರಮಾಡಿದನು.

೩೨. ಅನಂತರ ಆ ಪತಂಗನು ಕೈಗಳನ್ನು ಮುಗಿದುಕೊಂಡು ಆ ಬಲಭದ್ರನ ಅನುಗ್ರಹವನ್ನು ಸಂಪಾದಿಸಬೇಕೆಂಬುದಾಗಿ ಆತನನ್ನು ಕುರಿತು “ಓ ರಾಮ! ಓ ಮಹಾಬಲ ಯಾವನ ತಲೆಯ ಮೇಲೆ ನಿಂತಿರುವ ಈ ಸಮಸ್ತವಾದ ಭೂಮಂಡಲವು ಆ ತಲೆಯ ಒಂದು ಮೂಲೆಯಲ್ಲಿ ಎಳ್ಳಿನ ಕಾಳಿನಂತೆ ಅತ್ಯಲ್ಪವಾಗಿ ಕಾಣಿಸುವುದೋ ಅಂತಹ ನಿನ್ನ ಪರಾಕ್ರಮವನ್ನು ನಾನರಿಯೆನು.

ದೇವಾದಿದೇವ ಭಗವನ್ಕಾಮಪಾಲ ನಮೋಽಸ್ತು ತೇ ।
ನಮೋಽನಂತಾಯ ಶೇಷಾಯ ಸಾಕ್ಷಾದ್ರಾಮಾಯ ತೇ ನಮಃ ॥ ೩೩ ॥

ಜಯ ಜಯಾಚ್ಯುತ ದೇವ ಪರಾತ್ಪರ
ಸ್ವಯಮನಂತ ದಿಗಂತಗತಶ್ರುತೇ ।
ಸುರಮುನೀಂದ್ರಫಣೀಂದ್ರವರಾಯ ತೇ
ಮುಸಲಿನೇ ಬಲಿನೇ ಹಲಿನೇ ನಮಃ ॥ ೩೪ ॥

॥ ಶ್ರೀ ನಾರದ ಉವಾಚ ॥

ಏವಂ ಸ್ತುತಃ ಪತಂಗೇನ ಬಲಭದ್ರೋ ಮಹಾಬಲಃ ।
ಪ್ರಸನ್ನಚೇತಾ ಗಂಧರ್ವಂ ಮಾ ಭೈಷ್ಟೇತ್ಯಭಯಂ ದದೌ ॥ ೩೫ ॥

ಸ್ಥಾಪಯಿತ್ವಾ ಬಲೇ ಕಾರ್ಷ್ಣಿಂ ಪ್ರಣತಂ ಯಾದವೇಶ್ವರಃ ।
ಯಾದವೈಃ ಪ್ರಸ್ತುತಃ ಶೀಘ್ರಂ ಪುರೀಂ ದ್ವಾರಾವತೀಂ ಯಯೌ ॥ ೩೬ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ವಸಂತಮಾಲತೀ ಕರ್ಷಣಂ ನಾಮ ಷಟ್ಚತ್ವಾರಿಂಶೋಽಧ್ಯಾಯಃ

---

೩೩. ಓ ದೇವಾದಿದೇವ! ಕಾಮಪಾಲ! ನಿನಗೆ ನಮಸ್ಕಾರವು. ಅನಂತನೆಂಬುದಾಗಿಯೂ, ಶೇಷನೆಂಬುದಾಗಿಯೂ ಕರೆಯಲ್ಪಡುತ್ತಾ ನಮ್ಮ ಕಣ್ಣುಗಳಿಗೆ ಬಲರಾಮನ ರೂಪದಲ್ಲಿ ತೋರುತ್ತಿರುವ ನಿನಗೆ ನಮಸ್ಕಾರವು.

೩೪. ಓ ನಾಶರಹಿತ! ಓ ಪರಾತ್ಪರ! ದಿಕ್ಕುದಿಕ್ಕುಗಳಲ್ಲೂ ಹಬ್ಬಿರುವ ಸುಯಶಸ್ಸಿನಿಂದ ಮೆರೆಯುತ್ತಿರುವ ಓ ಅನಂತ! ದೇವತೆಗಳಿಗೂ, ಮಹರ್ಷಿಗಳಿಗೂ ಸರ್ವಶ್ರೇಷ್ಠರಿಗೂ ಶ್ರೇಷ್ಠನೆನಿಸಿರುವ ಹಲಮುಸಲಧಾರಿಯಾದ ನಿನಗೆ ನಮಸ್ಕಾರವನ್ನು ಮಾಡುವೆನು" ಎಂದು ಸ್ತುತಿಸಿದನು.

೩೫. ಈ ರೀತಿಯಾಗಿ ಆ ಗಂಧರ್ವರಾಜನಾದ ಪತಂಗನು ಸ್ತುತಿಸಲು ಆ ಬಲಭದ್ರನು ಹೆದರಬೇಡವೆಂದು ಹೇಳಿ ಆತನಿಗೆ ಅಭಯವನ್ನಿತ್ತನು.

೩೬. ಅನಂತರ ಆ ಯಾದವೇಶ್ವರನು ತನಗೆ ನಮಸ್ಕಾರಮಾಡಿದ ಕೃಷ್ಣಪುತ್ರನಾದ ಪ್ರದ್ಯುಮ್ನನನ್ನು ಎಂದಿನಂತೆ ಆ ಸೇನೆಯಲ್ಲಿ ಅಧಿಪತಿಯನ್ನಾಗಿ ಮಾಡಿ ಅವರೆಲ್ಲರಿಂದಲೂ ಸ್ತುತಿಸಲ್ಪಡುತ್ತಾ ಕ್ಷಣಮಾತ್ರದಲ್ಲಿ ದ್ವಾರಕಾವತಿಯನ್ನು ಸೇರಿಬಿಟ್ಟನು.

ಇಲ್ಲಿಗೆ ಶ್ರೀಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವ ಸಂವಾದದಲ್ಲಿ ವಸಂತಮಾಲತೀಕರ್ಷಣವೆಂಬ
ನಲವತ್ತಾರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಸಪ್ತಚತ್ವಾರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಪ್ರದ್ಯುಮ್ನೋಽಥ ಮಹಾವೀರೋ ನಾದಯನ್ಜಯದುಂದುಭಿಂ ।
ಯದುಭಿಃ ಸೈನಿಕೈಃ ಸಾರ್ಧಂ ಮಧುಧಾರಾತಟಂ ಯಯೌ ॥ ೧ ॥

ಸುವರ್ಣಾದ್ರಿತಟೇಭೂತೇ ವನೇ ವೈಶ್ರವಸೇ ಶುಭೇ ।
ಸುವರ್ಣವರ್ಣಹಂಸಾಢ್ಯೇ ಕಾಂಚನೀಲತಿಕಾವೃತೇ ॥ ೨ ॥

ನಲವತ್ತೇಳನೆಯ ಅಧ್ಯಾಯವು

೧. ಬಹುಲಾಶ್ವರಾಜ! ಆಲಿಸು. ಅನಂತರ ಮಹಾವೀರ್ಯಶಾಲಿಯಾದ ಆ ಪ್ರದ್ಯುಮ್ನನು ಜಯಸೂಚಕವಾದ ನಗಾರಿಗಳನ್ನು ಮೊಳಗಿಸುತ್ತಾ ತನ್ನ ಯದು ಸೇನೆಯೊಡನೆ ಮಧುಧಾರಾ ಎಂಬ ನದಿಯ ದಡಕ್ಕೆ ಬಂದನು.

೨. ಓ ಮೈಥಿಲ! ಆ ನದಿಯ ಪಕ್ಕದಲ್ಲಿಯೇ ಮೇರುಪರ್ವತದ ತಪ್ಪಲಿಗೆ ಸೇರಿದಂತೆ ಶುಭಕರವಾದ ವೈಶ್ರವಸವೆಂಬ ವನವಿರುವುದು. ಆ ವನದಲ್ಲಿ ಚಿನ್ನದಂತೆ ಬಣ್ಣವಿರುವ ಹಂಸಗಳೂ ಚಿನ್ನದ ಬಳ್ಳಿಗಳೂ ಹೇರಳವಾಗಿರುವುವು.

ಹೇಮಾವತೀಷು ದ್ರೋಣೀಷು ದೇವದುರ್ಗಾಸು ಮೈಥಿಲ ।
ದಾನವಾನಾಮುರವ್ಯಾಸು ಗಂಗಾವೇತ್ರವತೀಷು ಚ ॥ ೩ ।

ದಾನವೇಭ್ಯಃ ಪ್ರಭೀತಾನಾಂ ಕ್ವಚಿತ್ಸ್ವರ್ಗಾತ್ಪಲಾಯಿನಾಂ ।
ಅಷ್ಟಾನಾಂ ಲೋಕಪಾಲಾನಾಂ ನಿಧಯೋ ಯತ್ರ ಸಂತಿ ಹಿ ॥ ೪ ।

ತತ್ರ ಶಕ್ರಸಖೋ ದೇವ ಆಧಿಪತ್ಯಾಭಿರಕ್ಷಕಃ ।
ಶ್ರುತ್ವಾಗತಂ ಚ ಪ್ರದ್ಯುಮ್ನಂ ಯುದ್ಧಂ ಕರ್ತುಂ ಮನೋ ದಧೇ ॥ ೫ ॥

ಪ್ರದ್ಯುಮ್ನಪ್ರೇಷಿತಃ ಸಾಕ್ಷಾದುದ್ಧವೋ ಬುದ್ಧಿಸತ್ತಮಃ ।
ಪಪ್ರಚ್ಛ ದೃಷ್ಟಮಾರ್ಗೈಶ್ಚ ಜನೈಸ್ತಸ್ಯ ಪುರಂ ಯಯೌ ॥ ೬ ॥

---

೩. ಮತ್ತು ಆ ವನಕ್ಕೆ ಸೇರಿದಂತೆ ಸುವರ್ಣನಿರ್ಮಿತವಾದ ದ್ರೋಣಿ (ದೋಣಿ) ಗಳೂ, ದೇವತೆಗಳಿಗೆ (ಶತ್ರುಬಾಧೆಯೊದಗದಂತೆ) ಸುಖವಾದ ರಕ್ಷಣೆಯನ್ನೀಯುವ, ದಾನವರಿಗೆ ಪ್ರವೇಶಿಸಲು ಸಾಧ್ಯವಿಲ್ಲದ ದುರ್ಗಪ್ರದೇಶಗಳೂ, ಗಂಗಾ, ವೇತ್ರವತೀ ಎಂಬ ನದಿಗಳೂ ಕಂಗೊಳಿಸುತ್ತಿರುವುವು.

೪. ಇವೆಲ್ಲವುಗಳಿಂದಲೂ ಪರಿವೃತವಾದ ಆ ವನದಲ್ಲಿ ದಾನವರಿಗೆ ಹೆದರಿ ಕೊಂಡು ಸ್ವರ್ಗಲೋಕವನ್ನು ಬಿಟ್ಟು ಓಡಿಹೋದ ಎಂಟು ಮಂದಿ ಲೋಕಪಾಲಕರಿಗೆ ಸಂಬಂಧಪಟ್ಟ ನಿಧಿಗಳು ಅಡಗಿರುವುವು.

೫. ಆ ರಾಜ್ಯಕ್ಕೆ ಅಧಿಪತಿಯಾದ ಶಕ್ರಸಖನೆಂಬುವನು ಅಲ್ಲಿ ಆಳುತ್ತಿರುವನು. ಆತನು ಪ್ರದ್ಯುಮ್ನನು ದಂಡೆತ್ತಿ ಬರುತ್ತಿರುವ ಸಂಗತಿಯನ್ನು ಕೇಳಿ ಅವನೊಡನೆ ಯುದ್ಧಮಾಡಲು ನಿರ್ಧರಿಸಿದನು.

೬. ಆ ಸಮಯದಲ್ಲಿ ಪ್ರದ್ಯುಮ್ನನಿಂದ ಪ್ರೇರಿತನಾದ ಮಹಾಪ್ರಾಜ್ಞನಾದ ಉದ್ಧವನು ದಾರಿಯನ್ನು ತಿಳಿದಿರತಕ್ಕ ಜನರನ್ನು ಅಲ್ಲಲ್ಲಿ ವಿಚಾರಿಸುತ್ತಾ ಆ ಶಕ್ರಸಖನ ನಗರಕ್ಕೆ ಬಂದನು.

ನತ್ವಾ ದೇವಂ ಶಕ್ರಸಖಂ ಸಭಾಯಾಮುದ್ಧವಃ ಪ್ರಭುಃ ।
ಪ್ರದ್ಯುಮ್ನಕಥಿತಂ ಪ್ರಾಹ ವಿಸ್ತರಾನ್ಮಂತ್ರಿಣಾಂ ವರಃ ॥ ೭ ॥

॥ ಉದ್ಧವ ಉವಾಚ ॥

ಉಗ್ರಸೇನೋ ಯಾದವೇಂದ್ರೋ ದ್ವಾರಕೇಶೋ ನೃಪೇಶ್ವರಃ ।
ಜಂಬೂದ್ವೀಪನೃಪಾನ್ಜಿತ್ವಾ ರಾಜಸೂಯಂ ಕರಿಷ್ಯತಿ ॥ ೮ ॥

ತೇನ ಪ್ರಣೋದಿತೋ ಜೇತುಂ ರುಕ್ಮಿಣೀನಂದನೋ ಬಲೀ ।
ಜಿತ್ವಾ ಸ ಭಾರತಾದೀನಿ ಖಂಡಾನಿ ಸ್ವಸ್ಯ ತೇಜಸಾ ॥ ೯ ॥

ಅದ್ಯೈವೇಲಾವೃತಂ ಪ್ರಾಪ್ತೋ ಜೇತುಂ ಕಾರ್ಷ್ಣಿರ್ಮಹಾಬಲಃ ।
ತಸ್ಮೈ ಯಚ್ಛ ಬಲಿಂ ಶೀಘ್ರಂ ಕುಲಕೌಶಲಹೇತವೇ ॥ ೧೦ ॥

---

೭. ಅಲ್ಲಿ ಸಭೆಯ ನಡುವೆ ಮಂಡಿಸಿದ್ದ ಪ್ರಭುವಾದ ಆ ಶಕ್ರಸಖನನ್ನು ಕಂಡು ನಮಸ್ಕರಿಸಿ, ಮಂತ್ರಿಶ್ರೇಷ್ಠನಾದ ಉದ್ಧವನು ತನ್ನ ಮುಖಾಂತರ ಪ್ರದ್ಯುಮ್ನನು ಹೇಳಿ ಕಳುಹಿಸಿದ್ದ ಮಾತನ್ನು ಆತನಿಗೆ ವಿಸ್ತಾರವಾಗಿ ವಿವರಿಸಿದನು.

೮. “ದ್ವಾರಕಾಧೀಶನೂ, ಯಾದವಪ್ರಭುವೂ ಆದ ಉಗ್ರಸೇನರಾಜೇಂದ್ರನು ಜಂಬೂದ್ವೀಪದಲ್ಲಿರುವ ರಾಜರೆಲ್ಲರನ್ನೂ ಗೆದ್ದು ರಾಜಸೂಯ ಯಾಗವನ್ನು ಮಾಡಬೇಕೆಂದಿರುವನು.

೯–೧೦. ಆತನ ಅಪ್ಪಣೆಯಂತೆ ಮಹಾಬಲಶಾಲಿಯಾದ ಪ್ರದ್ಯುಮ್ನನು ತನ್ನ ಪರಾಕ್ರಮದಿಂದ ಭಾರತ, ಕಿಂಪುರುಷ ಮೊದಲಾದ ಖಂಡಗಳನ್ನೆಲ್ಲ ಗೆದ್ದು ಈಗ ತಾನೇ ಇಲಾವೃತಖಂಡಕ್ಕೆ ಬಂದಿರುವನು. ನಿನ್ನ ಸಂತತಿಯು ಕ್ಷೇಮದಿಂದ ಇರಬೇಕೆಂದು ನೀನು ಬಯಸುವ ಪಕ್ಷಕ್ಕೆ ಆ ಪ್ರದ್ಯುಮ್ನನಿಗೆ ಬೇಗನೆ ಕಪ್ಪಕಾಣಿಕೆಗಳನ್ನೊಪ್ಪಿಸಿಬಿಡು.

ನ ಚ ಯುದ್ಧಂ ಹಿ ಭವತಾ ರಾಜನ್ಸರ್ವವಿದಾಂ ವರ ।

॥ ಶಕ್ರಸಖ ಉವಾಚ ॥

ಶೃಣು ದೂತ ಸದಾ ದೇವೈಃ ಪೂಜಿತೋಽಹಂ ನರೈಃ ಕಿಮು ॥
ಸಿದ್ಧೋಽಹಂ ವೈ ಮಹಾವೀರೋ ನಾಗಲಕ್ಷಸಮೋ ಬಲೇ ॥ ೧೧ ॥

ಅಷ್ಟಾನಾಂ ಲೋಕಪಾಲಾನಾಮಾಧಿಪತ್ಯಾಭಿರಕ್ಷಕಃ ।
ಕುಬೇರ ಇವ ಕೋಶಾಢ್ಯಃ ಪುರಂದರ ಇವೋದ್ಭಟಃ ॥ ೧೨ ॥

ಉಗ್ರಸೇನೇನ ದಾತವ್ಯಂ ಮಹ್ಯಂ ಚೋಪಾಯನಂ ಪರಂ ।
ಪುರಾ ಕಸ್ಮೈ ನ ದಾಸ್ಯಾಮಿ ಯದುರಾಜಾಯ ಭೂಭೃತೇ ॥ ೧೩ ॥

---

೧೧. ರಾಜೇಂದ್ರ! ನೀನೆಲ್ಲ ಸಂಗತಿಯನ್ನು ಬಲ್ಲವನಾದುದರಿಂದ ಈ ಯುದ್ಧ ಕಾರ್ಯಕ್ಕೆ ಕೈಹಾಕದೆಯೇ ಇರುವುದೊಳ್ಳೆಯದು” ಎಂದನು. ಓ ಮಿಥಿಲೇಶ್ವರ! ಉದ್ಧವನಾಡಿದ ಆ ಮಾತನ್ನು ಕೇಳಿ. ಶಕ್ರಸಖನು ಆ ಉದ್ಧವನನ್ನು ಕುರಿತು “ಎಲೆ ದೂತ! ನನ್ನ ಮಾತನ್ನು ಕೇಳು. ನನ್ನನ್ನು ದೇವತೆಗಳೂ ಸಹ ಸರ್ವಕಾಲದಲ್ಲಿಯೂ ಪೂಜಿಸುವರು. ಹೀಗಿರುವಾಗ ಮನುಷ್ಯರು ನನ್ನನ್ನು ಗೌರವಿಸುವರೆಂದು ಪ್ರತ್ಯೇಕವಾಗಿ ಹೇಳಬೇಕಾಗಿರುವುದೇನು? ನಾನು ಬಲದಲ್ಲಿ ಒಂದುಲಕ್ಷ ಮದ್ದಾನೆಗಳಿಗೆ ಸರಿಸಮನಾಗಿರುವೆನು. ಆದುದರಿಂದ ಯುದ್ಧಕ್ಕೆ ಸಿದ್ಧನಾಗಿಯೇ ನಿಂತಿರುವೆನು.

೧೨. ಈ ಎಂಟು ಮಂದಿ ಲೋಕಪಾಲಕರ ಆಧಿಪತ್ಯವು ಉಳಿದಿರುವುದೂ ನನ್ನಿಂದಲೇ ಎಂದು ತಿಳಿ. ನನ್ನ ಕೋಶಬಲವು ಕುಬೇರನಿಗೆ ಸರಿಸಮನಾಗಿರುವುದು ಪರಾಕ್ರಮವೂ ಸಹ ಇಂದ್ರನಿಗೆ ಸರಿಸಾಟಿಯಾಗಿರುವುದು.

೧೩. ಆದುದರಿಂದ, ನನಗೆ ಯದುರಾಜನಾದ ಉಗ್ರಸೇನನೇ ಕಪ್ಪಕಾಣಿಕೆಗಳನ್ನೊಪ್ಪಿಸಬೇಕು. ಹಿಂದೆ ಯಾವಾಗಲೂ ಸಹ ನಾನು ಯಾವ ಯಾದವರಾಜನಿಗೂ ಕಪ್ಪವನ್ನು ಒಪ್ಪಿಸಿಲ್ಲ” ಎಂದು ನುಡಿದನು.

॥ ಉದ್ಧವ ಉವಾಚ ॥

ಯಥಾ ತಿರಸ್ಕೃತಾಂ ಪ್ರಾಪ್ತಃ ಕುಬೇರೋ ಯದುತೇಜಸಾ ।
ಯಥಾ ಶೃಂಗಾರತಿಲಕಶ್ಚೈತ್ರದೇಶಾಧಿಪೋ ಬಲೀ ॥ ೧೪ ॥

ಶುಭಾಂಗೋ ಹರಿವರ್ಷೇಶ ಉತ್ತರೇಶೋ ಗುಣಾಕರಃ ।
ಯಥಾ ದೈತ್ಯಸಖೋ ರಾಜಾ ಲಂಕೇಶೋ ರಾಕ್ಷಸೇಶ್ವರಃ ॥ ೧೫ ॥

ಸಂವತ್ಸರಃ ಕೇತುಮಾಲಃ ಶಕುನ್ಯಾದ್ಯಾ ಮಹಾಸುರಾಃ ।
ತಥಾಭೂತಸ್ತ್ವಂ ಹಿ ರಾಜನ್ಬಲಿಂ ತಸ್ಮೈ ಪ್ರದಾಸ್ಯಸಿ ॥ ೧೬ ॥

॥ ಶ್ರೀ ನಾರದ ಉವಾಚ ॥

ಇತ್ಯುದ್ಧವವಚಃ ಶ್ರುತ್ವಾ ಕ್ರುದ್ಧಃ ಶಕ್ರಸಖೋ ಬಲೀ ।
ಉದ್ಧವಂ ಪ್ರತ್ಯುವಾಚಾಥ ಶೃಣು ಭಾಗವತೋತ್ತಮ ॥ ೧೭ ॥

೧೪–೧೬. ಆಗ ಉದ್ಧವನು ಆತನನ್ನು ಕುರಿತು “ ಯಾವ ರೀತಿ ಯಾದವರ ಪರಾಕ್ರಮವನ್ನು ತಾಳಲಾರದೆ ಯಕ್ಷಾಧಿಪತಿಯಾದ ಕುಬೇರನೂ, ಚೈತ್ರದೇಶಾಧಿಪತಿಯಾದ ಶೃಂಗಾರತಿಲಕನೆಂಬ ವೀರಾಗ್ರಣಿಯೂ, ಹರಿವರ್ಷದ ಪ್ರಭುವಾದ ಶುಭಾಂಗನೂ, ಉತ್ತರದೇಶದ ಅರಸನಾದ ಗುಣಾಕರನೂ, ದೈತ್ಯರ ಮಿತ್ರನೂ, ಲಂಕಾಧೀಶ್ವರನೂ ಆದ ರಾಕ್ಷಸೇಂದ್ರನಾದ ವಿಭೀಷಣನೂ, ಸಂವತ್ಸರನೂ, ಕೇತುಮಾಲನೂ, ಶಕುನಿಯೇ ಮೊದಲಾದ ಅಸುರಶ್ರೇಷ್ಠರೂ, ಸೋತುಹೋಗಿ ಕಪ್ಪವನ್ನು ಒಪ್ಪಿಸಿದರೋ ಅದೇ ರೀತಿ ನೀನೂ ಸಹ ಸೋಲನ್ನೊಪ್ಪಿಕೊಂಡು ಕಪ್ಪಕಾಣಿಕೆಗಳನ್ನೊಪ್ಪಿಸುವಂತಾಗುವುದು ” ಎಂದನು.

೧೭. ಮಿಥಿಲಾಧೀಶ್ವರ! ಈ ರೀತಿಯಾಗಿ ಉದ್ಧವನು ನುಡಿದ ಮಾತನ್ನು ಕೇಳುತ್ತಲೇ ಆ ಶಕ್ರಸಖನೆಂಬ ರಾಜನು ಕೋಪವನ್ನು ತಾಳಿದನು. ಬಳಿಕ ಆತನನ್ನು ಕುರಿತು “ ಎಲೈ ಭಾಗವತಾಗ್ರಣಿಯೇ! ಕೇಳು

ಯಾವದ್ಬಲಿಂ ಪ್ರದಾಸ್ಯಾಮಿ ತಾವತ್ತ್ವಂ ಸಂಸ್ಥಿತೋ ಭವ ।
ಅನ್ಯಥಾ ತೇ ಗತಿರ್ನಾಸ್ತಿ ಸತ್ಯಂ ಸತ್ಯಂ ಮಹಾಮತೇ ॥ ೧೮ ॥

॥ ಉದ್ಧವ ಉವಾಚ ॥

ವಯಂ ತು ಮಂತ್ರಿಪ್ರವರಾಃ ಪೂರ್ಣಜ್ಞಾನಪ್ರದಾ ವರಾಃ ।
ಮಚ್ಛಿಕ್ಷಣಂ ನ ಮನ್ಯಂತೇ ತೇಷಾಂ ನೋ ಮಂಗಲಂ ಭವೇತ್ ॥ ೧೯ ॥

॥ ಶ್ರೀ ನಾರದ ಉವಾಚ ॥

ಏವಂ ಸ ದೃಷ್ಟರೋಷೇಣ ರೋಧಯಾಮಾಸ ಚೋದ್ಧವಂ ।
ಉದ್ಧವಂ ನಾಗತಂ ರಾಜನ್ಯದೂನಾಮನುಶೋಚತಾಂ ॥ ೨೦ ॥

---

೧೮. ನಾನು ಕಪ್ಪಕಾಣಿಕೆಯನ್ನು ತೆಗೆದುಕೊಂಡು ಹೋಗಿ ಒಪ್ಪಿಸುವವರೆಗೆ ನೀನು ಇಲ್ಲಿಯೇ ಇರಬೇಕು. ಇದನ್ನು ಬಿಟ್ಟು, ನಿನಗೆ ಇನ್ನಾವ ದಾರಿಯೂ ಇಲ್ಲ" ಎಂದನು.

೧೯. ಅದನ್ನು ಕೇಳಿ ಮಹಾಪ್ರಾಜ್ಞನಾದ ಉದ್ಧವನು ಆ ಶಕ್ರಸಖನನ್ನು ಕುರಿತು "ನಾವು ರಾಜರಿಗೆ ಉಪಯುಕ್ತವಾದ ಸಲಹೆಗಳನ್ನು ಕೊಡುವುದರಲ್ಲಿ ಬಹು ಮಟ್ಟಿಗೆ ನಿಷ್ಣಾತರಾದವರು. ನಾವು ಸರಿಯಾದ ರೀತಿಯಲ್ಲಿಯೇ ತಿಳುವಳಿಕೆಯನ್ನು ಕೊಡುವೆವು. ನಮ್ಮ ಹಿತೋಕ್ತಿಯನ್ನು ಯಾರು ಆಲಿಸುವುದಿಲ್ಲವೋ ಅಂಥವರಿಗೆ ಶುಭವು ಎಂದೆಂದಿಗೂ ಉಂಟಾಗಲಾರದು" ಎಂದು ನುಡಿದನು.

೨೦. ಓ ಬಹುಲಾಶ್ವರಾಜೇಂದ್ರ ! ಈ ರೀತಿಯಾಗಿ ಆ ಉದ್ಧವನು ನಿರ್ಧಾಕ್ಷಿಣ್ಯವಾಗಿ ಇದ್ದುದಿದ್ದಂತೆ ಪ್ರತ್ಯಕ್ಷ ವಿರುದ್ಧವಾದ ರೀತಿಯಲ್ಲಿ ಬಿರುಸಾಗಿ ನುಡಿಯಲು ಕುಪಿತನಾದ ಆ ರಾಜನು ಅವನನ್ನು ಹೊರಗಡೆಗೆ ಹೋಗಲಾರದಂತೆ ಸೆರೆಯಿಡಿಸಿದನು. ಇತ್ತಲಾಗಿ ಉದ್ಧವನು ಹಿಂದಿರುಗಿ ಬರದಿರುವುದನ್ನು ಕಂಡು ಯಾದವರೆಲ್ಲರೂ ಬಹುವಾಗಿ ಚಿಂತಾಕ್ರಾಂತರಾದರು.

ದಿನಾನಿ ಕತಿಚಿತ್ತತ್ರ ವ್ಯತೀಯುಸ್ತಮಪಶ್ಯತಾಂ ।
ಮನ್ಮುಖಾತ್ತದುಪಾಕರ್ಣ್ಯ ಪ್ರದ್ಯುಮ್ನೋ ಭಗವಾನ್ಹರಿಃ ॥ ೨೧ ॥

ಜೇತುಂ ಶಕ್ರಸಖಂ ಪ್ರಾಗಾತ್ತ್ರಿಪುರಂ ತ್ರ್ಯಂಬಕೋ ಯಥಾ ।
ಯದುಭಿರ್ಭ್ರಾತೃಭಿಃ ಸಾರ್ಧಂ ಸಸೈನ್ಯಪರಿವಾರಿತಃ ॥ ೨೨ ॥

ಸುವರ್ಣಾದ್ರಿಗುಹಾದ್ವಾರಾತ್ಸಂಪ್ರಾಪ್ತೋ ಮಕರಧ್ವಜಃ ।
ವೀರಕೋದಂಡಟಂಕಾರೈರ್ದುಂದುಭಿಧ್ವನಿಮಿಶ್ರಿತೈಃ ॥ ೨೩ ॥

ಅಶ್ವಹ್ರೇಷೈರ್ಹಸ್ತಿನಾದೈರ್ವಿನೇದುಶ್ಚ ದಿಶೋ ದಶ ।
ಸೈನ್ಯಪಾದರಜೋಭಿಶ್ಚ ಯುಯುಧೇ ಯಾದವೈಃ ಸಹ ॥ ೨೪ ॥

---

೨೧. ಹೀಗೆಯೇ ಆ ಉದ್ಧವನನ್ನು ಕಾಣದೆ ಕೆಲವಾರು ದಿನಗಳು ಕಳೆದು ಹೋದುವು. ಆಗ ನಾನು ಈ ಸಂಗತಿಯನ್ನು ತಿಳಿಸಲು ಸಾಕ್ಷಾತ್ ಶ್ರೀಹರಿಯ ಸ್ವರೂಪನಾದ ಪ್ರದ್ಯುಮ್ನನು,

೨೨. ತ್ರಿಪುರವನ್ನು ನಿಗ್ರಹಿಸಲು ಹೊರಟ ಶಂಕರನಂತೆ ಆ ಶಕ್ರಸಖನನ್ನು ಗೆದ್ದು ಬರಲು ತನ್ನ ಸಹೋದರರೊಡನೆಯೂ, ಇತರ ಯಾದವ ಸೇನೆಯೊಡನೆಯೂ ಸೇರಿ ಹೊರಟುಬಂದನು.

೨೩–೨೪. ಆ ಪ್ರದ್ಯುಮ್ನನು ತನ್ನ ಸೇನೆಯೊಡನೆ ಮೇರುಪರ್ವತದ ಗುಹದ್ವಾರದವರೆಗೂ ಬಂದನು. ರಾಜೇಂದ್ರ! ಆಗ ಯದುಸೇನೆಯಲ್ಲಿದ್ದ ವೀರರ ಧನುಷ್ಟಂಕಾರಗಳಿಂದಲೂ ದುಂದುಭಿಗಳ ಧಾಂಕಾರಗಳಿಂದಲೂ ಕುದುರೆಗಳ ಹ್ರೇಷಾಧ್ವನಿ(ಕೆನೆತ)ಗಳಿಂದಲೂ ಆನೆಗಳ ಬೃಂಹಿತ(ಘೀಂಕಾರ)ಗಳಿಂದಲೂ, ದಶದಿಕ್ಕುಗಳೂ ತುಂಬಿಹೋಗಿ ಮರುಧ್ವನಿಯನ್ನು ಕೊಡತೊಡಗಿದುವು. ಆಗ ಶಕ್ರಸಖನ ಕಡೆಯವರಿಗೂ, ಯಾದವರ ಕಡೆಯವರಿಗೂ ಕೈಕೈ ಕಲೆತು ಭಾರಿಯಾದ ಯುದ್ಧವು ಜರುಗಿತು.

ಬಭೂವ ತುಮುಲಂ ಯುದ್ಧಂ ಛಾದಿತಂ ವ್ಯೋಮಮಂಡಲಂ ।
ವೀಕ್ಷ್ಯ ಸರ್ವೇ ಮೇರುದೇವಾ ಭಯಂ ಪ್ರಾಪುರ್ನೃಪೇಶ್ವರ ॥ ೨೫ ॥

ಅಥ ಶಕ್ರಸಖಃ ಕ್ರುದ್ಧೋ ರಥಾರೂಢೋ ಮಹಾಬಲಃ ।
ಅಕ್ಷೌಹಿಣೀಭಿರ್ದಶಭಿರ್ಯುಯುಧೇ ಯಾದವೈಃ ಸಹ ॥ ೨೬ ॥

ಬಭೂವ ತುಮುಲಂ ಯುದ್ಧಂ ದೇವಾನಾಂ ಯದುಭಿಃ ಸಹ ।
ಪ್ರಾಕೃತಪ್ರಲಯೇ ರಾಜನ್ನುದಧೀನಾಂ ಧ್ವನಿರ್ಯಥಾ ॥ ೨೭ ॥

ಶಸ್ತ್ರಾಂಧಕಾರೇ ಸಂಜಾತೇ ಸಾರಣೋ ರೋಹಿಣೀಸುತಃ ।
ಬಲದೇವಾನುಜೋ ವೀರೋ ದಂಶಿತೋ ಗಜಸಂಸ್ಥಿತಃ ॥ ೨೮ ॥

ಸರ್ವೇಷಾಮಗ್ರತಃ ಪ್ರಾಪ್ತೋ ಧನುಷ್ಟಂಕಾರಯನ್ಮುಹುಃ ।
ತದ್ಬಲಂ ಪೋಥಯಾಮಾಸ ಬಾಣೈಃ ಕೋದಂಡನಿರ್ಗತೈಃ ॥ ೨೯ ॥

---

೨೫. ಆಗ ಸೈನ್ಯಗಳ ಕಾಲಿನ ತುಳಿತದಿಂದ ಧೂಳು ಮೇಲಕ್ಕೆದ್ದು ಆಕಾಶವೆಲ್ಲವೂ ಮುಚ್ಚಿಹೋಯಿತು. ಇದನ್ನು ಕಂಡು ಮೇರುಪರ್ವತದ ನಿವಾಸಿಗಳಾದ ದೇವತೆಗಳೆಲ್ಲರೂ ವಿಶೇಷವಾಗಿ ಭಯಗೊಂಡರು.

೨೬. ಆಗ ಕುಪಿತನಾದ ಶಕ್ರಸಖನು ತೇರಿನ ಮೇಲೆ ಕುಳಿತು ತನ್ನ ಹತ್ತು ಅಕ್ಷೌಹಿಣೀ ಸೇನೆಯೊಡನೆ ಯಾದವರ ಮೇಲೆ ಬಿದ್ದು ಹೋರಾಡಲಾರಂಭಿಸಿದನು.

೨೭. ಆ ಶಕ್ರಸಖನ ಕಡೆಯ ದೇವತೆಗಳಿಗೂ, ಯದುಗಳಿಗೂ ಅತಿ ಘೋರವಾದ ಕದನವು ಮೊದಲಾಗಿ ಆ ಸೈನ್ಯಗಳೆರಡರ ಅಬ್ಬರವು ಪ್ರಾಕೃತಪ್ರಳಯದ ಸಂದರ್ಭದಲ್ಲಿ ಸಾಗರಗಳು ಪರಸ್ಪರವಾಗಿ ಘರ್ಷಿಸಿದಾಗ ಸಂಭವಿಸುವ ಮೊರೆತದಂತೆ ಬಹು ಭಯಂಕರವಾಗಿ ಕೇಳಬರತೊಡಗಿತು.

೨೮–೨೯. ಆಗ ಎರಡೂ ಕಡೆಯ ಸೈನಿಕರಿಂದ ಎಸೆಯಲ್ಪಟ್ಟ ಆಯುಧಗಳಿಂದ ಆಕಾಶವು ಮುಚ್ಚಿಹೋಗಿ ಕಗ್ಗತ್ತಲೆಯು ಕವಿಯಿತು. ಅದನ್ನು ಕಂಡು, ರೋಹಿಣೀದೇವಿಯ ಪುತ್ರನೂ, ಬಲರಾಮನ ಸಹೋದರನೂ ಆದ ಸಾರಣನೆಂಬ ವೀರನು ಯುದ್ಧಾರ್ಹವಾದ ಕವಚವನ್ನು ಮೈಗೆ ತೊಟ್ಟು ಆನೆಯ ಮೇಲೆ ಹತ್ತಿ ಕುಳಿತು ತನ್ನ ಧನುಸ್ಸನ್ನು ಟಂಕಾರಮಾಡುತ್ತಾ ಎಲ್ಲರಿಗಿಂತಲೂ ಮುಂದೆ ಬಂದು ನಿಂತು ಆ ಶಕ್ರಸಖನ ಸೇನೆಯನ್ನು ತನ್ನ ಬಾಣಗಳಿಂದ ತುಂಡರಿಸುತ್ತಾ ಬಂದನು.

ಶ್ರೀಸಾರಣಸ್ಯ ಬಾಣೌಘೈಃ ಕೇಚಿದ್ವೀರಾ ದ್ವಿಧಾಕೃತಾಃ ।
ತಿರ್ಯಗ್ಭೂತಾ ರಥಾ ಯುದ್ಧೇ ನಿಪೇತುಃ ಪಾದಪಾ ಇವ ॥ ೩೦ ॥

ಗಜಾನಾಂ ಭಿನ್ನಕುಂಭಾನಾಂ ಮೌಕ್ತಿಕಾನ್ಯಪತಂಸ್ತದಾ ।
ಬಾಣಾಂಧಕಾರೇ ಸಂಜಾತೇ ರಾತ್ರೌ ತಾರಾಗಣಾ ಇವ ॥ ೩೧ ॥

ಸಂಭಿದ್ಯಮಾನೈರಶ್ವೈಶ್ಚ ವೀರೈರ್ನಾಗೈ ರಣಾಂಗಣಂ ।
ಬಭೌ ಭೂತಗಣೈರ್ಯುಕ್ತಂ ಯಥಾ ಕ್ರೀಡನಮುಮಾಪತೇಃ ॥ ೩೨ ॥

ಸಾರಣಸ್ಯ ಬಲಂ ದೃಷ್ಟ್ವಾ ಸರ್ವೇ ದೇವಾಃ ಪಲಾಯಿತಾಃ ।
ಸಭಿನ್ನಭಿನ್ನಕೋದಂಡಾ ಅಭಿತಃ ಶೀರ್ಣಕಂಚುಕಾಃ ॥ ೩೩ ॥

---

೩೦. ರಾಜೇಂದ್ರ! ಬಾಣಪರಂಪರೆಗಳಿಂದ ಕೆಲಮಂದಿ ವೀರರು ಎರಡು ತುಂಡಾಗಿ ಕತ್ತರಿಸಲ್ಪಟ್ಟರು. ತೇರುಗಳು ಬಿರುಗಾಳಿಗೆ ಸಿಕ್ಕಿದ ಭಾರಿ ಮರಗಳಂತೆ ಅಡ್ಡಡ್ಡಲಾಗಿ ಯುದ್ಧಭೂಮಿಯ ಮೇಲೆ ಬಿದ್ದು ಹೋದುವು.

೩೧. ಆಗ ಆ ಯುದ್ಧರಂಗದಲ್ಲಿ ಎತ್ತೆತ್ತಲೂ ಎರಡು ಕಡೆಯ ವೀರರ ಬಾಣ ಪರಂಪರೆಗಳಿಂದ ಕಗ್ಗತ್ತಲೆಯು ಕವಿದುಬಿಟ್ಟಿದ್ದುದರಿಂದ ಕತ್ತರಿಸಿಹೋದ ಸೇನಾ ಗಜಗಳ ಕುಂಭಸ್ಥಳಗಳಿಂದ ಬೀಳುವ ಬೆಳ್ಳನೆಯ ಮುತ್ತುಗಳು ಆಕಾಶದಿಂದ ನೆಲಕ್ಕುರುಳುವ ಥಳಥಳಿಸುವ ನಕ್ಷತ್ರಗಳಂತೆ ಥಳಥಳಿಸಿದುವು.

೩೨. ಆ ಸಮಯದಲ್ಲಿ ಬಾಣಗಳ ಏಟಿಗೆ ಸಿಲುಕಿ ಕತ್ತರಿಸಿ ಬೀಳುತ್ತಿರುವ ಕುದುರೆಗಳಿಂದಲೂ, ಆನೆಗಳಿಂದಲೂ ವೀರರಾದ ಯೋಧರಿಂದಲೂ ತುಂಬಿಹೋದ ಆ ಯುದ್ಧಭೂಮಿಯು ಭೂತಗಳಿಂದ ತುಂಬಿಹೋಗಿರುವ ಶಿವನ ವಿಹಾರವನದಂತೆ ಶೋಭಿಸಿತು.

೩೩. ಈ ರೀತಿಯಾಗಿ ಸಾರಣನ ಅತ್ಯದ್ಭುತವಾದ ಪರಾಕ್ರಮವನ್ನು ತಾಳಲಾರದೆ ಕೈಲಿದ್ದ ಬಿಲ್ಲು ಕತ್ತರಿಸಿಹೋಗಿ ಕವಚವೆಲ್ಲವೂ ಹರಿದುಹೋದ ಆ ದೇವ ಸೈನಿಕರು ರಣರಂಗದಿಂದ ಹಿಮ್ಮೆಟ್ಟಿ ಓಡತೊಡಗಿದರು.

ಪಲಾಯಮಾನಂ ಸ್ವಬಲಂ ದೃಷ್ಟ್ವಾ ಶಕ್ರಸಖೋ ಬಲೀ ।
ಧನುಷ್ಟಂಕಾರಯನ್ಪ್ರೋತ್ತೇ ಜಗರ್ಜ ಘನವದ್ಬಲಾತ್ ॥ ೩೪ ॥

ಅರ್ಜುನಂ ದಶಭಿರ್ಬಾಣೈರ್ವಿಂಶತ್ಯಾ ಭಾನುಮೇವ ಚ ।
ಸಾಂಬಂ ಬಾಣಶತೈರ್ಯುದ್ಧೇಽನಿರುದ್ಧಂ ಚ ಶತೈಃ ಶರೈಃ ॥ ೩೫ ॥

ದ್ವಿಶತೈಶ್ಚ ಗದಂ ವೀರಂ ಸಹಸ್ರೈಃ ಸಾರಣಂ ತಥಾ ।
ತತಾಡ ಸಮರೇ ವೀರೋ ಧನ್ವೀ ಶಕ್ರಸಖೋ ಬಲೀ ॥ ೩೬ ॥

ತದ್ಬಾಣೈಃ ಸರಥಾ ವೀರಾ ಬಭ್ರಮುರ್ಘಟಿಕಾದ್ವಯಂ ।
ಚಕ್ರವತ್ಕುಂಭಕಾರಸ್ಯ ತದದ್ಭುತಮಿವಾಭವತ್ ॥ ೩೭ ॥

ಹಯಾಶ್ಚ ಪಂಚತಾಂ ಪ್ರಾಪ್ತಾಃ ಶ್ಲಥದ್ಬಂಧಾ ರಥಾ ಭ್ರಮಾತ್ ।
ರಥಿನಃ ಖಿನ್ನಮನಸಃ ಸೂತಾ ಮೂರ್ಛಾಂ ಗತಾ ಮೃಧೇ ॥ ೩೮ ॥

---

೩೪. ಹೀಗೆ ತನ್ನ ಕಡೆಯ ಸೇನೆಯು ಓಡತೊಡಗಿದುದನ್ನು ಕಂಡು ಬಲಾಢ್ಯನಾದ ಆ ಶಕ್ರಸಖನು ತನ್ನ ಬಿಲ್ಲಿನ ಹೆದೆಯನ್ನು ಸದ್ದುಮಾಡುತ್ತಾ ಮುಂದೆ ಬಂದು ಮೇಘದಂತೆ ಒಂದು ಬಾರಿ ಗಟ್ಟಿಯಾಗಿ ಗರ್ಜನೆಮಾಡಿದನು.

೩೫. ಅನಂತರ ಅರ್ಜುನನನ್ನು ಹತ್ತು ಬಾಣಗಳಿಂದಲೂ, ಭಾನುವನ್ನು ಇಪ್ಪತ್ತು ಬಾಣಗಳಿಂದಲೂ, ಸಾಂಬನನ್ನೂ, ಅನಿರುದ್ಧನನ್ನೂ ನೂರು ನೂರು ಬಾಣಗಳಿಂದಲೂ,

೩೬. ಗದನನ್ನು ಇನ್ನೂರು ಬಾಣಗಳಿಂದಲೂ, ಸಾರಣನನ್ನು ಸಾವಿರ ಬಾಣಗಳಿಂದಲೂ, ಒಟ್ಟಿಗೆ ಪ್ರಹರಿಸುತ್ತಾ ಬಂದನು.

೩೭. ಆ ಅದ್ಭುತ ವೃತ್ತಾಂತವನ್ನು ಏನೆಂದು ವಿವರಿಸಲಿ? ಆ ಶಕ್ರಸಖನ ಬಾಣದ ಏಟನ್ನು ತಾಳಲಾರದೆ ಆ ವೀರರೆಲ್ಲರೂ ತಮ್ಮ ತಮ್ಮ ರಥಗಳೊಡನೆ ಎರಡು ಗಳಿಗೆಗಳವರೆಗೆ ಕುಂಬಾರನ ಚಕ್ರದಂತೆ ಗರಗರನೆ ಸುತ್ತಿಬಿಟ್ಟರು.

೩೮. ಆ ಸುತ್ತುವಿಕೆಯಿಂದ ಕುದುರೆಗಳು ಕೂಡಲೇ ಸತ್ತುಹೋದುವು. ತೇರುಗಳ ಸಂಧಿಭಾಗಗಳೆಲ್ಲವೂ ಸಡಿಲಹೋಗಿ ಬಿದ್ದುಹೋದುವು. ರಥಾರೂಢರಾದ ವೀರರು ಚಿಂತಾಕ್ರಾಂತರಾದರು. ಸಾರಥಿಗಳು ಮೂರ್ಛಿತರಾಗಿ ಬಿದ್ದುಹೋದರು.

ಸ ಚಾನ್ಯಂ ರಥಮಾರುಹ್ಯ ಧನುಷ್ಟಂಕಾರಯನ್ಬಲಾತ್ ।
ಧನುಃ ಶಕ್ರಸಖಸ್ಯಾಪಿ ಚಿಚ್ಛೇದ ದಶಭಿಶ್ಶರೈಃ ॥ ೩೯ ॥

ದ್ವಾಭ್ಯಾಂ ಸೂತಂ ಶತೈರಶ್ವಾನ್ಸಹಸ್ರೈಸ್ತದ್ರಥಂ ಶರೈಃ ।
ಚೂರ್ಣಯಾಮಾಸ ರಾಜೇಂದ್ರ ಸಾಂಬೋ ಜಾಂಬವತೀಸುತಃ ॥ ೪೦ ॥

ಸಚ್ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ನಾಗೇಂದ್ರಂ ಮತ್ತಮಾರುಹ್ಯ ಶೂಲಂ ಜಗ್ರಾಹ ರೋಷತಃ ॥ ೪೧ ॥

ವಿವ್ಯಾಥ ಸಾಂಬಂ ಶೂಲೇನ ಹೃದಿ ಶಕ್ರಸಖೋ ಬಲೀ ।
ತೇನ ಘಾತೇನ ಸಾಂಬೋಽಪಿ ಕಿಂಚಿದ್ವ್ಯಾಕುಲಮಾನಸಃ ॥ ೪೨ ॥

ಯೋಜನೇ ಪಾದವಿಕ್ಷೇಪಂ ಕಜ್ಜಲಾದ್ರಿಸಮಪ್ರಭಂ ।
ಚತುರ್ಯೋಜನಮುಚ್ಚಾಂಗಂ ಯೋಜನಾರ್ಧರದದ್ವಯಂ ॥ ೪೩ ॥

೩೯–೪೦. ಇದನ್ನು ಕಂಡು ಜಾಂಬವತೀ ಪುತ್ರನಾದ ಸಾಂಬನು ಬೇರೊಂದು ರಥವನ್ನು ಹತ್ತಿ ಕುಳಿತು ಜೋರಾಗಿ ತನ್ನ ಬಿಲ್ಲಿನ ಹೆದೆಯನ್ನು ಮಿಡಿಯುತ್ತಾ ಹತ್ತು ಬಾಣಗಳಿಂದ ಆ ಶಕ್ರಸಖನ ಧನುಸ್ಸನ್ನೂ, ಎರಡು ಬಾಣಗಳಿಂದ ಅವನ ಸಾರಥಿಯನ್ನೂ ನೂರು ಬಾಣಗಳಿಂದ ಆ ರಥಕ್ಕೆ ಕಟ್ಟಿದ್ದ ಕುದುರೆಗಳನ್ನೂ, ಸಾವಿರ ಬಾಣಗಳಿಂದ ಅವನ ರಥವನ್ನೂ ಪ್ರಹರಿಸಿ ಕ್ಷಣಮಾತ್ರದಲ್ಲಿ ಪುಡಿಪುಡಿಮಾಡಿಬಿಟ್ಟನು.

೪೧. ಈ ರೀತಿಯಾಗಿ ಬಿಲ್ಲು ಕತ್ತರಿಸಿಹೋಗಿ ತೇರು ಮುರಿದು ಕುದುರೆಗಳೂ, ಸಾರಥಿಯೂ ಸಾವಿಗೀಡಾದುದನ್ನು ಕಂಡು ಕ್ರೋಧಾಂಧನಾದ ಆ ಶಕ್ರಸಖನು ಮದ್ದಾನೆಯೊಂದನ್ನು ಹತ್ತಿ ಕುಳಿತು ಶೂಲವೊಂದನ್ನು.

೪೨. ಕೈಗೆ ತೆಗೆದುಕೊಂಡು ಆ ಸಾಂಬನ ಎದೆಗೆ ಸರಿಯಾಗಿ ಗುರಿಯಿಟ್ಟು ಬೀಸಿದನು. ಆ ಶೂಲದ ಹೊಡೆತದಿಂದ ಸಾಂಬನೂ ಕೂಡ ಸ್ವಲ್ಪಮಟ್ಟಿಗೆ ಕಳವಳವನ್ನು ಹೊಂದಿದನು.

೪೩. ರಾಜೇಂದ್ರ! ಆ ಶಕ್ರಸಖನು ಕುಳಿತಿದ್ದ ಮದ್ದಾನೆಯು ತನ್ನ ಆಕಾರದಿಂದಲೂ, ಕಾಂತಿಯಿಂದಲೂ ಅಂಜನಪರ್ವತವನ್ನು ಹೋಲುತ್ತಾ ಒಂದು ಹೆಜ್ಜೆಗೆ ಒಂದು ಯೋಜನದಷ್ಟು ದೂರವನ್ನು ದಾಟುತ್ತಾ ನಾಲ್ಕು ಯೋಜನಗಳಷ್ಟು ಎತ್ತರವಾಗಿ ಬೆಳೆದು ಅರ್ಧಯೋಜನ ಉದ್ದವಿರುವ ದಂತಗಳೆರಡರಿಂದ.

ಮುಹುಚ್ಚೀತ್ಕಾರಕುರ್ವಂತಂ ತ್ರಿಶುಂಡಾದಂಡಮುಂಡಲೈಃ ।
ಶೃಂಖಲೇ ಪಾತಯಂತಂ ತಂ ಚತುರ್ಯೋಜನವಿಸ್ತೃತೈಃ ॥ ೪೪ ॥

ಗಜಾನ್ವೀರಾನ್ಮರ್ದಯಂತಂ ರಥಾನಶ್ವಾನಿತಸ್ತತಃ ।
ದಂತೈಃ ಪಾದೈರ್ಘಾತಯಂತಂ ಕಾಲಾಂತಕಯಮೋಪಮಂ ॥ ೪೫ ॥

ಆಗತಂ ವೀಕ್ಷ್ಯ ನಾಗೇಂದ್ರಂ ಶತ್ರುಣಾ ನೋದಿತಂ ಪರಂ ।
ವಿಚರಂತಂ ಮೃಧಾದ್ಭೀತಾ ಯದುಸೇನಾ ವಿದುದ್ರುವುಃ ॥ ೪೬ ॥

ಗದೋ ಗದಾಂ ಸಮಾದಾಯ ಬಲದೇವಾನುಜೋ ಬಲೀ ।
ಜಘಾನ ತದ್ಗಜಂ ಕುಂಭೇ ಗದಯಾ ವಜ್ರಕಲ್ಪಯಾ ॥ ೪೭ ॥

---

೪೪. ಕೂಡಿ ಬಹು ಗಟ್ಟಿಯಾಗಿ ಕೂಗಿಕೊಳ್ಳುತ್ತಾ ಸುರುಳಿಯಂತೆ ಮೇಲಕ್ಕೆತ್ತಿ ಸುತ್ತಿಕೊಂಡಿದ್ದ ಮೂರು ಸೊಂಡಲುಗಳಿಂದ ಬಹು ಭಯಂಕರವಾಗಿ ತೋರುತ್ತಿತ್ತು. ಇಂತಹ ಆ ಮದ್ದಾನೆಯು ತನ್ನ ಕಾಲಿಗೆ ಬಿಗಿದಿದ್ದ ನಾಲ್ಕು ಯೋಜನಗಳಷ್ಟು ಉದ್ದವಿರುವ ಸರಪಳಿಗಳಿಂದ,

೪೫. ಶತ್ರುಸೇನೆಯ ಆನೆಗಳನ್ನೂ, ಕುದುರೆಗಳನ್ನೂ, ತೇರುಗಳನ್ನೂ, ವೀರರಾದ ಭಟರನ್ನೂ ಅತ್ತಿತ್ತ ನುಗ್ಗಿ ಸದೆಬಡಿಯುತ್ತಾ, ತನ್ನ ದಂತಗಳಿಂದಲೂ, ಕಾಲುಗಳಿಂದಲೂ, ಆ ಸೇನೆಯೆಲ್ಲವನ್ನೂ ತಿವಿಯುತ್ತಲೂ, ತುಳಿಯುತ್ತಲೂ ನುಗ್ಗಿ ಬರುತ್ತಾ ಪ್ರಳಯಕಾಲದ ಯಮನಂತೆ ಅದನ್ನು ಕೊಲ್ಲುತ್ತಾ ಬಂದಿತು.

೪೬. ಈ ರೀತಿಯಾಗಿ ಶತ್ರುವಿನಿಂದ ಪ್ರೇರಿಸಲ್ಪಟ್ಟು ತಮ್ಮ ಮೇಲೆ ನುಗ್ಗಿ ಬರುತ್ತಿರುವ ಆ ಮದ್ದಾನೆಯನ್ನು ಕಂಡು ಆ ಯದುಸೇನೆಯು ಹೆದರಿಕೆಯಿಂದ ತಲ್ಲಣಿಸುತ್ತಾ ಕಾಲಿಗೆ ಬುದ್ಧಿ ಹೇಳಿತು.

೪೭. ಆಗ ಬಲಭದ್ರನ ತಮ್ಮನಾದ ವೀರಾಗ್ರಣಿ ಗದನು ತನ್ನ ವಜ್ರಸದೃಶವಾದ ಗದೆಯನ್ನು ಕೈಗೆ ತೆಗೆದುಕೊಂಡು ಆ ಮದ್ದಾನೆಯ ಕುಂಭಸ್ಥಳದ ಮೇಲೆ ಬಲವಾಗಿ ಅಪ್ಪಳಿಸಿದನು.

ತದ್ಘಾತಭಿನ್ನಕುಂಭೋ ಹಿ ಗಜೋ ಯುದ್ಧೇ ಪಪಾತ ಹ ।
ಭಿನ್ನಪಕ್ಷೋ ಯಥಾ ಶೈಲಸ್ತದದ್ಭುತಮಿವಾಭವತ್ ॥ ೪೮ ॥

ಅಥ ಶಕ್ರಸಖೋ ಯಾವದ್ಗದಾಂ ಜಗ್ರಾಹ ರೋಷತಃ ।
ತಾವತ್ತತಾಡ ಗದಯಾ ಗದೋ ಶಕ್ರಸಖಂ ಹೃದಿ ॥ ೪೯ ॥

ತೇನ ಘಾತೇನ ಸ ಗಜೋ ಪತಿತೋ ಮೂರ್ಛಿತೋಽಭವತ್ ।
ಪುನರುತ್ಥಾಯ ಸ ಗದಂ ಭುಜಾಭ್ಯಾಂ ಜಗೃಹೇ ಮೃಧೇ ॥ ೫೦ ॥

ಗದಶಕ್ರಸಖೌ ಯುದ್ಧೇ ಯುಯುಧಾತೇ ಪರಸ್ಪರಂ ।
ರಂಗೇ ಮಲ್ಲಾವಿವ ವನೇ ವನ್ಯೌ ತೌ ವಾರಣಾವಿವ ॥ ೫೧ ॥

---

೪೮. ಆ ಆಶ್ಚರ್ಯವನ್ನು ನೀನು ಹೇಳಲಿ! ಆ ಗದಾಪ್ರಹಾರದಿಂದ ಕುಂಭಸ್ಥಳವು ಬಿಚ್ಚಿಹೋದ ಆ ಆನೆಯು ರೆಕ್ಕೆಗಳು ಕತ್ತರಿಸಲ್ಪಟ್ಟ ಪರ್ವತದಂತೆ ನೆಲದ ಮೇಲೆ ಬಿದ್ದುಬಿಟ್ಟಿತು.

೪೯. ಅದನ್ನು ಕಂಡು ಕುಪಿತನಾದ ಶಕ್ರಸಖನು ತನ್ನ ಕೈಗೆ ಗದೆಯನ್ನು ತೆಗೆದುಕೊಳ್ಳಬೇಕೆನ್ನುವಷ್ಟರಲ್ಲಿ ಗದನು ತನ್ನ ಗದೆಯಿಂದ ಆತನ ಎದೆಯ ಮೇಲೆ ಪ್ರಹರಿಸಿಬಿಟ್ಟನು.

೫೦. ಆ ಪ್ರಹಾರದಿಂದ ಶಕ್ರಸಖನು ತಾನು ಕುಳಿತಿದ್ದ ಆನೆಯೊಡನೆ ನೆಲದ ಮೇಲೆ ಬಿದ್ದು ಮೂರ್ಛೆಹೊಂದಿದನು. ಕೂಡಲೇ ಅವನು ಎಚ್ಚೆತ್ತು ಗದಾಸಮೇತನಾದ ಆ ಗದನನ್ನು ತನ್ನೆರಡು ತೋಳುಗಳಿಂದಲೂ ಬಿಗಿಯಾಗಿ ಹಿಡಿದುಕೊಂಡನು.

೫೧. ಆಗ ಆ ವೀರರಿಬ್ಬರೂ ಮುಷ್ಟಿಯಲ್ಲಿ ಹೋರಾಡುವ ಜಟ್ಟಿಗಳಂತೆಯೂ, ಕಾಡಿನಲ್ಲಿ ಗುದ್ದಾಡುವ ಮದ್ದಾನೆಗಳಂತೆಯೂ ಒಬ್ಬರಿಗೊಬ್ಬರು ಹೋರಾಡಿ ಹೋರಾಡಿದರು.

ಭುಜಾಭ್ಯಾಂ ತಂ ಸಮುತ್ಥಾಪ್ಯ ಬಲದೇವಾನುಜೋ ಬಲೀ ।
ಚಿಕ್ಷೇಪ ತತ್ಪುರೇ ವೀರಂ ಬಲಾತ್ತಂ ಶತಯೋಜನಂ ॥ ೫೨ ॥

ತದಾ ಜಯಜಯಾರಾವೋ ಯದುಸೈನ್ಯೇ ಬಭೂವ ಹ ।
ಜಯದುಂದುಭಯೋ ನೇದುಃ ಪ್ರಶಶಂಸುರ್ಮುಹುರ್ಜನಾಃ ॥ ೫೩ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಶಕ್ರಸಖಯುದ್ಧಂ ನಾಮ ಸಪ್ತಚತ್ವಾರಿಂಶೋಽಧ್ಯಾಯಃ

---

೫೨. ಆಗ ಬಲಿಷ್ಠನಾದ ಗದನು ತನ್ನೆರಡು ತೋಳುಗಳಿಂದಲೂ ಆ ಶಕ್ರಸಖನನ್ನು ಹಿಡಿದು ಅವನ ಊರಿನಲ್ಲಿ ಬೀಳುವಂತೆ ನೂರು ಯೋಜನಗಳಷ್ಟು ದೂರವಾಗಿ ತಿರುಗಿಸಿ ಎಸೆದುಬಿಟ್ಟನು.

೫೩. ಆಗ ಯದುಸೇನೆಯಲ್ಲಿ ಎತ್ತೆತ್ತಲೂ ಜಯಜಯಕಾರವುಂಟಾಯಿತು. ವಿಜಯಸೂಚಕವಾದ ನಗಾರಿಗಳು ಬಾರಿಸಲ್ಪಟ್ಟವು. ಪುನಃಪುನಃ ಜನರು ಆ ಗದನನ್ನು ಕೊಂಡಾಡತೊಡಗಿದರು.

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಶಕ್ರಸಖಯುದ್ಧವೆಂಬ ನಲವತ್ತೇಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಅಷ್ಟಚತ್ವಾರಿಂಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಸ್ವಪುರೇ ಪತಿತೋ ಮೂರ್ಛಾಂ ಗತಃ ಶಕ್ರಸಖೋ ಭೃಶಂ ।
ಉತ್ತಸ್ಥೌ ಚ ಕ್ಷಣಂ ತತ್ರ ಕಿಂಚಿದ್ವ್ಯಾಕುಲಮಾನಸಃ ॥ ೧ ॥

ಅಥ ಕಾರ್ಷ್ಣಿಂ ಪರಂ ಬ್ರಹ್ಮ ಜ್ಞಾತ್ವಾ ಶಕ್ರಸಖಸ್ತ್ವರ್ಮ ।
ಸ್ವಸಕಾಶಾದ್ಬಲಿಂ ನೀತ್ವಾ ಯದೂನಾಂ ಚ ಬಲಂ ಯಯೌ ॥ ೨ ॥

ನಲವತ್ತೆಂಟನೆಯ ಅಧ್ಯಾಯವು

೧. ನಾರದಮಹರ್ಷಿಯು ಹೇಳತೊಡಗಿದನು :—ರಾಜೇಂದ್ರ! ಇತ್ತಲಾಗಿ ಗದನಿಂದ ಎಸೆಯಲ್ಪಟ್ಟ ಆ ಶಕ್ರಸಖನು ತನ್ನ ಊರಿನಲ್ಲಿ ಬಿದ್ದು ಬಹುವಾಗಿ ಮೂರ್ಛೆಯನ್ನು ತಾಳಿದನು. ಅನಂತರ ಸ್ವಲ್ಪ ಹೊತ್ತಿನಲ್ಲಿಯೇ ಮೂರ್ಛೆ ತಿಳಿದೆದ್ದು ಕೆಲಹೊತ್ತು ಕಳವಳಕ್ಕೀಡಾದನು.

೨. ಅನಂತರ ಆ ಕೃಷ್ಣಪುತ್ರನಾದ ಪ್ರದ್ಯುಮ್ನನು ಸಾಕ್ಷಾತ್ಪರಮಪುರುಷನೆಂಬುದಾಗಿ ಅರಿತು ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಯಾದವರ ಸೇನೆಯಿರುವಲ್ಲಿಗೆ ಹೊರಟನು.

ಐರಾವತಕುಲೇಭಾಶ್ಚ ತ್ರಿಶುಂಡಾದಂಡದಂತಿನಃ ।
ಚತುರ್ದಂತಾಃ ಶ್ವೇತವರ್ಣಾಃ ಸಹಸ್ರಾಣಿ ಮದಚ್ಯುತಃ ॥ ೩ ॥

ಹೇಮಾದ್ರಿಪ್ರಭವಾ ನಾಗಾ ಯೋಜನದ್ವಯವಿಗ್ರಹಾಃ ।
ಕೋಟಿಶಃ ಪರ್ವತಾಕಾರಾ ಉನ್ಮತ್ತಾ ದಿಗ್ಗಜಾ ಇವ ॥ ೪ ॥

ದಿವ್ಯಾಶ್ವಾ ದಿವ್ಯಗತಯಃ ಕೋಟಿಶಃ ಕೋಟಿಶೋ ನೃಪ ।
ಶತಾರ್ಬುದಾ ರಥಾ ದಿವ್ಯಾಃ ಶಾತಕೌಂಭಮಯಾಃ ಪರಾಃ ॥ ೫ ॥

ಅಯುತಾನಿ ವಿಮಾನಾನಾಂ ಯೋಜನದ್ವಯಶಾಲಿನಾಂ ।
ನಿಯುತಂ ಕಾಮಧೇನೂನಾಂ ಪಾರಿಜಾತಸಹಸ್ರಕಂ ॥ ೬ ॥

---

೩. ಆ ಉಪಾಯನವಸ್ತುಗಳಲ್ಲಿ ಒಂದಾದ ಆನೆಗಳ ಪೈಕಿ ಕೆಲವು ಐರಾವತದ ವಂಶದಲ್ಲಿ ಜನಿಸಿವಂತಹುವು. ಅವಕ್ಕೆ ಮೂರು ಮೂರು ಸೊಂಡಲುಗಳು! ನಾಲ್ಕು ನಾಲ್ಕು ದಂತಗಳು! ಇಂತಹ ಈ ಆನೆಗಳು ಬಿಳಿದಾದ ಬಣ್ಣದಿಂದ ಮೆರೆಯುತ್ತಾ ಪ್ರವಿಸುತ್ತಿರುವ ಮದೋದಕದೊಡನೆ ಸಾವಿರ ಸಂಖ್ಯೆಯಲ್ಲಿ ಹೊರಟಿದ್ದುವು.

೪. ಇನ್ನು ಕೆಲವು ಆನೆಗಳು ಮೇರುಪರ್ವತದಲ್ಲಿ ಹುಟ್ಟಿದಂತಹವು. ಅವುಗಳ ಶರೀರವು ಎರಡು ಯೋಜನಗಳಷ್ಟು ಉದ್ದವಾಗಿದ್ದಿತು. ಈ ಆನೆಗಳೂ ಮದದಿಂದ ಮತ್ತೇರಿದವುಗಳಾಗಿ ಆಕಾರದಲ್ಲಿ ಪರ್ವತಗಳನ್ನು ಹೋಲುತ್ತಾ ಕೋಟಿಗಟ್ಟಲೆ ದಿಗ್ಗಜಗಳಂತೆ ಬರುತ್ತಿದ್ದುವು.

೫. ಮತ್ತೆ ಕೆಲವು ಆನೆಗಳು ಸುಂದರವಾದ ಮುಖದಿಂದಲೂ, ಸೊಗಸಾದ ನಡಿಗೆಯಿಂದಲೂ ಕಂಗೊಳಿಸುತ್ತಾ ಕೋಟಿ ಕೋಟಿ ಸಂಖ್ಯೆಯಲ್ಲಿ ಹೊರಟು ಬರುತ್ತಿದ್ದುವು. ಈ ಆನೆಗಳಂತೆ ಸಂಪೂರ್ಣವಾಗಿ ಚಿನ್ನದಿಂದಲೇ ನಿರ್ಮಿಸಲ್ಪಟ್ಟಂತಹ ಅತ್ಯುತ್ತಮವಾದ ರಥಗಳು ಒಂದನೂರು ಅರ್ಬುದಗಳಷ್ಟು ಬರುತ್ತಿದ್ದುವು.

೬. ಇದರಂತೆ ಎರಡು ಯೋಜನಗಳಷ್ಟು ಅಗಲವಾಗಿರುವ ಹತ್ತುಸಹಸ್ರ ವಿಮಾನಗಳೂ, ಹತ್ತುಲಕ್ಷ ಕಾಮಧೇನುಗಳೂ, ಸಾವಿರ ಪಾರಿಜಾತ ವೃಕ್ಷಗಳೂ ಆ ಉಪಾಯನ ವಸ್ತುಗಳಲ್ಲಿ ಒಂದೆನಿಸಿದ್ದುವು.

ಕರಿದಂತಖಚಿತ್ಸ್ತಂಭಹೇಮರತ್ನಖಚಿತ್ಸದಾಃ ।
ಮುಕ್ತಾಸ್ತಡಾಗಸಂವೃದ್ಧಾ ಗುಣಯಂತ್ರಸ್ಫುರತ್ಪ್ರಭಾಃ ॥ ೭ ॥

ಮಲ್ಲಿಕಾಮಕರಂದಾರ್ದ್ರಾಃ ಶಿರೀಷಕುಸುಮಾಕುಲಾಃ ।
ಪಯಃಫೇನನಿಭಾಃ ಶಯ್ಯಾಃ ಕೋಟಿಶಃ ಸೋಪಬರ್ಹಣಾಃ ॥ ೮ ॥

ವಿತಾನಾನಿ ವಿಚಿತ್ರಾಣಿ ಭಿತ್ತಿವಸ್ತ್ರಾಣಿ ಕೋಟಿಶಃ ।
ಆಸನಾನಿ ಮೃದುಸ್ಪರ್ಶಚಿತ್ರವರ್ಣಾನಿ ಸರ್ವಶಃ ॥ ೯ ॥

ದೀರ್ಘಾಣಿ ಚೋಪಬರ್ಹಾಣಿ ವಿಶ್ವಕರ್ಮಕೃತಾನಿ ಚ ।
ಮುಕ್ತಾಸ್ತಬಕಹೇಮಾದ್ಯೈಃ ಖಚಿತಾನಿ ಸಹಸ್ರಶಃ ॥ ೧೦ ॥

೭-೮. ಇವುಗಳಲ್ಲದೆ ಆನೆಯ ದಂತಗಳಿಂದ ರಚಿತವಾದ ಸ್ತಂಭಗಳಿಂದಲೂ, ಚಿನ್ನದಿಂದಲೂ, ರತ್ನಗಳಿಂದಲೂ ರಚಿಸಲ್ಪಟ್ಟ ಕುಸುರಿಯ ಕೆಲಸದಿಂದಲೂ, ಮುತ್ತಿನ ಜಾಲರಿಗಳಿಂದಲೂ ಅಲಂಕರಿಸಲ್ಪಟ್ಟು ಮನೋಹರವಾಗಿ ಕಂಗೊಳಿಸುತ್ತಾ, ಮಲ್ಲಿಗೆಯ ಹೂವುಗಳ ಮಕರಂದದಿಂದ ನೆನೆಸಲ್ಪಟ್ಟುದರಿಂದ ಸುಖಶೀತಲವಾಗಿ, ಶಿರೀಷ ಪುಷ್ಪಗಳಿಂದ ಅಲ್ಲಿ ಅಲಂಕರಿಸಲ್ಪಟ್ಟು ಹಾಲಿನ ನೊರೆಯಂತೆ ಬಿಳಿದಾದ ಸುಪ್ಪತ್ತಿಗೆಗಳಿಂದಲೂ, ತಲೆದಿಂಬುಗಳಿಂದಲೂ ಮೆರೆಯುತ್ತಿರುವ ಸುಖಶಯನೋಚಿತವಾದ ಮಂಚಗಳು ಕೋಟಿಗಟ್ಟಲೆಯಾಗಿ ತರಲ್ಪಡುತ್ತಿದ್ದುವು.

೯. ಈ ಉಪಾಯನ ವಸ್ತುಗಳಲ್ಲದೆ ಕೋಟಿಗಟ್ಟಲೆ ಚಿತ್ರವಿಚಿತ್ರವಾಗಿ ರಚಿಸಲ್ಪಟ್ಟಿರುವ ಮೇಲುಗಟ್ಟುಗಳೂ, ಗೋಡೆಯ ಮೇಲೆ ಇಳಿಯಬಿಡುವಂತಹ ಬಟ್ಟೆಗಳೂ, ನಾನಾವಿಧವಾದ ಬಣ್ಣಗಳಿಂದ ಕಂಗೊಳಿಸುವ ಮೆತ್ತನೆಯ ಮೆತ್ತೆಗಳುಳ್ಳ ಸುಖಾಸನಗಳೂ (ಸೋಫಾ),

೧೦. ವಿಶ್ವಕರ್ಮನಿರ್ಮಿತವಾದ ಮುತ್ತಿನ ಗೊಂಚಲುಗಳಿಂದಲೂ, ಚಿನ್ನದ ಸರಿಗೆಗಳಿಂದಲೂ, ಜರತಾರಿಯ ಕೆಲಸಮಾಡಲ್ಪಟ್ಟಿರುವ ಉದ್ದವಾದ ಸಾವಿರಾರು ಒರಗುದಿಂಬುಗಳೂ,

ಸಹಸ್ರಶೋ ಜವನಿಕಾಃ ಶಿಬಿಕಾಶ್ಚೈವ ಕೋಟಿಶಃ।
ಛತ್ರಾಣಾಂ ಚಾಮರಾಣಾಂ ಚ ದಿವ್ಯಸಿಂಹಾಸನೈಃ ಸಹ ॥ ೧೧ ॥

ವ್ಯಜನಾನಾಂ ತಥಾ ಕೋಟಿರಾಜ್ಯಶ್ರೀಭೂಷಣಾನಿ ಚ।
ಪೀಯೂಷಾಣಾಂ ದ್ರೋಣಕೋಟೀ ಸುಧರ್ಮಾ ಚ ಸಭಾ ತಥಾ ॥ ೧೨ ॥

ಏವಂ ಚ ಸರ್ವತೋಭದ್ರಪದ್ಮಾನೀತಿ ಸಹಸ್ರಕಂ।
ಹೀರಕಾಣಾಂ ಚ ಹರಿತಾಂ ಮುಕ್ತಾನಾಂ ಚ ತಥೈವ ಹಿ ॥ ೧೩ ॥

ಗೋಮೇದಾನಾಂ ಕೋಟಿಭಾರಾ ನೀಲಕಾನಾಂ ತಥೈವ ಚ।
ಆದಿತ್ಯಚಂದ್ರಕಾಂತೀನಾಂ ವೈಡೂರ್ಯಾಣಾಂ ಸಹಸ್ರಶಃ ॥ ೧೪ ॥

ಸ್ಯಮಂತಕಮಣೀನಾಂ ಚ ಕೋಟಿಭಾರಾಃ ಸಮಾಗತಾಃ।
ತಥಾ ವೈ ಪದ್ಮರಾಗಾಣಾಂ ಭಾರಾ ವಿದ್ಧ್ಯರ್ಬುದಂ ನೃಪ ॥ ೧೫ ॥

---

೧೧. ಸಾವಿರಾರು ಯವನಿಕೆ (ಘರದೆ=ತೆರೆ)ಗಳೂ, ಕೋಟಿಗಟ್ಟಲೆ ಪಾಲಕಿಗಳೂ, ಕೋಟಿಗಟ್ಟಲೆ ರಾಜ್ಯವೈಭವದ ಪ್ರಧಾನಚಿಹ್ನಗಳೆನಿಸಿದ ಛತ್ರ ಚಾಮರಗಳೂ, ದಿವ್ಯವಾದ ಸಿಂಹಾಸನಗಳೂ,

೧೨. ವ್ಯಜನಗಳೂ, (ಬೀಸಣಿಗೆ) ಅಮೃತಪೂರಿತವಾದ ಒಂದು ಕೋಟಿ ದ್ರೋಣಿಗಳೂ, (ಬುದ್ದಲಿಗಳೂ) ಸುಧರ್ಮೆಯೆಂಬ ಸಭೆಯೂ,

೧೩–೧೪. ಸರ್ವತೋಭದ್ರ, ಪದ್ಮ ಮೊದಲಾದ ಒಂದು ಸಾವಿರ ವಾಸ್ತುಶಿಲ್ಪಗಳೂ, ವಜ್ರ, ಪಚ್ಚೆ, ಮುತ್ತು, ಗೋಮೇಧಿಕ, ನೀಲಗಳೆಂಬ ರತ್ನಗಳ ಜಾತಿಗೆ ಸೇರಿದ ಕೋಟಿ ಕೋಟಿ ಭಾರಗಳೂ, ಸೂರ್ಯನಂತೆಯೂ, ಚಂದ್ರನಂತೆಯೂ ಕಾಂತಿಯನ್ನು ಬೀರುತ್ತಿರುವಂತಹ ಸಾವಿರಾರು ಕೋಟಿ ಸಂಖ್ಯೆಯ ವೈಡೂರ್ಯ ಮಣಿಯ ಭಾರಗಳೂ,

೧೫. ಒಂದು ಕೋಟಿ ಸ್ಯಮಂತಕವೆಂಬ ರತ್ನದ ಭಾರಗಳೂ, ಒಂದು ಅರ್ಬುದ ಪದ್ಮರಾಗವೆಂಬ ಮಣಿಯ ಭಾರಗಳೂ, ಉಪಾಯನ ವಸ್ತುಗಳಾಗಿ ತರಲ್ಪಡುತ್ತಿದ್ದುವು.

ಜಾಂಬೂನದಸುವರ್ಣಾನಾಂ ಹಾಟಕಾನಾಂ ತಥೈವ ಚ ।
ಸುವರ್ಣಾದ್ರಿಸುವರ್ಣಾನಾಂ ಕೋಟಿಭಾರಾಶ್ಚ ಕೋಟಿಶಃ ॥ ೧೬ ॥

ರಾಜ್ಯಂ ನವನಿಧೀನ್ಸರ್ವಾನ್ದೈವಾನಾಂ ಮೈಥಿಲೇಶ್ವರ ।
ಅಷ್ಟಾನಾಂ ಲೋಕಪಾಲಾನಾಮಾಧಿಪತ್ಯಾಧಿರಕ್ಷಕಃ ॥ ೧೭ ॥

ನೀತ್ವೋದ್ಧವಂ ಶಕ್ರಸಖೋ ದತ್ವೈವಂ ಬಲಿಮದ್ಭುತಂ ।
ಕೌಶಲ್ಯಹೇತವೇ ಕಾರ್ಷ್ಣಿಂ ಪ್ರಣನಾಮ ಕೃತಾಂಜಲಿಃ ॥ ೧೮ ॥

ತಸ್ಮೈ ತುಷ್ಟಃ ಶಂಬರಾರಿಃ ಪ್ರದದೌ ರತ್ನಮಾಲಿಕಾಂ ।
ಸಂಸ್ಥಾಪ್ಯ ರಾಜ್ಯೇ ತಂ ರಾಜನ್ನೇಷಾ ಹಿ ಪ್ರಕೃತಿಃ ಸತಾಂ ॥ ೧೯ ॥

---

೧೬. ಇವುಗಳಂತೆಯೇ ಜಂಬೂವೃಕ್ಷದ ಬಳಿ ಸಿಗುವಂತಹ ಜಾಂಬೂನದ ವೆಂಬ ಸುವರ್ಣವೂ, ಮೇರುಪರ್ವತದಲ್ಲಿ ಸಿಗುವಂತಹ ಸುವರ್ಣವೂ, ಕೋಟಿ ಗಟ್ಟಲೆಯ ಕೋಟಿ ಭಾರಗಳಷ್ಟು ಸಂಖ್ಯೆಯಲ್ಲಿ ಕಾಣಿಕೆಯಾಗಿ ತರಲ್ಪಟ್ಟುವು.

೧೭–೧೮. ಓ ಮಿಥಿಲಾಧೀಶ! ಈ ರೀತಿಯಾಗಿ ಇಂದ್ರಾದಿ ಅಷ್ಟದಿಕ್ಪಾಲಕರ ಅಧಿಪತ್ಯಗಳಿಗೆಲ್ಲಕ್ಕೂ ಸಂರಕ್ಷಕನೆನಿಸಿದ ಆ ಶಕ್ರಸಖನು ತನ್ನ ರಾಜ್ಯವನ್ನೂ, ದೇವತೆಗಳ ನವನಿಧಿಗಳನ್ನೂ ಕಾಣಿಕೆಯನ್ನಾಗಿ ತೆಗೆದುಕೊಂಡು ಉದ್ಧವನನ್ನೂ ಸೆರೆಯಿಂದ ಬಿಡಿಸಿ ಅವನನ್ನೂ ಜತೆಯಲ್ಲಿ ಕರೆದು ತರುತ್ತಾ ತನಗೆ ಮಂಗಳವುಂಟಾಗಲೆಂದು ಆ ಪ್ರದ್ಯುಮ್ನನನ್ನು ಬಳಿಸಾರಿ ಆ ಅದ್ಭುತವಾದ ಕಪ್ಪಕಾಣಿಕೆಯೆಲ್ಲವನ್ನೂ ಆತನಿಗೆ ಒಪ್ಪಿಸಿ ಕೈಗಳನ್ನು ಮುಗಿದುಕೊಂಡು ನಮಸ್ಕಾರಮಾಡಿದನು.

೧೯. ಆಗ ಆತನ ವಿಷಯದಲ್ಲಿ ಪ್ರದ್ಯುಮ್ನನು ಸುಪ್ರೀತನಾಗಿ ತನ್ನ ರತ್ನ ಹಾರವನ್ನು ಇತ್ತು ಗೌರವಿಸಿದುದಲ್ಲದೆ ಆತನ ರಾಜ್ಯವನ್ನು ಅವನಿಗೇ ಹಿಂದಿರುಗಿ ಕೊಟ್ಟು, ಆತನನ್ನು ಅಲ್ಲಿಯೇ ಅಧಿಪತಿಯನ್ನಾಗಿ ನೆಲೆಗೊಳಿಸಿದನು. ಓ ರಾಜೇಂದ್ರ! ಇದೇ ಅಲ್ಲವೇ ಸತ್ಪುರುಷರ ಸ್ವಭಾವವು!

ಇತ್ಥಂ ಶಕ್ರಸಖಂ ಜಿತ್ವಾ ಪ್ರದ್ಯುಮ್ನಾಯ ಬಲಿಂ ದದೌ ।
ಶಿಬಿರಾಣಾಂ ಸಮೂಹೋಽಭೂದರುಣೋದಾನದೀಮನು ॥ ೨೦ ॥

ಮಹಾಧನಖಚಿದ್ಭಿಶ್ಚ ವಿತಾನೈಃ ಶತಯೋಜನಂ ।
ಪತತ್ಪತಾಕೈರ್ದಿವ್ಯಾಭೈರ್ಭೂರ್ನ್ಯಸ್ತವಿಜಯಧ್ವಜೈಃ ॥ ೨೧ ॥

ವಿರೇಜೇ ಶಿಬಿರವ್ಯೂಹೋ ಲಹರೀಭಿಃ ಪಯೋಽಧಿಃ ।
ಆಕಾಶಾದಾಗತಂ ತತ್ರ ಗಜಾರೂಢಂ ಪುರಂದರಂ ॥ ೨೨ ॥

ಸಸೈನ್ಯಂ ಸಹಸಾ ರಾಜನ್ದುಂದುಭಿಧ್ವನಿಸಂಯುತಂ ।
ಸಂವೀಕ್ಷ್ಯ ವೇಗತೋ ವೀರಾ ಜಗೃಹುಃ ಶಸ್ತ್ರಸಂಹತಿಂ ॥ ೨೩ ॥

---

೨೦. ಈ ರೀತಿಯಾಗಿ ಶಕ್ರಸಖನೆಂಬ ಆ ರಾಜನನ್ನು ಜಯಿಸಿದನಂತರ ಪ್ರದ್ಯುಮ್ನನು ಅರುಣೋದಾ ಎಂಬ ನದಿಯ ಕರೆಯಲ್ಲಿ ಉದ್ದಕ್ಕೂ ತನ್ನ ಸೇನಾ ಶಿಬಿರವನ್ನೇರ್ಪಡಿಸಿದನು.

೨೧. ಆ ನದಿಯ ದಡದಲ್ಲಿ ನೂರು ಯೋಜನಗಳಷ್ಟು ಉದ್ದಕ್ಕೂ ಆ ಶಿಖರಗಳು ಸಾಲುಸಾಲಾಗಿ ಹಬ್ಬಿದ್ದುವು. ಅವು ಒಂದೊಂದೂ ಬಹು ಬೆಲೆಬಾಳುವಂತಹ ರತ್ನಖಚಿತವಾದ ಮೇಲ್ಕಟ್ಟುಗಳಿಂದ ಕಂಗೊಳಿಸುತ್ತಾ ಚಲಿಸುತ್ತಿರುವ ಪತಾಕೆಗಳಿಂದ ರಮಣೀಯವಾಗಿದ್ದುವು. ಅವುಗಳ ಮುಂದೆ ವಿಜಯಸೂಚಕವಾದ ಧ್ವಜಸ್ತಂಭಗಳು ನೆಡೆಸಲ್ಪಟ್ಟಿದ್ದುವು. ಇಂತಹ ಶಿಖರಗಳಿಂದ ನಿಬಿಡವಾದ ಆ ಪ್ರದೇಶವು ಭಾರಿಭಾರಿ ಅಲೆಗಳಿಂದ ತುಂಬಿರುವ ಸಾಗರದಂತೆ ಕಂಗೊಳಿಸುತ್ತಿತ್ತು.

೨೨-೨೩. ಓ ರಾಜೇಂದ್ರ! ಆ ಸಮಯದಲ್ಲಿ ದೇವತೆಗಳ ಅರಸನಾದ ಇಂದ್ರನು ಐರಾವತವನ್ನೇರಿ ಕುಳಿತು ತನ್ನ ಸೈನ್ಯದೊಡನೆ ನಗಾರಿಗಳನ್ನು ಧ್ವನಿಗೈಸುತ್ತಾ ಆ ಸೇನಾಶಿಬಿರಾಭಿಮುಖನಾಗಿ ಆಕಾಶದಿಂದ ಹೊರಟುಬರುತ್ತಿದ್ದನು. ಅದನ್ನು ಕಾಣುತ್ತಲೇ ಆ ಶಿಬಿರದಲ್ಲಿದ್ದ ವೀರರೆಲ್ಲರೂ ತಟ್ಟನೆ ತಮ್ಮತಮ್ಮ ಆಯುಧಗಳನ್ನು ಕೈಗೆ ತೆಗೆದುಕೊಂಡು ಯುದ್ಧಸನ್ನದ್ಧರಾಗಿ ನಿಂತರು.

ಪುನರಿಂದ್ರಂ ಚ ತಂ ಜ್ಞಾತ್ವಾ ಬಭೂವುರ್ಹರ್ಷಿತಾ ನೃಪಾಃ ।
ಶ್ರೀಪ್ರದ್ಯುಮ್ನಂ ಸಭಾಮಧ್ಯೇ ಕಥಯನ್ಮಘವಾ ತದಾ　　|| ೨೪ ||

ಶೃಣು ರಾಜನ್ಮಹಾಬಾಹೋ ತ್ವಂ ಪರಾವರವಿತ್ತಮಃ ।
ಲೀಲಾವತೀ ನಾಮ ಪುರೇ ಶುಭಾ ಹೇಮಾದ್ರಿಸಾನುಷು　　|| ೨೫ ||

ವಿದ್ಯಾಧರೇಶಃ ಸುಕೃತೀ ತತ್ರ ರಾಜ್ಯಂ ಕರೋತಿ ಹಿ ।
ತತ್ಕನ್ಯಾ ಸುಂದರೀ ನಾಮ ಶತಚಂದ್ರನಿಭಾ ಶುಭಾ　　|| ೨೬ ||

ಆಗತಾ ದೇವತಾಃ ಸರ್ವಾಸ್ತಸ್ಯಾ ರಾಜನ್ಸ್ವಯಂವರೇ ।
ಲೋಕಪಾಲಾಸ್ತಥಾ ಸರ್ವೇ ಸಂಪ್ರಾಪ್ತಾ ದಿವ್ಯವಿಗ್ರಹಾಃ　　|| ೨೭ ||

---

೨೪. ಮರುಗಳಿಗೆಯಲ್ಲೇ ಆತನು ಇಂದ್ರನೆಂದು ತಿಳಿದು ಆ ವೀರರೆಲ್ಲರೂ ಯುದ್ಧೋದ್ಯಮವನ್ನು ಬಿಟ್ಟು ಬಹುವಾಗಿ ಸಂತೋಷವನ್ನು ತಾಳಿದರು. ಆಗ ಇಂದ್ರನು ಯಾದವ ಸಭೆಯನ್ನು ಪ್ರವೇಶಿಸಿ ಅಲ್ಲಿ ಮಂಡಿಸಿದ್ದ ಪ್ರದ್ಯುಮ್ನನನ್ನು ಕುರಿತು ಈ ರೀತಿಯಾಗಿ ನುಡಿದನು.

೨೫. ಓ ರಾಜೇಂದ್ರ ! ನೀನು ಎಲ್ಲವನ್ನೂ ಬಲ್ಲವನು. ಆದರೂ ನನ್ನೀ ಮಾತನ್ನು ಆಲಿಸು. ಮೇರುಪರ್ವತದ ತಪ್ಪಲಿನಲ್ಲಿ ಲೀಲಾವತಿಯೆಂಬ ಶುಭಕರವಾದ ನಗರವೊಂದಿರುವುದು.

೨೬. ಅಲ್ಲಿ ವಿದ್ಯಾಧರಾಧಿಪತಿಯಾದ ಸುಕೃತಿಯೆಂಬವನು ರಾಜ್ಯವಾಳುತ್ತಿರುವನು. ಆತನಿಗೆ ತನ್ನ ಮುಖಸೌಂದರ್ಯದಿಂದ ನೂರುಮಂದಿ ಚಂದ್ರರನ್ನೂ ಮೀರಿಸುವಂತಹ ಮಂಗಳಾಂಗಿಯಾದ ಸುಂದರಿಯೆಂಬ ಮಗಳೊಬ್ಬಳಿರುವಳು.

೨೭. ಆಕೆಯ ಸ್ವಯಂವರಕ್ಕಾಗಿ ಈಗ ಆ ಲೀಲಾವತೀ ನಗರಕ್ಕೆ ಎಲ್ಲ ದೇವತೆಗಳೂ, ಲೋಕಪಾಲಕರೂ ದಿವ್ಯವಾದ ದೇಹಗಳನ್ನು ಧರಿಸಿ ಬಂದಿರುವರು.

ಯಂ ದೃಷ್ಟ್ವಾ ಮೂರ್ಛಿತಾಹಂ ಸ್ಯಾಂ ಸ ಮೇ ಭರ್ತಾ ಭವಿಷ್ಯತಿ ।
ಗಿರೇತ್ಯೇವಂ ಪ್ರಜಲ್ಪಂತೀ ಸುಂದರಂ ವರಮಿಚ್ಛತೀ ॥ ೨೮ ॥

ತತ್ರಾಪಿ ಗಚ್ಛ ಸಹಸಾ ಭ್ರಾತೃಭಿಃ ಸಹ ಕೌತುಕೇ ।
ಸ್ವಯಂವರಂ ಪಶ್ಯ ವರಂ ದೇವಲೋಕೈಶ್ಚ ಮಂಡಿತಂ ॥ ೨೯ ॥

॥ ಶ್ರೀ ನಾರದ ಉವಾಚ ॥

ತಚ್ಛ್ರುತ್ವಾ ಭಗವಾನ್ಕಾರ್ಷ್ಣಿರ್ಯಾದವೈರ್ಭ್ರಾತೃಭಿಃ ಸಹ ।
ಪುರಂದರೇಣ ಸಹಸಾ ಪುರೀಂ ಲೀಲಾವತೀಂ ಯಯೌ ॥ ೩೦ ॥

ವಿಶಾಲಾಜಿರಸಂಯುಕ್ತೇ ಖಚಿದ್ರತ್ನಮನೋಹರೇ ।
ಚಂದನಾಗರುಕಸ್ತೂರೀಕುಂಕುಮದ್ರವಚರ್ಚಿತೇ ॥ ೩೧ ॥

---

೨೮. ಆ ಸುಂದರಿಯೆಂಬ ರಾಜಕನ್ಯೆಯು ಯಾರನ್ನು ನೋಡಿದೊಡನೆಯೇ ಸೌಂದರ್ಯಕ್ಕೆ ಮನಸೋತು ನಾನು ಮೂರ್ಛಿತಳಾಗಿಬಿಡುವೆನೋ ಆ ಸುಂದರನೇ ನನಗೆ ಪತಿಯಾಗುವನು. (ಆ ಸುಂದರನನ್ನೇ ಮದುವೆಯಾಗುವೆನು.) ಎಂಬುದಾಗಿ ಹೇಳಿ ಆ ಸ್ವಯಂವರವನ್ನು ಏರ್ಪಡಿಸಿರುವಳು.

೨೯. ಈ ಕುತೂಹಲಕರವಾದ ಸ್ವಯಂವರವನ್ನು ನೋಡಲೋಸುಗ ನೀನೂ ಸಹ ನಿನ್ನ ಸಹೋದರರೊಡನೆ ದೇವತೆಗಳಿಂದ ನಿಬಿಡವಾದ ಆ ಸ್ವಯಂವರಮಂಟಪಕ್ಕೆ ದಯಮಾಡಿಸು ಎಂದನು.

೩೦. ರಾಜೇಂದ್ರ ! ಇಂದ್ರನು ಈ ರೀತಿ ಹೇಳಿದುದನ್ನು ಕೇಳಿ ಆ ಪ್ರದ್ಯುಮ್ನನು ತನ್ನ ಸಹೋದರರೊಡನೆಯೂ, ಇತರ ಯದುವೀರರೊಡನೆಯೂ ಸೇರಿ ಇಂದ್ರನೊಂದಿಗೆ ಆ ಲೀಲಾವತೀನಗರಕ್ಕೆ ಹೊರಟುಬಂದನು.

೩೧. ಅಲ್ಲಿ ವಿಶಾಲವಾದ ಸ್ವಯಂವರ ಮಂಟಪವು ನಿರ್ಮಿಸಲ್ಪಟ್ಟಿತ್ತು. ಆ ಮಂಟಪದಲ್ಲಿ ರತ್ನಗಳಿಂದಲೇ ಮನೋಹರವಾದ ಕೆತ್ತನೆಯ ಕೆಲಸವನ್ನು ಮಾಡಿದ್ದರು. ಅಲ್ಲೆಲ್ಲಾ ಗಂಧದ ನೀರನ್ನೂ, ಅಗುರು, ಕಸ್ತೂರಿ, ಕೇಸರಿ, ಇವುಗಳಿಂದ ಸುವಾಸಿತವಾದ ಜಲವನ್ನು ಚೆನ್ನಾಗಿ ಚುಮುಕಿಸಿದ್ದರು.

ಮುಕ್ತಾಯುಕ್ತೈಸ್ತೋರಣೈಶ್ಚ ವಿತಾನೈಃ ಸುಮಹಾಧನೈಃ ।
ಜಾಂಬೂನದಾಸನೈಃ ಸಾಕ್ಷಾದಿಂದ್ರಲೋಕ ಇವಾಪರೇ ॥ ೩೨ ॥

ತಸ್ಮಿನ್ಸ್ವಯಂವರೇ ತಸ್ಥೌ ಪ್ರದ್ಯುಮ್ನೋ ದಿವ್ಯ ಆಸನೇ ।
ಗಿರಿಶೃಂಗೇ ಯಥಾ ಶೃಂಗಂ ಸರ್ವೇಷಾಂ ಪಶ್ಯತಾಂ ನೃಪ ॥ ೩೩ ॥

ಪ್ರಜೇಶಾ ಮುನಯಸ್ತತ್ರ ದೇವಾ ರುದ್ರಗಣಾಸ್ತಥಾ ।
ಮರುತೋ ರವಯಶ್ಚೈವ ವಸವೋ ಹ್ಯಗ್ನಯೋಽಶ್ವಿನೌ ॥ ೩೪ ॥

ಯಮೋಽಥ ವರುಣಃ ಸೋಮೋ ಧನದಃ ಶಕ್ರ ಏವ ಹಿ ।
ಸಿದ್ಧಾ ವಿದ್ಯಾಧರಾಶ್ಚೈವ ಗಂಧರ್ವಾಃ ಕಿನ್ನರಾಸ್ತಥಾ ॥ ೩೫ ॥

---

೩೨. ಆ ಮಂಟಪದ ಮೇಲ್ಭಾಗದಲ್ಲಿ ಅಂದವಾಗಿ ಮುತ್ತಿನ ಜಾಲರಿಗಳೂ, ತೋರಣಗಳೂ ಬಹು ಬೆಲೆಬಾಳುವಂತಹ ಮೇಲುಕಟ್ಟುಗಳೂ ರಚಿಸಲ್ಪಟ್ಟಿದ್ದುವು. ಆ ಸಭಾಂಗಣದಲ್ಲಿ ಸ್ವರ್ಣನಿರ್ಮಿತವಾದ ಪೀಠಗಳು ವಿರಾಜಿಸುತ್ತಿದ್ದುವು. ಈ ರೀತಿಯಾಗಿ ಅಲಂಕರಿಸಲ್ಪಟ್ಟಿದ್ದ ಆ ಸ್ವಯಂವರ ಮಂಟಪವು ಎರಡನೆಯ ಇಂದ್ರಲೋಕವೋ ಎನ್ನುವಂತೆ ಕಂಗೊಳಿಸುತ್ತಿತ್ತು.

೩೩. ಇಂತಹ ಆ ಸ್ವಯಂವರ ಮಂಟಪವನ್ನು ಪ್ರದ್ಯುಮ್ನನು ಪ್ರವೇಶಿಸಿ ಅಲ್ಲಿದ್ದವರು ನೋಡುತ್ತಿರುವಂತೆಯೇ ಉತ್ತಮವಾದ ಪೀಠವೊಂದರಲ್ಲಿ ಪರ್ವತಶಿಖರದಲ್ಲಿ ಬೇರೊಂದು ಶಿಖರವು ಬಂದು ಕುಳಿತುಕೊಳ್ಳುವಂತೆ ಕುಳಿತುಕೊಂಡನು.

೩೪–೩೫. ರಾಜೇಂದ್ರ! ಆ ಸ್ವಯಂವರಕ್ಕೆಂದು ಪ್ರಜಾಧಿಪತಿಗಳೂ, ಮಹರ್ಷಿಗಳೂ, ದೇವತೆಗಳೂ, ಏಕಾದಶರುದ್ರರೂ, ಸಪ್ತಮರುತ್ತುಗಳೂ, ದ್ವಾದಶಾದಿತ್ಯರೂ, ಅಷ್ಟವಸುಗಳೂ, ತ್ರೇತಾಗ್ನಿಗಳೂ, ಅಶ್ವಿನೀದೇವತೆಗಳೂ, ಯಮ, ವರುಣ, ಚಂದ್ರ, ಕುಬೇರರೂ, ಇಂದ್ರನೂ, ಸಿದ್ಧರೂ, ವಿದ್ಯಾಧರರೂ, ಗಂಧರ್ವರೂ ಕಿನ್ನರರೂ, ಇನ್ನೂ ಇತರರೂ ಎಲ್ಲರೂ,

ಅನ್ಯೇ ತಮಾಗತಾಃ ಸರ್ವೇ ರತ್ನಾಭರಣಭೂಷಿತಾಃ।
ಜಹುರ್ವೈವಾಹಿಕೀಮಾಶಾಂ ಪ್ರದ್ಯುಮ್ನಂ ವೀಕ್ಷ್ಯ ಮೈಥಿಲ ॥ ೩೬ ॥

ಸಾ ಸುಂದರೀ ತತ್ರ ಸುರತ್ನಮಾಲಯಾ
ರತಿಂ ಚ ರಂಭಾಂ ಕ್ಷಿಪತೀವ ನಿರ್ಗತಾ।
ವಾಣೀಂ ರಮಾಂ ರೂಪವತೀಂ ಪುಲೋಮಜಾಂ
ವಿಡಂಬಯಂತೀವ ಬಭೌ ವರಾಂಗನಾ ॥ ೩೭ ॥

ಯಾಂ ವೀಕ್ಷ್ಯ ಸರ್ವೇಷು ಸದಃ ಸುಸರ್ವತೋ
ಮೋಹಂ ಪ್ರಯಾತೇಷು ತಥೈವ ಮೈಥಿಲ।
ಶ್ರೀಃ ಸರ್ವಲೋಕಸ್ಯ ಚ ಪಶ್ಯತೋ ವರಂ
ವಿಚಿನ್ವತೀ ಸಾ ಚಪಲೇವ ಚಾಂಬುದಂ ॥ ೩೮ ॥

---

೩೬. ಮನೋಹರವಾದ ರತ್ನಾಭರಣಗಳಿಂದ ಅಲಂಕೃತರಾಗಿ ಅಲ್ಲಿ ಬಂದು ಸೇರಿದ್ದರು. ಓ ಮಿಥಿಲಾನರಾಧೀಶ ! ಅವರೆಲ್ಲರೂ ಪ್ರದ್ಯುಮ್ನನನ್ನು ಕಂಡೊಡನೆಯೇ ಆ ವಿದ್ಯಾಧರ ರಾಜಪುತ್ರಿಯು ತಮ್ಮನ್ನು ಮದುವೆಯಾಗುವಳೆಂಬ ಆಶೆಯನ್ನು ತೊರೆದುಬಿಟ್ಟರು.

೩೭. ಅಷ್ಟು ಹೊತ್ತಿಗೆ ಆ ರಾಜಕನ್ಯೆಯು ಕೈಯಲ್ಲಿ ರತ್ನಖಚಿತವಾದ ಹಾರವೊಂದನ್ನು ಹಿಡಿದು ಅತಿಶಯವಾದ ರೂಪವುಳ್ಳವರೆಂದು ಪ್ರಖ್ಯಾತರಾದ ರತಿ, ರಂಭೆ ಲಕ್ಷ್ಮಿ, ಸರಸ್ವತಿ, ಶಚಿ ಮೊದಲಾದ ದೇವಾಂಗನೆಯರನ್ನು ಹೀಯಾಳಿಸುತ್ತಿರುವಳೋ ಎನ್ನುವಂತೆ ಹೊರಟುಬಂದು ಆ ಸ್ವಯಂವರ ಮಂಟಪವನ್ನು ಪ್ರವೇಶಿಸಿದಳು.

೩೮. ಆ ರಾಜಪುತ್ರಿಯನ್ನು ನೋಡುತ್ತಲೇ ಆ ಸ್ವಯಂವರ ಮಂಟಪದಲ್ಲಿ ಮಂಡಿಸಿದ್ದ ಸಭಾಸದರೆಲ್ಲರೂ ಅವಳ ಸೌಂದರ್ಯದಿಂದ ಪರವಶರಾಗಿ ಮೂರ್ಛಿತರಾಗಿಬಿಟ್ಟರು. (ಮೈಮರೆತರು). ಆಗ ಸಕಲಲೋಕದ ಸೌಭಾಗ್ಯದೇವತೆಯಂತಿದ್ದ ಆ ರಾಜಕುಮಾರಿಯು ಮೇಘವನ್ನು ಹುಡುಕಿಕೊಂಡು ಹೋಗುವ ಮಿಂಚಿನಂತೆ ತನಗೆ ಅನುರೂಪನಾದ ವರನನ್ನು ಹುಡುಕುತ್ತಾ ಆ ಸಭಾಂಗಣದಲ್ಲಿ ಮೆಲ್ಲಮೆಲ್ಲನೆ ಬರುತ್ತಿದ್ದಳು.

ದಿವ್ಯಾಂಬರಂ ಪದ್ಮದಳಾಯತೇಕ್ಷಣಂ
ಪ್ರದ್ಯುಮ್ನವೀರಂ ನರಲೋಕಸುಂದರಂ ।
ಸಮೇತ್ಯ ಮೂರ್ಚ್ಛಾಂ ಸಮವಾಪ ಸುಂದರೀ
ವಿದ್ಯಾಧರೀ ಸಾ ಪುನರಾಪ ಸಂಜ್ಞಾಂ ॥ ೩೯ ॥

ಸಮುತ್ಥಿತಾ ಸಾ ತ್ವತಿಹರ್ಷವಿಹ್ವಲಾ
ತಸ್ಥೌ ಸುಮಾಲಾಂ ವಿನಿಧಾಯ ತದ್ಗಲೇ ।
ವಿದ್ಯಾಧರೇಶಃ ಸುಕೃತೀ ಚ ಸುಂದರೀಂ
ಸುತಾಂ ದದೌ ಮೈಥಿಲ ಶಂಬರಾರಯೇ ॥ ೪೦ ॥

ನದತ್ಸು ತೂರ್ಯೇಷು ತದೈವ ನಿರ್ಜರಾ
ನ ಸೇಹಿರೇ ವೀಕ್ಷ್ಯ ವಿವಾಹಮಂಗಲಂ ।
ತಂ ಸರ್ವತಃ ಸಂರುರುಧುಃ ಸ್ವಯಂವರಂ
ಪ್ರಚಂಡಮೇಘಾ ಇವ ಭಾಸ್ಕರಂ ಪರಂ ॥ ೪೧ ॥

---

೩೯. ಹಾಗೆ ಎಲ್ಲರನ್ನೂ ನೋಡುತ್ತಾ ಬರುತ್ತಿದ್ದ ಆ ವಿದ್ಯಾಧರ ರಾಜನಂದಿನಿಯು ದಿವ್ಯವಾದ ಪೀತಾಂಬರದಿಂದಲೂ, ಕಮಲದಳದಂತೆ ವಿಶಾಲವಾದ ರೂಪವಂತನೆಂದು ಪ್ರಖ್ಯಾತಿಹೊಂದಿದ್ದ ಆ ಪ್ರದ್ಯುಮ್ನನ ಮುಂದೆ ಬಂದು ನಿಲ್ಲುತ್ತಲೇ ಆತನ ಸೌಂದರ್ಯಕ್ಕೆ ಮನಸೋತು ಮೂರ್ಛಿತಳಾಗಿಬಿಟ್ಟಳು. ಅನಂತರ ಆ ಕುಮಾರಿಯು ಸ್ವಲ್ಪ ಹೊತ್ತಿನಲ್ಲಿಯೇ ಎಚ್ಚೆತ್ತವಳಾಗಿ,

೪೦. ಮಿತಿಮೀರಿದ ಹರ್ಷದಿಂದ ಆ ಪ್ರದ್ಯುಮ್ನನ ಕುತ್ತಿಗೆಯಲ್ಲಿ ತನ್ನ ಕೈಲಿದ್ದ ರತ್ನಹಾರವನ್ನು ಹಾಕಿದಳು. ಎಲೈ ಭಕ್ತಾಗ್ರೇಸರನಾದ ಮಿಥಿಲಾಧೀಶನೇ! ಅನಂತರ ವಿದ್ಯಾಧರಾಧೀಶ್ವರನಾದ ಆ ಸುಕೃತಿಯು ತನ್ನ ಪುತ್ರಿಯಾದ ಸುಂದರಿಯನ್ನು ಪ್ರದ್ಯುಮ್ನಕುಮಾರನಿಗಿತ್ತು ಮದುವೆಮಾಡಿದನು.

೪೧. ಆ ಸಂದರ್ಭದಲ್ಲಿ ಸಂತೋಷಸೂಚಕವಾಗಿ ವಿಧವಿಧವಾದ ವಾದ್ಯಗಳು ಸಂಭ್ರಮದಿಂದ ಮೊಳಗಿದುವು. ಆ ಮಂಗಲಕರವಾದ ವಿವಾಹಸಂಭ್ರಮವನ್ನು ಕಂಡು ದೇವತೆಗಳೆಲ್ಲರೂ ವಿಶೇಷವಾಗಿ ಕೋಪವನ್ನು ವಹಿಸಿ ಸೂರ್ಯನನ್ನು ಮುಚ್ಚಲು ಮುತ್ತಿಬರುವ ಭಾರಿ ಭಾರಿ ಮೋಡಗಳಂತೆ ಆ ಪ್ರದ್ಯುಮ್ನನ ಸುತ್ತಲೂ ಮುತ್ತಲು ಬರತೊಡಗಿದರು.

ಕ್ರೋಧಾವೃತಾಂಸ್ತಾನಸುರಾನ್ಧನುರ್ಧರಾ-
ನ್ಮದೋದ್ಧತಾನ್ವೀಕ್ಷ್ಯ ಹರೇಃ ಸ್ವಯಂವರಂ ।
ಶ್ರೀಕೃಷ್ಣದತ್ತಂ ಸಶರಂ ಧನುಃ ಸ್ವಯಂ
ವರಂ ಗೃಹೀತ್ವಾ ಯದುಭಿರ್ಜಗರ್ಜ ಹ ॥ ೪೨ ॥

ತಚ್ಚಾಪಮುಕ್ತೈರ್ವಿಶಿಖೈಃ ಸ್ಫುರತ್ಪ್ರಭೈ-
ಶ್ಛಿತ್ವಾಯುಧಾ ನ್ಯೈಥಿಲ ಶೀರ್ಣಕಂಚುಕಾಃ ।
ವಿದುದ್ರುವುಸ್ತೇ ದಿಶೋ ದಶಾಸುರಾ
ನೀಹಾರಮೇಘಾ ಇವ ಸೂರ್ಯರಶ್ಮಿಭಿಃ ॥ ೪೩ ॥

ಪ್ರದ್ಯುಮ್ನೋ ಭಗವಾನ್ಸಾಕ್ಷಾದಿತ್ಥಂ ಜಿತ್ವಾ ಸ್ವಯಂವರಂ ।
ವಿಜಿತ್ಯೇಲಾವೃತಂ ಖಂಡಂ ಭಾರತಂ ಗಂತುಮುದ್ಯತಃ ॥ ೪೪ ॥

---

೪೨. ಈ ರೀತಿಯಾಗಿ ದೇವತೆಗಳೆಲ್ಲರೂ ಕೋಪಾಕ್ರಾಂತರಾಗಿ ಧನುಸ್ಸುಗಳನ್ನು ಪಿಡಿದು ತನ್ನ ಮೇಲೇರಿ ಬರುತ್ತಿರುವುದನ್ನು ಕಂಡು ಸಾಕ್ಷಾತ್ ಶ್ರೀಹರಿ ಸ್ವರೂಪನಾದ ಆ ಪ್ರದ್ಯುಮ್ನನು ಆ ಮದಾಂಧರನ್ನು ನಿಗ್ರಹಿಸಲೋಸುಗ ಶ್ರೀಕೃಷ್ಣ ದತ್ತವಾದ ಧನುರ್ಬಾಣಗಳನ್ನು ಕೈಗೆ ತೆಗೆದುಕೊಂಡು ತನ್ನ ಕಡೆಯ ಯದುವೀರರೊಡನೆ ಯುದ್ಧಸನ್ನದ್ಧನಾಗಿ ಒಂದು ಬಾರಿ ಸಿಂಹನಾದವಾಡಿದನು.

೪೩. ಅನಂತರ ಆ ವೀರನು ತನ್ನ ಬಿಲ್ಲಿನಲ್ಲಿ ಚೂಪಾದ ಅಲುಗುಗಳಿಂದ ಥಳಥಳಿಸುತ್ತಿರುವ ಬಾಣಗಳನ್ನು ಹೂಡಿ ಪ್ರಯೋಗಿಸುತ್ತಾ ಶತ್ರುಗಳು ಧರಿಸಿದ್ದ ಆಯುಧಗಳನ್ನೂ, ತೊಟ್ಟಿದ್ದ ಕವಚಗಳನ್ನೂ ಚೂರುಚೂರಾಗಿ ಕತ್ತರಿಸಿಬಿಟ್ಟನು. ಈ ರೀತಿ ಪರಾಭವಕ್ಕೀಡಾದ ಆ ದೇವತೆಗಳು ಸೂರ್ಯರಶ್ಮಿಗೆ ಸಿಕ್ಕಿ ಚೆದುರಿ ಹೋಗುವ ಮಂಜಿನ ಮೋಡಗಳಂತೆ ಹೆದರಿಕೆಯಿಂದ ತಲ್ಲಣಿಸುತ್ತಾ ದಿಕ್ಕುದಿಕ್ಕಿಗೆ ಚೆದುರಿ ಓಡಿಹೋದರು.

೪೪. ರಾಜೇಂದ್ರ ! ಈ ರೀತಿಯಾಗಿ ಆ ಪ್ರದ್ಯುಮ್ನನು ಸ್ವಯಂವರದ ಯುದ್ಧಸಂದರ್ಭದಲ್ಲಿ ಜಯಶೀಲನಾದನು. ಹೀಗೆ ಇಲಾವೃತಖಂಡವೆಲ್ಲವೂ ತನ್ನಿಂದ ಗೆಲ್ಲಲ್ಪಟ್ಟನಂತರ ಆ ಪ್ರದ್ಯುಮ್ನನು ಭರತಖಂಡಕ್ಕೆ ಅಭಿಮುಖವಾಗಿ ಪ್ರಯಾಣ ಮಾಡಲೆಳಸಿ,

ಭ್ರಾತೃಭಿರ್ಯದುಭಿಃ ಸೈನ್ಯೈಃ ಸರ್ವಮಂತ್ರಿಜನೈಃ ಸಹ ।
ಆಯಯೌ ಭಾರತಂ ಖಂಡಂ ನಾದಯನ್ಜಯದುಂದುಭೀನ್ || ೪೫ ||

ಪಶ್ಯನ್ದೇಶಾನನೇಕಾಂಶ್ಚ ಜಂಬೂದ್ವೀಪಜಯೋ ಬಲೀ ।
ಆನರ್ತಾನ್ದ್ವಾರಕಾನ್ದೇಶಾನ್ಪ್ರಾಪ್ತೋಽಭೂತ್ಸ ಹರೇಃ ಸುತಃ || ೪೬ ||

ಪ್ರದ್ಯುಮ್ನಪ್ರೇಷಿತಃ ಸಾಕ್ಷಾದುದ್ಧವೋ ಬುದ್ಧಿಸತ್ತಮಃ ।
ಪ್ರಣನಾಮೋಗ್ರಸೇನಂ ತಂ ಸಭಾಯಾಂ ಶ್ರೀಹರಿಂ ಬಲೀ || ೪೭ ||

ವರ್ಷೇ ವರ್ಷೇಽಪಿ ಯುಜ್ಜಾತಂ ಜಂಬುದ್ವೀಪಜಯಂ ತಥಾ ।
ತತ್ಸರ್ವಂ ಹಿ ಯಥಾಯೋಗ್ಯಂ ಕಥಯಾಮಾಸ ಚೋದ್ಧವಃ || ೪೮ ||

ಶ್ರೀಕೃಷ್ಣಬಲದೇವಾಭ್ಯಾಂ ಸರ್ವೈರ್ವೃದ್ಧಜನೈಃ ಸಹ ।
ಪ್ರದ್ಯುಮ್ನಂ ತಂ ಸಮಾನೇತುಮುಗ್ರಸೇನೋ ವಿನಿರ್ಗತಃ || ೪೯ ||

---

೪೫. ತನ್ನ ಸಹೋದರರೊಡನೆಯೂ, ಯಾದವವೀರರೊಡನೆಯೂ, ಸೇನೆಗಳೊಡನೆಯೂ, ಎಲ್ಲ ಮಂತ್ರಿಗಳೊಡನೆಯೂ ಹೊರಟು ವಿಜಯಸೂಚಕವಾದ ನಗಾರಿಗಳನ್ನು ಧ್ವನಿಗೈಸುತ್ತಾ ಭಾರತಖಂಡಕ್ಕೆ ಬಂದನು.

೪೬. ಹಾಗೆ ಬರುವಾಗ ಆ ಬಲಶಾಲಿಯು ಜಂಬೂದ್ವೀಪದಲ್ಲಿ ಅನೇಕವಾದ ದೇಶಗಳನ್ನು ನೋಡುತ್ತಾ ಕೊನೆಗೆ ಆನರ್ತದೇಶವನ್ನು ಸೇರಿ ಅಲ್ಲಿಂದ ದ್ವಾರಕಾ ನಗರದ ಬಳಿಗೆ ಬಂದನು.

೪೭. ಆಗ ಮಂತ್ರಿಶ್ರೇಷ್ಠನಾದ ಉದ್ಧವನು ಪ್ರಭುವಾದ ಪ್ರದ್ಯುಮ್ನನ ಅಪ್ಪಣೆಯಂತೆ ಎಲ್ಲರಿಗಿಂತಲೂ ಮುಂಚಿತವಾಗಿ ದ್ವಾರಕಾನಗರಿಯನ್ನು ಪ್ರವೇಶಿಸಿ ಅಲ್ಲಿ ರಾಜಸಭೆಯಲ್ಲಿ ಮಂಡಿಸಿದ್ದ ಉಗ್ರಸೇನನಿಗೆ ನಮಸ್ಕರಿಸಿ,

೪೮. ಜಂಬೂದ್ವೀಪದಲ್ಲಿ ಭಾರತವೇ ಮೊದಲಾದ ಸಕಲ ವರ್ಷಗಳಲ್ಲಿಯೂ ತಮಗೆ ದೊರೆತ ವಿಜಯವನ್ನು ಉಚಿತ ಮಾತುಗಳಲ್ಲಿ ತಿಳಿಸಿದನು.

೪೯. ಈ ಪ್ರಿಯವಾಕ್ಯಗಳನ್ನು ಕೇಳಿದೊಡನೆಯೇ ಆ ಉಗ್ರಸೇನ ರಾಜೇಂದ್ರನು ಶ್ರೀಕೃಷ್ಣ ಬಲರಾಮರೊಡನೆಯೂ, ಇನ್ನೂ ಇತರ ಹಿರಿಯರೊಡನೆಯೂ ಸೇರಿ ಪ್ರದ್ಯುಮ್ನನನ್ನು ಕರೆತರಲು ಹೊರಟನು.

ಗೀತವಾದಿತ್ರಘೋಷೇಣ ಬ್ರಹ್ಮಘೋಷೇಣ ಭೂಯಸಾ ।
ಮುಕ್ತಾವರ್ಷೈರ್ಲಾಜಪುಷ್ಪೈಃ ಪಾಠಾರಾವೈಃ ಸುಮಂಗಲೈಃ ॥ ೫೦ ॥

ವಾರಣೇಂದ್ರಂ ಪುರಸ್ಕೃತ್ಯ ಸೌವರ್ಣೈಃ ಕಲಶೈರ್ನೃಪ ।
ಗಂಧರ್ವೈರ್ವಾರಮುಖ್ಯಾಭಿಃ ಶಂಖದುಂದುಭಿವೇಣುಭಿಃ ॥ ೫೧ ॥

ಗಂಧಾಕ್ಷತೈರ್ಹೇಮಪಾತ್ರೈಃ ಪುಷ್ಪಧೂಪೈರ್ಯವಾಂಕುರೈಃ ।
ಉಗ್ರಸೇನಃ ಶಂಬರಾರೇಃ ಸಂಮುಖಂ ಚಾಜಗಾಮ ಹ ॥ ೫೨ ॥

ಖಡ್ಗಂ ನೀತ್ವೋಗ್ರಸೇನಸ್ಯ ಪುರೋ ಧೃತ್ವಾ ಕೃತಾಂಜಲಿಃ ।
ನನಾಮ ಕಾರ್ಷ್ಣಿರ್ಯದುಭಿರ್ಭ್ರಾತೃಭಿಃ ಸಹ ಮೈಥಿಲ ॥ ೫೩ ॥

---

೫೦. ಅವರ ಮುಂದುಗಡೆ ಅನೇಕ ಮಂದಿ ಮಂಗಲಕರವಾದ ಗೀತಗಳನ್ನು ಹಾಡುತ್ತಾ ವಿಧವಿಧವಾದ ವಾದ್ಯಗಳನ್ನು ನುಡಿಸುತ್ತಿದ್ದರು. ಕೆಲವರು ವೇದಗಳನ್ನು ಪಾರಾಯಣಮಾಡುತ್ತಿದ್ದರು. ಮತ್ತೆ ಕೆಲವರು ಮಂಗಲಕರವಾಗಿ ಸ್ತುತಿ ಪಾಠಗಳನ್ನು ಮಾಡುತ್ತಿದ್ದರು. ಮತ್ತೆ ಕೆಲವರು ಮುತ್ತುಗಳನ್ನೂ, ಅರಳುಗಳನ್ನೂ, ಹೂವುಗಳನ್ನು ಎರಚುತ್ತಿದ್ದರು.

೫೧-೫೨. ಇವರ ಹಿಂದೆ ಮಂಗಲಸೂಚಕವಾದ ಮದ್ದಾನೆಯನ್ನು ಮುಂದಿಟ್ಟು ಕೊಂಡು ಕೈಯಲ್ಲಿ ಚಿನ್ನದ ಕಲಶಗಳನ್ನೂ, ಗಂಧ, ಅಕ್ಷತೆಗಳನ್ನೊಳಗೊಂಡ ಚಿನ್ನದ ಹರಿವಾಣಗಳನ್ನೂ, ಪುಷ್ಪಗಳನ್ನೂ, ಧೂಪದದಾನಿಗಳನ್ನೂ ಜವೆಗೋಧಿಯ ತೆನೆ ಗಳನ್ನೂ ಪಿಡಿದಿರುವ ಪರಿಜನರೂ, ವಾರಾಂಗನೆಯರೂ, ಶುಭಸೂಚಕವಾದ ಕುದುರೆ ಗಳೂ, ಶಂಖ, ದುಂದುಭಿ, ವೇಣು, ಮೊದಲಾದ ಮಂಗಲವಾದ್ಯಗಳನ್ನು ನುಡಿಸುವ ವಾದ್ಯಗಾರರೂ ಬರುತ್ತಿದ್ದರು. ಈ ರೀತಿಯಾಗಿ ಯಾದವರಾಜನಾದ ಆ ಉಗ್ರಸೇನನು ಮಹಾವೈಭವದಿಂದ ಪ್ರದ್ಯುಮ್ನನಿಗೆದುರಾಗಿ ಬಂದನು.

೫೩. ಅವನನ್ನು ಕಾಣುತ್ತಲೇ ಪ್ರದ್ಯುಮ್ನನು ಝುಗ್ಗನೆದ್ದು ಅವನೆದುರು ಕತ್ತಿಯನ್ನು ಹಿಡಿದು ಮುಂದಿಟ್ಟು ಬದ್ಧಾಂಜಲಿಯಾಗಿ ತನ್ನ ತಮ್ಮಂದಿರೊಡನೆಯೂ, ಇತರ ಯದುವೀರರೊಡನೆಯೂ ನಮಸ್ಕಾರಮಾಡಿದನು.

ಶ್ರೀಕೃಷ್ಣಂ ಸಬಲಂ ನತ್ವಾ ಸರ್ವಾನ್ವೃದ್ಧಾನ್ಪ್ರಣಮ್ಯ ಚ ।
ಗರ್ಗಾಚಾರ್ಯಂ ನನಾಮಾಶು ಪ್ರದ್ಯುಮ್ನೋ ಮೀನಕೇತನಃ ॥ ೫೪ ॥

ಸಂಶ್ಲಾಘ್ಯಾಭ್ಯರ್ಚ್ಯ ವಿಧಿವದ್ಬ್ರಾಹ್ಮಣೈರ್ವೇದಸೂಕ್ತಿಭಿಃ ।
ಆರೋಪ್ಯ ವಾರಣೇ ಕಾರ್ಷ್ಣಿಮುಗ್ರಸೇನಃ ಪುರೀಂ ಯಯೌ ॥ ೫೫ ॥

ಮಂಗಲಂ ದ್ವಾರಕಾಯಾಂ ಚ ಸರ್ವತ್ರಾಭೂದ್ಗೃಹೇ ಗೃಹೇ ।
ಇತ್ಥಂ ನೃಪ ತೇ ಕಥಿತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೫೬ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ
ಸಂವಾದೇ ಪ್ರದ್ಯುಮ್ನದ್ವಾರಕಾಗಮನಂ
ನಾಮಾಷ್ಟಚತ್ವಾರಿಂಶೋಽಧ್ಯಾಯಃ

---

೫೪. ಅನಂತರ ಆ ಪ್ರದ್ಯುಮ್ನನು ಶ್ರೀಕೃಷ್ಣನನ್ನೂ, ಬಲರಾಮನನ್ನೂ ನಮಸ್ಕರಿಸಿದ ಬಳಿಕ ಹಿರಿಯರೆಲ್ಲರನ್ನೂ ಅಭಿವಂದಿಸಿ ತಮ್ಮ ಕುಲಗುರುವಾದ ಗರ್ಗಾಚಾರ್ಯರನ್ನು ನಮಸ್ಕರಿಸಿದನು.

೫೫. ಆಗ ಯಾದವಪ್ರಭುವಾದ ಉಗ್ರಸೇನನು ಆ ಪ್ರದ್ಯುಮ್ನನನ್ನು ಬಹುವಾಗಿ ಕೊಂಡಾಡಿ ಆತನಿಗೆ ಬ್ರಾಹ್ಮಣರ ಮುಖದಿಂದ ಮಂತ್ರಪೂರ್ವಕವಾಗಿ ಶುಭಕರವಾದ ಆಶೀರ್ವಾದವನ್ನು ಮಾಡಿಸಿದನಂತರ ವಿಧಿವತ್ತಾಗಿ ಸತ್ಕಾರವನ್ನು ಮಾಡಿ, ಆನೆಯ ಮೇಲೆ ಆತನನ್ನು ಕುಳ್ಳಿರಿಸಿಕೊಂಡು ದ್ವಾರಕಾನಗರವನ್ನು ಪ್ರವೇಶಿಸಿದನು

೫೬. ಆ ಸಂದರ್ಭದಲ್ಲಿ ದ್ವಾರಕಾನಗರಿಯ ನಿವಾಸಿಗಳು ಮನೆಮನೆಯಲ್ಲೂ ಮಂಗಲಕರವಾದ ಉತ್ಸವವನ್ನು ಆಚರಿಸಿದರು. ಓ ರಾಜೇಂದ್ರ! ಈ ರೀತಿಯಾಗಿ ನಿನಗೆ ಎಲ್ಲವನ್ನೂ ತಿಳಿಸಿದುದಾಯಿತು. ಇದರ ಮೇಲೆ ಇನ್ನೂ ಏನು ಕೇಳಬೇಕೆಂದಿರುವೆ? ಎಂದನು.

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವ ಸಂವಾದದಲ್ಲಿ ಪ್ರದ್ಯುಮ್ನ ದ್ವಾರಕಾಗಮನವೆಂಬ
ನಲವತ್ತೆಂಟನೆಯ ಅಧ್ಯಾಯವು ಮುಗಿದುದು

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಏಕೋನಪಂಚಾಶತ್ತಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥೋಗ್ರಸೇನೋ ನೃಪತಿಃ ಸರ್ವಧರ್ಮಭೃತಾಂ ವರಃ ।
ಶ್ರೀಕೃಷ್ಣೇನ ಸಹಾಯೇನ ಕ್ರತುರಾಜಂ ಚಕಾರ ಹ ॥ ೧ ॥

ಗರ್ಗಾದ್ಯದುಕುಲಾಚಾರ್ಯಾನ್ಮುಹೂರ್ತಂ ಬೋಧ್ಯ ಯತ್ನತಃ ।
ಬಂಧುಭ್ಯಃ ಪ್ರದದೌ ರಾಜನ್ಸುಹೃದೋಽಪಿ ನಿಮಂತ್ರ್ಯರ್ಯ ॥ ೨ ॥

ನಲವತ್ತೊಂಭತ್ತನೆಯ ಅಧ್ಯಾಯವು

೧. ನಾರದಮಹರ್ಷಿಯು ಈ ರೀತಿ ನುಡಿದು ಪುನಃ ಹೇಳಲುಪಕ್ರಮಿಸಿದನು :– "ಅನಂತರ ಧರ್ಮಶೀಲರಲ್ಲೆಲ್ಲಾ ಅಗ್ರಗಣ್ಯನೆನಿಸಿದ ಆ ಉಗ್ರಸೇನನು ತನಗೆ ಸಹಾಯಕನಾಗಿ ನಿಂತಿದ್ದ ಶ್ರೀಕೃಷ್ಣನ ಬೆಂಬಲದಿಂದ ರಾಜಸೂಯಯಾಗವನ್ನಾಚರಿಸಿದನು.

೨. ಆ ಯಾದವೇಶ್ವರನು ಯದುಕುಲ ಪುರೋಹಿತನಾದ ಗರ್ಗಮಹರ್ಷಿಯು ತಿಳಿಸಿದ ಶುಭಮುಹೂರ್ತವಲ್ಲಿ ತನ್ನ ಬಂಧುಗಳಿಗೂ. ಸ್ನೇಹಿತರಿಗೂ ಆಮಂತ್ರಣವನ್ನು ಕಳುಹಿಸಿದನು.

ಭಕ್ತ್ಯಾ ಪರಮಯಾಹೂತಾ ಋಷಯೋ ಮುನಯೋ ದ್ವಿಜಾಃ ।
ಆಜಗ್ಮುರ್ದ್ವಾರಕಾಂ ಸರ್ವೇ ಪುತ್ರಶಿಷ್ಯೈಃ ಸಮಾವೃತಾಃ ॥ ೩ ॥

ವೇದವ್ಯಾಸಃ ಶುಕಃ ಸಾಕ್ಷಾನ್ಮೈತ್ರೇಯೋಽಥ ಪರಾಶರಃ ।
ಪೈಲಸ್ಸುಮಂತುರ್ದುರ್ವಾಸಾ ವೈಶಂಪಾಯನ ಇತ್ಯಪಿ ॥ ೪ ॥

ಜೈಮಿನಿರ್ಭಾರ್ಗವೋ ರಾಮೋ ದತ್ತಾತ್ರೇಯೋಽಸಿತೋ ಮುನಿಃ ।
ಅಂಗಿರಾ ವಾಮದೇವೋಽತ್ರಿರ್ವಸಿಷ್ಠಃ ಕಣ್ವ ಏವ ಚ ॥ ೫ ॥

ವಿಶ್ವಾಮಿತ್ರಃ ಶತಾನಂದೋ ಭಾರದ್ವಾಜೋಽಥ ಗೌತಮಃ ।
ಕಪಿಲಃ ಸನಕಾದ್ಯಾಶ್ಚ ವಿಭಾಂಡಶ್ಚ ಪತಂಜಲಿಃ ॥ ೬ ॥

ದ್ರೋಣಃ ಕೃಪಃ ಪ್ರಾಡ್ವಿಪಾಕಃ ಶಾಂಡಿಲ್ಯೋ ಮುನಿಸತ್ತಮಃ ।
ಅನ್ಯೇ ಚ ಮುನಯೋ ರಾಜನ್ಸಶಿಷ್ಯಾಶ್ಚ ಸಮಾಗತಾಃ ॥ ೭ ॥

---

೩. ಆ ಉಗ್ರಸೇನನ ಕಡೆಯವರು ಅತಿಶಯವಾದ ಭಕ್ತಿಯಿಂದ ಋಷಿಗಳನ್ನೂ, ಮುನಿಗಳನ್ನೂ, ಬ್ರಾಹ್ಮಣೋತ್ತಮರನ್ನೂ ಆಹ್ವಾನಿಸಿದರು. ಕೂಡಲೇ ಅವರೆಲ್ಲರೂ ಆ ಆಹ್ವಾನವನ್ನು ಕೈಗೊಂಡು ತಮ್ಮ ಮಕ್ಕಳೊಂದಿಗೂ, ಶಿಷ್ಯರೊಂದಿಗೂ ಹೊರಟು ದ್ವಾರಕಾನಗರಿಗೆ ಬರತೊಡಗಿದರು.

೪-೭. ಆ ಋಷಿಗಳು ಯಾರುಯಾರೆಂದರೆ, ವೇದವ್ಯಾಸ, ಶುಕ, ಮೈತ್ರೇಯ, ಪರಾಶರ, ಪೈಲ, ಸುಮಂತು, ದುರ್ವಾಸ, ವೈಶಂಪಾಯನ, ಜೈಮಿನಿ, ಪರಶುರಾಮ, ದತ್ತಾತ್ರೇಯ, ಅಸಿತ, ಅಂಗಿರಸ್ಸು, ವಾಮದೇವ, ಅತ್ರಿ, ವಸಿಷ್ಠ, ಕಣ್ವ, ವಿಶ್ವಾಮಿತ್ರ, ಶತಾನಂದ, ಭರದ್ವಾಜ, ಗೌತಮ, ಕಪಿಲ, ಸನಕ, ಸನಂದನ, ಸನತ್ಸುಜಾತ, ಸನತ್ಕುಮಾರ, ವಿಭಾಂಡಕ, ಪತಂಜಲಿ, ದ್ರೋಣ, ಕೃಪ, ಪ್ರಾಡ್ವಿಪಾಕ, ಕೌಂಡಿನ್ಯ ಮೊದಲಾದವರು. ಇವರಲ್ಲದೆ, ಇನ್ನೂ ಅನೇಕ ಮಂದಿ ಮುನಿಗಳು ತಮ್ಮ ತಮ್ಮ ಶಿಷ್ಯರೊಂದಿಗೆ ದ್ವಾರಕೆಗೆ ಬಂದರು.

ಬ್ರಹ್ಮಾ ಶಿವೋ ಜಂಭಭೇದೀ ದೇವಾ ರುದ್ರಗಣಾಸ್ತಥಾ ।
ಆದಿತ್ಯಾ ಮರುತಃ ಸರ್ವೇ ವಸವೋ ಹ್ಯಗ್ನಯೋಽಶ್ವಿನೌ ॥ ೮ ॥

ಯಮೋಽಥ ವರುಣಃ ಸೋಮೋ ಧನದೋ ಗಣನಾಯಕಃ ।
ಸಿದ್ಧಾ ವಿದ್ಯಾಧರಾಶ್ಚೈವ ಗಂಧರ್ವಾಃ ಕಿನ್ನರಾದಯಃ ॥ ೯ ॥

ಗಂಧರ್ವಾಪ್ಸರಸಃ ಸರ್ವಾ ವಿದ್ಯಾಧರ್ಯಃ ಸಮಾಗತಾಃ ।
ವೇತಾಲಾ ದಾನವಾ ದೈತ್ಯಾಃ ಪ್ರಹ್ಲಾದೋ ಬಲಿನಾ ಸಹ ॥ ೧೦ ॥

ರಕ್ಷೋಭಿರ್ಭೀಷಣೈಃ ಸಾರ್ಧಂ ಲಂಕಾಧೀಶೋ ವಿಭೀಷಣಃ ।
ಸರ್ವೈಶ್ಚ ವಾನರೈಃ ಸಾರ್ಧಂ ಹನೂಮಾನ್ವಾಯುನಂದನಃ ॥ ೧೧ ॥

ಋಕ್ಷೈಶ್ಚ ದಂಷ್ಟ್ರಿಭಿಃ ಸಾರ್ಧಂ ಜಾಂಬವಾನ್ ಋಕ್ಷರಾಡ್ಬಲೀ ।
ಸರ್ವೈಶ್ಚ ಪಕ್ಷಿಭಿಃ ಸಾರ್ಧಂ ಗರುಡಃ ಪಕ್ಷಿರಾಡ್ಬಲೀ ॥ ೧೨ ॥

೮-೯. ಇವರುಗಳಂತೆ ಬ್ರಹ್ಮನೂ, ಶಿವನೂ, ದೇವೇಂದ್ರನೂ, ಇತರ ದೇವತೆಗಳೂ, ರುದ್ರಗಣಗಳೂ, ದ್ವಾದಶಾದಿತ್ಯರೂ, ಸಪ್ತಮರುತ್ತುಗಳೂ, ಅಷ್ಟವಸುಗಳೂ, ತ್ರೇತಾಗ್ನಿಗಳೂ, ಅಶ್ವಿನೀದೇವತೆಗಳೂ, ಯಮ, ವರುಣ, ಸೋಮ, ಕುಬೇರರೂ, ಗಣಾಧಿಪತಿಯೂ, ಸಿದ್ಧರೂ, ವಿದ್ಯಾಧರರೂ, ಗಂಧರ್ವರೂ, ಕಿನ್ನರರೂ, ಇನ್ನೂ ಇತರ ದೇವತಾಪ್ರಭೇದಗಳೂ ಅಲ್ಲಿಗೆ ಬಂದರು.

೧೦. ಇವರುಗಳೊಡನೆ ಗಂಧರ್ವಾಂಗನೆಯರೂ, ಅಪ್ಸರೆಯರೂ, ವಿದ್ಯಾಧರಸ್ತ್ರೀಯರೂ, ಆ ದ್ವಾರಕೆಗೆ ಬಂದರು. ಇದರಂತೆ ವೇತಾಲಗಳೂ, ದಾನವರೂ, ಪ್ರಹ್ಲಾದ, ಬಲಿ ಮೊದಲಾದ ದೈತ್ಯಶ್ರೇಷ್ಠರೂ,

೧೧. ಲಂಕಾಧಿಪತಿಯಾದ ವಿಭೀಷಣನೂ, ಆತನ ಅನುಯಾಯಿಗಳಾದ ಭಯಂಕರಾಕಾರದ ರಾಕ್ಷಸರೂ, ಸಮಸ್ತ ವಾನರಸೇನಾಸಮೇತನಾದ ಆಂಜನೇಯನೂ ಆ ದ್ವಾರಕೆಗೆ ಬರತೊಡಗಿದರು.

೧೨. ಹಾಗೆಯೇ ಋಕ್ಷರಾಜನೂ ಮಹಾಬಲಾಢ್ಯನೂ ಆದ ಜಾಂಬವಂತನು ತನ್ನ ಕಡೆಯ ಋಕ್ಷ(ಕರಡಿ)ಗಳೊಡನೆಯೂ, ಸೂಕರಗಳೊಡನೆಯೂ ಅಲ್ಲಿಗೆ ಬಂದನು. ಪಕ್ಷಿರಾಜನಾದ ಗರುತ್ಮಂತನು ಸಮಸ್ತವಾದ ಪಕ್ಷಿಸಮೂಹದೊಡನೆ ಬಂದನು.

ಸರ್ವೈಃ ಸರೀಸೃಪೈಃ ಸಾರ್ಧಂ ವಾಸುಕಿರ್ನಾಗರಾಡ್ಬಲೀ ।
ಗೋರೂಪಧಾರಿಣೀ ಪೃಥ್ವೀ ಸರ್ವಾಭಿಃ ಕಾಮಧೇನುಭಿಃ ॥ ೧೩ ॥

ಸರ್ವೈಃ ಶೈಲೈರ್ಮೂರ್ತಿಮದ್ಭಿಃ ಸುಮೇರುಶ್ಚ ಹಿಮಾಚಲಃ ।
ಗುಲ್ಮವೃಕ್ಷಲತಾಭಿಶ್ಚ ವಟಃ ಸಾಕ್ಷಾತ್ಪ್ರಯಾಗರಾಟ್ ॥ ೧೪ ॥

ಮಹಾನದೀಭಿಃ ಸಹಿತಾ ಶ್ರೀಗಂಗಾಯಮುನಾನದೀ ।
ಪಾರಾವಾರಾಃ ಸಪ್ತ ತಥಾ ರತ್ನೋಪಾಯನಸಂಯುತಾಃ ॥ ೧೫ ॥

ಆಜಗ್ಮುರುಗ್ರಸೇನಸ್ಯ ರಾಜಸೂಯಸ್ಯ ಚಾಧ್ವರೇ ।
ಸಪ್ತ ಸೂರ್ಯಾಸ್ತ್ರಯೋ ಗ್ರಾಮಾ ನವಾರಿಣ್ಯಾ ನವೋಖಲಾ ॥ ೧೬ ॥

---

೧೩. ಸರ್ಪರಾಜನಾದ ವಾಸುಕಿಯು ಸರ್ವರೀತಿಯ ಸರ್ಪಗಳೊಡನೆಯೂ ಬಂದನು. ಅದರಂತೆ ಭೂಮಿಯು ಗೋರೂಪವನ್ನು ಧರಿಸಿ ಸಕಲವಾದ ಕಾಮಧೇನುಗಳಿಂದೊಡಗೂಡಿ ಆ ದ್ವಾರಕೆಗೆ ಬಂದಳು.

೧೪. ಅನಂತರ ಪರ್ವತರಾಜನಾದ ಮೇರುವೂ, ಹಿಮವಂತನೂ, ಮನುಷ್ಯರಂತೆ ಆಕಾರವನ್ನು ಧರಿಸಿರುವ ತಮ್ಮ ಕಡೆಯ ಎಲ್ಲಾ ಪರ್ವತಗಳೊಡನೆ ಸೇರಿ ಅಲ್ಲಿಗೆ ಬಂದರು. ಇದರಂತೆ ಪ್ರಯಾಗರಾಜನೆನಿಸಿದ ಅಕ್ಷಯವಟವು ಸಮಸ್ತವಾದ ತರುಲತೆಗಳೊಡನೆಯೂ, ಗುಲ್ಮ (ಪೊದರು)ಗಳೊಡನೆಯೂ ಸೇರಿ ಆ ದ್ವಾರಕೆಗೆ ಬಂದಿತು.

೧೫. ಬಳಿಕ ಗಂಗಾ, ಯಮುನಾನದಿಗಳು ಇತರ ಮಹಾನದಿಗಳೊಡನೆಯೂ, ರತ್ನಮಯವಾದ ಕಾಣಿಕೆಯನ್ನು ಕೈಲಿ ಹಿಡಿದುತಂದಿದ್ದ ಸಪ್ತಸಮುದ್ರಗಳೂ, ಆ ಉಗ್ರಸೇನರಾಜೇಂದ್ರನ ರಾಜಸೂಯಯಾಗವನ್ನು ಸಂದರ್ಶಿಸಲು ಅಲ್ಲಿಗೆ ಬಂದರು.

೧೬-೧೮. ಓ ರಾಜೇಂದ್ರ ! ಈ ಭೂಮಂಡಲದಲ್ಲಿ ಅತಿರಹಸ್ಯವಾದುದೆಂದು ಪ್ರಖ್ಯಾತಿಹೊಂದಿದ ಸಪ್ತಸೂರ್ಯರೂ, ಮೂರು ಗ್ರಾಮಗಳೂ, ಇನ್ನೂ ಇತರ

ಚತುರ್ದಶೈವ ಗುಹ್ಯಾನಿ ವಿಖ್ಯಾತಾನಿ ಮಹೀತಲೇ ।
ತೀರ್ಥರಾಜಃ ಪ್ರಯಾಗಶ್ಚ ಪುಷ್ಕರಂ ಬದ್ರಿಕಾಶ್ರಮಃ ॥ ೧೭ ॥

ಸಿದ್ಧಾಶ್ರಮೋ ವಿನಶನಂ ಕುಂಡೈಃ ಸರ್ವೈಃ ಸರೋವರೈಃ ।
ವನಾನಿ ದಂಡಕಾದೀನಿ ಸರ್ವೈಶ್ಚೋಪವನೈಃ ಸಹ ॥ ೧೮ ॥

ಕ್ಷೇತ್ರೈಃ ಸಮಗ್ರೈರ್ವಿಮಲೈರೇತೇ ತತ್ರ ಸಮಾಯಯುಃ ।
ಶ್ರೀಮದ್ಗೋವರ್ಧನೋ ನಾಮ ಗಿರಿರಾಜೋ ವ್ರಜಾದ್ಧರಿಂ ॥ ೧೯ ॥

ವೃಂದಾವನವ್ರಜವನೈಃ ಸರಃ ಕುಂಡೈಃ ಸಮಾಯಯೌ ।
ಕೀರ್ತಿರ್ಯಶೋಮತಿಃ ಸಾಕ್ಷಾದ್ಗೋಪೀಭಿರ್ಗೋಪಿಕೇಶ್ವರೀ ॥ ೨೦ ॥

ಶ್ರೀರಾಧಾ ಶಿಬಿಕಾರೂಢಾ ಸಖೀಸಂಘೈಶ್ಚ ಕೋಟಿಭಿಃ ।
ಶತಯೂಥಶ್ಚ ಗೋಪೀನಾಂ ದ್ವಾರಕಾಂ ಪ್ರಯಯೌ ಮುದಾ ॥ ೨೧ ॥

ವಾಮುವೂ ಸೇರಿ ಒಟ್ಟು ಹದಿನಾಲ್ಕು ಬಗೆಯ ರಹಸ್ಯಗಳು ಆ ಯಾಗಕ್ಕೆ ಬಂದುವು. ಇದರಂತೆ ತೀರ್ಥರಾಜನೆನಿಸಿದ ಪ್ರಯಾಗವೂ, ಪುಷ್ಕರಸರಸ್ಸೂ, ಬದರಿಕಾಶ್ರಮವೂ, ಸಿದ್ಧಾಶ್ರಮವೂ, ವಿನಶನವೆಂಬ ಕುಂಡವೂ, ದಂಡಕಾದಿವನಗಳೂ, ಇತರ ಎಲ್ಲಾ ಸರೋವರಗಳೊಡನೆಯೂ, ಕುಂಡಗಳೊಡನೆಯೂ, ಉಪವನಗಳೊಡನೆಯೂ, ಪಾಪ ಪರಿಹಾರಕವಾದ ಸಕಲ ಕ್ಷೇತ್ರಗಳೊಡನೆಯೂ ಅಲ್ಲಿಗೆ ಯಾಗಸಂದರ್ಶನಕ್ಕಾಗಿ ಬಂದುವು.

೧೯-೨೦. ಇತ್ತಲಾಗಿ ವ್ರಜಮಂಡಲದಲ್ಲಿದ್ದ ಗೋವರ್ಧನಪರ್ವತವು ವೃಂದಾವನದೊಡನೆಯೂ, ಗೋಕುಲದೊಡನೆಯೂ ಅಲ್ಲಿರುವ ಸರೋವರ ಮತ್ತು ಕುಂಡಗಳೊಡನೆಯೂ ದ್ವಾರಕೆಗೆ ಬಂದುವು. ಅವುಗಳೊಡನೆ ಗೋಪಿಕಾಸ್ತ್ರೀಯರಿಗೆಲ್ಲಾ ಪ್ರಧಾನಳಾದ ಕೀರ್ತಿಶಾಲಿನಿಯಾದ ಯಶೋದೆಯು ಸಕಲ ಗೋಪಸ್ತ್ರೀಯರೊಡನೆಯೂ, ಹೊರಟು ಬಂದಳು.

೨೧. ಅನಂತರ ವ್ರಜೇಶ್ವರಿಯಾದ ಶ್ರೀರಾಧಿಕೆಯು ಪಾಲಿಕೆಯಲ್ಲಿ ಕುಳಿತು ಕೋಟಿಸಂಖ್ಯಾಕವಾದ ತನ್ನ ಸಖೀ ಸಮೂಹದೊಡನೆಯೂ, ಗೋಪಾಂಗನೆಯರ ನೂರಾರು ಗುಂಪುಗಳೊಡನೆಯೂ ಸೇರಿ ಸಂತೋಷದಿಂದ ದ್ವಾರಕೆಗೆ ಬಂದಳು.

ತಾಸಾಂ ವಾಸೋ ಯತ್ರ ಯತ್ರ ಗೋಪೀಭೂಮಿಶ್ಚ ಸಾಭವತ್ ।
ತದಂಗರಾಗಸಂಜಾತಂ ಗೋಪೀಚಂದನಮೇವ ಹಿ　　　॥ ೨೨ ॥

ಗೋಪೀಚಂದನಲಿಪ್ತಾಂಗೋ ನರೋ ನಾರಾಯಣೋ ಭವೇತ್ ।
ಚತುರ್ವರ್ಣಾಸ್ತಥಾ ಸರ್ವೇ ಆಜಗ್ಮುಸ್ತಸ್ಯ ಚಾಧ್ವರೇ　　　॥ ೨೩ ॥

ಧೃತರಾಷ್ಟ್ರೋ ಬುದ್ಧಿಚಕ್ಷುಃ ಸಾಕ್ಷಾದ್ದುರ್ಯೋಧನಃ ಕಲಿಃ ।
ಶಾಲ್ವೋ ಭೀಷ್ಮಶ್ಚ ಕರ್ಣಶ್ಚ ಕುಂತೀಪುತ್ರೋ ಯುಧಿಷ್ಠಿರಃ　　　॥ ೨೪ ॥

ಭೀಮೋಽರ್ಜುನೋಽಥ ನಕುಲಃ ಸಹದೇವಸ್ತಥಾಪರೇ ।
ದಮಘೋಷೋ ವೃದ್ಧಶರ್ಮಾ ಜಯಸೇನೋ ಮಹಾನೃಪಃ　　　॥ ೨೫ ॥

---

೨೨. ಓ ರಾಜೇಂದ್ರ! ಆ ಗೋಪಸ್ತ್ರೀಯರು ದ್ವಾರಕೆಗೆ ಬರುವಾಗ ದಾರಿಯಲ್ಲಿ ಎಲ್ಲೆಲ್ಲಿ ತಂಗಿದ್ದರೋ ಆ ಸ್ಥಳವೆಲ್ಲವೂ ಗೋಪೀಭೂಮಿಯೆಂದೇ ಪ್ರಸಿದ್ಧವಾಯಿತು. ಆ ಸ್ತ್ರೀಯರು ಮೈಗೆ ತೊಡೆದುಕೊಂಡಿದ್ದ ಅನುಲೇಪನದಿಂದ ಸಂಭವಿಸಿದುದೇ ಈಗ ಗೋಪೀಚಂದನವೆಂಬುವಾಗಿ ಪ್ರಖ್ಯಾತವಾಗಿರುವುದು.

೨೩. ಆ ಗೋಪೀಚಂದನವನ್ನು ಯಾವನು ಮೈಗೆಲ್ಲಾ ಲೇಪಿಸಿಕೊಳ್ಳುವನೋ ಆ ಮಾನವನು ಸಾಕ್ಷಾತ್ ನಾರಾಯಣನೇ ಆಗುವನೆಂದು ತಿಳಿ. ಇರಲಿ! ಇದರಂತೆ ಆ ಉಗ್ರಸೇನನ ಯಾಗವನ್ನು ನೋಡಲೆಂದು ಬ್ರಾಹ್ಮಣಾದಿ ಚತುರ್ವರ್ಣಗಳೆಲ್ಲರೂ ಅಲ್ಲಿಗೆ ಬಂದರು.

೨೪-೨೫. ಅದರಂತೆ ಪ್ರಾಜ್ಞಾಚಕ್ಷುವಾದ ಧೃತರಾಷ್ಟ್ರನೂ, ಕಲಿಯ ಅವತಾರವಾದ ದುರ್ಯೋಧನನೂ, ಶಾಲ್ವನೂ, ಭೀಷ್ಮನೂ, ಕರ್ಣನೂ, ಯುಧಿಷ್ಠಿರನೂ, ಭೀಮಾರ್ಜುನರೂ, ನಕುಲ. ಸಹದೇವನೂ, ದಮಘೋಷನೂ, ವೃದ್ಧಶರ್ಮನೂ, ಜಯಸೇನರಾಜನೂ,

ಧೃಷ್ಟಕೇತುರ್ಭೀಷ್ಮಕಶ್ಚ ನಗ್ನಜಿತ್ಕೋಶಲೇಶ್ವರಃ ।
ಬೃಹತ್ಸೇನೋ ಧೃತಿಃ ಸಾಕ್ಷಾನ್ಮೈಥಿಲೇಶಃ ಪಿತಾಮಹಃ ॥ ೨೬ ॥

ಅನ್ಯೇಽಪಿ ತತ್ರ ರಾಜಾನಃ ಸುಹೃತ್ಸಂಬಂಧಿಬಾಂಧವಾಃ ।
ಸಹ ಸ್ತ್ರೀಭಿಸ್ತಥಾ ಪೌತ್ರೈಃ ಪುತ್ರೈರಾಜಗ್ಮುರಧ್ವರಂ ॥ ೨೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದ–
ಬಹುಲಾಶ್ವ ಸಂವಾದೇ ಸ್ವಜನನಿಮಂತ್ರಣಂ
ನಾಮೈಕೋನಪಂಚಾಶತ್ತಮೋಽಧ್ಯಾಯಃ

೨೬-೨೭. ಧೃಷ್ಟಕೇತುವೂ, ಭೀಷ್ಮಕನೂ, ಕೋಸಲಾಧಿಪತಿಯಾದ ನಾಗ್ನಜಿತನೂ, ಬೃಹತ್ಸೇನನೂ, ನಿನ್ನ ಸಾಕ್ಷಾತ್ ಪಿತಾಮಹನೆನಿಸಿದ ಮಿಥಿಲಾಧೀಶನಾದ ಧೃತಿಯೂ ಆ ರಾಜಸೂಯಯಾಗಕ್ಕೆ ಬಂದರು. ಇವರಲ್ಲದೆ ಆ ಉಗ್ರಸೇನನಿಗೆ ಸ್ನೇಹಿತರಾಗಿಯೂ, ಸಂಬಂಧಿಕರಾಗಿಯೂ, ಬಾಂಧವರಾಗಿಯೂ ಇರುವಂತಹ ಇನ್ನೂ ಅನೇಕ ಮಂದಿ ರಾಜರು ತಮ್ಮ ತಮ್ಮ ಪತ್ನೀಪುತ್ರರೊಂದಿಗೂ ಸೇರಿ ಆ ಯಾಗವನ್ನು ಸಂದರ್ಶಿಸಲು ದ್ವಾರಕೆಗೆ ಬಂದರು.

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ
ಬಹುಲಾಶ್ವ ಸಂವಾದದಲ್ಲಿ ಸ್ವಜನ ನಿಮಂತ್ರಣವೆಂಬ
ನಲವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಶ್ವಜಿತ್ಖಂಡೇ

ಪಂಚಾಶತ್ತಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅರ್ಥಸಿದ್ಧೇರಿವ ದ್ವಾರೇ ರೈವತಾದ್ರಿಸಮುದ್ರಯೋಃ ।
ಮಧ್ಯೇ ಪಿಂಡಾರಕೇ ಕ್ಷೇತ್ರೇ ಯಜ್ಞಾರಂಭೋ ಬಭೂವ ಹ ॥ ೧ ॥

ಪಂಚಯೋಜನವಿಸ್ತೀರ್ಣಃ ಕುಂಡೋಽಭೂದ್ಯಸ್ಯ ಚಾಧ್ವರೇ ।
ಯೋಜನಂ ಬ್ರಹ್ಮಕುಂಡಸ್ತು ಗವ್ಯೂತಿಃ ಪಂಚಕುಂಡಕಾಃ ॥ ೨ ॥

ಐವತ್ತನೆಯ ಅಧ್ಯಾಯವು

೧. ಓ ರಾಜೇಂದ್ರ! ಆಲಿಸು. ಆ ದ್ವಾರಕಾನಗರಿಯ ಬಳಿ ರೈವತಕ ಪರ್ವತಕ್ಕೂ ಸಮುದ್ರಕ್ಕೂ ನಡುವೆ ಪಿಂಡಾರಕವೆಂಬ ಕ್ಷೇತ್ರವು ಅರ್ಥಸಿದ್ಧಿಯ (ನೆನೆಸಿದ ಕಾರ್ಯವು ಕೈಗೂಡುವಿಕೆಯ) ಮಹಾದ್ವಾರದಂತೆ ಕಂಗೊಳಿಸುತ್ತಿರುವುದು. ಆ ಪಿಂಡಾರಕ ಕ್ಷೇತ್ರದಲ್ಲಿ ಉಗ್ರಸೇನರಾಜೇಂದ್ರನು ರಾಜಸೂಯಯಾಗವನ್ನು ಪ್ರಾರಂಭಿಸಿದನು.

೨. ಆ ಯಾಗದಲ್ಲಿ ಯಜ್ಞಕುಂಡವು ಐದು ಯೋಜನಗಳಷ್ಟು ವಿಸ್ತಾರವಾಗಿದ್ದಿತು. ಬ್ರಹ್ಮಕುಂಡವೆಂಬುದು ಒಂದು ಯೋಜನ ಗಾವುದದಷ್ಟು ವಿಶಾಲವಾಗಿದ್ದಿತು. ಇವಲ್ಲದೆ ಇತರ ಕುಂಡಗಳು ಎರಡು ಕ್ರೋಶಗಳಷ್ಟು (ಹರಿದಾರಿ) ಅಗಲವಾಗಿದ್ದುವು.

ಮೇಖಲಾಗರ್ತವಿಸ್ತಾರವೇದೀಭಿರ್ನಿರ್ಮಿತಾಃ ಶುಭಾಃ ।
ಸಹಸ್ರಹಸ್ತಮುಚ್ಚಾಂಗೋ ಯಜ್ಞಸ್ತಂಭೋ ಬಭೌ ಮಹಾನ್ ॥ ೩ ॥

ಪಂಚಯೋಜನವಿಸ್ತೀರ್ಣಃ ಸೌವರ್ಣೋ ಯಜ್ಞಮಂಡಪಃ ।
ವಿತಾನತೋರಣೈ ರೇಜೇ ಕದಲೀಖಂಡಮಂಡಿತಃ ॥ ೪ ॥

ಭೋಜವೃಷ್ಣ್ಯಂಧಕಮಧುಶೂರಸೇನದಶಾರ್ಹಕೈಃ ।
ದೇವೈಶ್ಚ ಸಹಿತೋ ರಾಜಾ ಬಭೌ ಶಕ್ರ ಇವಾಧ್ವರೇ ॥ ೫ ॥

---

೩. ಆ ಕುಂಡಗಳು ತಮ್ಮ ತಮ್ಮ ವಿಸ್ತಾರಕ್ಕೆ ಅನುರೂಪವಾದ ಆಳವಾದ ಒಳಭಾಗದಿಂದಲೂ ಮೆಟ್ಟಲುಗಳಂತೆ ಮೂರು ಸಾಲಾಗಿರುವ ಮೇಖಲೆ (ಹೊರಗಣ ಕಟ್ಟೆ)ಯಿಂದಲೂ ಪರಿಷ್ಕೃತವಾದ ಸುತ್ತಲಿನ ಪ್ರದೇಶದಿಂದೂ ಶುಭಕರವಾಗಿ ನಿರ್ಮಿಸಲ್ಪಟ್ಟಿದ್ದುವು. ಮತ್ತು ಸಾವಿರ ಮೊಳಗಳಷ್ಟು ಎತ್ತರವಾಗಿರುವ ಭಾರಿಯಾದ ಯಜ್ಞಸ್ತಂಭವೊಂದು ಆ ಯಾಗಶಾಲೆಯಲ್ಲಿ ನಡುವೆ ನಿಲ್ಲಿಸಲ್ಪಟ್ಟು ಕಾಂತಿಯಿಂದ ಮೆರೆಯುತ್ತಿತ್ತು.

೪. ಆ ಯಾಗಶಾಲೆಯು ಐದು ಯೋಜನ(ಗಾವುದ)ಗಳಷ್ಟು ಅಗಲವಾಗಿದ್ದು ಸಂಪೂರ್ಣವಾಗಿ ಚಿನ್ನದಿಂದಲೇ ನಿರ್ಮಿಸಲ್ಪಟ್ಟಿತ್ತು. ಆ ಯಜ್ಞಶಾಲೆಯ ಸೊಬಗನ್ನು ಸೊಗಸಾದ ಮೇಲುಕಟ್ಟುಗಳೂ, ತೋರಣಗಳೂ, ಬಾಳೆಯಕಂಬಗಳೂ ಮತ್ತಷ್ಟು ಅತಿಶಯವಾಗಿ ಹೆಚ್ಚಿಸುತ್ತಿದ್ದುವು.

೫. ಇಂಥ ಯಜ್ಞವಾಟದಲ್ಲಿ ತನ್ನ ಕಡೆಯ ಭೋಜ, ವೃಷ್ಣಿ, ಅಂಧಕ, ಮಧು, ಶೂರಸೇನ, ದಶಾರ್ಹರೆಂಬ ನಾನಾ ಪ್ರಭೇದಗಳಿಗೊಳಪಟ್ಟ ಯಾದವರಿಂದ ಪರಿವೃತನಾದ ಆ ಉಗ್ರಸೇನರಾಜೇಂದ್ರನು ದೇವತೆಗಳಿಂದ ಓಲೈಸಲ್ಪಡುವ ದೇವೇಂದ್ರನಂತೆ ಶೋಭಿಸಿದನು.

ಯಜ್ಞಾವತಾರಃ ಶ್ರೀಕೃಷ್ಣಃ ಪರಿಪೂರ್ಣತಮೋಽಧ್ವರೇ ।
ಬಭೌ ಪುತ್ರೈಶ್ಚ ಪೌತ್ರೈಶ್ಚ ಪರಮಾತ್ಮೇವ ಭೂತಿಭಿಃ ॥ ೬ ॥

ಮಹಾಸಂಭೃತಸಂಭಾರೇ ರಾಜಸೂಯೇಽಧ್ವರೇ ವರೇ ।
ಗರ್ಗಾಚಾರ್ಯಂ ಗುರುಂ ಕೃತ್ವಾ ಯದುರಾಜೋ ಹಿ ದೀಕ್ಷಿತಃ ॥ ೭ ॥

ಹೋತಾರೋ ದಶಲಕ್ಷಾಣಿ ದಶಲಕ್ಷಾಣಿ ದೀಕ್ಷಿತಾಃ ।
ಅಧ್ವರ್ಯವಃ ಪಂಚಲಕ್ಷಮುದ್ಗಾತಾರಸ್ತಥಾಪರೇ ॥ ೮ ॥

ಹಸ್ತಿಶುಂಡಾಸಮಾ ಧಾರಾ ಭುಕ್ತ್ವಾಜ್ಯಸ್ಯ ಹುತಾಶನಃ ।
ಅಜೀರ್ಣಂ ಪ್ರಾಪ ತದ್ಯಜ್ಞೇ ಚಿತ್ರಂ ವಿವಿಧ ಮೈಥಿಲ ॥ ೯ ॥

---

೬. ಆ ಯಾದವರ ನಡುವೆ ಸಾಕ್ಷಾತ್ ಯಜ್ಞಪುರುಷನೂ, ಪರಮಾತ್ಮನ ಪರಿಪೂರ್ಣತಮನಾದ ಅವತಾರವೂ ಆದ ಶ್ರೀಕೃಷ್ಣನು ತನ್ನ ಪುತ್ರಪೌತ್ರರೆಲ್ಲರಿಂದಲೂ ಪರಿವೃತನಾಗಿ ತನ್ನ ಅನಂತವಾದ ವಿಭವಾತಿಶಯಗಳಿಂದ (ಮಹಿಮೆ) ಸುತ್ತುವರಿಯಲ್ಪಟ್ಟ ಪರಮಪುರುಷನಂತೆ ಕಂಗೊಳಿಸಿದನು.

೭. ಆ ಯದುರಾಜನಾದ ಉಗ್ರಸೇನನು ಗುರುವಾದ ಗರ್ಗಾಚಾರ್ಯನ ಅನುಮತಿಯಂತೆ ಅತಿಶಯವಾಗಿ ಸಜ್ಜುಗೊಳಿಸಲ್ಪಟ್ಟಿದ್ದ ನಾನಾ ಸಂಭಾರಗಳುಳ್ಳ ಆ ರಾಜಸೂಯಯಾಗದಲ್ಲಿ ದೀಕ್ಷೆಯನ್ನು ವಹಿಸಿದನು.

೮. ರಾಜೇಂದ್ರ ! ಆ ಯಾಗದಲ್ಲಿ ದೀಕ್ಷಿತನಾದ ಯದುರಾಜನಿಗೆ ಸಹಾಯಕರಾಗಿ ಹತ್ತು ಲಕ್ಷಮಂದಿ ಹೋತೃಗಳೂ, ಹತ್ತು ಲಕ್ಷಮಂದಿ ಯಾಗಾಂಗಗಳ ದೀಕ್ಷಿತರೂ, ಐದುಲಕ್ಷಮಂದಿ ಅಧ್ವರ್ಯುಗಳೂ, ಐದುಲಕ್ಷಮಂದಿ ಉದ್ಗಾತೃಗಳೂ ನಿಂತು ಆ ಯಾಗಕಾರ್ಯವನ್ನು ನಿರ್ವಹಿಸಿದರು.

೯. ಓ ಮಿಥಿಲಾಧೀಶ ! ಆ ಆಶ್ಚರ್ಯವನ್ನೇನೆಂದು ವರ್ಣಿಸಲಿ ! ಆ ಯಾಗದಲ್ಲಿ ಆಜ್ಯಧಾರೆಯು ಆನೆಯ ಸೊಂಡಲಿನಂತೆ ಸಂತತವಾಗಿ ಬೀಳುತ್ತಿತ್ತು. ಅದನ್ನು ಭುಜಿಸಿ ಭುಜಿಸಿ, ಯಜ್ಞೇಶ್ವರನಿಗೆ ಅಜೀರ್ಣವುಂಟಾಯಿತು.

ಕೇಽಪಿ ಜೀವಾಸ್ತ್ರಿಲೋಕ್ಯಾಂ ತು ನ ಬಭೂವುರ್ಬುಭುಕ್ಷಿತಾಃ ।
ಸರ್ವೇ ದೇವಾಸ್ತು ಸೋಮೇನ ಹ್ಯಜೀರ್ಣತ್ವಮುಪಾಗತಾಃ ॥ ೧೦ ॥

ರುಚಿಮತ್ಯಾ ಧರ್ಮಪತ್ನ್ಯೋಗ್ರಸೇನೋ ಯದುರಾಡ್ಬಲೀ ।
ಅಧ್ವರಾವಭೃತಸ್ನಾನಂ ತೀರ್ಥೇ ಪಿಂಡಾರಕೇಽಕರೋತ್ ॥ ೧೧ ॥

ವ್ಯಾಸಾದ್ಯೈರ್ಮುನಿಭಿಃ ಸ್ನಾತೋ ವಿಧಿವದ್ವೇದಸೂಕ್ತಿಭಿಃ ।
ಯಥಾ ದಕ್ಷಿಣಯಾ ಯಜ್ಞೋ ರುಚಿಮತ್ಯಾ ಬಭೌ ನೃಪಃ ॥ ೧೨ ॥

ದೇವದುಂದುಭಯೋ ನೇದುರ್ನರದುಂದುಭಯಸ್ತಥಾ ।
ಉಗ್ರಸೇನೋಪರಿ ಸುರಾಃ ಪುಷ್ಪವರ್ಷಂ ಪ್ರಚಕ್ರಿರೇ ॥ ೧೩ ॥

---

೧೦. ಆ ಉಗ್ರಸೇನನ ರಾಜಸೂಯಯಾಗದಲ್ಲಿ ತಾನು ಅಪೇಕ್ಷಿಸಿದುದನು ಪಡೆಯದೆ, ಹಸಿದೆನೆಂದು ಬಳಲುವ ಯಾವ ಪ್ರಾಣಿಯೇ ಆಗಲಿ ಮೂರು ಲೋಕದಲ್ಲಿ ಎಲ್ಲಿಲ್ಲಿಯೂ ದೊರೆಯಲಿಲ್ಲ. ಆ ಯಾಗದಲ್ಲಿ ಸೋಮಪಾನವನ್ನು ಮಾಡಿ ಮಾಡಿ ದೇವತೆಗಳೆಲ್ಲರೂ ಅಜೀರ್ಣಕ್ಕೆ ಗುರಿಯಾದರು.

೧೧. ಈ ರೀತಿಯಾಗಿ ಅತಿಶಯವಾದ ವೈಭವದಿಂದ ಆ ರಾಜಸೂಯ ಯಾಗವು ನೆರವೇರಿದನಂತರ ಉಗ್ರಸೇನರಾಜೇಂದ್ರನು ತನ್ನ ಪತ್ನಿಯಾದ ರುಚಿಮತಿಯೊಂದಿಗೆ ಪಿಂಡಾರಕತೀರ್ಥದಲ್ಲಿ ಅವಭೃಥ ಸ್ನಾನವನ್ನು ಮಾಡಿದನು.

೧೨. ಆ ಉಗ್ರಸೇನನು ರುಚಿಮತಿಯೆಂಬ ತನ್ನ ಪತ್ನಿಯೊಡಗೂಡಿ ವೇದ ವ್ಯಾಸಾದಿ ಮಹರ್ಷಿಗಳೊಡನೆ ವೇದಮಂತ್ರಗಳನ್ನು ಉಚ್ಚರಿಸುತ್ತಾ ವಿಧಿವತ್ತಾಗಿ ಸ್ನಾನಮಾಡಿದನಂತರ ದಕ್ಷಿಣೆಯೆಂಬ ಪತ್ನಿಯಿಂದೊಡಗೂಡಿದ ಯಜ್ಞಪುರುಷನಂತೆ ಕಂಗೊಳಿಸಿದನು.

೧೩. ಆಗ ದೇವದುಂಧುಭಿಗಳೂ ಮಾನವಲೋಕದ ದುಂಧುಭಿಗಳೊ ಸಂತೋಷಸೂಚಕವಾಗಿ ಬಾರಿಸಲ್ಪಟ್ಟುವು. ದೇವತೆಗಳು ಆ ರಾಜೇಂದ್ರನ ಮೇಲೆ ಹೂವಿನ ಮಳೆಯನ್ನು ಸುರಿಸಿದರು.

ಗಜಾನಾಂ ಹೇಮಭಾರಾಣಾಂ ನಿಯುತಾನಿ ಚತುರ್ದಶ ।
ಶತಾರ್ಬುದಂ ಹಯಾನಾಂ ತು ಯಜ್ಞಾಂತೇ ದಕ್ಷಿಣಾಂ ಪರಾಂ ॥ ೧೪ ॥

ಕೋಟಿಶೋ ನವರತ್ನಾನಾಂ ಮಹಾಹಾರಾಂಬರೈಃ ಸಹ ।
ಗರ್ಗಾಚಾರ್ಯಾಯ ಮುನಯೇ ಗೃಹೋಪಸ್ಕರಸಂಯುತಾಂ ॥ ೧೫ ॥

ಉಗ್ರಸೇನೋ ದದೌ ರಾಜಾ ಯಾದವೇಂದ್ರೋ ಮಹಾಮನಾಃ ।
ಗಜಾನಾಂ ತತ್ರ ಸಾಹಸ್ರಂ ಹಯಾನಾಮಯುತಂ ತಥಾ ॥ ೧೬ ॥

ವಿಂಶದ್ಭಾರಂ ಸುವರ್ಣಾನಾಂ ಬ್ರಾಹ್ಮಣೇ ಬ್ರಾಹ್ಮಣೇ ದದೌ ।
ಮರುತ್ತಸ್ಯ ಮಹಾಯಜ್ಞೇ ತ್ಯಕ್ತಪಾತ್ರಾ ಯಥಾ ದ್ವಿಜಾಃ ॥ ೧೭ ॥

ತಥೋಗ್ರಸೇನಸ್ಯ ಕ್ರತೌ ಸಂತುಷ್ಟಾ ಹರ್ಷಿತಾ ಗತಾಃ ।
ಸಂತುಷ್ಟಾ ದೇವತಾಃ ಸರ್ವಾಃ ಪ್ರಾಪ್ತಭಾಗಾ ದಿವಂ ಗತಾಃ ॥ ೧೮ ॥

೧೪-೧೫. ಅನಂತರ ಆ ಯದುರಾಜನು ಗುರುವಾದ ಗರ್ಗಾಚಾರ್ಯನಿಗೆ ಹದಿನಾಲ್ಕು ನಿಯುತಗಳಷ್ಟು (೧೪೦೦೦೦೦) ಆನೆಗಳನ್ನೂ, ಅಷ್ಟೇ ಸಂಖ್ಯೆಯ ಸುವರ್ಣ ಭಾರಗಳನ್ನೂ, ನೂರು ಅರ್ಬುದ ಕುದುರೆಗಳನ್ನೂ, ಕೋಟಿಗಟ್ಟಲೆಯಾಗಿ ನವರತ್ನಗಳನ್ನೂ, ಮಹಾರ್ಘವಾದ ವಸ್ತ್ರಾಭರಣಾದಿಗಳನ್ನೂ ಅದಕ್ಕೆ ತಕ್ಕ ಪರಿಕರಗಳೊಂದಿಗೆ ಆ ಯಾಗದ ದಕ್ಷಿಣೆಯಾಗಿ ಇತ್ತನು.

೧೬-೧೭. ಅನಂತರ ಮಹಾ ಔದಾರ್ಯಶಾಲಿಯಾದ ಆ ಯಾದವೇಶ್ವರನು ಯಾಗಕ್ಕೆ ಬಂದಿದ್ದ ಒಬ್ಬೊಬ್ಬ ಬ್ರಾಹ್ಮಣನಿಗೂ ಸಾವಿರಸಾವಿರ ಆನೆಗಳನ್ನೂ, ಹತ್ತುಸಾವಿರ ಕುದುರೆಗಳನ್ನೂ ಇಪ್ಪತ್ತು ಭಾರ ಚಿನ್ನವನ್ನೂ, ಉಡುಗೆರೆಯಾಗಿ ಇತ್ತನು ಓ ರಾಜೇಂದ್ರ! ಹಿಂದೆ ಮರುತ್ತರಾಜನ ಯಜ್ಞದಲ್ಲಿ ತಮಗೆ ಇತ್ತಿದ್ದ ಪಾತ್ರಪದಾರ್ಥಗಳನ್ನು ಅಲ್ಲಿಯೇ ಬಿಟ್ಟುಬಿಟ್ಟು ಸಂತೃಪ್ತರಾಗಿ ಹೇಗೆ ಹೊರಟು ಹೋದರೋ,

೧೮. ಅದೇ ರೀತಿ ಆ ಉಗ್ರಸೇನನ ರಾಜಸೂಯಯಾಗದಲ್ಲಿಯೂ ಸಹ ಬಂದಿದ್ದ ಬ್ರಾಹ್ಮಣೋತ್ತಮರೆಲ್ಲರೂ ತೃಪ್ತಿಯನ್ನು ಹೊಂದಿ ತಮ್ಮ ತಮ್ಮ ಸ್ಥಳಗಳಿಗೆ ಸಂತೋಷದಿಂದ ತೆರಳಿದರು. ಅದರಂತೆ ದೇವತೆಗಳೂ ಸಹ ತಮ್ಮ ತಮ್ಮ ಹವಿರ್ಭಾಗವನ್ನು ಪಡೆದು ಸಂತೃಪ್ತತೆಯಿಂದ ಸ್ವರ್ಗಲೋಕಕ್ಕೆ ತೆರಳಿದರು.

ಭೂರಿದ್ರವ್ಯಾ ಬಂದಿನಶ್ಚ ಜಯಾರಾವಾ ಗೃಹಂ ಗತಾಃ ।
ರಕ್ಷೋ ದೈತ್ಯಾ ವಾನರಾಶ್ಚ ದಂಷ್ಟ್ರಿಣಃ ಪಕ್ಷಿಣಸ್ತಥಾ ॥ ೧೯ ॥

ನಾಗಾಃ ಸಂಸುಷ್ಟಮನಸಃ ಸರ್ವೇ ಸ್ವಂ ಸ್ವಂ ಗೃಹಂ ಯಯುಃ ।
ಗಾವಃ ಶೈಲಾ ವೃಕ್ಷಸಂಘಾ ನದ್ಯಸ್ತೀರ್ಥಾಶ್ಚ ಸಿಂಧವಃ ॥ ೨೦ ॥

ಸಂತುಷ್ಟಾ ಪ್ರಾಪ್ತಭಾಗಾ ಯೇ ತೇ ಸರ್ವೇ ಸ್ವಂ ಗೃಹಂ ಯಯುಃ ।
ರಾಜಾನೋ ಯೇ ಸಮಾಹೂತಾಃ ಪಾರಿಬರ್ಹೇಣ ಭೂಯಸಾ ॥ ೨೧ ॥

ಪೂಜಿತಾ ದಾನಮಾನಾಭ್ಯಾಂ ತೇಽಪಿ ಸ್ವಂ ಸ್ವಂ ಗೃಹಂ ಗತಾಃ ।
ನಂದಾದ್ಯಾ ಗೋಪಮುಖ್ಯಾ ಯೇ ಶ್ರೀಕೃಷ್ಣೇನ ಪ್ರಪೂಜಿತಾಃ ॥ ೨೨ ॥

೧೯–೨೧. ಅನಂತರ ಸ್ತುತಿಪಾಠಕರಾದ ವಂದಿಮಾಗಧರು ಬೇಕಾದಷ್ಟು ಸಂಭಾವನೆಯನ್ನು ಪಡೆದವರಾಗಿ ಆ ರಾಜೇಂದ್ರನನ್ನು ಜಯಜಯ ಎಂದು ಕೊಂಡಾಡುತ್ತ ತಮ್ಮ ತಮ್ಮ ಊರುಗಳಿಗೆ ಹಿಂದಿರುಗಿದರು. ಅವರಂತೆಯೇ ಆ ಯಾಗವನ್ನು ಸಂದರ್ಶಿಸುವ ಸಲುವಾಗಿ ಬಂದಿದ್ದ ರಾಕ್ಷಸರೂ, ದೈತ್ಯರೂ, ವಾನರರೂ, ಸೂರಕಗಳೂ, ಪಕ್ಷಿಗಳೂ, ಸರ್ಪಗಳೂ, ಗೋವುಗಳೂ, ಪರ್ವತಗಳೂ, ತರುಲತೆಗಳೂ, ತೀರ್ಥಗಳೂ, ನದಿಗಳೂ, ಸಾಗರಗಳೂ, ತಮತಮಗೆ ಸಲ್ಲಬೇಕಾದ ಭಾಗಗಳನ್ನು ಪಡೆದು ಸಂತೋಷದಿಂದ ತಮ್ಮ ತಮ್ಮ ನಿವಾಸಗಳಿಗೆ ಹಿಂದಿರುಗಿದರು.

೨೨. ಅನಂತರ ಆ ಯಾಗಕ್ಕೆ ಆಮಂತ್ರಿತರಾಗಿ ಯಾವ ಯಾವ ರಾಜರು ಬಂದಿದ್ದರೋ ಅವರೆಲ್ಲರೂ, ಬೇಕಾದಷ್ಟು ಉಡುಗೆರೆಗಳಿಂದಲೂ. ಮಾನಮರ್ಯಾದೆಗಳಿಂದಲೂ ವಿಶೇಷವಾಗಿ ಸತ್ಕೃತರಾಗಿ ತಮ್ಮ ತಮ್ಮ ರಾಜಧಾನಿಗಳಿಗೆ ಹಿಂದಿರುಗಿದರು. ಅನಂತರ ನಂದನೇ ಮೊದಲಾದ ಹಿರಿಯ ಗೊಲ್ಲರು ಸ್ವಯಂ ಶ್ರೀಕೃಷ್ಣನಿಂದಲೇ ವಿಶೇಷವಾಗಿ ಸತ್ಕರಿಸಲ್ಪಟ್ಟು,

ಹರ್ಷಿತಾಃ ಪ್ರೇಮದಾನಾಭ್ಯಾಂ ತೇಽಪಿ ಸರ್ವೇ ವ್ರಜಂ ಯಯುಃ ।
ಏತತ್ತೇ ಕಥಿತಂ ರಾಜನ್ಮಹಾಯಜ್ಞಸ್ಯ ಮಂಡಲಂ ॥ ೨೩ ॥

ಯತ್ರ ಶ್ರೀಕೃಷ್ಣಚಂದ್ರೋಽಸ್ತಿ ತತ್ರ ಕಿಂ ಸಫಲಂ ನ ಹಿ ।
ಯೇ ಶೃಣ್ವಂತಿ ಕಥಾಮೇತಾಂ ಪಠಂತಿ ಸತತಂ ನರಾಃ ॥ ೨೪ ॥

ಧರ್ಮಶ್ಚಾರ್ಥಶ್ಚ ಕಾಮಶ್ಚ ಮೋಕ್ಷಸ್ತೇಷಾಂ ಪ್ರಜಾಯತೇ ॥ ೨೫ ॥

ಪೂರ್ಣಃ ಪರೇಶಃ ಪರಮೇಶ್ವರಃ ಪ್ರಭುಃ
ಪುನಾತು ವೋ ಯಃ ಪುರುಷಃ ಪುರಾಣಃ ।
ಶೃಣ್ವಂತಿ ಯೇ ತಸ್ಯ ಕಥಾಂ ವಿಚಿತ್ರಾಂ
ಕುರ್ವಂತಿ ತೀರ್ಥಂ ಸ್ವಕುಲಂ ನರಾಸ್ತೇ ॥ ೨೬ ॥

---

೨೩. ತಮ್ಮ ವಿಷಯದಲ್ಲಿ ಆ ಯದುಗಳು ತೋರ್ಪಡಿಸಿದ ಪ್ರೇಮದಿಂದಲೂ, ತಮಗೆ ಇತ್ತ ಉಡುಗೆರೆಗಳಿಂದಲೂ ಬಹುವಾಗಿ ಸಂತೋಷವನ್ನು ಹೊಂದಿ ಗೋಕುಲಕ್ಕೆ ಹಿಂದಿರುಗಿದರು. ಓ ರಾಜೇಂದ್ರ! ಈ ರೀತಿಯಾಗಿ ನಿನಗೆ ಮಂಗಲಕರವಾದ ಮಹಾಯಾಗವನ್ನು ವಿವರಿಸಿದೆನು.

೨೪. ಅ ಕೃಷ್ಣಚಂದ್ರನಿರುವ ಕಡೆ ಯಾವ ಕಾರ್ಯವು ತಾನೇ ನೆರವೇರದಿದ್ದೀತು? ನಾನು ವರ್ಣಿಸಿದೀ ಚರಿತ್ರವನ್ನು ಯಾವ ಮಾನವರು ಯಾವಾಗಲೂ ಎಡಬಿಡದೆ ಶ್ರವಣಮಾಡುವರೋ ಇಲ್ಲವೇ ಪಠನಮಾಡುವರೋ,

೨೫. ಅಂಥ ಮಾನವರಿಗೆ ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕು ಬಗೆಯ ಪುರುಷಾರ್ಥಗಳೂ ಸಿದ್ಧಿಸುವುವು.

೨೬. ಓ ಮಿಥಿಲಾನರಾಧೀಶ! ಯಾವಾತನು ಪರಿಪೂರ್ಣನೆಂದೂ, ಪರಾತ್ಪರನೆಂದೂ, ಪರಮೇಶ್ವರನೆಂದೂ ಪ್ರಾಜ್ಞರಾದವರಿಂದ ವರ್ಣಿಸಲ್ಪಡುವನೋ ಆ ಪ್ರಭುವಾದ ಪರಮಪುರುಷನು ನಿಮ್ಮೆಲ್ಲರನ್ನೂ ಪಾವನಗೊಳಿಸಲಿ. ಯಾವ ಮಾನವರು ಅತ್ಯಾಶ್ಚರ್ಯಕರವಾದ ಆತನ ದಿವ್ಯಚರಿತ್ರವನ್ನು ಆದರದಿಂದ ಶ್ರವಣಮಾಡುವರೋ ಅಂಥ ಮಾನವರು ತಮ್ಮ ವಂಶವನ್ನೇ ಪವಿತ್ರವನ್ನಾಗಿ ಮಾಡುವರು.

ಛಲೇನ ಯಜ್ಞಸ್ಯ ಹರಿಃ ಪರೇಶ್ವರೋ
ಭಾರಂ ವಿದೇಹೇಶ ಭುವೋಽವತಾರಯತ್ ।
ಯೋಽಭೂಚ್ಚತುರ್ವ್ಯೂಹಧರೋ ಯದೋಃ ಕುಲೇ
ತಸ್ಮೈ ನಮೋಽನಂತಗುಣಾಯ ಭೂಭೃತೇ ॥ ೨೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಶ್ವಜಿತ್ಖಂಡೇ ನಾರದಬಹುಲಾಶ್ವ ಸಂವಾದೇ ಉಗ್ರಸೇನಮಹೋದಯೇ ರಾಜಸೂಯ ಯಜ್ಞೋತ್ಸವ ವರ್ಣನಂ ನಾಮ ಪಂಚಾಶತ್ತಮೋಽಧ್ಯಾಯಃ

॥ ವಿಶ್ವಜಿತ್ಖಂಡಃ ಸಮಾಪ್ತಃ ॥

॥ ಶ್ರೀ ಗೋಪಾಲಕೃಷ್ಣಾರ್ಪಣಮಸ್ತು ॥

---

೨೭. ಓ ಮಿಥಿಲಾಧೀಶ! ಈ ರೀತಿಯಾಗಿ ಆ ಪರಮಪುರುಷನಾದ ಶ್ರೀಹರಿಯು ರಾಜಸೂಯಯಾಗದ ನೆವದಿಂದ ಭೂಮಿಯ ಭಾರವನ್ನು ಇಳುಹಿದನು. ಯಾವ ಪರಮಪುರುಷನು ಯದುಕುಲದಲ್ಲಿ ವಾಸುದೇವ (ಶ್ರೀಕೃಷ್ಣ) ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣ (ಬಲರಾಮ)ರೆಂಬ ಚತುರ್ವ್ಯೂಹಾಕಾರಗಳನ್ನು ಧರಿಸಿ ಅವತರಿಸಿದನೋ ಆ ಅನಂತಗುಣಗಣವಂದಿತನಾದ ಭೂಮಿಯನ್ನು ಧರಿಸಿರುವ ಪ್ರಭುವಿಗೆ ನಮಸ್ಕಾರವು" ಎಂದನು.

ಇಲ್ಲಿಗೆ ಶ್ರೀ ಗರ್ಗಸಂಹಿತಾಂತರ್ಗತವಾದ ವಿಶ್ವಜಿತ್ಖಂಡದ ಶ್ರೀ ನಾರದ ಬಹುಲಾಶ್ವ ಸಂವಾದದಲ್ಲಿ ಉಗ್ರಸೇನ ಮಹೋದಯವೆಂಬ ಕಥಾಭಾಗದಲ್ಲಿ ರಾಜಸೂಯಯಾಗವರ್ಣನವೆಂಬ ಐವತ್ತನೆಯ ಅಧ್ಯಾಯವು ಮುಗಿದುದು.

"ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ"

॥ ಶ್ರೀಕೃಷ್ಣಾರ್ಪಣಮಸ್ತು ॥